(iii) ಅಫಿಡಾವಿತ್ತುಗಳ ಮೇಲೆ ಯಾವುದೇ ಸಾಕ್ಷ್ಯವನ್ನು ಸ್ವೀಕರಿಸುವುದು;

(iv) ಯಾವುದೇ ನ್ಯಾಯಾಲಯ ಅಥವಾ ಕಚೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆ ಅಥವಾ ಅದರ ಪ್ರತಿಯನ್ನು ಕೋರುವುದು;

(v) ನಿಯಮಿಸಬಹುದಾದ ಯಾವುದೇ ಇತರ ವಿಷಯ. "

9. 9ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 9ನೇ ಪ್ರಕರಣದಲ್ಲಿ,–

(i) (1)ನೇ ಉಪಪ್ರಕರಣದಲ್ಲಿ "ಗುಣಮಟ್ಟಗಳನ್ನು," ಎಂಬ ಪದಕ್ಕೆ ಮೊದಲು "ಸಿಬ್ಬಂದಿಯನ್ನು, ಮೂಲಸೌಕರ್ಯವನ್ನು, ಇತ್ಯಾದಿಗಳ," ಎಂಬ ಪದಗಳನ್ನು ಸೇರಿಸತಕ್ಕದ್ದು; ಮತ್ತು

(ii) (2)ನೇ ಉಪಪ್ರಕರಣದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಪರಂತು, ಸರ್ಕಾರೇತರ ಸದಸ್ಯರು ಮತ್ತು ಮಧ್ಯಸ್ಥಗಾರರ (stake holder)ಸಂಖ್ಯೆಯು ಒಟ್ಟು ಸದಸ್ಯರ ಮೂರನೇ ಒಂದನ್ನು ಮೀರತಕ್ಕದ್ದಲ್ಲ."

10. **9ಎ ಪ್ರಕರಣದ ಸೇರ್ಪಡೆ.**– ಮೂಲ ಅಧಿನಿಯಮದ 9ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"**9ಎ. ತಜ್ಞರ ಸಮಿತಿಗಳು ಮತ್ತು ಇತರ ಸಮಿತಿಗಳ ಪ್ರಕಾರ್ಯಗಳು.**– (1) 9ನೇ ಪ್ರಕರಣದ ಅಡಿಯಲ್ಲಿ ರಚನೆಯಾದ ತಜ್ಞರ ಸಮಿತಿಯು ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು, ಎಂದರೆ:–

(ಎ) ಈ ಅಧಿನಿಯಮದ ಉದ್ದೇಶಕ್ಕಾಗಿ ವೈಜ್ಞಾನಿಕ ಆಧಾರದ ಮೇಲೆ ಖಾಸಗಿ ವೈದ್ಯಕೀಯ ಸಂಸ್ಥೆಗಳ ವರ್ಗೀಕರಣದ ಸಂಬಂಧದಲ್ಲಿ ಅಧ್ಯಯನ ಮಾಡುವುದು ಮತ್ತು ಶಿಫಾರಸ್ಸು ಮಾಡುವುದು;

(ಬಿ) ಮೂಲ ಸೌಕರ್ಯ, ಸಿಬ್ಬಂದಿ, ಲಿಖಿತ ಸೂಚಿ ಲೆಕ್ಕಪರಿಶೋಧನೆಯ (prescription audit) ಮುಂತಾದವುಗಳ ಕನಿಷ್ಠ ಗುಣಮಟ್ಟಗಳನ್ನು ರೂಪಿಸುವುದು.

(ಸಿ) ಪ್ರತಿಯೊಂದು ಆರೋಗ್ಯ ಸೇವೆ ಅಥವಾ ಚಿಕಿತ್ಸೆಯ ವೆಚ್ಚದ ನಿಗದಿಯ ಬಗ್ಗೆ ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು ಮತ್ತು ವಿವಿಧ ವರ್ಗದ ಖಾಸಗಿ ವೈದ್ಯಕೀಯ ಸಂಸ್ಥೆಗಳಿಗಾಗಿ ವಿವಿಧ ದರಗಳನ್ನು ಪ್ರಸ್ತಾಪಿಸಬಹುದು; ಮತ್ತು

(ಡಿ) ರಾಜ್ಯ ಸರ್ಕಾರವು ನಿಯಮಿಸಬಹುದಾದ ಯಾವುದೇ ಇತರ ಪ್ರಕಾರ್ಯಗಳು.

(2) ರಾಜ್ಯ ಸರ್ಕಾರವು ತಜ್ಞರ ಸಮಿತಿಯ ಶಿಫಾಸ್ಸಿನ ಮೇರೆಗೆ ಚಿಕಿತ್ಸೆಯ ಪ್ರತಿಯೊಂದು ವರ್ಗಕ್ಕೆ ದರಗಳನ್ನು ನಿಗದಿಮಾಡಬಹುದು ಮತ್ತು ವಿವಿಧ ವರ್ಗದ ಖಾಸಗಿ ವೈದ್ಯಕೀಯ ಸಂಸ್ಥೆಗಾಗಿ ವಿವಿಧ ದರಗಳನ್ನು ನಿಗದಿಪಡಿಸಬಹುದು.

(3) ಇತರ ಅಡ್–ಹಾಕ್ ಸಮಿತಿಗಳು.– (ಎ) ರಾಜ್ಯ ಸರ್ಕಾರವು, ನಿಯಮಿಸಬಹುದಾದ ಅಂಥ ಸಂಖ್ಯೆಯ ಸದಸ್ಯರೊಂದಿಗೆ ಅಂಥ ಸಂಖ್ಯೆ ಅಡ್–ಹಾಕ್ ಸಮಿತಿಗಳನ್ನೂ ಕೂಡಾ ರಚಿಸಬಹುದು;

(ಬಿ) ನಿಯಮಿಸಬಹುದಾದ ಅಂಥ ಕಾರ್ಯವನ್ನು ಅಡ್–ಹಾಕ್ ಸಮಿತಿಯು ನಿರ್ವಹಿಸತಕ್ಕದ್ದು ಮತ್ತು ತನ್ನ ವರದಿಯನ್ನು ರಾಜ್ಯ ಸರ್ಕಾರಕ್ಕೆ, ಅದರ ಪರಿಗಣನೆಗಾಗಿ ಸಲ್ಲಿಸತಕ್ಕದ್ದು;

(ಸಿ) 9ನೇ ಪ್ರಕರಣದ ಅಡಿಯಲ್ಲಿ ರಚನೆಯಾದ ತಜ್ಞರ ಸಮಿತಿಯು ಅಥವಾ (3)ನೇ ಉಪಪ್ರಕರಣದ ಅಡಿಯಲ್ಲಿ ರಚನೆಯಾದ ಅಡ್–ಹಾಕ್ ಸಮಿತಿಯು, ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ, ನಿಯಮಿಸಬಹುದಾದ ಅಂಥ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು; ಮತ್ತು

(ಡಿ) ಸಮಿತಿಯ ಸರ್ಕಾರೇತರ ಸದಸ್ಯರು, ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆ ಅಥವಾ ಯಾವುದೇ ಇತರ ಭತ್ಯೆಗಳಿಗೆ ಅರ್ಹರಾಗಿರತಕ್ಕದ್ದು."

11. 10ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 10ನೇ ಪ್ರಕರಣದಲ್ಲಿ,–

(i) (1)ನೇ ಉಪಪ್ರಕರಣದಲ್ಲಿ,–

(ಎ) "ಚಾರ್ಜುಗಳ ಪಟ್ಟಿಯನ್ನು" ಮತ್ತು "ಚಾರ್ಜು ಪಟ್ಟಿಯನ್ನು" ಎಂಬ ಪದಗಳು ಬರುವ ಎರಡು ಕಡೆಗಳಲ್ಲಿ ಆ ಪದಗಳ ತರುವಾಯ "ಅಥವಾ ರಾಜ್ಯ ಸರ್ಕಾರವು ನಿಗದಿ ಪಡಿಸಿದ ದರವನ್ನು" ಎಂಬ ಪದಗಳನ್ನು ಸೇರಿಸತಕ್ಕದ್ದು; ಮತ್ತು

(ಬಿ) "ಸೂಚನಾ ಫಲಕದಲ್ಲಿ" ಎಂಬ ಪದಗಳಿಗೆ ಮೊದಲು "ಪ್ರಮುಖವಾದ ಸ್ಥಳದಲ್ಲಿನ ಅಥವಾ ಸ್ವಾಗತಕೋಣೆಯಲ್ಲಿನ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) (2)ನೇ ಉಪಪ್ರಕರಣದಲ್ಲಿ "ಚಾರ್ಜಿಗಿಂತ" ಎಂಬ ಪದಗಳಿಗೆ ಮೊದಲು "ರಾಜ್ಯ ಸರ್ಕಾರವು ನಿಗದಿಪಡಿಸಿದ" ಎಂಬ ಪದಗಳನ್ನು ಸೇರಿಸತಕ್ಕದ್ದು.

(iii) (2)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(3) ಪ್ರತಿಯೊಂದು ಖಾಸಗಿ ವೈದ್ಯಕೀಯ ಸಂಸ್ಥೆಯು, ರಾಜ್ಯ ಸರ್ಕಾರವು ನಿಗದಿಪಡಿಸಿದ ದರಗಳನ್ನು ಅನುಸರಿಸತಕ್ಕದ್ದು ಮತ್ತು ರೋಗಿಗೆ ವಿವರಿಸಿ ಅವರ ಒಪ್ಪಿಗೆಯನ್ನು ಪಡೆದ ಹೊರತು, ಪ್ಯಾಕೇಜು ಚಾರ್ಜುಗಳು ಒಳಗೊಂಡಂತೆ, ತಪಾಸಣೆ, ಹಾಸಿಗೆ ಚಾರ್ಜುಗಳು, ಶಸ್ತ ಚಿಕಿತ್ಸಾ ಕೊಠಡಿ ಪ್ರಕ್ರಿಯೆ, ತೀವ್ರ ನಿಗಾ ರಕ್ಷಣೆ, ಶ್ವಾಸಕೋಶಗಳಿಗೆ ಗಾಳಿ ಬಿಡುವುದು (ವೆಂಟಿಲೇಷನ್), ದೇಹದಲ್ಲಿ ಸೇರಿಸುವುದು (ಇಂಪ್ಲಾಂಟ್ಸ್), ಸಮಾಲೋಚನೆ ಮತ್ತು ಅಂತಹುದೇ ಪರೀಕ್ಷೆ ಮತ್ತು ಕಾರ್ಯವಿಧಾನಗಳು ಮತ್ತು ಯಾವುದೇ ಹೆಚ್ಚುವರಿ ಚಿಕಿತ್ಸೆಗಳು ಪ್ಯಾಕೇಜು ದರಗಳೂ ಸೇರಿದಂತೆ ರಾಜ್ಯ ಸರ್ಕಾರವು ನಿಗದಿಪಡಿಸಿದ ಅಂಥ ದರಗಳಿಗಿಂತಲೂ ಹೆಚ್ಚಾಗಿ ಹೆಚ್ಚುವರಿ ಚಾರ್ಜುಗಳನ್ನು ಸೆಳೆಯತಕ್ಕದ್ದಲ್ಲ.

(4) ಪ್ರತಿಯೊಂದು ಖಾಸಗಿ ವೈದ್ಯಕೀಯ ಸಂಸ್ಥೆಯು, ನಿಗದಿಪಡಿಸಿದ ದರಗಳು ಮತ್ತು ಚಾರ್ಜುಗಳಲ್ಲಿ ಸೇರಿಸಿಲ್ಲದ ಚಿಕಿತ್ಸೆಗಾಗಿ, ಪ್ರಾರಂಭದಲ್ಲಿ ಅಥವಾ ಚಿಕಿತ್ಸೆ ನಡೆಯುತ್ತಿರುವಾಗ, ರೋಗಿಗೆ ಅಥವಾ ರೋಗಿಯ ಸಹಾಯಕರಿಗೆ, ಕ್ರಮಬದ್ಧವಾದ ಅಂದಾಜುಗಳನ್ನು ಒದಗಿಸತಕ್ಕದ್ದು ಮತ್ತು ಅಂತಿಮ ಬಿಲ್ಲು ಅಂದಾಜುಗಳನ್ನು ಮೀರತಕ್ಕದ್ದಲ್ಲ."

12. 11ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 11ನೇ ಪ್ರಕರಣದಲ್ಲಿ,–

(i) (i)ನೇ ಖಂಡದ ಕೊನೆಯಲ್ಲಿ "ತೆಗೆದುಕೊಳ್ಳತಕ್ಕದ್ದು" ಎಂಬ ಪದದ ತರುವಾಯ "ಅಂಥ ತುರ್ತುಪರಿಸ್ಥಿತಿಗಳ ಸಂದರ್ಭದಲ್ಲಿ, ಖಾಸಗಿ ವೈದ್ಯಕೀಯ ಸಂಸ್ಥೆಯು ಮುಂಗಡವನ್ನು ಪಾವತಿಸಲು ಒತ್ತಾಯಪಡಿಸದೆ ರೋಗಿಯ ಜೀವವನ್ನು ರಕ್ಷಿಸುವ ಅವಶ್ಯವಾದ ಆರೋಗ್ಯರಕ್ಷಣೆಯನ್ನು ಒದಗಿಸತಕ್ಕದ್ದು" ಎಂಬ ಪದಗಳನ್ನು ಸೇರಿಸತಕ್ಕದ್ದು; ಮತ್ತು

(ii) (iv)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(v) ಪ್ರತಿಯೊಂದು ಖಾಸಗಿ ವೈದ್ಯಕೀಯ ಸಂಸ್ಥೆಯು, ಸಾರ್ವಜನಿಕರಿಗೆ ಸುಲಭವಾಗಿ ಕಾಣುವ ಅಂಥ ಸ್ಥಳದಲ್ಲಿ ರೋಗಿಯ ಸನ್ನದು ಮತ್ತು ಖಾಸಗಿ ವೈದ್ಯಕೀಯ ಸಂಸ್ಥೆಗಳ ಸನ್ನದನ್ನು ಪ್ರದರ್ಶಿಸತಕ್ಕದ್ದು; ಮತ್ತು

(vi) ಪ್ರತಿಯೊಂದು ಖಾಸಗಿ ವೈದ್ಯಕೀಯ ಸಂಸ್ಥೆಯು, ವ್ಯಕ್ತಿಯು ಮೃತನಾದ ಸಂದರ್ಭದಲ್ಲಿ, ಬಾಕಿಗಳನ್ನು ಪಾವತಿ ಮಾಡುವಂತೆ ಒತ್ತಾಯ ಮಾಡದೇ, ತಕ್ಷಣವೇ ಮೃತದೇಹವನ್ನು ಕೊಟ್ಟು ಬಿಡತಕ್ಕದ್ದು, ಕಾಲಕ್ರಮದಲ್ಲಿ ಅದನ್ನು ಮೃತನ ಪ್ರತಿನಿಧಿಗಳಿಂದ ವಸೂಲು ಮಾಡಿಕೊಳ್ಳಬಹುದು."

13. 11ಎ ಹೊಸ ಪ್ರಕರಣದ ಸೇರ್ಪಡೆ.– ಮೂಲ ಅಧಿನಿಯಮದ 11ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"**11ಎ. ರೋಗಿಯ ಸನ್ನದು ಮತ್ತು ಖಾಸಗಿ ವೈದ್ಯಕೀಯ ಸಂಸ್ಥೆಗಳ ಸನ್ನದು.**– ಪ್ರತಿಯೊಬ್ಬ ರೋಗಿ ಅಥವಾ ಅಧಿಕೃತ ಕುಟುಂಬ ಸದಸ್ಯರು ಮತ್ತು ಖಾಸಗಿ ವೈದ್ಯಕೀಯ ಸಂಸ್ಥೆಯು, ರೋಗಿಯ ಮತ್ತು ಖಾಸಗಿ ವೈದ್ಯಕೀಯ ಸಂಸ್ಥೆಯ ಸನ್ನದಿನಲ್ಲಿ ನಿರ್ದಿಷ್ಟಪಡಿಸಿದ

ಹಕ್ಕುಗಳು ಮತ್ತು ಕರ್ತವ್ಯವಗಳನ್ನು ಹೊಂದಿರತಕ್ಕದ್ದು. ರೋಗಿಯ ಮತ್ತು ಖಾಸಗಿ ವೈದ್ಯಕೀಯ ಸಂಸ್ಥೆಗಳ ಸನ್ನದಿನ ಯಾವುದೇ ಉಲ್ಲಂಘನೆಯನ್ನು, 8ನೇ ಪ್ರಕರಣದ ಅಡಿಯಲ್ಲಿ ರಚನೆಯಾದ ಕುಂದುಕೊರತೆ ಪರಿಹಾರ ಸಮಿತಿಗೆ ಉಲ್ಲೇಖಿಸತಕ್ಕದ್ದು.

11ಬಿ. ಅನುಸೂಚಿಯನ್ನು ತಿದ್ದುಪಡಿ ಮಾಡಲು ರಾಜ್ಯ ಸರ್ಕಾರದ ಅಧಿಕಾರ.– (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಅನುಸೂಚಿಯಲ್ಲಿನ ಯಾವುದೇ ನಮೂದುಗಳನ್ನು ಸೇರಿಸಬಹುದು, ತಿದ್ದುಪಡಿ ಮಾಡಬಹುದು ಅಥವಾ ಬಿಟ್ಟುಬಿಡಬಹುದು.

(2) ಈ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರವು ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು ರಾಜ್ಯ ಸರ್ಕಾರದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು."

14. 12ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 12ನೇ ಪ್ರಕರಣದ (2)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"ಪರಂತು, ಅಂಥ ಯಾವುದೇ ಮಾಹಿತಿಯನ್ನು ಇತರ ವ್ಯಕ್ತಿಗೆ ಬಹಿರಂಗಪಡಿಸತಕ್ಕದ್ದಲ್ಲ."

15. 15ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 15ನೇ ಪ್ರಕರಣದ (1)ನೇ ಉಪಪ್ರಕರಣದ ಪರಂತುಕದಲ್ಲಿ "ಲಿಖಿತದಲ್ಲಿ ದಾಖಲಿಸುವ ಮೂಲಕ" ಎಂಬ ಪದಗಳ ತರುವಾಯ "ಹಾಗೂ ಯುಕ್ತ ಸಮಯದೊಳಗೆ ಒಳರೋಗಿಗಳಿಗೆ ತಡೆರಹಿತವಾದ ಆರೋಗ್ಯರಕ್ಷಣೆಗಾಗಿ ವ್ಯವಸ್ಥೆಗಳನ್ನು ಮಾಡುವುದನ್ನು ಖಚಿತಪಡಿಸಿಕೊಂಡು" ಎಂಬ ಪದಗಳನ್ನು ಸೇರಿಸತಕ್ಕದ್ದು.

16. 16ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 16ನೇ ಪ್ರಕರಣದಲ್ಲಿ,–

(i) "ಅಪೀಲು ಪ್ರಾಧಿಕಾರವು" ಎಂಬ ಪದಗಳ ತರುವಾಯ "ನೋಂದಣಿ ಪ್ರಾಧಿಕಾರದ ಮೇಲೆ" ಎಂಬ ಪದಗಳನ್ನು ಸೇರಿಸತಕ್ಕದ್ದು; ಮತ್ತು

(ii) (ಸಿ) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ಸಿ) ಆಯುಷ್ ನಿರ್ದೇಶಕರು

(ಆಯುರ್ವೇದ, ಯೋಗಾ ಮತ್ತು ಪ್ರಕೃತಿ ಚಿಕಿತ್ಸೆ, ಯುನಾನಿ, ಸಿದ್ಧ
ಮತ್ತು ಹೋಮಿಯೋಪತಿ) – ಸದಸ್ಯರು

(ಡಿ) ಔಷಧ ನಿಯಂತ್ರಕರು, ಕರ್ನಾಟಕ ಸರ್ಕಾರ – ಸದಸ್ಯರು."

17. 18ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 18ನೇ ಪ್ರಕರಣದಲ್ಲಿ "ಹಣಸಂದಾಯ ಮಾಡುವ ಮೂಲಕವಾಗಲಿ ಅಥವಾ ಇಲ್ಲದಿರಲಿ," ಎಂಬ ಪದಗಳನ್ನು ಮತ್ತು ಅಲ್ಪವಿರಾಮ ಚಿಹ್ನೆಯನ್ನು ಬಿಟ್ಟುಬಿಡತಕ್ಕದ್ದು.

18. 19ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 19ನೇ ಪ್ರಕರಣದಲ್ಲಿ,–

(i) (1)ನೇ ಉಪಪ್ರಕರಣದಲ್ಲಿ "ಹತ್ತು ಸಾವಿರ" ಎಂಬ ಪದಗಳಿಗೆ "ಐದು ಲಕ್ಷ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) (4)ನೇ ಉಪಪ್ರಕರಣದಲ್ಲಿ,–

(ಎ) "ಆರು ತಿಂಗಳುಗಳಿಗೆ ವಿಸ್ತರಿಸಬಹುದಾದ ಅವಧಿಗಾಗಿ ಕಾರಾವಾಸ ಶಿಕ್ಷೆಯಿಂದ ಮತ್ತು ಎರಡು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ" ಎಂಬ ಪದಗಳಿಗೆ "ಮೂರು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಗಾಗಿ ಕಾರಾವಾಸ ಶಿಕ್ಷೆಯಿಂದ ಮತ್ತು ಒಂದು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದಾದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ಬಿ) "ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಮತ್ತು ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ" ಎಂಬ ಪದಗಳಿಗೆ "ಐದು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಮತ್ತು ಐದು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದಾದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(iii) (4)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(4ಎ) ಯಾವೊಬ್ಬ ವ್ಯಕ್ತಿಯು, 10ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದಲ್ಲಿ, ಅಪರಾಧ ನಿರ್ಣಯವಾದ ಮೇಲೆ, ಆರು ತಿಂಗಳುಗಳಿಗಿಂತ ಕಡಿಮೆಯಲ್ಲದ ಆದರೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಗಾಗಿ ಕಾರಾವಾಸದಿಂದ ಮತ್ತು ಇಪ್ಪತ್ತೈದು ಸಾವಿರ ರೂಪಾಯಿಗಳಿಗಿಂತ ಕಡಿಮೆಯಿಲ್ಲದ ಆದರೆ ಐದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು. ಆತನು ಅಮಾನತ್ತಿಗೆ ಅಥವಾ ನೊಂದಣಿಯ ರದ್ದತಿಗೆ ಮತ್ತು (2) ಮತ್ತು (3)ನೇ ಉಪಪ್ರಕರಣಗಳ ಅಡಿಯಲ್ಲಿನ ಕ್ರಮಕ್ಕೆ ಕೂಡಾ ಹೊಣೆಗಾರನಾಗತಕ್ಕದ್ದು."; ಮತ್ತು

(iv) (5)ನೇ ಪ್ರಕರಣದಲ್ಲಿ "ಐದು ಸಾವಿರ" ಎಂಬ ಪದಗಳಿಗೆ "ಒಂದು ಲಕ್ಷ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

19. ಅನುಸೂಚಿಯ ಸೇರ್ಪಡೆ.– ಮೂಲ ಅಧಿನಿಯಮದ 28ನೇ ಪ್ರಕರಣದ ತರುವಾಯ ಈ ಮುಂದಿನ ಅನುಸೂಚಿಯನ್ನು ಸೇರಿಸತಕ್ಕದ್ದು, ಎಂದರೆ:–

ಅನುಸೂಚಿ

(2ನೇ ಪ್ರಕರಣದ (ಎಸ್) ಖಂಡ ಮತ್ತು 11ಬಿ ಪ್ರಕರಣವನ್ನು ನೋಡಿ)

ರೋಗಿಯ ಸನ್ನದು ಮತ್ತು ಸಂಸ್ಥೆಯ ಸನ್ನದು.

I. ರೋಗಿಯ ಸನ್ನದು (ಹಕ್ಕುಗಳು) .–

(1) **ರಕ್ಷಣೆ :** ಪ್ರತಿಯೊಬ್ಬ ರೋಗಿಯು, ಈ ಮುಂದಿನವುಗಳಿಗಾಗಿ ಹಕ್ಕನ್ನು ಹೊಂದಿರತಕ್ಕದ್ದು, ಎಂದರೆ:–

(i) ಅವರ ಪ್ರಾರಂಭಿಕ ಮತ್ತು ತದನಂತರದ ಅನಾರೋಗ್ಯ, ಸಾಮಾಜಿಕ – ಆರ್ಥಿಕ ಸ್ಥಾನಮಾನ, ವಯಸ್ಸು, ಲಿಂಗ ಲೈಂಗಿಕ ಸ್ಥಾನಮಾನ, ಧರ್ಮ, ಜಾತಿ, ಸಾಂಸ್ಕೃತಿಕ ಪ್ರಾಮುಖ್ಯತೆಗಳು, ಭಾಷಾ ಮತ್ತು ಭೌಗೋಳಿಕ ಮೂಲಗಳು ಅಥವಾ ರಾಜಕೀಯ ಸಂಯೋಜನೆಗಳು ಇವುಗಳೆಲ್ಲವನ್ನು ಗಣನೆಗೆ ತೆಗೆದುಕೊಳ್ಳದೇ ಚಿಕಿತ್ಸೆಯನ್ನು ಸ್ವೀಕರಿಸುವ ಹಕ್ಕು;

(ii) ತಮ್ಮ ಇಡೀ ಸಮಸ್ಯೆ ಮತ್ತು ಕಳಕಳಿಗಳನ್ನು ಹೇಳುವುದನ್ನು ಮುಗಿಸುವುದಕ್ಕೆ ಮೊದಲೇ, ವೈದ್ಯರು ಅಡಚಣೆಯುಂಟು ಮಾಡದೇ, ತನ್ನ ತೃಪ್ತಿಗಾಗಿ ಹೇಳಿಕೊಳ್ಳುವ ಹಕ್ಕು;

(iii) ವೈದ್ಯರು ಲಿಖಿತ ಸೂಚಿಯನ್ನು ಸ್ಪಷ್ಟವಾಗಿ ಬರೆಯುವಂತೆ ಮತ್ತು ಡೋಸೆಜ್, ಮಾಡಬೇಕಾಗಿರುವುದು ಮತ್ತು ಮಾಡಬಾರದಾದುದ್ದು ಹಾಗೂ ಔಷಧಿಗಳಿಗಾಗಿ ಜನರಿಕ್ ಆಯ್ಕೆಗಳ ಕುರಿತು ವಿವರವಾಗಿ ರೋಗಿಗೆ ವಿವರಿಸುವುದನ್ನು ವೈದ್ಯರಿಂದ ನಿರೀಕ್ಷಿಸುವುದು; ಮತ್ತು

(iv) ತುರ್ತು ಸಂದರ್ಭದಲ್ಲಿ ಯಾರನ್ನು ಸಂಪರ್ಕಿಸಬೇಕೆಂಬ ಬಗ್ಗೆ ಮಾಹಿತಿ ಮತ್ತು ಸಂಪರ್ಕವನ್ನು ಒದಗಿಸುವುದು.

(2) **ಗೌಪ್ಯತೆ ಮತ್ತು ಗೌರವ.**– ಪ್ರತಿಯೊಬ್ಬ ರೋಗಿಯು ಈ ಮುಂದಿನವುಗಳಿಗಾಗಿ ಹಕ್ಕನ್ನು ಹೊಂದಿರತಕ್ಕದ್ದು, ಎಂದರೆ:–

(i) ವೈಯಕ್ತಿಕ ಗೌರವದ ಹಕ್ಕು ಮತ್ತು ಯಾವುದೇ ಕಳಂಕವಿಲ್ಲದೆ ಮತ್ತು ಯಾವುದೇ ಬೇಧಭಾವವಿಲ್ಲದೆ ರಕ್ಷಣೆಯನ್ನು ಪಡೆಯುವುದು;

(ii) ಪರೀಕ್ಷೆ ಮತ್ತು ಚಿಕಿತ್ಸೆಯ ಅವಧಿಯಲ್ಲಿ ಖಾಸಗಿತನ;

(iii) ದೈಹಿಕ ದುರುಪಯೋಗ ಮತ್ತು ನಿರ್ಲಕ್ಷ್ಯದಿಂದ ರಕ್ಷಣೆ;

(iv) ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಪ್ರಾಮುಖ್ಯತೆಗಳಂಥ ಆತನ ವಿಶೇಷ ಅವಶ್ಯಕತೆಗಳಿಗೆ ಅವಕಾಶ ನೀಡುವುದು ಮತ್ತು ಗೌರವಿಸುವುದು;

(v) ಅವರ ವೈದ್ಯಕೀಯ ಸ್ಥಿತಿಯ ಕುರಿತು ಗೌಪ್ಯತೆಯ ಹಕ್ಕು.

(3) **ಮಾಹಿತಿ.**– ಪ್ರತಿಯೊಬ್ಬ ರೋಗಿ ಅಥವಾ ಆತನ ಅಧೀಕೃತ ಕುಟುಂಬ ಸದಸ್ಯರು ಈ ಮುಂದಿನ ಹಕ್ಕನ್ನು ಹೊಂದಿರತಕ್ಕದ್ದು, ಎಂದರೆ:–

(i) ರೋಗಿಯ ಆದ್ಯತೆಯ ಮತ್ತು ಆತನು ಕಷ್ಟಪಡದೆ ಅರ್ಥಮಾಡಿಕೊಳ್ಳುವ ವಿಧಾನದಲ್ಲಿನ ಭಾಷೆಯಲ್ಲಿ ಆತನಿಗೆ ಮಾಹಿತಿಯನ್ನು ಒದಗಿಸುವುದು;

(ii) ವೈದ್ಯಕೀಯ ಸಮಸ್ಯೆ ಲಿಖಿತ ಸೂಚಿ, ಚಿಕಿತ್ಸೆ ಮತ್ತು ಕಾರ್ಯವಿಧಾನದ ವಿವರಗಳ ಕುರಿತು ಸಂಪೂರ್ಣ ಮಾಹಿತಿಯನ್ನು ಪಡೆದುಕೊಳ್ಳುವುದು;

(iii) ಅತ್ಯಂತ ಕಾರ್ಯತತ್ಪರತೆ ಮತ್ತು ಪಾರದರ್ಶಕತೆಯಿಂದ ಅವರ ರಕ್ಷಣೆಯ ಕುರಿತು ಮಾಹಿತಿ ಪೂರ್ಣ ನಿರ್ಧಾರವನ್ನು ಮಾಡುವಲ್ಲಿ ಅವರನ್ನು ಸಮರ್ಥಗೊಳಿಸುವ ಆತನ ಮಾಹಿತಿ ಪೂರ್ಣ ಒಪ್ಪಿಗೆಯ ದಾಖಲೀಕರಣ ಪ್ರಕ್ರಿಯೆ;

(iv) ಅಪಾಯ ಸಂಭವಗಳು, ಪ್ರಯೋಜನಗಳು ನಿರೀಕ್ಷಿತ ಚಿಕಿತ್ಸಾ ಫಲಿತಾಂಶಗಳು ಮತ್ತು ಆಗಬಹುದಾದ ತೊಂದರೆಗಳ ಬಗ್ಗೆ ಅವರಿಗೆ ತಿಳುವಳಿಕೆ ನೀಡಿ ಅವರು ಮಾಹಿತಿ ಪೂರ್ಣ ನಿರ್ಧಾರಗಳನ್ನು ಮಾಡಲು ಸಮರ್ಥಗೊಳಿಸುವುದು ಮತ್ತು ರಕ್ಷಣಾ ಯೋಜನೆ ಮತ್ತು ಡೆಲಿವರಿ ಪ್ರಕ್ರಿಯೆಯಲ್ಲಿ ಅವರನ್ನು ಒಳಗೂಡಿಸುವುದು;

(v) ಅವರಿಗೆ ಚಿಕಿತ್ಸೆ ನೀಡುವ ಔಷಧಿಯ ಹೆಸರುಗಳು, ಡೋಸೆಜ್‌ಗಳು ಮತ್ತು ಅವುಗಳ ವ್ಯತಿರಿಕ್ತ ಪರಿಣಾಮಗಳ ಬಗ್ಗೆ ಮಾಹಿತಿಯನ್ನು ಕೋರುವುದು;

(vi) ಅವರ ಕ್ಲಿನಿಕಲ್ ದಾಖಲೆಗಳ ಪ್ರತಿಯನ್ನು ನೋಡುವ ಮತ್ತು ಸ್ವೀಕರಿಸುವ ಕೋರಿಕೆ;

(vii) ಚಿಕಿತ್ಸೆಯ ನಿರೀಕ್ಷಿತ ವೆಚ್ಚದ ಬಗ್ಗೆ ಸಂಪೂರ್ಣ ಮಾಹಿತಿಯನ್ನು ವಿವಿಧ ವೆಚ್ಚಗಳು ಮತ್ತು ಚಾರ್ಜುಗಳ ಐಟಮ್ ವಾರು ಸ್ವರೂಪದಲ್ಲಿ ನೀಡುವುದು;

(viii) ಆಸ್ಪತ್ರೆಯ ನಿಯಮಗಳು ಮತ್ತು ವಿನಿಯಮಗಳ ಕುರಿತು ಮಾಹಿತಿ; ಮತ್ತು

(ix) ಅಂಗದಾನದ ಕುರಿತು ಮಾಹಿತಿ.

(4) ಪ್ರಾಮುಖ್ಯತೆಗಳು.– ಪ್ರತಿಯೊಬ್ಬ ರೋಗಿ ಈ ಮುಂದಿನ ಹಕ್ಕನ್ನು ಹೊಂದಿರತಕ್ಕದ್ದು,–

(i) ತನ್ನ ವೈದ್ಯಕೀಯ ಸ್ಥಿತಿಯ ಕುರಿತು ಎರಡನೇ ಅಭಿಪ್ರಾಯವನ್ನು ಕೋರುವುದು; ಮತ್ತು

(ii) ತನ್ನ ಚಿಕಿತ್ಸೆಯ ಆಯ್ಕೆಗಳನ್ನು ಪಡೆಯುವುದು, ಅದರಿಂದ ಆತನು ತನಗೆ ಯಾವುದು ಉತ್ತಮವಾಗಿ ಹೊಂದುವುದೆಂದು ಆಯ್ಕೆ ಮಾಡಿಕೊಳ್ಳಬಹುದು.

(5) ಪರಿಹಾರದ ಹಕ್ಕು.– ಪ್ರತಿಯೊಬ್ಬ ರೋಗಿ ಈ ಮುಂದಿನ ಹಕ್ಕನ್ನು ಹೊಂದಿರತಕ್ಕದ್ದು,–

(i) ಆರೋಗ್ಯ ರಕ್ಷಣೆಯನ್ನು ಒದಗಿಸುವ ಸಂಘಟನೆಯ ಮೂಲಕ ಅಥವಾ ಸರ್ಕಾರಿ ಆರೋಗ್ಯ ಪ್ರಾಧಿಕಾರಗಳೊಂದಿಗೆ ಈ ಉದ್ದೇಶಕ್ಕಾಗಿ ಸಮರ್ಪಿತವಾಗಿರುವ ಪ್ರಾಧಿಕಾರದ ಮೂಲಕ ದೂರನ್ನು ದಾಖಲಿಸುವ ಮೂಲಕ ನ್ಯಾಯವನ್ನು ಪಡೆಯುವುದು;

(ii) ಆತನ ಕಳಕಳಿಯ ಬಗ್ಗೆ ಮುಕ್ತವಾಗಿ ಮತ್ತು ಪ್ರಾಮಾಣಿಕವಾಗಿ ಹೇಳಿಕೊಳ್ಳುವುದು;

(iii) ಖಾಸಗಿ ವೈದ್ಯಕೀಯ ಸಂಸ್ಥೆಯಲ್ಲಿನ ಉನ್ನತ ಪ್ರಾಧಿಕಾರಕ್ಕೆ ಅಪೀಲು ಸಲ್ಲಿಸುವುದು ಮತ್ತು ದೂರಿನ ಫಲಿತಾಂಶದ ಕುರಿತು ಲಿಖಿತ ಬರಹಕ್ಕೆ ಒತ್ತಾಯಪಡಿಸುವುದು.

II. **ರೋಗಿಯ ಹೊಣೆಗಾರಿಕೆಗಳು.**– ಪ್ರತಿಯೊಬ್ಬ ರೋಗಿಯು,–

(1) ಬಹಿರಂಗಪಡಿಸುವುದರಲ್ಲಿ ಪ್ರಾಮಾಣಿಕತೆ.– ಕುಟುಂಬದ ಅಥವಾ ವೈದ್ಯಕೀಯ ಇತಿಹಾಸವನ್ನು ಬಹಿರಂಗಪಡಿಸುವಲ್ಲಿ ಚಿಕಿತ್ಸೆ ನೀಡುವ ವೈದ್ಯರೊಂದಿಗೆ ಪ್ರಾಮಾಣಿಕತೆ ಇರತಕ್ಕದ್ದು;

(2) ಚಿಕಿತ್ಸೆಯ ಅನುಪಾಲನೆ.– ಪ್ರತಿಯೊಬ್ಬ ರೋಗಿಯು,–

(i) ವೈದ್ಯರನ್ನು ಸಂದರ್ಶಿಸುವಲ್ಲಿ (ಅಪಾಯಿಂಟ್‌ಮೆಂಟ್‌ಗಳು) ಸಮಯವನ್ನು ಪಾಲಿಸುವುದು;

(ii) ವೈದ್ಯರ ಚಿಕಿತ್ಸಾ ಯೋಜನೆಯ ಅನುಸರಣೆಯನ್ನು ಅತ್ಯುತ್ತಮವಾಗಿ ಪಾಲಿಸುವುದು;

(iii) ವೈದ್ಯರ ಮತ್ತು ಆತನ ಚಿಕಿತ್ಸೆಯಿಂದ ನೈಜವಾದ ನಿರೀಕ್ಷೆಗಳನ್ನು ಇಟ್ಟುಕೊಳ್ಳುವುದು;

(iv) ಚಿಕಿತ್ಸೆಯ ಯಾವುದೇ ಭಾಗವನ್ನು ಅರ್ಥೈಸಿಕೊಳ್ಳಲು ಕಷ್ಟವಾದಲ್ಲಿ ಅಥವಾ ಚಿಕಿತ್ಸೆಯನ್ನು ಅನುಸರಿಸುವಲ್ಲಿ ಯಾವುದೇ ಸವಾಲುಗಳು ಕಂಡುಬಂದಲ್ಲಿ ಅದರ ಬಗ್ಗೆ ವೈದ್ಯರಿಗೆ ಮಾಹಿತಿ ನೀಡಿ ಅವರ ಗಮನಕ್ಕೆ ತರುವುದು;

(v) ಮನೆಯಲ್ಲಿ ಮಾಡಲು ನಿಯಮಿಸಿದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಒಳಗೊಳ್ಳುವ ಮೂಲಕ ವೈದ್ಯಕೀಯ ರಕ್ಷಣೆಯಲ್ಲಿ ಬುದ್ಧಿವಂತಿಕೆಯಿಂದ ಭಾಗವಹಿಸುವ ಉದ್ದೇಶವನ್ನು ಪ್ರದರ್ಶಿಸುವುದು.

(3) ಆರೋಗ್ಯ ವರ್ಧನೆಗಾಗಿ ಸಂಕಲ್ಪ.– ಪ್ರತಿಯೊಬ್ಬ ರೋಗಿಯು ಉತ್ತಮ ಆರೋಗ್ಯಕ್ಕಾಗಿ ಆರೋಗ್ಯಕರ ಅಭ್ಯಾಸಗಳು ಮತ್ತು ದೈನಂದಿನ ಚಟುವಟಿಕೆಗಳನ್ನು ನಿರ್ವಹಿಸುವಲ್ಲಿ ತನ್ನ ಸಾಮರ್ಥ್ಯಕ್ಕೆ ಅನುಸಾರವಾಗಿ ಮಾಡತಕ್ಕದ್ದು ಮತ್ತು ಆರೋಗ್ಯದ ಜವಾಬ್ದಾರಿಯನ್ನು ತೆಗೆದುಕೊಳ್ಳತಕ್ಕದ್ದು.

(4) ಪಾರದರ್ಶಕತೆ ಮತ್ತು ಪ್ರಾಮಾಣಿಕತೆ.– ಪ್ರತಿಯೊಬ್ಬ ರೋಗಿಯು,–

(i) ಪರಿಣಾಮಕಾರಿ ಚಿಕಿತ್ಸಾ ಫಲಿತಾಂಶಗಳಿಗಾಗಿ ನಿಯಮಿಸಿದ ಔಷಧಿಗಳು ಮತ್ತು ಅವುಗಳಿಂದಾಗುವ ವ್ಯತಿರಿಕ್ತ ಪರಿಣಾಮಗಳು ಮತ್ತು ಇತರ ಅನುಸರಣೆಗಳು ಒಳಗೊಂಡಂತೆ ಚಿಕಿತ್ಸಾ ಕ್ರಮಗಳನ್ನು (ಥೆರಪಿಗಳನ್ನು) ಅರ್ಥೈಸಿಕೊಳ್ಳಲು ಪ್ರಾಮಾಣಿಕ ಪ್ರಯತ್ನ ಮಾಡುವುದು;

(ii) ಮುಚ್ಚುಮರೆಯ ಬಿಲ್ಲುಗಳು ಮತ್ತು ತಪ್ಪಾದ ಪ್ರಮಾಣ ಪತ್ರಗಳನ್ನು ಮತ್ತು / ಅಥವಾ ಕಾನೂನುಬಾಹಿರವಾಗಿ ವಾದಿಸಿ ಒತ್ತಾಯ ಪೂರ್ವಕವಾಗಿ ಕೋರದಿರುವುದು;

(iii) ಸಮಾಧಾನ ಹೊಂದದ ಸಂದರ್ಭದಲ್ಲಿ ವೈದ್ಯರಿಗೆ ಮಾಹಿತಿ ನೀಡಿ ಅವರೊಂದಿಗೆ ಚರ್ಚಿಸುವುದು; ಮತ್ತು

(iv) ವಂಚನೆ ಮತ್ತು ತಪ್ಪಾದ ಕೆಲಸದ ಬಗ್ಗೆ ವರದಿ ನೀಡುವುದು;

(5) ನಡತೆ.– ಪ್ರತಿಯೊಬ್ಬ ರೋಗಿಯು,–

(i) ವೈದ್ಯರು ಮತ್ತು ರಕ್ಷಣೆ ನೀಡುವ ಮತ್ತು ಚಿಕಿತ್ಸೆ ನೀಡುವ ವೈದ್ಯಕೀಯ ಸಿಬ್ಬಂದಿಯನ್ನು ಗೌರವಿಸತಕ್ಕದ್ದು;

(ii) ಆಸ್ಪತ್ರೆ ಅಥವಾ ಸೌಕರ್ಯದ ನಿಯಮಗಳಿಗೆ ಬದ್ಧರಾಗಿರತಕ್ಕದ್ದು;

(iii) ಮುಂಗಡವಾಗಿ ವಿವರಿಸಿದ ಚಿಕಿತ್ಸೆಯ ಒಪ್ಪಿತ ವೆಚ್ಚಗಳನ್ನು ಭರಿಸತಕ್ಕದ್ದು ಮತ್ತು ಸಕಾಲದಲ್ಲಿ ಬಿಲ್ಲುಗಳನ್ನು ಪಾವತಿಸತಕ್ಕದ್ದು; ಮತ್ತು

(iv) ವೈದ್ಯರು ಅಥವಾ ಆಸ್ಪತ್ರೆಯ ಸಿಬ್ಬಂದಿಯನ್ನು ದುರಪಯೋಗಪಡಿಸಿಕೊಳ್ಳುವಲ್ಲಿ, ಅವರ ಮೇಲೆ ಹಲ್ಲೆ ಮಾಡುವಲ್ಲಿ ಅಥವಾ ಅವರಿಗೆ ತೊಂದರೆಯುಂಟು ಮಾಡುವುದರಲ್ಲಿ ಒಳಗೊಳ್ಳತಕ್ಕದ್ದಲ್ಲ (ಯಾವುದೇ ಉಲ್ಲಂಘನೆಯು ಕರ್ನಾಟಕ ವೈದ್ಯಕೀಯ ಸೇವಾ ಸಿಬ್ಬಂದಿಯ ಮೇಲೆ ಹಿಂಸೆ ಮತ್ತು ವೈದ್ಯಕೀಯ ಸೇವಾ ಸಂಸ್ಥೆಗಳ ಸ್ವತ್ತಿಗೆ ಹಾನಿ ತಡೆಗಟ್ಟುವ ಅಧಿನಿಯಮ, 2009ರ (2009 ರ ಕರ್ನಾಟಕ ಅಧಿನಿಯಮ 1) ಅಡಿಯಲ್ಲಿ ದಂಡಕ್ಕೆ ಕಾರಣವಾಗಬಹುದು);

III ಖಾಸಗಿ ವೈದ್ಯಕೀಯ ಸಂಸ್ಥೆಯ ಸನ್ನದು

(1) ಪಾರದರ್ಶಕತೆ ಮತ್ತು ಪ್ರಾಮಾಣಿಕತೆ.– ಪ್ರತಿಯೊಂದು ಖಾಸಗಿ ವೈದ್ಯಕೀಯ ಸಂಸ್ಥೆಯು,–

(i) ಕಛೇರಿ ಸಂದರ್ಶನಗಳು, ಕಾರ್ಯವಿಧಾನಗಳು, ಪರೀಕ್ಷೆ ಮತ್ತು ಶಸ್ತ್ರ ಚಿಕಿತ್ಸೆಗಾಗಿ ಮುದ್ರಿತ ಅನುಸೂಚಿಯನ್ನು ಒದಗಿಸುವುದು ಮತ್ತು ಐಟಮ್ ವಾರು ಬಿಲ್ಲುಗಳನ್ನು ಒದಗಿಸತಕ್ಕದ್ದು; ಮತ್ತು

(ii) ಪ್ರಸ್ತಾವಿತ ರೋಗಪತ್ತೆ (diagnostic) ಕ್ರಮಗಳು ಅಥವಾ ಚಿಕಿತ್ಸೆಗಳನ್ನು ನೆರವೇರಿಸುವಲ್ಲಿ ರೋಗಿಯ ಅರ್ಹತೆಗಳ ಬಗ್ಗೆ ಮಾಹಿತಿ ನೀಡತಕ್ಕದ್ದು.

(2) ರೋಗಿ ಸ್ನೇಹಿ.– ಪ್ರತಿಯೊಂದು ಖಾಸಗಿ ವೈದ್ಯಕೀಯ ಸಂಸ್ಥೆಯು,–

(i) ಪ್ರತಿಯೊಬ್ಬ ರೋಗಿಯನ್ನು ಕನಿಷ್ಟ ಕಾಯುವಿಕೆಯ ಅವಧಿಯಲ್ಲಿ ಚರ್ಚಿಸಲು ಮತ್ತು ಪರೀಕ್ಷಿಸಲು ಅವಶ್ಯಕವಾದ ವೇಳೆ ಮತ್ತು ಆತನ ಸಮಸ್ಯೆಗಳು ಮತ್ತು ಕಳಕಳಿಗಳನ್ನು ಯಾವುದೇ ಅಡಚಣೆಗಳಿಲ್ಲದೆ ಅಥವಾ ತೊಂದರೆಗಳಿಲ್ಲದೆ ಹೇಳಲು ಅನುವಾಗುವಂತ ರೀತಿಯಲ್ಲಿ ವೈದ್ಯರ ಭೇಟಿಯ ವೇಳಾ ಪಟ್ಟಿಯನ್ನು ನೀಡುವುದು;

(ii) ರೋಗಿಗೆ ಆತನ ಸ್ನೇಹಿತ ಅಥವಾ ಸಂಬಂಧಿಕರನ್ನು ಪರೀಕ್ಷಾ ಕೊಠಡಿಯೊಳಗೆ ಕರೆತರುವಂತೆ ಪ್ರೋತ್ಸಾಹಿಸುವುದು;

(3) ರೋಗಿಯ ತಿಳುವಳಿಕೆಗಾಗಿ ಪರಿಣಾಮಕಾರಿ ಸಂವಹನ.– ಪ್ರತಿಯೊಬ್ಬ ವೈದ್ಯನು,–

(i) ರೋಗಿಯ ಪೂರ್ವ ಮಾಹಿತಿ, ಮುಂದಿನ ರೋಗಪತ್ತೆ (diagnostic) ಚಟುವಟಿಕೆ ಮತ್ತು ಚಿಕಿತ್ಸೆಯ ಕುರಿತು ಸರಳವಾದ ಪದಗಳಲ್ಲಿ ಆತನಿಗೆ ಸುಲಭವಾಗಿ ಆರ್ಥವಾಗಲು ಅನುವಾಗುವಂತೆ ವಿವರಿಸುವುದು;

(ii) ರೋಗಿಯು ಮಾಹಿತಿ ಪೂರ್ಣ ನಿರ್ಧಾರಗಳನ್ನು ಮಾಡಲು ಆತನನ್ನು ಸಮರ್ಥಗೊಳಿಸಲು ಮಾಹಿತಿ, ಚಿಕಿತ್ಸಾ ವಿಧಾನವನ್ನು ನಿಯಮಿಸುವುದು ಮತ್ತು ರೋಗಪತ್ತೆ (diagnostic), ಚಿಕಿತ್ಸೆ ಮತ್ತು ಔಷಧದ ಆಯ್ಕೆಗಳ ಬಗ್ಗೆ ಆತನೊಂದಿಗೆ ಚರ್ಚಿಸುವುದು;

(iii) ಪ್ರತಿಯೊಂದು ಪರ್ಯಾಯದ ಪ್ರಯೋಜನಗಳು ಮತ್ತು ಅಪಾಯ ಸಂಭವಗಳ ಬಗ್ಗೆ ಆತನಿಗೆ ಮನದಟ್ಟು ಮಾಡಿ ಆತನನ್ನು ಸಮಾಧಾನಗೊಳಿಸಿ ಮತ್ತು ನಿರ್ದಿಷ್ಟ ಕ್ರಮದ ಬಗ್ಗೆ ಆತನು ತನ್ನ ಒಪ್ಪಿಗೆಯನ್ನು ನೀಡುವವರೆಗೂ ಮುಂದುವರೆಯತಕ್ಕದ್ದಲ್ಲ.

(4) ರೋಗಿಯ ಸನ್ನದಿನ ಅನುಷ್ಠಾನ.– ಪ್ರತಿಯೊಂದು ಖಾಸಗಿ ವೈದ್ಯಕೀಯ ಸಂಸ್ಥೆಯು,–

(i) ರೋಗಿಯ ಸನ್ನದನ್ನು ಕನ್ನಡ, ಇಂಗ್ಲೀಷ್ ಮತ್ತು ಹಿಂದಿಯಲ್ಲಿ ಪ್ರಕಟಿಸತಕ್ಕದ್ದು;

(ii) ಆರೋಗ್ಯ ರಕ್ಷಣೆಯನ್ನು ಒದಗಿಸುವ ಸ್ಥಾಪನೆಗಳಲ್ಲಿ ರೋಗಿಯ ಸನ್ನದನ್ನು ಪ್ರಮುಖವಾದ ಮತ್ತು ಹಲವಾರು ಸ್ಥಳಗಳಲ್ಲಿ ಪ್ರದರ್ಶಿಸತಕ್ಕದ್ದು; ಮತ್ತು

(iii) ಪ್ರತಿದಿನದ ವೈದ್ಯಕೀಯ ಪದ್ದತಿಯಲ್ಲಿ ತನ್ನ ನಿಜವಾದ ಅರ್ಥದಲ್ಲಿ ರೋಗಿಯ ಸನ್ನದನ್ನು ಅನುಷ್ಠಾನಗೊಳಿಸತಕ್ಕದ್ದು."

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ 2007ನ್ನು (2007ರ ಕರ್ನಾಟಕ ಅಧಿನಿಯಮ 21) ಈ ಮುಂದಿನವುಗಳಿಗಾಗಿ ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ, ಎಂದರೆ;–

(i) ರೋಗಿಗಳ ಕುಂದುಕೊರತೆಯ ಪರಿಹಾರಕ್ಕಾಗಿ ಜಿಲ್ಲಾ ಅಥವಾ ಮಹಾನಗರ ಕುಂದುಕೊರತೆ ಪರಿಹಾರ ಸಮಿತಿಯನ್ನು ರಚಿಸುವುದು;

(ii) ಖಾಸಗಿ ವೈದ್ಯಕೀಯ ಸಂಸ್ಥೆಗಳು ಪ್ರತಿಯೊಂದು ವರ್ಗದ ಚಿಕಿತ್ಸೆಗೆ ಸಂಗ್ರಹಿಸಬೇಕಾದ ದರಗಳು ಅಥವಾ ಚಾರ್ಜುಗಳನ್ನು ನಿಗದಿಪಡಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುವುದು ಮತ್ತು ತಜ್ಞರ ಸಮಿತಿಯ ಶಿಫಾರಸ್ಸಿನ ಮೇರೆಗೆ ಬೇರೆ ಬೇರೆ ವರ್ಗದ ಖಾಸಗಿ ವೈದ್ಯಕೀಯ ಸಂಸ್ಥೆಗಳಿಗೆ ಬೇರೆ ಬೇರೆ ದರಗಳನ್ನು ಅಧಿಸೂಚಿಸುವುದು;

(iii) ರಾಜ್ಯ ಸರ್ಕಾರವು ನಿಗದಿಪಡಿಸಿದುದಕ್ಕಿಂತ ಹೆಚ್ಚಿನ ದರಗಳನ್ನು ಖಾಸಗಿ ವೈದ್ಯಕೀಯ ಸಂಸ್ಥೆಗಳು ಸಂಗ್ರಹಿಸಿದಲ್ಲಿ, ರೂ.25,000/– ಕ್ಕಿಂತ ಕಡಿಮೆ ಇಲ್ಲದ ಆದರೆ ರೂ.5.00 ಲಕ್ಷಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯನ್ನು ಮತ್ತು ಆರು ತಿಂಗಳುಗಳಿಗಿಂತ ಕಡಿಮೆ ಇಲ್ಲದ ಆದರೆ ಮೂರು ವರ್ಷಗಳಿಗೆ ವಿಸ್ತರಿಸಬಹುದಾದ ಕಾರವಾಸವನ್ನು ವಿಧಿಸುವುದು;

(iv) ನೋಂದಣಿ ಪ್ರಾಧಿಕಾರವನ್ನು ಪುನರ್ ರಚಿಸುವುದು;

(v) ಅಧಿನಿಯಮದ ಅನುಸೂಚಿಯಲ್ಲಿರುವಂತೆ ಖಾಸಗಿ ವೈದ್ಯಕೀಯ ಸಂಸ್ಥೆಗಳಲ್ಲಿ ರೋಗಿಯ ಸನ್ನದು ಮತ್ತು ಖಾಸಗಿ ವೈದ್ಯಕೀಯ ಸಂಸ್ಥೆಯ ಸನ್ನದನ್ನು ನಿರ್ದಿಷ್ಟಪಡಿಸುವುದು;

(vi) ತುರ್ತು ಚಿಕಿತ್ಸೆಯ ಸಂದರ್ಭದಲ್ಲಿ ರೋಗಿಯಿಂದ ಅಥವಾ ರೋಗಿಯ ಪ್ರತಿನಿಧಿಯಿಂದ ಮುಂಗಡ ಪಾವತಿಯನ್ನು ಒತ್ತಾಯಪಡಿಸುವಂತಿಲ್ಲ;

(vii) ಸಂಬಂಧಪಟ್ಟ ವ್ಯಕ್ತಿಗೆ ಮೃತ ದೇಹವನ್ನು ಹಸ್ತಾಂತರಿಸುವ ಸಮಯದಲ್ಲಿ ಯಾವುದೇ ಬಾಕಿ ಮೊತ್ತಕ್ಕೆ ಒತ್ತಾಯಿಸದೇ ತರುವಾಯದಲ್ಲಿ ಬಾಕಿಗಳನ್ನು ಸಂಗ್ರಹಿಸುವುದು; ಮತ್ತು

(viii) 19ನೇ ಪ್ರಕರಣದಡಿಯಲ್ಲಿ ವಿಧಿಸಬಹುದಾದ ಕೆಲವು ದಂಡಗಳನ್ನು ವಿಧಿಸುವುದು ; ಮತ್ತು

(ix) ಕೆಲವು ಇತರ ಆನುಷಂಗಿಕ ಅಥವಾ ಪ್ರಾಸಂಗಿಕವಾದ ತಿದ್ದುಪಡಿಗಳನ್ನು ಕೂಡ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತು ಜ್ಞಾಪನ ಪತ್ರ

ಖಂಡ 7	ಈ ಖಂಡದಡಿಯಲ್ಲಿ ಪ್ರತಿಯೋಜಿಸಬೇಕೆಂದು ಉದ್ದೇಶಿಸಲಾದ 7ನೇ ಪ್ರಕರಣದ (1)ನೇ ಉಪಪ್ರಕರಣವು ರಾಜ್ಯ ಸರ್ಕಾರಕ್ಕೆ,– (ಎ) ಖಾಸಗಿ ವೈದ್ಯಕೀಯ ಸಂಸ್ಥೆಗಳಿಗೆ 30 ದಿನಗಳೊಳಗೆ ನೋಂದಣಿಯನ್ನು ಮಂಜೂರು ಮಾಡುವ ಅಥವಾ ಅರ್ಜಿಯನ್ನು ತಿರಸ್ಕರಿಸುವ ವಿಧಾನದ ಕುರಿತು ನಿಯಮಗಳನ್ನು ರಚಿಸಲು; ಮತ್ತು (ಬಿ) ನೋಂದಣಿ ಪ್ರಾಧಿಕಾರದ ಮೂಲಕ ಪರಿಶೀಲನಾ ಸಮಿತಿಯನ್ನು ರಚಿಸುವ ವಿಧಾನವನ್ನು ಕುರಿತು ನಿಯಮಗಳನ್ನು ರಚಿಸಲು, –ಅಧಿಕಾರ ನೀಡುತ್ತದೆ.
ಖಂಡ 8	ಪ್ರತಿಯೋಜಿಸಲು ಉದ್ದೇಶಿಸಲಾದ 8ನೇ ಪ್ರಕರಣದ (4)ನೇ ಉಪಪ್ರಕರಣದ (v)ನೇ ಬಾಬು, ಜಿಲ್ಲಾ ಅಥವಾ ಮಹಾನಗರ ಕುಂದುಕೊರತೆ ಪರಿಹಾರ ಸಮಿತಿಯ ಮೂಲಕ ತನಿಖೆಗಾಗಿ ಯಾವುದೇ ಇತರ ವಿಷಯದ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.
ಖಂಡ 10	ಸೇರಿಸಲು ಉದ್ದೇಶಿಸಲಾದ ಖಂಡ 9ಎ,– (i) (1)ನೇ ಉಪಪ್ರಕರಣದ (ಡಿ) ಖಂಡವು, ತಜ್ಞರ ಸಮಿತಿಗಳು ಮತ್ತು ಇತರ ಸಮಿತಿಗಳ ಇತರ ಪ್ರಕಾರ್ಯಗಳ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ; (ii) (3)ನೇ ಉಪಖಂಡವು,– (ಎ) (ಎ) ಖಂಡವು, ಅಡ್–ಹಾಕ್ ಸಮಿತಿಗಳ ರಚನೆ ಮತ್ತು ಅದರ ಸದಸ್ಯರ ಸಂಖ್ಯೆಯನ್ನು ನಿರ್ದಿಷ್ಟಪಡಿಸುವ ವಿಧಾನದ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ; (ಬಿ) (ಬಿ) ಖಂಡವು, ಅಡ್–ಹಾಕ್ ಸಮಿತಿಯ ಕಾರ್ಯನಿರ್ವಹಣೆ ಮತ್ತು ರಾಜ್ಯ ಸರ್ಕಾರಕ್ಕೆ ಅದರ ವರದಿಯನ್ನು ಸಲ್ಲಿಸುವ ವಿಧಾನವನ್ನು ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ; (ಸಿ) (ಸಿ) ಖಂಡವು, ತಜ್ಞರ ಸಮಿತಿ ಮತ್ತು ಅಡ್–ಹಾಕ್ ಸಮಿತಿಯ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ಕಾರ್ಯವಿಧಾನದ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ; ಮತ್ತು (ಡಿ) (ಡಿ) ಖಂಡವು, ಸಮಿತಿಗಳ ಸರ್ಕಾರೇತರ ಸದಸ್ಯರಿಗೆ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಗಳು ಅಥವಾ ಇತರ ಭತ್ಯೆಗಳ ಅರ್ಹತೆಯ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಪ್ರಸ್ತಾವಿತ ಪ್ರತ್ಯಾಯೋಜಿತ ಶಾಸನ ರಚನಾಧಿಕಾರವು ವಾಡಿಕೆಯ ಸ್ವರೂಪದ್ದಾಗಿದೆ.

ಕೆ.ಆರ್. ರಮೇಶ್ ಕುಮಾರ್
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು

ಎಸ್. ಮೂರ್ತಿ
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

ಅನುಬಂಧ

ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ, 2007ರ (2007ರ ಕರ್ನಾಟಕ ಅಧಿನಿಯಮ ಸಂಖ್ಯೆ. 21) ಉದ್ಧೃತ ಭಾಗ

XX XX XX

2. ಪರಿಭಾಷೆಗಳು.– ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

XX XX XX

(ಇ) "ಇಲಾಖೆ" ಎಂದರೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಥವಾ ಸಂದರ್ಭಾನುಸಾರ ಕರ್ನಾಟಕ ಸರ್ಕಾರದ ಭಾರತೀಯ ವೈದ್ಯಪದ್ಧತಿ ಮತ್ತು ಹೋಮಿಯೋಪತಿ ಇಲಾಖೆ;

XX XX XX

(ಎಚ್) "ಸ್ಥಳೀಯ ಪರಿಶೀಲನಾ ಸಮಿತಿ" ಎಂದರೆ, 8ನೇ ಪ್ರಕರಣದಡಿಯಲ್ಲಿ ರಚಿಸಲಾದ ಸ್ಥಳೀಯ ಪರಿಶೀಲನಾ ಸಮಿತಿ;

XX XX XX

(ಎಲ್) "ವೈದ್ಯಕೀಯ ಚಿಕಿತ್ಸೆ" ಎಂದರೆ, ಅಲೋಪತಿಯ ಅಥವಾ ಇತರ ಯಾವುದೇ ಮಾನ್ಯತೆ ಪಡೆದ ವೈದ್ಯ ಪದ್ಧತಿಗಳಾದಂಥ ಆಯುರ್ವೇದ, ಯುನಾನಿ, ಹೋಮಿಯೋಪತಿ, ಯೋಗ, ಸಂಯೋಜಿತ ವೈದ್ಯಪದ್ಧತಿ, ಪ್ರಕೃತಿ ಚಿಕಿತ್ಸೆ ಮತ್ತು ಸಿದ್ಧ ಇವುಗಳ ಮೂಲಕ ಯಾವೊಬ್ಬ ವ್ಯಕ್ತಿಯ ಆರೋಗ್ಯ ಸ್ಥಿತಿಯನ್ನು ಸುಧಾರಿಸಲು ಅಥವಾ ಯಾವುದೇ ರೋಗವನ್ನು ಗುಣಪಡಿಸಲು ಅಥವಾ ತಡೆಗಟ್ಟಲು ಮಾಡುವ ಕ್ರಮಬದ್ಧ ರೋಗನಿದಾನ ಮತ್ತು ಚಿಕಿತ್ಸೆ; ಮತ್ತು ಇದು ಆಕ್ಯುಪಂಕ್ಚರ್ ಮತ್ತು ಆಕ್ಯುಪ್ರೆಷರ್ ಚಿಕಿತ್ಸೆಗಳನ್ನು ಒಳಗೊಳ್ಳುತ್ತದೆ;

(ಎಂ) "ನರ್ಸಿಂಗ್ ಹೋಂ" ಎಂದರೆ, ಅಸ್ವಸ್ಥತೆಯಿಂದ, ಗಾಯದಿಂದ ಅಥವಾ (ದೈಹಿಕ ಅಥವಾ ಮಾನಸಿಕ) ಅಶಕ್ತತೆಯಿಂದ ಬಳಲುತ್ತಿರುವ ರೋಗಿಗಳನ್ನು ರೋಗಗಳ ಅಥವಾ ಅಶಕ್ತತೆಯ ಚಿಕಿತ್ಸೆಯ ಅಥವಾ ಆರೋಗ್ಯವನ್ನು ಸುಧಾರಿಸಿಕೊಳ್ಳುವ ಉದ್ದೇಶದಿಂದ ಅಥವಾ ವಿಶ್ರಾಂತಿಯ ಉದ್ದೇಶಕ್ಕಾಗಿ ಅಥವಾ ಈ ಪ್ರಕರಣದ (ಎಲ್) ಖಂಡದಲ್ಲಿ ಹೇಳಲಾಗಿರುವ ಉದ್ದೇಶಗಳಿಗೆ ಅನುರೂಪವಾದ ಅಥವಾ ಅನುರೂಪವಾಗಿರದ ಉದ್ದೇಶಕ್ಕಾಗಿ ಅಥವಾ ಇನ್ನಾವುದಾದರೂ ಉದ್ದೇಶಕ್ಕಾಗಿ ಸಾಮಾನ್ಯವಾಗಿ ವ್ಯಕ್ತಿಗಳನ್ನು ಬರಮಾಡಿಕೊಳ್ಳುವ ಅಥವಾ ದಾಖಲುಮಾಡಿಕೊಳ್ಳುವ ಒಂದು ಸಂಸ್ಥೆ;

(ಎನ್) "ಖಾಸಗಿ ವೈದ್ಯಕೀಯ ಸಂಸ್ಥೆ" ಎಂದರೆ, ಹಾಸಿಗೆಗಳುಳ್ಳ ಅಥವಾ ಹಾಸಿಗೆಗಳಿಲ್ಲದಿರುವ ಆಸ್ಪತ್ರೆ ಅಥವಾ ದವಾಖಾನೆ, ನರ್ಸಿಂಗ್ ಹೋಂ, ಚಿಕಿತ್ಸಾ ಪ್ರಯೋಗಾಲಯ, ರೋಗನಿದಾನ ಕೇಂದ್ರ, ಪ್ರಸೂತಿ ಗೃಹ, ರಕ್ತನಿಧಿ, ಕ್ಷಕಿರಣ ಪರೀಕ್ಷಾ ಕೇಂದ್ರ, ಸ್ಕ್ಯಾನಿಂಗ್ ಕೇಂದ್ರ, ಫಿಸಿಯೋಥರಪಿ ಕೇಂದ್ರ, ಚಿಕಿತ್ಸಾಲಯ, ಪಾಲಿಕ್ಲಿನಿಕ್, ವೈದ್ಯಸಲಹಾ ಕೇಂದ್ರ (Consultation centre) ಮತ್ತು ಸಾರ್ವಜನಿಕರಿಗೆ ರೋಗ ತಪಾಸಣೆ, ರೋಗ ನಿದಾನ, ರೋಗ ತಡೆಗಟ್ಟುವಿಕೆ ಅಥವಾ ರೋಗಗುಣಪಡಿಸುವ ಅಥವಾ ಮರು ಚೇತರಿಕೆ ಸ್ಥಾಪಿಸುವ (rehabilitative) ವೈದ್ಯಕೀಯ ಚಿಕಿತ್ಸಾ ಸೌಲಭ್ಯಗಳನ್ನು ಒದಗಿಸುವ ಯಾವುದೇ ಹೆಸರಿನಿಂದ ಕರೆಯಬಹುದಾದಂಥ ಇತರ ಸಂಸ್ಥೆಗಳು ಮತ್ತು ಸ್ವಯಂ ಸೇವಾ ಅಥವಾ ಖಾಸಗಿ ಸಂಸ್ಥೆಗಳನ್ನು ಒಳಗೊಳ್ಳುತ್ತದೆ ಆದರೆ,–

XX XX XX

(ಆರ್) "ನೋಂದಣಿ ಪ್ರಾಧಿಕಾರ" ಎಂದರೆ 4ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ನೋಂದಣಿ ಪ್ರಾಧಿಕಾರ.

XX XX XX

3. ಖಾಸಗಿ ವೈದ್ಯಕೀಯ ಸಂಸ್ಥೆಗಳ ನೋಂದಣಿ.– ಈ ಅಧಿನಿಯಮದ ಪ್ರಾರಂಭದ ತರುವಾಯ ಆದಷ್ಟು ಬೇಗನೆ ಈ ಅಧಿನಿಯಮದ ಅಡಿಯಲ್ಲಿ ಮಂಜೂರಾದ ನೋಂದಣಿಯ ನಿಬಂಧನೆಗಳು ಹಾಗೂ ಷರತ್ತುಗಳಿಗೆ ಅನುಸಾರವಾಗಿ ಹೊರತು ರಾಜ್ಯದಲ್ಲಿ ಯಾವುದೇ ಖಾಸಗಿ ವೈದ್ಯಕೀಯ ಸಂಸ್ಥೆಗಳನ್ನು ಸ್ಥಾಪಿಸತಕ್ಕದ್ದಲ್ಲ, ನಡೆಸತಕ್ಕದ್ದಲ್ಲ ಅಥವಾ ನಿರ್ವಹಿಸತಕ್ಕದ್ದಲ್ಲ:

ಪರಂತು, ಈ ಅಧಿನಿಯಮದ ಪ್ರಾರಂಭದ ನಿಕಟಪೂರ್ವದಲ್ಲಿ ಅಸ್ತಿತ್ವದಲ್ಲಿರುವ ಖಾಸಗಿ ವೈದ್ಯಕೀಯ ಸಂಸ್ಥೆಗಳು ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ, 2010ರ ಪ್ರಾರಂಭದ ದಿನಾಂಕದಿಂದ ಮೂರು ತಿಂಗಳುಗಳೊಳಗೆ ಅಂಥ ನೋಂದಣಿಗಾಗಿ ಅರ್ಜಿ ಸಲ್ಲಿಸತಕ್ಕದ್ದು ಮತ್ತು ಅದರ ಮೇಲೆ ಆದೇಶ ಮಾಡುವವರೆಗೂ ಅರ್ಜಿಯನ್ನು ವಿಲೇಮಾಡುವವರೆಗೆ ಅದನ್ನು ನಡೆಸಬಹುದು ಅಥವಾ ನಿರ್ವಹಿಸಿಕೊಂಡು ಬರಬಹುದು.

XX XX XX

4. ನೋಂದಣಿ ಪ್ರಾಧಿಕಾರ.– ಈ ಕೆಳಕಂಡ ಸದಸ್ಯರನ್ನು ಒಳಗೊಂಡಂತೆ ಪ್ರತಿ ಜಿಲ್ಲೆಯಲ್ಲಿ ಒಂದು ನೋಂದಣಿ ಪ್ರಾಧಿಕಾರವು ಇರತಕ್ಕದ್ದು, ಎಂದರೆ:–

(ಎ)	ಜಿಲ್ಲೆಯ ಜಿಲ್ಲಾಧಿಕಾರಿ	ಅಧ್ಯಕ್ಷರು
(ಬಿ)	ಜಿಲ್ಲೆಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ	ಸದಸ್ಯ ಕಾರ್ಯದರ್ಶಿ
(ಸಿ)	ಸಂಬಂಧಿಸಿದ ಜಿಲ್ಲೆಯ ಭಾರತೀಯ ವೈದ್ಯಕೀಯ ಸಂಘದ ಅಧ್ಯಕ್ಷ/ಕಾರ್ಯದರ್ಶಿ	ಸದಸ್ಯರು
(ಡಿ)	ಜಿಲ್ಲಾ **ಆಯುಷ್** ಅಧಿಕಾರಿ	ಸದಸ್ಯರು

(ಇ)	ಸಂಬಂಧಿಸಿದ ಜಿಲ್ಲೆಯ ಭಾರತದ ಆಯುಷ್ ಸಂಯುಕ್ತ ಸಂಘದ ಅಧ್ಯಕ್ಷರು/ ಕಾರ್ಯದರ್ಶಿ	ಸದಸ್ಯರು

XX XX XX

5. ನೋಂದಣಿಗಾಗಿ ಅರ್ಜಿ.– (1) ಖಾಸಗಿ ವೈದ್ಯಕೀಯ ಸಂಸ್ಥೆಗಳನ್ನು ಸ್ಥಾಪಿಸಲು, ನಡೆಸಲು, ನಿರ್ವಹಿಸಲು ಅಥವಾ ನಡೆಸುವುದನ್ನು ಮತ್ತು ನಿರ್ವಹಿಸುವುದನ್ನು ಮುಂದುವರೆಸಲು ಬಯಸುವ ಪ್ರತಿಯೊಬ್ಬ ವ್ಯಕ್ತಿಯು ಸಂಬಂಧಿಸಿದ ನೋಂದಣಿ ಪ್ರಾಧಿಕಾರಕ್ಕೆ ನಿಯಮಿಸಬಹುದಾದಂಥ ನಮೂನೆಯಲ್ಲಿ, ಅಂಥ ವಿಧಾನದಲ್ಲಿ ಹಾಗೂ ಅಂಥ ಶುಲ್ಕದೊಡನೆ ಅರ್ಜಿಯನ್ನು ಸಲ್ಲಿಸತಕ್ಕದ್ದು ಮತ್ತು ಬೇರೆ ಬೇರೆ ಖಾಸಗಿ ವೈದ್ಯಕೀಯ ಸಂಸ್ಥೆಗಳ ವರ್ಗ ಅಥವಾ ವರ್ಗಗಳಿಗೆ ಬೇರೆ ಬೇರೆ ಶುಲ್ಕವನ್ನು ನಿಯಮಿಸಬಹುದು.

XX XX XX

6. ಖಾಸಗಿ ವೈದ್ಯಕೀಯ ಸಂಸ್ಥೆಗಳ ನೋಂದಣಿಗಾಗಿ ಪೂರ್ವ ಅಗತ್ಯತೆಗಳು.– ನೋಂದಣಿ ಪ್ರಾಧಿಕಾರವು ನೋಂದಣಿಯನ್ನು ಮಂಜೂರುಮಾಡುವ ಖಾಸಗಿ ವೈದ್ಯಕೀಯ ಸಂಸ್ಥೆಗಳ ನೋಂದಣಿಗಾಗಿ ಇರುವ ಈ ಮುಂದಿನ ಪೂರ್ವ ಅಗತ್ಯತೆಗಳನ್ನು ಪೂರೈಸಲಾಗಿದೆಯೇ ಎಂಬುದನ್ನು ಪರಿಗಣಿಸತಕ್ಕದ್ದು, ಎಂದರೆ:–

XX XX XX

(iv) ಖಾಸಗಿ ವೈದ್ಯಕೀಯ ಸಂಸ್ಥೆಯು 9ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಮಾನಕ ಗುಣಮಟ್ಟಗಳಿಗೆ ಅನುಗುಣವಾಗಿದೆ;

XX XX XX

7. ಅರ್ಜಿಗಳ ವಿಲೆ.– (1) 5ನೇ ಪ್ರಕರಣದ ಅಡಿಯಲ್ಲಿ ಒಂದು ಅರ್ಜಿಯನ್ನು ಸ್ವೀಕರಿಸಿದ ತರುವಾಯ, ನೋಂದಣಿ ಪ್ರಾಧಿಕಾರವು 6ನೇ ಪ್ರಕರಣದ ಉಪಬಂಧಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ಅವಶ್ಯಕವಾಗಬಹುದಾದಂಥ ವಿಚಾರಣೆಯನ್ನು ಸ್ಥಳೀಯ ಪರಿಶೀಲನಾ ಸಮಿತಿಯ ಮೂಲಕ ನಡೆಸಿದ ತರುವಾಯ ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ನೋಂದಣಿಯನ್ನು ಮಂಜೂರು ಮಾಡಬಹುದು ಅಥವಾ ಅರ್ಜಿಯನ್ನು ತಿರಸ್ಕರಿಸಬಹುದು:

ಪರಂತು, ನೋಂದಣಿ ಪ್ರಾಧಿಕಾರವು ಅರ್ಜಿದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ಹೊರತು ಮತ್ತು ಅಂಥ ತಿರಸ್ಕಾರಕ್ಕೆ ಕಾರಣಗಳನ್ನು ದಾಖಲಿಸಿದ ಹೊರತು ಅರ್ಜಿಯನ್ನು ತಿರಸ್ಕರಿಸತಕ್ಕದ್ದಲ್ಲ.

XX XX XX

(3) (1)ನೇ ಉಪ ಪ್ರಕರಣದ ಅಡಿಯಲ್ಲಿ ಮಂಜೂರು ಮಾಡಿದ ಪ್ರತಿಯೊಂದು ನೋಂದಣಿಯು ಐದು ವರ್ಷಗಳ ಅವಧಿಯ ವರೆಗೆ ಸಿಂಧುತ್ವವನ್ನು ಹೊಂದಿರುತ್ತದೆ ಮತ್ತು ನಿಯಮಿಸಬಹುದಾದಂಥ ವಿಧಾನದಲ್ಲಿ ಮತ್ತು ಅಂಥ ಶುಲ್ಕವನ್ನು ಸಂದಾಯಿಸಿ ಅರ್ಜಿ ಸಲ್ಲಿಸಿದ ಮೇಲೆ ಒಂದು ಬಾರಿಗೆ ಐದು ವರ್ಷಗಳ ವರೆಗೆ ನವೀಕರಿಸಬಹುದು.

XX XX XX

8. ಸ್ಥಳೀಯ ಪರಿಶೀಲನಾ ಸಮಿತಿ.– (1) ಪ್ರತಿಯೊಂದು ಜಿಲ್ಲೆಯ ನೋಂದಣಿ ಪ್ರಾಧಿಕಾರವು, ಈ ಪ್ರಕರಣದ (2)ನೇ ಉಪಪ್ರಕರಣ ಹಾಗೂ 7ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶಗಳಿಗಾಗಿ ಅದು ನಿರ್ದಿಷ್ಟಪಡಿಸಬಹುದಾದಂಥ ವ್ಯಕ್ತಿಗಳನ್ನು ಒಳಗೊಂಡಂತೆ ಪ್ರತಿಯೊಂದು ಜಿಲ್ಲೆಗೆ ಒಂದು ಅಥವಾ ಹೆಚ್ಚು ಸ್ಥಳೀಯ ಪರಿಶೀಲನಾ ಸಮಿತಿಗಳನ್ನು ರಚಿಸಬಹುದು.

(2) ಸ್ಥಳೀಯ ಪರಿಶೀಲನಾ ಸಮಿತಿಯು ಪೂರ್ವ ಮಾಹಿತಿಕೊಟ್ಟು ಅಥವಾ ದೂರನ್ನು ಸ್ವೀಕರಿಸಿದ ಮೇಲೆ ಈ ಅಧಿನಿಯಮದ ಉಪಬಂಧಗಳನ್ನು ಹಾಗೂ ಅದರಡಿಯಲ್ಲಿ ರಚಿಸಿದ ನಿಯಮಗಳನ್ನು ಮತ್ತು ನೋಂದಣಿಯ ಷರತ್ತುಗಳನ್ನು ಸಮರ್ಪಕವಾಗಿ ಪಾಲಿಸಲಾಗಿದೆಯೆಂದು ತಾನು ಮನದಟ್ಟು ಮಾಡಿಕೊಳ್ಳಲು ಯಾವುದೇ ಸೂಕ್ತ ಸಮಯದಲ್ಲಿ ಖಾಸಗಿ ವೈದ್ಯಕೀಯ ಸಂಸ್ಥೆಯನ್ನು ಪರಿಶೀಲಿಸಬಹುದು.

(3) ಪರಿಶೀಲನಾ ಸಮಯದಲ್ಲಿ ಯಾವುದೇ ದೋಷಗಳು ಅಥವಾ ಕೊರತೆಗಳು ಕಂಡುಬಂದರೆ, ಸ್ಥಳೀಯ ಪರಿಶೀಲನಾ ಸಮಿತಿಯು ಅದನ್ನು ನೋಂದಣಿ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು. ನೋಂದಣಿ ಪ್ರಾಧಿಕಾರವು ಖಾಸಗಿ ವೈದ್ಯಕೀಯ ಸಂಸ್ಥೆಯ ವ್ಯವಸ್ಥಾಪಕನಿಗೆ, ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸಮಂಜಸ ಅವಧಿಯೊಳಗೆ ಅದನ್ನು ಸರಿಪಡಿಸಲು ನಿರ್ದೇಶಿಸಬಹುದು. ತದನಂತರ ವ್ಯವಸ್ಥಾಪಕನು ಅಂಥ ಪ್ರತಿಯೊಂದು ನಿರ್ದೇಶನವನ್ನು ಪಾಲಿಸತಕ್ಕದ್ದು ಮತ್ತು ಹಾಗೆ ನಿರ್ದಿಷ್ಟಪಡಿಸಿದ ಅವಧಿಯೊಳಗೆ ನೋಂದಣಿ ಪ್ರಾಧಿಕಾರಕ್ಕೆ ಹಾಗೆ ಪಾಲಿಸಿರುವ ಬಗ್ಗೆ ವರದಿಯನ್ನು ಸಲ್ಲಿಸತಕ್ಕದ್ದು.

XX XX XX

9. ಗುಣಮಟ್ಟಗಳು.– (1) ಪ್ರತಿಯೊಂದು ಖಾಸಗಿ ವೈದ್ಯಕೀಯ ಸಂಸ್ಥೆಯು, ಸಿಬ್ಬಂದಿ ಮತ್ತು ಅವರ ವಿದ್ಯಾರ್ಹತೆಗಳು, ಶಸ್ತ್ರಚಿಕಿತ್ಸೆ ಕೊಠಡಿ, ಕಟ್ಟಡಗಳು, ಅವಶ್ಯಕ ಸ್ಥಳಾವಕಾಶ, ಸಲಕರಣೆಗಳು, ರೋಗಿಗಳಿಗೆ ಮತ್ತು ಅವರನ್ನು ನೋಡಿಕೊಳ್ಳುವವರಿಗೆ ಒದಗಿಸಬೇಕಾದ ಸೌಲಭ್ಯಗಳು ನಿರ್ವಹಣೆ ಹಾಗೂ ಇತರ ವಿಷಯಗಳಿಗೆ ಸಂಬಂಧಿಸಿದಂತೆ ಈ ಅಧಿನಿಯಮದಲ್ಲಿ ಅಥವಾ ಅದರಡಿಯಲ್ಲಿ ರಚಿಸಲಾದ ನಿಯಮಗಳಲ್ಲಿ ಅಥವಾ ಪ್ರಸ್ತುತ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ನಿಗದಿಪಡಿಸಲಾದ ಗುಣಮಟ್ಟಗಳನ್ನು ಪಾಲಿಸಿಕೊಂಡು ಬರತಕ್ಕದ್ದು.

(2) ರಾಜ್ಯಸರ್ಕಾರವು ನಿರ್ಧರಿಸಿದಂತೆ ಬೇರೆ ಬೇರೆ ಪ್ರದೇಶಗಳಿಗೆ ಸಂಬಂಧಿಸಿದಂತೆ ಬೇರೆ ಬೇರೆ ಖಾಸಗಿ ವೈದ್ಯಕೀಯ ಸಂಸ್ಥೆಗಳಿಗೆ ಬೇರೆ ಬೇರೆ ಗುಣಮಟ್ಟಗಳನ್ನು ನಿಗದಿಪಡಿಸಬಹುದು. ಬೇರೆ ಬೇರೆ ಪ್ರದೇಶಗಳಿಗೆ ಖಾಸಗಿ ವೈದ್ಯಕೀಯ ಸಂಸ್ಥೆಗಳ ವಿವಿಧ ವರ್ಗ ಅಥವಾ ವರ್ಗಗಳಿಗೆ ಕಾಲಕಾಲಕ್ಕೆ ನಿಗದಿಪಡಿಸಬಹುದಾದ ಗುಣಮಟ್ಟಗಳನ್ನು ಸೂಚಿಸಲು ರಾಜ್ಯ ಸರ್ಕಾರವು ತಜ್ಞರ ಸಮಿತಿಗಳನ್ನು ರಚಿಸಬಹುದು. ತಜ್ಞರ ಸಮಿತಿಗಳ ಸಂಯೋಜನೆ, ಅಧಿಕಾರಗಳು ಮತ್ತು ಜವಾಬ್ದಾರಿಗಳು ಮತ್ತು ತಜ್ಞರ ಸಮಿತಿಯ ಸದಸ್ಯರುಗಳ ಸೇವಾ ನಿಬಂಧನೆಗಳು ಹಾಗೂ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

10. ವಿಧಿಸುವ ಚಾರ್ಜುಗಳ ಪಟ್ಟಿಯನ್ನು ಪ್ರಕಟಿಸಬೇಕು.– (1) ಪ್ರತಿಯೊಂದು ಖಾಸಗಿ ವೈದ್ಯಕೀಯ ಸಂಸ್ಥೆಯು ರೋಗಿಗಳ ಹಾಗೂ ಸಾಮಾನ್ಯ ಜನರ ತಿಳುವಳಿಕೆಗಾಗಿ ವಿವಿಧ ವೈದ್ಯಕೀಯ ಚಿಕಿತ್ಸೆಗಳಿಗೆ ಮತ್ತು ಇತರ ಸೇವೆಗಳಿಗೆ ಸಂದಾಯಮಾಡತಕ್ಕ ಚಾರ್ಜುಗಳ ಪಟ್ಟಿಯನ್ನು ಕಿರುಮಡಿಕೆಗಳು ಅಥವಾ ಕಿರಿಹೊತ್ತಿಗೆಗಳಲ್ಲಿ ಲಭ್ಯವಾಗುವಂತೆ ಮಾಡತಕ್ಕದ್ದು ಮತ್ತು ಅಂಥ ಚಾರ್ಜುಪಟ್ಟಿಯನ್ನು ಖಾಸಗಿ ವೈದ್ಯಕೀಯ ಸಂಸ್ಥೆಯ ಸೂಚನಾ ಫಲಕದಲ್ಲಿ ಪ್ರದರ್ಶಿಸತಕ್ಕದ್ದು. ಅಂಥ ಕಿರುಮಡಿಕೆ ಅಥವಾ ಕಿರಿಹೊತ್ತಿಗೆಯ ಪ್ರತಿಯನ್ನು ನೋಂದಣಿ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು.

(2) ಯಾವ ಖಾಸಗಿ ವೈದ್ಯಕೀಯ ಸಂಸ್ಥೆಯು ರೋಗಿಯಿಂದ ಅಥವಾ ಆತನ ಸಂಬಂಧಿಯಿಂದ ಅಥವಾ ಅವರನ್ನು ನೋಡಿಕೊಳ್ಳುವವರಿಂದ ಕಿರುಮಡಿಕೆ ಅಥವಾ ಕಿರಿಹೊತ್ತಿಗೆಯಲ್ಲಿ ಮುದ್ರಿಸಿದ ಚಾರ್ಜಿಗಿಂತ ಹೆಚ್ಚುವರಿಯಾಗಿ ಮತ್ತು ವಿಧಿಸಿದ ಹಾಗೂ ಪಡೆದುಕೊಂಡ ಮೊಬಲಗಿಗೆ ಸರಿಯಾದ ರಸೀದಿಯನ್ನು ನೀಡದೇ ಯಾವುದೇ ಮೊತ್ತವನ್ನು ಸಂಗ್ರಹಿಸತಕ್ಕದ್ದಲ್ಲ.

11. ಖಾಸಗಿ ವೈದ್ಯಕೀಯ ಸಂಸ್ಥೆಗಳ ಅವಶ್ಯ ಕರ್ತವ್ಯಗಳು.– ಪ್ರತಿಯೊಂದು ಖಾಸಗಿ ವೈದ್ಯಕೀಯ ಸಂಸ್ಥೆಯು,–

(i) ಸಂಸ್ಥೆಯ ಮುಂದೆ ತಾವಾಗಿಯೇ ಹಾಜರಾದ ಅಥವಾ ಯಾರಾದರೂ ಕರೆತಂದ ರಸ್ತೆ ಅಪಘಾತದ, ಆಕಸ್ಮಿಕ ಅಥವಾ ಉದ್ದೇಶ ಪೂರ್ವಕವಾಗಿ ಮಾಡಿದ ಸುಟ್ಟ ಗಾಯಗಳಾದ ಅಥವಾ ವಿಷ ಸೇವನೆಯ ಅಥವಾ ಕ್ರಿಮಿನಲ್ ಹಲ್ಲೆ ಮುಂತಾದವುಗಳಿಗೆ ಒಳಗಾದ ನೊಂದ ವ್ಯಕ್ತಿಗಳಂಥ ಎಲ್ಲಾ ವೈದ್ಯಕೀಯ–ಕಾನೂನು ಅಥವಾ ಸಂಭವನೀಯ ವೈದ್ಯಕೀಯ–ಕಾನೂನು ಪ್ರಕರಣಗಳಲ್ಲಿ ಅವಶ್ಯ ಪ್ರಥಮ ಚಿಕಿತ್ಸೆ ನೀಡತಕ್ಕದ್ದು ಮತ್ತು ಇತರ ಪ್ರಾಣ ಉಳಿಸುವ, ದೇಹಸ್ಥಿತಿ ಸ್ಥಿರಗೊಳಿಸುವ ತುರ್ತು ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

XX XX XX

(iv) ರಾಜ್ಯಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದಂಥ ಸೋಂಕು ರಹಿತ ರೋಗಗಳಿಗೆ ಸಂಬಂಧಿಸಿದ ವಿವರಗಳನ್ನು ನೋಂದಣಿ ಪ್ರಾಧಿಕಾರಕ್ಕೆ ಒದಗಿಸತಕ್ಕದ್ದು.

XX XX XX

12. ಚಿಕಿತ್ಸಾ ದಾಖಲೆಗಳ ನಿರ್ವಹಣೆ.–

XX XX XX

(2) ರಾಜ್ಯ ಸರ್ಕಾರದಿಂದ ಈ ಬಗ್ಗೆ ನಿರ್ದಿಷ್ಟ ಅಧಿಕಾರ ಪಡೆದ ಜಿಲ್ಲಾ ಸರ್ಜನ್ ಅಥವಾ ಇತರ ಅಧಿಕಾರಿಯು ತನ್ನ ಕರ್ತವ್ಯಗಳನ್ನು ಯುಕ್ತವಾಗಿ ನಿರ್ವಹಿಸುವಾಗ, ಎಲ್ಲ ಚಿಕಿತ್ಸಾ ದಾಖಲೆಗಳನ್ನು ಪರಿಶೀಲನೆಗೆ ಮುಕ್ತವಾಗಿರತಕ್ಕದ್ದು.

XX XX XX

15. ನೋಂದಣಿಯ ಅಮಾನತು ಅಥವಾ ರದ್ದತಿ.– (1) ನೋಂದಣಿ ಪ್ರಾಧಿಕಾರವು, ದೂರಿನ ಆಧಾರದ ಮೇಲೆ ಅಥವಾ ಅನ್ಯಥಾ, ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಿದ ನಿಯಮಗಳ ಅಥವಾ ನೋಂದಣಿಯ ಷರತ್ತುಗಳ ಉಲ್ಲಂಘನೆಯಾಗಿದೆಯೆಂದು ಮೇಲ್ನೋಟಕ್ಕೆ ಕಂಡುಬಂದರೆ, ಲಿಖಿತದಲ್ಲಿ ಆದೇಶವನ್ನು ನೀಡುವ ಮೂಲಕ ಮತ್ತು ಅದರಲ್ಲಿ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸುವ ಮೂಲಕ ಖಾಸಗಿ ವೈದ್ಯಕೀಯ ಸಂಸ್ಥೆಯ ನೋಂದಣಿಯನ್ನು ಅಮಾನತುಗೊಳಿಸಬಹುದು ಅಥವಾ ರದ್ದುಗೊಳಿಸಬಹುದು:

ಪರಂತು, ಅಂಥ ಆದೇಶವನ್ನು ಖಾಸಗಿ ವೈದ್ಯಕೀಯ ಸಂಸ್ಥೆಯು ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ಹೊರತು ಹೊರಡಿಸತಕ್ಕದ್ದಲ್ಲ.

XX XX XX

16. ಅಪೀಲು ಪ್ರಾಧಿಕಾರ.– ಈ ಮುಂದಿನ ಸದಸ್ಯರನ್ನು ಒಳಗೊಂಡ ಒಂದು ಅಪೀಲು ಪ್ರಾಧಿಕಾರವು ಇರತಕ್ಕದ್ದು, ಎಂದರೆ:–

(ಎ)	ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣದ ಆಯುಕ್ತರು	ಅಧ್ಯಕ್ಷರು
(ಬಿ)	ಕರ್ನಾಟಕ ಆರೋಗ್ಯ ಸೇವೆಗಳ ನಿರ್ದೇಶಕರು	ಸದಸ್ಯರು
(ಸಿ)	ಭಾರತೀಯ ವೈದ್ಯಪದ್ಧತಿ ಮತ್ತು ಹೋಮಿಯೋಪತಿ ನಿರ್ದೇಶಕರು.	ಸದಸ್ಯರು

XX XX XX

18. ಖಾಸಗಿ ವೈದ್ಯಕೀಯ ಸಂಸ್ಥೆಗಳು ತಮ್ಮಲ್ಲಿರುವ ಸರ್ಕಾರಿ ವೈದ್ಯರುಗಳ ಹೆಸರುಗಳನ್ನು ವರದಿಮಾಡುವುದು.– ಪ್ರತಿಯೊಂದು ಖಾಸಗಿ ವೈದ್ಯಕೀಯ ಸಂಸ್ಥೆಯು ಸಮಾಲೋಚನೆಗಾಗಿ ಅಥವಾ ಯಾವುದೇ ಇತರೆ ಆಧಾರದ ಮೇಲೆ, ಹಣಸಂದಾಯ ಮಾಡುವ

ಮೂಲಕವಾಗಲಿ ಅಥವಾ ಇಲ್ಲದಿರಲಿ, ಸೇವೆಸಲ್ಲಿಸಲು ಬಳಸಿಕೊಳ್ಳುತ್ತಿರುವ ತಮ್ಮಲ್ಲಿನ ಸರ್ಕಾರಿ ವೈದ್ಯರುಗಳ ಮತ್ತು ಅರೆ ವೈದ್ಯಕೀಯ ಸಿಬ್ಬಂದಿಯವರ ಹೆಸರುಗಳನ್ನು ರಾಜ್ಯಸರ್ಕಾರಕ್ಕೆ ಮತ್ತು ನೋಂದಣಿ ಪ್ರಾಧಿಕಾರಕ್ಕೆ ವರದಿಮಾಡತಕ್ಕದ್ದು.

XX XX XX

19. ದಂಡನೆಗಳು.– (1) ಯಾವೊಬ್ಬ ವ್ಯಕ್ತಿಯು, 7ನೇ ಪ್ರಕರಣದ ಅಡಿಯಲ್ಲಿ ಮಂಜೂರು ಮಾಡಲಾಗುವ ನೋಂದಣಿ ಇಲ್ಲದ ಒಂದು ಖಾಸಗಿ ವೈದ್ಯಕೀಯ ಸಂಸ್ಥೆಯನ್ನು ಸ್ಥಾಪಿಸಿದಲ್ಲಿ, ನಡೆಸುತ್ತಿದ್ದಲ್ಲಿ ಅಥವಾ ನಿರ್ವಹಿಸುತ್ತಿದ್ದಲ್ಲಿ, ಅವನು, ಅಪರಾಧ ನಿರ್ಣಯವಾದ ನಂತರ ಮೂರು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸ ಶಿಕ್ಷೆಯಿಂದ ಮತ್ತು ಹತ್ತು ಸಾವಿರ ರೂಪಾಯಿಗಳ ವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

XX XX XX

(4) ಯಾವೊಬ್ಬ ವ್ಯಕ್ತಿಯು, ನೋಂದಣಿಯ ಷರತ್ತುಗಳನ್ನು ಉಲ್ಲಂಘಿಸಿ ಅಥವಾ 12 ಅಥವಾ 13ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಒಂದು ವೈದ್ಯಕೀಯ ಸಂಸ್ಥೆಯನ್ನು ನಡೆಸುತ್ತಿದ್ದಲ್ಲಿ ಅಥವಾ ನಿರ್ವಹಿಸುತ್ತಿದ್ದಲ್ಲಿ ಅಥವಾ (2)ನೇ ಉಪ–ಪ್ರಕರಣದ ಅಡಿಯಲ್ಲಿ ಹೊರಡಿಸಲಾದ ನಿರ್ದೇಶನಗಳನ್ನು ಪಾಲಿಸಲು ವಿಫಲನಾದಲ್ಲಿ, ಅವನು, ಅಪರಾಧ ನಿರ್ಣಿತನಾದ ತರುವಾಯ, ಆರು ತಿಂಗಳುಗಳಿಗೆ ವಿಸ್ತರಿಸಬಹುದಾದ ಅವಧಿಗಾಗಿ ಕಾರಾವಾಸ ಶಿಕ್ಷೆಯಿಂದ ಮತ್ತು ಎರಡು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು ಮತ್ತು ಎರಡನೇ ಅಥವಾ ತರುವಾಯದ ಅಪರಾಧದ ಸಂದರ್ಭದಲ್ಲಿ, ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಮತ್ತು ಐದು ಸಾವಿರ ರೂಪಾಯಿಗಳ ವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(5) ಒಬ್ಬ ವ್ಯಕ್ತಿಯು, ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಲಾದ ನಿಯಮದ ಯಾವುದೇ ಇತರೆ ಉಪಬಂಧಗಳನ್ನು ಉಲ್ಲಂಘಿಸಿದಲ್ಲಿ ಅವನು, ಅಪರಾಧ ನಿರ್ಣಯವಾದ ನಂತರ, ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

XX XX XX

28. ನಿರಸನ ಮತ್ತು ಉಳಿಸುವಿಕೆಗಳು.– (1) ಕರ್ನಾಟಕ ಖಾಸಗಿ ನರ್ಸಿಂಗ್ ಹೋಂಗಳ (ನಿಯಂತ್ರಣ) ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 75) ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸಿತವಾಗಿದ್ದಾಗ್ಯೂ,–

(ಎ) ನಿರಸಿತ ಅಧಿನಿಯಮದ ಅಡಿಯಲ್ಲಿ ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವನ್ನು, ಈ ಅಧಿನಿಯಮದ ಸಂವಾದಿ ಉಪಬಂಧಗಳ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು;

(ಬಿ) ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮೊದಲು ನೋಂದಣಿಗಾಗಿ ಅಥವಾ ನವೀಕರಣಕ್ಕಾಗಿ ನಿರಸಿತಗೊಂಡ ಅಧಿನಿಯಮದ ಅಡಿಯಲ್ಲಿ ಸಲ್ಲಿಸಿದ ಎಲ್ಲಾ ಅರ್ಜಿಗಳು ಮತ್ತು ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಇತ್ಯರ್ಥದಲ್ಲಿರುವ ಅರ್ಜಿಗಳನ್ನು ಕೊನೆಗೊಳಿಸತಕ್ಕದ್ದು ಮತ್ತು ಅಂಥ ಅರ್ಜಿಯ ಸಂಬಂಧದಲ್ಲಿ ಯಾವುದಾದರೂ ಶುಲ್ಕ ಸಂದಾಯಮಾಡಿದ್ದಲ್ಲಿ, ಅದನ್ನು ಅರ್ಜಿದಾರನಿಗೆ ಮರುಸಂದಾಯಮಾಡತಕ್ಕದ್ದು ಮತ್ತು ಅಂಥ ಅರ್ಜಿದಾರರು, ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ನೋಂದಣಿಗಾಗಿ ಹೊಸದಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

XX XX XX

KARNATAKA LEGISLATIVE ASSEMBLY
FOURTEENTH LEGISLATIVE ASSEMBLY
FOURTEENTH SESSION
THE KARNATAKA PRIVATE MEDICAL ESTABLISHMENTS (AMENDMENT) BILL, 2017
(L.A. Bill No. 24 of 2017)

A Bill further to amend the Karnataka Private Medical Establishments Act, 2007.

Whereas it is expedient further to amend the Karnataka Private Medical Establishments Act, 2007 (Karnataka Act 21 of 2007) for the purposes hereinafter appearing;

Be it enacted by the Karnataka State Legislature in the sixty-eighth year of the Republic of India, as follows:-

1. Short title and commencement.- (1) This Act may be called the Karnataka Private Medical Establishments (Amendment) Act, 2017.

(2) It shall come into force at once.

2. Amendment of section 2.- In section 2 of the Karnataka Private Medical Establishments Act, 2007 (Karnataka Act 21 of 2007) (hereinafter referred to as the Principal Act) ,-

(i) after clause (e) the following shall be inserted, namely:-
"(e-1) "District or Metropolitan Grievance Redressal Committee" means the District or Metropolitan Grievance Redressal Committee constituted under section 8;";

(ii) for clause (h) the following shall be substituted,-
"(h) "Inspection Committee" means the Inspection Committee constituted under section 7;";

(iii) in clause (l) after the words "Acupressure treatments" the words "and any other manner of treatment as may be notified by the State Government from time to time" shall be inserted;

(iv) after clause (m) the following shall be inserted, namely:-
"(m-1) "Patient's Charter and Private Medical Establishment's Charter" means the rights and responsibilities of the patient and the Private Medical Establishments specified in the schedule;"

(v) in clause (n),-
(a) after the words " polyclinic" the words "Dental Clinic or Dental Polyclinic" shall be inserted; and
(b) after the words "voluntary or private medical establishments" the words "as may be notified by the State Government by notification" shall be inserted.

(vi) after clause (r) the following shall be inserted, namely:-
"(s) "schedule" means schedule appended to this Act."

3. Amendment of section 3.- In section 3 of the Principal Act, in the provisio after the words "till the disposal of the application" the words "and shall comply with the provisions" shall be inserted.

4. Substitution of section 4.- For section 4 of the Principal Act, the following shall be substituted, namely:-

"**4. Registration Authority.-**There shall be a Registration Authority in each district consisting of the following members, namely:-

a	The Deputy Commissioner of the District	Chairman
b	District Health and Family Welfare Officer	Member Secretary
c	District AYUSH Officer	Member
d	Two members from recognized Association representing modern medicine and other systems of medicine nominated by the Chairman	Members "

5. Amendment of section 5.- In section 5 of the Principal Act, after the words "shall make an application" the words "through on-line" shall be inserted.

6. Amendment of section 6.- In section 6 of the Principal Act, after clause (iv) the following shall be inserted, namely:-

"(iv-a) that Private Medical Diagnostic Laboratory is located outside 200 meters radius of Government Hospital;"

7. Amendment of section 7.- In section 7 of the Principal Act,-

(i) for sub-section (1) the following shall be substituted, namely:-

"(1) On receipt of an application through on-line under section 5 the Registration Authority may having regard to the provisions of section 6 and after such enquiry as may be necessary, by the Inspection Committee, either grant registration subject to that conditions as may be prescribed or reject the application within thirty days from the date of receipt of the complete application in all respects; in case of any delay beyond thirty days the registration shall be deemed to have been granted. The Registration Authority may constitute the Inspection Committee consisting of such members as may be prescribed."; and

(ii) in sub-section (3) for the words " five years" occurring in two places the words " three years" shall be substituted.

8. Substitution of section 8.- For section 8 the Principal Act, the following shall be substituted, namely:-

" **8. District or Metropolitan Grievance Redressal Committee.-**

(1) The District or Metropolitan Grievance Redressal Committee shall be headed by the Chief Executive Officer of the Zilla Panchayat of the District and consists of Superintendent of Police of the District, one representative among Private Medical Establishments in the District, District Surgeon, Public Prosecutor and Woman representatives to be nominated by the State Government.

(2) The District or Metropoliton Grievance Redressal Committee, either with prior intimation or on receiving a complaint, may at reasonable time, inspect, a Private Medical Establishment to satisfy itself that the provisions of this Act and the rules made thereunder and the conditions of registration are being duly observed.

(3) If any defects or deficiencies are observed by the District or Metropolitan Grievance Redressal Committee shall direct the Registration Authority or the Manager of the Private Medical Establishment and the Karnataka Medical Council or AYUSH council, as the case may be, to remedy the same as the case may be, within such reasonable time, as may be specified in the order. There upon the Manager shall comply with every such direction and report the compliance to the Registration Authority within the time so specified.

(4) The District or Metropolitan Grievance Redressal Committee shall while investigating or enquiring any matter under this section have all the powers of civil court trying a suit under the code of civil procedure 1908, and in particular in respect of the following matters, namely:-

(i) summoning and enforcing the attendance of any person from any part of the State and examining him on oath;

(ii) discovery and production of any documents and witness;

(iii) receiving any evidence on affidavits;

(iv) requisitioning for any public record or copy there of from any court or office; and

(v) any other matter which may be prescribed.

9. Amendment of section 9 .- In section 9 of the Principal Act,-

(i) in sub-section (1) after the words "standards", the words " staffing, infrastructure, etc.," shall be inserted; and

(ii) after sub-section (2) the following proviso shall be inserted, namely:-

"Provided that the number of non-official members and stake holder shall not exceed one third of the total members".

10. Insertion of new section 9A.- After section 9 of the Principal Act, the following shall be inserted namely:-

"**9A. Functions of the Experts Committees and other Committees.-** (1) The Expert Committee constituted under section 9 shall discharge the following functions, namely:-

(a) study and recommend classification of Private Medical Establishments on scientific basis for the purpose of this Act;

(b) laying down minimum standards of infrastructure, staffing, prescription audit, etc.;

(c) make recommendation to the State Government regarding fixation of cost of each health service or treatment and different rates may be proposed for different class of private medical establishments; and

(d) any other functions as may be prescribed by the State Government.

(2) The State Government on the recommendation of the Expert Committee fix the rates of each class of treatment and different rates may be fixed for different class of private medical establishment.

(3) **Other ad-hoc Committees .-** (a) The State Government may also constitute such number of ad-hoc committees with such number of members as may be prescribed;

(b) The ad-hoc committee shall perform such work as may be prescribed and shall submit its report to the State Government for its consideration;

(c) The Expert Committee constituted under section 9 or the ad-hoc committee constituted under sub-section (3) shall follow such procedure as may be prescribed in discharge of its functions; and

(d) The non-official Members of the Committee shall be eligible for Travelling Allowance and Daily Allowance or any other allowances as may be prescribed by the State Government."

11. Amendment of section 10.- In section 10 of the Principal Act,-

(i) in sub-section (1),-

(a) after the words "schedule of charges" occurring in two places the words "or the rates fixed by the State Government" shall be inserted; and

(b) after the words "on the notice board" the words "in a prominent place or reception" shall be inserted.

(ii) in sub-section (2) after the word "charges" the words "fixed by the State Government" shall be inserted.

(iii) after sub-section (2) the following shall be inserted, namely:-

"(3) Every Private Medical Establishment shall follow the rates as fixed by the Government and including the package rates for investigation, bed charges, operation theatre procedure, intensive care, ventilation, implants, consultation and similar tests and procedures and any additional treatments or procedure shall not attract additional charges over and above such rates fixed by the State Government including the package rates unless explained to and consented to by the patient.

(4) Every Private Medical Establishment shall provide proper estimates for treatments not covered in fixed rates and charges to the patient or attendant of the patient during initiation or due course of treatment and final bill shall not exceed estimates."

12. Amendment of section 11.- In section 11 of the Principal Act,-

(i). in clause (i) after the words, "it at the establishment" the words "in the event of such emergencies, the Private Medical Establishment shall provide necessary healthcare to save the life of the patient without insisting on advance payment" shall be inserted; and

(ii). after clause (iv) the following shall be inserted, namely:-

" (v). Every Private Medical Establishment shall display the Patient's Charter and Private Medical Establishment's Charter in such place easily visible to the public; and

(vi) Every Private Medical Establishment shall handover in the event of the death, the body of the deceased immediately, without insisting on the payment of the dues. The same may be recovered from representatives of the diseased in due course."

13. **Insertion of new section 11A.-** After section 11 of the Principal Act, the following shall be inserted, namely:-

"**11A. Patients' Charter and Private Medical Establishment's Charter.-** Every patient or authorised family member and Private Medical Establishment shall have the rights and duties specified in the Patient's and Private Medical Establishment's Charter. Any violations of the Patient's and Private Medical Establishment's Charter shall be referred to the Grivenance Redressal Committee constituted under section 8.

11B. Power of State Government to amend the schedule.- (1) The State Government may by notification add, amend or omit any of the entries in the schedule.

(2) Every notification issued by the State Government under this section shall be laid before both houses of the State Legislature."

14. Amendment of section 12.- In section 12 of the Principal Act, after sub-section (2), the following shall be inserted, namely:-

" Provided that no such information shall be disclosed to other person."

15. Amendment of section 15.- In section 15 of the Principal Act, in sub-section (1) in the provisio after the words "Private Medical Establishment" the words "and also arrangements are made within reasonable time ensuring uninterrupted health care to the inpatients" shall be inserted.

16. Amendment of section 16.- In section 16 of the Principal Act, ,-

(i) for the words "There shall be an Appellate Authority" the words "There shall be an Appellate Authority over Registration Authority" shall be substituted; and

(ii) for clause (c) the following shall be substituted, namely:-

" (c). The Director of AYUSH (Ayurveda, Yoga and Naturopathy, Unani, Siddha and Homeopathi) - Member

(d). The Drug Controller, Government of Karnataka. - Member."

17. Amendment of section 18.- In section 18 of the Principal Act, the words "whether on payment basis or not" shall be omitted.

18. Amendment of section 19.- In section 19 of the Principal Act,-

(i) in sub-section (1) for the words "ten thousand" the words "five lakhs" shall be substituted;

(ii) in sub-section (4),-

(a) for the words "six months and with a fine which may extended to two thousand rupees" the words "three years and with a fine which may extend to one lakh rupees" shall be substituted; and

(b) for the words "one year and with a fine which may extended to five thousand rupees" the words "five years and with a fine which may extend to five lakhs rupees" shall be substituted.

(iii) after sub-section (4) the following shall be inserted, namely:-

"(4-A) where a person contravenes the provisions of section 10 shall on conviction be punished with imprisonment for a term which shall not be less than six months but which may extend upto three years and for a fine which shall be not less than twenty five thousand rupees but which may extend upto five lakhs rupees. He shall also be liable for suspension or cancellation of registration and action under sub-section (2) and (3)."; and

(iv) in sub-section (5) for the words "five thousand rupees" the words " one lakh rupees" shall be substituted.

19. Insertion of schedule.- After section 28 of the Principal Act the following schedule shall be inserted, namely:-

"SCHEDULE

(see clause (s) of section 2 and section 11B)

Patient's Charter and Establishment Charter

I. PATIENT'S CHARTER (Rights) :

(1) **Care.-** Every Patient shall have,-

(i). a right to receive treatment irrespective of their type of primary and associated illnesses, socio-economic status, age, gender, sexual orientation, religion, caste, cultural preferences, linguistic and geographical origins or political affiliations;

(ii). right to be heard to his satisfaction without the doctor interrupting before completion of narrating their entire problem and concerns;

(iii). expectation from the doctor to write the prescription legibly and explain to the patient on the details on dosage, dos & don'ts & generic options for the medicines; and

(iv). to be provided with information and access on whom to contact in case of an emergency.

(2) **Confidentiality and Dignity.-** Every Patient shall have,-

(i). right to personal dignity and to receive care without any form of stigma and discrimination;

(ii). privacy during examination and treatment;

(iii). protection from physical abuse and neglect;

(iv). accommodating and respecting his special needs such as spiritual and cultural preferences; and

(v). right to confidentiality about their medical condition.

(3) **Information.-** Every Patient or his authorised family member shall have right to,-

(i) information to be provided to him which are meant to be and in a language of the patient's preference and in a manner that is effortless to understand,-

(ii). receive complete information on the medical problem, prescription, treatment and procedure details;

(iii). a documented procedure for his informed consent exists to enable them to make an informed decision about their care to be practiced with utmost diligence and transparency;

(iv). be educated on risks, benefits, expected treatment outcomes and possible complications to enable them to make informed decisions and involve them in the care planning and delivery process;

(v). request information on the names, dosages and adverse effects of the medication that they are treated with;

(vi). request access and receive a copy of their clinical records;

(vii). complete information on the expected cost of treatment presented as an itemised structure of the various expenses and charges;

(viii). information on hospital rules and regulations; and
(ix). information on organ donation.

(4) **Preferences.-** Every Patient shall have right to,-
(i). seek a second opinion on his medical condition; and
(ii). get the his treatment options, so that the patient can select what works best for him.

(5) **Right to redress.-** Every Patient shall have right to,-
(i). justice by lodging a complaint through an authority dedicated for this purpose by the healthcare provider organisation or with Government health authorities;
(ii). a fair and prompt hearing of his concern; and
(iii). appeal to a higher authority in the private medical establishment and insist in writing on the outcome of the complaint.

II. PATIENTS' RESPONSIBILITIES.- Every Patient shall,-

(1) **Honesty in Disclosure,-** Be honest with the treating Doctor in disclosing family or medical history

(2) Treatment Compliance.- Evert patient shall,-
(i). be punctual for appointments;
(ii). do the best to comply with the doctor's treatment plan;
(iii). have realistic expectations from the doctor and his treatment;
(iv). inform and bring to the doctor's notice if it has been difficult to understand any part of the treatment or of the existences of challenges in complying with the treatment; and
(v). display intent to participate intelligently in medical care by actively involving in the prescribed do-at-home activities.

(3) **Intent for Health Promotion.-** Every patient shall do everything in capacity to maintain healthy habits and routines that contribute to good health and take responsibility for health.

(4) Transparency and Honesty .- Every patient shall,-
(i). make a sincere effort to understand therapies which include the medicines prescribed and their associated adverse effects and other compliances for effective treatment outcomes;
(ii). not ask for surreptitious bills and false certificates, and/or advocate forcefully by unlawful means to provide with one;
(iii). in the event of not being happy, will inform and discuss with doctor; and
(iv). report fraud and wrong-doing.

(5) Conduct.- Every patient shall,-
(i). respect the doctors and medical staff caring and treating;
(ii). abide by the Hospital or facility rules;
(iii). bear the agreed expenses of the treatment that is explained to in advance and pay bills on time; and
(iv). not involve in abusing, assaulting or causing harm to the Doctor or staff of Hospital. (any contravention may attract penalty under the Karnataka Prohibition of Violence Against Medicare Service Personnel and Damage to Property in Medicare Service Institutions Act, 2009 (Karnataka Act 01 of 2009))

III. PRIVATE MEDICAL ESTABLISHMENT'S CHARTER

(1) Transparency and Honesty.- Every Private Medical Establishment shall,-
(i) provide a printed schedule of fee for office visits, procedures, testing and surgery and provide itemized bills; and
(ii) inform patient's qualifications to perform the proposed diagnostic measures or treatments.

(2) Patient Friendly.- Every Private Medical Establishment shall,-
(i). schedule appointments in such a manner that it may allow patient the necessary time to interact and examine him with minimal waiting times and listen to his problems and concerns without interruptions or distractions; and
(ii). encourage patient to bring a friend or relative into the examining room with him.

(3) Effective Communication for Patient Education.- Every Doctor shall,-
(i). explain the patient prognosis, further diagnostic activity and treatment in simple terms such that it facilitates easy understanding to him;
(ii). prescribe an Information, Therapy and discuss with the patient diagnostic treatment and medication options, to enable him to make well-informed of decisions; and
(iii). not proceed until the patient is satisfied and convinced that he understand the benefits and risks of each alternative and he have his agreement on a particular course of action.

(4) Implement the patient charter.- Every Private Medical Establishment shall,-
(i). publish the patient charter in Kannada, English and Hindi;

(ii). display the patient charter prominently and at multiple locations in the healthcare provider setting; and

(iii). implement the patient charter in its true spirit in everyday medical practice."

STATEMENT OF OBJECTS AND REASONS

It is considered necessary to amend the Karnataka Private Medical Establishments Act, 2007 (Karnataka Act 21 of 2007) to,-

(i) constitute the District or Metropolitan Grievance Redressal Committee for redressal of Grievance of patients;

(ii) empower to the State Government to fix the rates or charges for each class of treatment to be collected by the Private Medical Establishments and to notify different rates for different class of Private Medical Establishments on the recommendation of the Expert Committee;

(iii) if the Private Medical Establishments collect more charges than that fixed by the State Government, to impose penalty of not less than Rs.25,000/- which may extend to Rs.5.00 lakhs and imprisonment not less than six months which may extend upto three years;

(iv) reconstitute the Registration Authority;

(v) specify the Patient's Charter and Private Medical Establishment's Charter in the Private Medical Establishments in the schedule to the Act;

(vi) not to demand for advance payment from patient or representative of patient in case of emergency treatment;

(vii) not to demand any due amount at the time of handing over of the dead body to the concerned person but to collect dues later;

(viii) enhance certain penalties leviable under section 19;and

(ix) certain other amendments incidentals or consequential are also made.

Hence the Bill.

FINANCIAL MEMORANDUM

There is no extra expenditure involved in the proposed Legislative measure.

MEMORANDUM REGARDING DELEGATED LEGISLATION

Clause 7	Sub-section (1) of section 7 sought to be substituted under this clause empowers the State Government,- (a) to make rules regarding the manner of granting registration or rejecting the application within 30 days to the Private Medical Establishments; and (b) to make rules regarding the manner of constituting of the Inspection Committee by the Registration Authority.
Clause 8	Item (v) of Sub-section (4) of section 8 sought to be substituted, empowers the State Government to make rules regarding any other matter for investigating by the District or Metropolitan Grievance Redressal Committee.
Clause 10	Clause 9A sought to be inserted,- (i) clause (d) of sub-section (1) empowers the State Government to make rules regarding other functions of the Expert Committees and other Committees; (ii) sub-clause (3),- (a) clause (a) empowers the State Government to make rules regarding the manner of constitution of ad-hoc committees and specify their number of members;

	(b) clause (b) empowers the State Government to make rules regarding performance of the work of ad-hoc committee and manner of submitting its report to the State Government; (c) clause (c) empowers the State Government to make rules regarding the procedure for discharging of functions of the Expert's Committee and ad-hoc Committee; and (d) clause (d) empowers the State Government to make rules regarding eligibility of Travelling Allowance and Daily Allowances or other Allowances for non-official members of the Committees.

☐

The proposed delegation of Legislative power is normal in character

K.R.RAMESH KUMAR
Minister for Health and Family Welfare

S. Murthy
Secretary (I/c)
Karnataka Legislative Assembly

ANNEXURE

Extract from the Karnataka Private Medical Establishments Act, 2007 (Karnataka Act 21 of 2007)

XX XX XX

2. Definitions.- In this Act, unless the context otherwise requires,-

XX XX XX

(e) "Department" means the Department of Health and Family Welfare or the Department of Indian Systems of Medicine and Homeopathy, Government of Karnataka, as the case may be;

XX XX XX

(h) "Local Inspection Committee" means Local Inspection Committee constituted under section 8;

XX XX XX

(l) "Medical treatment" means systematic diagnosis and treatment for prevention or cure of any disease, or to improve the condition of health of any person through allopathic or any other recognised systems of medicine such as Ayurveda, Unani, Homeopathy, Yoga, [Integrated medicine,] Naturopathy and Siddha; and includes Acupuncture and Acupressure treatments;

(m) "Nursing Home" means an establishment where persons suffering from illness, injury or infirmity (whether of body or mind) are usually received or accommodated or both for the purpose of treatment of diseases or infirmity or for improvement of health or for the purposes of relaxation or for any other purpose whatsoever, whether or not analogous to the purposes mentioned in clause (l) of this section;

(n) "Private Medical Establishment" means a hospital or dispensary with beds or without beds, a Nursing Home, Clinical Laboratory, Diagnostic Centre, Maternity Home, Blood Bank, Radiological Centre, Scanning Centre, Physiotherapy Centre, Clinic, Polyclinic, Consultation Centre and such other establishments by whatever name called where investigation, diagnosis and preventive or curative or rehabilitative medical treatment facilities are provided to the public and includes Voluntary or Private Establishments but does not include Medical Establishments run or maintained or sponsored by,-

XX XX XX

(r) "Registration Authority" means the Registration Authority referred to in section 4.

XX XX XX

3. **Registration of Private Medical Establishments.-** On and after the appointed day, no Private Medical Establishment shall be established, run or maintained in the State except under and in accordance with the terms and conditions of registration granted under this Act:

Provided that a Private Medical Establishment in existence immediately prior to the appointed day shall apply for such registration 2 [within six months from the date of commencement of the Karnataka Private Medical Establishments (Amendment) Act, 2012] and pending orders thereon may continue to run or maintain till the disposal of the application.

XX XX XX

4. **Registration Authority.-** There shall be a Registration Authority in each district consisting of the following members, namely:-

a	The Deputy Commissioner of the district	Chairman
b	District Health and Family Welfare Officer	Member Secretary
c	President or Secretary, Indian Medical Association of the concerned district	Member
d	District AYUSH officer	Member
e	President or Secretary, the AYUSH Federation of India of the concerned district	Member

XX XX XX

5. Application for Registration.- (1) Every person desiring to establish, run, maintain or continue to run and maintain a Private Medical Establishment shall make an application to the concerned Registration Authority in such form, in such manner and along with such fees as may be prescribed and different amount of fees may be prescribed, for different class or classes of Private Medical Establishments.

XX XX XX

6. Pre-requisites for Registration of Private Medical Establishments.- The Registration Authority shall before granting the registration consider whether the following prerequisites for registration of a Private Medical Establishment are satisfied, namely:-

XX XX XX

(iv) that the Private Medical Establishment conforms to the standards referred to in section 9;

XX XX XX

7. **Disposal of applications.-** (1) On receipt of an application under section 5, the Registration Authority may having regard to the provisions of section 6 and after such enquiry as may be necessary, by Local Inspection Committee, either grant registration subject to such conditions as may be prescribed or reject the application: Provided that the Registration Authority shall not reject the application without giving an opportunity of being heard to the applicant and without recording the reasons for such rejection.

XX XX XX

(3) Every registration granted under sub-section (1) shall be valid for a period of five years and may be renewed once in five years on an application made in such form, in such manner and on payment of such fees, as may be prescribed.

8. Local Inspection Committee.- (1) The Registration Authority of each district may constitute one or more Local Inspection Committee for each district consisting of such persons as it may specify for the purposes specified in sub-sections (1) of section 7 and sub-section (2) of this section.

(2) The Local Inspection Committee, either with prior intimation or on receiving a complaint, may at reasonable time, inspect, a Private Medical Establishment to satisfy itself that the provisions of this Act and the rules made thereunder and the conditions of registration are being duly observed.

(3) If any defects or deficiencies are noticed during inspection, the Local Inspection Committee shall report to the Registration Authority which may direct the Manager of the Private Medical Establishment to remedy the same within such reasonable time as may be specified in the order. Thereupon the Manager shall comply with every such direction and report the compliance to the Registration Authority within the time so specified. (4) The Manager of the Private Medical Establishment shall provide all reasonable facilities for such inspection.

XX XX XX

9. Standards.- (1) Every Private Medical Establishment shall conform to the standards laid down in this Act or the rules made thereunder or any other law for the time being in force concerning the staff and their qualifications, operation theatre, buildings, space requirements,

equipment, facilities to be provided to the patients and their attendants, maintenance and other matters.

(2) Different standards may be set for different class or classes of Private Medical Establishments, in respect of different areas, as determined by the State Government. Expert Committees may be constituted by the State Government for suggesting the standards for different class or classes of Private Medical Establishment for different areas from time to time. The composition, powers and responsibilities, of the Expert Committees and the terms and conditions of service of members of the Expert Committee shall be as may be prescribed.

10. Schedule of charges to be notified.- (1) Every Private Medical Establishment shall for the information of the patients and general public make available the schedule of charges payable for different medical treatment and other services, in the form of brochures or booklets and shall also display such schedule of charges on the notice board of the private Medical Establishment. A copy of such brochure or booklet shall be sent to the Registration Authority.

(2) No Private Medical Establishment shall collect from the patient or his relatives or attendants any amount in excess of the charges printed in the brochure or booklet, and without issuing proper receipt for the amount charged and collected.

11. Obligations of Private Medical Establishments.- Every Private Medical Establishment shall:-

(i) administer necessary first aid and take other life saving or stabilising emergency measures in all medico-legal or potentially medico-legal cases such as victims of road accidents, accidental or induced burns or poisoning or 10 criminal assaults and the like which present themselves or are brought before it at the establishment.

XX XX XX

(iv) furnish to the Registration Authority such particulars in respect of such non-communicable diseases as may be notified by the State Government from time to time.

12. Maintenance of clinical records.-

XX XX XX

(2) Every clinical record shall be open to inspection, in due discharge of his duties, by the District Surgeon or any other officer specifically empowered in this behalf by the State Government.

XX XX XX

15. Suspension or cancellation of registration.- (1) The Registration Authority, on the basis of a complaint or otherwise if a prima facie case exists about the contravention of any provisions of this Act or the rules made there under or conditions of registration may, by order in writing and for the reason to be recorded in writing suspend or cancel the registration of a Private Medical Establishment:

Provided that no such order shall be made except after giving a reasonable opportunity of being heard, to the Private Medical Establishment.

16. Appellate Authority.- There shall be an Appellate Authority consisting of the following members, namely:-

(a) the Commissioner for Health and Family Welfare, Karnataka -Chairman

(b) the Director of Health Services, Karnataka - Member

(c) the Director, Indian System of Medicine and Homeopathy - Member

XX XX XX

18. Private Medical Establishments to report the names of government doctors on their establishments.- Every Private Medical Establishment shall report to the State Government and the Registration Authority, the names of government doctors and para medical staff, whose services are utilized in the Private Medical Establishment for consultations or any other basis whether on payment basis or not.

19. Penalties.-

(1) Where any person establishes, runs or maintains a Private Medical Establishment without registration granted under section 7 he shall, on conviction, be punished with imprisonment for a term which may extend to three years and with fine which may extend upto ten thousand rupees.

XX XX XX

(4) Where any person runs or maintains a Private Medical Establishment in contravention of the conditions of registration or contravenes the provisions of section 12 or 13, or fails to comply

with the direction issued under sub-section (2). he shall, on conviction, be punished with imprisonment for a term which may extend to six months and with a fine which may extend to two thousand rupees and in the case of a second or subsequent offence with imprisonment for a term which may extend to one year and with a fine which may extend to five thousand rupees.

(5) Where a person contravenes any other provision of this Act or the rules made there under he shall, on conviction, be punishable with a fine which may extend to five thousand rupees.

XX XX XX

28. Repeal and Savings:-

(1) The Karnataka Private Nursing Homes (Regulation) Act, 1976 (Karnataka Act 75 of 1976) is hereby repealed.

(2) Notwithstanding such repeal,-

(a) anything done or any action taken under the repealed Act shall be deemed to have been done or taken under the corresponding provisions of this Act;

(b) all applications made under the repealed Act for registration or renewal prior to the commencement of this Act and pending consideration on the date of commencement of this Act shall abate 17 and the fee paid, if any, in respect of such application shall be refunded to the applicant and such applicants may apply afresh for Registration under the provisions of this Act.

XX XX XX

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 150

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–IVA	ಬೆಂಗಳೂರು, ಬುಧವಾರ, ಜೂನ್ ೧೪, ೨೦೧೭ (ಜ್ಯೇಷ್ಠ ೨೪, ಶಕ ವರ್ಷ ೧೯೩೯)	ನಂ. ೫೧೭
Part–IVA	Bengaluru, Wednesday, June 14, 2017 (Jyeshta 24, Shaka Varsha 1939)	No. 517

KARNATAKA LEGISLATIVE ASSEMBLY SECRETARIAT

NOTIFICATION

No.KLA/LGA/21/Bill/2017, Bengaluru, Dated 14.06.2017

The following Bill was introduced in Legislative Assembly on 14.06.2017.

ಕರ್ನಾಟಕ ವಿಧಾನ ಸಭೆ
ಹದಿನಾಲ್ಕನೇ ವಿಧಾನಸಭೆ
ಹದಿನಾಲ್ಕನೇ ಅಧಿವೇಶನ

ಕರ್ನಾಟಕ ರಾಜ್ಯ ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2017

(2017ರ ವಿಧಾನಸಭೆಯ ವಿಧೇಯಕ ಸಂಖ್ಯೆ–21)

ಕರ್ನಾಟಕ ರಾಜ್ಯ ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಅಧಿನಿಯಮ, 2009ನ್ನು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯ ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಅಧಿನಿಯಮ, 2009ನ್ನು (2009ರ ಕರ್ನಾಟಕ ಅಧಿನಿಯಮ ಸಂಖ್ಯೆ: 25) ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ (ತಿದ್ದುಪಡಿ) ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 12ನೇ ಪ್ರಕರಣದ ತಿದ್ದುಪಡಿ.– ಕರ್ನಾಟಕ ರಾಜ್ಯ ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಅಧಿನಿಯಮ, 2009ರ (2009ರ ಕರ್ನಾಟಕ ಅಧಿನಿಯಮ ಸಂಖ್ಯೆ: 25) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 12ನೇ ಪ್ರಕರಣದ (5)ನೇ ಉಪಪ್ರಕರಣದಲ್ಲಿ "ಅರವತ್ತೈದು ವರ್ಷ" ಎಂಬ ಪದಗಳಿಗೆ " ಅರವತ್ತೇಳು ವರ್ಷ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

3. 49ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 49ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ "ರಾಜ್ಯ ಲೆಕ್ಕಪತ್ರಗಳ ಇಲಾಖೆಯ ನಿಯಂತ್ರಕರು" ಎಂಬ ಪದಗಳಿಗೆ "ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರಗಳು ಇವರು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ರಾಜ್ಯ ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಅಧಿನಿಯಮ, 2009ನ್ನು (2009ರ ಕರ್ನಾಟಕ ಅಧಿನಿಯಮ ಸಂಖ್ಯೆ: 25) ಈ ಮುಂದಿನವುಗಳಿಗಾಗಿ ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ, ಎಂದರೆ :–

(i) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000ದಲ್ಲಿ ಇರುವಂತೆ ಕುಲಪತಿಗಳ ವಯೋಮಿತಿಯನ್ನು ಅನುಸರಿಸುವುದಕ್ಕಾಗಿ ಕುಲಪತಿಯ ಹುದ್ದೆಯನ್ನು ಹೊಂದಲು ಗರಿಷ್ಟ ವಯೋಮಿತಿಯನ್ನು ಅರವತ್ತೇಳು ವರ್ಷಗಳಿಗೆ ಹೆಚ್ಚಿಸುವುದು; ಮತ್ತು

(ii) ರಾಜ್ಯ ಲೆಕ್ಕ ಪತ್ರಗಳ ಇಲಾಖೆಯ ನಿಯಂತ್ರಕರ ಪದನಾಮವನ್ನು ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರಗಳು ಎಂದು ಬದಲಾಯಿಸುವುದು.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಬಸವರಾಜರಾಯರೆಡ್ಡಿ
ಉನ್ನತ ಶಿಕ್ಷಣ ಮಂತ್ರಿಗಳು

ಎಸ್. ಮೂರ್ತಿ
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

ಅನುಬಂಧ

ಕರ್ನಾಟಕ ರಾಜ್ಯ ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಅಧಿನಿಯಮ, 2009ರ (2009ರ ಕರ್ನಾಟಕ ಅಧಿನಿಯಮ ಸಂಖ್ಯೆ: 25) ಉದ್ಧೃತ ಭಾಗ

Xxx xxx

12. ಕುಲಪತಿ.–

Xxx xxx

(5) ಅರವತ್ತೈದು ವರ್ಷ ವಯಸ್ಸು ಆಗಿರುವ ಯಾವ ವ್ಯಕ್ತಿಯೂ ಕುಲಪತಿಯಾಗಿ ನೇಮಕವಾಗತಕ್ಕದ್ದಲ್ಲ ಅಥವಾ ಅವರು ಆ ಹುದ್ದೆಯಲ್ಲಿ ಇರತಕ್ಕದ್ದಲ್ಲ.

Xxx xxx

49. ವಾರ್ಷಿಕ ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ.–

Xxx xxx

(3) ವಿಶ್ವವಿದ್ಯಾಲಯದ ಲೆಕ್ಕಪತ್ರಗಳನ್ನು ರಾಜ್ಯ ಲೆಕ್ಕಪತ್ರಗಳ ಇಲಾಖೆಯ ನಿಯಂತ್ರಕರು ವರ್ಷಕ್ಕೊಮ್ಮೆ ಏಪ್ರಿಲ್ ತಿಂಗಳಲ್ಲಿ ಲೆಕ್ಕಪರಿಶೋಧನೆ ಮಾಡತಕ್ಕದ್ದು.

KARNATAKA LEGISLATIVE ASSEMBLY
FOURTEENTH LEGISLATIVE ASSEMBLY
FOURTEENTH SESSION

THE KARNATAKA RAJYA DR. GANGUBAI HANGAL SANGEETHA MATTU PRADARSHAKA KALEGALA VISHWAVIDYALAYA (AMENDMENT) BILL, 2017
(L.A. Bill No. 21 of 2017)

A Bill to amend the Karnataka Rajya Dr. Gangubai Hangal Sangeetha Mattu Pradarshaka Kalegala Vishwavidyalaya Act, 2009.

Whereas it is expedient to amend the Karnataka Rajya Dr. Gangubai Hangal Sangeetha Mattu Pradarshaka Kalegala Vishwavidyalaya Act, 2009 (Karnataka Act No. 25 of 2009) for the purposes hereinafter appearing;

Be it enacted by the Karnataka State Legislature in the sixty-eighth year of the Republic of India, as follows:-

1. Short title and commencement.- (1) This Act may be called the Karnataka Rajya Dr. Gangubai Hangal Sangeetha Mattu Pradarshaka Kalegala Vishwavidyalaya (Amendment) Act, 2017.

(2) It shall come into force at once.

2. Amendment of section 12.- In the Karnataka Rajya Dr. Gangubai Hangal Sangeetha Mattu Pradarshaka Kalegala Vishwavidyalaya Act 2009, (Karnataka Act No. 25 of 2009) (hereinafter referred to as the principal Act), in section 12, in sub-section (5), for the words "sixty five years", the words "sixty seven years" shall be substituted.

3. Amendment of section 49.- In section 49 of the principal Act, in sub-section (3), for the words "Controller of State Accounts", the words "Principal Director, Karnataka State Audit and Accounts" shall be substituted.

STATEMENT OF OBJECTS AND REASONS

It is considered necessary to amend the Karnataka Rajya Dr. Gangubai Hangal Sangeetha Mattu Pradarshaka Kalegala Vishwavidyalaya Act, 2009 (Karnataka Act No. 25 of 2009),-

(i) to enhance the upper age limit to hold office of Vice Chancellor to sixty seven years which is in conformity with the age limit of Vice Chancellors in the Karnataka State Universities Act, 2000; and

(ii) change the nomenclature of Controller of State Accounts Department as Principal Director, Karnataka State Audit and Accounts.

Hence, the Bill.

FINANCIAL MEMORANDUM

There is no extra expenditure involved in the proposed legislative measure.

BASAVARAJ RAYAREDDI
Minister for Higher Education

S. Murthy
Secretary (I/c)
Karnataka Legislative Assembly

ANNEXURE

THE KARNATAKA RAJYA DR. GANGUBAI HANGAL SANGEETHA MATTU PRADARSHAKA KALEGALA VISHWAVIDYALAYA ACT 2009 (KARNATAKA ACT 25 OF 2009)

XXX XXX XXX

12. The Vice-Chancellor.-

XXX XXX XXX

(5) No person shall be appointed or hold office of the Vice-Chancellor if he has attained the age of sixty five years.

XXX XXX XXX

49. Annual Accounts and Audit.-

XXX XXX XXX

(3) The accounts of the University shall be audited by the Controller of State Accounts once in a year, in the month of April.

XXX XXX XXX

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 150

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–IVA	ಬೆಂಗಳೂರು, ಬುಧವಾರ, ಜೂನ್ ೧೪, ೨೦೧೭ (ಜ್ಯೇಷ್ಠ ೨೪, ಶಕ ವರ್ಷ ೧೯೩೯)	ನಂ. ೫೧೮
Part–IVA	Bengaluru, Wednesday, June 14, 2017 (Jyeshta 24, Shaka Varsha 1939)	No. 518

KARNATAKA LEGISLATIVE ASSEMBLY SECRETARIAT

NOTIFICATION

No.KLA/LGA/25/Bill/2017, Bengaluru, Dated 14.06.2017

The following Bill was introduced in Legislative Assembly on 14.06.2017.

ಕರ್ನಾಟಕ ವಿಧಾನ ಸಭೆ

ಹದಿನಾಲ್ಕನೇ ವಿಧಾನಸಭೆ

ಹದಿನಾಲ್ಕನೇ ಅಧಿವೇಶನ

ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ (ತಿದ್ದುಪಡಿ) ವಿಧೇಯಕ, 2017

(2017ರ ವಿಧಾನಸಭೆಯ ವಿಧೇಯಕ ಸಂಖ್ಯೆ–25)

ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ ಅಧಿನಿಯಮ, 2012ನ್ನು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ ಅಧಿನಿಯಮ, 2012ನ್ನು (2015ರ ಕರ್ನಾಟಕ ಅಧಿನಿಯಮ ಸಂಖ್ಯೆ 26) ತಿದ್ದುಪಡಿ ಮಾಡುವುದು ಯಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ (ತಿದ್ದುಪಡಿ) ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. ಶೀರ್ಷಿಕೆ, ದೀರ್ಘ ಶೀರ್ಷಿಕೆ ಮತ್ತು ಪ್ರಸ್ತಾವನೆಯ ತಿದ್ದುಪಡಿ.– ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ ಅಧಿನಿಯಮ, 2012ರಲ್ಲಿ (2015ರ ಕರ್ನಾಟಕ ಅಧಿನಿಯಮ ಸಂಖ್ಯೆ 26) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ).–

(i) ಶೀರ್ಷಿಕೆಯಲ್ಲಿ, "ತರಬೇತಿ" ಎಂಬ ಪದವನ್ನು ಬಿಟ್ಟು ಬಿಡತಕ್ಕದ್ದು; ಮತ್ತು

(ii) ದೀರ್ಘ ಶೀರ್ಷಿಕೆ ಮತ್ತು ಪ್ರಸ್ತಾವನೆಯಲ್ಲಿ "ಕಡ್ಡಾಯ ಸೇವಾ ತರಬೇತಿಗಾಗಿ" ಎಂಬ ಪದಗಳಿಗೆ "ಕಡ್ಡಾಯ ಸೇವೆಗಾಗಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

3. ಪದಾವಳಿಯನ್ನು ಬಿಟ್ಟುಬಿಡುವುದು.– ಮೂಲ ಅಧಿನಿಯಮದಲ್ಲಿ, "ತರಬೇತಿ" ಎಂಬ ಪದವನ್ನು, 3ನೇ ಪ್ರಕರಣದ (4)ನೇ ಉಪಪ್ರಕರಣದ ಪರಂತುಕವನ್ನು ಹೊರತುಪಡಿಸಿ, ಎಲ್ಲೆಲ್ಲಿ ಬರುವುದೋ ಅಲ್ಲಲ್ಲಿ ಅದರ ಪ್ರತ್ಯಯದೊಂದಿಗೆ ಬಿಟ್ಟುಬಿಡತಕ್ಕದ್ದು.

4. 3ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 3ನೇ ಪ್ರಕರಣದಲ್ಲಿ,–

(i) (1)ನೇ ಉಪಪ್ರಕರಣದಲ್ಲಿ, "ಕಿರಿಯ ನಿವಾಸಿ ತರಬೇತಿ ಪಡೆಯುವವನು (ಜೂನಿಯರ್ ರೆಸಿಡೆಂಟ್ ಟ್ರೈನಿ)" ಎಂಬ ಪದಗಳಿಗೆ "ಕಿರಿಯ ನಿವಾಸಿ (ಜೂನಿಯರ್ ರೆಸಿಡೆಂಟ್)" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) (2)ನೇ ಉಪಪ್ರಕರಣವನ್ನು ಬಿಟ್ಟುಬಿಡತಕ್ಕದ್ದು; ಮತ್ತು

(iii) (4)ನೇ ಉಪಪ್ರಕರಣದಲ್ಲಿನ ಪರಂತುಕದಲ್ಲಿ "ತರಬೇತಿ" ಎಂಬ ಪದ ಬರುವ ಎರಡು ಕಡೆಗಳಲ್ಲಿ "ಸೇವೆ" ಎಂಬ ಪದವನ್ನು ಅದರ ಪ್ರತ್ಯಯದೊಂದಿಗೆ ಪ್ರತಿಯೋಜಿಸತಕ್ಕದ್ದು.

5. 4ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 4ನೇ ಪ್ರಕರಣದಲ್ಲಿ,–

(i) (1)ನೇ ಉಪಪ್ರಕರಣದಲ್ಲಿ, "ಹಿರಿಯ ನಿವಾಸಿ ತರಬೇತಿ ಪಡೆಯುವವನು (ಸೀನಿಯರ್ ರೆಸಿಡೆಂಟ್ ಟ್ರೈನಿ)" ಎಂಬ ಪದಗಳಿಗೆ "ಹಿರಿಯ ನಿವಾಸಿ (ಸೀನಿಯರ್ ರೆಸಿಡೆಂಟ್)" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) (2)ನೇ ಉಪಪ್ರಕರಣಕ್ಕೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–
"(2) 3ನೇ ಪ್ರಕರಣದ(4)ನೇ ಉಪ–ಪ್ರಕರಣದಲ್ಲಿನ ಉಪಬಂಧಗಳು, ಈ ಪ್ರಕರಣದ ಅಡಿಯಲ್ಲಿ ಸ್ನಾತಕೋತ್ತರ ಪದವೀಧರರಿಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು:

ಪರಂತು, ರೋಗಿಗಳಿಗೆ ಸ್ವತಂತ್ರವಾಗಿ ಚಿಕಿತ್ಸೆ ನೀಡಲು ಮತ್ತು ಔಷಧವನ್ನು ಸೂಚಿಸಲು ಕಡ್ಡಾಯ ಗ್ರಾಮೀಣ ಸೇವೆಗೆ ಒಳಗಾಗುವ ಅಂಥ ಅಭ್ಯರ್ಥಿಗಳಿಗೆ, ಅಂಥ ಸೇವೆಯು ಪೂರ್ಣಗೊಳ್ಳುವವರೆಗೆ ತಾತ್ಕಾಲಿಕ ನೋಂದಣಿಯನ್ನು ನೀಡಬಹುದು;"

6. 5ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 5ನೇ ಪ್ರಕರಣದಲ್ಲಿ, (2)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(2) 3ನೇ ಪ್ರಕರಣದ (4)ನೇ ಉಪಪ್ರಕರಣದ ಉಪಬಂಧಗಳು ಸೂಪರ್ ಸ್ಪೆಶಾಲಿಟಿ ಕೋರ್ಸುಗಳನ್ನು ತೇರ್ಗಡೆಯಾಗುವ ಅಭ್ಯರ್ಥಿಗಳಿಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು;

ಪರಂತು, ರೋಗಿಗಳಿಗೆ ಸ್ವತಂತ್ರವಾಗಿ ಚಿಕಿತ್ಸೆ ನೀಡಲು ಮತ್ತು ಔಷಧವನ್ನು ಸೂಚಿಸಲು ಕಡ್ಡಾಯ ಗ್ರಾಮೀಣ ಸೇವೆಗೆ ಒಳಗಾಗುವ ಅಂಥ ಅಭ್ಯರ್ಥಿಗಳಿಗೆ ಅಂಥ ಸೇವೆಯು ಪೂರ್ಣಗೊಳ್ಳುವವರೆಗೆ ತಾತ್ಕಾಲಿಕ ನೊಂದಣಿಯನ್ನು ನೀಡಬಹುದು."

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ ಅಧಿನಿಯಮ, 2012ಕ್ಕೆ (2015ರ ಕರ್ನಾಟಕ ಅಧಿನಿಯಮ ಸಂಖ್ಯೆ 26),–

(1) ಖಾಯಂ ನೋಂದಣಿಯನ್ನು ನೀಡುವ ಮೊದಲು ವೈದ್ಯಕೀಯ ಪದವಿ ಅಥವಾ ಸ್ನಾತಕೋತ್ತರ ಪದವಿಯನ್ನು ಪೂರ್ಣಗೊಳಿಸಿದ ತರುವಾಯ, ತರಬೇತಿಯ ಪರಿಕಲ್ಪನೆಯನ್ನು ಬಿಟ್ಟು, ಕಡ್ಡಾಯ ಗ್ರಾಮೀಣ ಸೇವೆಯನ್ನು ಮಾತ್ರ ಉಳಿಸಿಕೊಳ್ಳಲು;

(2) ಗ್ರಾಮೀಣ ಸೇವೆಗೆ ಒಳಗಾಗದಿರುವ ಅಂಥ ಅಭ್ಯರ್ಥಿಗಳಿಗೆ ಸಂಬಂಧಪಟ್ಟ ವಿಶ್ವವಿದ್ಯಾನಿಲಯಗಳು ಪದವಿ ಪ್ರದಾನ ಮಾಡುವುದರ ಮೇಲಿನ ನಿರ್ಬಂಧಕಾಜ್ಞೆಯನ್ನು ಹಿಂತೆಗೆದುಕೊಳ್ಳಲು,

– ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ, ಈ ವಿಧೇಯಕ.

ಆದುದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಡಾ. ಶರಣಪ್ರಕಾಶ ಆರ್. ಪಾಟೀಲ್
ವೈದ್ಯಕೀಯ ಶಿಕ್ಷಣ ಮಂತ್ರಿಗಳು

ಎಸ್. ಮೂರ್ತಿ
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

ಅನುಬಂಧ

ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ ಅಧಿನಿಯಮ, 2012 (2015ರ ಕರ್ನಾಟಕ ಅಧಿನಿಯಮ ಸಂಖ್ಯೆ 26) ಉದ್ಧೃತ ಭಾಗ

Xx xx xx

ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ ಅಧಿನಿಯಮ, 2012

ಪದವಿಗಳು ಅಥವಾ ಸ್ನಾತಕೋತ್ತರ ಪದವಿಗಳು ಅಥವಾ ಡಿಪ್ಲೋಮೊಗಳನ್ನು ಪ್ರದಾನ ಮಾಡುವುದಕ್ಕೆ ಮೊದಲು ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿಗಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಪದವಿಗಳು ಅಥವಾ ಸ್ನಾತಕೋತ್ತರ ಪದವಿಗಳು ಅಥವಾ ಡಿಪ್ಲೋಮೊಗಳನ್ನು ಪ್ರದಾನ ಮಾಡುವುದಕ್ಕೆ ಮೊದಲು ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿಗಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಅರವತ್ಮೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ :–

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ ಅಧಿನಿಯಮ 2012 ಎಂದು ಕರೆಯತಕ್ಕದ್ದು.

Xxx xxx xxx

3. ವೈದ್ಯಕೀಯ ಕೋರ್ಸನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವೆ.– (1) ಎಂಬಿಬಿಎಸ್ ಪದವಿ ಕೋರ್ಸನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಮತ್ತು ಒಂದು ವರ್ಷದ ಇಂಟರ್ನ್‌ಶಿಪ್ ಪೂರ್ಣಗೊಳಿಸಿದ ತರುವಾಯ ಪ್ರತಿಯೊಬ್ಬ ಅಭ್ಯರ್ಥಿಯು, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಕೌನ್ಸಿಲಿಂಗ್‌ನ ಪ್ರಕ್ರಿಯೆಯ ಮೂಲಕ ಮೆರಿಟ್ ಆಧಾರದ ಮೇಲೆ ಹಂಚಿಕೆಯಾದ ಗ್ರಾಮೀಣ ಪ್ರದೇಶಗಳಲ್ಲಿನ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಅಥವಾ ಸರ್ಕಾರಿ ಆಸ್ಪತ್ರೆಗಳಲ್ಲಿ ಒಂದು ವರ್ಷದ ಕಡ್ಡಾಯ ಗ್ರಾಮೀಣ ಸೇವೆಗೆ ಒಳಪಡತಕ್ಕದ್ದು. ಅಂಥ ಸೇವಾ ಅವಧಿಯಲ್ಲಿ ಆತನನ್ನು ಕಿರಿಯ ನಿವಾಸಿ ತರಬೇತಿ ಪಡೆಯುವವನು (ಜೂನಿಯರ್ ರೆಸಿಡೆಂಟ್ ಟ್ರೈನಿ) ಎಂದು ಕರೆಯತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಕಡ್ಡಾಯ ಗ್ರಾಮೀಣ ಸೇವಾ ತರಬೇತಿಯನ್ನು ಹೊಂದಲು ಅಗತ್ಯಪಡಿಸಲಾಗಿದ್ದು ಆದರೆ ತರಬೇತಿಗೆ ಒಳಪಡದ ಅಂಥ ಅಭ್ಯರ್ಥಿಗೆ ಯಾವುದೇ ವಿಶ್ವವಿದ್ಯಾಲಯವು ಪದವಿಯನ್ನು ಪ್ರದಾನ ಮಾಡತಕ್ಕದ್ದಲ್ಲ:

ಪರಂತು, ಯಾವುದೇ ಸ್ನಾತಕೋತ್ತರ ಪದವಿ ಅಥವಾ ಡಿಪ್ಲೋಮೊ ಕೋರ್ಸನ್ನು ಮಾಡಲು ಆಯ್ಕೆಯಾದ ಮತ್ತು ಮುಂದುವರೆಸುತ್ತಿರುವ ಅಭ್ಯರ್ಥಿಗಳ ಸಂದರ್ಭದಲ್ಲಿ, ಅಂಥ ಕೋರ್ಸು ಪೂರ್ಣಗೊಂಡ ನಿಕಟ ತರುವಾಯ ಒಂದು ವರ್ಷದ ಕಡ್ಡಾಯ ಸೇವೆಗೆ ಒಳಗಾಗಬಹುದು ಮತ್ತು ಅಂಥ ಅಭ್ಯರ್ಥಿಗೆ, ಸ್ನಾತಕೋತ್ತರ ಪದವಿಯನ್ನು ಮುಂದುವರೆಸುವ ಉದ್ದೇಶಕ್ಕೆ ಸಿಂಧುವಾಗುವಂತೆ, ತಾತ್ಕಾಲಿಕ ಎಂಬಿಬಿಎಸ್ ಪ್ರಮಾಣಪತ್ರವನ್ನು ನೀಡಬಹುದು.

(3) ಒಂದು ವರ್ಷದ ಕಡ್ಡಾಯ ಗ್ರಾಮೀಣ ಸೇವಾ ತರಬೇತಿಗೆ ಒಳಪಟ್ಟ ಪ್ರತಿಯೊಬ್ಬ ಅಭ್ಯರ್ಥಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳಲ್ಲಿ ಸಾಮಾನ್ಯ ಕರ್ತವ್ಯ ನಿರತ ವೈದ್ಯರ ಒಟ್ಟು ಕನಿಷ್ಠ ಸಂಬಳಕ್ಕಿಂತ ನೂರು ರೂಪಾಯಿಗಳಷ್ಟು ಕಡಿಮೆಗೆ ಸಮನಾಗಿರುವ ಅಂಥ ವೃತ್ತಿ ವೇತನವನ್ನು (ಸ್ಟೈಫಂಡ್) ಸಂದಾಯ ಮಾಡತಕ್ಕದ್ದು.

(4) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, (1)ನೇ ಉಪ ಪ್ರಕರಣದಲ್ಲಿ ಕಡ್ಡಾಯ ಗ್ರಾಮೀಣ ಸೇವಾ ತರಬೇತಿಗೆ ಒಳಪಡದಿರುವಂಥ ಪ್ರತಿಯೊಬ್ಬ ಅಭ್ಯರ್ಥಿಯು, ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮ, 1961ರಡಿಯಲ್ಲಿ ಅಥವಾ ಭಾರತೀಯ ವೈದ್ಯಕೀಯ ಪರಿಷತ್ತು ಅಧಿನಿಯಮ, 1956 ರಡಿಯಲ್ಲಿ ರಾಜ್ಯದಲ್ಲಿ ಶಾಶ್ವತ ನೋಂದಣಿಗೆ ಅರ್ಹರಾಗಿರತಕ್ಕದ್ದಲ್ಲ:

ಪರಂತು, ಅಂಥ ಅಭ್ಯರ್ಥಿಗಳಿಗೆ, ಸೇವೆಯ ಅವಧಿಯಲ್ಲಿ ರೋಗಿಗಳಿಗೆ ಸ್ವತಂತ್ರವಾಗಿ ಚಿಕಿತ್ಸೆ ನೀಡಲು ಮತ್ತು ಔಷಧಿಗಳನ್ನು ನಿಯಮಿಸಲು ಸದರಿ ಸೇವೆಗೆ ಒಳಪಡುವವರೆಗೆ, ತಾತ್ಕಾಲಿಕ ನೋಂದಣಿಯನ್ನು ನೀಡಬಹುದಾಗಿದೆ.

4. ಸ್ನಾತಕೋತ್ತರ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ.– (1) 3ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಕಡ್ಡಾಯ ಗ್ರಾಮೀಣ ಸೇವಾ ತರಬೇತಿಗೆ ಒಳಪಡಿಸಿದ ಅಭ್ಯರ್ಥಿಗಳನ್ನು ಹೊರತುಪಡಿಸಿ, ಸ್ನಾತಕೋತ್ತರ ಡಿಪ್ಲೋಮೊ ಅಥವಾ ಪದವಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದಂಥ ಪ್ರತಿಯೊಬ್ಬ ಅಭ್ಯರ್ಥಿಯು, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ರಾಜ್ಯದಲ್ಲಿ ಕೌನ್ಸಿಲಿಂಗ್ ಪ್ರಕ್ರಿಯೆಯ ಮೂಲಕ ಮೆರಿಟ್ ಆಧಾರದ ಮೇಲೆ ಆಯ್ಕೆಯಾದ ಮತ್ತು ಸ್ಥಳ ನಿಯುಕ್ತಿಯಾದ ನಗರ ಪ್ರದೇಶದಲ್ಲಿ ಇರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಒಂದು ವರ್ಷದ ಕಡ್ಡಾಯ ಸೇವಾ ತರಬೇತಿಗೆ ಒಳಪಡತಕ್ಕದ್ದು. ಅಂಥ ಸೇವಾ ಅವಧಿಯಲ್ಲಿ ಆತನನ್ನು ಹಿರಿಯ ನಿವಾಸಿ ತರಬೇತಿ ಪಡೆಯುವವನು (ಸೀನಿಯರ್ ರೆಸಿಡೆಂಟ್ ಟ್ರೈನಿ) ಎಂದು ಕರೆಯತಕ್ಕದ್ದು. ಆತನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವಿಶೇಷತಜ್ಞರ ಒಟ್ಟು ಕನಿಷ್ಠ ಸಂಬಳಕ್ಕಿಂತ ನೂರು ರೂಪಾಯಿಗಳಷ್ಟು ಕಡಿಮೆಗೆ ಸಮನಾಗಿರುವ ನಿಯಮಿಸಬಹುದಾದ ಅಂಥ ವೃತ್ತಿ ವೇತನಕ್ಕೆ ಅರ್ಹನಾಗಿರತಕ್ಕದ್ದು.

(2) (1)ನೇ ಉಪ ಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಲಾದಂತೆ ಮತ್ತು ನಿಯಮಿಸಲಾದಂತೆ ಕೌನ್ಸಿಲಿಂಗ್ ಪ್ರಕ್ರಿಯೆಯ ಮೂಲಕ ಹಂಚಿಕೆಯಾದ ಅಥವಾ ಸ್ಥಳನಿಯುಕ್ತಿಯಾದ ಸರ್ಕಾರಿ ಆಸ್ಪತ್ರೆಯಲ್ಲಿ ಕಡ್ಡಾಯ ಸೇವಾ ತರಬೇತಿಯಲ್ಲಿ ಸೇರಿಕೊಳ್ಳದಂಥ ಮತ್ತು ಒಳಪಡದ ಅಂಥ ಅಭ್ಯರ್ಥಿಗಳಿಗೆ ಯಾವುದೇ ವಿಶ್ವವಿದ್ಯಾಲಯವು, ರಾಜ್ಯದಲ್ಲಿ ಸ್ನಾತಕೋತ್ತರ ಪದವಿ ಅಥವಾ ಡಿಪ್ಲೋಮೊವನ್ನು ಪ್ರದಾನಮಾಡತಕ್ಕದ್ದಲ್ಲ:

ಪರಂತು, ಸೂಪರ್ ಸ್ಪೆಷಾಲಿಟಿ ಕೋರ್ಸನ್ನು ಮಾಡಲು ಆಯ್ಕೆಯಾದ ಮತ್ತು ಮುಂದುವರೆಸುತ್ತಿರುವ ಅಭ್ಯರ್ಥಿಗಳ ಸಂದರ್ಭದಲ್ಲಿ, ಅಂಥ ಕೋರ್ಸು ಪೂರ್ಣಗೊಂಡ ನಿಕಟ ತರುವಾಯ ಒಂದು ವರ್ಷದ ಕಡ್ಡಾಯ ಸೇವೆಗೆ ಒಳಗಾಗಬಹುದು ಮತ್ತು ಅಂಥ ಅಭ್ಯರ್ಥಿಗಳಿಗೆ ಸೂಪರ್ ಸ್ಪೆಷಾಲಿಟಿ ಕೋರ್ಸನ್ನು ನಡೆಸುವ ಉದ್ದೇಶಕ್ಕಾಗಿ ಮಾತ್ರವೇ ಸಿಂಧುವಾಗುವಂತೆ ತಾತ್ಕಾಲಿಕ ಎಂಬಿಬಿಎಸ್ ಮತ್ತು ಸ್ನಾತಕೋತ್ತರ ಪದವಿ ಪ್ರಮಾಣಪತ್ರಗಳನ್ನು ನೀಡಬಹುದು:

ಮತ್ತು ಪರಂತು, ಅಂಥ ಅಭ್ಯರ್ಥಿಗಳಿಗೆ, ತರಬೇತಿಯ ಅವಧಿಯಲ್ಲಿ ರೋಗಿಗಳಿಗೆ ಸ್ವತಂತ್ರವಾಗಿ ಚಿಕಿತ್ಸೆ ನೀಡಲು ಮತ್ತು ಔಷಧಿಗಳನ್ನು ನಿಯಮಿಸಲು ಸದರಿ ತರಬೇತಿಗೆ ಒಳಪಡುವವರೆಗೆ, ತಾತ್ಕಾಲಿಕ ನೋಂದಣಿಯನ್ನು ನೀಡಬಹುದಾಗಿದೆ.

5. ಸೂಪರ್‌ಸ್ಪೆಷಾಲಿಟಿ ಪದವಿ ಕೋರ್ಸು ಪೂರ್ಣಗೊಳಿಸಿದ ಅಭ್ಯರ್ಥಿಯ ಕಡ್ಡಾಯ ಸೇವಾ ತರಬೇತಿ.– (1) ಸೂಪರ್ ಸ್ಪೆಷಾಲಿಟಿ ಕೋರ್ಸುಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಪ್ರತಿಯೊಬ್ಬ ಅಭ್ಯರ್ಥಿಯು, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ರಾಜ್ಯದಲ್ಲಿ ಕೌನ್ಸಿಲಿಂಗ್ ಪ್ರಕ್ರಿಯೆಯ ಮೂಲಕ ಮೆರಿಟ್ ಆಧಾರದ ಮೇಲೆ ಆಯ್ಕೆಯಾದ ಮತ್ತು ಸ್ಥಳ ನಿಯುಕ್ತಿಯಾದ ಹಂಚಿಕೆಯಾದ ಜಿಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ ಒಂದು ವರ್ಷದ ಕಡ್ಡಾಯ ಸೇವಾ ತರಬೇತಿಗೆ ಒಳಪಡತಕ್ಕದ್ದು. ಆತನಿಗೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಹಿರಿಯ ವಿಶೇಷತಜ್ಞರ ಒಟ್ಟು ಕನಿಷ್ಠ ಸಂಬಳಕ್ಕಿಂತ ನೂರು ರೂಪಾಯಿಗಳು ಕಡಿಮೆಗೆ ಸಮನಾಗಿರುವ ನಿಯಮಿಸಬಹುದಾದ ಅಂಥ ವೃತ್ತಿವೇತನವನ್ನು ಸಂದಾಯ ಮಾಡತಕ್ಕದ್ದು:

ಪರಂತು, 3ನೇ ಪ್ರಕರಣದ (1)ನೇ ಉಪಪ್ರಕರಣ ಅಥವಾ 4ನೇ ಪ್ರಕರಣದ (1)ನೇ ಉಪಪ್ರಕರಣದಡಿಯಲ್ಲಿ ಕಡ್ಡಾಯ ಸೇವಾ ತರಬೇತಿಯನ್ನು ಮಾಡಿದ ಅಭ್ಯರ್ಥಿಗಳನ್ನು ಈ ಪ್ರಕರಣದಡಿಯಲ್ಲಿನ ಕಡ್ಡಾಯ ಸೇವಾ ತರಬೇತಿಯಿಂದ ವಿನಾಯತಿಗೊಳಿಸತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಸ್ಥಳ ನಿಯುಕ್ತಿಗೊಳಿಸಿದ ಕಡ್ಡಾಯ ಸೇವಾ ತರಬೇತಿಯನ್ನು ಹೊಂದಲು ಅಗತ್ಯಪಡಿಸಲಾಗಿದ್ದು ಆದರೆ ಅಂಥ ತರಬೇತಿಗೆ ಒಳಪಡದ ಅಂಥ ಅಭ್ಯರ್ಥಿಗಳಿಗೆ ಯಾವುದೇ ವಿಶ್ವವಿದ್ಯಾಲಯವೂ ಸೂಪರ್ ಸ್ಪೆಷಾಲಿಟಿ ಪದವಿಯನ್ನು ಪ್ರದಾನಮಾಡತಕ್ಕದ್ದಲ್ಲ.

Xxx xxx xxx

KARNATAKA LEGISLATIVE ASSEMBLY

FOURTEENTH LEGISLATIVE ASSEMBLY

FOURTEENTH SESSION

THE KARNATAKA COMPULSORY SERVICE TRAINING BY CANDIDATES COMPLETED MEDICAL COURSES (AMENDMENT) BILL, 2017

(L.A. Bill No. 25 of 2017)

A Bill to amend the Karnataka Compulsory Service Training by Candidates Completed Medical Courses Act, 2012.

Whereas it is expedient to amend the Karnataka Compulsory Service Training by Candidates Completed Medical Courses Act, 2012 (Karnataka Act 26 of 2015) for the purposes hereinafter appearing;

Be it enacted by the Karnataka State Legislature in the sixty-eighth year of the Republic of India, as follows:-

1. Short title and commencement.- (1) This Act may be called the Karnataka Compulsory Service Training by Candidates Completed Medical Courses (Amendment) Act, 2017.

(2) It shall come into force at once.

2. Amendment of the title, long title and preamble.- In the Karnataka Compulsory Service Training by Candidates Completed Medical Courses Act, 2012 (Karnataka Act 26 of 2015) (hereinafter referred to as the principal Act),-

(i) in the title, the word "TRAINING" shall be omitted; and

(ii) in the long title and preamble, the word "training" shall be omitted.

3. Omission of Expression.- In the principal Act, the word "training" wherever it occurs, except in the proviso to sub-section (4) of section 3, shall be omitted.

4. Amendment of section 3.- In section 3 of the principal Act,-

(i) in sub-section (1), the word "trainee" shall be omitted;

(ii) sub-section (2) shall be omitted; and

(iii) in sub-section (4), in the proviso for the word "training" occurring in two places the word "service" shall be substituted.

5. Amendment of section 4.- In section 4 of the principal Act,-

(i) in sub-section (1), the word "trainee" shall be omitted; and

(ii) for sub-section (2), the following shall be substituted, namely:-

"(2) the provisions of sub-section (4) of section 3 shall mutatis mutandis apply to post graduates under this section:

Provided that, such candidates who undergo compulsory rural service may be given temporary registration till completion of such service to treat patients independently and prescribe medicine".

6. Amendment of section 5.- In section 5 of the principal Act, for sub-section (2), the following shall be substituted, namely:-

"(2) the provisions of sub-section (4) of section 3 shall mutatis mutandies apply to candidates who passes super specialty courses:

Provided that, such candidates who undergo compulsory rural service may be given temporary registration till completion of such service to treat patients independently and prescribe medicine".

STATEMENT OF OBJECTS AND REASONS

It is considered necessary to amend the Karnataka Compulsory Service Training by Candidates Completed Medical Courses Act, 2012 (Karnataka Act 26 of 2015) to,-

(1) omit the concept of training and to retain only the compulsory rural service subsequent to the completion of graduate or post graduate medical courses before giving permanent registration; and

(2) lift the embargo on award of degrees by the universities concerned to such candidates who have not undergone rural service.

Hence, the Bill.

FINANCIAL MEMORANDUM

There is no extra expenditure involved in the proposed legislative measure.

Dr. SHARANA PRAKASHA R.PATIL
Minister for Medical Education

S. Murthy
Secretary (I/c)
Karnataka Legislative Assembly

ANNEXURE

Extract from the Karnataka Compulsory Service Training by Candidates Completed Medical Courses Act, 2012 (Karnataka Act 26 of 2015)

xx xx xx

THE KARNATAKA COMPULSORY SERVICE TRAINING BY CANDIDATES COMPLETED MEDICAL COURSES ACT, 2012

(Received the assent of the President on the Twenty ninth day of May 2015)

An Act to provide for compulsory service training by candidates completed Medical Courses before award of degrees or postgraduate degrees or diplomas.

Whereas it is expedient to provide for compulsory service training by candidates completed Medical courses and before award of degrees or postgraduate degrees or diplomas for the purposes hereinafter appearing;

Be it enacted by the Karnataka State Legislative in the Sixty-Third Year of the Republic of India, as follows:-

1. Short title, extent and commencement.- (1) This Act may be called the Karnataka Compulsory Service Training by Candidates completed Medical Courses Act, 2012.

xx xx xx

3. Compulsory service of candidates completed medical course.- (1) Every candidate after successful completion of MBBS degree and after completion of one year internship course shall undergo one year compulsory rural service training in Government Primary Health Centres or Government Hospitals in rural areas allotted on the basis of merit through process of counseling in such manner as may be prescribed. During such service he shall be called as Junior Resident trainee.

(2) No university shall award degree to such candidate who is required to undergo and does not undergo compulsory rural service training under sub-section (1):

Provided that in case of candidates who has been selected and pursuing any post graduate degree or diploma may undergo one year compulsory service training immediately after completion of 3 such course and such candidate may be given a provisional MBBS certificate valid for the purpose of prosecution of Post Graduate degree.

(3) Every candidate who undergoes compulsory rural service training of one year shall be paid such a stipend equal to hundred rupees less than the minimum gross salary of General duty medical doctors in Health and Family Welfare Services.

(4) Notwithstanding anything contained in any law for the time being force every candidate who does not undergo the compulsory rural service training under sub-section (1) shall also not be eligible to permanent registration under the State under Karnataka Medical Registration Act, 1961 or under the India Medical Council Act, 1956:

Provided that such candidates may be given a temporary registration during till he undergo the said training independently treat patients and prescribe medicine during the training period.

4. Compulsory service training of candidates completed post graduate Medical courses.-(1) Every candidate other than the candidate who has undergone compulsory rural service training under sub-section (1) of section 3 and who has successfully completed post graduate diploma or degree shall undergo one year compulsory service training in Government hospital in urban area selected and posted on the basis of merit through process of counseling in the State in such manner as may be prescribed. During such service he shall be called as senior resident trainee. He shall be eligible for such a stipend as may be prescribed equal to hundred rupees less than minimum gross salary of specialist of Health and Family Welfare Department:

(2) No university shall award post graduate degree or diploma in the State to the candidates who does not join and undergo compulsory service training in the allotted or posted Government Hospital through process of counseling as required and prescribed under sub-section (1):

Provided that in case of a candidate who has been selected for and pursuing the super specialty course may undergo one year compulsory service training immediately after completion of such course and a provisional MBBS and P.G. degree certificate may be given to such candidates valid only for the purpose of prosecuting super specialty course:

Provided further that, such candidates may be given a temporary registration till he undergoes the said training independently treat patients and prescribe medicine during the training period.

5. Compulsory service training of candidates completed super specialty graduate courses.- (1) Every candidate who has successfully completed super specialty courses shall undergo one year compulsory service training in the allotted District Government Hospital selected and posted on the basis of merit through process of counseling in the State in such manner as may be prescribed. He shall be paid such a stipend as may be prescribed equal to hundred rupees less then minimum of gross salary of senior specialist of Health and Family Welfare Department:

Provided that candidates who have done compulsory service training under sub-section (1) of section 3 or sub-section (1) of section 4 are exempted from this compulsory service training under this section.

(2) No university shall award super specialty degree to such candidates who are required to undergo but does not undergo compulsory service training posted under sub-section (1).

xx xx xx

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 150

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–IVA	ಬೆಂಗಳೂರು, ಬುಧವಾರ, ಜೂನ್ ೧೪, ೨೦೧೭ (ಜ್ಯೇಷ್ಠ ೨೪, ಶಕ ವರ್ಷ ೧೯೩೯)	ನಂ. ೫೧೯
Part–IVA	Bengaluru, Wednesday, June 14, 2017 (Jyeshta 24, Shaka Varsha 1939)	No. 519

KARNATAKA LEGISLATIVE ASSEMBLY SECRETARIAT

NOTIFICATION

No.KLA/LGA/26/Bill/2017, Bengaluru, Dated 14.06.2017

The following Bill was introduced in Legislative Assembly on 14.06.2017.

ಕರ್ನಾಟಕ ವಿಧಾನ ಸಭೆ

ಹದಿನಾಲ್ಕನೇ ವಿಧಾನಸಭೆ

ಹದಿನಾಲ್ಕನೇ ಅಧಿವೇಶನ

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕ, 2017

(2017ರ ವಿಧಾನಸಭೆಯ ವಿಧೇಯಕ ಸಂಖ್ಯೆ–26)

ರಾಜ್ಯದಲ್ಲಿ ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯಡಿಯಲ್ಲಿ ಬರುವ ಎಲ್ಲಾ ವಿಶ್ವವಿದ್ಯಾನಿಲಯಗಳಿಗಾಗಿ ಒಂದು ಸಮಗ್ರ ಶಾಸನವನ್ನು ರಚಿಸುವುದಕ್ಕಾಗಿ ಮತ್ತು ಅಂಥ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸುವಲ್ಲಿ ಜಾರಿಯಲ್ಲಿರುವ ಹಲವಾರು ಅಧಿನಿಯಮಗಳನ್ನು ಬದಲಿಸಲು ಉಪಬಂಧ ಕಲ್ಪಿಸುವುದಕ್ಕಾಗಿ ಒಂದು ವಿಧೇಯಕ.

ರಾಜ್ಯದಲ್ಲಿ ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯಡಿಯಲ್ಲಿ ಬರುವ ಎಲ್ಲಾ ವಿಶ್ವವಿದ್ಯಾನಿಲಯಗಳಿಗಾಗಿ ಒಂದು ಸಮಗ್ರ ಶಾಸನವನ್ನು ರಚಿಸುವುದಕ್ಕಾಗಿ ಮತ್ತು ಅಂಥ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸುವಲ್ಲಿ ಜಾರಿಯಲ್ಲಿರುವ ಹಲವಾರು ಅಧಿನಿಯಮಗಳನ್ನು ಬದಲಿಸಲು ಉಪಬಂಧ ಕಲ್ಪಿಸುವುದು ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವುದು ಯಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು, ಎಂದರೆ:–

ಅಧ್ಯಾಯ I

ಪ್ರಾರಂಭಿಕ

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಗೊತ್ತುಪಡಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು. ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

2. ಪರಿಭಾಷೆಗಳು.– ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(1) "ವಿದ್ಯಾವಿಷಯಕ ಪರಿಷತ್ತು (ಅಕಾಡೆಮಿಕ್ ಕೌನ್ಸಿಲ್)" ಎಂದರೆ, ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಪರಿಷತ್ತು;

(2) "ಗೊತ್ತುಪಡಿಸಿದ ದಿನ" ಎಂದರೆ, ಈ ಅಧಿನಿಯಮದ ಉಪಬಂಧಗಳು ಜಾರಿಗೆ ಬರುವ ದಿನಾಂಕ;

(3) "ಕಾಲೇಜು" ಎಂದರೆ, ವಿಶ್ವವಿದ್ಯಾನಿಲಯವು ಕಾಲೇಜು ಎಂಬುದಾಗಿ ನಿರ್ವಹಿಸುತ್ತಿರುವ ಒಂದು ಸಂಸ್ಥೆ ಮತ್ತು ಇದು ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜಾಗಿ ವಿಶ್ವವಿದ್ಯಾನಿಲಯದ ವಿಶೇಷಾಧಿಕಾರಗಳಿಗೆ ಅನುಮತಿ ಪಡೆದಿರುವ ಒಂದು ಸಂಸ್ಥೆಯನ್ನು ಒಳಗೊಳ್ಳುತ್ತದೆ;

(4) "ಕ್ಲಸ್ಟರ್ ವಿಶ್ವವಿದ್ಯಾನಿಲಯ" ಎಂದರೆ, ರಾಷ್ಟ್ರೀಯ ಉಚ್ಚತರ ಶಿಕ್ಷಾ ಅಭಿಯಾನದ ಅಡಿಯಲ್ಲಿ ಭಾರತ ಸರ್ಕಾರದ ಮಾನವ ಸಂಪನ್ಮೂಲ ಮಂತ್ರಾಲಯವು ನಿರ್ದಿಷ್ಟಪಡಿಸಿದ ಪ್ರಮಾಣಕಗಳು ಮತ್ತು ಮಾನದಂಡಗಳಿಗನುಸಾರವಾಗಿ ಸಂಯೋಜಿತವಲ್ಲದ ಕ್ಲಸ್ಟರ್ ವಿಶ್ವವಿದ್ಯಾನಿಲಯವಾಗಿ ಮೇಲ್ದರ್ಜೆಗೇರಿಸಿದ ಸಂಸ್ಥೆಗಳ ಸಮೂಹ;

(5)"ವಿಭಾಗ", "ಅಧ್ಯಯನಗಳ ವಿಭಾಗ", "ಸ್ನಾತಕೋತ್ತರ ಪದವಿ ವಿಭಾಗ" ಮತ್ತು "ಅಧ್ಯಯನಗಳ ಸ್ನಾತಕೋತ್ತರ ಪದವಿ ವಿಭಾಗ" ಎಂದರೆ, ವಿದ್ಯಾವಿಷಯದ ಮತ್ತು ಸಂಶೋಧನಾ ಕಾರ್ಯಕ್ಕಾಗಿ ವಿಶ್ವವಿದ್ಯಾನಿಲಯವು ಸ್ಥಾಪಿಸಿ ನಿರ್ವಹಿಸುತ್ತಿರುವ ವಿಶ್ವವಿದ್ಯಾನಿಲಯದಲ್ಲಿನ ವಿಭಾಗ, ಅಧ್ಯಯನಗಳ ವಿಭಾಗ, ಸ್ನಾತಕೋತ್ತರ ಪದವಿ ವಿಭಾಗ ಮತ್ತು ಅಧ್ಯಯನಗಳ ಸ್ನಾತಕೋತ್ತರ ಪದವಿ ವಿಭಾಗ ಅಥವಾ ಈ ಉದ್ದೇಶಕ್ಕಾಗಿ ವಿಶ್ವವಿದ್ಯಾನಿಲಯವು ಹಾಗೆಂದು ಅಧಿಸೂಚಿಸಿ ಒಂದು ಸಂಸ್ಥೆ ಮತ್ತು ಇದು ಅಧ್ಯಯನ ಮತ್ತು ಸಂಶೋಧನಾ ಕೇಂದ್ರವನ್ನು ಒಳಗೊಳ್ಳುತ್ತದೆ;

(6)"ದೂರ ಶಿಕ್ಷಣ ಅಥವಾ ಕಲಿಕೆ" ಎಂದರೆ, ಆಕಾಶವಾಣಿ ಪ್ರಸಾರ, ದೂರದರ್ಶನ ಪ್ರಸಾರ, ಅಂತರ್ಜಾಲ, ಪತ್ರವ್ಯವಹಾರ, ವಿಚಾರಗೋಷ್ಠಿಗಳು, ಸಂಪರ್ಕ ಕಾರ್ಯಕ್ರಮಗಳು ಅಥವಾ ಅಂಥ ವಿಧಾನಗಳ ಯಾವುವೇ ಎರಡು ಅಥವಾ ಮೂರರ ಸಂಯೋಜನೆಯಂಥ ಸಂವಹನದ ಯಾವುವೇ ಮಾರ್ಗಗಳ ಮೂಲಕ ಶಿಕ್ಷಣ ನೀಡುವ ವ್ಯವಸ್ಥೆ;

(7) "ಕಾರ್ಯನಿರ್ವಾಹಕ ಪರಿಷತ್ತು" ಎಂದರೆ, ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಸ್ಥಾಪಿಸಲಾದ ಅಥವಾ ಸ್ಥಾಪಿಸಲಾಗಿದೆ ಎಂದು ಭಾವಿಸಲಾದ, ವಿಶ್ವವಿದ್ಯಾನಿಲಯದ ಕಾರ್ಯನಿರ್ವಾಹಕ ಪರಿಷತ್ತು;

(8) "ಉನ್ನತ ಶಿಕ್ಷಣ ಮೂಲಸೌಲಭ್ಯ ಅಭಿವೃದ್ಧಿ ಮಂಡಳಿ" ಎಂದರೆ, ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಮೂಲಸೌಕರ್ಯದ ಸೃಜನೆ ಮತ್ತು ನಿರ್ಮಾಣ ಕಾಮಗಾರಿಗಳ ಮೇಲ್ವಿಚಾರಣೆಗಾಗಿ ರಾಜ್ಯ ಸರ್ಕಾರವು ರಚಿಸಿದ ಮಂಡಳಿ;

(9) "ವಿದ್ಯಾರ್ಥಿ ನಿಲಯ" ಎಂದರೆ, ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ವಿಶ್ವವಿದ್ಯಾನಿಲಯವು ನಿರ್ವಹಿಸುತ್ತಿರುವ ಅಥವಾ ಅದರಿಂದ ಮನ್ನಣೆ ಪಡೆದ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗಾಗಿ ಇರುವ ಒಂದು ನಿವಾಸದ ಘಟಕ;

(10) "ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು (ಕೆಎಸ್ಎಚ್ಇಸಿ)" ಎಂದರೆ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಅಧಿನಿಯಮ, 2010ರ (2010ರ ಕರ್ನಾಟಕ ಅಧಿನಿಯಮ 26) ಮೂಲಕ ಅಥವಾ ಅದರ ಅಡಿಯಲ್ಲಿ ರಾಜ್ಯ ಸರ್ಕಾರವು ಸ್ಥಾಪಿಸಿದ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು;

(11) "ಬೋಧಕೇತರ ನೌಕರ" ಎಂದರೆ, ಆಡಳಿತಾತ್ಮಕ ಕೆಲಸದಲ್ಲಿ ತೊಡಗಿರುವ ಅಧಿಕಾರಿಗಳನ್ನು ಹೊರತುಪಡಿಸಿ, ವಿಶ್ವವಿದ್ಯಾನಿಲಯವು ನಿಯೋಜಿಸಿಕೊಂಡಿರುವ ಬೋಧಕೇತರ ಸಿಬ್ಬಂದಿ;

(12) "ಇತರ ಹಿಂದುಳಿದ ವರ್ಗಗಳು" ಎಂದರೆ, ಭಾರತ ಸಂವಿಧಾನದ 15(4)ನೇ ಅನುಚ್ಛೇದದ ಮತ್ತು 16(4)ನೇ ಅನುಚ್ಛೇದದ ಅಡಿಯಲ್ಲಿ, ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಿದ ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಪಂಗಡಗಳನ್ನು ಹೊರತುಪಡಿಸಿ, ಇತರ ಸಮುದಾಯಗಳು, ಜಾತಿಗಳು ಮತ್ತು ಪಂಗಡಗಳು;

(13) "ನಿಯಮಿಸಲಾದ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಾಜ್ಯ ಸರ್ಕಾರವು ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(14) "ಪ್ರಾಂಶುಪಾಲ" ಎಂದರೆ, ಒಂದು ಕಾಲೇಜಿನ ಅಥವಾ ಸಂಸ್ಥೆಯ_ಮುಖ್ಯಸ್ಥ;

(15) "ಮನ್ನಣೆ ಪಡೆದ ಸಂಸ್ಥೆ" ಎಂದರೆ, ಸಂಯೋಜಿತ ಕಾಲೇಜ್ ಮತ್ತು ವಿಶ್ವವಿದ್ಯಾನಿಲಯವು ಹಾಗೆಂದು ಮನ್ನಣೆ ನೀಡಿದವುಗಳನ್ನು ಹೊರತುಪಡಿಸಿ, ಇತರ ಉನ್ನತ ಕಲಿಕಾ, ಸಂಶೋಧನೆ ಅಥವಾ ವಿಶೇಷ ಅಧ್ಯಯನಗಳ ಸಂಸ್ಥೆ";

(16) "ಧಾರ್ಮಿಕ ಅಲ್ಪಸಂಖ್ಯಾತರು" ಎಂದರೆ, ಭಾರತ ಸಂವಿಧಾನದ 30ನೇ ಅನುಚ್ಛೇದದ ಅರ್ಥ ವ್ಯಾಪ್ತಿಯೊಳಗೆ ಧಾರ್ಮಿಕ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ವ್ಯಕ್ತಿಗಳು;

(17)"ಅನುಸೂಚಿ" ಎಂದರೆ, ಈ ಅಧಿನಿಯಮಕ್ಕೆ ಲಗತ್ತಿಸಿದ ಅನುಸೂಚಿ;

(18) "ಅನುಸೂಚಿತ ಜಾತಿಗಳು" ಎಂದರೆ, ಭಾರತ ಸಂವಿಧಾನದ 341ನೇ ಅನುಚ್ಛೇದದ ಅಡಿಯಲ್ಲಿ ಹೊರಡಿಸಿದ ಸಂವಿಧಾನ (ಅನುಸೂಚಿತ ಜಾತಿಗಳು) ಆದೇಶ, 1950ರಲ್ಲಿ ನಿರ್ದಿಷ್ಟಪಡಿಸಿದ ಅನುಸೂಚಿತ ಜಾತಿಗಳು;

(19) "ಅನುಸೂಚಿತ ಪಂಗಡಗಳು" ಎಂದರೆ, ಭಾರತ ಸಂವಿಧಾನದ 342ನೇ ಅನುಚ್ಛೇದದ ಅಡಿಯಲ್ಲಿ ಹೊರಡಿಸಿದ ಸಂವಿಧಾನ (ಅನುಸೂಚಿತ ಪಂಗಡಗಳು) ಆದೇಶ, 1950ರಲ್ಲಿ ನಿರ್ದಿಷ್ಟಪಡಿಸಿದ ಅನುಸೂಚಿತ ಪಂಗಡಗಳು.

(20) "ವಿಶೇಷ ಉದ್ದೇಶದ ವಿಶ್ವವಿದ್ಯಾನಿಲಯ" ಎಂದರೆ, ವಿಶೇಷ ಉದ್ದೇಶಕ್ಕಾಗಿ ಮತ್ತು ಅನುಸೂಚಿ– IIರಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶಗಳಿಗಾಗಿ ಈ ಅಧಿನಿಯಮದ ಅಡಿಯಲ್ಲಿ ಸ್ಥಾಪಿಸಲಾದ ಅಥವಾ ಸ್ಥಾಪಿಸಲಾಗಿವೆ ಅಥವಾ ನಿಗಮಿಸಲಾಗಿದೆ ಎಂದು ಭಾವಿಸಲಾದ ವಿಶ್ವವಿದ್ಯಾನಿಲಯ ಮತ್ತು ಇದು ಏಕಾತ್ಮಕ ಸ್ವರೂಪದ ಮತ್ತು ಕ್ಲಸ್ಟರ್ ವಿಶ್ವವಿದ್ಯಾನಿಲಯಗಳನ್ನು ಒಳಗೊಳ್ಳುತ್ತದೆ;

(21) "ಪರಿನಿಯಮಗಳು", "ಆರ್ಡಿನೆನ್ಸ್‌ಗಳು" ಮತ್ತು "ವಿನಿಯಮಗಳು", ಎಂದರೆ, ಅನುಕ್ರಮವಾಗಿ ವಿಶ್ವವಿದ್ಯಾನಿಲಯದ ಪರಿನಿಯಮಗಳು, ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳು;

(22) "ಶಾಸನಬದ್ಧ ನಿಯಂತ್ರಣಾತ್ಮಕ ನಿಕಾಯ" ಎಂದರೆ, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು (ತಾಂತ್ರಿಕ ಶಿಕ್ಷಣ) ಮತ್ತು ರಾಷ್ಟ್ರೀಯ ಬೋಧಕರ ಶಿಕ್ಷಣ ಪರಿಷತ್ತು (ಬೋಧಕರ ಶಿಕ್ಷಣ) ಇಂಥ ವೃತ್ತಿಪರ ಉನ್ನತ ಶಿಕ್ಷಣವನ್ನು ನಿಯಂತ್ರಿಸುವ ಉದ್ದೇಶಕ್ಕಾಗಿ ಸಂಸತ್ತಿನ ಅಧಿನಿಯಮದ ಮೂಲಕ ಸ್ಥಾಪಿಸಲಾದ ನಿಯಂತ್ರಣಾತ್ಮಕ ನಿಕಾಯ;

(23) "ಬೋಧಕರು" ಎಂದರೆ, ಗೌರವ/ವಿಶ್ರಾಂತ/ಹಂಗಾಮಿ ಪ್ರಾಧ್ಯಾಪಕರು, ಸಹ–ಪ್ರಾಧ್ಯಾಪಕರು/ ರೀಡರ್‌ಗಳು, ಸಹಾಯಕ ಪ್ರಾಧ್ಯಾಪಕರುಗಳು/ಉಪನ್ಯಾಸಕರು, ಗ್ರಂಥಪಾಲಕರು/ ಉಪ–ಗ್ರಂಥಪಾಲಕರು/ ಸಹಾಯಕ ಗ್ರಂಥಪಾಲಕರು ಮತ್ತು ವಿಶ್ವವಿದ್ಯಾನಿಲಯದಲ್ಲಿ ಅಥವಾ ಯಾವುದೇ ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣವನ್ನು ನೀಡುತ್ತಿರುವ ಘಟಕ/ಸಂಯೋಜಿತ ಕಾಲೇಜಿನಲ್ಲಿ ದೈಹಿಕ ಶಿಕ್ಷಣವನ್ನು ನೀಡುತ್ತಿರುವ ನಿರ್ದೇಶಕರು/ ಉಪ–ನಿರ್ದೇಶಕರು/ ಸಹಾಯಕ ನಿರ್ದೇಶಕರನ್ನು ಒಳಗೊಳ್ಳುತ್ತದೆ.

(24) "ವಿಶ್ವವಿದ್ಯಾನಿಲಯ" ಎಂದರೆ, ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಸ್ಥಾಪಿತವಾದ ಮತ್ತು ನಿಗಮಿತವಾದ ಅಥವಾ ಸ್ಥಾಪಿತವಾಗಿದೆ ಅಥವಾ ನಿಗಮಿತವಾಗಿದೆ ಎಂದು ಭಾವಿಸಲಾದ ಒಂದು ವಿಶ್ವವಿದ್ಯಾನಿಲಯ; ಮತ್ತು ಕ್ಲಸ್ಟರ್ ವಿಶ್ವವಿದ್ಯಾನಿಲಯಗಳು, ಏಕಾತ್ಮಕ ಸ್ವರೂಪದ ಮತ್ತು ವಿಶೇಷ ಉದ್ದೇಶದ ವಿಶ್ವವಿದ್ಯಾನಿಲಯವನ್ನು ಒಳಗೊಳ್ಳುತ್ತದೆ;

(25) "ವಿಶ್ವವಿದ್ಯಾನಿಲಯ ಪ್ರದೇಶ" ಎಂದರೆ, ಅನುಸೂಚಿ–Iರಲ್ಲಿ ನಿರ್ದಿಷ್ಟಪಡಿಸಿದ, ವಿಶ್ವವಿದ್ಯಾನಿಲಯದ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಪ್ರದೇಶ.

(26) "ವಿಶ್ವವಿದ್ಯಾನಿಲಯ ಅನುದಾನಗಳ ಆಯೋಗ (ಯುಜಿಸಿ)" ಎಂದರೆ, ವಿಶ್ವವಿದ್ಯಾನಿಲಯ ಅನುದಾನಗಳ ಆಯೋಗ ಅಧಿನಿಯಮ, 1956ರ (1956ರ ಕೇಂದ್ರ ಅಧಿನಿಯಮ 3) ಅನುಸಾರ ಭಾರತ ಸರ್ಕಾರವು ಸ್ಥಾಪಿಸಿದ ವಿಶ್ವವಿದ್ಯಾನಿಲಯ ಅನುದಾನಗಳ ಆಯೋಗ.

ಅಧ್ಯಾಯ II
ವಿಶ್ವವಿದ್ಯಾನಿಲಯಗಳು

3. ವಿಶ್ವವಿದ್ಯಾನಿಲಯಗಳ ಸ್ಥಾಪನೆ ಮತ್ತು ನಿಗಮನ.– (1) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000ದ ಉಪಬಂಧಗಳ ಅಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾನಿಲಯಗಳನ್ನು, ಮತ್ತು ಈ ಅಧಿನಿಯಮದ ಅಡಿಯಲ್ಲಿ ನಿರಸನಗೊಂಡ ಅಧಿನಿಯಮಗಳ ಉಪಬಂಧಗಳ ಅಡಿಯಲ್ಲಿ ಸ್ಥಾಪಿತವಾದ ಎಲ್ಲಾ ಇತರ ವಿಶ್ವವಿದ್ಯಾನಿಲಯಗಳನ್ನು, ಅನುಸೂಚಿ–Iರಲ್ಲಿ ಉಪಬಂಧಿಸಲಾದಂತೆ ಅವುಗಳ ಪ್ರಾದೇಶಿಕ ಅಧಿಕಾರವ್ಯಾಪ್ತಿಗಳೊಂದಿಗೆ ಮತ್ತು ಕೇಂದ್ರ ಕಾರ್ಯಸ್ಥಾನಗಳೊಂದಿಗೆ ಈ ಅಧಿನಿಯಮದ ಅಡಿಯಲ್ಲಿ ಸ್ಥಾಪಿಸಲಾಗಿದೆ ಮತ್ತು ನಿಗಮಿತಗೊಳಿಸಲಾಗಿದೆ ಎಂದು ಭಾವಿಸತಕ್ಕದ್ದು.

(2) (i) ಪ್ರತಿಯೊಂದು ವಿಶ್ವವಿದ್ಯಾನಿಲಯದ ಕುಲಾಧಿಪತಿ, ಸಹ–ಕುಲಾಧಿಪತಿ (ಪ್ರೊ–ಚಾನ್ಸ್‌ಲರ್), ಕುಲಪತಿ ಮತ್ತು ಕಾರ್ಯನಿರ್ವಾಹಕ ಪರಿಷತ್ತು ಹಾಗೂ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು, (1)ನೇ ಉಪಪ್ರಕರಣದಲ್ಲಿ, ಮತ್ತು ಅನುಸೂಚಿ–Iರಲ್ಲಿ ನಿರ್ದಿಷ್ಟಪಡಿಸಿದ ಆ ವಿಶ್ವವಿದ್ಯಾನಿಲಯದ ಹೆಸರಿನಿಂದ ಕರೆಯಲ್ಪಡುವ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು:

ಪರಂತು, ನಿರಸನಗೊಂಡ ಅಧಿನಿಯಮದ ಅಡಿಯಲ್ಲಿ ನೇಮಕವಾಗಿರುವ ವಿಶ್ವವಿದ್ಯಾನಿಲಯಗಳ ಕುಲಪತಿಗಳು, ಅವರನ್ನು ಯಾವ ಅವಧಿಯವರೆಗೆ ನೇಮಿಸಲಾಗಿದೆಯೋ ಆ ಅವಧಿಯು ಪೂರ್ಣಗೊಳ್ಳುವವರೆಗೆ ಅವರ ಹುದ್ದೆಯನ್ನು ಧಾರಣ ಮಾಡುವುದು ಮುಂದುವರಿಯತಕ್ಕದ್ದು;

(ii) ಅಂಥ ಪ್ರತಿಯೊಂದು ವಿಶ್ವವಿದ್ಯಾನಿಲಯವೂ ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮುದ್ರೆಯನ್ನು ಹೊಂದಿರತಕ್ಕದ್ದು ಮತ್ತು ಅದರ ಹೆಸರಿನಿಂದ ಅದು ದಾವೆ ಹೂಡಬಹುದು ಮತ್ತು ದಾವೆಗೆ ಗುರಿಯಾಗಬಹುದು.

(3) ಈ ಅಧಿನಿಯಮದ ಅಡಿಯಲ್ಲಿ ನಿರಸನಗೊಂಡ ಅಧಿನಿಯಮಗಳ ಅಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾನಿಲಯಗಳ ಪ್ರಾಧಿಕಾರಗಳನ್ನು ಗೊತ್ತುಪಡಿಸಿದ ದಿನದಂದು ಮತ್ತು ಆ ದಿನಾಂಕದಿಂದ, ಗೊತ್ತುಪಡಿಸಿದ ದಿನದಿಂದ ಅಥವಾ ಅವರ ಅವಧಿ ಪೂರ್ಣಗೊಂಡಂದು ಇವುಗಳಲ್ಲಿ ಯಾವುದು ಮೊದಲೋ ಅಂದಿನಿಂದ ಆರು ತಿಂಗಳುಗಳ ಒಳಗಾಗಿ ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಪುನರ್–ನಾಮಕರಣ ಮಾಡತಕ್ಕದ್ದು ಮತ್ತು ಪುನರ್‌ರಚಿಸತಕ್ಕದ್ದು:

ಪರಂತು, ನಿರಸನಗೊಂಡ ಅಧಿನಿಯಮಗಳಲ್ಲಿ ಸೆನೆಟ್ ಸಿಂಡಿಕೇಟ್ ಅಥವಾ ಕಾರ್ಯನಿರ್ವಾಹಕ ಪರಿಷತ್ತುಗಳಿಗೆ ಕಾರ್ಯನಿರ್ವಾಹಕ ಪರಿಷತ್ತು ಎಂದು ಪುನರ್ ನಾಮಕರಣ ಮಾಡತಕ್ಕದ್ದು.

(4) ವಿಶ್ವವಿದ್ಯಾನಿಲಯವು, ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನು ಆರ್ಜಿಸಲು ಮತ್ತು ಧಾರಣ ಮಾಡಲು, ವಿಶ್ವವಿದ್ಯಾನಿಲಯದ ಉದ್ದೇಶಗಳಿಗಾಗಿ ಅದರಲ್ಲಿ ನಿಹಿತವಾಗಿರಬಹುದಾದ ಅಥವಾ ಅದರಿಂದ ಆರ್ಜಿತವಾಗಿರಬಹುದಾದ ಯಾವುದೇ ಚರ ಮತ್ತು ಸ್ಥಿರ ಸ್ವತ್ತನ್ನು ಗುತ್ತಿಗೆಗೆ ಕೊಡಲು, ಮಾರಾಟ ಮಾಡಲು ಅಥವಾ ಅನ್ಯಥಾ ವರ್ಗಾವಣೆ ಮಾಡಲು ಹಾಗೂ ಈ ಅಧಿನಿಯಮದ ಉದ್ದೇಶಗಳಿಗಾಗಿ ಕರಾರು ಮಾಡಿಕೊಳ್ಳುವುದಕ್ಕೆ ಮತ್ತು ಅವಶ್ಯವಾದ ಇತರ ಎಲ್ಲ ಕಾರ್ಯಗಳನ್ನೂ ಮಾಡುವುದಕ್ಕೆ ಸಕ್ಷಮವಾಗಿರತಕ್ಕದ್ದು.

(5) ವಿಶ್ವವಿದ್ಯಾನಿಲಯದಲ್ಲಿ ನಿಹಿತವಾಗಿರಬಹುದಾದ ಅಥವಾ ಅದು ಆರ್ಜಿಸಿರಬಹುದಾದ ಯಾವುದೇ ಸ್ಥಿರ ಸ್ವತ್ತನ್ನು, ರಾಜ್ಯ ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದುಕೊಳ್ಳದೆ ಗುತ್ತಿಗೆ, ಮಾರಾಟ ಅಥವಾ ಅನ್ಯಥಾ ರೀತಿಯಲ್ಲಿ ವರ್ಗಾವಣೆ ಮಾಡತಕ್ಕದ್ದಲ್ಲ.

(6) ವಿಶ್ವವಿದ್ಯಾನಿಲಯದಿಂದ ಅಥವಾ ಅದರ ವಿರುದ್ಧ ಹೂಡಲಾದ ಎಲ್ಲಾ ದಾವೆಗಳಲ್ಲಿ ಮತ್ತು ಇತರ ಕಾನೂನು ವ್ಯವಹರಣೆಗಳಲ್ಲಿ, ವಾದಪತ್ರಗಳಿಗೆ ರಿಜಿಸ್ಟ್ರಾರರು ಸಹಿ ಮಾಡಿ ಸತ್ಯಾಪನೆ ಮಾಡತಕ್ಕದ್ದು ಮತ್ತು ಅಂತಹ ದಾವೆಗಳಲ್ಲಿನ ಮತ್ತು ವ್ಯವಹರಣೆಗಳಲ್ಲಿನ ಎಲ್ಲ ಆದೇಶಿಕೆಗಳನ್ನು ರಿಜಿಸ್ಟ್ರಾರರಿಗೆ ನೀಡತಕ್ಕದ್ದು ಮತ್ತು ಅವರಿಗೆ ಜಾರಿ ಮಾಡತಕ್ಕದ್ದು.

4. ಕ್ಲಸ್ಟರ್ ಮತ್ತು ಏಕಾತ್ಮಕ ಸ್ವರೂಪದ ಮತ್ತು ನಿಗಮಿತ ವಿಶ್ವವಿದ್ಯಾನಿಲಯಗಳ ಸ್ಥಾಪನೆ.– (1) ಗೊತ್ತುಪಡಿಸಿದ ದಿನಾಂಕದಂದು ಮತ್ತು ಗೊತ್ತುಪಡಿಸಿದ ದಿನಾಂಕದಿಂದ,–

(ಎ) ಮಂಡ್ಯದಲ್ಲಿ, ಸರ್ಕಾರಿ ಕಾಲೇಜ್, ಮಂಡ್ಯ ಇದನ್ನು ಮೇಲ್ದರ್ಜೆಗೆರಿಸುವ ಮೂಲಕ ಮಂಡ್ಯ ಏಕಾತ್ಮಕ ಸ್ವರೂಪದ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸತಕ್ಕದ್ದು;

(ಬಿ) ಸಂಸ್ಥೆಗಳ ಸಮೂಹದೊಂದಿಗೆ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾನಿಲಯ ಬೆಂಗಳೂರು ಇದನ್ನು ಸ್ಥಾಪಿಸತಕ್ಕದ್ದು; ಮತ್ತು

(ಸಿ) ಅನುಸೂಚಿ – I ರಲ್ಲಿ ನಿರ್ದಿಷ್ಟ ಪಡಿಸಿದ ಪ್ರಾಧೇಶಿಕ ಅಧಿಕಾರ ವ್ಯಾಪ್ತಿಯನ್ನು ಒಳಗೊಂಡ ರಾಯಚೂರು ವಿಶ್ವವಿದ್ಯಾಲಯವನ್ನು ಸ್ಥಾಪಿಸತಕ್ಕದ್ದು:

ಪರಂತು, ಮೇಲಿನ ವಿಶ್ವವಿದ್ಯಾನಿಲಯಗಳ ಸಂಬಂಧದಲ್ಲಿ, ವಿಶ್ವವಿದ್ಯಾನಿಲಯ ಪ್ರದೇಶದಲ್ಲಿರುವ ಪ್ರಸ್ತುತ ವಿಶ್ವವಿದ್ಯಾನಿಲಯದ ಕುಲಪತಿಗಳನ್ನು ಸಹವರ್ತಿ ಪ್ರಭಾರದ ಮೇಲೆ ಪದನಿಮಿತ್ತ ಕುಲಪತಿಯಾಗಿ ನೇಮಕ ಮಾಡತಕ್ಕದ್ದು.

(ಡಿ) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2017ರ ಪ್ರಾರಂಭದ ದಿನಾಂಕಕ್ಕೆ ಮೊದಲು, ಗಾಂಧಿನಗರದ ಕರ್ನಾಟಕ ವಿಧಾನಸಭಾ ಮತಕ್ಷೇತ್ರದಲ್ಲಿ ಇರುವ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಮತ್ತು ಮಹಾರಾಣಿ ಕಲೆ, ವಾಣಿಜ್ಯ ಮತ್ತು ವ್ಯವಸ್ಥಾಪನೆ ಕಾಲೇಜು, ಬೆಂಗಳೂರು; ಸರ್ಕಾರಿ ವಿಹೆಚ್‌ಡಿ ಗೃಹ ವಿಜ್ಞಾನ ಸಂಸ್ಥೆ, ಬೆಂಗಳೂರು ಇವುಗಳು ಬೆಂಗಳೂರು ಕೇಂದ್ರೀಯ ವಿಶ್ವವಿದ್ಯಾನಿಲಯದಿಂದ ಅನುಭವಿಸುತ್ತಿರುವ ಯಾವುದೇ ವಿಶೇಷಾಧಿಕಾರವನ್ನು ಈ ಸಂಬಂಧದಲ್ಲಿ ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ ಎಂಬುದಾಗಿ ಭಾವಿಸತಕ್ಕದ್ದು ಹಾಗೂ ಈ ಹಿಂದೆ ಬೆಂಗಳೂರು ಕೇಂದ್ರೀಯ ವಿಶ್ವವಿದ್ಯಾನಿಲಯದ ವಿಶೇಷಾಧಿಕಾರಗಳಿಗೆ ಅನುಭವಿಸುತ್ತಿದ್ದ ಅಥವಾ ಅದಕ್ಕೆ ಸಂಯೋಜಿತವಾಗಿದ್ದ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಮತ್ತು ಮಹಾರಾಣಿ ಕಲೆ, ವಾಣಿಜ್ಯ ಮತ್ತು ವ್ಯವಸ್ಥಾಪನೆ ಕಾಲೇಜು, ಬೆಂಗಳೂರು; ಬೆಂಗಳೂರು ಸರ್ಕಾರಿ ವಿಹೆಚ್‌ಡಿ ಗೃಹ ವಿಜ್ಞಾನ ಸಂಸ್ಥೆ, ಬೆಂಗಳೂರು ಇವುಗಳನ್ನು ಸದರಿ ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಾಗಿ ಅಥವಾ ವಿದ್ಯಾಲಯವಾಗಿ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾನಿಲಯದ ವಿಶೇಷಾಧಿಕಾರಗಳನ್ನು ಪಡೆಯಲು ಅನುಮತಿಯನ್ನು ನೀಡಲಾಗಿದೆ ಮತ್ತು ಸಂಯೋಜನೆಗೊಂಡಿವೆ ಎಂದು ಭಾವಿಸತಕ್ಕದ್ದು.

(ಇ) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2017ರ ಪ್ರಾರಂಭದ ದಿನಾಂಕಕ್ಕೆ ಮೊದಲು ಸರ್ಕಾರಿ ಕಾಲೇಜ್, ಮಂಡ್ಯ ಇದು ಮೈಸೂರು ವಿಶ್ವವಿದ್ಯಾನಿಲಯದಿಂದ ಅನುಭವಿಸುತ್ತಿರುವ ಯಾವುದೇ ವಿಶೇಷಾಧಿಕಾರವನ್ನು, ಈ

ಸಂಬಂಧದಲ್ಲಿ ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ ಹಿಂತೆಗೆದುಕೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಸರ್ಕಾರಿ ಕಾಲೇಜ್, ಮಂಡ್ಯ ಇದನ್ನು ಮಂಡ್ಯ ಏಕಾತ್ಮಕ ಸ್ವರೂಪದ ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಾಗಿ ಅಥವಾ ವಿದ್ಯಾಲಯಗಳಾಗಿ ಸದರಿ ವಿಶ್ವವಿದ್ಯಾನಿಲಯದ ವಿಶೇಷಾಧಿಕಾರಗಳನ್ನು ಅನುಭವಿಸಲು ಅನುಮತಿಸಲಾಗಿದೆ ಎಂದು ಭಾವಿಸತಕ್ಕದ್ದು.

(ಎಫ್) ಕರ್ನಾಟಕ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2017ರ ಪ್ರಾರಂಭದ ದಿನಾಂಕಕ್ಕಿಂತ ಮೊದಲು ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳಲ್ಲಿರುವ ಕಾಲೇಜು ಅಥವಾ ಶೈಕ್ಷಣಿಕ ಸಂಸ್ಥೆಗಳು ಅನುಭವಿಸುತ್ತಿದ್ದ ಗುಲ್ಬರ್ಗಾ ವಿಶ್ವವಿದ್ಯಾನಿಲಯದ ವಿಶೇಷಾಧಿಕಾರವನ್ನು ಈ ಸಂಬಂಧದಲ್ಲಿ ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ ಎಂಬುದಾಗಿ ಭಾವಿಸತಕ್ಕದ್ದು ಮತ್ತು ಈ ಹಿಂದೆ ಗುಲ್ಬರ್ಗಾ ವಿಶ್ವವಿದ್ಯಾನಿಲಯದ ವಿಶೇಷಾಧಿಕಾರವು ಮತ್ತು ಅದಕ್ಕೆ ಸಂಯೋಜನೆಗೊಂಡ ಅಂಥ ಎಲ್ಲಾ ಕಾಲೇಜುಗಳು ಅಥವಾ ಶೈಕ್ಷಣಿಕ ಸಂಸ್ಥೆಗಳು ರಾಯಚೂರು ವಿಶ್ವವಿದ್ಯಾನಿಲಯದ ವಿಶೇಷಾಧಿಕಾರವನ್ನು ಅನುಭವಿಸಲು ಅನುಮತಿಯನ್ನು ನೀಡಲಾಗಿದೆ ಅಥವಾ ಸಂಯೋಜನೆಗೊಂಡಿವೆ ಎಂಬುದಾಗಿ ಭಾವಿಸತಕ್ಕದ್ದು.

(ಜಿ) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2017ರ ಪ್ರಾರಂಭದ ದಿನಾಂಕದಿಂದ ಆರು ತಿಂಗಳುಗಳ ಒಳಗಾಗಿ ಅಥವಾ ಕುಲಾಧಿಪತಿಯು ನಿರ್ದೇಶಿಸಬಹುದಾದಂತ ಒಂದು ವರ್ಷಕ್ಕೆ ಮೀರದಂತೆ ಅಂಥ ಹೆಚ್ಚಿನ ಅವಧಿಯೊಳಗಾಗಿ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾನಿಲಯದ ಅಥವಾ ಮಂಡ್ಯ ಏಕಾತ್ಮಕ ಸ್ವರೂಪದ ವಿಶ್ವವಿದ್ಯಾನಿಲಯದ ಅಥವಾ ಸಂದರ್ಭಾನುಸಾರವಾಗಿ ರಾಯಚೂರು ವಿಶ್ವವಿದ್ಯಾಲಯದ ಕಾರ್ಯನಿರ್ವಾಹಕ ಪರಿಷತ್ತು, ವಿದ್ಯಾವಿಷಯಕ ಪರಿಷತ್ತು ಮತ್ತು ಇತರ ಪ್ರಾಧಿಕಾರಗಳ ರಚನೆಗಾಗಿ ಏರ್ಪಾಡುಗಳನ್ನು ಮಾಡುವುದು ಮೊದಲ ಕುಲಪತಿಯ ಕರ್ತವ್ಯವಾಗಿರತಕ್ಕದ್ದು.

(ಎಚ್) (1)ನೇ ಉಪಪ್ರಕರಣದ ಅಡಿಯಲ್ಲಿ ರಚಿತವಾಗಿರುವ ಪ್ರಾಧಿಕಾರಗಳು, ಈ ಬಗ್ಗೆ ಕುಲಾಧಿಪತಿಯು ನಿರ್ದಿಷ್ಟಪಡಿಸಬಹುದಾದ ಅಂಥ ದಿನಾಂಕದಂದು, ಅವುಗಳ ಅಧಿಕಾರಗಳನ್ನು ಚಲಾಯಿಸಲು ಮತ್ತು ಅವುಗಳ ಪ್ರಕಾರ್ಯಗಳನ್ನು ನಿರ್ವಹಿಸಲು ಪ್ರಾರಂಭಿಸತಕ್ಕದ್ದು.

(ಐ) ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾನಿಲಯ ಅಥವಾ ಮಂಡ್ಯ ಏಕಾತ್ಮಕ ಸ್ವರೂಪದ ವಿಶ್ವವಿದ್ಯಾನಿಲಯ ಅಥವಾ ಸಂದರ್ಭಾನುಸಾರವಾಗಿ ರಾಯಚೂರು ವಿಶ್ವವಿದ್ಯಾಲಯದ ಘಟಕ ಕಾಲೇಜುಗಳ ಅಥವಾ ವಿದ್ಯಾಲಯಗಳಾಗಬೇಕೆಂದು ಭಾವಿಸಲಾಗಿರುವ ಕಾಲೇಜುಗಳಿಗೆ ಅಥವಾ ಇತರ ಶೈಕ್ಷಣಿಕ ಸಂಸ್ಥೆಗಳಿಗೆ ಅನ್ವಯವಾಗಬಹುದಾದ ಬೆಂಗಳೂರು ಕೇಂದ್ರೀಯ ವಿಶ್ವವಿದ್ಯಾನಿಲಯ ಅಥವಾ ಮೈಸೂರು ಏಕಾತ್ಮಕ ಸ್ವರೂಪದ ವಿಶ್ವವಿದ್ಯಾನಿಲಯ ಅಥವಾ ಗುಲಬರ್ಗಾ ವಿಶ್ವವಿದ್ಯಾಲಯವು ಮಾಡಿದ ಎಲ್ಲಾ ಪರಿನಿಯಮಗಳು, ಆರ್ಡಿನೆನ್ಸ್‌ಗಳು, ವಿನಿಯಮಗಳು ಮತ್ತು ನಿಯಮಗಳನ್ನು, ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾನಿಲಯ ಅಥವಾ ಮಂಡ್ಯ ಏಕಾತ್ಮಕ ಸ್ವರೂಪದ ವಿಶ್ವವಿದ್ಯಾನಿಲಯ ಅಥವಾ ಸಂದರ್ಭಾನುಸಾರವಾಗಿ ರಾಯಚೂರು ವಿಶ್ವವಿದ್ಯಾಲಯವು ಮಾಡಿದ ಪರಿನಿಯಮಗಳು, ಆರ್ಡಿನೆನ್ಸ್‌ಗಳು, ವಿನಿಯಮಗಳು ಮತ್ತು ನಿಯಮಗಳಾಗಿವೆ ಎಂದು ಭಾವಿಸತಕ್ಕದ್ದು ಹಾಗೂ ಮಂಡ್ಯ ಕ್ಲಸ್ಟರ್ ವಿಶ್ವವಿದ್ಯಾನಿಲಯ ಅಥವಾ ಮಂಡ್ಯ ಏಕಾತ್ಮಕ ಸ್ವರೂಪದ ವಿಶ್ವವಿದ್ಯಾನಿಲಯಗಳು ಅಥವಾ ರಾಯಚೂರು ವಿಶ್ವವಿದ್ಯಾನಿಲಯಗಳು ಕ್ರಮವಾಗಿ ತಮ್ಮದೇ ಆದ ಪರಿನಿಯಮಗಳು, ಆರ್ಡಿನೆನ್ಸ್‌ಗಳು, ವಿನಿಯಮಗಳು ಮತ್ತು ನಿಯಮಗಳನ್ನು ರಚಿಸುವವರೆಗೆ ಹಾಗೆಯೇ ಮುಂದುವರಿಯತಕ್ಕದ್ದು:

ಪರಂತು, ಕುಲಾಧಿಪತಿಯ ಅನುಮೋದನೆಯೊಂದಿಗೆ ಕುಲಪತಿಯು, ತಾನು ಅವಶ್ಯವೆಂದು ಪರಿಗಣಿಸಬಹುದಾದಂಥ ಮಾರ್ಪಾಡನ್ನು ಮತ್ತು ಅಳವಡಿಕೆಗಳನ್ನು ಮಾಡಬಹುದು.

(2) ಈ ಅಧಿನಿಯಮವು ಪ್ರಾರಂಭವಾಗುವ ನಿಕಟಪೂರ್ವದಲ್ಲಿ ನಿರಸನಗೊಂಡ ಅಧಿನಿಯಮದಲ್ಲಿ ಅಥವಾ ಅದರಡಿಯಲ್ಲಿ ರಚಿಸಿದ ಪರಿನಿಯಮಗಳು, ಆರ್ಡಿನೆನ್ಸ್‌ಗಳು, ವಿನಿಯಮಗಳು ಮತ್ತು ನಿಯಮಗಳಲ್ಲಿ ಏನೇ ಇದ್ದರೂ:–

(i) ಜಾರಿಯಲ್ಲಿರುವ ಪರಿನಿಯಮಗಳು, ಆರ್ಡಿನೆನ್ಸ್‌ಗಳು, ವಿನಿಯಮಗಳು ಮತ್ತು ನಿಯಮಗಳಿಗನುಸಾರವಾಗಿ ಬೆಂಗಳೂರು ಕೇಂದ್ರೀಯ ವಿಶ್ವವಿದ್ಯಾನಿಲಯ ಅಥವಾ ಮೈಸೂರು ವಿಶ್ವವಿದ್ಯಾನಿಲಯ ಅಥವಾ ಗುಲಬರ್ಗ ವಿಶ್ವವಿದ್ಯಾನಿಲಯದ ಪದವಿಗಾಗಿ ಯಾವೊಬ್ಬ ವಿದ್ಯಾರ್ಥಿಯು ಅಧ್ಯಯನ ಮಾಡುತ್ತಿರುವಲ್ಲಿ, ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾನಿಲಯ ಅಥವಾ ಮಂಡ್ಯ ಏಕಾತ್ಮಕ ಸ್ವರೂಪದ ವಿಶ್ವವಿದ್ಯಾನಿಲಯ ಅಥವಾ ಸಂದರ್ಭಾನುಸಾರವಾಗಿ ರಾಯಚೂರು ವಿಶ್ವವಿದ್ಯಾನಿಲಯವು ಅಂಥ ಪರೀಕ್ಷೆಗೆ ಅವಕಾಶವನ್ನು ಕಲ್ಪಿಸುವವರೆಗೆ ಆತನಿಗೆ ಬೆಂಗಳೂರು ಕೇಂದ್ರ ವಿಶ್ವವಿದ್ಯಾನಿಲಯ ಅಥವಾ ಮೈಸೂರು ವಿಶ್ವವಿದ್ಯಾನಿಲಯ ಅಥವಾ ಗುಲಬರ್ಗ ವಿಶ್ವವಿದ್ಯಾನಿಲಯವು ಪರೀಕ್ಷೆಗೆ ಪ್ರವೇಶ ನೀಡಬಹುದು ಮತ್ತು ಅಂಥ ಪರೀಕ್ಷೆಯ ಪರಿಣಾಮವಾಗಿ ಅರ್ಹವಾಗುವ ಆತನಿಗೆ ಪದವಿಗಳನ್ನು ಅಥವಾ ಡಿಪ್ಲೋಮಾಗಳನ್ನು ಪ್ರದಾನ ಮಾಡಬಹುದು;

(ii) ಬೆಂಗಳೂರು ಕೇಂದ್ರೀಯ ವಿಶ್ವವಿದ್ಯಾನಿಲಯ ಅಥವಾ ಮೈಸೂರು ವಿಶ್ವವಿದ್ಯಾನಿಲಯ ಅಥವಾ ಗುಲಬರ್ಗ ವಿಶ್ವವಿದ್ಯಾಲಯವು ಯಾವುದೇ ಪರೀಕ್ಷೆಗಳನ್ನು ನಡೆಸಿದರೆ, ಅದರ ಫಲಿತಾಂಶವನ್ನು ಪ್ರಕಟಿಸಲಾಗಿದ್ದರೆ, ಆದರೆ ಅವುಗಳಿಗೆ ಸಂಬಂಧಿಸಿದಂತೆ ಪದವಿಗಳನ್ನು ಅಥವಾ ಡಿಪ್ಲೋಮಾಗಳನ್ನು ಪ್ರದಾನ ಮಾಡಿರದಿದ್ದರೆ ಅಥವಾ ನೀಡಿರದಿದ್ದರೆ ಅಥವಾ

ಅಂಥ ಯಾವುದೇ ಪರೀಕ್ಷೆಯ ಫಲಿತಾಂಶವನ್ನು ಬೆಂಗಳೂರು ಕೇಂದ್ರೀಯ ವಿಶ್ವವಿದ್ಯಾನಿಲಯ ಅಥವಾ ಮೈಸೂರು ವಿಶ್ವವಿದ್ಯಾನಿಲಯ ಅಥವಾ ಗುಲಬರ್ಗಾ ವಿಶ್ವವಿದ್ಯಾಲಯವು ಪ್ರಕಟಿಸಿರದಿದ್ದರೆ, ಆಗ ಅಂಥ ಪರೀಕ್ಷೆಯನ್ನು ಬೆಂಗಳೂರು ಕೇಂದ್ರೀಯ ವಿಶ್ವವಿದ್ಯಾನಿಲಯ ಅಥವಾ ಮೈಸೂರು ವಿಶ್ವವಿದ್ಯಾನಿಲಯ ಅಥವಾ ಗುಲಬರ್ಗ ವಿಶ್ವವಿದ್ಯಾಲಯವು ನಡೆಸಿದೆ ಎಂದು ಭಾವಿಸತಕ್ಕದ್ದು.

5. ವಿಶ್ವವಿದ್ಯಾನಿಲಯಗಳ ಉದ್ದೇಶಗಳು.– ವಿಶೇಷ ಉದ್ದೇಶಗಳ ವಿಶ್ವವಿದ್ಯಾನಿಲಯವನ್ನು ಹೊರತುಪಡಿಸಿ, ವಿಶ್ವವಿದ್ಯಾನಿಲಯದ ಉದ್ದೇಶಗಳು,–

(i) ಅದು ಸೂಕ್ತವೆಂದು ಭಾವಿಸಬಹುದಾದಂಥ ಕಲಿಕಾ ವಿಭಾಗಗಳಲ್ಲಿ ಬೋಧನಾ ಮತ್ತು ಸಂಶೋಧನಾ ಸೌಲಭ್ಯಗಳನ್ನು ಒದಗಿಸುವ ಮೂಲಕ ಜ್ಞಾನ ಪ್ರಸಾರ ಮಾಡುವುದು ಮತ್ತು ಜ್ಞಾನದ ಉನ್ನತಿಗೆ ಶ್ರಮಿಸುವುದು;

(ii) ಮಾನವೀಕತೆಗಳು, ಸಮಾಜ ವಿಜ್ಞಾನ, ವಿಜ್ಞಾನ, ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಹಾಗೂ ಅಂಥ ಇತರ ಕಲಿಕಾ ವಿಭಾಗಗಳಲ್ಲಿ ಸಮಗ್ರ ಪಠ್ಯಕ್ರಮಗಳಿಗಾಗಿ ವಿಶೇಷ ಉಪಬಂಧಗಳನ್ನು ಕಲ್ಪಿಸುವುದು;

(iii) ಬೋಧನೆ ಮತ್ತು ಕಲಿಕೆ ಹಾಗೂ ಅಂತರ್–ವಿಷಯಗಳ ಅಧ್ಯಯನಗಳು ಮತ್ತು ಸಂಶೋಧನೆಯಲ್ಲಿ ನಾವಿನ್ಯತೆಗೆ ಉತ್ತೇಜನ ನೀಡುವುದಕ್ಕಾಗಿ ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು;

(iv) ದೇಶದ ಅಭಿವೃದ್ಧಿಗಾಗಿ ಶಿಕ್ಷಣ ನೀಡುವುದು ಮತ್ತು ಮಾನವಶಕ್ತಿಗೆ ತರಬೇತಿ ನೀಡುವುದು;

(v) ವಿಜ್ಞಾನ ಮತ್ತು ತಂತ್ರಜ್ಞಾನದ ಉನ್ನತಿಗಾಗಿ ಕೈಗಾರಿಕಾ ಸಂಸ್ಥೆಗಳೊಂದಿಗೆ ಸಂಪರ್ಕಗಳನ್ನು ಹೊಂದುವುದು;

(vi) ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳನ್ನು ಸುಧಾರಣೆಗೊಳಿಸಲು ಹಾಗೂ ಜನರ ಕಲ್ಯಾಣಕ್ಕಾಗಿ, ಅವರ ಬೌದ್ಧಿಕ, ವಿದ್ಯಾವಿಷಯಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಗಾಗಿ ವಿಶೇಷ ಗಮನ ನೀಡುವುದು;

(vii) ರಾಜ್ಯದಲ್ಲಿ ಮತ್ತು ದೇಶದ ಯಾವುದೇ ಭಾಗದಲ್ಲಿ ಹಾಗೂ ವಿದೇಶದಲ್ಲಿ ಅಭಿವೃದ್ಧಿಯ ಸವಾಲುಗಳನ್ನು ಎದುರಿಸಲು ಆರೋಗ್ಯಕರ, ಕುಶಲ ಮತ್ತು ಜ್ಞಾನವಂತ ಮಾನವ ಸಂಪನ್ಮೂಲವನ್ನು ಸಿದ್ಧಪಡಿಸಲು ಔಪಚಾರಿಕ ಮತ್ತು ಅನೌಪಚಾರಿಕ ಶೈಕ್ಷಣಿಕ ಮಾರ್ಗಗಳೆರಡರ ಮೂಲಕ ಎಲ್ಲಾ ಅವಶ್ಯಕ ಕ್ರಮಗಳನ್ನು ತೆಗೆದುಕೊಳ್ಳುವುದು;

(viii) ಲಾಭರಹಿತ ಸಂಘಟನೆಯಾಗಿ ವಿಶ್ವವಿದ್ಯಾನಿಲಯದ ಉದ್ದೇಶಗಳನ್ನು ಮುಂದುವರಿಸಿಕೊಂಡು ಹೋಗಲು ಮತ್ತು ಉತ್ತೇಜನ ನೀಡಲು ಅವಶ್ಯಕ ಅಥವಾ ವಿಹಿತ ಕ್ರಮ ತೆಗೆದುಕೊಳ್ಳುವುದು:

ಪರಂತು, ನಿರ್ದಿಷ್ಟ ಉದ್ದೇಶದ ವಿಕಾತ್ಮಕ ಸ್ವರೂಪದ ವಿಶ್ವವಿದ್ಯಾನಿಲಯಗಳ ಸಂಬಂಧದಲ್ಲಿನ ಉದ್ದೇಶಗಳು ಅನುಸೂಚಿ IIರಲ್ಲಿ ನಿರ್ದಿಷ್ಟಪಡಿಸಿದಂತಿರತಕ್ಕದ್ದು.

6. ವಿಶ್ವವಿದ್ಯಾನಿಲಯದ ಅಧಿಕಾರಗಳು ಮತ್ತು ಪ್ರಕಾರ್ಯಗಳು.– ಈ ಅಧಿನಿಯಮದ ಉಪಬಂಧಗಳು ಮತ್ತು ಪರಿನಿಯಮಗಳು ಮತ್ತು/ ಅಥವಾ ಆರ್ಡಿನೆನ್ಸ್‌ಗಳ ಮೂಲಕ ಉಪಬಂಧಿಸಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು, ವಿಶೇಷ ಉದ್ದೇಶದ ವಿಶ್ವವಿದ್ಯಾನಿಲಯಗಳನ್ನು ಹೊರತುಪಡಿಸಿ, ಇತರ ವಿಶ್ವವಿದ್ಯಾನಿಲಯಗಳು ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕದ್ದು ಹಾಗೂ ಈ ಮುಂದಿನ ಪ್ರಕಾರ್ಯಗಳು ಮತ್ತು ಕರ್ತವ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ:–

(i) ತಾನು ಯುಕ್ತವೆಂದು ಭಾವಿಸುವಂತಹ ಕಲಿಕಾ ವಿಬಾಗಗಳಲ್ಲಿ ಮತ್ತು ಅಧ್ಯಯನ ಕ್ರಮಗಳಲ್ಲಿ, ಶಿಕ್ಷಣ (ದೂರ ಶಿಕ್ಷಣ ಪದ್ದತಿಯೂ ಸೇರಿದಂತೆ), ಬೋಧನೆ, ತರಬೇತಿ ಮತ್ತು ಸಂಶೋಧನೆಯಲ್ಲಿ ಶಿಕ್ಷಣ ನೀಡುವುದಕ್ಕಾಗಿ ಉಪಬಂಧ ಕಲ್ಪಿಸುವುದು ಹಾಗೂ ಜ್ಞಾನ ಮತ್ತು ಸಂಶೋಧನೆಯ ಸೃಜನೆ, ಪ್ರಸಾರ ಮತ್ತು ಉನ್ನತಿಗಾಗಿ ಅಷ್ಟೇ ಅಲ್ಲದೆ ಅವುಗಳ ವಿಸ್ತರಣೆಗಾಗಿ ಉಪಬಂಧಗಳನ್ನು ಕಲ್ಪಿಸುವುದು:

ಪರಂತು, ಯಾವುವೇ ಕ್ಯಾಂಪಸೇತರ ಕೇಂದ್ರಗಳು ಅಥವಾ ಅಧ್ಯಯನ ಕೇಂದ್ರಗಳು ಅಥವಾ ಸಂಯೋಜಿತ ಕಾಲೇಜುಗಳನ್ನು, ರಾಜ್ಯದ ಪ್ರಾದೇಶಿಕ ವ್ಯಾಪ್ತಿಯ ಹೊರಗಿನ ವಿಶ್ವವಿದ್ಯಾನಿಲಯಗಳ ಮೂಲಕ ಸ್ಥಾಪಿಸತಕ್ಕದ್ದಲ್ಲ ಮತ್ತು ಯಾವುದೇ ಫ್ರಾಂಚೈಸಿಗಳಿಗೆ ದೂರ ಶಿಕ್ಷಣ ಕಾರ್ಯಕ್ರಮಗಳು ಅಥವಾ ಕಾರ್ಯಚಟುವಟಿಕೆಗಳನ್ನು ನಡೆಸುವ ಕಾರ್ಯವನ್ನು ವಹಿಸತಕ್ಕದ್ದಲ್ಲ;

(ii) ಬೋಧನೆ–ಕಲಿಕೆ, ಮೌಲ್ಯಮಾಪನ, ಸಂಶೋಧನೆ ಮತ್ತು ವಿಸ್ತರಣಾ ಚಟುವಟಿಕೆಗಳ ಗುಣಮಟ್ಟ, ಪ್ರಮಾಣಕ ಮತ್ತು ಸುಸಂಗತೆಯ ನಿರ್ವಹಣೆಗೆ ಉಪಬಂಧ ಕಲ್ಪಿಸುವುದು.

(iii) ವಿವಿಧ ಕಾರ್ಯಕ್ರಮಗಳಿಗೆ ವಿದ್ಯಾರ್ಥಿಗಳ ಪ್ರವೇಶಕ್ಕೆ ಸಂಬಂಧಿಸಿದ ಅಗತ್ಯತೆಗಳಿಗೆ ಉಪಬಂಧ ಕಲ್ಪಿಸುವುದು, ಕ್ಯಾಂಪಸ್ ಮತ್ತು ಸಂಯೋಜಿತ ಕಾಲೇಜುಗಳಲ್ಲಿ ವ್ಯಾಸಂಗ ಕ್ರಮಗಳು, ಸಂಶೋಧನಾ ಕಾರ್ಯಗಳು ಮತ್ತು ಇತರ ವಿದ್ಯಾವಿಷಯಕ ಕಾರ್ಯಚಟುವಟಿಕೆಗಳನ್ನು ನಡೆಸುವುದು, ಹಾಗೂ,–

(ಎ) ಪರಿನಿಯಮಗಳು, ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳ ಮೂಲಕ ನಿಯಮಿಸಲಾದ ರೀತಿಯಲ್ಲಿ, ಅವುಗಳಿಂದ ವಿನಾಯಿತಿಗೊಳಿಸಲಾಗಿದ್ದ ಹೊರತು, ವಿಶ್ವವಿದ್ಯಾನಿಲಯದಲ್ಲಿ ಅಥವಾ ಯಾವುದೇ ಕಾಲೇಜಿನಲ್ಲಿ ಅಧ್ಯಯನ ಕ್ರಮವನ್ನು ಅನುಸರಿಸಿರುವ ಮತ್ತು ಪರಿನಿಯಮಗಳು, ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳ ಮೂಲಕ ನಿಯಮಿಸಲಾದ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ;

(ಬಿ) ಪರಿನಿಯಮಗಳು, ಆರ್ಡಿನೆನ್ಸ್‌ಗಳ ಮತ್ತು ವಿನಿಯಮಗಳ ಮೂಲಕ ನಿಯಮಿಸಲಾದ ಷರತ್ತುಗಳ ಅಡಿಯಲ್ಲಿ ಸಂಶೋಧನೆ ನಡೆಸಿರುವ,

– ಅಂಥ ವ್ಯಕ್ತಿಗಳಿಗೆ, ಪರೀಕ್ಷೆಗಳನ್ನು ನಡೆಸುವುದು ಮತ್ತು ಪದವಿಗಳು, ಡಿಪ್ಲೊಮಾಗಳು ಅಥವಾ ಇತರ ಶೈಕ್ಷಣಿಕ ಪದವಿಗಳನ್ನು ನೀಡುವುದು ಮತ್ತು ಪ್ರದಾನ ಮಾಡುವುದು;

(iv) ಪರಿನಿಯಮಗಳ ಮೂಲಕ ವಿಧಿಸಲಾದ ರೀತಿಯಲ್ಲಿ ವ್ಯಕ್ತಿಗಳಿಗೆ ಗೌರವ ಪದವಿಗಳನ್ನು ಅಥವಾ ಇತರ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು;

(v) ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಪಟ್ಟಿಯಲ್ಲಿ ಸೇರಿಲ್ಲದ ವ್ಯಕ್ತಿಗಳಿಗೆ, ವಿಶ್ವವಿದ್ಯಾನಿಲಯವು ನಿರ್ಧರಿಸಬಹುದಾದಂತೆ ಡಿಪ್ಲೊಮಾಗಳನ್ನು ನೀಡುವುದು ಮತ್ತು ಅಂಥ ಉಪನ್ಯಾಸಗಳಿಗೆ ಮತ್ತು ಬೋಧನೆಗಳಿಗೆ ಉಪಬಂಧ ಕಲ್ಪಿಸುವುದು;

(vi) ವಿಶ್ವವಿದ್ಯಾನಿಲಯವು ಕಾಲಕಾಲಕ್ಕೆ ನಿರ್ಧರಿಸಬಹುದಾದಂಥ ರೀತಿಯಲ್ಲಿ ಮತ್ತು ಅವುಗಳ ಅಂತಹ ಉದ್ದೇಶಗಳಿಗಾಗಿ ಇತರ ವಿಶ್ವವಿದ್ಯಾನಿಲಯಗಳಿಗೆ ಮತ್ತು ಪ್ರಾಧಿಕಾರಗಳೊಂದಿಗೆ ಸಹಕರಿಸುವುದು ಮತ್ತು ಸಹಯೋಗ ನೀಡುವುದು;

(vii) ಪ್ರಾಧ್ಯಾಪಕರ, ಸಹ ಪ್ರಾಧ್ಯಾಪಕರುಗಳ ಅಥವಾ ರೀಡರುಗಳ, ಸಹಾಯಕ ಪ್ರಾಧ್ಯಾಪಕರ ಅಥವಾ ಉಪನ್ಯಾಸಕರ ಮತ್ತು ವಿಶ್ವವಿದ್ಯಾನಿಲಯಕ್ಕೆ ಅಗತ್ಯವಿರುವ ಇತರ ಯಾವುದೇ ಬೋಧಕ ಹುದ್ದೆಗಳನ್ನು ಸ್ಥಾಪಿಸುವುದು ಮತ್ತು ಅವುಗಳಿಗೆ ನೇಮಕ ಮಾಡುವುದು ಮತ್ತು ಯಾವುದೇ ಬೋಧಕ ಹುದ್ದೆಗಳನ್ನು ಅಮಾನತುಗೊಳಿಸುವುದು ಅಥವಾ ರದ್ದುಗೊಳಿಸುವುದು;

(viii) ಫೆಲೋಷಿಪ್, ಸಂಚಾರಿ ಫೆಲೋಷಿಪ್, ವಿದ್ಯಾರ್ಥಿ ವೇತನಗಳು, ಶಿಷ್ಯ ವೇತನಗಳು, ವೃತ್ತಿ ವೇತನಗಳು, ಪದಕಗಳು ಮತ್ತು ಪಾರಿತೋಷಕಗಳನ್ನು ಸ್ಥಾಪಿಸುವುದು ಮತ್ತು ನೀಡುವುದು;

(ix) ಕಾಲೇಜುಗಳು, ಪ್ರಯೋಗಶಾಲೆಗಳು, ಗ್ರಂಥಾಲಯಗಳು, ವಸ್ತುಸಂಗ್ರಹಾಲಯಗಳು, ಮುದ್ರಣಾಲಯಗಳು, ಸಂಶೋಧನಾ ಸಂಸ್ಥೆಗಳು, ವಿದ್ಯಾವಿಷಯಕ್ಕೆ ಮತ್ತು ಆಡಳಿತ ತರಬೇತಿಗೆ ಸಂಬಂಧಿಸಿದ ಸಂಸ್ಥೆಗಳನ್ನು ಮತ್ತು ವಿಶ್ವವಿದ್ಯಾನಿಲಯದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ಅವಶ್ಯಕವಾದ ಇತರ ಸಂಸ್ಥೆಗಳನ್ನು ಸ್ಥಾಪಿಸುವುದು ನಿರ್ವಹಿಸುವುದು ಮತ್ತು ಅವುಗಳ ಆಡಳಿತವನ್ನು ನಡೆಸುವುದು;

(x) ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸುವುದು, ನಿರ್ವಹಿಸುವುದು ಮತ್ತು ಆಡಳಿತ ನಡೆಸುವುದು;

(xi) ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ನಿವಾಸ ಮತ್ತು ಶಿಸ್ತಿನ ಮೇಲ್ವಿಚಾರಣೆ ಮತ್ತು ನಿಯಂತ್ರಣ ಮಾಡುವುದು;

(xii) ನಡತೆ ಸಂಹಿತೆಯನ್ನು ಒಳಗೊಂಡು ಎಲ್ಲಾ ಪ್ರವರ್ಗಗಳ ನೌಕರರ ಸೇವಾ ಷರತ್ತುಗಳನ್ನು ವಿಧಿಸುವುದು.

(xiii) ವಿದ್ಯಾರ್ಥಿಗಳು ಮತ್ತು ನೌಕರರಲ್ಲಿ ಶಿಸ್ತನ್ನು ನಿಯಂತ್ರಿಸುವುದು ಮತ್ತು ಜಾರಿಗೆ ತರುವುದು ಹಾಗೂ ವಿಶ್ವವಿದ್ಯಾನಿಲಯು ಅವಶ್ಯವೆಂದು ಭಾವಿಸಬಹುದಾಂಥ ಶಿಸ್ತು ಕ್ರಮಗಳನ್ನು ತೆಗೆದುಕೊಳ್ಳುವುದು;

(xiv) ವಿಶ್ವವಿದ್ಯಾನಿಲಯದ ನೌಕರರ ಮತ್ತು ವಿದ್ಯಾರ್ಥಿಗಳ ಆರೋಗ್ಯ ಮತ್ತು ಸಾಮಾನ್ಯ ಕಲ್ಯಾಣವನ್ನು ವೃದ್ಧಿಗೊಳಿಸುವುದಕ್ಕಾಗಿ ಏರ್ಪಾಟುಗಳನ್ನು ಮಾಡುವುದು;

(xv) ಆರ್ಡಿನೆನ್ಸ್‌ಗಳ ಮೂಲಕ ಉಪಬಂಧಿಸಬಹುದಾದಂಥ ಶುಲ್ಕಗಳನ್ನು ಮತ್ತು ಇತರ ಚಾರ್ಜುಗಳನ್ನು ನಿಗದಿಪಡಿಸುವುದು, ವಸೂಲಿ ಮಾಡುವುದು, ತಗಾದೆ ಮಾಡುವುದು ಮತ್ತು ಪರಿಷ್ಕರಿಸುವುದು;

(xvi) ವಿದ್ಯಾರ್ಥಿನಿಯರಿಗೆ ಮತ್ತು ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಹಾಗೂ ಇತರ ಹಿಂದುಳಿದ ವರ್ಗಗಳಿಗೆ ಮತ್ತು ವಿಶೇಷ ಚೇತನ ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳಿಗೆ ನಿವಾಸ, ಶಿಸ್ತು ಮತ್ತು ಬೋಧನೆಗೆ ಸಂಬಂಧಿಸಿದಂತೆ ವಿಶೇಷ ಏರ್ಪಾಟುಗಳನ್ನು ಮಾಡುವುದು;

(xvii) ಪರಿನಿಯಮಗಳ ಮೂಲಕ ಆಡಳಿತಾತ್ಮಕ, ಲಿಪಿಕ ಮತ್ತು ಇತರ ಆವಶ್ಯಕ ಬೋಧಕೇತರ ಹುದ್ದೆಗಳನ್ನು ಸೃಜಿಸುವುದು ಮತ್ತು ಅವುಗಳಿಗೆ ನೇಮಕಾತಿಗಳನ್ನು ಮಾಡುವುದು;

(xviii) ವಿಶ್ವವಿದ್ಯಾನಿಲಯದ ಉದ್ದೇಶಕ್ಕಾಗಿ ಅನುದಾನ, ಮರಣಶಾಸನದ ಮೂಲಕ ಅಥವಾ ಅನ್ಯಥಾ ರೀತಿಯಲ್ಲಿ ವಿಶ್ವವಿದ್ಯಾನಿಲಯದಲ್ಲಿ ನಿಹಿತವಾಗಬಹುದಾದ ಯಾವುವೇ ದತ್ತಿಗಳು, ದೇಣಿಗೆಗಳು ಅಥವಾ ನಿಧಿಗಳನ್ನು ಅಂಗೀಕರಿಸುವುದು, ಧಾರಣ ಮಾಡುವುದು ಮತ್ತು ನಿರ್ವಹಿಸುವುದು ಹಾಗೂ ಯುಕ್ತವೆಂದು ಭಾವಿಸಬಹುದಾದ ಯಾವುದೇ ರೀತಿಯಲ್ಲಿ ಅಂತಹ ದತ್ತಿಗಳನ್ನು, ದೇಣಿಗೆಗಳನ್ನು ಅಥವಾ ನಿಧಿಗಳನ್ನು ತೊಡಗಿಸುವುದು:

ಪರಂತು, ವಿದೇಶದಿಂದ, ವಿದೇಶಿ ಪ್ರತಿಷ್ಠಾನದಿಂದ ದೇಣಿಗೆಗಳನ್ನು ರಾಜ್ಯ ಸರ್ಕಾರದ ಅನುಮೋದನೆಯಿಲ್ಲದೆ ಸ್ವೀಕರಿಸತಕ್ಕದ್ದಲ್ಲ.

ಮತ್ತು ಪರಂತು, ಅನಿವಾಸಿ ಭಾರತೀಯರಿಂದ ಅಥವಾ ವಿಶ್ವವಿದ್ಯಾನಿಲಯದ ಹಳೆಯ ವಿದ್ಯಾರ್ಥಿಗಳಿಂದ ವಂತಿಗೆಗಳು, ದತ್ತಿಗಳು, ನಿಧಿಗಳನ್ನು ವಿಶ್ವವಿದ್ಯಾನಿಲಯವು ಸರ್ಕಾರಕ್ಕೆ ತಿಳಿಸಿ ಸ್ವೀಕರಿಸತಕ್ಕದ್ದು;

(xix) ಪ್ರತಿಭೆ, ಸಂಶೋಧನೆ ಹಾಗೂ ಸಾಮಾನ್ಯ ಜ್ಞಾನದ ಕೃತಿಗಳ ಪ್ರಕಟಣೆಯನ್ನು ಕೈಗೊಳ್ಳುವುದು;

(xx) ನೌಕರರಿಗೆ ಮತ್ತು ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದ ಸಂಘಗಳನ್ನು (ಅಸೋಸಿಯೇಷನ್‌ಗಳನ್ನು) ಸಂಘಟಿಸುವುದು, ಅವುಗಳಿಗೆ ಮನ್ನಣೆ ನೀಡುವುದು ಹಾಗೂ ವಿನಿಯಮಿಸುವುದು ಮತ್ತು ನಿಯಂತ್ರಿಸುವುದು;

(xxi) ಪರಿನಿಯಮಗಳ ಮೂಲಕ ವಿಶ್ವವಿದ್ಯಾನಿಲಯಗಳ ಪ್ರಾಧಿಕಾರಗಳೆಂದು ಘೋಷಿಸಲಾಗುವ ಅಂಥ ನಿಕಾಯಗಳನ್ನು ನಿರ್ವಹಿಸುವುದು;

(xxii) ವಿಶ್ವವಿದ್ಯಾನಿಲಯವು ನಿರ್ವಹಿಸದೆ ಇರುವ ಶಿಕ್ಷಣ ಸಂಸ್ಥೆಗಳಿಗೆ, ಈ ಉದ್ದೇಶಕ್ಕಾಗಿ ಇರುವ ಸೂಕ್ತ ಪ್ರಮಾಣಕಗಳು, ಮಾನದಂಡಗಳು ಮತ್ತು ವಿನಿಯಮಗಳನ್ನು ರೂಪಿಸುವ ಮೂಲಕ ಸಂಯೋಜಿತ ಕಾಲೇಜುಗಳಾಗಿ ವಿಶ್ವವಿದ್ಯಾನಿಲಯದ ವಿಶೇಷಾಧಿಕಾರಗಳಿಗೆ ಅನುಮತಿ ನೀಡುವುದು;

(xxiii) ವಿಭಾಗಗಳು ಮತ್ತು ಸಂಯೋಜಿತ ಕಾಲೇಜುಗಳು ತಮ್ಮ ಸಾಮರ್ಥ್ಯವನ್ನು ನಿರಂತರವಾಗಿ ಹೆಚ್ಚಿಸಿಕೊಳ್ಳಲು ಮತ್ತು ವಿದ್ಯಾವಿಷಯಕ ಸಾಧನೆಗಳ ಉನ್ನತ ಮಟ್ಟವನ್ನು ತಲುಪಲು ಅವುಗಳನ್ನು ಸಮರ್ಥಗೊಳಿಸಲು, ಕಾಲಕಾಲಕ್ಕೆ ಈ ಸಂಬಂಧದಲ್ಲಿ ಹೊರಡಿಸಲಾದ ಯುಜಿಸಿ ಮಾರ್ಗಸೂಚಿಗಳನ್ನಾಧರಿಸಿ, ಈ ಉದ್ದೇಶಕ್ಕಾಗಿ ಸೂಕ್ತ ಪರಿನಿಯಮಗಳನ್ನು ರೂಪಿಸುವ ಮೂಲಕ, ಜಾರಿಗೆ ತರಲಾದ ಸಾಕಷ್ಟು ಸುರಕ್ಷತೆಗಳೊಂದಿಗೆ ಅವುಗಳಿಗೆ ಉತ್ತೇಜನ ನೀಡುವುದು ಮತ್ತು ಸಾಂಸ್ಥಿಕ ಸ್ವಾಯತ್ತತೆಯನ್ನು ನೀಡುವುದು.

(xxiv) (ಎ) ಶಾರೀರಿಕ ಶಿಕ್ಷಣ ಮತ್ತು ತರಬೇತಿಗೆ;

(ಬಿ) ವಿದ್ಯಾರ್ಥಿ ಸಂಘಗಳಿಗೆ, ಮತ್ತು;

(ಸಿ) ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಮತ್ತು ಅವುಗಳ ಮುಂದುವರಿಕೆಗೆ, ಅಥ್ಲೆಟಿಕ್ ಮತ್ತು ಇತರ ಕ್ಲಬ್ಬುಗಳ ಸೃಜನೆಗೆ ಅನುಮತಿಯನ್ನು ನೀಡುವುದಕ್ಕಾಗಿ;

– ವಿಶ್ವವಿದ್ಯಾನಿಲಯದ ನಿಧಿಗಳಿಂದ ಅನುದಾನಗಳನ್ನು ಒದಗಿಸುವುದು.

(xxv) ಸಂಯೋಜಿತ ಕಾಲೇಜುಗಳಿಗೆ ಅಗತ್ಯವಾಗಬಹುದಾದಂಥ ಬೋಧನೆ ಮತ್ತು ಮಾರ್ಗದರ್ಶನವನ್ನು ತನ್ನ ಪ್ರಾಧ್ಯಾಪಕರ ಮತ್ತು ಇತರ ಬೋಧಕರ ಮತ್ತು ವಿಭಾಗಗಳ ಹಾಗೂ ವಿಶೇಷ ಸಂಶೋಧನಾ ಸಂಸ್ಥೆಗಳ ಮೂಲಕ ಒದಗಿಸುವುದು;

(xxvi) ಪರಿನಿಯಮಗಳ ಮೂಲಕ ಕಾಲಕಾಲಕ್ಕೆ ಉಪಬಂಧಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಯಾವುದೇ ಉದ್ದೇಶಕ್ಕಾಗಿ ಯಾವುದೇ ಸಂಸ್ಥೆಗೆ ಪೂರ್ಣವಾಗಿ ಅಥವಾ ಭಾಗಶಃವಾಗಿ ಮನ್ನಣೆ ನೀಡುವುದು ಮತ್ತು ಅಂಥ ಮನ್ನಣೆಯನ್ನು ಹಿಂತೆಗೆದುಕೊಳ್ಳುವುದು;

(xxvii) ರಾಜ್ಯ ವಿಶ್ವವಿದ್ಯಾನಿಲಯಗಳ ಧ್ಯೇಯ ಮತ್ತು ಗುರಿಗಳನ್ನು ಈಡೇರಿಸುವುದಕ್ಕಾಗಿ, ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣಗಳಂಥ ರಾಜ್ಯದಲ್ಲಿನ ವಿವಿಧ ಶಿಕ್ಷಣ ವಲಯಗಳನ್ನು ಸಂಯೋಜಿಸುವಲ್ಲಿ ಮತ್ತು ಉತ್ತಮಗೊಳಿಸುವಲ್ಲಿ ಸಲಹಾತ್ಮಕ ಕಾರ್ಯಪಾತ್ರವನ್ನು ನೆರವೇರಿಸುವುದು;

(xxviii) ಇಡೀ ಸಮಾಜದ ಪ್ರಯೋಜನಕ್ಕಾಗಿ ನಿರಂತರ ಮತ್ತು ಅನೌಪಚಾರಿಕ ಶಿಕ್ಷಣವನ್ನು ನೀಡುವುದು ಅಷ್ಟೇ ಅಲ್ಲದೆ ಪ್ರಾಯೋಜಿತ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದು;

(xxix) ಈ ಮೇಲೆ ಹೇಳಿದ ಅಧಿಕಾರಕ್ಕೆ ಪ್ರಾಸಂಗಿಕವಾಗಿರಲಿ ಅಥವಾ ಇಲ್ಲದಿರಲಿ, ವಿಶೇಷವಾಗಿ ಮತ್ತು ಸಾಮಾನ್ಯವಾಗಿ ಕಲೆ, ವಿಜ್ಞಾನ, ವಾಣಿಜ್ಯ ಹಾಗೂ ಶಿಕ್ಷಣ, ಇಂಜಿನಿಯರಿಂಗ್, ತಂತ್ರಜ್ಞಾನ, ವ್ಯವಸ್ಥಾಪನೆ ಮತ್ತು ಇತರ ಕಲಿಕೆ ಮತ್ತು ಸಂಸ್ಕೃತಿ ವಿಭಾಗಗಳನ್ನು ಬೆಳೆಸಲು ಮತ್ತು ವೃದ್ಧಿಸಲು ವಿಶ್ವವಿದ್ಯಾನಿಲಯದ ಉದ್ದೇಶಗಳನ್ನು ಮುಂದುವರಿಸುವ ಸಲುವಾಗಿ ಅವಶ್ಯಕವಾಗಬಹುದಾದ ಅಂಥ ಇತರ ಕಾರ್ಯಗಳನ್ನು ಮತ್ತು ವಿಷಯಗಳನ್ನು ಕೈಗೊಳ್ಳುವುದು:

ಪರಂತು, ವಿಶೇಷ ಉದ್ದೇಶದ ವಿಶ್ವವಿದ್ಯಾನಿಲಯಗಳು, ಏಕಾತ್ಮಕ ಸ್ವರೂಪದ ವಿಶ್ವವಿದ್ಯಾನಿಲಯಗಳು, ಅನುಸೂಚಿ–II ರಲ್ಲಿ ನಿರ್ದಿಷ್ಟಪಡಿಸಬಹುದಾದ ಅಧಿಕಾರಗಳನ್ನು ಹೊಂದಿರತಕ್ಕದ್ದು.

7. **ಅಧಿಕಾರ ವ್ಯಾಪ್ತಿ, ವಿಶೇಷಾಧಿಕಾರ ಇತ್ಯಾದಿಗಳಿಗೆ ಅನುಮತಿ.**– ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದ ಹೊರತು, ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಪ್ರದತ್ತವಾದ ಪ್ರತಿಯೊಂದು ವಿಶ್ವವಿದ್ಯಾನಿಲಯದ ಅಧಿಕಾರಗಳನ್ನು ಅನುಸೂಚಿ–Iರಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ವಿಶ್ವವಿದ್ಯಾನಿಲಯದ ಪ್ರದೇಶದಲ್ಲಿ ಚಲಾಯಿಸತಕ್ಕದ್ದು ಮತ್ತು ಸದರಿ ಪ್ರದೇಶದ ಹೊರಗಡೆ ಇರುವ ಯಾವುದೇ ಶಿಕ್ಷಣ ಸಂಸ್ಥೆಯು, ವಿಶ್ವವಿದ್ಯಾನಿಲಯದ ಯಾವುವೇ ವಿಶೇಷಾಧಿಕಾರಗಳೊಡನೆ ಸಹವರ್ತಿಸತಕ್ಕದ್ದಲ್ಲ ಅಥವಾ ಅವುಗಳಿಗೆ ಅನುಮತಿ ಇರತಕ್ಕದ್ದಲ್ಲ:

ಪರಂತು, ಒಂದು ವಿಶ್ವವಿದ್ಯಾನಿಲಯದ ಪ್ರದೇಶದೊಳಗೆ ಇರುವ ಒಂದು ಶಿಕ್ಷಣ ಸಂಸ್ಥೆಯು, ಯಾವುದೇ ಇತರ ವಿಶ್ವವಿದ್ಯಾನಿಲಯದೊಡನೆ ಸಹವರ್ತಿಸಬಹುದು ಅಥವಾ ಯಾವುವೇ ವಿಶೇಷಾಧಿಕಾರಗಳಿಗೆ ಅನುಮತಿ ನೀಡಬಹುದು ಅಥವಾ ಒಂದು ಕಾಲೇಜು ಯಾವ ವಿಶ್ವವಿದ್ಯಾನಿಲಯದ ಅಧಿಕಾರ ವ್ಯಾಪ್ತಿಯೊಳಗೆ ಇರುವುದೋ ಆ ವಿಶ್ವವಿದ್ಯಾನಿಲಯದೊಡನೆ ಸಮಾಲೋಚಿಸಿ, ರಾಜ್ಯ ಸರ್ಕಾರದ ನಿರ್ದಿಷ್ಟ ಮಂಜೂರಾತಿಯೊಡನೆ, ವಿದೇಶಿ ವಿಶ್ವವಿದ್ಯಾನಿಲಯಗಳೂ ಸೇರಿದಂತೆ, ಸ್ಥಾಪಿತವಾದ ಮತ್ತು ನಿಗಮಿತವಾದ ಯಾವುದೇ ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತವಾಗಬಹುದು. ಅಂಥ ಮಂಜೂರಾತಿ ನೀಡುವ ರೀತಿ ಮತ್ತು ಕಾರ್ಯವಿಧಾನವು ಪರಿನಿಯಮಗಳಲ್ಲಿ ನಿಯಮಿಸಬಹುದಾದಂತೆ ಇರತಕ್ಕದ್ದು.

ವಿವರಣೆ:– ಈ ಪ್ರಕರಣದ ಉದ್ದೇಶಕ್ಕಾಗಿ 'ವಿದೇಶಿ ವಿಶ್ವವಿದ್ಯಾನಿಲಯ' ಎಂದರೆ, ಸಂಸತ್ತಿನ ಅಥವಾ ಒಂದು ರಾಜ್ಯ ವಿಧಾನಮಂಡಲದ ಅಧಿನಿಯಮದ ಅಡಿಯಲ್ಲಿ ಭಾರತದ ಒಳಗಡೆ ಸ್ಥಾಪಿತವಾದ ವಿಶ್ವವಿದ್ಯಾನಿಲಯವಾಗಿರದ ಅಥವಾ ವಿಶ್ವವಿದ್ಯಾನಿಲಯ ಅನುದಾನಗಳ ಆಯೋಗ ಅಧಿನಿಯಮ, 1956ರ (1956ರ ಕೇಂದ್ರ ಅಧಿನಿಯಮ 3) 3ನೇ ಪ್ರಕರಣದ ಅಡಿಯಲ್ಲಿ ಡೀಮ್ಡ್ ವಿಶ್ವವಿದ್ಯಾನಿಲಯವೆಂದು ಘೋಷಿಸಲಾಗಿರುವ ಒಂದು ವಿಶ್ವವಿದ್ಯಾನಿಲಯ.

(2) (1)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಪ್ರತಿಯೊಂದು ವಿಶ್ವವಿದ್ಯಾನಿಲಯವು, ರಾಜ್ಯ ಸರ್ಕಾರದ ವಿಶೇಷ ಅಥವಾ ಸಾಮಾನ್ಯ ನಿರ್ದೇಶನಗಳಿಗನುಸಾರವಾಗಿ, ಈ ಕೆಳಕಂಡ ವರ್ಗಗಳ ವ್ಯಕ್ತಿಗಳಿಗಾಗಿ, ವಿಶ್ವವಿದ್ಯಾನಿಲಯವು ನಿರ್ವಹಿಸುತ್ತಿರುವ ಅಥವಾ ನಿಯಂತ್ರಿಸುತ್ತಿರುವ ಯಾವುದೇ ಕಾಲೇಜು ಅಥವಾ ಸಂಸ್ಥೆಯಲ್ಲಿ ವಿದ್ಯಾರ್ಥಿಗಳ ಪ್ರವೇಶದ ಉದ್ದೇಶಗಳಿಗಾಗಿ ಸ್ಥಾನಗಳನ್ನು ಮೀಸಲಿರಿಸತಕ್ಕದ್ದು, ಎಂದರೆ:–

(i)ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು;

(ii)ಇತರ ಹಿಂದುಳಿದ ವರ್ಗಗಳು;

(iii) ಧಾರ್ಮಿಕ ಮತ್ತು ಭಾಷಿಕ ಅಲ್ಪಸಂಖ್ಯಾತರು;

(iv) ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರಾದವರು;

(v)ರಕ್ಷಣಾ ಸಿಬ್ಬಂದಿ ಮತ್ತು ಮಾಜಿ ಸೈನಿಕರು ಹಾಗೂ ಅವರ ಮಕ್ಕಳು; ಮತ್ತು

(vi) ದೈಹಿಕವಾಗಿ ಅಂಗವಿಕಲತೆಯುಳ್ಳ ವ್ಯಕ್ತಿಗಳ ಅಧಿನಿಯಮ, 2016ರಲ್ಲಿ (2016ರ ಕೇಂದ್ರ ಅಧಿನಿಯಮ 49) ಪರಿಭಾಷಿಸಲಾದ ಅಂಗವಿಕಲರು.

(3) ವಿಶ್ವವಿದ್ಯಾನಿಲಯವು, ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶಗಳಿಗೊಳಪಟ್ಟು, ಊಟ, ವಸತಿಗಳ ಶುಲ್ಕ ಅಥವಾ ಇತರ ವೆಚ್ಚಗಳನ್ನು ಸಂದಾಯ ಮಾಡುವುದರಿಂದ ವಿನಾಯಿತಿ ಕೊಡಬಹುದು ಅಥವಾ (2)ನೇ ಉಪಪ್ರಕರಣದಲ್ಲಿ ಪಟ್ಟಿ ಮಾಡಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ವಿಶೇಷ ವಿದ್ಯಾರ್ಥಿ ವೇತನಗಳನ್ನು ನೀಡಬಹುದು.

8. ವಿಶ್ವವಿದ್ಯಾನಿಲಯಗಳಲ್ಲಿ ಬೋಧನೆ ಮತ್ತು ಸಂಶೋಧನೆ.– (1) ವಿದ್ಯಾವಿಷಯಕ ಪರಿಷತ್ತಿನ ನಿಯಂತ್ರಣಕ್ಕೊಳಪಟ್ಟು, ಪ್ರತಿಯೊಂದು ವಿಶ್ವವಿದ್ಯಾನಿಲಯದ ವ್ಯಾಸಂಗ ಕ್ರಮಗಳಿಗೆ ಸಂಬಂಧಪಟ್ಟಂತೆ ಎಲ್ಲ ಮನ್ನಣೆ ಪಡೆದ ಬೋಧನೆಯನ್ನು, ವಿನಿಯಮಗಳ ಮೂಲಕ ನಿಯಮಿಸಲಾದ ಪಠ್ಯಕ್ರಮಕ್ಕನುಸಾರವಾಗಿ ವಿಶ್ವವಿದ್ಯಾನಿಲಯದ ಬೋಧಕರು ನಡೆಸತಕ್ಕದ್ದು ಮತ್ತು ಅದು ಉಪನ್ಯಾಸ ನೀಡುವುದು, ಬೋಧನೆ ಮಾಡುವುದು (ಟ್ಯೂಟರಿಯಲ್ಸ್) ಪ್ರಯೋಗಾಲಯ ಕೆಲಸ, ಸಲಹೆ ನೀಡುವುದು, ಮಾರ್ಗದರ್ಶನ ನೀಡುವುದು ಮತ್ತು ಇತರ ಬೋಧನಾ ವಿಧಾನಗಳನ್ನು ಒಳಗೊಳ್ಳತಕ್ಕದ್ದು.

(2) ಅಂಥ ಎಲ್ಲಾ ಬೋಧನೆಯನ್ನು ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳ ಮೂಲಕ ಉಪಬಂಧಿಸಬಹುದಾದಂತೆ ಅಂಥ ಪ್ರಾಧಿಕಾರಗಳು ವ್ಯವಸ್ಥೆಗೊಳಿಸತಕ್ಕದ್ದು.

(3) ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳ ಮೂಲಕ ಉಪಬಂಧಿಸಬಹುದಾದಂತೆ ವ್ಯಾಸಂಗ ಕ್ರಮಗಳು ಮತ್ತು ಪಠ್ಯವಿಷಯಗಳು ಇರತಕ್ಕದ್ದು.

(4) ವಿಶ್ವವಿದ್ಯಾನಿಲಯ ವಿಭಾಗಗಳಲ್ಲಿ ಮತ್ತು ಸಂಯೋಜಿತ ಅಥವಾ ಘಟಕ ಕಾಲೇಜುಗಳಲ್ಲಿ ಇರುವ ಬೋಧಕರು, ವಿಶ್ವವಿದ್ಯಾನಿಲಯದಿಂದ ಮತ್ತು ಇತರ ಏಜೆನ್ಸಿಗಳಿಂದ ನಿಧಿ ಒದಗಿಸುವಿಕೆಯಿಂದ ಅಥವಾ ನಿಧಿ ಒದಗಿಸುವಿಕೆಯಿಲ್ಲದೆ ಹೊಸ ಹೊಸ ಜ್ಞಾನ ಅಭಿವೃದ್ಧಿಯಲ್ಲಿ ಹಿಂದೆ ಬೀಳದಂತೆ ಸಂಶೋಧನೆ ನಡೆಸತಕ್ಕದ್ದು ಮತ್ತು ಮಾರ್ಗದರ್ಶನ ನೀಡತಕ್ಕದ್ದು.

(5) ಅರ್ಹ ಕಾಲೇಜುಗಳು ಅಥವಾ ವಿಭಾಗಗಳನ್ನು ಸಂಶೋಧನಾ ಕೇಂದ್ರಗಳಾಗಿ ಗುರುತಿಸುವುದಷ್ಟೇ ಅಲ್ಲದೆ ವೈಯಕ್ತಿಕ ಆಧಾರದ ಮೇಲೆ ಸಂಯೋಜಿತ ಅಥವಾ ಘಟಕ ಕಾಲೇಜುಗಳ ಅರ್ಹ ಬೋಧಕರನ್ನು ಸಂಶೋಧನಾ ಮಾರ್ಗದರ್ಶಕರನ್ನಾಗಿ ಗುರುತಿಸಬಹುದು.

9. ತಿಸ್ತು, ಪರಿವೀಕ್ಷಣೆ ಮತ್ತು ನಿಯಂತ್ರಣ.– (1) ಕುಲಾಧಿಪತಿಯವರು ರಾಜ್ಯ ಸರ್ಕಾರದ ಶಿಫಾರಸುಗಳ ಮೇಲೆ ತಾನು ನಿರ್ದೇಶಿಸಬಹುದಾದಂತೆ, ಒಬ್ಬ ಅಥವಾ ಹೆಚ್ಚು ವ್ಯಕ್ತಿಗಳಿರುವ ಒಂದು ವಿಚಾರಣಾ ಆಯೋಗದಿಂದ, ವಿಶ್ವವಿದ್ಯಾನಿಲಯವು ನಿರ್ವಹಿಸುವ, ಆಡಳಿತ ನಡೆಸುವ, ಮನ್ನಣೆ ಕೊಟ್ಟಿರುವ ಅಥವಾ ಅನುಮೋದಿಸಿರುವ ಯಾವುದೇ ಸಂಸ್ಥೆಯ ಕಟ್ಟಡಗಳ, ಪ್ರಯೋಗ ಶಾಲೆಗಳ, ಗ್ರಂಥಾಲಯಗಳ, ವಸ್ತು ಸಂಗ್ರಹಾಲಯಗಳ, ಕಾರ್ಯಾಗಾರಗಳ ಮತ್ತು ಸಾಧನ ಸಾಮಗ್ರಿಗಳ ಹಾಗೂ ವಿಶ್ವವಿದ್ಯಾನಿಲಯವು ನಡೆಸಿದ ಅಥವಾ ನಿರ್ವಹಿಸಿದ ಪರೀಕ್ಷೆಗಳ, ಬೋಧನೆಗಳ ಮತ್ತು ಇತರ ಕೆಲಸಗಳ ಪರಿವೀಕ್ಷಣೆಯನ್ನು ಮಾಡಿಸಬಹುದು ಮತ್ತು ವಿಶ್ವವಿದ್ಯಾನಿಲಯದ ಯಾವೊಬ್ಬ ನೌಕರನ ವಿರುದ್ಧ ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪೂರಕವಾಗಿ ಮಾಡಲಾದ ಯಾವುದೇ ನಿರ್ದಿಷ್ಟ ಆಪಾದನೆಗಳ ಬಗ್ಗೆ ಅದೇ ರೀತಿ ವಿಚಾರಣೆ ಮಾಡಿಸಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಅಂಥ ಪರಿವೀಕ್ಷಣೆ ಅಥವಾ ವಿಚಾರಣೆಯನ್ನು ಮಾಡಲು ನಿರ್ದೇಶಿಸಲಾದ ಆಯೋಗವು, ಆ ಉದ್ದೇಶಕ್ಕಾಗಿ ಸಂಬಂಧಪಟ್ಟ ಸಂಸ್ಥೆಗಳನ್ನು ಮತ್ತು ಆವರಣಗಳನ್ನು ಪ್ರವೇಶಿಸಲು ಮತ್ತು ಅಗತ್ಯವಾಗಬಹುದಾದಂಥ ಲೆಕ್ಕಪತ್ರಗಳನ್ನು ಅಥವಾ ಇತರ ದಾಖಲೆಗಳನ್ನು ಪರಿವೀಕ್ಷಿಸಲು ಅವಕಾಶವಿರತಕ್ಕದ್ದು.

(3) ಆಯೋಗವು, ಪರಿವೀಕ್ಷಣೆಯ ಅಥವಾ ವಿಚಾರಣೆಯ ಫಲಿತಾಂಶದ ವರದಿಯನ್ನು ನಿಯಮಿಸಲಾದ ಅವಧಿಯೊಳಗಾಗಿ ಕುಲಾಧಿಪತಿಗೆ ಸಲ್ಲಿಸತಕ್ಕದ್ದು ಮತ್ತು ಅದರ ಪ್ರತಿಯನ್ನು ಮಾಹಿತಿಗಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(4) ವರದಿಯನ್ನು ಸ್ವೀಕರಿಸಿದ ಕೂಡಲೇ ಕುಲಾಧಿಪತಿಯು, ಅದರ ಮೇಲೆ ತನ್ನ ತೀರ್ಮಾನಗಳನ್ನು ದಾಖಲಿಸತಕ್ಕದ್ದು ಮತ್ತು ಅವಶ್ಯಕವಾಗಬಹುದಾದ ಅಥವಾ ತಾನು ನಿರ್ದೇಶಿಸಬಹುದಾದ ಮುಂದಿನ ಕ್ರಮ ಕೈಕೊಳ್ಳುವುದಕ್ಕಾಗಿ ಅದನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು.

(5) ರಾಜ್ಯ ಸರ್ಕಾರವು, ವಿಚಾರಣೆಯ ಅಥವಾ ಪರಿವೀಕ್ಷಣೆಯ ವರದಿಯಲ್ಲಿಯ ತೀರ್ಮಾನಗಳಿಗೆ ಸಂಬಂಧಿಸಿದಂತೆ ತನ್ನ ನಿರ್ದೇಶನಗಳನ್ನಾಧರಿಸಿ ಅವಶ್ಯಕವಿರಬಹುದಾದ ಅಂಥ ಕ್ರಮ ಕೈಗೊಳ್ಳಲು ಪ್ರಾರಂಭಿಸುವಂತೆ ಕುಲಪತಿಗೆ ನಿರ್ದೇಶಿಸತಕ್ಕದ್ದು ಮತ್ತು ಕಾಯನಿರ್ವಾಹಕ ಪರಿಷತ್ತು ಈ ನಿರ್ದೇಶನಗಳನ್ನು ಅನುಷ್ಠಾನಗೊಳಿಸತಕ್ಕದ್ದು.

(6) ಕುಲಪತಿಯು, ರಾಜ್ಯ ಸರ್ಕಾರದ ಆದೇಶಗಳಲ್ಲಿ ನಿರ್ದಿಷ್ಟಪಡಿಸಲಾದ ರಾಜ್ಯ ಸರ್ಕಾರದ ನಿರ್ದೇಶನಗಳನ್ನು ಅನುಸರಿಸಿ ಕೈಗೊಂಡ ಕ್ರಮದ ಬಗ್ಗೆ ಒಂದು ವರದಿಯನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(7) ರಾಜ್ಯ ಸರ್ಕಾರದ ನಿರ್ದೇಶನಗಳನ್ನು ಪಾಲಿಸಲು ಕುಲಪತಿಯು ತಪ್ಪಿದಲ್ಲಿ, ಆಗ ಆ ಬಗ್ಗೆ ಕುಲಾಧಿಪತಿಗೆ ವರದಿ ಮಾಡತಕ್ಕದ್ದು, ಅವರ ಆದೇಶವು ಅಂತಿಮವಾಗಿರತಕ್ಕದ್ದು ಮತ್ತು ಕುಲಾಧಿಪತಿಯವರ ಆದೇಶಗಳಲ್ಲಿ ಸೂಚಿಸಲಾದ ಅಂಥ ಅವಧಿಯೊಳಗೆ ಕುಲಪತಿಯು ಅವುಗಳನ್ನು ಕಾರ್ಯಗತಗೊಳಿಸತಕ್ಕದ್ದು.

(8) ಕುಲಾಧಿಪತಿಯು, ಕಾಲಕಾಲಕ್ಕೆ ಅಗತ್ಯಪಡಿಸಬಹುದಾದ ಅಂಥ ವಿವರಣ ಪಟ್ಟಿಗಳು, ತಃಖ್ತೆಗಳು, ಲೆಕ್ಕಪತ್ರಗಳು ಅಥವಾ ವಿಶ್ವವಿದ್ಯಾನಿಲಯದ ಆಡಳಿತಕ್ಕೆ ಸಂಬಂಧಪಡುವ ಇತರ ವಿವರಗಳನ್ನು ಕಾಯನಿರ್ವಾಹಕ ಪರಿಷತ್ತು ಸಲ್ಲಿಸತಕ್ಕದ್ದು.

10. ನಿರ್ದೇಶನಗಳನ್ನು ನೀಡಲು ಅಧಿಕಾರ.– ಕುಲಾಧಿಪತಿಯು, ರಾಜ್ಯ ಸರ್ಕಾರದ ಶಿಫಾರಸಿನ ಮೇಲೆ, ವಿಶ್ವವಿದ್ಯಾನಿಲಯದ ಆಡಳಿತ ಮತ್ತು ವಿದ್ಯಾವಿಷಯಕ ಕಾರ್ಯನಿರ್ವಹಣೆ ಈ ಎರಡರ ಹಿತಾಸಕ್ತಿಗಾಗಿ ಮತ್ತು ವಿಶೇಷವಾಗಿ, ಅದರ ಕ್ಯಾಂಪಸ್‌ನಲ್ಲಿ ಶಾಂತಿ ಮತ್ತು ನೆಮ್ಮದಿಯನ್ನು ಕಾಯ್ದುಕೊಂಡುಬರಲು ಹಾಗೂ ವಿಶ್ವವಿದ್ಯಾನಿಲಯದ ಸ್ವತ್ತು ಮತ್ತು ಹಣಕಾಸು ವ್ಯವಸ್ಥೆಯನ್ನು ಸಂರಕ್ಷಿಸುವುದಕ್ಕಾಗಿ ಅವಶ್ಯಕ ಅಥವಾ ಯುಕ್ತವಾಗಬಹುದಾದ ಅಂಥ ನಿರ್ದೇಶನಗಳನ್ನು ನೀಡಬಹುದು.

11. ವಿಶ್ವವಿದ್ಯಾನಿಲಯದ ಆದೇಶಗಳನ್ನು ರದ್ದುಗೊಳಿಸುವ ಅಧಿಕಾರ.– (1) ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ, ಈ ಅಧಿನಿಯಮದ ಅಥವಾ ಪರಿನಿಯಮಗಳು, ವಿನಿಯಮಗಳು ಅಥವಾ ಆರ್ಡಿನೆನ್ಸ್‌ಗಳ ಉಪಬಂಧಗಳಿಗೆ ಸುಸಂಗತವಾಗಿಲ್ಲವೆಂದು ಅಥವಾ ಅನ್ಯಥಾ ರಾಜ್ಯ ಸರ್ಕಾರದ ಕಾರ್ಯನೀತಿಗೆ ಅಸಂಗತವಾಗಿದೆಯೆಂದು ತಾನು ಅಭಿಪ್ರಾಯಪಡುವ ವಿಶ್ವವಿದ್ಯಾನಿಲಯದ ಯಾವುದೇ ಆದೇಶ, ಅಧಿಸೂಚನೆ, ನಿರ್ಣಯ ಅಥವಾ ಯಾವುವೇ ವ್ಯವಹರಣೆಗಳನ್ನು ರದ್ದುಗೊಳಿಸಬಹುದು:

ಪರಂತು, ಅಂಥ ಯಾವುದೇ ಆದೇಶವನ್ನು ಮಾಡುವುದಕ್ಕೆ ಮೊದಲು ರಾಜ್ಯ ಸರ್ಕಾರವು, ವಿಶ್ವವಿದ್ಯಾನಿಲಯಕ್ಕೆ ಪ್ರತಿಕ್ರಿಯೆ ನೀಡಲು ಒಂದು ಅವಕಾಶವನ್ನು ಕೊಡತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಿದ ಪ್ರತಿಯೊಂದು ಆದೇಶವನ್ನು, ಅದನ್ನು ಹೊರಡಿಸಿದ ತರುವಾಯ ಸಾಧ್ಯವಾದಷ್ಟು ಬೇಗನೇ ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

ಅಧ್ಯಾಯ III

ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿಕಾರಿಗಳು

12. ಪ್ರತಿಯೊಂದು ವಿಶ್ವವಿದ್ಯಾನಿಲಯದ ಅಧಿಕಾರಿಗಳು.– ಈ ಮುಂದಿನವರು ಪ್ರತಿಯೊಂದು ವಿಶ್ವವಿದ್ಯಾನಿಲಯದ ಅಧಿಕಾರಿಗಳಾಗಿರತಕ್ಕದ್ದು, ಎಂದರೆ:–

(ಎ) ಕುಲಾಧಿಪತಿ;

(ಬಿ) ಸಹ–ಕುಲಾಧಿಪತಿ;

(ಸಿ) ಕುಲಪತಿ;

(ಡಿ) ಡೀನರುಗಳು;

(ಇ) ಕುಲಸಚಿವರು;

(ಎಫ್) ಪರೀಕ್ಷಾ ನಿಯಂತ್ರಕರು;

(ಜಿ) ಹಣಕಾಸು ಅಧಿಕಾರಿ;

(ಹೆಚ್) ವಿಶ್ವವಿದ್ಯಾನಿಲಯದ ಗ್ರಂಥಪಾಲಕ;

(ಐ) ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್ತು;

(ಜೆ) ನಿರ್ದೇಶಕರು, ಶಾರೀರಿಕ ಶಿಕ್ಷಣ;

(ಕೆ) ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಲಿಯ ನಿರ್ದೇಶಕರು;

(ಎಲ್) ನಿರ್ದೇಶಕರು, ಪ್ರಾಯೋಜಿತ ಸಂಶೋಧನೆ ಮತ್ತು ಸಮಾಲೋಚನೆ;

(ಎಮ್) ವಿದ್ಯಾರ್ಥಿ ಕಲ್ಯಾಣದ ನಿರ್ದೇಶಕರು;

(ಎನ್) ವಿಶ್ವವಿದ್ಯಾನಿಲಯದ ಅಧಿಕಾರಿಗಳಾಗಬೇಕೆಂದು ಪರಿನಿಯಮಗಳ ಮೂಲಕ ಘೋಷಿಸಬಹುದಾದ ವಿಶ್ವವಿದ್ಯಾನಿಲಯದ ಅಂಥ ಇತರ ಅಧಿಕಾರಿಗಳು:

ಪರಂತು, ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾನಿಲಯ ಮತ್ತು ಮಂಡ್ಯ ಏಕಾತ್ಮಕ ಸ್ವರೂಪದ ವಿಶ್ವವಿದ್ಯಾಲಯಗಳ ಸಂದರ್ಭಗಳಲ್ಲಿ, ವಿಶ್ವವಿದ್ಯಾನಿಲಯಗಳ ಅಧಿಕಾರಿಗಳು, ಮೇಲಿನ (ಎಫ್) ಖಂಡವನ್ನು ಹೊರತುಪಡಿಸಿ, ನಿರ್ದಿಷ್ಟಪಡಿಸಿದ ಅಧಿಕಾರಿಗಳಿಗೆ ಹೆಚ್ಚುವರಿಯಾಗಿ ವಿದ್ಯಾಲಯಗಳ ನಿರ್ದೇಶಕರನ್ನು ಸಹ ಒಳಗೊಳ್ಳತಕ್ಕದ್ದು.

ವಿವರಣೆ:– ಈ ಉಪಬಂಧದ ಉದ್ದೇಶಕ್ಕಾಗಿ **"ವಿದ್ಯಾಲಯ"** ಎಂದರೆ, ಮೇಲೆ ನಿರ್ದಿಷ್ಟಪಡಿಸಲಾದಂತೆ ನಿರ್ದೇಶಕರ ಜೊತೆಗೆ ಒಟ್ಟುಗೂಡಿಸಿದ ಅಂಥವೇ ವಿಷಯಗಳಿರುವ (disciplines) ವಿಭಾಗಗಳು ಅಥವಾ ಕೇಂದ್ರಗಳು.

ಮತ್ತು ಪರಂತು, ಮಂಡ್ಯ ಏಕಾತ್ಮಕ ಸ್ವರೂಪದ ವಿಶ್ವವಿದ್ಯಾನಿಲಯ, ಮಂಡ್ಯ ಮತ್ತು ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾನಿಲಯ, ಬೆಂಗಳೂರು ಇವುಗಳ ಸಂಬಂಧದಲ್ಲಿ ಡೀನ್‌ನನ್ನು ವಿದ್ಯಾಲಯಗಳ ನಿರ್ದೇಶಕನೆಂದು ಕರೆಯತಕ್ಕದ್ದು ಮತ್ತು ವ್ಯಾಸಂಗ ವಿಭಾಗಗಳನ್ನು (faculty) ವಿದ್ಯಾಲಯಗಳೆಂದು ಕರೆಯತಕ್ಕದ್ದು.

13. ಕುಲಾಧಿಪತಿ.– (1) ಕರ್ನಾಟಕ ರಾಜ್ಯಪಾಲರು ತಮ್ಮ ಪದದ ಕಾರಣದಿಂದಾಗಿ ಪ್ರತಿಯೊಂದು ವಿಶ್ವವಿದ್ಯಾನಿಲಯದ ಕುಲಾಧಿಪತಿಯಾಗಿರತಕ್ಕದ್ದು.

(2) ಅವರು ಪ್ರತಿಯೊಂದು ವಿಶ್ವವಿದ್ಯಾನಿಲಯದ ಮುಖ್ಯಸ್ಥರಾಗಿರತಕ್ಕದ್ದು ಮತ್ತು ಉಪಸ್ಥಿತರಿದ್ದಾಗ ವಿಶ್ವವಿದ್ಯಾನಿಲಯದ ಘಟಿಕೋತ್ಸವದ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(3) ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ ಕುಲಾಧಿಪತಿಯು, ಅವಶ್ಯವಿದ್ದಾಗಲೆಲ್ಲ ನಿರ್ದಿಷ್ಟ ಉದ್ದೇಶಗಳಿಗಾಗಿ ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರದ ಸಭೆಯನ್ನು ಕರೆಯಲು ಕುಲಪತಿಗೆ ನಿರ್ದೇಶಿಸುವ ಅಧಿಕಾರವನ್ನು ಹೊಂದಿರತಕ್ಕದ್ದು ಹಾಗೂ ಕುಲಪತಿಯು ಅಂಥ ನಿರ್ದೇಶನವನ್ನು ಪಾಲಿಸತಕ್ಕದ್ದು ಮತ್ತು ಅಂಥ ಸಭೆಯ ನಡವಳಿಗಳನ್ನು ಕುಲಾಧಿಪತಿಗೆ ಕಳುಹಿಸತಕ್ಕದ್ದು.

(4) ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ ಕುಲಾಧಿಪತಿಯು, ವಿಶ್ವವಿದ್ಯಾನಿಲಯದ ವ್ಯವಹರಣೆಗಳಿಗೆ ಸಂಬಂಧಿಸಿದ ಅಂಥ ಮಾಹಿತಿ ಮತ್ತು ದಾಖಲೆಗಳನ್ನು ಕೇಳತಕ್ಕದ್ದು ಮತ್ತು ಆನಂತರ ವಿಶ್ವವಿದ್ಯಾನಿಲಯದ ಹಿತಾಸಕ್ತಿಯಲ್ಲಿ ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ನಿರ್ದೇಶನವನ್ನು ನೀಡತಕ್ಕದ್ದು ಮತ್ತು ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳು ಮತ್ತು ಅಧಿಕಾರಿಗಳು ಅಂಥ ನಿರ್ದೇಶನವನ್ನು ಪಾಲಿಸತಕ್ಕದ್ದು.

(5) ಕುಲಾಧಿಪತಿಯ ಅಭಿಪ್ರಾಯದಲ್ಲಿ ಯಾವೊಬ್ಬ ಚುನಾಯಿತ ಅಥವಾ ನಾಮನಿರ್ದೇಶಿತ ಅಥವಾ ನೇಮಕವಾದ ಅಥವಾ ಸೇರಿಸಿಕೊಂಡ (co-opted) ಸದಸ್ಯನ ನಡತೆಯು ವಿಶ್ವವಿದ್ಯಾನಿಲಯದ ಅಥವಾ ಯಾವುದೇ ಪ್ರಾಧಿಕಾರದ ಅಥವಾ ನಿಕಾಯದ ಅಥವಾ ಸಮಿತಿಯ ಸುಗಮ ನಿರ್ವಹಣೆಗೆ ಹಾನಿಕಾರಕವೆಂದು ಕಂಡುಬಂದಲ್ಲಿ, ಅಂಥ ಸದಸ್ಯನಿಗೆ ಲಿಖಿತದಲ್ಲಿ ವಿವರಣೆಯನ್ನು ನೀಡುವ ಅವಕಾಶವನ್ನು ನೀಡಿದ ನಂತರ ಮತ್ತು ಅಂಥ ವಿವರಣೆ, ಯಾವುದಾದರೂ ಇದ್ದರೇ, ಅದನ್ನು ಪರಿಗಣಿಸಿದ ತರುವಾಯ ಹಾಗೂ ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ಅವಧಿಯವರೆಗೆ ಅಂಥ ಸದಸ್ಯನನ್ನು ಹಾಗೆ ಅಮಾನತ್ತುಗೊಳಿಸುವುದು ಅಥವಾ ಅನರ್ಹಗೊಳಿಸುವುದು ಅವಶ್ಯಕವೆಂದು ಮನವರಿಕೆಯಾದಲ್ಲಿ ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ ಹಾಗೆ ಮಾಡಬಹುದು.

(6) ಕುಲಾಧಿಪತಿಯು ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ತಮಗೆ ಪ್ರದತ್ತವಾಗಬಹುದಾಂಥ ಇತರ ಅಧಿಕಾರಗಳನ್ನು ಹೊಂದಿರತಕ್ಕದ್ದು.

14. ಸಹ–ಕುಲಾಧಿಪತಿ.– (1) ಕರ್ನಾಟಕದಲ್ಲಿ ಉನ್ನತ ಶಿಕ್ಷಣದ ಪ್ರಭಾರಹೊಂದಿರುವ ಸಚಿವರು ಅವರ ಪದದ ಕಾರಣದಿಂದಾಗಿ ವಿಶ್ವವಿದ್ಯಾನಿಲಯದ ಸಹ – ಕುಲಾಧಿಪತಿಯಾಗಿರತಕ್ಕದ್ದು.

(2) ಸಹ–ಕುಲಾಧಿಪತಿಯು, ಕುಲಾಧಿಪತಿಯವರ ಗೈರುಹಾಜರಿಯಲ್ಲಿ, ವಿಶ್ವವಿದ್ಯಾನಿಲಯದ ಯಾವುದೇ ಘಟಿಕೋತ್ಸವದ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

15. ಕುಲಪತಿ.– (1) ಕುಲಪತಿಯು ವಿಶ್ವವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು.

(2) ಆತನು ಉನ್ನತ ಮಟ್ಟದ ಸಕ್ಷಮತೆ, ನಿಷ್ಠೆ, ನೈತಿಕತೆ ಮತ್ತು ಸಾಂಸ್ಥಿಕ ಬದ್ಧತೆಯನ್ನು ಹೊಂದಿರುವ ವ್ಯಕ್ತಿಯಾಗಿರತಕ್ಕದ್ದು. ಅಲ್ಲದೆ, ಕುಲಪತಿಯು ಕನಿಷ್ಠ ಇಪ್ಪತ್ತೈದು ವರ್ಷಗಳ ಬೋಧನ ಅನುಭವವನ್ನು ಹೊಂದಿರುವ ಪ್ರಸಿದ್ಧ ಶಿಕ್ಷಣ ತಜ್ಞನಾಗಿರತಕ್ಕದ್ದು, ಆ ಪೈಕಿ ಕನಿಷ್ಠ ಹತ್ತು ವರ್ಷಗಳ ಕಾಲ ಪ್ರಸಿದ್ಧ ಸಂಶೋಧನೆ ಮತ್ತು ವಿದ್ಯಾವಿಷಯಕ ಅಥವಾ ಆಡಳಿತಾತ್ಮಕ ಸಂಸ್ಥೆಯಲ್ಲಿ ಪ್ರಾಧ್ಯಾಪಕನಾಗಿ ಅಥವಾ ತತ್ಸಮಾನ ಹುದ್ದೆಯಲ್ಲಿ ಕಾರ್ಯನಿರ್ವಹಿಸಿರತಕ್ಕದ್ದು.

(3) ಕುಲಪತಿಯ ನೇಮಕಾತಿ;–

(i) ರಾಜ್ಯ ಸರ್ಕಾರವು, ಸಾಮಾನ್ಯವಾಗಿ ಸ್ಥಾನಿಕ (incumbent) ಕುಲಪತಿಯ ಪದಾವಧಿಯು ಮುಕ್ತಾಯವಾಗುವುದಕ್ಕೆ ಮೂರು ತಿಂಗಳು ಮುಂಚೆ, ವಿಶ್ವವಿದ್ಯಾನಿಲಯದ ಕುಲಾಧಿಪತಿಯ ನೇಮಕಾತಿಗಾಗಿ ಶೋಧನಾ ಮತ್ತು ಆಯ್ಕೆ ಸಮಿತಿಯನ್ನು ರಚಿಸತಕ್ಕದ್ದು;

(ii)ಶೋಧನಾ ಮತ್ತು ಆಯ್ಕೆ ಸಮಿತಿಯು, ವಿಶ್ವವಿದ್ಯಾನಿಲಯ ಕುಲಪತಿ ಅಥವಾ ರಾಷ್ಟ್ರೀಯ ಪ್ರಾಮುಖ್ಯತಾ ಸಂಸ್ಥೆಯ ನಿರ್ದೇಶಕರ ದರ್ಜೆಗಿಂತ ಕಡಿಮೆ ಇರದ, ಪ್ರತಿಯೊಬ್ಬರು ಪ್ರಸಿದ್ಧ ಶಿಕ್ಷಣತಜ್ಞರಾಗಿರುವ ಐವರು ಸದಸ್ಯರನ್ನು ಒಳಗೊಂಡಿರತಕ್ಕದ್ದು. ಇವರಲ್ಲಿ ಒಬ್ಬ ಸದಸ್ಯನನ್ನು ಕುಲಾಧಿಪತಿಯು, ಒಬ್ಬ ಸದಸ್ಯನನ್ನು ವಿಶ್ವವಿದ್ಯಾನಿಲಯ ಅನುದಾನಗಳ ಆಯೋಗವು, ಇಬ್ಬರು ಸದಸ್ಯರನ್ನು ರಾಜ್ಯ ಸರ್ಕಾರವು ಮತ್ತು ಒಬ್ಬ ಸದಸ್ಯನನ್ನು ಸಂಬಂಧಪಟ್ಟ ವಿಶ್ವವಿದ್ಯಾನಿಲಯದ ಕಾರ್ಯನಿರ್ವಾಹಕ ಪರಿಷತ್ತು ನಾಮನಿರ್ದೇಶಿಸತಕ್ಕದ್ದು. ರಾಜ್ಯ ಸರ್ಕಾರವು, ಈ ಸದಸ್ಯರ ಪೈಕಿಯಿಂದ ಒಬ್ಬನನ್ನು ಶೋಧನಾ ಮತ್ತು ಆಯ್ಕೆ ಸಮಿತಿಯ ಅಧ್ಯಕ್ಷನನ್ನಾಗಿ ನೇಮಕ ಮಾಡತಕ್ಕದ್ದು;

(iii) ಶೋಧನಾ ಮತ್ತು ಆಯ್ಕೆ ಸಮಿತಿಯ ಸಂಚಾಲಕನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ ಅಥವಾ ರಾಜ್ಯ ಸರ್ಕಾರದ ಉಪ ಕಾರ್ಯದರ್ಶಿಯ ದರ್ಜೆಗಿಂತ ಕೆಳಗಿರದ ಆತನ ನಾಮನಿರ್ದೇಶಿತನಾಗಿರತಕ್ಕದ್ದು. ಸಂಚಾಲಕನು, ಶೋಧನಾ ಮತ್ತು ಆಯ್ಕೆ ಸಮಿತಿಗೆ ವಹಿಸಿದ ಕೆಲಸದಲ್ಲಿ ಅದಕ್ಕೆ ನೆರವು ನೀಡತಕ್ಕದ್ದು ಮತ್ತು ಅದಕ್ಕಾಗಿ ಅರ್ಜಿಗಳನ್ನು ಅಹ್ವಾನಿಸಿದ ನಂತರ ಎಲ್ಲಾ ಅರ್ಹ ಅಭ್ಯರ್ಥಿಗಳ ಇಂದೀಕರಿಸಿದ ದತ್ತಾಂಶವನ್ನು ಅದರ ಮುಂದಿಡತಕ್ಕದ್ದು ಮತ್ತು ಅಂಥ ದತ್ತಾಂಶದಿಂದ ಆಯ್ದ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು:

ಪರಂತು, ಶೋಧನಾ ಮತ್ತು ಆಯ್ಕೆ ಸಮಿತಿಯ ಅಧ್ಯಕ್ಷ ಮತ್ತು ಸದಸ್ಯರು ಶೋಧನಾ ಮತ್ತು ಆಯ್ಕೆ ಸಮಿತಿಯ ಪರಿಗಣನೆಗಾಗಿ ಹೆಚ್ಚುವರಿ ವ್ಯಕ್ತಿಗಳ (ಅರ್ಜಿ ಸಲ್ಲಿಸದಿರುವಂಥ ವ್ಯಕ್ತಿಗಳನ್ನು ಸಹ) ಹೆಸರುಗಳು ಅಥವಾ ವ್ಯಕ್ತಿ ವಿವರಗಳನ್ನು ಪರಿಶೀಲನೆಗೆ ಮಂಡಿಸಲು ಸ್ವತಂತ್ರರಾಗಿರತಕ್ಕದ್ದು.

(4) ರಾಜ್ಯ ಸರ್ಕಾರದ, ವಿಶ್ವವಿದ್ಯಾನಿಲಯದ ಅಥವಾ ವಿಶ್ವವಿದ್ಯಾನಿಲಯಕ್ಕೆ ಅಥವಾ ಅದು ಮನ್ನಣೆ ನೀಡಿದ ಸಂಯೋಜಿತವಾದ ಯಾವುದೇ ಕಾಲೇಜಿನ ಅಥವಾ ಸಂಸ್ಥೆಯ ವ್ಯವಹಾರಗಳೊಂದಿಗೆ ಪ್ರಸ್ತುತ ಸಂಬಂಧವಿರುವ ಯಾವ ವ್ಯಕ್ತಿಯನ್ನೂ ಶೋಧನಾ ಮತ್ತು ಆಯ್ಕೆ ಸಮಿತಿಯ ಸದಸ್ಯನನ್ನಾಗಿ ನಾಮನಿರ್ದೇಶನ ಮಾಡತಕ್ಕದ್ದಲ್ಲ.

(5) ಶೋಧನಾ ಮತ್ತು ಆಯ್ಕೆ ಸಮಿತಿಯು, ಖ್ಯಾತ ಶಿಕ್ಷಣ ತಜ್ಞರಾದ ಮೂರು ವ್ಯಕ್ತಿಗಳ ಒಂದು ಪಟ್ಟಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಮತ್ತು ವಿವಿಧ ಬೋಧನೆಗಳ ಅಥವಾ ವಿಷಯಗಳ ಅಥವಾ ಲಿಂಗಗಳಿಗೆ ಸೇರಿದ ವ್ಯಕ್ತಿಗಳಿಗೆ ಪ್ರಾತಿನಿಧ್ಯವನ್ನು ನೀಡಲಾಗಿದೆ ಎಂಬುದನ್ನು ಸುನಿಶ್ಚಿತಗೊಳಿಸಿಕೊಳ್ಳಲು ಕಾಳಜಿ ವಹಿಸತಕ್ಕದ್ದು. ಹೆಸರುಗಳ ಪಟ್ಟಿಯನ್ನು ಅಕಾರಾದಿ ಕ್ರಮದಲ್ಲಿ ಜೋಡಿಸತಕ್ಕದ್ದು. ರಾಜ್ಯ ಸರ್ಕಾರವು ಆ ಪಟ್ಟಿಯನ್ನು ಕುಲಾಧಿಪತಿಯವರಿಗೆ ಕಳುಹಿಸತಕ್ಕದ್ದು, ಅವರು ಅರ್ಹತೆ, ಸಮದರ್ಶಿತ್ವ ಮತ್ತು ಸಾಮಾಜಿಕ ನ್ಯಾಯ ಇವುಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ರಾಜ್ಯ ಸರ್ಕಾರದ ಸಹಮತಿಯೊಡನೆ ಪಟ್ಟಿಯಿಂದ ಒಬ್ಬ ವ್ಯಕ್ತಿಯನ್ನು ವಿಶ್ವವಿದ್ಯಾನಿಲಯದ ಕುಲಪತಿಯನ್ನಾಗಿ ನೇಮಕ ಮಾಡತಕ್ಕದ್ದು:

ಪರಂತು, ವಿಜಯಪುರದಲ್ಲಿರುವ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಕುಲಪತಿಯು ಮಹಿಳೆಯಾಗಿರತಕ್ಕದ್ದು:

ಮತ್ತು ಪರಂತು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ ಕುಲಪತಿಯು ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ವಿಷಯದ ಹಿನ್ನಲೆಯುಳ್ಳ ವ್ಯಕ್ತಿಯಾಗಿರತಕ್ಕದ್ದು.

ಮತ್ತೂ ಪರಂತು, ಕುಲಾಧಿಪತಿಯವರು ಅವಶ್ಯವೆಂದು ಪರಿಗಣಿಸಿದರೆ ರಾಜ್ಯ ಸರ್ಕಾರದ ಸಹಮತಿಯೊಡನೆ ಎರಡನೆಯ ಪಟ್ಟಿಯನ್ನು ತರಿಸಿಕೊಳ್ಳಬಹುದು ಹಾಗೂ ಶೋಧನಾ ಮತ್ತು ಆಯ್ಕೆ ಸಮಿತಿಯು ಮೂವರು ಹೊಸ ಸದಸ್ಯರ ಹೆಸರುಗಳೊಂದಿಗೆ ಎರಡನೆಯ ಪಟ್ಟಿಯನ್ನು ಸಲ್ಲಿಸತಕ್ಕದ್ದು ಹಾಗೂ ಅದು ಅಂತಿಮವಾಗಿರತಕ್ಕದ್ದು.

ಅಲ್ಲದೇ ಪರಂತು, ಈ ಅಧಿನಿಯಮದ ಅಡಿಯಲ್ಲಿ ಸ್ಥಾಪಿತವಾದ ಹೊಸ ವಿಶ್ವವಿದ್ಯಾನಿಲಯದ ಮೊದಲ ಕುಲಪತಿಯನ್ನು, ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದ ಅಂಥ ನಿಬಂಧನೆ ಮತ್ತು ಷರತ್ತುಗಳಿಗೆ ಒಳಪಟ್ಟು ಅದು ನೇಮಕ ಮಾಡತಕ್ಕದ್ದು.

(6) ಕುಲಪತಿಯಾಗಿ ನೇಮಕವಾಗಬೇಕಾದ ಒಬ್ಬ ವ್ಯಕ್ತಿಯು ಕುಲಪತಿಯಾಗಿ ನಾಲ್ಕು ವರ್ಷಗಳ ಸ್ಪಷ್ಟ ಅವಧಿಯನ್ನು ಹೊಂದಿರತಕ್ಕದ್ದು ಮತ್ತು ಅರವತ್ತೇಳು ವರ್ಷ ವಯಸ್ಸನ್ನು ತಲುಪಿದ ನಂತರ ನಿವೃತ್ತಿ ಹೊಂದತಕ್ಕದ್ದು.

(7) ಕುಲಪತಿಯವರು, ಕುಲಾಧಿಪತಿಯವರ ಮತ್ತು ರಾಜ್ಯ ಸರ್ಕಾರದ ಇಷ್ಟಪರ್ಯಂತ ಮತ್ತು ನಾಲ್ಕು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು. ಅವರು ವಿಶ್ವವಿದ್ಯಾನಿಲಯದಲ್ಲಿ ಎರಡನೇ ಅವಧಿಗೆ ಪುನರ್‌ನೇಮಕಕ್ಕೆ ಅರ್ಹರಾಗಿರತಕ್ಕದ್ದಲ್ಲ.

(8) ಕುಲಪತಿಯನ್ನು, ಈ ಅಧಿನಿಯಮದ ಉಪಬಂಧಗಳನ್ನು ಉದ್ದೇಶಪೂರ್ವಕವಾಗಿ ಬಿಟ್ಟುಬಿಡುವ ಅಥವಾ ನೆರವೇರಿಸಲು ನಿರಾಕರಿಸುವ ಅಥವಾ ಅವನಲ್ಲಿ ನಿಹಿತವಾದ ಅಧಿಕಾರಗಳನ್ನು ದುರುಪಯೋಗ ಪಡಿಸಿಕೊಂಡ ಕಾರಣದ ಮೇಲೆ ಮತ್ತು ಕುಲಾಧಿಪತಿಯು, (9)ನೇ ಉಪ ಪ್ರಕರಣದ ಅಡಿಯಲ್ಲಿ ಅವರು ಆದೇಶಿಸಿದ ವಿಚಾರಣೆಯ ವರದಿಯನ್ನು ಪರಿಗಣಿಸಿದ ನಂತರ ಕುಲಾಧಿಪತಿಯು ಹೊರಡಿಸಿದ ಆದೇಶದ ಹೊರತು, ಪದದಿಂದ ತೆಗೆದುಹಾಕತಕ್ಕದ್ದಲ್ಲ.

(9) ಈ ಉಪಪ್ರಕರಣದ ಅಡಿಯಲ್ಲಿ ಒಂದು ವಿಚಾರಣೆಯನ್ನು ನಡೆಸುವ ಉದ್ದೇಶಕ್ಕಾಗಿ, ಕುಲಾಧಿಪತಿಯವರು ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ ಉಚ್ಚ ನ್ಯಾಯಾಲಯದ ಅಥವಾ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿರುವ ಅಥವಾ ಆಗಿದ್ದ ವ್ಯಕ್ತಿಯನ್ನು ನೇಮಕ ಮಾಡತಕ್ಕದ್ದು. ವಿಚಾರಣಾ ಪ್ರಾಧಿಕಾರವು, ಕುಲಪತಿಯು ಮನವಿಯನ್ನು ಸಲ್ಲಿಸಲು ಅವಕಾಶ ನೀಡಿದ ನಂತರ ವಿಚಾರಣೆ ನಡೆಸತಕ್ಕದ್ದು ಮತ್ತು ತನ್ನ ನಿರ್ಣಯಗಳನ್ನು ಮತ್ತು ಶಿಫಾರಸ್ಸುಗಳನ್ನು ಕುಲಾಧಿಪತಿಗೆ ಸಲ್ಲಿಸತಕ್ಕದ್ದು. ಅದನ್ನು ಪರಿಗಣಿಸಿದ ನಂತರ, ಮತ್ತು ರಾಜ್ಯ ಸರ್ಕಾರದ ಸಹಮತಿಯೊಂದಿಗೆ ಈ ವಿಷಯದಲ್ಲಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು.

(10) ಕುಲಪತಿಯ ಉಪಲಬ್ಧಿಗಳು ಮತ್ತು ಇತರ ಸೇವಾ ಷರತ್ತುಗಳನ್ನು ಕಾಲಕಾಲಕ್ಕೆ ಯುಜಿಸಿಯು ವಿಧಿಸಬಹುದಾಂಥ ಷರತ್ತುಗಳಿಗೆ ಒಳಪಟ್ಟು ಕುಲಾಧಿಪತಿಯು ನಿರ್ಧರಿಸತಕ್ಕದ್ದು:

ಪರಂತು, ರಾಜ್ಯ ವಿಶ್ವವಿದ್ಯಾನಿಲಯಗಳಲ್ಲಿ ಕುಲಪತಿಗಳ ಉಪಲಬ್ಧಿಗಳು ಏಕರೂಪದ್ದಾಗಿರತಕ್ಕದ್ದು.

(11) ನಿವೃತ್ತಿಹೊಂದಿದ ಒಬ್ಬ ವ್ಯಕ್ತಿಯು ಕುಲಪತಿಯಾಗಿ ನೇಮಕಗೊಂಡರೆ, ಆತನು ಕುಲಪತಿಯಾಗಿ ನೇಮಕಗೊಂಡ ಮೇಲೆ ಉಪಲಬ್ಧಿಗಳು ಸೇರಿದಂತೆ ಸೇವಾ ನಿಬಂಧನೆ ಮತ್ತು ಷರತ್ತುಗಳು ಕುಲಾಧಿಪತಿಯು ನಿರ್ಣಯಿಸುವಂತಿರತಕ್ಕದ್ದು.

(12) ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವ ಒಬ್ಬ ಪ್ರಾಧ್ಯಾಪಕನು ಕುಲಪತಿಯಾಗಿ ನೇಮಕಗೊಂಡರೆ, ಅತನ ನೇಮಕಾತಿಗೆ ಮುಂಚೆ ಹೊಂದಿದ್ದ ಹುದ್ದೆಯಲ್ಲಿನ ಆತನ ಧಾರಣಾಧಿಕಾರವನ್ನು ಉಳಿಸಿಕೊಳ್ಳತಕ್ಕದ್ದು.

16. ಕುಲಪತಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು.– (1) ವಿಶ್ವವಿದ್ಯಾನಿಲಯದ ಪ್ರಧಾನ ಕಾರ್ಯನಿರ್ವಾಹಕ ಮತ್ತು ವಿದ್ಯಾವಿಷಯಕ ಅಧಿಕಾರಿಯಾಗಿ ಕುಲಪತಿಯು ವಿಶ್ವವಿದ್ಯಾನಿಲಯದ ವ್ಯವಹಾರಗಳ ಮೇಲೆ ಸಾಮಾನ್ಯ ನಿಯಂತ್ರಣವನ್ನು ಹೊಂದಿರತಕ್ಕದ್ದು. ಆತನು ವಿಶ್ವವಿದ್ಯಾನಿಲಯದಲ್ಲಿ ಶಿಸ್ತುಪಾಲನೆಗೆ ಅವಶ್ಯವಾದ ಎಲ್ಲ ಅಧಿಕಾರಗಳನ್ನು ಚಲಾಯಿಸತಕ್ಕದ್ದು:

ಪರಂತು, ಪ್ರಸ್ತುತ ವಿಶ್ವವಿದ್ಯಾನಿಲಯದ ಕುಲಪತಿಯು ಸಾಮಾನ್ಯವಾಗಿ ವಿಶ್ವವಿದ್ಯಾನಿಲಯ ಪ್ರದೇಶದೊಳಗೆ ಸ್ಥಾಪಿತವಾದ ಮಹರಾಣಿ ಕ್ಲಸ್ಟರ್ ವಿಶ್ವವಿದ್ಯಾನಿಲಯ ಮತ್ತು ಮಂಡ್ಯ ಏಕಾತ್ಮಕ ಸ್ವರೂಪದ ವಿಶ್ವವಿದ್ಯಾನಿಲಯದ ಪದನಿಮಿತ್ತ ಕುಲಪತಿಯಾಗಿರತಕ್ಕದ್ದು.

(2) ಕುಲಪತಿಯು, ಕಾಯನಿರ್ವಾಹಕ ಪರಿಷತ್ತು, ವಿದ್ಯಾವಿಷಯಕ ಪರಿಷತ್ತು ಮತ್ತು ಹಣಕಾಸು ಸಮಿತಿಯ ಪದನಿಮಿತ್ತ ಅಧ್ಯಕ್ಷನಾಗಿರತಕ್ಕದ್ದು. ಅತನು ಕುಲಾಧಿಪತಿಯ ಮತ್ತು ಸಹ-ಕುಲಾಧಿಪತಿಯ ಗೈರುಹಾಜರಿಯಲ್ಲಿ ಘಟಿಕೋತ್ಸವದ ಅಧ್ಯಕ್ಷತೆಯನ್ನು ವಹಿಸತಕ್ಕದ್ದು. ಆತನು ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಅಥವಾ ನಿಕಾಯಗಳ ಸಭೆಗಳ ಅಧ್ಯಕ್ಷತೆಯನ್ನು ವಹಿಸತಕ್ಕದ್ದು ಮತ್ತು ಮತ ಚಲಾಯಿಸಲು ಹಕ್ಕುಳ್ಳವನಾಗಿರತಕ್ಕದ್ದು.

(3) ಆತನು ಈ ಅಧಿನಿಯಮದ ಮತ್ತು ವಿಶ್ವವಿದ್ಯಾನಿಲಯದ ಪರಿನಿಯಮಗಳ, ಆರ್ಡಿನೆನ್ಸ್‌ಗಳ ಮತ್ತು ವಿನಿಯಮಗಳ ಎಲ್ಲಾ ಉಪಬಂಧಗಳ ಪಾಲನೆಯನ್ನು ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ಆ ಉದ್ದೇಶಕ್ಕಾಗಿ ಅವಶ್ಯವಾದ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು.

(4) ಆತನು ತಾನಾಗಿಯೇ ಆಗಲಿ ಅಥವಾ ತನ್ನಿಂದ ಲಿಖಿತದಲ್ಲಿ ಅಧಿಕೃತನಾದ ವಿಶ್ವವಿದ್ಯಾನಿಲಯದ ಯಾವೊಬ್ಬ ಅಧಿಕಾರಿಯ ಮೂಲಕವೇ ಆಗಲಿ, ಕಾಯನಿರ್ವಾಹಕ ಪರಿಷತ್ತು, ವಿದ್ಯಾವಿಷಯಕ ಪರಿಷತ್ತು ಮತ್ತು ಹಣಕಾಸು ಸಮಿತಿಯ ಸಭೆಗಳನ್ನು ಕರೆಯಬಹುದು ಮತ್ತು ಈ ಪ್ರಾಧಿಕಾರಗಳ ತೀರ್ಮಾನಗಳನ್ನು ಜಾರಿಗೆ ತರಲು ಮತ್ತು ಕಾರ್ಯಗತಗೊಳಿಸಲು ಅವಶ್ಯವಾಗಬಹುದಾದಂಥ ಎಲ್ಲ ಕಾರ್ಯಗಳನ್ನು ನೆರವೇರಿಸತಕ್ಕದ್ದು.

(5) ಕುಲಪತಿಯು, ತ್ವರಿತ ಕ್ರಮವು ಅಗತ್ಯವೆಂದು ತಾನು ಅಭಿಪ್ರಾಯಪಡುವ ಯಾವುದೇ ತುರ್ತು ಸಂದರ್ಭದಲ್ಲಿ, ಆತನು ಅವಶ್ಯವೆಂದು ಭಾವಿಸುವಂಥ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಆ ತರುವಾಯ ಅತಿ ಶೀಘ್ರ ಸಮಯದಲ್ಲಿ ಸಾಮಾನ್ಯವಾಗಿ ಆ ವಿಷಯಕ್ಕೆ ಸಂಬಂಧಿಸಿದಂತೆ ವ್ಯವಹರಿಸುವ ಅಂಥ ಪ್ರಾಧಿಕಾರಕ್ಕೆ ಅಥವಾ ನಿಕಾಯಕ್ಕೆ ತೆಗೆದುಕೊಂಡ ಕ್ರಮದ ಬಗ್ಗೆ ವರದಿ ಮಾಡತಕ್ಕದ್ದು:

ಪರಂತು, ಕುಲಪತಿಯು ತೆಗೆದುಕೊಂಡ ಕ್ರಮವನ್ನು ಸಂಬಂಧಪಟ್ಟ ಪ್ರಾಧಿಕಾರ ಅಥವಾ ನಿಕಾಯವು ಅನುಮೋದಿಸದಿದ್ದರೆ, ಆತನು ಆ ವಿಷಯವನ್ನು ಕುಲಾಧಿಪತಿಗೆ ಒಪ್ಪಿಸಬಹುದು, ಆ ಬಗ್ಗೆ ಅವರ ತೀರ್ಮಾನವೇ ಅಂತಿಮವಾಗಿರತಕ್ಕದ್ದು:

ಮತ್ತು ಪರಂತು, ಈ ಉಪಪ್ರಕರಣದ ಅಡಿಯಲ್ಲಿ ಕುಲಪತಿಯ ವರದಿಯ ಆಧಾರದ ಮೇಲೆ ಪ್ರಾಧಿಕಾರ ಅಥವಾ ನಿಕಾಯವು ತೆಗೆದುಕೊಂಡ ತೀರ್ಮಾನದಿಂದ ಬಾಧಿತನಾದ ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವ ಯಾವೊಬ್ಬ ವ್ಯಕ್ತಿಯು, ಆತನಿಗೆ ತೀರ್ಮಾನವನ್ನು ತಿಳಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಕುಲಾಧಿಪತಿಯ ಮುಂದೆ ಅಪೀಲು ಹೂಡಬಹುದು ಮತ್ತು ಅಂಥ ಅಪೀಲಿನ ಮೇಲೆ ಕುಲಾಧಿಪತಿಯ ತೀರ್ಮಾನವೇ ಅಂತಿಮವಾಗಿರತಕ್ಕದ್ದು:

ಮತ್ತೂ ಪರಂತು, ಈ ಉಪಪ್ರಕರಣದ ಅಡಿಯಲ್ಲಿ ನಿಹಿತವಾದ ಅಧಿಕಾರಗಳನ್ನು ವಿಶ್ವವಿದ್ಯಾನಿಲಯದ ನೌಕರರ ವೇತನ ಶ್ರೇಣಿಯನ್ನು ಪರಿಷ್ಕರಿಸಲು ಅಥವಾ ಕಾಲೇಜಿಗೆ ಅಥವಾ ಶಿಕ್ಷಣ ವ್ಯಾಸಂಗ ಕ್ರಮಕ್ಕೆ ಸಂಯೋಜನೆ ಮಂಜೂರು ಮಾಡಲು ಚಲಾಯಿಸತಕ್ಕದ್ದಲ್ಲ ಮತ್ತು ಈ ಉಪ ಪ್ರಕರಣದ ಅಡಿಯಲ್ಲಿ ಅಧಿಕಾರಗಳನ್ನು ಚಲಾಯಿಸಿ ಪರಿನಿಯಮಗಳು ಅಥವಾ ವಿನಿಯಮಗಳನ್ನು ರಚಿಸಿದರೆ, ಅವು ಈ ಅಧಿನಿಯಮದ ಸೂಕ್ತ ಉಪಬಂಧಗಳ ಅಡಿಯಲ್ಲಿ ಕುಲಾಧಿಪತಿಯ ಅನುಮೋದನೆಗೆ ಒಳಪಟ್ಟಿರತಕ್ಕದ್ದು ಮತ್ತು ಆರ್ಡಿನೆನ್ಸ್‌ಗಳನ್ನು ರಚಿಸಿದ್ದರೆ, ಅವುಗಳನ್ನು ಈ ಅಧಿನಿಯಮದ ಅನುಸಾರವಾಗಿ ಕುಲಾಧಿಪತಿಯ ಅನುಮೋದನೆಗೆ ಸಲ್ಲಿಸತಕ್ಕದ್ದು.

(6) ಕುಲಪತಿಯು, ವಿಶ್ವವಿದ್ಯಾನಿಲಯದ ಪರಿನಿಯಮಗಳು, ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳ ಮೂಲಕ ಉಪಬಂಧಿಸಬಹುದಾದ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಇತರ ಕರ್ತವ್ಯಗಳನ್ನು ಹಾಗೂ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

17. ಕುಲಪತಿಯ ಹುದ್ದೆಯು ಖಾಲಿ ಇರುವ ಕಾಲದಲ್ಲಿ ಕಾರ್ಯವ್ಯವಸ್ಥೆ.– ರಜೆ, ಅನಾರೋಗ್ಯ ಅಥವಾ ಕುಲಪತಿಯ ಪದದಲ್ಲಿನ ಖಾಲಿ ಸ್ಥಾನವನ್ನು ಭರ್ತಿ ಮಾಡದೆ ಉಳಿದ ಕಾರಣದಿಂದಾಗಿ ಕುಲಪತಿಯ ತಾತ್ಕಾಲಿಕ ಗೈರುಹಾಜರಿಯ ಅವಧಿಯಲ್ಲಿ, ಕುಲಾಧಿಪತಿಯು, ಸರ್ಕಾರದೊಂದಿಗೆ ಸಮಾಲೋಚಿಸಿ, ಖಾಯಂ ಏರ್ಪಾಡುಗಳನ್ನು ಮಾಡುವವರಿಗೆ, ಕುಲಪತಿಯ ಕರ್ತವ್ಯಗಳನ್ನು ನಿರ್ವಹಿಸುವುದಕ್ಕಾಗಿ ರಾಜ್ಯದಲ್ಲಿನ ಮತ್ತೊಂದು ವಿಶ್ವವಿದ್ಯಾನಿಲಯದಲ್ಲಿನ ಯಾವೊಬ್ಬ ಕುಲಪತಿಯನ್ನು ಹೆಚ್ಚಿನ ಪ್ರಭಾರದಲ್ಲಿ ನಿಯೋಜಿಸಬಹುದು.

18. ಡೀನ್.– ಪ್ರತಿಯೊಬ್ಬ ಡೀನ್ ಸಂಬಂಧಪಟ್ಟ ವ್ಯಾಸಂಗ ವಿಭಾಗದ ಮುಖ್ಯ ಶೈಕ್ಷಣಿಕ ಅಧಿಕಾರಿಯಾಗಿರತಕ್ಕದ್ದು. ಆತನನ್ನು ಈ ಮುಂದಿನಂತೆ ನೇಮಕ ಮಾಡತಕ್ಕದ್ದು:–

(1) ಜ್ಯೇಷ್ಠತೆಯ ಅನುಸಾರ ಮತ್ತು ಪರಿನಿಯಮಗಳ ಅನುಸಾರವಾಗಿ ಪ್ರತಿಯೊಂದು ವ್ಯಾಸಂಗ ವಿಭಾಗದ ಒಬ್ಬ ಪ್ರಾಧ್ಯಾಪಕನನ್ನು ಸರದಿಯ ಪ್ರಕಾರ ಎರಡು ವರ್ಷಗಳ ಅವಧಿಗೆ ವ್ಯಾಸಂಗ ವಿಭಾಗದ ಡೀನ್ ಆಗಿ ವಿಶ್ವವಿದ್ಯಾನಿಲಯದ ಕುಲಪತಿಯು ನೇಮಕ ಮಾಡತಕ್ಕದ್ದು:

ಪರಂತು, ಯಾವುದೇ ವ್ಯಾಸಂಗ ವಿಭಾಗದಲ್ಲಿ ಯಾವೊಬ್ಬ ಪ್ರಾಧ್ಯಾಪಕನು ಇಲ್ಲದಿದ್ದರೆ, ಆಗ ವ್ಯಾಸಂಗ ವಿಭಾಗದ ಅತ್ಯಂತ ಹಿರಿಯ ಸಹ–ಪ್ರಾಧ್ಯಾಪಕನನ್ನು ಡೀನ್ ಆಗಿ ಸಂಬಂಧಪಟ್ಟ ಕುಲಪತಿಯು ನೇಮಕಮಾಡಬಹುದು:

ಮತ್ತು ಪರಂತು, ಯಾವುದೇ ವ್ಯಾಸಂಗ ವಿಭಾಗದಲ್ಲಿ ಯಾವೊಬ್ಬ ಪ್ರಾಧ್ಯಾಪಕ, ಸಹ ಪ್ರಾಧ್ಯಾಪಕ ಅಥವಾ ರೀಡರ್ ಇಲ್ಲದಿದ್ದಲ್ಲಿ, ಯಾವೊಬ್ಬ ಇತರ ಪ್ರಾಧ್ಯಾಪಕನನ್ನು ಡೀನ್ ಆಗಿ ಸಂಬಂಧಪಟ್ಟ ಕುಲಪತಿಯು ನೇಮಕಮಾಡಬಹುದು:

ಮತ್ತು ಪರಂತು, ಒಂದು ವ್ಯಾಸಂಗ ವಿಭಾಗದಲ್ಲಿ ಡೀನ್ ಆಗಿ ಕಾರ್ಯನಿರ್ವಹಿಸಲು ಆ ವ್ಯಾಸಂಗ ವಿಭಾಗದಲ್ಲಿ ಯಾವ ವ್ಯಕ್ತಿಯೂ ದೊರೆಯದಿದ್ದಲ್ಲಿ ಅಥವಾ ವಿಶ್ವವಿದ್ಯಾನಿಲಯವು ಯಾವುದೇ ವ್ಯಾಸಂಗ ವಿಭಾಗಕ್ಕೆ ಅಂಥ ಅಧ್ಯಯನಗಳ ವಿಭಾಗವನ್ನು ಹೊಂದಿಲ್ಲದಿದ್ದರೆ, ಆಗ, ಯಾವುದೇ ಸಂಯೋಜಿತ ಕಾಲೇಜಿನ ಅಧ್ಯಯನದ ವಿಭಾಗಗಳಲ್ಲಿ ಇರುವ ಅಂಥ ಪ್ರಾಧ್ಯಾಪಕನನ್ನು ವ್ಯಾಸಂಗ ವಿಭಾಗದ ಡೀನ್‌ಆಗಿ ಕಾರ್ಯನಿರ್ವಹಿಸಲು ಜ್ಯೇಷ್ಠತೆಯ ಆಧಾರದ ಮೇಲೆ ಸಂಬಂಧಪಟ್ಟ ಕುಲಪತಿಯು ನೇಮಕ ಮಾಡಬಹುದು.

(2) ವಿಶ್ವವಿದ್ಯಾನಿಲಯದ ಸಂಬಂಧಪಟ್ಟ ವ್ಯಾಸಂಗ ವಿಭಾಗದ ಸಭೆಗಳ ಅಧ್ಯಕ್ಷತೆಯನ್ನು ಡೀನ್ ಅವರು ವಹಿಸತಕ್ಕದ್ದು.

(3) ಪರಿನಿಯಮಗಳು ಅಥವಾ ಆರ್ಡಿನೆನ್ಸ್‌ಗಳ ಮೂಲಕ ನಿಯಮಿಸಬಹುದಾದ ಅಂಥ ಇತರ ಅಧಿಕಾರಗಳನ್ನು ಡೀನ್ ಅವರು ಚಲಾಯಿಸತಕ್ಕದ್ದು ಮತ್ತು ಅಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

19. ಕುಲಸಚಿವ.– (1) ಅಖಿಲ ಭಾರತ ಸೇವೆಗಳು ಅಥವಾ ಕರ್ನಾಟಕ ಆಡಳಿತ ಸೇವೆಗಳಿಗೆ (ಕೆಎಎಸ್) (ಹಿರಿಯ ವೇತನ ಶ್ರೇಣಿ ಮತ್ತು ಮೇಲ್ಪಟ್ಟು) ಸೇರಿದ ಅಧಿಕಾರಿಗಳ ಪೈಕಿಯಿಂದ ಒಬ್ಬರನ್ನು ಕುಲಸಚಿವನನ್ನಾಗಿ ರಾಜ್ಯ ಸರ್ಕಾರವು ನೇಮಕ ಮಾಡತಕ್ಕದ್ದು.

(2) ಕುಲಸಚಿವನು, ಕಾಯನಿರ್ವಾಹಕ ಪರಿಷತ್ತು ಮತ್ತು ವಿದ್ಯಾವಿಷಯಕ ಪರಿಷತ್ತಿನ ಪದನಿಮಿತ್ತ ಸದಸ್ಯ – ಕಾರ್ಯದರ್ಶಿಯಾಗಿರತಕ್ಕದ್ದು ಮತ್ತು ಸಂಬಂಧಪಟ್ಟ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿಯ ಸದಸ್ಯನಾಗಿರತಕ್ಕದ್ದು.

(3) ಈ ಮುಂದಿನವುಗಳು ಕುಲಸಚಿವನ ಕರ್ತವ್ಯಗಳಾಗಿರತಕ್ಕದ್ದು,–

(i) ಕುಲಪತಿಯು ಅಥವಾ ಕಾರ್ಯನಿರ್ವಾಹಕ ಪರಿಷತ್ತು ಆತನ ವಶಕ್ಕೆ ನೀಡಿದ ಸಂಬಂಧಪಟ್ಟ ವಿಶ್ವವಿದ್ಯಾನಿಲಯದ ದಾಖಲೆಗಳ, ಸಾಮಾನ್ಯ ಮೊಹರಿನ ಮತ್ತು ಇತರ ಸ್ವತ್ತಿನ ಅಭಿರಕ್ಷಕನಾಗಿರುವುದು;

(ii) ಕಾಯನಿರ್ವಾಹಕ ಪರಿಷತ್ತು, ವಿದ್ಯಾವಿಷಯಕ ಪರಿಷತ್ತಿನ ಅಥವಾ ವ್ಯಾಸಂಗ ವಿಭಾಗಗಳ, ಅಧ್ಯಯನ ಮಂಡಲಿಗಳ ಮತ್ತು ಸಂಬಂಧಪಟ್ಟ ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರ ಅಥವಾ ನಿಕಾಯದ

ಸಭೆಗಳನ್ನು ಕರೆಯುವ ನೋಟೀಸುಗಳನ್ನು ಹೊರಡಿಸುವುದು ಮತ್ತು ಅಂಥ ಎಲ್ಲ ಸಭೆಗಳ ನಡವಳಿಗಳನ್ನು ಇಡುವುದು;

(iii) ಆತನು ಕಾಯದರ್ಶಿಯಾಗಿರುವ ಪ್ರಾಧಿಕಾರಗಳ ಅಥವಾ ಮಂಡಲಿಗಳ ಅಧಿಕೃತ ಪತ್ರವ್ಯವಹಾರವನ್ನು ನಡೆಸುವುದು;

(iv) ಸಂಬಂಧಪಟ್ಟ ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಅಥವಾ ಮಂಡಲಿಗಳ ಸಭೆಗಳ ಕಾರ್ಯಸೂಚಿಯ ಪ್ರತಿಗಳನ್ನು, ಅವುಗಳನ್ನು ಹೊರಡಿಸಿದ ಕೂಡಲೇ, ಮತ್ತು ಸಭೆಗಳನ್ನು ನಡೆಸಿದ ಒಂದು ತಿಂಗಳೊಳಗಾಗಿ ಅವುಗಳ ನಡವಳಿಗಳನ್ನು ಕುಲಾಧಿಪತಿಗೆ ಮತ್ತು ರಾಜ್ಯ ಸರ್ಕಾರಕ್ಕೆ ಒದಗಿಸುವುದು;

(4) ಕುಲಸಚಿವನು ಆರ್ಡಿನೆನ್ಸ್‌ಗಳು ಅಥವಾ ವಿನಿಯಮಗಳು ಉಪಬಂಧಿಸಬಹುದಾದ ಹಾಗೂ ಕುಲಪತಿಯು ಕಾಲಕಾಲಕ್ಕೆ ಆತನಿಗೆ ಹಂಚಿಕೆ ಮಾಡಬಹುದಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಇತರ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

(5) ಕುಲಸಚಿವನಿಗೆ ವಿಶ್ವವಿದ್ಯಾನಿಲಯದ ಕಾರ್ಯಚಟುವಟಿಕೆಗಳ ಗಾತ್ರ ಮತ್ತು ಪ್ರಮಾಣವನ್ನಾಧರಿಸಿ ಉಪ ಮತ್ತು ಸಹಾಯಕ ಕುಲಸಚಿವನ ಮಟ್ಟದ ಒಬ್ಬ ಅಥವಾ ಹೆಚ್ಚು ವ್ಯಕ್ತಿಗಳು ನೆರವು ನೀಡಬಹುದು.

20. ಪರೀಕ್ಷಾ ನಿಯಂತ್ರಕ.– (1) ವಿಶ್ವವಿದ್ಯಾನಿಲಯದ ಅಧ್ಯಯನಗಳ ವಿಭಾಗಗಲ್ಲಿ ಅಥವಾ ಸಂಯೋಜಿತ ಅಥವಾ ಘಟಕ ಕಾಲೇಜುಗಳಲ್ಲಿ ಪ್ರಾಧ್ಯಾಪಕರ ಹುದ್ದೆಯಲ್ಲಿ ಕನಿಷ್ಠ ಐದು ವರ್ಷಗಳ ಅನುಭವವನ್ನು ಹೊಂದಿರುವ ಪ್ರಾಧ್ಯಾಪಕರ ಅಥವಾ ವಿಶ್ವವಿದ್ಯಾನಿಲಯದ ಸಂಯೋಜಿತ ಅಥವಾ ಘಟಕ ಕಾಲೇಜುಗಳ ಪ್ರಾಂಶುಪಾಲರ ಅಥವಾ ಹಿರಿಯ ಶ್ರೇಣಿಯ ಕರ್ನಾಟಕ ಆಡಳಿತ ಸೇವೆಗಳಿಗೆ (ಕೆಎಎಸ್) ಸೇರಿದ ಅಧಿಕಾರಿಗಳ ಪೈಕಿಯಿಂದ ಕುಲಪತಿಯು ಶಿಫಾರಸು ಮಾಡಿದ ಮೂವರು ಸೂಕ್ತ ವ್ಯಕ್ತಿಗಳಿಗಿಂತ ಕಡಿಮೆ ಇರದ ಪಟ್ಟಿಯಿಂದ ಒಬ್ಬನನ್ನು ವಿಶ್ವವಿದ್ಯಾನಿಲಯದ ಕಾಯನಿರ್ವಾಹಕ ಪರಿಷತ್ತು ಎರಡು ವರ್ಷಗಳ ಅವಧಿಗಾಗಿ ಪರೀಕ್ಷಾ ನಿಯಂತ್ರಕನನ್ನಾಗಿ ನೇಮಕ ಮಾಡತಕ್ಕದ್ದು.

(2) ಪರೀಕ್ಷಾ ನಿಯಂತ್ರಕನು ಸಂಬಂಧಪಟ್ಟ ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಪರಿಷತ್ತಿನ ಸದಸ್ಯನಾಗಿರತಕ್ಕದ್ದು. ಆತನನ್ನು ಅಗತ್ಯವಿದ್ದಾಗಲೆಲ್ಲ ಕಾಯನಿರ್ವಾಹಕ ಪರಿಷತ್ತಿನ ಮತ್ತು ಹಣಕಾಸು ಸಮಿತಿಯ ಸಭೆಗಳಿಗೆ ಆಹ್ವಾನಿಸಬಹುದು.

(3) ಪರೀಕ್ಷಾ ನಿಯಂತ್ರಕನು ಪರೀಕ್ಷಾ ನಿರ್ವಹಣೆಯ ಮತ್ತು ಅದಕ್ಕೆ ಪ್ರಾಸಂಗಿಕವಾದ ಹಾಗೂ ಅದಕ್ಕೆ ಪೂರಕವಾಗಿರುವ ಎಲ್ಲಾ ಇತರ ವಿಷಯಗಳ ಪ್ರಭಾರಿಯಾಗಿರತಕ್ಕದ್ದು ಮತ್ತು ಪರಿನಿಯಮಗಳು ಅಥವಾ ಆರ್ಡಿನೆನ್ಸಗಳ ಮೂಲಕ ಉಪಬಂಧಿಸಬಹುದಾದ ಅಥವಾ ಕುಲಪತಿಯು ಆತನಿಗೆ ಹಂಚಿಕೆ ಮಾಡಬಹುದಾದ ಅಂಥ ಇತರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

(4) ಪರೀಕ್ಷಾ ನಿಯಂತ್ರಕನಿಗೆ ವಿಶ್ವವಿದ್ಯಾನಿಲಯದ ಕಾರ್ಯ ಚಟುವಟಿಕೆಗಳ ಗಾತ್ರ ಮತ್ತು ಪ್ರಮಾಣವನ್ನಾಧರಿಸಿ ಉಪ ಮತ್ತು ಸಹಾಯಕ ಪರೀಕ್ಷಾ ನಿಯಂತ್ರಕನ ಮಟ್ಟದ ಒಬ್ಬ ಅಥವಾ ಹೆಚ್ಚು ವ್ಯಕ್ತಿಗಳು ನೆರವು ನೀಡಬಹುದು.

21. ಹಣಕಾಸು ಅಧಿಕಾರಿ.– (1) ಹಣಕಾಸು ಅಧಿಕಾರಿಯು, ಲೆಕ್ಕಪರಿಶೋಧನೆ, ಲೆಕ್ಕಪತ್ರ ಮತ್ತು ಹಣಕಾಸು ಆಡಳಿತದಲ್ಲಿ ಅನುಭವವಿರುವ ರಾಜ್ಯ ಲೆಕ್ಕಪತ್ರಗಳ ಇಲಾಖೆಯ ಜಂಟಿ ಅಥವಾ ಉಪ ನಿಯಂತ್ರಕ ಕೇಡರ್‌ನಲ್ಲಿನ ಅಥವಾ ಡೆಪುಟಿ ಅಕೌಂಟೆಂಟ್ ಜನರಲ್ ಈ ಕೇಡರಿನ ಅಧಿಕಾರಿಗಳ ಪೈಕಿಯಿಂದ ರಾಜ್ಯ ಸರ್ಕಾರವು ನೇಮಕ ಮಾಡಿದ ವಿಶ್ವವಿದ್ಯಾನಿಲಯದ ಒಬ್ಬ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು.

(2) ಹಣಕಾಸು ಅಧಿಕಾರಿಯ ನೇಮಕದ ಪದಾವಧಿಯು ಮೂರು ವರ್ಷಗಳಾಗಿರತಕ್ಕದ್ದು ಮತ್ತು ಹಣಕಾಸು ಅಧಿಕಾರಿಯ ಉಪಲಬ್ಧಿಗಳು ಹಾಗೂ ನೇಮಕಾತಿಯ ಇತರ ನಿಬಂಧನೆಗಳು ಮತ್ತು ಷರತ್ತುಗಳು ಪರಿನಿಯಮಗಳಲ್ಲಿ ಉಪಬಂಧಿಸಬಹುದಾದಂತೆ ಇರತಕ್ಕದ್ದು.

(3) ಹಣಕಾಸು ಅಧಿಕಾರಿಯು, ಹಣಕಾಸು ಸಮಿತಿಯ ನಿಯಂತ್ರಣಕ್ಕೊಳಪಟ್ಟು, ಪರಿನಿಯಮಗಳ, ಆರ್ಡಿನೆನ್ಸ್‌ಗಳ ಮತ್ತು ವಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಅಥವಾ ಕುಲಪತಿಯು ಕಾಲ ಕಾಲಕ್ಕೆ ಅಗತ್ಯಪಡಿಸಬಹುದಾದಂತೆ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು. ಆತನು ಹಣಕಾಸು ಸಮಿತಿಯ ಪದನಿಮಿತ್ತ ಸದಸ್ಯ–ಕಾರ್ಯದರ್ಶಿಯಾಗಿರತಕ್ಕದ್ದು ಮತ್ತು ಅಗತ್ಯವಿರಬಹುದಾದಂತೆ ವಿಶ್ವವಿದ್ಯಾನಿಲಯದ ಇತರ ಪ್ರಾಧಿಕಾರಗಳ ಅಥವಾ ನಿಕಾಯಗಳ ಸಭೆಗಳಲ್ಲಿ ಆಹ್ವಾನಿತನಾಗಬಹುದು.

22. ಕುಲಸಚಿವನ, ಪರೀಕ್ಷಾ ನಿಯಂತ್ರಕನ ಅಥವಾ ಹಣಕಾಸು ಅಧಿಕಾರಿಯ ಹುದ್ದೆಯು ತಾತ್ಕಾಲಿಕವಾಗಿ ಖಾಲಿ ಇರುವುದು.– (1) ಕುಲಸಚಿವನ, ಪರೀಕ್ಷಾ ನಿಯಂತ್ರಕನ ಅಥವಾ ಹಣಕಾಸು ಅಧಿಕಾರಿಯ ಮರಣ, ಅಮಾನತ್ತು ಅಥವಾ ತಾತ್ಕಾಲಿಕ ಗೈರು ಹಾಜರಿಯ ಸಂದರ್ಭದಲ್ಲಿ, ಕುಲಪತಿಯು, ಸಂದರ್ಭಾನುಸಾರವಾಗಿ ಕುಲಸಚಿವನ, ಪರೀಕ್ಷಾ ನಿಯಂತ್ರಕನ

ಅಥವಾ ಹಣಕಾಸು ಅಧಿಕಾರಿಯ ಕರ್ತವ್ಯಗಳನ್ನು ನಿರ್ವಹಿಸಲು ವಿಶ್ವವಿದ್ಯಾನಿಲಯದ ಯಾವೊಬ್ಬ ಇತರ ಸೂಕ್ತ ಅಧಿಕಾರಿಗೆ ಪ್ರಾಧಿಕಾರ ನೀಡಬಹುದು.

(2) ಕುಲಸಚಿವನ, ಪರೀಕ್ಷಾ ನಿಯಂತ್ರಕನ ಅಥವಾ ಹಣಕಾಸು ಅಧಿಕಾರಿಯ ಪದದಲ್ಲಿ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಸೂಕ್ತ ಅಧಿಕಾರಿಯನ್ನು ನೇಮಕಾತಿ ಮಾಡುವದನ್ನು ಬಾಕಿ ಇರಿಸಿ, ಆ ಹುದ್ದೆಗಳಿಗೆ ಹೊಸದಾಗಿ ನೇಮಕಾತಿ ಮಾಡುವವರೆಗೆ, ಕುಲಪತಿಯು ತನ್ನ ವಿವೇಚನಾನುಸಾರ, ಅಂತಹ ಖಾಲಿ ಹುದ್ದೆಗಳ ಕರ್ತವ್ಯವನ್ನು ನಿರ್ವಹಿಸಲು ವಿಶ್ವವಿದ್ಯಾನಿಲಯದ ಯಾವೊಬ್ಬ ಇತರ ಅಧಿಕಾರಿಯನ್ನು ಪ್ರಾಧೀಕರಿಸಬಹುದು. ಕುಲಪತಿಯು, ಈ ಉಪಪ್ರಕರಣದ ಅಡಿಯಲ್ಲಿ ತಾನು ಕೈಗೊಂಡ ಕ್ರಮದ ಬಗ್ಗೆ ಕೂಡಲೇ ರಾಜ್ಯ ಸರ್ಕಾರಕ್ಕೆ ವರದಿ ಮಾಡತಕ್ಕದ್ದು.

23. ವಿಶ್ವವಿದ್ಯಾನಿಲಯದ ಗ್ರಂಥಪಾಲ.– ವಿಶ್ವವಿದ್ಯಾನಿಲಯದ ಗ್ರಂಥಪಾಲನನ್ನು ವಿಶ್ವವಿದ್ಯಾನಿಲಯದ ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ರಚಿತವಾದ ನೇಮಕಾತಿ ಮಂಡಲಿಯ ಶಿಫಾರಸಿನ ಮೇರೆಗೆ ಸಂಬಂಧಪಟ್ಟ ವಿಶ್ವವಿದ್ಯಾನಿಲಯದ ಕಾಯನಿರ್ವಾಹಕ ಪರಿಷತ್ತು ನೇಮಕ ಮಾಡತಕ್ಕದ್ದು. ಪರಿನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ವಿದ್ಯಾರ್ಹತೆಗಳನ್ನು ಮತ್ತು ಅನುಭವವಗಳನ್ನು ಆತನು ಹೊಂದಿರತಕ್ಕದ್ದು ಮತ್ತು ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು. ವಿಶ್ವವಿದ್ಯಾನಿಲಯದ ಗ್ರಂಥಪಾಲನ ಉಪಲಬ್ಧಿಗಳು ಹಾಗೂ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು, ಪರಿನಿಯಮಗಳ ಮೂಲಕ ನಿಯಮಿಸಬಹುದಾದಂಥವುಗಳಾಗಿರತಕ್ಕದ್ದು.

24. ಕಾಲೇಜು ಅಭಿವೃದ್ಧಿ ಪರಿಷತ್ತಿನ ನಿರ್ದೇಶಕ.– ಕಾಲೇಜು ಅಭಿವೃದ್ಧಿ ಪರಿಷತ್ತಿನ ನಿರ್ದೇಶಕನನ್ನು ಪರಿನಿಯಮಗಳ ಮೂಲಕ ಉಪಬಂಧಿಸಬಹುದಾದ ಅಂಥ ರೀತಿಯಲ್ಲಿ ಅಂಥ ಸೇವಾ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ನೇಮಕ ಮಾಡತಕ್ಕದ್ದು ಹಾಗೂ ಅಂಥ ಅಧಿಕಾರಗಳನ್ನು, ಕರ್ತವ್ಯಗಳನ್ನು ಮತ್ತು ಪ್ರಕಾರ್ಯಗಳನ್ನು ಹೊಂದಿರತಕ್ಕದ್ದು.

25. ಶಾರೀರಿಕ ಶಿಕ್ಷಣ ನಿರ್ದೇಶಕ.– ಶಾರೀರಿಕ ಶಿಕ್ಷಣದ ನಿರ್ದೇಶಕನನ್ನು ಪರಿನಿಯಮಗಳ ಮೂಲಕ ಉಪಬಂಧಿಸಬಹುದಾದ ಅಂಥ ರೀತಿಯಲ್ಲಿ ಅಂಥ ಸೇವಾ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ನೇಮಕ ಮಾಡತಕ್ಕದ್ದು ಹಾಗೂ ಅಂಥ ಅಧಿಕಾರಗಳನ್ನು, ಕರ್ತವ್ಯಗಳನ್ನು ಮತ್ತು ಪ್ರಕಾರ್ಯಗಳನ್ನು ಹೊಂದಿರತಕ್ಕದ್ದು.

26. ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಲಿಯ ನಿರ್ದೇಶಕ.– ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಲಿಯ ನಿರ್ದೇಶಕನನ್ನು ಪರಿನಿಯಮಗಳ ಮೂಲಕ ಉಪಬಂಧಿಸಬಹುದಾದ ಅಂಥ ರೀತಿಯಲ್ಲಿ ಅಂಥ ಸೇವಾ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ನೇಮಕ ಮಾಡತಕ್ಕದ್ದು ಹಾಗೂ ಅಂಥ ಅಧಿಕಾರಗಳನ್ನು, ಕರ್ತವ್ಯಗಳನ್ನು ಮತ್ತು ಪ್ರಕಾರ್ಯಗಳನ್ನು ಹೊಂದಿರತಕ್ಕದ್ದು.

27. ಪ್ರಾಯೋಜಿತ ಸಂಶೋಧನೆ ಮತ್ತು ಸಮಾಲೋಚನೆಯ ನಿರ್ದೇಶಕ.– ಪ್ರಾಯೋಜಿತ ಸಂಶೋಧನೆ ಮತ್ತು ಸಮಾಲೋಚನೆಯ ನಿರ್ದೇಶಕನನ್ನು ಪರಿನಿಯಮಗಳ ಮೂಲಕ ಉಪಬಂಧಿಸಬಹುದಾದ ಅಂಥ ರೀತಿಯಲ್ಲಿ ಅಂಥ ಸೇವಾ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ನೇಮಕ ಮಾಡತಕ್ಕದ್ದು ಹಾಗೂ ಅಂಥ ಅಧಿಕಾರಗಳನ್ನು, ಕರ್ತವ್ಯಗಳನ್ನು ಮತ್ತು ಪ್ರಕಾರ್ಯಗಳನ್ನು ಹೊಂದಿರತಕ್ಕದ್ದು.

28. ವಿದ್ಯಾರ್ಥಿಗಳ ಕಲ್ಯಾಣ ನಿರ್ದೇಶಕರು.– ವಿದ್ಯಾರ್ಥಿಗಳ ಕಲ್ಯಾಣ ನಿರ್ದೇಶಕನನ್ನು ಪರಿನಿಯಮಗಳ ಮೂಲಕ ಉಪಬಂಧಿಸಬಹುದಾದ ಅಂಥ ರೀತಿಯಲ್ಲಿ ಅಂಥ ಸೇವಾ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ನೇಮಕ ಮಾಡತಕ್ಕದ್ದು ಹಾಗೂ ಅಂಥ ಅಧಿಕಾರಗಳನ್ನು, ಕರ್ತವ್ಯಗಳನ್ನು ಮತ್ತು ಪ್ರಕಾರ್ಯಗಳನ್ನು ಹೊಂದಿರತಕ್ಕದ್ದು.

ಅಧ್ಯಾಯ–IV

ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳು

29. ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳು.– ಈ ಮುಂದಿನವು ಪ್ರತಿಯೊಂದು ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳಾಗಿರತಕ್ಕದ್ದು, ಎಂದರೆ:–

(ಎ) ಕಾಯನಿರ್ವಾಹಕ ಪರಿಷತ್ತು;

(ಬಿ) ವಿದ್ಯಾವಿಷಯಕ ಪರಿಷತ್ತು;

(ಸಿ) ಹಣಕಾಸು ಸಮಿತಿ;

(ಡಿ) ವ್ಯಾಸಂಗ ವಿಭಾಗಗಳು;

(ಇ) ಅಧ್ಯಯನಗಳ ಮಂಡಲಿ;

(ಎಫ್) ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಲಿ; ಮತ್ತು

(ಜಿ) ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳೆಂದು ಪರಿನಿಯಮಗಳ ಮೂಲಕ ಘೋಷಿಸಬಹುದಾದ ಅಂಥ ಇತರ ನಿಕಾಯಗಳು.

30. ಕಾರ್ಯನಿರ್ವಾಹಕ ಪರಿಷತ್ತು.– (1) ಪ್ರತಿಯೊಂದು ವಿಶ್ವವಿದ್ಯಾನಿಲಯದ ಕಾರ್ಯನಿರ್ವಾಹಕ ಪರಿಷತ್ತು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ಕುಲಪತಿ (ಅಧ್ಯಕ್ಷ);

(ಬಿ) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ ಅಥವಾ ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆ ಇರದ ದರ್ಜೆಯ ಅತನ ನಾಮನಿರ್ದೇಶಿತ;

(ಸಿ) ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯವನ್ನು ಹೊರತುಪಡಿಸಿ ಇತರ ಎಲ್ಲಾ ವಿಶ್ವವಿದ್ಯಾನಿಲಯಗಳಿಗಾಗಿ ಕಾಲೇಜು ಶಿಕ್ಷಣದ ಆಯುಕ್ತರು ಅಥವಾ ಜಂಟಿ ನಿರ್ದೇಶಕನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅತನ ನಾಮನಿರ್ದೇಶಿತ;

(ಡಿ) ತಾಂತ್ರಿತ ಶಿಕ್ಷಣ ನಿರ್ದೇಶಕ ಅಥವಾ ಜಂಟಿ ನಿರ್ದೇಶಕನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅತನ ನಾಮನಿರ್ದೇಶಿತ;

(ಇ) ಜ್ಯೇಷ್ಠತೆಯ ಆಧಾರದ ಮೇಲೆ ಸರದಿಯ ಮೇಲೆ ಒಂದು ವರ್ಷದ ಅವಧಿಗಾಗಿ ಸಂಬಂಧಪಟ್ಟ ವಿಶ್ವವಿದ್ಯಾನಿಲಯದ ಕುಲಪತಿಯವರಿಂದ ನಾಮನಿರ್ದೇಶಿತನಾದ ವ್ಯಾಸಂಗ ವಿಭಾಗದ ಒಬ್ಬ ಡೀನ್;

(ಎಫ್) ಖ್ಯಾತ ಶಿಕ್ಷಣ ತಜ್ಞರ ಮತ್ತು ವಿಜ್ಞಾನಿಗಳ, ಆದ್ಯತೆಯಾಗಿ ನಿವೃತ್ತ ಕುಲಪತಿಗಳ ಅಥವಾ ರಾಷ್ಟ್ರೀಯ ಪ್ರಾಮುಖ್ಯತಾ ಸಂಸ್ಥೆಗಳ ನಿರ್ದೇಶಕರ ಅಥವಾ ವಿಶ್ವವಿದ್ಯಾನಿಲಯಗಳ ಪ್ರಾಧ್ಯಾಪಕರ ಪೈಕಿಯಿಂದ ಮೂರು ವರ್ಷಗಳ ಅವಧಿಗಾಗಿ ಕುಲಾಧಿಪತಿಯವರು ನಾಮನಿರ್ದೇಶನ ಮಾಡಿದ ಇಬ್ಬರು ಸದಸ್ಯರು;

(ಜಿ) ವೃತ್ತಿ ಅರ್ಹತೆಯೊಂದಿಗೆ ಸ್ನಾತಕೋತ್ತರ ಪದವಿ ಅಥವಾ ಸ್ನಾತಕ ಪದವಿಯ ಕನಿಷ್ಠ ಅರ್ಹತೆಯನ್ನು ಹೊಂದಿರುವ ಪ್ರತಿಯೊಬ್ಬರು ಮೂರು ವರ್ಷಗಳ ಅವಧಿಗಾಗಿ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರಾದ ಆರು ವ್ಯಕ್ತಿಗಳು, ಇವರ ಪೈಕಿ ಒಬ್ಬರು ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಪಂಗಡಗಳು, ಒಬ್ಬರು ಅಲ್ಪಸಂಖ್ಯಾತರು, ಒಬ್ಬರು ಇತರ ಹಿಂದುಳಿದ ವರ್ಗಗಳಿಗೆ ಮತ್ತು ಒಬ್ಬರು ಇತರ ವರ್ಗಕ್ಕೆ ಸೇರಿದವರಾಗಿರಬೇಕು ಮತ್ತು ಈ ನಾಮನಿರ್ದೇಶಿತರಲ್ಲಿ ಒಬ್ಬರು ಮಹಿಳೆಯಾಗಿರತಕ್ಕದ್ದು (ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಸಂದರ್ಭದಲ್ಲಿ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ವಿಶೇಷತೆಯನ್ನು ಹೊಂದಿರುವ ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ಇಬ್ಬರು ಖ್ಯಾತ ವ್ಯಕ್ತಿಗಳು):

ಪರಂತು, ವಿಶೇಷ ಉದ್ದೇಶದ ವಿಶ್ವವಿದ್ಯಾನಿಲಯಕ್ಕಾಗಿ ರಾಜ್ಯ ಸರ್ಕಾರವು ನಾಮನಿರ್ದೇಶಿಸಬೇಕಾದ ಆರು ಜನ ತಜ್ಞರು ಅನುಸೂಚಿ IVರಲ್ಲಿ ನಿರ್ದಿಷ್ಟಪಡಿಸಿದಂತೆ ಇರತಕ್ಕದ್ದು:

ಮತ್ತು ಪರಂತು, ಸಂಯೋಜಿತ ಕಾಲೇಜಿನಲ್ಲಿ ಅಥವಾ ವಿಶ್ವವಿದ್ಯಾನಿಲಯದಲ್ಲಿ ಯಾವುದೇ ಸಾಮರ್ಥ್ಯದಲ್ಲಿ ಪ್ರಸ್ತುತ ನಿಯೋಜನೆಯಲ್ಲಿರುವ ಯಾವೊಬ್ಬ ವ್ಯಕ್ತಿಯು ಈ ಪ್ರವರ್ಗದಡಿಯಲ್ಲಿ ನಾಮನಿರ್ದೇಶನಕ್ಕೆ ಅರ್ಹನಾಗಿರತಕ್ಕದ್ದಲ್ಲ.

ಅಲ್ಲದೆ ಪರಂತು, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯಕ್ಕೆ ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ಆರು ವ್ಯಕ್ತಿಗಳ ಪೈಕಿ, ಕನಿಷ್ಠಪಕ್ಷ ನಾಲ್ವರು ಮಹಿಳೆಯರಾಗಿರತಕ್ಕದ್ದು.

(ಹೆಚ್) ಕುಲಪತಿಯು, ಜ್ಯೇಷ್ಠತೆಗನುಸಾರವಾಗಿ ಸರದಿಯ ಮೇಲೆ ಒಂದು ವರ್ಷದ ಅವಧಿಗೆ ನಾಮನಿರ್ದೇಶನ ಮಾಡಿದ ವಿಶ್ವವಿದ್ಯಾನಿಲಯದ ಇಬ್ಬರು ಪ್ರಾಧ್ಯಾಪಕರು:

ಪರಂತು, ಇವರ ಪೈಕಿ ಒಬ್ಬರು ಮಹಿಳೆಯಾಗಿರತಕ್ಕದ್ದು;

(ಐ) ಕುಲಪತಿಯು, ಸರದಿಯ ಮೇಲೆ ಒಂದು ವರ್ಷದ ಅವಧಿಗೆ ನಾಮನಿರ್ದೇಶನ ಮಾಡಿದ ಸಂಬಂಧಪಟ್ಟ ವಿಶ್ವವಿದ್ಯಾನಿಲಯದ ಒಬ್ಬ ಪ್ರಸಿದ್ಧ ಹಳೆಯ ವಿದ್ಯಾರ್ಥಿ:

ಪರಂತು, ಯಾವುದೇ ಸಾಮರ್ಥ್ಯದಲ್ಲಿ ಸಂಯೋಜಿತ ಕಾಲೇಜಿನಲ್ಲಿ ಅಥವಾ ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ ನಿಯೋಜನೆಯಲ್ಲಿರುವ ಯಾವೊಬ್ಬ ವ್ಯಕ್ತಿಯು ಈ ಪ್ರಕರಣದ ಅಡಿಯಲ್ಲಿ ನಾಮನಿರ್ದೇಶನಕ್ಕೆ ಅರ್ಹನಾಗಿರತಕ್ಕದ್ದಲ್ಲ;

(ಜೆ) ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಳ ಡೀನ್‌ಗಳು ಮತ್ತು ಪ್ರಾಧ್ಯಾಪಕರನ್ನು ಮತ್ತು ಪ್ರಾಂಶುಪಾಲರನ್ನು ಹೊರತುಪಡಿಸಿ, ಮೂರು ವರ್ಷಗಳ ಅವಧಿಗೆ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರ ಪೈಕಿ ಕುಲಪತಿಯು ನಾಮನಿರ್ದೇಶಿಸಿದ ವಿದ್ಯಾವಿಷಯಕ ಪರಿಷತ್ತಿನ ಇಬ್ಬರು ಸದಸ್ಯರು; ಮತ್ತು

(ಕೆ) ಕುಲಸಚಿವನು ಕಾರ್ಯದರ್ಶಿಯಾಗಿರತಕ್ಕದ್ದು.

(2) ಕಾರ್ಯನಿರ್ವಾಹಕ ಪರಿಷತ್ತು ಸಾಮಾನ್ಯವಾಗಿ ಶೈಕ್ಷಣಿಕ ವರ್ಷಾವಧಿಯಲ್ಲಿ ಆರು ಸಭೆಗಳನ್ನು ನಡೆಸತಕ್ಕದ್ದು. ಎರಡು ನಿರಂತರ ಸಭೆಗಳ ನಡುವಿನ ಅವಧಿಯು ಸಾಮಾನ್ಯವಾಗಿ ಎಂಟು ವಾರಗಳನ್ನು ಮೀರತಕ್ಕದ್ದಲ್ಲ.

(3) ತುರ್ತು ಸಂದರ್ಭದಲ್ಲಿ ಕುಲಪತಿಯು ಕಾರ್ಯನಿರ್ವಾಹಕ ಪರಿಷತ್ತಿನ ವಿಶೇಷ ಸಭೆಯನ್ನು ಕರೆಯಬಹುದು. ವಿಶ್ವವಿದ್ಯಾನಿಲಯದ ಪರಿನಿಯಮಗಳು ಕಾರ್ಯನಿರ್ವಾಹಕ ಪರಿಷತ್ತಿನ ಸಭೆಗಳನ್ನು ನಡೆಸುವ ಕುರಿತು ನಿಯಮಗಳು ಮತ್ತು ಕಾರ್ಯವಿಧಾನಗಳನ್ನು ಉಪಬಂಧಿಸಬಹುದು.

(4) ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ ಕುಲಾಧಿಪತಿಯು, ಆದೇಶದ ಮೂಲಕ, ನಿರ್ದಿಷ್ಟಪಡಿಸಬಹುದಾದಂಥ ಪರಿಶೀಲನಾಂಶಗಳನ್ನು ಕುರಿತು ಚರ್ಚಿಸಲು ಕಾರ್ಯನಿರ್ವಾಹಕ ಪರಿಷತ್ತಿನ ಸಭೆಗಳನ್ನು ನಡೆಸಲು ವಿಶ್ವವಿದ್ಯಾನಿಲಯಕ್ಕೆ ನಿರ್ದೇಶಿಸಬಹುದು ಮತ್ತು ಕುಲಪತಿಯು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

31. ಕಾರ್ಯನಿರ್ವಾಹಕ ಪರಿಷತ್ತಿನ ಅಧಿಕಾರಗಳು.– (1) ಕಾರ್ಯನಿರ್ವಾಹಕ ಪರಿಷತ್ತು, ವಿಶ್ವವಿದ್ಯಾನಿಲಯದ ವ್ಯವಹಾರಗಳ ನಿರ್ವಹಣೆಯ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಸಂಬಂಧಪಟ್ಟ ವಿಶ್ವವಿದ್ಯಾನಿಲಯದ ಕ್ರಮಬದ್ಧ ಪ್ರಕಾರ್ಯ ನಿರ್ವಹಣೆಗೆ ಹೊಣೆಯಾಗಿರತಕ್ಕದ್ದು.

(2) ಹಿಂದೆ ಹೇಳಿದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ವಿಶ್ವವಿದ್ಯಾನಿಲಯದ ಕಾರ್ಯನಿರ್ವಾಹಕ ಪರಿಷತ್ತು ಈ ಮುಂದಿನ ಅಧಿಕಾರಗಳನ್ನು, ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು ಹೊಂದಿರತಕ್ಕದ್ದು, ಎಂದರೆ:–

(ಎ) ಸಂಬಂಧಪಟ್ಟ ವಿಶ್ವವಿದ್ಯಾನಿಲಯದ ನಿಧಿಗಳು ಮತ್ತು ಸ್ವತ್ತುಗಳನ್ನು ಸ್ವೀಕರಿಸುವುದು, ಆರ್ಜಿಸುವುದು, ಧಾರಣ ಮಾಡುವುದು, ನಿಯಂತ್ರಿಸುವುದು, ಆಡಳಿತ ನಡೆಸುವುದು, ನಿರ್ವಹಿಸುವುದು ಮತ್ತು ವಿನಿಯಮಿಸುವುದು ಹಾಗೂ ಆ ಉದ್ದೇಶಕ್ಕಾಗಿ ಅದು ಅವಶ್ಯಕ ಮತ್ತು ಸೂಕ್ತವೆಂದು ಭಾವಿಸಬಹುದಾದಂಥ ಏಜಂಟರನ್ನು ನೇಮಕ ಮಾಡುವುದು;

(ಬಿ) ವಿಶ್ವವಿದ್ಯಾನಿಲಯದ ಸ್ವತ್ತುಗಳು ಮತ್ತು ನಿಧಿಗಳ ಸೂಕ್ತ ದಾಖಲೆಗಳನ್ನು ನಿರ್ವಹಿಸುವಂತೆ ಮಾಡುವುದು ಮತ್ತು ರಾಜ್ಯ ಸರ್ಕಾರಕ್ಕೆ ಅವುಗಳ ಮೇಲೆ ಶಿಫಾರಸುಗಳನ್ನು ಮಾಡುವ ಮೊದಲು ಹಣಕಾಸು ಸಮಿತಿಯು ಮಂಡಿಸಿದಂತೆ, ಕಳೆದ ವರ್ಷಕ್ಕಾಗಿ ಅದರ ವಾರ್ಷಿಕ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಹಾಗೂ ಮುಂಬರುವ ವರ್ಷಕ್ಕೆ ಅದರ ಆಯವ್ಯಯ ಅಂದಾಜುಗಳನ್ನು ಪರಿಶೀಲಿಸುವುದು;

(ಸಿ) ವಿಶ್ವವಿದ್ಯಾನಿಲಯದ ಪರವಾಗಿ ಒಪ್ಪಂದಗಳನ್ನು ಮಾಡಿಕೊಳ್ಳುವುದು, ಮಾರ್ಪಡಿಸುವುದು ಮತ್ತು ರದ್ದುಗೊಳಿಸುವುದು;

(ಡಿ) ವಿಶ್ವವಿದ್ಯಾನಿಲಯವು ಸ್ಥಾಪಿಸಿದ ಅಥವಾ ನಿರ್ವಹಿಸುತ್ತಿರುವ ಕಾಲೇಜುಗಳು, ವಿದ್ಯಾರ್ಥಿನಿಲಯಗಳು, ಗ್ರಂಥಾಲಯಗಳು, ಪ್ರಯೋಗ ಶಾಲೆಗಳು, ವಸ್ತು ಸಂಗ್ರಹಾಲಯಗಳು ಮತ್ತು ಇತರ ಸಂಸ್ಥೆಗಳ ಆಡಳಿತ ಮತ್ತು ನಿಯಂತ್ರಣ ಕೈಗೊಳ್ಳುವುದು;

(ಇ) ಕ್ಯಾಂಪಸ್‌ನೊಳಗೆ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ನಿವಾಸ ಮತ್ತು ಶಿಸ್ತನ್ನು ಗುರುತಿಸುವುದು, ವಿನಿಯಮಿಸುವುದು, ಮೇಲ್ವಿಚಾರಣೆ ಮಾಡುವುದು ಮತ್ತು ನಿಯಂತ್ರಿಸುವುದು ಹಾಗೂ ಅದರ ಅನೆಕ್ಸ್‌ಗಳೊಳಗೆ ಮತ್ತು ಎಲ್ಲಿಯಾದರೂ ಅವರ ಆರೋಗ್ಯ ಮತ್ತು ಯೋಗಕ್ಷೇಮಕ್ಕೆ ಉತ್ತೇಜನ ನೀಡಲು ವ್ಯವಸ್ಥೆ ಮಾಡುವುದು;

(ಎಫ್) ವಿದ್ಯಾವಿಷಯಕ ಪರಿಷತ್ತಿನ ಶಿಫಾರಸ್ಸುಗಳನ್ನಾಧರಿಸಿ ಮತ್ತು ಪರಿನಿಯಮಗಳು ಅಥವಾ ಆರ್ಡಿನೆನ್ಸ್‌ಗಳು ಉಪಬಂಧಿಸಬಹುದಾದಂತೆ ಪ್ರಾಂಶುಪಾಲರು, ಗೌರವ/ ವಿಶ್ರಾಂತ ಮಹೋಪಾಧ್ಯಾಯ (ಇಮೆರಿಟಿಸ್)/ಹಂಗಾಮಿ ಪ್ರಾದ್ಯಾಪಕರುಗಳನ್ನು ಒಳಗೊಂಡು ಪ್ರಾಧ್ಯಾಪಕರು/ಸಹಪ್ರಾಧ್ಯಾಪಕರು, ರೀಡರ್‌ಗಳು, ಸಹಾಯಕ ಪ್ರಾಧ್ಯಾಪಕರು/ ಉಪನ್ಯಾಸಕರಂಥ ಬೋಧಕ ಮತ್ತು ವಿದ್ಯಾವಿಷಯಕ ಹುದ್ದೆಗಳನ್ನು ಮತ್ತು ವಿಶ್ವವಿದ್ಯಾನಿಲಯವು ನಿರ್ವಹಿಸುವ ಕಾಲೇಜುಗಳು ಮತ್ತು ಸಂಸ್ಥೆಗಳ ಯಾವುವೇ ಇತರ ಹುದ್ದೆಗಳನ್ನು ಸೃಜಿಸುವುದು, ಅಂಥ ಹುದ್ದೆಗಳ ಸಂಖ್ಯೆಯನ್ನು ನಿರ್ಧರಿಸುವುದು, ಅವರ ಕರ್ತವ್ಯಗಳು ಮತ್ತು ಸೇವಾ

ಷರತ್ತುಗಳನ್ನು ನಿರ್ದಿಷ್ಟಪಡಿಸುವುದು ಮತ್ತು ಅವಶ್ಯವಿದ್ದಂತೆ ಮತ್ತು ಅವಶ್ಯವಿದ್ದಾಗಲೆಲ್ಲಾ ಅವರನ್ನು ನೇಮಿಸಿಕೊಳ್ಳಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದು;

(ಜಿ) ರಾಜ್ಯ ಸರ್ಕಾರದ ಮತ್ತು ಕುಲಾಧಿಪತಿಯ ಅನುಮೋದನೆಗೆ ಒಳಪಟ್ಟು, ಆಡಳಿತಾತ್ಮಕ, ಲಿಪಿಕ, ಇತರ ಅವಶ್ಯಕ ಹುದ್ದೆಗಳನ್ನು ಪರಿನಿಯಮಗಳು ಮತ್ತು ಆರ್ಡಿನೆನ್ಸ್‌ಗಳು ಉಪಬಂಧಿಸಬಹುದಾದಂಥ ರೀತಿಯಲ್ಲಿ ಸೃಜಿಸುವುದು ಮತ್ತು ಅವುಗಳಿಗೆ ನೇಮಕಾತಿಗಳನ್ನು ಮಾಡುವುದು;

(ಹೆಚ್) ವಿದ್ಯಾವಿಷಯಕ ಪರಿಷತ್ತಿನ ಶಿಫಾರಸ್ಸಿನ ಮೇಲೆ ಫೆಲೋಶಿಪ್‌ಗಳು, ಸಂಚಾರಿ ಫೆಲೋಶಿಪ್‌ಗಳು, ವಿದ್ಯಾರ್ಥಿ ವೇತನಗಳು, ಶಿಷ್ಯವೇತನಗಳು, ಪ್ರವೇತನಗಳು, ಪದಕಗಳು ಮತ್ತು ಪಾರಿತೋಷಕಗಳನ್ನು ಸ್ಥಾಪಿಸುವುದು;

(ಐ) ಪರಿನಿಯಮಗಳಲ್ಲಿ ಉಪಬಂಧಿಸಬಹುದಾದಂತೆ ವಿಶ್ವವಿದ್ಯಾನಿಲಯದ ಕ್ಯಾಂಪಸ್‌ನ ಒಳಗೆ ಮತ್ತು ಹೊರಗೆ ಎಲ್ಲಾ ಪ್ರವರ್ಗಗಳ ಬೋಧಕರು, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಲ್ಲಿ ಶಿಸ್ತನ್ನು ವಿನಿಯಮಿಸುವುದು ಮತ್ತು ಜಾರಿಗೊಳಿಸುವುದು;

(ಜೆ) ಸಂಯೋಜಿತ ಕಾಲೇಜುಗಳ ಪ್ರವೇಶಾತಿ ಕುರಿತು ವಿದ್ಯಾವಿಷಯಕ ಪರಿಷತ್ತಿನ ಶಿಫಾರಸ್ಸುಗಳನ್ನಾಧರಿಸಿ ಪರಿಶೀಲಿಸುವುದು ಮತ್ತು ನಿರ್ಧರಿಸುವುದು;

(ಕೆ) ಪಾಠ (ಟ್ಯೂಷನ್), ಸಂಶೋಧನೆ, ಪರೀಕ್ಷೆ, ಸಂಯೋಜನೆ, ತಪಾಸಣೆ ಮತ್ತು ಇತರ ಕಾರ್ಯಗಳ ಸಂಬಂಧದಲ್ಲಿ, ಪರಿನಿಯಮಗಳ ಮೂಲಕ ಉಪಬಂಧಿಸಬಹುದಾದಂತೆ ಶುಲ್ಕ ಸ್ವರೂಪವನ್ನು ಕಾಲಕಾಲಕ್ಕೆ ವಿಧಿಸುವುದು ಮತ್ತು ಪರಿಷ್ಕರಿಸುವುದು;

(ಎಲ್) ಪರಿನಿಯಮಗಳು, ಆರ್ಡಿನೆನ್ಸುಗಳು ಮತ್ತು ವಿನಿಯಮಗಳ ಮೂಲಕ ಉಪಬಂಧಿಸಬಹುದಾದಂತೆ ವಿಶ್ವವಿದ್ಯಾನಿಲಯದ ಪರೀಕ್ಷೆಗಳನ್ನು ನಡೆಸುವುದು;

(ಎಮ್) ವಿನಿಯಮಗಳು/ಆರ್ಡಿನೆನ್ಸ್‌ಗಳ ಉಪಬಂಧಗಳಿಗೆ ಒಳಪಟ್ಟು, ಪರೀಕ್ಷಕರು ಮತ್ತು ಮಾಡರೇಟರುಗಳನ್ನು ನೇಮಕಮಾಡುವುದು ಮತ್ತು ಅವಶ್ಯವೆನಿಸಿದರೆ ಅವರನ್ನು ಬದಲಾಯಿಸುವುದು ಅಥವಾ ತೆಗೆದುಹಾಕುವುದು ಹಾಗೂ ಅವರ ಫೀಜುಗಳು, ಉಪಲಬ್ಧಿಗಳು ಮತ್ತು ಪ್ರವಾಸ ಮತ್ತು ಇತರ ಭತ್ಯೆಗಳನ್ನು ಸಹ ನಿಗದಿಪಡಿಸುವುದು;

(ಎನ್) ಗೌರವ ಪದವಿಗಳು, ಬಿರುದುಗಳು ಅಥವಾ ಇತರೆ ವಿದ್ಯಾವಿಷಯಕ ಪ್ರಶಸ್ತಿಗಳನ್ನು ಪ್ರದಾನ ಮಾಡುವುದಕ್ಕೆ ಸಂಬಂಧಿಸಿದಂತೆ ವಿದ್ಯಾವಿಷಯಕ ಪರಿಷತ್ತಿನ ಶಿಫಾರಸುಗಳನ್ನು ಪರಿಶೀಲಿಸುವುದು ಮತ್ತು ಅದರ ತೀರ್ಮಾನವನ್ನು ಕುಲಾಧಿಪತಿಗೆ ಕಳುಹಿಸುವುದು;

(ಒ) ವಿದ್ಯಾರ್ಥಿಗಳ ತರಬೇತಿ ಮತ್ತು ನಿಯೋಜನೆ, ಪ್ರಕಟಣೆಗಳು ಮತ್ತು ಮಾಹಿತಿ, ಪ್ರಾಯೋಜಿತ ಸಂಶೋಧನೆ ಮತ್ತು ಸಮಾಲೋಚನೆ, ಬೌದ್ಧಿಕ ಸ್ವತ್ತು ಹಕ್ಕುಗಳ, ಶಿಕ್ಷಣ ಮುಂದುವರಿಕೆ ಮತ್ತು ಇತರ ನಾವಿನ್ಯತಾ ಚಟುವಟಿಕೆಗಳ ಕಾರ್ಯನಿರ್ವಹಣೆಗಾಗಿ ಕೇಂದ್ರಗಳನ್ನು ರಚಿಸುವುದು, ಅವುಗಳ ಆಡಳಿತವನ್ನು ನಡೆಸುವುದು, ಅವುಗಳನ್ನು ನಿರ್ವಹಿಸುವುದು ಮತ್ತು ನಿಯಂತ್ರಿಸುವುದು;

(ಪಿ) ಪರಿನಿಯಮಗಳ ಮೂಲಕ ಉಪಬಂಧಿಸಬಹುದಾದಂತೆ ಅಂಥ ತನ್ನ ಅಧಿಕಾರಗಳು, ಪ್ರಕಾರ್ಯಗಳು ಮತ್ತು ಕರ್ತವ್ಯಗಳನ್ನು ಕುಲಪತಿಗೆ ಪ್ರತ್ಯಾಯೋಜಿಸುವುದು;

(ಕ್ಯು) ವಿಶ್ವವಿದ್ಯಾನಿಲಯಕ್ಕಾಗಿ ಸಾಮಾನ್ಯ ಮುದ್ರೆಯನ್ನು ಆಯ್ಕೆ ಮಾಡುವುದು ಮತ್ತು ಅದರ ಅಭಿರಕ್ಷೆ ಮತ್ತು ಉಪಯೋಗಕ್ಕಾಗಿ ಉಪಬಂಧ ಕಲ್ಪಿಸುವುದು;

(ಆರ್) ವಿಶ್ವವಿದ್ಯಾನಿಲಯದಿಂದ ಅಥವಾ ಅದರ ವಿರುದ್ಧ ಕಾನೂನು ವ್ಯವಹರಣೆ ನಡೆಸಲು ವ್ಯವಸ್ಥೆ ಮಾಡುವುದು;

(ಎಸ್) ಪರಿನಿಯಮಗಳನ್ನು ರಚಿಸುವುದು, ಅಧಿನಿಯಮಿತಗೊಳಿಸುವುದು, ಅವುಗಳ ತಿದ್ದುಪಡಿ ಮಾಡುವುದು ಮತ್ತು ನಿರಸನಗೊಳಿಸುವುದು;

(ಟಿ) ಈ ಅಧಿನಿಯಮ, ಪರಿನಿಯಮಗಳ, ಆರ್ಡಿನೆನ್ಸ್‌ಗಳ ಅಥವಾ ವಿನಿಯಮಗಳ ಮೂಲಕ ತನಗೆ ಪ್ರದಾನ ಮಾಡಬಹುದಾದ ಅಥವಾ ವಿಧಿಸಬಹುದಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಅಂಥ ಇತರ ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು ನಿರ್ವಹಿಸುವುದು:

ಪರಂತು, (2)ನೇ ಉಪಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ನೌಕರರ ವೇತನ ಶ್ರೇಣಿಗಳನ್ನು ಪರಿಷ್ಕರಿಸುವ ಅಥವಾ ಅವರಿಗೆ ಯಾವುವೇ ಭತ್ಯೆಗಳನ್ನು ಅಥವಾ ಉಪಲಬ್ಧಿಗಳನ್ನು ನೀಡುವ ಅಧಿಕಾರವನ್ನು ಕಾರ್ಯನಿರ್ವಾಹಕ ಪರಿಷತ್ತಿಗೆ ಪ್ರದಾನ ಮಾಡಿರುವುದಾಗಿ ಭಾವಿಸತಕ್ಕದ್ದಲ್ಲ:

ಮತ್ತು ಪರಂತು, ಸಂಯೋಜಿತ ಕಾಲೇಜುಗಳಿಗೆ ಸಂಬಂಧಿಸಿದ ಉಪಬಂಧಗಳು ಏಕಾತ್ಮಕ ಸ್ವರೂಪದ ಅಥವಾ ಸಂಯೋಜಿತವಲ್ಲದ ವಿಶ್ವವಿದ್ಯಾಲಯಗಳಿಗೆ ಅನ್ವಯಿಸತಕ್ಕದ್ದಲ್ಲ.

32. ವಿದ್ಯಾವಿಷಯಕ ಪರಿಷತ್ತು.-(1) ವಿದ್ಯಾವಿಷಯಕ ಪರಿಷತ್ತು, ಪ್ರತಿಯೊಂದು ವಿಶ್ವವಿದ್ಯಾನಿಲಯದ ಅತ್ಯುನ್ನತ ವಿದ್ಯಾವಿಷಯಕ ನಿಕಾಯವಾಗಿರತಕ್ಕದ್ದು ಮತ್ತು ಅದು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(ಎ) ಕುಲಪತಿ (ಅಧ್ಯಕ್ಷ);

(ಬಿ) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ ಅಥವಾ ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಆತನ ನಾಮನಿರ್ದೇಶಿತ;

(ಸಿ) ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯವನ್ನು ಹೊರತುಪಡಿಸಿ ಇತರ ಎಲ್ಲಾ ವಿಶ್ವವಿದ್ಯಾನಿಲಯಗಳಿಗೆ ಕಾಲೇಜು ಶಿಕ್ಷಣ ಆಯುಕ್ತರು ಅಥವಾ ಜಂಟಿ ನಿರ್ದೇಶಕನ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಆತನ ನಾಮನಿರ್ದೇಶಿತ;

(ಡಿ) ಕನ್ನಡ ವಿಶ್ವವಿದ್ಯಾನಿಲಯಕ್ಕೆ ಮಾತ್ರ ಸರ್ಕಾರದ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಥವಾ ಉಪ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆ ಇರದ ಆತನ ನಾಮನಿರ್ದೇಶಿತ;

(ಇ) ತಾಂತ್ರಿಕ ಶಿಕ್ಷಣ ನಿರ್ದೇಶಕ ಅಥವಾ ಜಂಟಿ ನಿರ್ದೇಶಕನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಆತನ ನಾಮನಿರ್ದೇಶಿತ; ಪರಂತು ವಿಶ್ವವಿದ್ಯಾನಿಲಯವು ಇಂಜಿನಿಯರಿಂಗ್ ಅಥವಾ ತಾಂತ್ರಿಕ ವ್ಯಾಸಾಂಗ ವಿಭಾಗವನ್ನು ಹೊಂದಿರಬೇಕು;

(ಎಫ್) ಪದವಿಪೂರ್ವ ಶಿಕ್ಷಣದ ನಿರ್ದೇಶಕ ಅಥವಾ ಜಂಟಿ ನಿರ್ದೇಶಕನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಆತನ ನಾಮನಿರ್ದೇಶಿತ;

(ಜಿ) ಮೂರು ವರ್ಷಗಳನ್ನು ಮೀರದ ಅವಧಿಗಾಗಿ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರಾದ, ಸಂಶೋಧನೆ ಮತ್ತು ಅಭಿವೃದ್ಧಿ, ಕೈಗಾರಿಕೆ, ವಾಣಿಜ್ಯ, ಬ್ಯಾಂಕಿಂಗ್ ಅಥವಾ ಇತರ ಯಾವುದೇ ವೃತ್ತಿಗೆ ಸೇರಿದ ಮೂವರು ಸುಪ್ರಸಿದ್ಧ ಮತ್ತು ಅನುಭವಿ ವ್ಯಕ್ತಿಗಳು;

(ಎಚ್) ಸುಪ್ರಸಿದ್ಧ ಶಿಕ್ಷಣ ತಜ್ಞರ ಪಟ್ಟಿಯಿಂದ ಮೂರು ವರ್ಷಗಳ ಅವಧಿಗಾಗಿ, ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಐದು ಜನ ಸುಪ್ರಸಿದ್ಧ ಮತ್ತು ಅನುಭವಿ ವ್ಯಕ್ತಿಗಳು, ಅವರ ಪೈಕಿ ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಪಂಗಡಗಳಿಗೆ ಸೇರಿದ ಒಬ್ಬರು, ಇತರ ಹಿಂದುಳಿದ ವರ್ಗಗಳಿಗೆ ಸೇರಿದ ಒಬ್ಬರು, ಮತ್ತು ಉಳಿದ ಇತರರು ಸಾಮಾನ್ಯ ಪ್ರವರ್ಗಕ್ಕೆ ಸೇರಿದವರಾಗಿದ್ದು, ಅವರಲ್ಲಿ ಕನಿಷ್ಠ ಒಬ್ಬರು ಮಹಿಳೆಯಾಗಿರತಕ್ಕದ್ದು;

(ಐ) ವಿಶ್ವವಿದ್ಯಾನಿಲಯದ ವ್ಯಾಸಂಗ ವಿಭಾಗಗಳ ಡೀನ್‌ಗಳು;

(ಜೆ) ಪ್ರತಿಯೊಬ್ಬರಿಗೂ ಒಂದು ವರ್ಷದ ಅವಧಿಯಂತೆ ಜ್ಯೇಷ್ಠತೆಗನುಸಾರವಾಗಿ, ಸರದಿಯ ಮೇಲೆ ಕುಲಪತಿಯು ನಾಮನಿರ್ದೇಶಿಸಿದ ಸಂಬಂಧಪಟ್ಟ ವಿಶ್ವವಿದ್ಯಾನಿಲಯದ ಸ್ನಾತ್ತಕೋತ್ತರ ಅಧ್ಯಯನಗಳ ವಿಭಾಗಗಳ ಹತ್ತು ಜನ ಪ್ರಾಧ್ಯಾಪಕರು, ಇವರಲ್ಲಿ ಮೂವರು ಆದ್ಯತೆಯಾಗಿ ಮಹಿಳೆಯರಾಗಿರತಕ್ಕದ್ದು; (ಇದು ಏಕಾತ್ಮಕ ಸ್ವರೂಪದ ವಿಶ್ವವಿದ್ಯಾನಿಲಯಗಳು ಮತ್ತು ವಿಶೇಷ ಉದ್ದೇಶದ ವಿಶ್ವವಿದ್ಯಾನಿಲಯಗಳಿಗೆ ಅನ್ವಯವಾಗುವುದಿಲ್ಲ);

(ಕೆ) ಪ್ರತಿಯೊಬ್ಬರಿಗೂ ಒಂದು ವರ್ಷದಂತೆ, ಜ್ಯೇಷ್ಠತೆಗನುಸಾರವಾಗಿ, ಸರದಿಯ ಮೇಲೆ, ಸಂಬಂಧಪಟ್ಟ ಕುಲಪತಿಯವರಿಂದ ನಾಮನಿರ್ದೇಶಿತರಾದ ಎಲ್ಲಾ ವಿಶ್ವವಿದ್ಯಾನಿಲಯಗಳ ಸಂಯೋಜಿತ ಕಾಲೇಜುಗಳ ಹತ್ತು ಜನ ಪ್ರಾಂಶುಪಾಲರು, ಇವರಲ್ಲಿ ಒಬ್ಬರು ಸ್ವಾಯತ್ತ ಕಾಲೇಜಿನವರು, ಒಬ್ಬರು ಘಟಕ ಕಾಲೇಜಿನವರಾಗಿರತಕ್ಕದ್ದು, ಯಾರಾದರೂ ಇದ್ದರೆ, ಸರ್ಕಾರಿ ಕಾಲೇಜಿನಿಂದ ಒಬ್ಬರು, ಖಾಸಗಿ ಅನುದಾನಿತ ಕಾಲೇಜಿನಿಂದ ಒಬ್ಬರು, ಖಾಸಗಿ ಅನುದಾನರಹಿತ ಕಾಲೇಜಿನಿಂದ ಒಬ್ಬರು ಮತ್ತು ಮಹಿಳಾ ಕಾಲೇಜಿನಿಂದ ಒಬ್ಬರು ಇರತಕ್ಕದ್ದು:

ಪರಂತು, ಈ ಖಂಡವು ವಿಶೇಷ ಉದ್ದೇಶಕ್ಕಾಗಿ ಸ್ಥಾಪಿತವಾದ ಏಕಾತ್ಮಕ ಸ್ವರೂಪದ ವಿಶ್ವವಿದ್ಯಾನಿಲಯಗಳಿಗೆ ಅನ್ವಯವಾಗತಕ್ಕದ್ದಲ್ಲ.

(ಎಲ್) ಸುಪ್ರಸಿದ್ಧ ಶಿಕ್ಷಣ ತಜ್ಞರ ಪೈಕಿಯಿಂದ ಮೂರು ವರ್ಷಗಳ ಅವಧಿಗಾಗಿ, ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಆರು ಜನ ವ್ಯಕ್ತಿಗಳು, ಅವರ ಪೈಕಿ ಅನುಸೂಚಿತ ಜಾತಿಗಳು ಅಥವಾ

ಅನುಸೂಚಿತ ಪಂಗಡಗಳಿಗೆ ಸೇರಿದ ಒಬ್ಬರು, ಇತರ ಹಿಂದುಳಿದ ವರ್ಗಗಳಿಗೆ ಸೇರಿದ ಒಬ್ಬರು, ಮತ್ತು ಮಹಿಳೆಯನ್ನು ಪ್ರತಿನಿಧಿಸುವ ಒಬ್ಬರು, ಧಾರ್ಮಿಕ ಅಲ್ಪಸಂಖ್ಯಾತರನ್ನು ಪ್ರತಿನಿಧಿಸುವ ಒಬ್ಬರು ಹಾಗೂ ಇತರರನ್ನು ಪ್ರತಿನಿಧಿಸುವ ಇಬ್ಬರು ಇರತಕ್ಕದ್ದು;

(ಎಂ) ಒಂದು ವರ್ಷದ ಅವಧಿಗಾಗಿ ರಾಜ್ಯ ಸರ್ಕಾರದ ಅನುಮೋದನೆಯೊಂದಿಗೆ ಕುಲಪತಿಯು ನಾಮನಿರ್ದೇಶನ ಮಾಡಿದ ಸಂಬಂಧಪಟ್ಟ ವಿಶ್ವವಿದ್ಯಾನಿಲಯದ ಮೂವರು ಸುಪ್ರಸಿದ್ಧ ಹಳೆಯ ವಿದ್ಯಾರ್ಥಿಗಳು:

ಪರಂತು, ಕನ್ನಡ ವಿಶ್ವವಿದ್ಯಾನಿಲಯ, ಗಂಗೂಬಾಯಿ ಹಾನಗಲ್ ಸಂಗೀತ ವಿಶ್ವವಿದ್ಯಾನಿಲಯ, ಜಾನಪದ ವಿಶ್ವವಿದ್ಯಾನಿಲಯ ಮತ್ತು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯಗಳಿಗೆ ರಾಜ್ಯ ಸರ್ಕಾರವು ನಾಮನಿರ್ದೇಶಿಸಬೇಕಾದ ಆರು ಜನ ತಜ್ಞರು ಅನುಸೂಚಿ IVರಲ್ಲಿ ನಿರ್ದಿಷ್ಟಪಡಿಸಿದಂತಿರತಕ್ಕದ್ದು:

ಮತ್ತು ಪರಂತು, ಯಾವುದೇ ಸಾಮರ್ಥ್ಯದಲ್ಲಿ ಸಂಯೋಜಿತ ಕಾಲೇಜಿನಲ್ಲಿ ಅಥವಾ ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ ನಿಯೋಜಿತವಾಗಿರುವ ಯಾವೊಬ್ಬ ವ್ಯಕ್ತಿಯು ಈ ಪ್ರಕರಣದ ಅಡಿಯಲ್ಲಿ ನಾಮನಿರ್ದೇಶನಕ್ಕೆ ಅರ್ಹರಾಗಿರತಕ್ಕದ್ದಲ್ಲ.

(ಎನ್) ವಿಶ್ವವಿದ್ಯಾಲಯದ ಗ್ರಂಥಪಾಲರು;

(ಓ) ವಿದ್ಯಾರ್ಥಿ ಕಲ್ಯಾಣದ ನಿರ್ದೇಶಕರು;

(ಪಿ) ತರಬೇತಿ ಮತ್ತು ನಿಯೋಜನಾ ಕೇಂದ್ರದ ನಿರ್ದೇಶಕರು;

(ಕ್ಯೂ) ಶಾರೀರಿಕ ಶಿಕ್ಷಣದ ನಿರ್ದೇಶಕರು;

(ಆರ್) ಪರೀಕ್ಷಾ ನಿಯಂತ್ರಕರು;

(ಎಸ್) ಕುಲಸಚಿವರು – ಕಾರ್ಯದರ್ಶಿಯಾಗಿರತಕ್ಕದ್ದು; ಮತ್ತು

(ಟಿ) ಹಣಕಾಸು ಅಧಿಕಾರಿ ಮತ್ತು ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಲಿ, ಕಾಲೇಜ್ ಅಭಿವೃದ್ಧಿ ಪರಿಷತ್ತು, ಪ್ರಾಯೋಜಿತ ಸಂಶೋಧನೆ ಮತ್ತು ಅಭಿವೃದ್ಧಿ ಮತ್ತು ಸಮಾಲೋಚನೆ, ಅಷ್ಟೇ ಅಲ್ಲದೆ ನಿರಂತರ ಶಿಕ್ಷಣ ಇವುಗಳ ನಿರ್ದೇಶಕರು ಇವರನ್ನು ವಿದ್ಯಾವಿಷಯಕ ಪರಿಷತ್ತಿನ ಸಭೆಗಳಿಗೆ ಆಹ್ವಾನಿಸಬಹುದು.

(2) ವಿದ್ಯಾವಿಷಯಕ ಪರಿಷತ್ತು, ಸಾಮಾನ್ಯವಾಗಿ ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ ನಾಲ್ಕು ಬಾರಿಯಾದರೂ ಸಭೆ ಸೇರತಕ್ಕದ್ದು. ಆದಾಗ್ಯೂ, ಎರಡು ನಿರಂತರ ಸಭೆಗಳ ನಡುವಣ ಅವಧಿಯು ಹನ್ನೆರಡು ವಾರಗಳನ್ನು ಮೀರತಕ್ಕದ್ದಲ್ಲ:

ಪರಂತು, ಕುಲಪತಿಯು ವಿದ್ಯಾವಿಷಯಕ ಪರಿಷತ್ತಿನ ಪರವಾಗಿ ನಿರ್ಧರಿಸಬೇಕಾದ ಯಾವುದೇ ತುರ್ತು ವಿಷಯಕ್ಕೆ ಸಂಬಂಧಿಸಿದಂತೆ ತಾತ್ಪೂರ್ತಿಕ (ಅಡ್–ಹಾಕ್) ಸಮಿತಿಯನ್ನು ರಚಿಸಬಹುದು:

ಮತ್ತು ಪರಂತು, ಅಂಥ ತಾತ್ಪೂರ್ತಿಕ ಸಮಿತಿಯು ತೆಗೆದುಕೊಂಡ ತೀರ್ಮಾನಗಳನ್ನು ಒಳಗೊಂಡು ಸಭೆಗಳ ನಡವಳಿಗಳ ಸ್ಥಿರೀಕರಣಕ್ಕಾಗಿ ವಿದ್ಯಾವಿಷಯಕ ಪರಿಷತ್ತಿನ ಮುಂದಿನ ನಿಕಟ ಸಭೆಗಳ ಮುಂದಿಡತಕ್ಕದ್ದು;

(3) ತುರ್ತು ಸಂದರ್ಭದಲ್ಲಿ, ಕುಲಪತಿಯು ವಿದ್ಯಾವಿಷಯಕ ಪರಿಷತ್ತಿನ ವಿಶೇಷ ಸಭೆಗಳನ್ನು ಕರೆಯಬಹುದು.

(4) ವಿದ್ಯಾವಿಷಯಕ ಪರಿಷತ್ತಿನ ಮತ್ತು ತಾತ್ಪೂರ್ತಿಕ ಸಮಿತಿಯ ಸಭೆಗಳನ್ನು ನಡೆಸುವ ಕಾರ್ಯವಿಧಾನಗಳನ್ನು ಪರಿನಿಯಮಗಳ ಮೂಲಕ ಉಪಬಂಧಿಸಬಹುದು.

(5) ಕುಲಾಧಿಪತಿ ಅಥವಾ ರಾಜ್ಯ ಸರ್ಕಾರವು, ನಿರ್ದಿಷ್ಟಪಡಿಸಬಹುದಾದಂಥ ಪರಿಶೀಲನಾಂಶಗಳನ್ನು ಕುರಿತು ಚರ್ಚಿಸಲು ವಿದ್ಯಾವಿಷಯಕ ಪರಿಷತ್ತಿನ ಸಭೆಗಳನ್ನು ನಡೆಸುವಂತೆ ವಿಶ್ವವಿದ್ಯಾನಿಲಯಕ್ಕೆ ಆದೇಶದ ಮೂಲಕ ನಿರ್ದೇಶಿಸಬಹುದು ಮತ್ತು ಕುಲಪತಿಯು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

33. ವಿದ್ಯಾವಿಷಯಕ ಪರಿಷತ್ತಿನ ಅಧಿಕಾರಗಳು.– (1) ವಿದ್ಯಾವಿಷಯಕ ಪರಿಷತ್ತು, ವಿಶ್ವವಿದ್ಯಾನಿಲಯದ ಶಿಕ್ಷಣ, ವಿದ್ಯಾಭ್ಯಾಸ ಮತ್ತು ಪರೀಕ್ಷೆಗಳ ನಿಯಂತ್ರಣ ಹಾಗೂ ಸಾಮಾನ್ಯ ನಿಯಂತ್ರಣವನ್ನು ಹೊಂದಿರತಕ್ಕದ್ದು ಮತ್ತು ಅದು ವಿದ್ಯಾವಿಷಯಕ ವಿಷಯಗಳ ಮೇಲೆ ವಿಶ್ವವಿದ್ಯಾನಿಲಯಕ್ಕೆ ಸಾಮಾನ್ಯವಾಗಿ ಸಲಹೆ ನೀಡುವ ಜವಾಬ್ದಾರಿಯನ್ನು ಹೊಂದಿರತಕ್ಕದ್ದು.

(2) ಹಿಂದೆ ಹೇಳಿದವುಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಹಾಗೂ ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಅದರ ಅಡಿಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ವಿದ್ಯಾವಿಷಯಕ ಪರಿಷತ್ತು ಈ ಮುಂದಿನ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ಹಾಗೂ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು, ಎಂದರೆ:–

(ಎ) ವಿದ್ಯಾವಿಷಯಕ ವಿಷಯಗಳಿಗೆ ಸಂಬಂಧಿಸಿದಂತೆ ಆರ್ಡಿನೆನ್ಸ್‌ಗಳನ್ನು ಹೊರಡಿಸಲು ಪ್ರಸ್ತಾವನೆಗಳನ್ನು ಸಲ್ಲಿಸುವುದು;

(ಬಿ) ಅಧ್ಯಯನ ವ್ಯಾಸಂಗ ಕ್ರಮಗಳು, ಅನುಮೋದಿತ ವ್ಯಾಸಂಗ ಕ್ರಮಗಳಿಂದ ವಿನಾಯಿತಿಗಳನ್ನು ನೀಡುವುದು, ಯಾವ ಷರತ್ತುಗಳಿಗೆ ಒಳಪಟ್ಟು ವಿದ್ಯಾರ್ಥಿಗಳಿಗೆ ಪ್ರವೇಶ ಕೊಡತಕ್ಕದ್ದೋ ಅಂಥ ಷರತ್ತುಗಳನ್ನು ಒಳಗೊಂಡಂತೆ ಪರೀಕ್ಷಾ ಸ್ಕೀಂಗಳ, ತತ್ಸಮಾನವಾದ ಪರೀಕ್ಷೆಗಳ, ಪರೀಕ್ಷೆಗಳ ಫಲಿತಾಂಶ ಹಾಗೂ ಪದವಿಗಳ, ಡಿಪ್ಲೊಮಾಗಳ, ಪ್ರಮಾಣಪತ್ರಗಳ ಅಥವಾ ಇತರ ವಿದ್ಯಾವಿಷಯಕ ಪ್ರಶಸ್ತಿಗಳ ಘೋಷಣೆಯನ್ನು ಒಳಗೊಂಡು, ಅವುಗಳಿಗೆ ಆರ್ಡಿನೆನ್ಸ್‌ಗಳ ಮೂಲಕ ರಕ್ಷಣೆ ನೀಡದಿರುವಷ್ಟರಮಟ್ಟಿಗೆ, ವಿನಿಯಮಗಳನ್ನು ರಚಿಸುವುದು;

(ಸಿ) ಸಂಶೋಧನಾ ಮತ್ತು ವಿಶೇಷ ಅಧ್ಯಯನಗಳ ವಿಭಾಗಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು;

(ಡಿ) ಕಾಲೇಜುಗಳಲ್ಲಿ ಮತ್ತು ಮನ್ನಣೆ ಪಡೆದ ಸಂಸ್ಥೆಗಳಲ್ಲಿ, ಅಧ್ಯಯನ ಹಾಗೂ ಬೋಧನೆ–ಕಲಿಕೆಯ ಸಮನ್ವಯತೆಗಾಗಿ ವ್ಯವಸ್ಥೆ ಮಾಡುವುದು;

(ಇ) ವಿಶ್ವವಿದ್ಯಾನಿಲಯದ ಒಳಗೆ, ಅದರ ಸಂಯೋಜಿತ ಕಾಲೇಜುಗಳಲ್ಲಿ ಮತ್ತು ಮನ್ನಣೆ ನೀಡಲಾದ ಸಂಸ್ಥೆಗಳಲ್ಲಿ ಸಂಶೋಧನೆ ಮತ್ತು ಇತರ ವಿಶೇಷ ಅಧ್ಯಯನಗಳಿಗೆ ಹಾಗೂ ಕಾರ್ಯಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಲು ಸ್ಕೀಂಗಳನ್ನು ರೂಪಿಸುವುದು ಮತ್ತು ಇದನ್ನು ಕೈಗೊಳ್ಳಲು ಸೂಕ್ತ ಉಪಬಂಧಗಳನ್ನು ಕಲ್ಪಿಸುವುದು ಅಷ್ಟೇ ಅಲ್ಲದೆ ಅದರ ಫಲಿತಾಂಶವನ್ನು ಪ್ರಸಾರ ಮಾಡುವುದು;

(ಎಫ್) ವ್ಯಾಸಂಗ ವಿಭಾಗಗಳಿಗೆ ವಿಷಯಗಳನ್ನು ಹಂಚಿಕೆ ಮಾಡಲು ಮತ್ತು ವ್ಯಾಸಂಗ ವಿಭಾಗಗಳಿಗೆ ತನ್ನದೇ ಆದ ಸದಸ್ಯರುಗಳನ್ನು ನೇಮಿಸುವುದಕ್ಕೆ ಪ್ರಸ್ತಾವನೆಗಳನ್ನು ಮಾಡುವುದು;

(ಜಿ) ವಿಶ್ವವಿದ್ಯಾನಿಲಯಕ್ಕೆ ಅಗತ್ಯವಿರುವ ಪ್ರಾಧ್ಯಾಪಕರುಗಳ, ಸಹ ಪ್ರಾಧ್ಯಾಪಕರುಗಳ ಅಥವಾ ರೀಡರುಗಳ, ಸಹಾಯಕ ಪ್ರಾಧ್ಯಾಪಕರುಗಳ ಅಥವಾ ಉಪನ್ಯಾಸಕರ ಮತ್ತು ಇತರ ಬೋಧಕರ ಹುದ್ದೆಗಳನ್ನು ಸ್ಥಾಪನೆ ಮಾಡುವುದಕ್ಕಾಗಿ ಮತ್ತು ಅಂಥ ಹುದ್ದೆಗಳ ಕರ್ತವ್ಯಗಳನ್ನು ನಿಯಮಿಸುವುದಕ್ಕಾಗಿ ಪ್ರಸ್ತಾವನೆಗಳನ್ನು ಮಾಡುವುದು;

(ಎಚ್) ಫೆಲೋಷಿಪ್‌ಗಳು, ಸಂಚಾರಿ ಫೆಲೋಷಿಪ್‌ಗಳು, ವಿದ್ಯಾರ್ಥಿ ವೇತನ, ಶಿಷ್ಯ ವೇತನ ಅಥವಾ ಪ್ರವೇತನಗಳನ್ನು ಸ್ಥಾಪಿಸಿಸುವುದಕ್ಕಾಗಿ ಮತ್ತು ಅವುಗಳನ್ನು ನೀಡುವುದಕ್ಕಾಗಿ ಪ್ರಸ್ತಾವನೆಗಳನ್ನು ಮಾಡುವುದು;

(ಐ) ಸಮಗ್ರವಾದ (broad) ವಿದ್ಯಾವಿಷಯಕ ನೀತಿಗಳನ್ನು ಮತ್ತು ವಿಶ್ವವಿದ್ಯಾನಿಲಯದ ಕಾರ್ಯಕ್ರಮಗಳನ್ನು ಕಾಲಕಾಲಕ್ಕೆ ಪರಿಶೀಲಿಸಲು ಹಾಗೂ ಅವುಗಳನ್ನು ಮತ್ತಷ್ಟು ಸುಧಾರಣೆಗೊಳಿಸಲು ಮತ್ತು ಅಭಿವೃದ್ಧಿಪಡಿಸಲು ಕ್ರಮಗಳನ್ನು ಸೂಚಿಸುವುದು;

(ಜೆ) ಯಾವುದೇ ವಿನಿಯಮವನ್ನು ತಿದ್ದುಪಡಿ ಮಾಡುವುದು ಅಥವಾ ನಿರಸನಗೊಳಿಸುವುದು;

(ಕೆ) ವಿಶ್ವವಿದ್ಯಾನಿಲಯದ ವಿವಿಧ ಪ್ರಾಧಿಕಾರಗಳಿಗೆ ಸದಸ್ಯರುಗಳನ್ನು ನಾಮನಿರ್ದೇಶಿಸುವುದು; ಮತ್ತು

(ಎಲ್) ಈ ಅಧಿನಿಯಮ ಅಥವಾ ಅದರ ಅಡಿಯಲ್ಲಿ ರಚಿಸಿದ ಪರಿನಿಯಮಗಳು, ಆರ್ಡಿನೆನ್ಸ್‌ಗಳು ಅಥವಾ ವಿನಿಯಮಗಳಿಂದ ಅದಕ್ಕೆ ಪ್ರದಾನ ಮಾಡಬಹುದಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಅದರ ಮೇಲೆ ವಿಧಿಸಬಹುದಾದ ಅಂಥ ಇತರ ಪ್ರಕಾರ್ಯಗಳು ಮತ್ತು ಕರ್ತವ್ಯಗಳನ್ನು ನೆರವೇರಿಸುವುದು.

34. ಹಣಕಾಸು ಸಮಿತಿ.– (1) ಪ್ರತಿಯೊಂದು ವಿಶ್ವವಿದ್ಯಾಲಯವು ಈ ಮುಂದಿನ ಸದಸ್ಯರನ್ನು ಒಳಗೊಂಡ ಒಂದು ಹಣಕಾಸು ಸಮಿತಿಯನ್ನು ಹೊಂದಿರತಕ್ಕದ್ದು, ಎಂದರೆ:–

(ಎ) ಕುಲಪತಿ (ಅಧ್ಯಕ್ಷ);

(ಬಿ) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ಆರ್ಥಿಕ ಇಲಾಖೆ ಅಥವಾ ಉಪಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಆತನ ನಾಮನಿರ್ದೇಶಿತ;

(ಸಿ) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ ಅಥವಾ ಉಪ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಆತನ ನಾಮನಿರ್ದೇಶಿತ;

(ಡಿ) ಕುಲಪತಿಯು ಸಲ್ಲಿಸಿದ ಪಟ್ಟಿಯಿಂದ ಕುಲಾಧಿಪತಿಯು ನಾಮನಿರ್ದೇಶಿಸಿದ ವಿಶ್ವವಿದ್ಯಾನಿಲದ ಹಣಕಾಸು ಅಥವಾ ಲೆಕ್ಕಪತ್ರಗಳ ಸೇವೆಯಲ್ಲಿರುವ ಒಬ್ಬ ಪರಿಣಿತ;

(ಇ) ಸಂಬಂಧಪಟ್ಟ ವಿಶ್ವವಿದ್ಯಾನಿಲಯದ ಕುಲಪತಿಯು ನಾಮನಿರ್ದೇಶಿಸಿದ ಕಾರ್ಯನಿರ್ವಾಹಕ ಪರಿಷತ್ತಿನ ಒಬ್ಬ ಸದಸ್ಯ;

(ಎಫ್) ಕುಲಸಚಿವನು ಸದಸ್ಯನಾಗಿರತಕ್ಕದ್ದು; ಮತ್ತು

(ಜಿ) ಹಣಕಾಸು ಅಧಿಕಾರಿಯು ಸದಸ್ಯ – ಕಾರ್ಯದರ್ಶಿಯಾಗಿರತಕ್ಕದ್ದು.

(2) ಹಣಕಾಸು ಸಮಿತಿಯು, ಶೈಕ್ಷಣಿಕ ವರ್ಷದಲ್ಲಿ ಕನಿಷ್ಠಪಕ್ಷ ನಾಲ್ಕು ಬಾರಿ ಸಭೆ ಸೇರತಕ್ಕದ್ದು ಮತ್ತು ಎರಡು ನಿರಂತರ ಸಭೆಗಳ ನಡುವಿನ ಅವಧಿಯು ಹನ್ನೆರಡು ವಾರಗಳನ್ನು ಮೀರತಕ್ಕದ್ದಲ್ಲ.

(3) ಹಣಕಾಸು ಸಮಿತಿಯು ಈ ಮುಂದಿನ ಅಧಿಕಾರಗಳು, ಪ್ರಕಾರ್ಯಗಳು ಮತ್ತು ಕರ್ತವ್ಯಗಳನ್ನು ಹೊಂದಿರತಕ್ಕದ್ದು, ಎಂದರೆ:–

(ಎ) ವಿಶ್ವವಿದ್ಯಾನಿಲಯದ ವಾರ್ಷಿಕ ಬಜೆಟ್ ಅಂದಾಜುಗಳನ್ನು ಮತ್ತು ವಾರ್ಷಿಕ ಲೆಕ್ಕಪತ್ರಗಳನ್ನು ಪರಿಶೀಲಿಸುವುದು, ವಾರ್ಷಿಕ ಲೆಕ್ಕಪರಿಶೋಧನೆಯ ವರದಿಗಳನ್ನು ಪುನರವಲೋಕಿಸುವುದು ಮತ್ತು ಅದರ ಮೇಲೆ ಶಿಫಾರಸ್ಸುಗಳನ್ನು ಮಾಡುವುದು;

(ಬಿ) ವಿಶ್ವವಿದ್ಯಾನಿಲಯದಲ್ಲಿ ಹುದ್ದೆಗಳ ಸೃಜನೆ, ಮೇಲ್ದರ್ಜೆಗೇರಿಸುವುದು ಮತ್ತು ರದ್ದಿಯಾತಿಯೂ ಒಳಗೊಂಡಂತೆ, ಬಜೆಟ್ಟಿನಲ್ಲಿ ಒದಗಿಸಿದ ಮೊಬಲಗಿಗಿಂತ ಹೆಚ್ಚುವರಿ ವೆಚ್ಚವನ್ನು ಒಳಗೊಂಡ ವಿಶ್ವವಿದ್ಯಾನಿಲಯದ ಎಲ್ಲ ಪ್ರಸ್ತಾವಗಳನ್ನು ಪರಿಶೀಲಿಸುವುದು ಮತ್ತು ಅವುಗಳ ಮೇಲೆ ಶಿಫಾರಸ್ಸುಗಳನ್ನು ಮಾಡುವುದು;

(ಸಿ) ವಿಶ್ವವಿದ್ಯಾನಿಲಯಕ್ಕೆ ನಿಧಿಗಳನ್ನು ಸಂಗ್ರಹಿಸುವುದಕ್ಕಾಗಿ ಪ್ರಾಯೋಗಿಕ ಮತ್ತು ಅನುಷ್ಠಾನಸಾಧ್ಯವಿರುವ ಕಾರ್ಯತಂತ್ರಗಳನ್ನು ಯೋಜಿಸುವುದು ಮತ್ತು ವಿಶ್ವವಿದ್ಯಾನಿಲಯದ ವಶದಲ್ಲಿರುವ ಹೆಚ್ಚುವರಿ ನಿಧಿಗಳ ಹೂಡಿಕೆಗೆ ಸೂಕ್ತ ಯೋಜನೆಗಳನ್ನು ಸಿದ್ಧಪಡಿಸುವುದು ಹಾಗೂ ಅದರ ಮೇಲೆ ಶಿಫಾರಸ್ಸುಗಳನ್ನು ಮಾಡುವುದು;

(ಡಿ) ಪರಿನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ಇತರ ಪ್ರಕಾರ್ಯಗಳು:

ಪರಂತು, ಮೇಲಿನ ಶಿಫಾರಸುಗಳನ್ನು ವಿದ್ಯಾವಿಷಯಕ ಪರಿಷತ್ತಿನ ಸಭೆಗಳಲ್ಲಿ ಅದರ ಪರಿಶೀಲನೆಗಾಗಿ ಮಂಡಿಸತಕ್ಕದ್ದು.

(4) (2)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಕುಲಪತಿಯು, ತುರ್ತು ಸಂದರ್ಭಗಳಲ್ಲಿ ಮತ್ತು ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ, ಹಣಕಾಸು ಸಮಿತಿಯ ಒಪ್ಪಿಗೆ ಇಲ್ಲದೆ, ಬಜೆಟ್ಟಿನಲ್ಲಿ ಹಣ ಒದಗಿಸಿಲ್ಲದ ಅಥವಾ ಬಜೆಟ್ಟಿನಲ್ಲಿ ಒದಗಿಸಿದ ಹಣಕ್ಕಿಂತ ಹೆಚ್ಚುವರಿಯಾದ ಯಾವುದೇ ಒಂದು ಸಂದರ್ಭದಲ್ಲಿ, ಪರಿನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಮಿತಿಯವರೆಗೆ ಯಾವುದೇ ವೆಚ್ಚವನ್ನು ಭರಿಸಬಹುದು:

ಪರಂತು, ಅಂಥ ವೆಚ್ಚವನ್ನು ಸ್ಥಿರೀಕರಣಕ್ಕಾಗಿ ಹಣಕಾಸು ಸಮಿತಿಯ ಮುಂದಿನ ನಿಕಟ ತರುವಾಯದ ತ್ರೈಮಾಸಿಕ ಸಭೆಯಲ್ಲಿ ಮಂಡಿಸತಕ್ಕದ್ದು:

ಮತ್ತು ಪರಂತು, ಕುಲಪತಿಯವರ ಮೂಲಕ ವೆಚ್ಚದ ಭರಿಸುವಿಕೆಯು ತೃಪ್ತಿಕರವಾಗಿಲ್ಲದಿದ್ದಲ್ಲಿ, ಹಣಕಾಸು ಸಮಿತಿಯು ಅದನ್ನು ಕುಲಾಧಿಪತಿಯವರಿಗೆ ಉಲ್ಲೇಖಿಸಬಹುದು, ಈ ವಿಷಯದಲ್ಲಿ ಅವರ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

35. ವ್ಯಾಸಂಗ ವಿಭಾಗಗಳು.– (1) ವಿಶ್ವವಿದ್ಯಾನಿಲಯವು ಕಲೆ, ವಿಜ್ಞಾನ, ವಾಣಿಜ್ಯ, ವ್ಯವಸ್ಥಾಪನೆ, ಶಿಕ್ಷಣ, ಇಂಜಿನಿಯರಿಂಗ್, ತಂತ್ರಜ್ಞಾನ ಮತ್ತು ಕಾಲಕಾಲಕ್ಕೆ ಪರಿನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ಇತರ ವ್ಯಾಸಂಗ ವಿಭಾಗಗಳನ್ನು ಹೊಂದಿರತಕ್ಕದ್ದು:

ಪರಂತು, ವಿಶೇಷ ಉದ್ದೇಶದ ವಿಶ್ವವಿದ್ಯಾನಿಲಯಗಳು ಅವುಗಳ ಉದ್ದೇಶಗಳಿಗೆ ಸರಿಹೊಂದುವ ವ್ಯಾಸಾಂಗ ವಿಭಾಗಗಳನ್ನು ಹೊಂದತಕ್ಕದ್ದು.

(2) ವ್ಯಾಸಂಗ ವಿಭಾಗಗಳ ರಚನೆ, ಅಧಿಕಾರಗಳು ಮತ್ತು ಪ್ರಕಾರ್ಯಗಳು ಪರಿನಿಯಮಗಳ ಮೂಲಕ ಉಪಬಂಧಿಸಬಹುದಾದಂತೆ ಇರತಕ್ಕದ್ದು.

36. ಅಧ್ಯಯನ ಮಂಡಲಿಗಳು.– (1) ಪ್ರತಿಯೊಂದು ವಿಶ್ವವಿದ್ಯಾನಿಲಯದಲ್ಲಿ, ಆರ್ಡಿನೆನ್ಸ್‌ಗಳ ಮೂಲಕ ನಿಯಮಿಸಬಹುದಾದಂತೆ ಪ್ರತಿಯೊಂದು ವಿಷಯಕ್ಕೆ ಅಥವಾ ವಿಷಯಗಳ ಸಮೂಹಕ್ಕೆ ಒಂದು ಅಧ್ಯಯನ ಮಂಡಲಿ ಇರತಕ್ಕದ್ದು:

ಪರಂತು, ಕಾರ್ಯನಿರ್ವಾಹಕ ಪರಿಷತ್ತು, ಪದವಿ (under –graduate) ಅಧ್ಯಯನಗಳಿಗಾಗಿ ಮತ್ತು ಸ್ನಾತಕೋತ್ತರ ಅಧ್ಯಯನಗಳಿಗಾಗಿ ಪ್ರತ್ಯೇಕ ಅಧ್ಯಯನ ಮಂಡಲಿಗಳನ್ನು ರಚಿಸಬಹುದು.

(2) (1)ನೇ ಉಪಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, ಅಧ್ಯಯನ ಮಂಡಲಿಯ ರಚನೆ, ಪ್ರಕಾರ್ಯಗಳು ಮತ್ತು ಅಧಿಕಾರಗಳು ಪರಿನಿಯಮಗಳ ಮೂಲಕ ಉಪಬಂಧಿಸಬಹುದಾದಂತೆ ಇರತಕ್ಕದ್ದು.

37. ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ.– (1) ಶೈಕ್ಷಣಿಕ ವ್ಯಾಸಂಗ ಕ್ರಮಗಳ, ಸಂಶೋಧನಾ ಕಾರ್ಯಕ್ರಮಗಳ, ಆಂತರಿಕ ಶಿಸ್ತು (inter-disciplinary) ಕಾರ್ಯಚಟುವಟಿಕೆಗಳ ಹಾಗೂ ತರಬೇತಿ, ವಿಸ್ತರಣೆ ಮತ್ತು ಸಂಶೋಧನೆಗಾಗಿ ಬಾಹ್ಯ ಏಜೆನ್ಸಿಗಳೊಂದಿಗೆ ಸಂವಾದ ಚಟುವಟಿಕೆ ನಡೆಸುವುದಕ್ಕಾಗಿ ಮತ್ತು ಅದರಿಂದ ರೂಪಿಸಲಾದ ಕಾರ್ಯಕ್ರಮಗಳು ಮತ್ತು ಕಾರ್ಯಚಟುವಟಿಕೆಗಳನ್ನು ಕಾಲಕಾಲಕ್ಕೆ ಜಾರಿಗೊಳಿಸುವುದರ ಮೇಲ್ವಿಚಾರಣೆ ಮಾಡುವುದಕ್ಕಾಗಿ ಒಂದು ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಲಿಯು ಇರತಕ್ಕದ್ದು.

(2) (1)ನೇ ಉಪಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, ಅಧ್ಯಯನ ಮಂಡಲಿಯ ರಚನೆ, ಪ್ರಕಾರ್ಯಗಳು ಮತ್ತು ಅಧಿಕಾರಗಳು ಪರಿನಿಯಮಗಳ ಮೂಲಕ ಉಪಬಂಧಿಸಬಹುದಾದಂತೆ ಇರತಕ್ಕದ್ದು.

38. ಪರೀಕ್ಷಕರ ನೇಮಕಾತಿ ಮಂಡಲಿ.– (1) ಪ್ರತಿಯೊಂದು ವ್ಯಾಸಂಗ ವಿಭಾಗಕ್ಕೆ, ಪ್ರತಿವರ್ಷಕ್ಕಾಗಿ ಪರೀಕ್ಷಕರ ಪಟ್ಟಿಯನ್ನು ತಯಾರಿಸುವ ಉದ್ದೇಶಕ್ಕಾಗಿ, ಪರೀಕ್ಷಕರ ನೇಮಕಾತಿ ಮಂಡಲಿಯನ್ನು ರಚಿಸತಕ್ಕದ್ದು.

(2) ಪರೀಕ್ಷಕರ ನೇಮಕಾತಿ ಮಂಡಳಿಯ ರಚನೆ, ಅಧಿಕಾರಗಳು ಮತ್ತು ಪ್ರಕಾರ್ಯಗಳು, ಪರಿನಿಯಮಗಳಲ್ಲಿ ಉಪಬಂಧಿಸಿದಂತೆ ಇರತಕ್ಕದ್ದು.

39. ಇತರ ಮಂಡಲಿಗಳು, ಸಮಿತಿಗಳು ಮತ್ತು ಪರಿಷತ್ತುಗಳು.– (1) ವಿಶ್ವವಿದ್ಯಾನಿಲಯವು, ಕಾಲಕಾಲಕ್ಕೆ ಪರಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಅಂಥ ಇತರ ಮಂಡಲಿಗಳನ್ನು, ಸಮಿತಿಗಳನ್ನು ಮತ್ತು ಪರಿಷತ್ತುಗಳನ್ನು ಸ್ಥಾಪಿಸಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಸ್ಥಾಪಿಸಲಾದ ಮಂಡಲಿಗಳ, ಸಮಿತಿಗಳ ಮತ್ತು ಪರಿಷತ್ತುಗಳ ರಚನೆ, ಪ್ರಕಾರ್ಯಗಳು, ಅಧಿಕಾರಗಳು ಮತ್ತು ಕರ್ತವ್ಯಗಳು ಪರಿನಿಯಮಗಳ ಮೂಲಕ ನಿಯಮಿಸಲಾದಂತೆ ಇರತಕ್ಕದ್ದು.

40. ಕಾರ್ಯನಿರ್ವಾಹಕ ಪರಿಷತ್ತಿನ ಮತ್ತು ವಿದ್ಯಾವಿಷಯಕ ಪರಿಷತ್ತಿನ ಸದಸ್ಯರ ಪದಾವಧಿ.– (1) ಅನ್ಯಥಾ ಉಪಬಂಧಿಸಿದ್ದ ಹೊರತು, ಕಾರ್ಯನಿರ್ವಾಹಕ ಪರಿಷತ್ತಿನ ಮತ್ತು ವಿದ್ಯಾವಿಷಯಕ ಪರಿಷತ್ತಿನ ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ, ಉಳಿದ ಸದಸ್ಯರ ಪದಾವಧಿಯು ಮೂರು ವರ್ಷಗಳು ಆಗಿರತಕ್ಕದ್ದು.

(2) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಕಾರ್ಯನಿರ್ವಾಹಕ ಪರಿಷತ್ತನ್ನು ಮತ್ತು ವಿದ್ಯಾವಿಷಯಕ ಪರಿಷತ್ತನ್ನು, ಮೂರು ವರ್ಷಗಳಿಗೊಮ್ಮೆ, ಏಕಕಾಲದಲ್ಲಿ, ಕುಲಪತಿಯು ಪುನಾರಚಿಸತಕ್ಕದ್ದು.

41. ಪ್ರಾಧಿಕಾರಗಳ ಸದಸ್ಯತ್ವ ಹೊಂದಲು ನಿರ್ಬಂಧ.– (1) ಈ ಅಧಿನಿಯಮದ ಅಡಿಯಲ್ಲಿ, ಯಾವುದೇ ಪ್ರಾಧಿಕಾರಕ್ಕೆ ನಾಮನಿರ್ದೇಶಿತನಾದ ಯಾವೊಬ್ಬ ಸದಸ್ಯನು, ಸಂಬಂಧಪಟ್ಟ ನಾಮನಿರ್ದೇಶನ ಪ್ರಾಧಿಕಾರದ ಇಷ್ಟಪರ್ಯಂತ ಪದ ಧಾರಣಮಾಡತಕ್ಕದ್ದು.

(2) ಯಾವುವೇ ಪ್ರಾಧಿಕಾರಗಳಿಗೆ ನಾಮನಿರ್ದೇಶಿತನಾದ ಯಾವೊಬ್ಬ ವ್ಯಕ್ತಿಯು, ಒಂದೇ ಅವಧಿಗಾಗಿ ಮಾತ್ರವೇ ಪದಧಾರಣ ಮಾಡತಕ್ಕದ್ದು ಮತ್ತು ಯಾವುದೇ ಪ್ರಾಧಿಕಾರಕ್ಕೆ ಎರಡನೇ ಅವಧಿಗಾಗಿ ನಾಮನಿರ್ದೇಶಿತನಾಗತಕ್ಕದ್ದಲ್ಲ.

(3) ವಿಶ್ವವಿದ್ಯಾಲಯದ ಯಾವುವೇ ಪ್ರಾಧಿಕಾರಗಳಿಗೆ ನಾಮನಿರ್ದೇಶಿತನಾದ ಪ್ರತಿಯೊಬ್ಬ ಸದಸ್ಯನು, ಆತನ ಗಮನಕ್ಕೆ ಬರಬಹುದಾದ ಅಕ್ರಮತೆಗಳು, ಯಾವುದಾದರೂ ಇದ್ದಲ್ಲಿ, ಅವುಗಳನ್ನು ನಾಮನಿರ್ದೇಶನ ಮಾಡಿದ ಪ್ರಾಧಿಕಾರಕ್ಕೆ ವರದಿ ಮಾಡುವುದು ಆತನ ಕರ್ತವ್ಯವಾಗಿರತಕ್ಕದ್ದು.

(4) ಯಾವುದೇ ಪ್ರಾಧಿಕಾರಕ್ಕೆ ನಾಮನಿರ್ದೇಶನಗೊಂಡ ಯಾವೊಬ್ಬ ವ್ಯಕ್ತಿಯನ್ನು, ಅವನ ದುರ್ವರ್ತನೆ, ದುರ್ನಡತೆಯ ಆಧಾರದ ಮೇಲೆ ಅಥವಾ ಅನ್ಯಥಾ ಆ ಬಗ್ಗೆ ವಿಚಾರಣೆ ನಡೆಸಿದ ತರುವಾಯ, ರಾಜ್ಯ ಸರ್ಕಾರದೊಡನೆ ಸಮಾಲೋಚಿಸಿ, ಕುಲಾಧಿಪತಿಯು, ಯಾವುದೇ ಸಮಯದಲ್ಲಿ ಅಂಥ ಸದಸ್ಯತ್ವದಿಂದ ತೆಗೆದುಹಾಕತಕ್ಕದ್ದು:

ಪರಂತು, ಕಾರ್ಯನಿರ್ವಾಹಕ ಪರಿಷತ್ತಿನ ಅಥವಾ ವಿದ್ಯಾವಿಷಯಕ ಪರಿಷತ್ತಿನ ಯಾವೊಬ್ಬ ಪದನಿಮಿತ್ತ ಸದಸ್ಯನು ವಯೋನಿವೃತ್ತಿ ಹೊಂದಿದ್ದರ ಮೇಲೆ ಸದಸ್ಯತ್ವ ಹೊಂದಿರುವುದು ನಿಂತುಹೋಗತಕ್ಕದ್ದು.

(5) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದುದನ್ನು ಉಳಿದು, ವ್ಯಕ್ತಿಯು ಕಾನೂನಿನ ಅಡಿಯಲ್ಲಿ ಸ್ಥಾಪಿತಗೊಂಡ ಯಾವುದೇ ವಿಶ್ವವಿದ್ಯಾನಿಲಯದ ಪದವೀಧರನಾಗಿರದ ಹೊರತು, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಪ್ರಾಧಿಕಾರದ ಒಬ್ಬ ಸದಸ್ಯನೆಂಬುದಾಗಿ ನಾಮನಿರ್ದೇಶಿತನಾಗಲು ಅರ್ಹನಾಗತಕ್ಕದ್ದಲ್ಲ.

(6) ಈ ಅಧಿನಿಯಮದಲ್ಲಿ ಒಳಗೊಂಡಿರುವುದಾವುದೂ, ಅನ್ಯಥಾ ಉಪಬಂಧಿಸಿದನ್ನು ಉಳಿದು, ವಿಶ್ವವಿದ್ಯಾನಿಲಯದ ಯಾವೊಬ್ಬ ನೌಕರನು, ಬೋಧನೆ ಮತ್ತು ಬೋಧಕೇತರ ಎರಡರಲ್ಲೂ ಅಥವಾ ಲಿಪಿಕ ಸಿಬ್ಬಂದಿ ಅಥವಾ ಸಂಯೋಜಿತ ಕಾಲೇಜಿನ ವ್ಯವಸ್ಥಾಪನೆಯಲ್ಲಿರುವ ಯಾವೊಬ್ಬ ವ್ಯಕ್ತಿಯು, ಅವನು ಯಾವುದೇ ಸಾಮರ್ಥ್ಯ ಹೊಂದಿರಲಿ ಅವನು ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಪ್ರಾಧಿಕಾರದ ಸದಸ್ಯನೆಂಬುದಾಗಿ ನಾಮನಿರ್ದೇಶಿತನಾಗಲು ಅರ್ಹನಾಗಿರತಕ್ಕದ್ದಲ್ಲ.

ಅಧ್ಯಾಯ V

ಪರಿನಿಯಮಗಳು, ಆರ್ಡಿನೆನ್ಸ್‌ಗಳು, ವಿನಿಯಮಗಳು ಮತ್ತು ನಿಯಮಗಳು

42. ಪರಿನಿಯಮಗಳು.– (1) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಪರಿನಿಯಮಗಳು, ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಈ ಮುಂದಿನ ಎಲ್ಲ ಅಥವಾ ಯಾವುವೇ ವಿಷಯಗಳಿಗೆ ಉಪಬಂಧಿಸಬಹುದು, ಎಂದರೆ:–

(ಎ) ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಮತ್ತು ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳೆಂದು ಕಾಲಕಾಲಕ್ಕೆ ಘೋಷಿಸಬಹುದಾದ ಅಂಥ ಇತರ ನಿಕಾಯಗಳ ರಚನೆ, ಅಧಿಕಾರಗಳು, ಪ್ರಕಾರ್ಯಗಳು ಮತ್ತು ಕರ್ತವ್ಯಗಳು;

(ಬಿ) ಮೊದಲಿನ ಸದಸ್ಯರು ಪದದಲ್ಲಿ ಮುಂದುವರಿಯುವುದು ಒಳಗೊಂಡಂತೆ ಸದರಿ ಪ್ರಾಧಿಕಾರಗಳ ಅಥವಾ ನಿಕಾಯಗಳ ಸದಸ್ಯರ ನೇಮಕ ಮತ್ತು ಅವರು ಪದದಲ್ಲಿ ಮುಂದುವರೆಯುವುದು ಅಥವಾ ಹಿಂದೆ ಪಡೆಯುವುದು ಅಥವಾ ತೆಗೆದು ಹಾಕುವುದು ಮತ್ತು ಸದಸ್ಯರ ಖಾಲಿ ಸ್ಥಾನಗಳನ್ನು ತುಂಬುವುದು ಹಾಗೂ ಪ್ರಾಧಿಕಾರಗಳಿಗೆ ಅಥವಾ ನಿಕಾಯಗಳಿಗೆ ಸಂಬಂಧಪಟ್ಟಂತೆ ಯಾವ ವಿಷಯಗಳಿಗೆ ಉಪಬಂಧಿಸುವುದು ಅವಶ್ಯವಾಗಬಹುದೋ ಅಥವಾ ಅಪೇಕ್ಷಣೀಯವಾಗಬಹುದೋ ಆ ಎಲ್ಲ ಇತರ ವಿಷಯಗಳ ಬಗ್ಗೆ ಉಪಬಂಧಿಸುವುದು;

(ಸಿ) ಗೌರವ ಪದವಿಗಳನ್ನು ಪ್ರದಾನ ಮಾಡುವುದು;

(ಡಿ) ಪದವಿ ಮತ್ತು ಡಿಪ್ಲೋಮಾಗಳನ್ನು ಪ್ರದಾನ ಮಾಡಲು ಘಟಿಕೋತ್ಸವಗಳನ್ನು ನಡೆಸುವುದು ಮತ್ತು ತುರ್ತು ಸಂದರ್ಭದಲ್ಲಿ ಘಟಿಕೋತ್ಸವಕ್ಕೆ ಮೊದಲು ಪದವಿ ಪ್ರಮಾಣಪತ್ರಗಳನ್ನು ನೀಡುವುದು;

(ಇ) ಪದವಿಗಳ, ಡಿಪ್ಲೋಮಾಗಳ, ಸರ್ಟಿಫಿಕೇಟ್‌ಗಳ ಹಾಗೂ ಇತರ ವಿದ್ಯಾವಿಷಯಕ ಪ್ರಶಸ್ತಿಗಳನ್ನು ಹಿಂತೆಗೆದುಕೊಳ್ಳುವುದು;

(ಎಫ್) ವ್ಯಾಸಂಗ ವಿಭಾಗಗಳು, ವಿಭಾಗಗಳು, ವಿದ್ಯಾರ್ಥಿ ನಿಲಯಗಳು, ಕಾಲೇಜುಗಳು ಮತ್ತು ಸಂಸ್ಥೆಗಳ ಸ್ಥಾಪನೆ, ನಿರ್ವಹಣೆ ಮತ್ತು ಅವುಗಳನ್ನು ರದ್ದುಪಡಿಸುವುದು;

(ಜಿ) ಕಾಲೇಜುಗಳು ಸಂಯೋಜಿತ ಕಾಲೇಜುಗಳು ಸ್ವಾಯತ್ತ ಕಾಲೇಜುಗಳೆಮದು ಪ್ರತ್ಯೇಕವಾಗಿ ಅಥವಾ ಸಮೂಹಗಳು (ಕ್ಲಸ್ಟರ್) ಸಂಯೋಜನೆಗೊಳ್ಳಬಹುದಾದ ಮತ್ತು ಸಂಶೋಧನಾ ಕೇಂದ್ರಗಳಾಗಿ ಮನ್ನಣೆ ಪಡೆದು ಹಾಗೂ ಅಂಥ ಸಂಯೋಜನೆಯನ್ನು ಹಿಂತೆಗೆದುಕೊಳ್ಳಬಹುದಾದ ಷರತ್ತುಗಳು;

ಪರಂತು, ಈ ಖಂಡದಲ್ಲಿರುವುದಾವುದೂ ಏಕಾತ್ಮಕ ಸ್ವರೂಪದ ವಿಶ್ವವಿದ್ಯಾನಿಲಯಗಳಿಗೆ ಅನ್ವಯವಾಗತಕ್ಕದ್ದಲ್ಲ.

(ಎಚ್) ಸಂಶೋಧನೆಯ ಉದ್ದೇಶಕ್ಕಾಗಿ ಸಂಸ್ಥೆಗಳಿಗೆ ಮನ್ನಣೆಯನ್ನು ನೀಡಲು ಷರತ್ತುಗಳು;

(ಐ) ಫೆಲೋಶಿಪ್‌ಗಳು, ವಿದ್ಯಾರ್ಥಿ ವೇತನಗಳು, ಶಿಷ್ಯ ವೇತನಗಳು, ಪ್ರವೇತನಗಳು, ಪದಕಗಳು ಮತ್ತು ಪಾರಿತೋಷಕಗಳ ಸ್ಥಾಪನೆ;

(ಜೆ) ವಿಶ್ವವಿದ್ಯಾನಿಲಯ ವಿಭಾಗಗಳು ಮತ್ತು ಘಟಕ ಕಾಲೇಜುಗಳ ಗೌರವ ಅಥವಾ ವಿಶ್ರಾಂತ ಅಥವಾ ಹಂಗಾಮಿ (adjunct) ಪ್ರಾಧ್ಯಾಪಕರನ್ನೊಳಗೊಂಡ ಪ್ರಾಧ್ಯಾಪಕರು, ಸಹಪ್ರಾಧ್ಯಾಪಕರು ಅಥವಾ ರೀಡರುಗಳು, ಸಹಾಯಕ ಪ್ರಾಧ್ಯಾಪಕರು ಅಥವಾ ಉಪನ್ಯಾಸಕರು, ಲಿಪಿಕ ಮತ್ತು ಬೋಧಕೇತರರನ್ನು ಒಳಗೊಂಡಂತೆ ಪ್ರಾಧ್ಯಾಪಕರ ಹುದ್ದೆಗಳ ಸೃಜನೆ, ಅಮಾನತ್ತು ಅಥವಾ ಹುದ್ದೆಗಳ ಪದ್ಧತಿ;

(ಕೆ) ವಿಶ್ವವಿದ್ಯಾನಿಲಯ ವಿಭಾಗಗಳ ಮತ್ತು ಘಟಕ ಕಾಲೇಜುಗಳ ಹುದ್ದೆಗಳ ಸೃಜನೆ;

(ಎಲ್) ವಿಶ್ವವಿದ್ಯಾನಿಲಯಗಳಲ್ಲಿ ಮತ್ತು ಸಂಯೋಜಿತ ಕಾಲೇಜುಗಳಲ್ಲಿ ಅಧ್ಯಾಪಕರ ನೇಮಕಾತಿಯ ವಿಧಾನ:

ಪರಂತು, ವಿಶ್ವವಿದ್ಯಾನಿಲಯ ಅನುದಾನ ಆಯೋಗದ ವೇತನ ಶ್ರೇಣಿಗಳನ್ನು ಪಡೆಯುತ್ತಿರುವವರನ್ನು ಹೊರತುಪಡಿಸಿ, ನೌಕರರ ವೇತನ ಶ್ರೇಣಿಗಳು, ರಾಜ್ಯ ಸರ್ಕಾರಿ ನೌಕರರಿಗೆ ಅನ್ವಯವಾಗುವ ವೇತನ ಶ್ರೇಣಿಗಳಿಗೆ ಅನುಗುಣವಾಗಿರತಕ್ಕದ್ದು.

(ಎಮ್) ಮರಣ ಶಾಸನ ಮೂಲಕದ ಸ್ವತ್ತಿನ, ದೇಣಿಗೆಗಳ ಮತ್ತು ದತ್ತಿಗಳ ಸ್ವೀಕಾರ ಮತ್ತು ನಿರ್ವಹಣೆ;

(ಎನ್) ವಿಶ್ವವಿದ್ಯಾನಿಲಯದಲ್ಲಿ ಮತ್ತು ಸಂಯೋಜಿತ ಕಾಲೇಜುಗಳಲ್ಲಿ ಪ್ರವೇಶಗಳ ಮತ್ತು ಶುಲ್ಕದ ಸ್ವರೂಪದ ನಿಯಂತ್ರಣ ಮತ್ತು ವಿಶ್ವವಿದ್ಯಾನಿಲಯದ ಪರೀಕ್ಷೆಗಳು, ಪದವಿಗಳು ಮತ್ತು ಡಿಪ್ಲೋಮಾಗಳ ಪ್ರವೇಶಗಳಿಗಾಗಿ ನಿಯಂತ್ರಣ;

(ಓ) ವಿಶ್ವವಿದ್ಯಾನಿಲಯವು ಸಲ್ಲಿಸಿದ ಸೇವೆಗಳಿಗಾಗಿ ವಿಧಿಸಬೇಕಾದ ಶುಲ್ಕಗಳು;

(ಪಿ) ವಿಶ್ವವಿದ್ಯಾನಿಲಯದ ವಿಭಾಗಗಳು, ಘಟಕ ಕಾಲೇಜುಗಳು ಮತ್ತು ಸಂಯೋಜಿತ ಕಾಲೇಜುಗಳಲ್ಲಿ ಪ್ರಾಯೋಜಿತ ಸಂಶೋಧನೆ, ಸಮಾಲೋಚನೆ, ಪೇಟೆಂಟುಗಳು ಮತ್ತು ಬೌದ್ಧಿಕ ಸ್ವತ್ತು ಹಕ್ಕುಗಳು, ಮುಂದುವರಿಕೆ ಶಿಕ್ಷಣ ಹಾಗೂ ಇತರ ವಿಸ್ತರಣಾ ಸೇವೆಗಳ ವಿಧಾನ ಮತ್ತು ನಿರ್ವಹಣೆ.

(ಕ್ಯೂ) ಉಪಲಬ್ಧಿಗಳನ್ನು ಒಳಗೊಂಡಂತೆ ವಿಶ್ವವಿದ್ಯಾನಿಲಯ, ವಿಭಾಗಗಳು ಅಥವಾ ಘಟಕ ಮತ್ತು ಸಂಯೋಜಿತ ಕಾಲೇಜುಗಳ ನೌಕರರ ಜೇಷ್ಠತೆಯ ನಿರ್ಧರಣೆಯನ್ನು ಒಳಗೊಂಡ ಸೇವಾ ಷರತ್ತುಗಳು;

(ಆರ್) ಈ ಅಧಿನಿಯಮದ ಮೂಲಕ ಅಥವಾ ಪರಿನಿಯಮಗಳ ಮೂಲಕ ಉಪಬಂಧಿಸಬೇಕಾದ ಅಥವಾ ಉಪಬಂಧಿಸಬಹುದಾದ ಎಲ್ಲ ಇತರ ವಿಷಯಗಳು.

(2) ಪರಿನಿಯಮಗಳು, ಕುಲಾಧಿಪತಿಯವರ ಅನುಮೋದನೆಯ ದಿನಾಂಕದಿಂದ ಅಥವಾ ಕುಲಾಧಿಪತಿಯವರು ನಿರ್ದೇಶಿಸಬಹುದಾದ ಇತರ ಅಂಥ ದಿನಾಂಕದಿಂದ ಮಾತ್ರ ಜಾರಿಗೆ ಬರತಕ್ಕದ್ದು.

(3) ಉಪಲಬ್ಧಿಗಳು ಒಳಗೊಂಡಂತೆ ನೌಕರರ ಸೇವಾಷರತ್ತುಗಳನ್ನು ನಿಯಂತ್ರಿಸುವ ಒಳ್ಳಪಡುವ ಪರಿನಿಯಮಗಳು ರಾಜ್ಯ ಸರ್ಕಾರದ ಕಾರ್ಯನೀತಿಗೆ ಸುಸಂಗತವಾಗಿರತಕ್ಕದ್ದು.

(4) ರಾಜ್ಯ ಸರ್ಕಾರವು ಎಲ್ಲಾ ವಿಶ್ವವಿದ್ಯಾನಿಲಯಗಳಿಗೆ ಮಾದರಿ ಪರಿನಿಯಮಗಳನ್ನು ಪರಿಚಲಿಸತಕ್ಕದ್ದು. ರಾಜ್ಯ ಸರ್ಕಾರವು ರಚಿಸಿದ ಮತ್ತು ಪರಿಚಲನೆ ಮಾಡಿದ ಮಾದರಿ ಪರಿನಿಯಮಗಳನ್ನು ಸಂಬಂಧಪಟ್ಟ ವಿಶ್ವವಿದ್ಯಾನಿಲಯಗಳು ಅಳವಡಿಸಿಕೊಳ್ಳತಕ್ಕದ್ದು ಮತ್ತು ಜಾರಿಗೊಳಿಸತಕ್ಕದ್ದು. ಅಂಥ ಪರಿನಿಯಮಗಳನ್ನು ರಚಿಸುವುದಕ್ಕಾಗಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ತಜ್ಞರ ಒಂದು ಸಮಿತಿಯನ್ನು ಸ್ಥಾಪಿಸಬಹುದು, ಅದು ಈ ವಿಷಯದಲ್ಲಿ ಮುಂದಿನ ಕ್ರಮ ತೆಗೆದುಕೊಳ್ಳಲು ರಾಜ್ಯ ಸರ್ಕಾರಕ್ಕೆ ಕರಡು ಮಾದರಿ ಪರಿನಿಯಮಗಳನ್ನು ಸಲ್ಲಿಸತಕ್ಕದ್ದು.

43. ಪರಿನಿಯಮಗಳ ಅಧಿನಿಯಮಿತಿ ಮತ್ತು ಅವುಗಳ ರಚನೆ.– (1) ಪ್ರತಿಯೊಂದು ವಿಶ್ವವಿದ್ಯಾನಿಲಯದ ಕಾರ್ಯನಿರ್ವಾಹಕ ಪರಿಷತ್ತು ಕಾಲಕಾಲಕ್ಕೆ ಹೊಸ ಅಥವಾ ಹೆಚ್ಚುವರಿ ಪರಿನಿಯಮಗಳನ್ನು ರಚಿಸಬಹುದು ಅಥವಾ ಮೇಲೆ ಉಲ್ಲೇಖಿಸಿದಂತೆ ಪರಿನಿಯಮಗಳನ್ನು ತಿದ್ದುಪಡಿ ಮಾಡಬಹುದು ಅಥವಾ ನಿರಸನಗೊಳಿಸಬಹುದು:

ಪರಂತು, ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರದ ಸ್ಥಾನಮಾನ, ಅಧಿಕಾರಗಳು ಅಥವಾ ಸ್ಥಾಪನೆಗೆ ಪರಿಣಾಮ ಬೀರುವ ಯಾವುದೇ ಪರಿನಿಯಮಗಳನ್ನು ಅಂಥ ಪ್ರಾಧಿಕಾರಕ್ಕೆ ಉದ್ದೇಶಿತ ಬದಲಾವಣೆಗಳ ಮೇಲೆ ಅಭಿಪ್ರಾಯವನ್ನು ಲಿಖಿತದಲ್ಲಿ ಹೇಳಿಕೊಳ್ಳುವ ಅವಕಾಶವನ್ನು ನೀಡಿದ ಹೊರತು ಕಾರ್ಯನಿರ್ವಾಹಕ ಪರಿಷತ್ತು ಪರಿನಿಯಮಗಳ ರಚನೆ, ತಿದ್ದುಪಡಿ ಅಥವಾ ನಿರಸನವನ್ನು ಮಾಡತಕ್ಕದ್ದಲ್ಲ ಮತ್ತು ಹಾಗೆ ನೀಡಿದ ಅಭಿಪ್ರಾಯವನ್ನು ಕಾರ್ಯನಿರ್ವಾಹಕ ಪರಿಷತ್ತು ಪರಿಗಣಿಸತಕ್ಕದ್ದು.

(2) ಪ್ರತಿಯೊಂದು ಹೊಸ ಪರಿನಿಯಮ ಅಥವಾ ಪರಿನಿಯಮಗಳಿಗೆ ಹೆಚ್ಚುವರಿ ಸೇರಿಸುವಿಕೆ ಅಥವಾ ಪರಿನಿಯಮಕ್ಕೆ ಮಾಡಿದ ಯಾವುದೇ ತಿದ್ದುಪಡಿಯನ್ನು ಅಥವಾ ಅದರ ನಿರಸನವನ್ನು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿಗೆ ಸಲ್ಲಿಸತಕ್ಕದ್ದು, ಪರಿಷತ್ತು ಅದನ್ನು ಪರಿಗಣಿಸತಕ್ಕದ್ದು ಮತ್ತು ತನ್ನ ಅಭಿಪ್ರಾಯದೊಂದಿಗೆ ಅದನ್ನು ರಾಜ್ಯ ಸರ್ಕಾರಕ್ಕೆ ವರ್ಗಾಯಿಸತಕ್ಕದ್ದು. ರಾಜ್ಯ ಸರ್ಕಾರವು ಮಾರ್ಪಾಡಿನೊಂದಿಗೆ ಅಥವಾ ಮಾರ್ಪಾಡುಗಳಿಲ್ಲದೆ ಅದನ್ನು ಎರಡು ತಿಂಗಳೊಳಗಾಗಿ ಒಪ್ಪಿಗೆಗಾಗಿ ಕುಲಾಧಿಪತಿಗೆ ಶಿಫಾರಸ್ಸು ಮಾಡಬಹುದು. ಅವರು ಒಪ್ಪಿಗೆಯನ್ನು ನೀಡಬಹುದು ಅಥವಾ ಒಪ್ಪಿಗೆಯನ್ನು ಕಾಯ್ದಿರಿಸಬಹುದು ಅಥವಾ ಎರಡು ತಿಂಗಳೊಳಗಾಗಿ ಮರುಪರಿಗಣನೆಗೆ ಕಾರ್ಯನಿರ್ವಾಹಕ ಪರಿಷತ್ತಿಗೆ ಹಿಂದಿರುಗಿಸಬಹುದು.

(3) ಕುಲಾಧಿಪತಿಯು ಒಪ್ಪಿಗೆ ನೀಡದ ಹೊರತು ಯಾವುದೇ ಪರಿನಿಯಮವು ಸಿಂಧುವಾಗತಕ್ಕದ್ದಲ್ಲ.

(4) ಕಾರ್ಯನಿರ್ವಾಹಕ ಪರಿಷತ್ತು ಪರಿನಿಯಮದ ಕರಡನ್ನು ತಾನಾಗಿಯೇ ಅಥವಾ ವಿದ್ಯಾವಿಷಯಕ ಪರಿಷತ್ತು ಮಾಡಿರುವ ಪ್ರಸ್ತಾವನೆಯ ಮೇರೆಗೆ ಪರಿಗಣನೆಗೆ ತೆಗೆದುಕೊಳ್ಳಬಹುದು. ವಿದ್ಯಾವಿಷಯಕ ಪರಿಷತ್ತು ಕರಡಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸದಿದ್ದಾಗ, ಅದನ್ನು ಪರಿಗಣಿಸುವ ಮೊದಲು ಕಾರ್ಯನಿರ್ವಾಹಕ ಪರಿಷತ್ತು ವಿದ್ಯಾವಿಷಯಕ ಪರಿಷತ್ತಿನ ಅಭಿಪ್ರಾಯವನ್ನು ಪಡೆಯತಕ್ಕದ್ದು.

(5) ಹಣಕಾಸು ತೊಡಕುಗಳನ್ನು ಒಳಗೊಂಡ ಅಂಥ ಪರಿನಿಯಮಗಳ ಸಂಬಂಧದಲ್ಲಿ ಹಣಕಾಸು ಸಮಿತಿಯ ಅಭಿಪ್ರಾಯವನ್ನು ಕಾರ್ಯನಿರ್ವಾಹಕ ಪರಿಷತ್ತು ಪಡೆಯತಕ್ಕದ್ದು.

(6) ಕಾರ್ಯನಿರ್ವಾಹಕ ಪರಿಷತ್ತು ಪರಿನಿಯಮದ ಕರಡನ್ನು ಪರಿಗಣನೆಗಾಗಿ ತೆಗೆದುಕೊಳ್ಳುವಾಗ ಅದು ಅಗತ್ಯವೆಂದು ಭಾವಿಸಿದರೆ ವಿಶ್ವವಿದ್ಯಾನಿಲಯದ ಯಾವುದೇ ಅಧಿಕಾರಿ, ಪ್ರಾಧಿಕಾರ ಅಥವಾ ನಿಕಾಯದ ಅಭಿಪ್ರಾಯವನ್ನು ಸಹ ಪಡೆಯಬಹುದಾಗಿದೆ.

44. ಆರ್ಡಿನೆನ್ಸ್‌ಗಳು.– (1) ಈ ಅಧಿನಿಯಮದ ಮತ್ತು ಪರಿನಿಯಮಗಳ ಉಪಬಂಧಗಳಿಗೊಳಪಟ್ಟು, ಆರ್ಡಿನೆನ್ಸ್‌ಗಳು ಈ ಮುಂದಿನ ಎಲ್ಲ ಅಥವಾ ಯಾವುವೇ ವಿಷಯಗಳ ಬಗ್ಗೆ ಉಪಬಂಧಿಸಬಹುದು, ಎಂದರೆ:–

(ಎ) ವಿಶ್ವವಿದ್ಯಾನಿಲಯ ವಿಭಾಗಗಳು, ಘಟಕ ಮತ್ತು ಸಂಯೋಜಿತ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಪ್ರವೇಶ ಮತ್ತು ಅವರನ್ನು ಹಾಗೆ ವಿದ್ಯಾರ್ಥಿಗಳ ಪಟ್ಟಿಗೆ ಸೇರಿಸುವುದು;

(ಬಿ) ವಿಶ್ವವಿದ್ಯಾನಿಲಯದ ಎಲ್ಲ ಪದವಿಗಳ, ಡಿಪ್ಲೊಮಾಗಳ ಮತ್ತು ಪ್ರಮಾಣಪತ್ರಗಳ ಬಗ್ಗೆ ವ್ಯಾಸಂಗ ಕ್ರಮಗಳು;

(ಸಿ) ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಅಳೆಯಲು ಸೆಮಿಸ್ಟರ್ ವ್ಯವಸ್ಥೆ, ಆಯ್ಕೆ ಆಧಾರಿತ ಶ್ರೇಣಿ ವ್ಯವಸ್ಥೆ, ಆಧುನಿಕ ಶ್ರೇಣಿ ನೀಡಿಕೆ ಪದ್ಧತಿಗಳು ಮತ್ತು ಇತರ ನಾವಿನ್ಯತೆಗಳನ್ನು ಜಾರಿಗೊಳಿಸುವುದು.

(ಡಿ) ಪದವಿಗಳು, ಡಿಪ್ಲೊಮಾಗಳು ಮತ್ತು ಪ್ರಮಾಣಪತ್ರಗಳು ಹಾಗೂ ಅವುಗಳಿಗಾಗಿ ಇತರ ಅಗತ್ಯತೆಗಳು ಮತ್ತು ಅವುಗಳನ್ನು ನೀಡುವುದಕ್ಕೆ ಮತ್ತು ಪಡೆಯುವುದಕ್ಕೆ ಸಂಬಂಧಿಸಿದಂತೆ ಕೈಗೊಳ್ಳಬೇಕಾದ ಕ್ರಮಗಳು;

(ಇ) ಫೆಲೋಶಿಪ್‌ಗಳು, ವಿದ್ಯಾರ್ಥಿ ವೇತನಗಳು, ಶಿಷ್ಯ ವೇತನಗಳು, ಪ್ರವೇತನಗಳು, ಪದಕಗಳು ಮತ್ತು ಪಾರಿತೋಷಕಗಳನ್ನು ನೀಡುವುದಕ್ಕೆ ಸಂಬಂಧಿಸಿದ ಷರತ್ತುಗಳು;

(ಎಫ್) ಪರೀಕ್ಷಾ ನಿಕಾಯಗಳು, ಪರೀಕ್ಷಕರು, ಮತ್ತು ಮಾಡರೇಟರುಗಳ ಪದಾವಧಿ ಹಾಗೂ ಕರ್ತವ್ಯಗಳು ಸೇರಿದಂತೆ, ಪರೀಕ್ಷೆಗಳನ್ನು ನಡೆಸುವುದು;

(ಜಿ) ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ನಿವಾಸದ ಬಗ್ಗೆ ಷರತ್ತುಗಳು;

(ಹೆಚ್) ವಿದ್ಯಾರ್ಥಿನಿಯರ ಮತ್ತು ವಿಕಲ ಚೇತನ ವಿದ್ಯಾರ್ಥಿಗಳ ನಿವಾಸ, ಶಿಸ್ತು ಮತ್ತು ಬೋಧನೆಗೆ ಸಂಬಂಧಿಸಿದಂತೆ ಮಾಡಬಹುದಾದ ವಿಶೇಷ ವ್ಯವಸ್ಥೆಗಳು, ಏನಾದರೂ ಇದ್ದರೆ, ಅವುಗಳನ್ನು ಮತ್ತು ಅವಶ್ಯವಿರುವಲ್ಲಿ ಅವರಿಗಾಗಿ ವಿಶೇಷ ವ್ಯಾಸಂಗ ಕ್ರಮಗಳನ್ನು ನಿಯಮಿಸುವುದು;

(ಐ) ಧಾರ್ಮಿಕ ಶಿಕ್ಷಣ ಕೊಡುವುದನ್ನು ನಿಯಂತ್ರಿಸುವುದು;

(ಜೆ) ವಿಶ್ವವಿದ್ಯಾನಿಲಯವು ಸ್ಥಾಪಿಸಿದ (founded) ಅಥವಾ ನಿರ್ವಹಿಸುತ್ತಿರುವ ಕಾಲೇಜುಗಳು ಮತ್ತು ಇತರ ಸಂಸ್ಥೆಗಳ ವ್ಯವಸ್ಥಾಪನೆ;

(ಕೆ) ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆಗೊಂಡ ಕಾಲೇಜುಗಳ ಅಥವಾ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ ಇತರ ಸಂಸ್ಥೆಗಳ ಮೇಲ್ವಿಚಾರಣೆ ಮತ್ತು ಪರಿವೀಕ್ಷಣೆ;

(ಎಲ್) ವಿಶ್ವವಿದ್ಯಾನಿಲಯವು ನಿರ್ವಹಿಸದೆ ಇರುವ ವಿದ್ಯಾರ್ಥಿನಿಲಯಗಳ ಮನ್ನಣೆಗಾಗಿ ಷರತ್ತುಗಳು;

(ಎಂ) ವಿಶ್ವವಿದ್ಯಾನಿಲಯದಲ್ಲಿ ಮತ್ತು ಸಂಯೋಜನೆಗೊಂಡ ಕಾಲೇಜುಗಳಲ್ಲಿ ಹಾಗೂ ಇತರ ಸಂಸ್ಥೆಗಳಲ್ಲಿ ಇರುವ ವಿದ್ಯಾರ್ಥಿಗಳ ಆರೋಗ್ಯ ಮತ್ತು ಶಿಸ್ತು ಹಾಗೂ ಅವರ ವಿರುದ್ಧ ಶಿಸ್ತು ವ್ಯವಹರಣೆಗಳು;

(ಎನ್) ವಿದ್ಯಾರ್ಥಿಗಳ ವರ್ಗಾವಣೆಗೆ ಸಂಬಂಧಿಸಿದಂತೆ ಕಾಲೇಜುಗಳು ಮತ್ತು ಮನ್ನಣೆ ಪಡೆದ ಸಂಸ್ಥೆಗಳು ಅನುಸರಿಸಬೇಕಾದ ಮತ್ತು ಜಾರಿಗೊಳಿಸಬೇಕಾದ ವಿನಿಯಮಗಳು; ಮತ್ತು

(ಒ) ಈ ಅಧಿನಿಯಮದ ಅಥವಾ ಪರಿನಿಯಮಗಳ ಮೂಲಕ, ಆರ್ಡಿನೆನ್ಸ್‌ಗಳಿಂದ ಉಪಬಂಧಿಸಬೇಕಾದ ಅಥವಾ ಉಪಬಂಧಿಸಬಹುದಾದ ಇತರ ಎಲ್ಲ ವಿಷಯಗಳು:

ಪರಂತು, ಸಂಯೋಜಿತ ಕಾಲೇಜುಗಳಿಗೆ ಸಂಬಂಧಿಸಿರುವುದಾವುದೂ, ಸಂಯೋಜಿತವಲ್ಲದ ಏಕಾತ್ಮಕ ಸ್ವರೂಪದ ವಿಶ್ವವಿದ್ಯಾಲಯಕ್ಕೆ ಅನ್ವಯವಾಗತಕ್ಕದ್ದಲ್ಲ.

(2) ಜಾರಿಯಲ್ಲಿರುವ ವಿನಿಯಮಗಳ ಅಥವಾ ಪರಿನಿಯಮಗಳ ತಿದ್ದುಪಡಿಗಾಗಿ ಯಾವುದೇ ಆರ್ಡಿನೆನ್ಸನ್ನು ರಚಿಸತಕ್ಕದ್ದಲ್ಲ.

45. ಆರ್ಡಿನೆನ್ಸ್‌ಗಳ ರಚನೆಯ ಕಾರ್ಯವಿಧಾನ.– (1) ಕಾರ್ಯನಿರ್ವಾಹಕ ಪರಿಷತ್ತು, ಇದರಲ್ಲಿ ಇನ್ನು ಮುಂದೆ ಉಪಬಂಧಿಸಿದ ರೀತಿಯಲ್ಲಿ ಆರ್ಡಿನೆನ್ಸ್‌ಗಳನ್ನು ರಚಿಸಬಹುದು.

(2) ಆರ್ಡಿನೆನ್ಸುಗಳನ್ನು ರಚಿಸುವಲ್ಲಿ ಕಾರ್ಯನಿರ್ವಾಹಕ ಪರಿಷತ್ತು,–

(ಎ) ಪರೀಕ್ಷಕರ ಕರ್ತವ್ಯಗಳ ಮೇಲೆ ಅಂಥ ಆರ್ಡಿನೆನ್ಸುಗಳು ಪರಿಣಾಮ ಬೀರುವಲ್ಲಿ, ಸಂಬಂಧಪಟ್ಟ ಮಂಡಲಿ ಅಥವಾ ವ್ಯಾಸಂಗ ಮಂಡಲಿಗಳೊಡನೆ; ಮತ್ತು

(ಬಿ) ವ್ಯಾಸಂಗ ಕ್ರಮಗಳು, ಸೆಮಿಸ್ಟರ್ ಸ್ಕೀಮು ಅಥವಾ ಕ್ರೆಡಿಟ್ ಪದ್ಧತಿ, ಪರೀಕ್ಷೆಗಳನ್ನು ನಡೆಸುವುದು ಅಥವಾ ಅವುಗಳ ಗುಣಮಟ್ಟ ಅಥವಾ ವಿದ್ಯಾರ್ಥಿಗಳ ನಿವಾಸದ ಷರತ್ತುಗಳ ಮೇಲೆ ಅಂಥ ಆರ್ಡಿನೆನ್ಸ್‌ಗಳು ಪರಿಣಾಮ ಬೀರುವಲ್ಲಿ ವಿದ್ಯಾವಿಷಯಕ ಪರಿಷತ್ತಿನೊಡನೆ, – ಸಮಾಲೋಚಿಸತಕ್ಕದ್ದು.

(3) ವಿದ್ಯಾವಿಷಯಕ ಪರಿಷತ್ತು ಪ್ರಸ್ತಾಪಿಸಿದ ಯಾವುದೇ ಆರ್ಡಿನೆನ್ಸಿನ ಕರಡನ್ನು ತಿದ್ದುಪಡಿ ಮಾಡಲು ಕಾರ್ಯನಿರ್ವಾಹಕ ಪರಿಷತ್ತಿಗೆ ಅಧಿಕಾರವಿರತಕ್ಕದ್ದಲ್ಲ. ಆದರೆ, ಅದು ಪ್ರಸ್ತಾವವನ್ನು ತಿರಸ್ಕರಿಸಬಹುದು ಅಥವಾ ಕಾರ್ಯನಿರ್ವಾಹಕ ಪರಿಷತ್ತು ಸೂಚಿಸಬಹುದಾದ ಅಂಥ ತಿದ್ದುಪಡಿಗಳೊಂದಿಗೆ, ಸಂಪೂರ್ಣವಾಗಿ ಅಥವಾ ಭಾಗಶ: ಮರುಪರಿಶೀಲನೆಗಾಗಿ ಕರಡನ್ನು ವಿದ್ಯಾವಿಷಯಕ ಪರಿಷತ್ತಿಗೆ ಹಿಂದಿರುಗಿಸಬಹುದು.

(4) ಕಾರ್ಯನಿರ್ವಾಹಕ ಪರಿಷತ್ತು ರಚಿಸಿದ ಎಲ್ಲಾ ಆರ್ಡಿನೆನ್ಸ್‌ಗಳು, ಕುಲಾಧಿಪತಿಯವರ ಅನುಮೋದನೆಯನ್ನು ಪಡೆದ ನಂತರ ಅದು ನಿರ್ದೇಶಿಸಬಹುದಾದ ಅಂಥ ದಿನಾಂಕದಿಂದ ಪರಿಣಾಮಕಾರಿಯಾಗಿರತಕ್ಕದ್ದು. ಆದರೆ ಪ್ರತಿಯೊಂದು ಆರ್ಡಿನೆನ್ಸನ್ನು ಅದನ್ನು ರಚಿಸಿದ ದಿನದಿಂದ ಎರಡು ವಾರಗಳೊಳಗಾಗಿ, ಕುಲಾಧಿಪತಿಯವರಿಗೆ ಆತನ ಅನುಮೋದನೆಗಾಗಿ ಒಪ್ಪಿಸತಕ್ಕದ್ದು. ಕುಲಾಧಿಪತಿಯವರು ಆರ್ಡಿನೆನ್ಸನ್ನು ಸ್ವೀಕರಿಸಿದ ನಾಲ್ಕು ವಾರಗಳೊಳಗಾಗಿ, ಅವಶ್ಯವಿದ್ದಲ್ಲಿ ಯಾವುದೇ ಆರ್ಡಿನೆನ್ಸಿನ ಪ್ರವರ್ತನೆಯು ಅಮಾನತ್ತಿನಲ್ಲಿರತಕ್ಕದ್ದೆಂದು ಆದೇಶದ ಮೂಲಕ ನಿರ್ದೇಶಿಸಬಹುದು ಮತ್ತು ಅದಕ್ಕೆ ತಮ್ಮ ಆಕ್ಷೇಪಣೆಯನ್ನು ಸಾಧ್ಯವಾದಷ್ಟು ಬೇಗನೆ ಕಾರ್ಯನಿರ್ವಾಹಕ ಪರಿಷತ್ತಿಗೆ ತಿಳಿಸತಕ್ಕದ್ದು. ಕಾರ್ಯನಿರ್ವಾಹಕ ಪರಿಷತ್ತಿನ ಟೀಕೆ–ಟಿಪ್ಪಣಿಗಳನ್ನು ಅವರು ಸ್ವೀಕರಿಸಿದ ತರುವಾಯ, ಅಮಾನತ್ತಿನ ಆದೇಶವನ್ನು ಹಿಂತೆಗೆದುಕೊಳ್ಳಬಹುದು ಅಥವಾ ಆರ್ಡಿನೆನ್ಸನ್ನು ಅಂಗೀಕರಿಸದಿರಬಹುದು ಈ ವಿಷಯದಲ್ಲಿ ಆತನ ನಿರ್ಣಯವು ಅಂತಿಮವಾಗಿರತಕ್ಕದ್ದು:

ಪರಂತು, ಹಣಕಾಸು ತೊಡಕುಗಳುಳ್ಳ ಪ್ರಸ್ತಾವನೆಯನ್ನು ಒಳಗೊಂಡ ಆರ್ಡಿನೆನ್ಸ್ ಸಂಬಂಧದಲ್ಲಿ, ಕುಲಾಧಿಪತಿಯವರು ತಮ್ಮ ಅನುಮೋದನೆಯನ್ನು ನೀಡುವ ಮೊದಲು ರಾಜ್ಯ ಸರ್ಕಾರದೊಡನೆ ಸಮಾಲೋಚಿಸತಕ್ಕದ್ದು.

(5) ವಿದ್ಯಾವಿಷಯಕ ಪರಿಷತ್ತು ಪ್ರಸ್ತಾವಿಸಿದ ಆರ್ಡಿನೆನ್ಸಿನ ಕರಡನ್ನು ಕಾರ್ಯನಿರ್ವಾಹಕ ಪರಿಷತ್ತು ತಿರಸ್ಕರಿಸಿದಲ್ಲಿ, ವಿದ್ಯಾವಿಷಯಕ ಪರಿಷತ್ತು, ಕುಲಾಧಿಪತಿಯವರಿಗೆ ಮೇಲ್ಮನವಿ ಮಾಡಿಕೊಳ್ಳಬಹುದು.

(6) ಕುಲಾಧಿಪತಿಯವರು, ಕಾರ್ಯನಿರ್ವಾಹಕ ಪರಿಷತ್ತಿನ ಟೀಕೆ–ಟಿಪ್ಪಣಿಗಳನ್ನು ಪಡೆದ ತರುವಾಯ, ಮೇಲ್ಮನವಿಯನ್ನು ತಿರಸ್ಕರಿಸಬಹುದು ಅಥವಾ ವಿದ್ಯಾವಿಷಯಕ ಪರಿಷತ್ತು ಪ್ರಸ್ತಾವಿಸಿದಂತೆ ಆರ್ಡಿನೆನ್ಸನ್ನು ಅನುಮೋದಿಸಬಹುದು. ಅನಂತರ ಆರ್ಡಿನೆನ್ಸನ್ನು ಕಾರ್ಯನಿರ್ವಾಹಕ ಪರಿಷತ್ತು ರಚಿಸಿದ್ದರೆ ಹೇಗೋ ಹಾಗೆ ಅದು ಪರಿಣಾಮಕಾರಿಯಾಗಿರತಕ್ಕದ್ದು.

(7) ಮೊದಲ ಆರ್ಡಿನೆನ್ಸನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪೂರ್ವನುಮೋದನೆಯೊಂದಿಗೆ ಕುಲಪತಿಯವರು ರಚಿಸತಕ್ಕದ್ದು ಮತ್ತು ಹಾಗೆ ರಚಿಸಲಾದ ಆರ್ಡಿನೆನ್ಸನ್ನು, ಪರಿನಿಯಮಗಳಲ್ಲಿ ಉಪಬಂಧಿಸಲಾದಂತೆ ವಿಧಾನದಲ್ಲಿ ಕಾರ್ಯನಿರ್ವಾಹಕ ಪರಿಷತ್ತು ಕಾಲಕಾಲಕ್ಕೆ ತಿದ್ದುಪಡಿಯನ್ನು ಮಾಡಬಹುದು, ನಿರಸನಗೊಳಿಸಬಹುದು ಅಥವಾ ಸೇರಿಸಲೂ ಬಹುದು.

46. ವಿನಿಯಮಗಳು.– (1) ಈ ಅಧಿನಿಯಮದಲ್ಲಿ ನಮೂದಿಸಲಾದ ಎಲ್ಲಾ ಅಥವಾ ಯಾವುವೇ ಅಧಿಕಾರಗಳನ್ನು ಚಲಾಯಿಸಲು ಉಪಬಂಧಿಸುವುದಕ್ಕಾಗಿ ಮತ್ತು ವಿಶೇಷವಾಗಿ ಈ ಮುಂದಿನ ವಿಷಯಗಳ ಬಗ್ಗೆ ಈ ಅಧಿನಿಯಮ, ಪರಿನಿಯಮಗಳಿಗೆ ಮತ್ತು ಆರ್ಡಿನೆನ್ಸ್‌ಗಳಿಗೆ ಸುಸಂಗತವಾಗಿರುವ ವಿನಿಯಮಗಳನ್ನು ವಿದ್ಯಾವಿಷಯಕ ಪರಿಷತ್ತು ರಚಿಸಬಹುದು, ಎಂದರೆ:–

(ಎ) ವಿಶ್ವವಿದ್ಯಾನಿಲಯದ ವಿಭಾಗಗಳಿಗೆ, ಘಟಕ ಕಾಲೇಜುಗಳಿಗೆ ಮತ್ತು ಸಂಯೋಜಿತ ಕಾಲೇಜುಗಳಿಗೆ ವಿದ್ಯಾರ್ಥಿಗಳ ಪ್ರವೇಶ;

(ಬಿ) ಇತರ ವಿಶ್ವವಿದ್ಯಾನಿಲಯಗಳ ಪರೀಕ್ಷೆಗಳು ಮತ್ತು ಪದವಿಗಳನ್ನು ವಿಶ್ವವಿದ್ಯಾನಿಲಯದ ಪರೀಕ್ಷೆ ಮತ್ತು ಪದವಿಗಳಿಗೆ ಸಮಾನವಾದುವುಗಳೆಂದು ಮನ್ನಣೆ ನೀಡುವುದು;

(ಸಿ) ವಿಶ್ವವಿದ್ಯಾನಿಲಯದ ವ್ಯಾಸಂಗ ಕ್ರಮಗಳು ಮತ್ತು ಪರೀಕ್ಷೆಗಳು ಹಾಗೂ ವಿಶ್ವವಿದ್ಯಾನಿಲಯದ ಅಥವಾ ಸಂಯೋಜನೆಗೊಂಡ ಕಾಲೇಜುಗಳ ಅಥವಾ ಇತರ ವಿಶ್ವವಿದ್ಯಾನಿಲಯಗಳ ಸಂಸ್ಥೆಗಳ ವಿದ್ಯಾರ್ಥಿಗಳನ್ನು ಯಾವ ಷರತ್ತುಗಳ ಮೇಲೆ ವಿಶ್ವವಿದ್ಯಾನಿಲಯದ ಪರೀಕ್ಷೆಗಳು ಅಥವಾ ಪದವಿಗಳು, ಡಿಪ್ಲೋಮೋಗಳು ಮತ್ತು ಇತರ ಸರ್ಟಿಫಿಕೇಟುಗಳಿಗೆ ಸೇರಿಸಿಕೊಳ್ಳತಕ್ಕದ್ದೋ ಆ ಷರತ್ತುಗಳು;

(ಡಿ) ವಿನಾಯಿತಿಗಳನ್ನು ನೀಡುವುದು.

(2) ವಿಶ್ವವಿದ್ಯಾಲಯವು ರಚಿಸಿದ ಎಲ್ಲಾ ವಿನಿಯಮಗಳು ಸಂದರ್ಭಾನುಸಾರವಾಗಿ ರಾಷ್ಟ್ರೀಯ ನಿಯಂತ್ರಕ ನಿಕಾಯಗಳು ಹೊರಡಿಸಿದ ನಿರ್ದೇಶನಗಳೊಂದಿಗೆ ಅನುರೂಪವಾಗಿರತಕ್ಕದ್ದು ಮತ್ತು ಅವು, ರಾಜ್ಯ ಸರ್ಕಾರವು ಹೊರಡಿಸಿದ ಆದೇಶಗಳಿಗೆ ಹಾಗೂ ರಾಜ್ಯ ಸರ್ಕಾರದೊಡನೆ ಸಮಾಲೋಚಿಸಿ ಕುಲಾಧಿಪತಿಯವರು ಅನುಮೋದಿಸಿದ ಪರಿನಿಯಮಗಳಿಗೆ ವಿರುದ್ಧವಾಗಿರತಕ್ಕದ್ದಲ್ಲ.

(3) ಪ್ರತಿಯೊಂದು ವಿನಿಯಮವು, ಕಾರ್ಯನಿರ್ವಾಹಕ ಪರಿಷತ್ತು ಅದನ್ನು ಅನುಮೋದಿಸಿದ ತಕ್ಷಣದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

47. ನಿಯಮಗಳ ರಚನಾಧಿಕಾರ.– (1) ಸರ್ಕಾರವು, ಅಧಿಸೂಚನೆಯ ಮೂಲಕ, ಪೂರ್ವಪ್ರಕಟಣೆಯ ತರುವಾಯ, ಈ ಅಧಿನಿಯಮದ ಎಲ್ಲಾ ಅಥವಾ ಯಾವುದೇ ಉದ್ದೇಶಗಳನ್ನು ಈಡೇರಿಸಲು, ವಿಶೇಷವಾಗಿ ನೇರ ನೇಮಕಾತಿಗಾಗಿ ವ್ಯಕ್ತಿಗಳ ಆಯ್ಕೆಯ ಸಾಮಾನ್ಯ ಮಂಡಳಿಯ, ಉನ್ನತ ಶಿಕ್ಷಣ ಮೂಲ ಸೌಕರ್ಯ ಅಭಿವೃದ್ಧಿ ಮಂಡಳಿ ಮತ್ತು ವಿಶ್ವವಿದ್ಯಾನಿಲಯ ಪುನರಾವಲೋಕನಾ ಆಯೋಗದ ರಚನೆ, ಅಧಿಕಾರಿಗಳು ಮತ್ತು ಪ್ರಕಾರ್ಯಗಳ ಸಂಬಂಧದಲ್ಲಿ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಿರಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಅದು ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮೊದಲು ಉಭಯ ಸದನಗಳು ನಿಯಮದಲ್ಲಿ ಯಾವುದೇ ಮಾರ್ಪಾಡು ಮಾಡಲು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸತಕ್ಕದ್ದಲ್ಲವೆಂದು ಉಭಯ ಸದನಗಳು ಒಪ್ಪಿದರೆ ತದನಂತರ ಅಂಥ ನಿಯಮವು ಹಾಗೆ ಮಾರ್ಪಾಟಾದ ರೀತಿಯಲ್ಲಿ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರವಾಗಿ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಯಾವುದೇ ಅಂಥ ಮಾರ್ಪಾಡು ಅಥವಾ ರದ್ದತಿಯು ಆ ನಿಯಮದ ಅಡಿಯಲ್ಲಿ ಈ ಮೊದಲು ಮಾಡಲಾದ ಯಾವುದೇ ಕಾರ್ಯದ ಮಾನ್ಯತೆಗೆ ಬಾಧಕವನ್ನು ಉಂಟುಮಾಡತಕ್ಕದ್ದಲ್ಲ.

ಅಧ್ಯಾಯ VI

ಹಣಕಾಸು ಮತ್ತು ಲೆಕ್ಕಪತ್ರಗಳು

48. ವಿಶ್ವವಿದ್ಯಾನಿಲಯದ ನಿಧಿಗಳು.– (1) ಈ ಕೆಳಕಂಡ ಯಾವುವೇ ಮೂಲಗಳಿಂದ ಸ್ವೀಕರಿಸಿದ ಮೊಬಲಗುಗಳು ಪ್ರತಿಯೊಂದು ವಿಶ್ವವಿದ್ಯಾನಿಲಯದ ನಿಧಿಯ ಭಾಗವಾಗಿರತಕ್ಕದ್ದು:–

(ಎ)ವಿಶ್ವವಿದ್ಯಾನಿಲಯದ ಅನುದಾನ ಆಯೋಗವು ಅಥವಾ ಕೇಂದ್ರ ಸರ್ಕಾರವು ನೀಡಿದ ಯಾವುದೇ ವಂತಿಗೆ ಅಥವಾ ಅನುದಾನ;

(ಬಿ)ರಾಜ್ಯ ಸರ್ಕಾರವು ನೀಡಿದ ಯಾವುದೇ ವಂತಿಗೆ ಅಥವಾ ಅನುದಾನ;

(ಸಿ)ಖಾಸಗಿ ವ್ಯಕ್ತಿಗಳು ಅಥವಾ ಸಂಸ್ಥೆಗಳು ನೀಡಿದ ಯಾವುದೇ ಮರಣ ಶಾಸನ ಮೂಲಕವಾಗಿ ದೊರೆತ ಸ್ವತ್ತು, ದೇಣಿಗೆ, ದತ್ತಿಗಳು ಅಥವಾ ಇತರ ಅನುದಾನಗಳು;

(ಡಿ)ಶುಲ್ಕಗಳು ಮತ್ತು ಚಾರ್ಜುಗಳ ಮೂಲಕ ವಿಶ್ವವಿದ್ಯಾನಿಲಯವು ಸ್ವೀಕರಿಸಿದ ಆದಾಯ;

(ಇ)ಕೈಗಾರಿಕೆಗಳು, ವ್ಯಾಪಾರಿಗಳು ಅಥವಾ ಉದ್ದಿಮೆದಾರರಿಂದ ಯಾವುದೇ ವಂತಿಗೆ ಅಥವಾ ಮರಣ ಶಾಸನ ಮೂಲಕವಾಗಿ ದೊರೆತ ಸ್ವತ್ತು;

(ಎಫ್)ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿಗೆ ಒಳಪಟ್ಟು ವಿದೇಶಿ ಸರ್ಕಾರಗಳಿಂದ ಅಥವಾ ಯಾವುದೇ ವಿದೇಶಿ ಸಂಸ್ಥೆಗಳಿಂದ ಅಥವಾ ಕಂಪನಿಗಳಿಂದ ಸ್ವೀಕರಿಸಿದ ಯಾವುದೇ ವಂತಿಗೆ ಅಥವಾ ದತ್ತಿಗಳು, ಮತ್ತು

(ಜಿ)ಯಾವುದೇ ಇತರ ಮೂಲದಿಂದ ಸ್ವೀಕರಿಸಿದ ಮೊಬಲಗುಗಳು.

(2) ಸದರಿ ನಿಧಿಯನ್ನು, ಭಾರತದ ರಿಜರ್ವ್ ಬ್ಯಾಂಕ್ ಅಧಿನಿಯಮ, 1934ರಲ್ಲಿ ಪರಿಭಾಷಿಸಿದಂತೆ ಅನುಸೂಚಿತ ಬ್ಯಾಂಕಿನಲ್ಲಿ ಅಥವಾ ಬ್ಯಾಂಕಿಂಗ್ ಕಂಪನಿಗಳ (ಉದ್ಯಮಗಳ ಅರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1970ರ ಮೇರೆಗೆ ರಚಿತವಾದ ಹೊಸ ಸಂವಾದಿ ಬ್ಯಾಂಕಿನಲ್ಲಿ ಇಡತಕ್ಕದ್ದು ಅಥವಾ ಕಾರ್ಯನಿರ್ವಾಹಕ ಪರಿಷತ್ತು ತೀರ್ಮಾನಿಸಬಹುದಾದಂತೆ, ಭಾರತ ನ್ಯಾಸ ಅಧಿನಿಯಮ, 1882ರ ಮೂಲಕ ಪ್ರಾಧಿಕೃತವಾದ ಭದ್ರತೆಗಳಲ್ಲಿ ಹೂಡಬಹುದು.

(3) ವಿಶ್ವವಿದ್ಯಾನಿಲಯದ ನಿಧಿಗಳು ಮತ್ತು ಆದಾಯವನ್ನು ವಿಶ್ವವಿದ್ಯಾನಿಲಯದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಮಾತ್ರವೇ ಉಪಯೋಗಿಸತಕ್ಕದ್ದು ಮತ್ತು ಲಾಭ, ಬಡ್ಡಿ ಅಥವಾ ಡಿವೆಡೆಂಡ್‌ಗಳು ಇತ್ಯಾದಿಯ ರೂಪದಲ್ಲಿ ಟ್ರಸ್ಟಿಗಳಿಗೆ ಅಥವಾ ಸದಸ್ಯರಿಗೆ ಯಾವುದೇ ಸಂದಾಯವನ್ನು ಮಾಡತಕ್ಕದ್ದಲ್ಲ.

(4) ಪರಿನಿಯಮಗಳ ಮೂಲಕ ನಿಯಮಿಸಬಹುದಾದ ರೀತಿಯಲ್ಲಿ ವಿಶ್ವವಿದ್ಯಾನಿಲಯದ ಯಾವುವೇ ಉದ್ದೇಶಗಳಿಗಾಗಿ ಸದರಿ ನಿಧಿಯನ್ನು ವಿನಿಯೋಗಿಸಬಹುದು.

49. ವಿಶ್ವವಿದ್ಯಾನಿಲಯದ ವಿಘಟನೆ ಅಥವಾ ಸಮಾಪ್ತಿ.– ವಿಶ್ವವಿದ್ಯಾಲಯದ ವಿಘಟನೆ ಅಥವಾ ಸಮಾಪ್ತಿಯ ಸಂದರ್ಭದಲ್ಲಿ, ವಿಘಟನೆಯ ದಿನಾಂಕದಂದು ಉಳಿದ ಸ್ವತ್ತುಗಳನ್ನು ಯಾವುದೇ ಸನ್ನಿವೇಶಗಳಲ್ಲಿಯೂ, ಕಾರ್ಯನಿರ್ವಾಹಕ ಪರಿಷತ್ತಿನ ಅಥವಾ ಹಣಕಾಸು ಸಮಿತಿಯ ಸದಸ್ಯರ ಪೈಕಿ ಹಂಚಿಕೆ ಮಾಡತಕ್ಕದ್ದಲ್ಲ, ಆದರೆ ಅದನ್ನು, ಈ ವಿಶ್ವವಿದ್ಯಾಲಯಕ್ಕೆ ಸದೃಶವಾದ ಉದ್ದೇಶಗಳನ್ನು ಹೊಂದಿರುವ ಮತ್ತೊಂದು ವಿಶ್ವವಿದ್ಯಾಲಯಕ್ಕೆ ವರ್ಗಾವಣೆ ಮಾಡತಕ್ಕದ್ದು.

50. ವಾರ್ಷಿಕ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.– (1) ಕಾರ್ಯನಿರ್ವಾಹಕ ಪರಿಷತ್ತಿನ ನಿರ್ದೇಶನದ ಮೇರೆಗೆ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪತ್ರಗಳನ್ನು ತಯಾರಿಸತಕ್ಕದ್ದು.

(2) ಹಾಗೆ ತಯಾರಿಸಿದ ವಾರ್ಷಿಕ ಲೆಕ್ಕಪತ್ರಗಳನ್ನು ಹಣಕಾಸು ಸಮಿತಿಯು ತನ್ನ ಮುಂದಿನ ನಿಕಟ ಸಭೆಯಲ್ಲಿ ಪರಿಗಣಿಸತಕ್ಕದ್ದು. ಹಣಕಾಸು ಸಮಿತಿಯು ಆ ಸಂಬಂಧವಾಗಿ ಒಂದು ನಡವಳಿಯನ್ನು ಅಂಗೀಕರಿಸಬಹುದು ಮತ್ತು ಅದನ್ನು ಕಾರ್ಯನಿರ್ವಾಹಕ ಪರಿಷತ್ತಿಗೆ ತಿಳಿಸತಕ್ಕದ್ದು. ಹಣಕಾಸು ಸಮಿತಿಯು ಮಾಡಿದ ಸಲಹೆಗಳನ್ನು ಕಾರ್ಯನಿರ್ವಾಹಕ ಪರಿಷತ್ತು ಪರಿಗಣಿಸತಕ್ಕದ್ದು ಮತ್ತು ಅದರ ಮೇಲೆ ತಾನು ಸೂಕ್ತವೆಂದು ಭಾವಿಸುವಂಥ ರೀತಿಯಲ್ಲಿ ಕ್ರಮ ಕೈಗೊಳ್ಳತಕ್ಕದ್ದು ಹಾಗೂ ತಾನು ಕೈಗೊಂಡ ಕ್ರಮದ ಬಗ್ಗೆ ಅಥವಾ ಕ್ರಮ ಕೈಗೊಳ್ಳದಿರಲು ಇರುವ ಕಾರಣಗಳನ್ನು ತನ್ನ ಮುಂದಿನ ಸಭೆಯಲ್ಲಿ ಹಣಕಾಸು ಸಮಿತಿಗೆ ತಿಳಿಸತಕ್ಕದ್ದು.

(3) ವಿಶ್ವವಿದ್ಯಾನಿಲಯದ ಲೆಕ್ಕಪತ್ರಗಳನ್ನು ವರ್ಷಕ್ಕೊಮ್ಮೆ, ಆದ್ಯತೆಯ ಮೇರೆಗೆ (preferably) ಏಪ್ರಿಲ್ ತಿಂಗಳಲ್ಲಿ ರಾಜ್ಯ ಲೆಕ್ಕಪತ್ರ ನಿಯಂತ್ರಕನು ಪರಿಶೋಧಿಸತಕ್ಕದ್ದು.

(4) ಹಾಗೆ ಪರಿಶೋಧಿಸಿದ ಲೆಕ್ಕ ಪತ್ರಗಳನ್ನು ಲೆಕ್ಕ ಪರಿಶೋಧನಾ ವರದಿಯೊಡನೆ ಹಣಕಾಸು ಸಮಿತಿಯ ಮತ್ತು ಕಾರ್ಯನಿರ್ವಾಹಕ ಪರಿಷತ್ತಿನ ಮುಂದೆ ಮಂಡಿಸತಕ್ಕದ್ದು ಹಾಗೂ ತದನಂತರ ಪ್ರತಿ ವರ್ಷ ಸೆಪ್ಟೆಂಬರ್ ಕೊನೆಯೊಳಗೆ ತನ್ನ ಆಕ್ಷೇಪಗಳೊಡನೆ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು. ರಾಜ್ಯ ಸರ್ಕಾರವು ಅದನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಶೀಘ್ರದಲ್ಲಿ ಬರುವ ಮುಂದಿನ ಅಧಿವೇಶನದಲ್ಲಿ ಮಂಡಿಸತಕ್ಕದ್ದು.

51. ಹಣಕಾಸು ಅಂದಾಜುಗಳು.– (1) ಕಾರ್ಯನಿರ್ವಾಹಕ ಪರಿಷತ್ತು, ಪರಿನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ದಿನಾಂಕದ ಮೊದಲು ಹಣಕಾಸು ಅಧಿಕಾರಿಯ ನೆರವಿನೊಂದಿಗೆ, ಮುಂಬರುವ ವರ್ಷಕ್ಕಾಗಿ ಹಣಕಾಸು ಅಂದಾಜುಗಳನ್ನು ಸಿದ್ಧಪಡಿಸತಕ್ಕದ್ದು ಮತ್ತು ಹಣಕಾಸು ಸಮಿತಿಯ ಮೂಲಕ ಅವುಗಳನ್ನು ಪರಿಶೀಲನೆ ಮಾಡಿಸತಕ್ಕದ್ದು ಹಾಗೂ ಕಾರ್ಯನಿರ್ವಾಹಕ ಪರಿಷತ್ತಿನ ಮುಂದೆ ಅದನ್ನು ಮಂಡಿಸತಕ್ಕದ್ದು.

(2) ಕಾರ್ಯನಿರ್ವಾಹಕ ಪರಿಷತ್ತು, ಬಜೆಟ್ಟಿನಲ್ಲಿ ಒದಗಿಸಲಾದ ಮೊಬಲಗಿಗಿಂತ ಹೆಚ್ಚಿನ ಖರ್ಚನ್ನು ವಹಿಸಬೇಕಾಗಿರುವಲ್ಲಿ ಅಥವಾ ಜರೂರು ಸಂದರ್ಭದಲ್ಲಿ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ಪರಿನಿಯಮಗಳಲ್ಲಿ ನಿರ್ದಿಷ್ಟಪಡಿಸಿದಂಥ ನಿರ್ಬಂಧಗಳು ಮತ್ತು ಷರತ್ತುಗಳಿಗೊಳಪಟ್ಟು ವೆಚ್ಚವನ್ನು ವಹಿಸಬಹುದು. ಅಂಥ ಹೆಚ್ಚಿನ ವೆಚ್ಚಕ್ಕೆ ಸಂಬಂಧಿಸಿದಂತೆ, ಬಜೆಟ್ಟಿನಲ್ಲಿ ಯಾವುದೇ ಅವಕಾಶವನ್ನು ಮಾಡಿಲ್ಲದಿದ್ದರೆ, ಹಣಕಾಸು ಸಮಿತಿಗೆ ಅದರ ಪರಿಗಣನೆ ಮತ್ತು ಸಲಹೆಗಾಗಿ ಅದರ ಮುಂದಿನ ಸಭೆಯಲ್ಲಿ ವರದಿಯನ್ನು ಮಾಡತಕ್ಕದ್ದು.

(3) ವಿಶ್ವವಿದ್ಯಾನಿಲಯದ ಬಜೆಟ್ ಅಂದಾಜನ್ನು, ತನ್ನ ಸಂಪನ್ಮೂಲಗಳ ಸಂಗ್ರಹಣೆ ಮಾಡುವುದೂ ಒಳಗೊಂಡಂತೆ ರಾಜ್ಯ ಸರ್ಕಾರ ಮತ್ತು ಎಲ್ಲಾ ಇತರ ಮೂಲಗಳಿಂದ ನಿರೀಕ್ಷಿಸಲಾದ ಅನುದಾನಗಳನ್ನು ಗಮನದಲ್ಲಿಟ್ಟು ತಯಾರಿಸತಕ್ಕದ್ದು. ಆದಾಗ್ಯೂ, ಪೂರಕ ಬಜೆಟನ್ನು, ಹೆಚ್ಚಿನ ಅನುದಾನಗಳ ನಿರೀಕ್ಷೆಯಿಂದ ಪ್ರತಿ ವರ್ಷ ಅಕ್ಟೋಬರ್‌ನಲ್ಲಿ ಕಾರ್ಯನಿರ್ವಾಹಕ ಪರಿಷತ್ತಿನ ಮುಂದೆ ಇಡಬಹುದು; ಆದರೆ, ಈ ಬಗ್ಗೆ ಯಾವುದೇ ವೆಚ್ಚವನ್ನು, ಅಂಥ ಹೆಚ್ಚಿನ ಅನುದಾನ ಸ್ವೀಕರಿಸಿದ ಹೊರತು ಭರಿಸತಕ್ಕದ್ದಲ್ಲ.

(4) ವಿಶ್ವವಿದ್ಯಾನಿಲಯವು, ರಾಜ್ಯ ಸರ್ಕಾರದ ಪೂರ್ವಾನುಮೋದನೆಯಿಲ್ಲದೆ, ಮೀಸಲಿಟ್ಟ ನಿಧಿಗಳನ್ನು ಇತರ ಉದ್ದೇಶಗಳಿಗಾಗಿ ಪಲ್ಲಟ ಮಾಡತಕ್ಕದ್ದಲ್ಲ ಅಥವಾ ಅದರ ಸಿಬ್ಬಂದಿ ವರ್ಗದ ವೇತನ ಶ್ರೇಣಿಗಳನ್ನು ಪರಿಷ್ಕರಿಸತಕ್ಕದ್ದಲ್ಲ ಅಥವಾ ರಾಜ್ಯ ಸರ್ಕಾರದಿಂದ ಯಾವುದೇ ಸರಿಸಮಾನ ವಂತಿಗೆಗಳನ್ನು ಒಳಗೊಳ್ಳುವಂಥ ಯಾವುವೇ ಯೋಜನೆಗಳನ್ನು ಅಥವಾ ಪ್ರಾಯೋಜಿತ ಪ್ರಾಧಿಕಾರಗಳಿಂದ ಸಹಾಯವು ನಿಂತುಹೋದ ತರುವಾಯ ರಾಜ್ಯ ಸರ್ಕಾರದ ಮೇಲೆ ಆವರ್ತಕ ಹೊಣೆಗಾರಿಕೆಯನ್ನು ವಿಧಿಸುವಂಥ ಯಾವುದೇ ಯೋಜನೆಯನ್ನು ಕಾರ್ಯಗತಗೊಳಿಸತಕ್ಕದ್ದಲ್ಲ:

ಪರಂತು, ವಿಶ್ವವಿದ್ಯಾಲಯದ ಮೇಲೆ ಆವರ್ತಕ ಹೊಣೆಗಾರಿಕೆಯನ್ನು ವಿಧಿಸುವ ಯೋಜನೆ ಅಥವಾ ಕಾರ್ಯಕ್ರಮಕ್ಕೆ, ಆದರೆ, ವಿಶ್ವವಿದ್ಯಾನಿಲಯದ ಅನುದಾನ ಆಯೋಗದಿಂದ, ಅಥವಾ ಕೇಂದ್ರ ಸರ್ಕಾರದಿಂದ ಅಥವಾ ಸಂಸ್ಥೆಗಳಿಂದ ಪ್ರಾಪ್ತವಾದ ಬಡ್ಡಿಯಿಂದ ಅಥವಾ ವಂತಿಗೆಯಿಂದ ಅಥವಾ ದೇಣಿಗೆಗಳಿಂದ ಅಥವಾ ಕೈಗಾರಿಕೆಗಳಿಂದ ಅಥವಾ ವ್ಯಕ್ತಿಗಳಿಂದ ಅಥವಾ ವೈಯಕ್ತಿಕವಾಗಿ ಅಥವಾ ಸಂಸ್ಥೆಗಳಿಂದ ದತ್ತಿಯಾಗಿ ಬಂದ ಅಥವಾ ಮೊಬಲಗಿಗೆ ಪೂರ್ವಾನುಮೋದನೆಯ ಅವಶ್ಯಕತೆ ಇರುವುದಿಲ್ಲ ಮತ್ತು ಅಂಥ ಆವರ್ತಕ ಹೊಣೆಗಾರಿಕೆಯು ರಾಜ್ಯ ಸರ್ಕಾರದ ಮೇಲೆ ಯಾವುದೇ ಹೊರೆಯಾಗುವುದಿಲ್ಲ ಮತ್ತು ಆ ಸಂಬಂಧದ ಸಂಪೂರ್ಣ ವೆಚ್ಚವನ್ನು ವಿಶ್ವವಿದ್ಯಾನಿಲಯದ ನಿಧಿಯಿಂದ ಭರಿಸತಕ್ಕದ್ದು.

52. ಲೆಕ್ಕಪರಿಶೋಧನೆಗೆ ನಿರ್ದೇಶಿಸಲು ಸರ್ಕಾರದ ಅಧಿಕಾರ.– (1) ವಿಶ್ವವಿದ್ಯಾನಿಲಯವು ನಿರ್ವಹಿಸುತ್ತಿರುವ ಸಂಸ್ಥೆಗಳೂ ಒಳಗೊಂಡಂತೆ ವಿಶ್ವವಿದ್ಯಾನಿಲಯದ ಲೆಕ್ಕಪತ್ರಗಳ ಪರಿಶೋಧನೆ ಅವಶ್ಯವೆಂದು ಭಾವಿಸಿದಾಗಲೆಲ್ಲಾ ಅದು ನಿರ್ದಿಷ್ಟಪಡಿಸಬಹುದಾದಂತೆ ಅಂಥ ಲೆಕ್ಕಪರಿಶೋಧಕರಿಂದ ಲೆಕ್ಕ ಪರಿಶೋಧನೆಯಾಗಬೇಕೆಂದು ನಿರ್ದೇಶಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿರತಕ್ಕದ್ದು.

(2) ಮಹಾಲೇಖಪಾಲರಿಂದ ವಿಶ್ವವಿದ್ಯಾನಿಲಯದ ಲೆಕ್ಕಪತ್ರಗಳ ಪರಿಶೋಧನೆಯಾದಾಗ ಮತ್ತು ಆಕ್ಷೇಪಗಳೊಡನೆ ವರದಿಯನ್ನು ಅಥವಾ ಸ್ಪಷ್ಟೀಕರಣಗಳಿಗಾಗಿ ತಡೆಹಿಡಿದ ಬಾಬುಗಳ ಸಂಬಂಧದಲ್ಲಿ ಹೆಚ್ಚಿನ ಟೀಕೆ–ಟಿಪ್ಪಣಿಗಳು ಅಥವಾ ಷರಾಗಳಿಗಾಗಿ ವಿಶ್ವವಿದ್ಯಾನಿಲಯಕ್ಕೆ ಲಭ್ಯವಾಗುವಂತೆ ಮಾಡತಕ್ಕದ್ದು. ವಿಶ್ವವಿದ್ಯಾನಿಲಯವು ಅಂಥ ವರದಿಯನ್ನು ಸ್ವೀಕರಿಸಿದ ದಿನದಿಂದ ಮೂವತ್ತು ದಿನಗಳ ಒಳಗಾಗಿ ತನ್ನ ಟೀಕೆ–ಟಿಪ್ಪಣಿಗಳನ್ನು ಅಥವಾ ಷರಾಗಳನ್ನು ರಾಜ್ಯ ಸರ್ಕಾರದ ಮೂಲಕ ಮಹಾಲೇಖಪಾಲರಿಗೆ ಕಳುಹಿಸತಕ್ಕದ್ದು.

53. ವಾರ್ಷಿಕ ವರದಿ.– (1) ಕಾರ್ಯನಿರ್ವಾಹಕ ಪರಿಷತ್ತು, ಪ್ರತಿ ಹಣಕಾಸು ವರ್ಷಕ್ಕೆ, ವಿಶ್ವವಿದ್ಯಾನಿಲಯದ ಚಟುವಟಿಕೆಗಳು, ಗುರಿ ಮತ್ತು ಸಾಧನೆಗಳನ್ನು ಸ್ಪಷ್ಟವಾಗಿ ವಿವರಿಸುವ ಎಲ್ಲಾ ವಿವರಗಳನ್ನು ಒಳಗೊಂಡ ಒಂದು ವಾರ್ಷಿಕ ವರದಿಯನ್ನು ತಯಾರಿಸತಕ್ಕದ್ದು ಮತ್ತು ಜೂನ್ 30ನೇ ದಿನಾಂಕದೊಳಗೆ ವಿದ್ಯಾವಿಷಯಕ ಪರಿಷತ್ತಿಗೆ ಸಲ್ಲಿಸತಕ್ಕದ್ದು. ವಿದ್ಯಾವಿಷಯಕ ಪರಿಷತ್ತು ಅದರ ಮೇಲೆ ಗೊತ್ತುವಳಿಯನ್ನು ಅಂಗೀಕರಿಸಬಹುದು ಮತ್ತು ಅದರ ಪಾಲನೆಗಾಗಿ ಅದನ್ನು ಕಾರ್ಯನಿರ್ವಾಹಕ ಪರಿಷತ್ತಿಗೆ ಕಳುಹಿಸತಕ್ಕದ್ದು. ಕಾರ್ಯನಿರ್ವಾಹಕ ಪರಿಷತ್ತು ಅದರಂತೆ ಕ್ರಮ ಕೈಗೊಳ್ಳತಕ್ಕದ್ದು. ಅದರ ಮೇಲೆ ಕೈಗೊಂಡ ಕ್ರಮದ ಬಗ್ಗೆ ವಿದ್ಯಾವಿಷಯಕ ಪರಿಷತ್ತಿಗೆ, ಅದರ ಮುಂಬರುವ ಸಭೆಯಲ್ಲಿ ತಿಳಿಸತಕ್ಕದ್ದು. ವಾಷಿಕ ವರದಿಯನ್ನು ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಕೂಡಾ ನಿಯತವಾಗಿ ಅಪಲೋಡ್ ಮಾಡತಕ್ಕದ್ದು.

(2) ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಪರಿಷತ್ತಿನ ಗೊತ್ತುವಳಿಗಳನ್ನು ಅಳವಡಿಸಿದ ವಾರ್ಷಿಕ ವರದಿಯ ಮತ್ತು ವಿದ್ಯಾವಿಷಯಕ ಪರಿಷತ್ತು ತೆಗೆದುಕೊಂಡ ಕ್ರಮಗಳ ವರದಿಯ ಪ್ರತಿಗಳನ್ನು ಪ್ರತಿ ವರ್ಷದ ಸೆಪ್ಟೆಂಬರ್ 30ನೇ ದಿನಾಂಕಕ್ಕೆ ಮೊದಲು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು. ರಾಜ್ಯ ಸರ್ಕಾರವು, ಅದನ್ನು ರಾಜ್ಯ ವಿಧಾನಮಂಡಲದ ಎರಡೂ ಸದನಗಳ ಮುಂದೆ, ಅವುಗಳ ಮುಂಬರುವ ಅಧಿವೇಶನದಲ್ಲಿ ಮಂಡಿಸತಕ್ಕದ್ದು.

ಅಧ್ಯಾಯ VII

ಪ್ರಾಧಿಕಾರಗಳಲ್ಲಿ ಖಾಲಿ ಸ್ಥಾನಗಳು

54. ಪದವನ್ನು ತೆರವುಗೊಳಿಸುವುದು.– (1) ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರದ ಅಥವಾ ನಿಕಾಯದ ಪದನಿಮಿತ್ತ ಸದಸ್ಯರಲ್ಲದ ಯಾವೊಬ್ಬ ಸದಸ್ಯನು ತನ್ನ ಪದಕ್ಕೆ ರಾಜೀನಾಮೆ ನೀಡಬಹುದು. ಸದಸ್ಯನು ತನ್ನ ಹಸ್ತಾಕ್ಷರದಲ್ಲಿ ಬರೆದ ರಾಜೀನಾಮೆ ಪತ್ರವನ್ನು ಕುಲಪತಿಗೆ ಕಳುಹಿಸತಕ್ಕದ್ದು. ಅಂಥ ರಾಜೀನಾಮೆಯನ್ನು ಅಂಗೀಕರಿಸಿದ ಮತ್ತು ಸಂಬಂಧಪಟ್ಟವರಿಗೆ ಅದನ್ನು ತಿಳಿಸಿದ ಕೂಡಲೇ ಅದು ಜಾರಿಗೆ ಬರತಕ್ಕದ್ದು.

(2) ಒಂದು ನಿರ್ದಿಷ್ಟ ನಿಕಾಯದ ಸದಸ್ಯನ ಅಥವಾ ಬೋಧಕನ ಅಥವಾ ಒಂದು ನಿರ್ದಿಷ್ಟ ನೇಮಕದ ಧಾರಕನೆಂದು ಸ್ಪಷ್ಟವಾಗಿ ತಿಳಿಸಿದ್ದರೆ ಆತನು ಅಂಥ ಧಾರಕನ ಸಾಮರ್ಥ್ಯದಲ್ಲಿ ನಾಮನಿರ್ದೇಶನಗೊಂಡ ವಿಶ್ವವಿದ್ಯಾನಿಲಯದ ಪ್ರಾಧಿಕಾರದ ಅಥವಾ ನಿಕಾಯದ ಯಾವೊಬ್ಬ ಸದಸ್ಯನು ನಿರ್ದಿಷ್ಟ ಚುನಾಯಕ ಸಮುದಾಯ (Electorate) ಅಥವಾ ನಿಕಾಯದ ಸದಸ್ಯನಾಗಿ ಅಥವಾ ಬೋಧಕನಾಗಿ ಅಥವಾ ಆ ನಿರ್ದಿಷ್ಟ ನೇಮಕದ ಧಾರಕನಾಗಿ ಆತನು ಸದಸ್ಯನಾಗಿರುವುದು ನಿಂತುಹೋದಲ್ಲಿ, ನಿರ್ದಿಷ್ಟ ಚುನಾಯಕ ಸಮುದಾಯದ ಅಥವಾ ನಿಕಾಯದ ಸದಸ್ಯನಾಗಿ ಅಥವಾ ಬೋಧಕನಾಗಿ ಅಥವಾ ಆ ನಿರ್ದಿಷ್ಟ ನೇಮಕದ ಧಾರಕನಾಗಿ ಆತನು ಸದಸ್ಯನಾಗಿರುವುದು ಮುಂದುವರಿಯತಕ್ಕದ್ದಲ್ಲ:

ಪರಂತು, ವಯೋನಿವೃತ್ತಿ ಹೊಂದಿದ ನಂತರ ಶೈಕ್ಷಣಿಕ ವರ್ಷದ ಅಂತ್ಯದವರೆಗೂ ಮರು ನೇಮಕಾತಿ ಆಧಾರದ ಮೇಲೆ ಮುಂದುವರಿದಂಥ ಬೋಧಕರು ವಯೋನಿವೃತ್ತಿ ನಂತರ ಅಂಥ ಪ್ರಾಧಿಕಾರ ಅಥವಾ ನಿಕಾಯದ ಸದಸ್ಯರಾಗಿರುವುದು ನಿಂತುಹೋಗತಕ್ಕದ್ದು.

(3) ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರದ ಅಥವಾ ನಿಕಾಯದ ಒಬ್ಬ ಸದಸ್ಯನು, ನೈತಿಕ ಅಧಃಪತನವನ್ನು ಒಳಗೊಂಡ ಯಾವುದೇ ಅಪರಾಧಕ್ಕಾಗಿ ನ್ಯಾಯಾಲಯದಿಂದ ಅಪರಾಧ ನಿರ್ಣೀತವಾದ ಮೇಲೆ, ಆತನು ಸದಸ್ಯನಾಗಿರುವುದು ನಿಂತುಹೋಗತಕ್ಕದ್ದು.

(4) ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ನಿಕಾಯದ ಸದಸ್ಯನು, ಕುಲಪತಿಯ ಮೂಲಕ ರಚನೆಯಾದ ವಿಚಾರಣಾ ಸಮಿತಿಯಿಂದ ಯಾವುದೇ ದುರ್ನಡತೆಯ ತಪ್ಪಿತಸ್ಥನೆಂದು ಆತನು ಕಂಡುಬಂದಲ್ಲಿ ಕೂಡಾ ಸದಸ್ಯನಾಗಿರುವುದು ನಿಂತು ಹೋಗತಕ್ಕದ್ದು. ಆದಾಗ್ಯೂ ಭಾಧಿತ ಸದಸ್ಯನು, ಕುಲಾಧಿಪತಿಯವರಲ್ಲಿ ಅಪೀಲು ಮಾಡಲು ಮುಕ್ತವಾಗಿರತಕ್ಕದ್ದು ಮತ್ತು ಈ ವಿಷಯದಲ್ಲಿ ಕುಲಾಧಿಪತಿಯವರ ತೀರ್ಮಾನವು ಅಂತಿಮವಾಗಿರತಕ್ಕದ್ದು:

ಪರಂತು, ಅಪೀಲು ಬಾಕಿಯಿರುವ ಅವಧಿಯಲ್ಲಿ, ಅಂಥ ಸದಸ್ಯನ ಸದಸ್ಯತ್ವವನ್ನು ಸ್ಥಗಿತಗೊಳಿಸತಕ್ಕದ್ದು:

ಮತ್ತು ಪರಂತು, (3)ನೇ ಮತ್ತು (4) ನೇ ಉಪಪ್ರಕರಣಗಳ ಅಡಿಯಲ್ಲಿ ತೆಗೆದುಹಾಕಲಾದ ಯಾವೊಬ್ಬ ಸದಸ್ಯನನ್ನು, ಈ ಅಧಿನಿಯಮದ ಅಡಿಯಲ್ಲಿ ಸ್ಥಾಪಿಸಿ ನಿಗಮಿತಗೊಳಸಲಾದ ಯಾವುದೇ ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರಕ್ಕೆ ಅಥವಾ ನಿಕಾಯಕ್ಕೆ ನೇಮಕ ಮಾಡತಕ್ಕದ್ದಲ್ಲ.

55. ಖಾಲಿ ಸ್ಥಾನಗಳನ್ನು ಭರ್ತಿ ಮಾಡುವುದು.– ಮರಣ, ರಾಜೀನಾಮೆ, ತೆಗೆದು ಹಾಕುವ ಅಥವಾ ಅನ್ಯಥಾ ಕಾರಣದಿಂದ ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರ ಅಥವಾ ನಿಕಾಯದ ಪದನಿಮಿತ್ತ ಸದಸ್ಯರಲ್ಲದ ಸದಸ್ಯರ ಪದದಲ್ಲಿ ಉಂಟಾದ ಎಲ್ಲಾ ಖಾಲಿಸ್ಥಾನಗಳನ್ನು, ಯಾವ ಸದಸ್ಯನ ಸ್ಥಾನ ಖಾಲಿಯಾಗಿದೆಯೋ ಆ ಖಾಲಿಯಾದ ಸ್ಥಾನದ ಸದಸ್ಯನನ್ನು ನಾಮನಿರ್ದೇಶನ ಮಾಡಿದ ವ್ಯಕ್ತಿ ಅಥವಾ ನಿಕಾಯದಿಂದ ಆದಷ್ಟು ಶೀಘ್ರವಾಗಿ ಭರ್ತಿ ಮಾಡತಕ್ಕದ್ದು ಮತ್ತು ಹಾಗೆ ನೇಮಕಗೊಂಡ, ನಾಮನಿರ್ದೇಶನಗೊಂಡ, ವ್ಯಕ್ತಿಯು, ಅಂಥ ಪ್ರಾಧಿಕಾರ ಅಥವಾ ನಿಕಾಯದಲ್ಲಿ ಯಾವ ಸದಸ್ಯನ ಸ್ಥಾನಕ್ಕೆ ನೇಮಕಗೊಂಡಿರುವನೋ, ನಾಮನಿರ್ದೇಶನಗೊಂಡಿರುವನೋ ಅಥವಾ ಸಹ–ಆಯ್ಕೆಯಾಗಿರುವನೋ ಆ ಆಯ್ಕೆಯಾದ ಅಥವಾ ಸಹ–ಆಯ್ಕೆಯಾದ ಅಂಥ ಸದಸ್ಯನು ಆ ಪದದಲ್ಲಿ ಮುಂದುವರಿಯುತ್ತಿದ್ದಿರ ಬಹುದಾದ ಅಂಥ ಉಳಿದ ಅವಧಿಗೆ ಸದಸ್ಯನಾಗಿರತಕ್ಕದ್ದು.

ಅಧ್ಯಾಯ VIII

ವಿಶ್ವವಿದ್ಯಾನಿಲಯಗಳ ಬೋಧಕರು ಮತ್ತು ಇತರ ನೌಕರರ ನೇಮಕಾತಿ

56. ಬೋಧಕರ, ವಿಶ್ವವಿದ್ಯಾನಿಲಯದ ಗ್ರಂಥಪಾಲರ ಮತ್ತು ದೈಹಿಕ ಶಿಕ್ಷಣ ನಿರ್ದೇಶಕರುಗಳ ನೇಮಕಾತಿ.– (1) ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಸಹಾಯಕ ಪ್ರಾಧ್ಯಾಪಕರು ಅಥವಾ ಸಹಾಯಕ ಗ್ರಂಥಪಾಲರು ಅಥವಾ ಸಹಾಯಕ ದೈಹಿಕ ಶಿಕ್ಷಣ ಬೋಧಕರಾಗಿ ನೇರ ನೇಮಕ ಮಾಡಿಕೊಳ್ಳಲು ವ್ಯಕ್ತಿಗಳ ಆಯ್ಕೆಗಾಗಿ ಒಂದು ಸಾಮಾನ್ಯ ನೇಮಕಾತಿ ಮಂಡಲಿ ಇರತಕ್ಕದ್ದು.

(2) ವಿಶ್ವವಿದ್ಯಾನಿಲಯದಲ್ಲಿ ನೇಮಕಾತಿ ಮಂಡಳಿಯ ಸಂಯೋಜನೆ ಮತ್ತು ವಿಶ್ವವಿದ್ಯಾನಿಲಯಕ್ಕೆ ಅಂಥ ನೇಮಕಾತಿಗಳನ್ನು ಮಾಡುವಲ್ಲಿನ ಕಾರ್ಯವಿಧಾನವು ಈ ಕೆಳಕಂಡಂತೆ ಇರತಕ್ಕದ್ದು, ಎಂದರೆ:–

(ಎ) ರಾಜ್ಯ ವಿಶ್ವವಿದ್ಯಾನಿಲಯಗಳಲ್ಲಿ ಕುಲಪತಿಗಳಾಗಿದ್ದ ಮೂವರು ವ್ಯಕ್ತಿಗಳು, ಅವರಲ್ಲಿ ಒಬ್ಬರನ್ನು, ರಾಜ್ಯ ಸರ್ಕಾರವು ಅಧ್ಯಕ್ಷರನ್ನಾಗಿ ನಾಮನಿರ್ದೇಶನ ಮಾಡತಕ್ಕದ್ದು.

(ಬಿ) ವಿಶ್ವವಿದ್ಯಾನಿಲಯಗಳು ಶಿಫಾರಸ್ಸು ಮಾಡಿದ ಹೆಸರುಗಳ ಪಟ್ಟಿಯೊಳಗಿಂದ ಸಂಬಂಧಪಟ್ಟ ವಿಷಯಗಳಲ್ಲಿ ಖ್ಯಾತ ಶೈಕ್ಷಣಿಕ ತಜ್ಞರ ಪೈಕಿಯಿಂದ ಇಬ್ಬರು.

(ಸಿ) ಐಎಎಸ್ ಅಥವಾ ಕೆಎಎಸ್ ಗೆ ಅಧಿಕ ಕಾಲಿಕ ಶ್ರೇಣಿ (ಸೂಪರ್ ಟೈಮ್ ಸ್ಕೇಲ್) ಸೇರಿದ ವ್ಯಾಪ್ತಿಗಳ ಪೈಕಿಯಿಂದ ಮಂಡಳಿಯ ಕಾರ್ಯದರ್ಶಿಯವರನ್ನು ರಾಜ್ಯ ಸರ್ಕಾರವು ನಾಮನಿರ್ದೇಶನ ಮಾತಕ್ಕದ್ದು.

(3) ಮಂಡಳಿಯ ಅಧಿಕಾರಗಳು, ಪ್ರಕಾರ್ಯಗಳು ಮತ್ತು ಆಯ್ಕೆ ವಿಧಾನ ಹಾಗೂ ಯಾವುದೇ ವಿಶ್ವವಿದ್ಯಾನಿಲಯಕ್ಕೆ ಆಯ್ಕೆಯಾದ ಅಭ್ಯರ್ಥಿಗಳ ಹಂಚಿಕೆಯು, ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ರಚಿಸಿದ ನಿಯಮಗಳ ಅನುಸಾರವಾಗಿರತಕ್ಕದ್ದು.

(4) ಮಂಡಳಿಯ ಕೇಂದ್ರ ಕಾರ್ಯಸ್ಥಾನವು ಬೆಂಗಳೂರು ಆಗಿರತಕ್ಕದ್ದು.

57. ಬಡ್ತಿ ಯೋಜನೆಗಳಿಗನುಸಾರವಾಗಿ ನೇಮಕಾತಿ.– (1) 56ನೇ ಪ್ರಕರಟಣದಲ್ಲಿ ಏನೇ ಒಳಗೊಂಡಿದ್ದರೂ, ನೇಮಕಾತಿಗಳು ಮತ್ತು ಹುದ್ದೆಗಳ ಮೀಸಲಾತಿಗಾಗಿ, ರಾಜ್ಯ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದ ನಿಯಮಗಳು ಮತ್ತು

ಅಧಿಸೂಚನೆಗಳನ್ನು ಬಡ್ತಿಯ ವಿಷಯದಲ್ಲಿ ಅನುಸರಿಸತಕ್ಕದ್ದು. ಜೊತೆಗೆ, ವಿಶ್ವವಿದ್ಯಾಲಯ ಅನುದಾನಗಳ ಆಯೋಗ, ಅಖಿಲಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಮತ್ತು ಇತರ ಶಾಸನಬದ್ಧ ನಿಯಂತ್ರಕ ನಿಕಾಯಗಳ ಮೂಲಕ ಸೃಷ್ಟಿಯಾದ ಯೋಜನೆಗಳನ್ನು ಅಳವಡಿಸಿಕೊಂಡು, ಶಾಸನಗಳ ಮೂಲಕ ನಿಯಮಿಸಲಾದ ಬಡ್ತಿಗಳನ್ನು ನಿಯಂತ್ರಿಸುವ ಯೋಜನೆಗಳನ್ನು ಅನುಸರಿಸತಕ್ಕದ್ದು.

(2) ಆಯ್ಕೆಯ ಕಾರ್ಯವಿಧಾನವು, ಪರಿನಿಯಮಗಳ ಮೂಲಕ ಉಪಬಂಧಿಸಿದಂತೆ ಮತ್ತು ವಿಶ್ವವಿದ್ಯಾನಿಲಯ ಅನುದಾನ ಆಯೋಗದಂತಹ, ಶಾಸನಬದ್ಧ ನಿಯಂತ್ರಕ ಪ್ರಾಧಿಕಾರಗಳ ಮಾನದಂಡಗಳ ಮತ್ತು ಮಾರ್ಗದರ್ಶಿ ಸೂತ್ರಗಳಿಗೊಳಪಟ್ಟು ಇರತಕ್ಕದ್ದು.

58. ಅರೆಕಾಲಿಕ ಹುದ್ದೆಗಳ ನೇಮಕಾತಿ.– (1) ವಿಶ್ವವಿದ್ಯಾಲಯದಲ್ಲಿ, ಗೌರವ ಅಥವಾ ಹಂಗಾಮಿ ಪ್ರಾಧ್ಯಾಪಕರು (Adjunct Professors), ಸಹ ಪ್ರಾಧ್ಯಾಪಕರು ಅಥವಾ ರೀಡರುಗಳು, ಸಹಾಯಕ ಪ್ರಾಧ್ಯಾಪಕರು ಅಥವಾ ಉಪನ್ಯಾಸಕರು ಒಳಗೊಂಡಂತೆ ಅರೆ ಕಾಲಿಕ ಪ್ರಾಧ್ಯಾಪಕರ ನೇಮಕಾತಿಗಾಗಿ ವ್ಯಕ್ತಿಗಳನ್ನು ಆಯ್ಕೆ ಮಾಡಲು ನೇಮಕಾತಿ ಮಂಡಳಿಯು ಇರತಕ್ಕದ್ದು.

(2) ಅಂಥ ನೇಮಕಾತಿ ಮಂಡಳಿಯ ಸಂರಚನೆ ಮತ್ತು ವಿಶ್ವವಿದ್ಯಾನಿಲಯಕ್ಕೆ ಅಂಥ ನೇಮಕಾತಿಯನ್ನು ಮಾಡುವ ಕಾರ್ಯವಿಧಾನವು ಪರಿನಿಯಮಗಳ ಮೂಲಕ ಉಪಬಂಧಿಸಿದಂತೆ ಇರಕ್ಕದ್ದು.

59. ತಾತ್ಕಾಲಿಕ ನೇಮಕ.– (1) 56, 57 ಮತ್ತು 58ನೇ ಪ್ರಕರಣಗಳಲ್ಲಿ ಏನೇ ಇದ್ದರೂ ಕುಲಪತಿಯವರು ಅಂಥ ಹುದ್ದೆಗಳನ್ನು ತಾತ್ಕಾಲಿಕವಾಗಿಯಾಗಲೀ ಅಥವಾ ಅಂಥ ಹುದ್ದೆಗಳ ನೇಮಕಾತಿಗಳನ್ನಾಗಲೀ 56, 58ಮತ್ತು 59ನೇ ಪ್ರಕರಣಗಳ ಪ್ರಕಾರ ಮಾಡಕೂಡದೆಂದು ಪರಿನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಅಂಥ ಸಹಾಯಕ ಪ್ರಾಧ್ಯಾಪಕರ / ಉಪನ್ಯಾಸಕರ ಮತ್ತು ಬೋಧಕೇತರ ಸಿಬ್ಬಂದಿ ಹುದ್ದೆಗಳಿಗೆ ಒಂದು ವರ್ಷಕ್ಕೆ ಹೆಚ್ಚಾಗದಂಥ ಅವಧಿಗೆ ವಿಳಂಬವಿಲ್ಲದೆ ತಾತ್ಕಾಲಿಕ ನೇಮಕಾತಿಗಳನ್ನು ಮಾಡತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ನೇಮಕಾತಿಗಳನ್ನು ಮಂಜೂರಾದ ಹುದ್ದೆಗಳಿಗೆ ಮಾತ್ರ ಮತ್ತು ಪರಿನಿಯಮಗಳ ಮೂಲಕ ಕಲ್ಪಿಸಲಾದ ವಿಧಾನದಲ್ಲಿ ಮಾಡತಕ್ಕದ್ದು.

60. ಬೋಧಕೇತರ, ಲಿಪಿಕ ಮತ್ತು ಇತರೆ ಸಿಬ್ಬಂದಿಯ ನೇಮಕ.– (1) ರಾಜ್ಯದಲ್ಲಿನ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಬೋಧಕೇತರ, ಲಿಪಿಕ ಮತ್ತು ಇತರ ಹುದ್ದೆಗಳ ನೇಮಕಾತಿಗಾಗಿ ಅಭ್ಯರ್ಥಿಗಳ ಆಯ್ಕೆಗೆ ಒಂದು ಸಾಮಾನ್ಯ ನೇಮಕಾತಿ ಮಂಡಲಿಯನ್ನು ರಚಿಸತಕ್ಕದ್ದು.

(2) ಮಂಡಲಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು ಹಾಗೂ ಆಯ್ಕೆ ವಿಧಾನ ಮತ್ತು ಯಾವುದೇ ವಿಶ್ವವಿದ್ಯಾನಿಲಯಕ್ಕೆ ಆಯ್ಕೆಯಾದ ಅಭ್ಯರ್ಥಿಗಳ ಹಂಚಿಕೆಯು ಈ ಸಂಬಂಧದಲ್ಲಿ ರಾಜ್ಯ ಸರ್ಕಾರವು ರಚಿಸಿದ ನಿಯಮಗಳ ಅನ್ವಯ ಇರತಕ್ಕದ್ದು.

ಅಧ್ಯಾಯ IX

ನೌಕರರ ಅಂತರ – ವಿಶ್ವವಿದ್ಯಾನಿಲಯ ವರ್ಗಾವಣೆ

61. ನೌಕರರ ವರ್ಗಾವಣೆಗಳು.– (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕರಾರು, ಒಪ್ಪಂದ ಅಥವಾ ಯಾವುದೇ ಇತರ ಕಾನೂನಿನಲ್ಲಿ ಮತ್ತು ವಿಶ್ವವಿದ್ಯಾನಿಲಯದ ನೌಕರರಿಗೆ ಅನ್ವಯವಾಗುವ ಸೇವಾ ಷರತ್ತುಗಳಲ್ಲಿ ಏನೇ ಇದ್ದಾಗ್ಯೂ, ಕುಲಾಧಿಪತಿಯು, ಕುಲಪತಿಯವರೊಡನೆ ಸಮಾಲೋಚಿಸಿ, ಆಡಳಿತಾತ್ಮಕ ಕಾರಣಗಳಿಗಾಗಿ ಅಥವಾ ನೌಕರನ ಕೋರಿಕೆಯ ಮೇರೆಗೆ, ವಿಶ್ವವಿದ್ಯಾನಿಲಯದಲ್ಲಿ ಯಾವುದೇ ಹುದ್ದೆಯನ್ನು ಧಾರಣ ಮಾಡಿರುವ ಯಾವೊಬ್ಬ ನೌಕರನನ್ನು, ಈ ಅಧಿನಿಯಮದ ಅಡಿಯಲ್ಲಿ ಸ್ಥಾಪಿಸಲಾದ ಯಾವುದೇ ಇತರ ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿಸಬಹುದು ಮತ್ತು ಹಾಗೆ ವರ್ಗಾಯಿತನಾದ ನೌಕರನು, ವರ್ಗಾವಣೆಯ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸೇವಾ ಷರತ್ತುಗಳೊಂದಿಗೆ ಹೋಗತಕ್ಕದ್ದು. ವರ್ಗಾವಣೆಯಾದ ಮೇಲೆ ಅಂಥ ವ್ಯಕ್ತಿಯು ಆತನು ವರ್ಗಾವಣೆಯಾದ ವಿಶ್ವವಿದ್ಯಾನಿಲಯದ ಸಕ್ಷಮ ಪ್ರಾಧಿಕಾರದಿಂದ ನೇಮಕಗೊಂಡಿರುವುದಾಗಿ ಭಾವಿಸತಕ್ಕದ್ದು. ಆದಾಗ್ಯೂ, ನೌಕರನು ಕೋರಿಕೆಯ ಮೇರೆಗೆ ವರ್ಗಾಯಿತನಾದ ಸಂದರ್ಭದಲ್ಲಿ, ಆತನು ವರ್ಗಾವಣೆಗೆ ಮೊದಲು ತಾನು ಹೊಂದಿದ ಜ್ಯೇಷ್ಠತೆಯನ್ನು ಬಿಟ್ಟುಕೊಡತಕ್ಕದ್ದು:

ಪರಂತು, ಹಾಗೆ ವರ್ಗಾಯಿತನಾದ ನೌಕರನು, ಪ್ರಾರಂಭದಲ್ಲಿ ತಾನು ನೇಮಕಗೊಂಡಿದ್ದ ವಿಶ್ವವಿದ್ಯಾನಿಲಯದಲ್ಲಿ ತನ್ನ ಹುದ್ದೆಯ ಧಾರಣಾಧಿಕಾರವನ್ನು ಉಳಿಸಿಕೊಳ್ಳುವ ಅಥವಾ ಆತನು ವರ್ಗಾಯಿತನಾದ ವಿಶ್ವವಿದ್ಯಾನಿಲಯದಲ್ಲಿ ವಿಲೀನಗೊಳ್ಳುವ ಆಯ್ಕೆಯ ಸ್ವಾತಂತ್ರ್ಯವನ್ನು ಹೊಂದಿರತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ನೌಕರರ ಅಂಥ ವರ್ಗಾವಣೆಗೆ ಆದೇಶ ನೀಡುವ ಉದ್ದೇಶಕ್ಕಾಗಿ, ಹಾಗೆ ವರ್ಗಾಯಿಸಲಾದ ನೌಕರರು ಧಾರಣ ಮಾಡಿದ್ದ ಹುದ್ದೆಗಳ ಸಂಬಂಧದಲ್ಲಿ ಕುಲಾಧಿಪತಿಯವರನ್ನು ನೇಮಕ ಪ್ರಾಧಿಕಾರ ಎಂದು ಭಾವಿಸತಕ್ಕದ್ದು.

(3) ಸಾರ್ವಜನಿಕ ಹಿತಾಸಕ್ತಿಯಲ್ಲಿ ಆಡಳಿತಾತ್ಮಕ ಕಾರಣಗಳಿಗಾಗಿ ಹಾಗೆ ವರ್ಗಾವಣೆಯಾದ ನೌಕರರು, ಜ್ಯೇಷ್ಠತೆಯ ಉದ್ದೇಶಕ್ಕಾಗಿ ಆತನ ಹಿಂದಿನ ಸೇವೆಯನ್ನು ಲೆಕ್ಕಹಾಕುವುದಕ್ಕೆ, ಆತನಿಗೆ ರಾಜ್ಯ ಸಿವಿಲ್ ಸೇವೆಗಳ ಸಂವಾದಿ ಹುದ್ದೆಗಳಿಗೆ ಅನ್ವಯವಾಗುವ ಶ್ರೇಣಿಗಳಲ್ಲಿ ಅನುಮತಿಸಬಹುದಾದ ಪ್ರಯಾಣ ಭತ್ಯೆ, ವರ್ಗಾವಣೆ ಅನುದಾನಗಳು ಮತ್ತು ಸ್ವಂತ ಸಾಮಗ್ರಿಗಳ ಸಾಗಣೆಯ ವೆಚ್ಚಕ್ಕೆ ಅರ್ಹರಾಗಿರತಕ್ಕದ್ದು.

(4) ಸಾರ್ವಜನಿಕ ಹಿತಾಸಕ್ತಿಯಿಂದ ಮತ್ತು ಆಡಳಿತಾತ್ಮಕ ಕಾರಣಗಳಿಂದಾಗಿ, ಹಾಗೆ ವರ್ಗಾವಣೆ ಮಾಡಲಾದ ಮತ್ತು ಆತನು ನೇಮಕಗೊಂಡ ವಿಶ್ವವಿದ್ಯಾನಿಲಯದಲ್ಲಿ ತನ್ನ ಧಾರಣಾಧಿಕಾರವನ್ನು ಉಳಿಸಿಕೊಳ್ಳಲು ಆಯ್ಕೆ ಮಾಡಿಕೊಳ್ಳದ ಒಬ್ಬ ನೌಕರನ ಜ್ಯೇಷ್ಠತೆಯನ್ನು ಆಯಾ ನೌಕರರ ವೃಂದ ಅಥವಾ ಹುದ್ದೆಯಲ್ಲಿ ಆತನ ಪ್ರಾರಂಭಿಕ ನೇಮಕಾತಿಯ ದಿನಾಂಕಕ್ಕೆ ಅನುಗುಣವಾಗಿ ನಿರ್ಧರಿಸತಕ್ಕದ್ದು:

ಪರಂತು, ವರ್ಗಾಯಿತನಾದವರು ತನ್ನ ಹುದ್ದೆಯನ್ನು, ಆತನು ವರ್ಗಾವಣೆಯಾದ ವಿಶ್ವವಿದ್ಯಾಲಯಕ್ಕೆ ತೆಗೆದುಕೊಂಡು ಹೋಗತಕ್ಕದ್ದಲ್ಲ.

ಅಧ್ಯಾಯ X

ಕಾಲೇಜುಗಳ ಸಂಯೋಜನೆ ಮತ್ತು ಸಂಸ್ಥೆಗಳಿಗೆ ಮಾನ್ಯತೆ

62. ಈ ಅಧ್ಯಾಯದ ಉಪಬಂಧಗಳ ಅನ್ವಯ.– ಈ ಅಧ್ಯಾಯದಲ್ಲಿರುವುದಾವುದೂ, ವಿಶೇಷ ಉದ್ದೇಶದ ಸಂಯೋಜಿತವಲ್ಲದ ಏಕತ್ಮಕ ಸ್ವರೂಪದ ವಿಶ್ವವಿದ್ಯಾನಿಲಯಗಳಿಗೆ ಅನ್ವಯವಾಗತಕ್ಕದ್ದಲ್ಲ.

63. ಕಾಲೇಜುಗಳ ಸಂಯೋಜನೆ.– (1) ವಿಶ್ವವಿದ್ಯಾನಿಲಯದ ಪ್ರಾದೇಶಿಕ ಅಧಿಕಾ ವ್ಯಾಪ್ತಿಯೊಳಗಿನ ಕಾಲೇಜುಗಳು, ಅದರಲ್ಲಿ ನಿರ್ದಿಷ್ಟ ಪಡಿಸಿದ ಷರತ್ತುಗಳನ್ನು ಪೂರೈಸಿದ ಮೇಲೆ, ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳೆಂದು ವಿಶ್ವವಿದ್ಯಾನಿಲಯದಲ್ಲಿ ಸಂಯೋಜನೆಗೊಳ್ಳತಕ್ಕದ್ದು.

(2) ಏಕಾತ್ಮಕ ಸ್ವರೂಪದ ವಿಶ್ವವಿದ್ಯಾನಿಲಯವನ್ನು ಹೊರತುಪಡಿಸಿ ವಿಶ್ವವಿದ್ಯಾನಿಲಯಕ್ಕೆ ಅಂಥ ಕಾಲೇಜುಗಳ ಸಂಯೋಜನೆಗಾಗಿನ ಷರತ್ತುಗಳು ಮತ್ತು ಸಂಯೋಜಿಸುವ ಕಾರ್ಯವಿಧಾನವು ಪರಿನಿಯಮಗಳಲ್ಲಿ ಉಪಬಂಧಿಸಿದಂತೆ ಇರತಕ್ಕದ್ದು.

64. ಹೊಸ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಪ್ರವೇಶಕ್ಕೆ ನಿರ್ಬಂಧ.– (1) ವಿಶ್ವವಿದ್ಯಾನಿಲಯವು, ಹೊಸ ಕಾಲೇಜಿಗೆ ಅಥವಾ ಸಂದರ್ಭಾನುಸಾರವಾಗಿ ಪ್ರಸಕ್ತ ಸಂಯೋಜಿತ ಕಾಲೇಜಿನಲ್ಲಿ ಹೊಸ ವ್ಯಾಸಂಗಕ್ರಮಕ್ಕೆ ಅಂಥ ವ್ಯಾಸಂಗ ಕ್ರಮದ ಸಂಬಂಧದಲ್ಲಿ ಅಥವಾ ನಿರ್ದಿಷ್ಟ ವ್ಯಾಸಂಗಕ್ರಮದ ಬದಲಾವಣೆಗಾಗಿ ಸಂಯೋಜನೆ ನೀಡಿದ್ದ ಹೊರತು, ಯಾವುದೇ ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆ ಕೋರುವ ಹೊಸ ಕಾಲೇಜಿಗೆ ಅಥವಾ ಹೊಸ ವ್ಯಾಸಂಗ ಕ್ರಮಕ್ಕೆ ಅಥವಾ ನಿರ್ದಿಷ್ಟಪಡಿಸಿದ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆಗಿಂತ ಹೆಚ್ಚಿನ ಸಂಖ್ಯೆಗಾಗಿ ಸಂಯೋಜನೆ ಕೋರುವ ಪ್ರಸಕ್ತ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವನ್ನು ನೀಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವುದೇ ಕಾಲೇಜಿನ ವಿರುದ್ಧ, ಕರ್ನಾಟಕ ಮಾನ್ಯತೆ ಪಡೆಯದ ಮತ್ತು ಸಂಯೋಜಿತವಾಗಿಲ್ಲದ ಶಿಕ್ಷಣ ಸಂಸ್ಥೆಗಳಿಗೆ ವಿದ್ಯಾರ್ಥಿಗಳ ಪ್ರವೇಶ ನಿಷೇಧ ಅಧಿನಿಯಮ, 1992ರ (1993ರ ಕರ್ನಾಟಕ ಅಧಿನಿಯಮ 7) ಉಪಬಂಧಗಳ ಅನುಸಾರವಾಗಿ ಕ್ರಮಕೈಗೊಳ್ಳತಕ್ಕದ್ದು.

65. **ಪರೀಕ್ಷೆಗಳಿಗೆ ಹಾಜರಾಗಲು ನಿರ್ಬಂಧ.**– (ಎ) ಪ್ರವೇಶವು ಅಸಿಂಧುವಾಗಿರುವ ಅಥವಾ ವಿಶ್ವವಿದ್ಯಾಲಯವು ಅನುಮೋದನೆ ನೀಡಿಲ್ಲದ ಪ್ರವೇಶಾತಿಯನ್ನು ಹೊಂದಿರುವ ವಿದ್ಯಾರ್ಥಿಯು ಕಾಲೇಜು ಅಥವಾ ವಿಶ್ವವಿದ್ಯಾಲಯವು ನಡೆಸುವ ಪರೀಕ್ಷೆಗಳಿಗೆ ಹಾಜರಾಗಲು ಅರ್ಹನಾಗತಕ್ಕದ್ದಲ್ಲ.

(ಬಿ) ನಿಯಮಿಸಲಾದ ಪ್ರವೇಶ ಸಾಮರ್ಥ್ಯಕ್ಕಿಂತ (Intake Capacity) ಹೆಚ್ಚಿಗೆಯಾಗಿ ಕಾಲೇಜಿಗೆ ಅಥವಾ ವ್ಯಾಸಂಗ ಕ್ರಮಕ್ಕೆ ಪ್ರವೇಶ ಪಡೆದಿರುವ ಯಾವೊಬ್ಬ ವಿದ್ಯಾರ್ಥಿಯನ್ನು, ವಿಶ್ವವಿದ್ಯಾನಿಲಯದ ಮೂಲಕ ಅನುಮೋದಿತವಾದ ಮತ್ತೊಂದು ಕಾಲೇಜಿನಲ್ಲಿ ಆತನು ತನ್ನ ಅಧ್ಯಯನವನ್ನು ಮುಂದುವರೆಸುವುದಕ್ಕೆ ಅಥವಾ ಪರೀಕ್ಷೆಯನ್ನು ತೆಗೆದುಕೊಳ್ಳುವುದಕ್ಕೆ ಅನುಮತಿಸತಕ್ಕದ್ದಲ್ಲ.

– ಈ ಸಂಬಂಧದ ಯಾವುದೇ ವ್ಯಾಜ್ಯವನ್ನು ಕುಲಾಧಿಪತಿಯವರಿಗೆ ಉಲ್ಲೇಖಿಸತಕ್ಕದ್ದು ಮತ್ತು ಈ ವಿಷಯದಲ್ಲಿ ಅವರ ತೀರ್ಮಾನವು ಅಂತಿಮವಾಗಿರತಕ್ಕದ್ದು ಮತ್ತು ಬಂಧನಕಾರಿಯಾಗಿರತಕ್ಕದ್ದು.

(ಸಿ) ಅಂಥ ಅರ್ಹವಲ್ಲದ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿದ ಕಾಲೇಜು ಅಥವಾ ಸಂಸ್ಥೆಯು, ಪರಿನಿಯಮಗಳ ಅನ್ವಯ ಶಿಕ್ಷೆಗೆ ಗುರಿಯಾಗತಕ್ಕದ್ದು.

66. ಖಾಯಂ ಸಂಯೋಜನೆ.– ಐದು ವರ್ಷಗಳಿಗೆ ಕಡಿಮೆ ಇಲ್ಲದ ಅವಧಿಗೆ ನಿರಂತರವಾಗಿ ಸಂಯೋಜನೆಗೊಂಡಿರುವ ಮತ್ತು ಕಾಲಕಾಲಕ್ಕೆ ವಿಶ್ವವಿದ್ಯಾನಿಲಯವು ನಿರ್ದಿಷ್ಟಪಡಿಸಿದ ಸಂಯೋಜನೆಯ ಎಲ್ಲ ಷರತ್ತುಗಳನ್ನು ಪೂರೈಸಿರುವ ಮತ್ತು ವಿದ್ಯಾವಿಷಯದ ಹಾಗೂ ಆಡಳಿತಾತ್ಮಕ ಗುಣಮಟ್ಟಗಳನ್ನು ಹೊಂದಿರುವ ಕಾಲೇಜು ಖಾಯಂ ಸಂಯೋಜನೆಯ ಮಂಜೂರಾತಿಗೆ ಅರ್ಹವಾಗಿರತಕ್ಕದ್ದು. ಈ ಸಂಬಂಧದಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ ಪರಿನಿಯಮಗಳಲ್ಲಿ ನಿಯಮಿಸಲಾದಂತೆ ಇರತಕ್ಕದ್ದು.

67. ಸಂಯೋಜನೆಯನ್ನು ಹಿಂತೆಗೆದುಕೊಳ್ಳುವುದು.– (1) ಯಾವುದೇ ಕಾಲೇಜು, ಈ ಅಧಿನಿಯಮದ ಯಾವುವೇ ಉಪಬಂಧಗಳನ್ನು ಪಾಲಿಸಲು ವಿಫಲಗೊಂಡರೆ ಅಥವಾ ಸಂಯೋಜನೆಯ ಯಾವುವೇ ಷರತ್ತುಗಳನ್ನು ಪಾಲಿಸಲು ವಿಫಲಗೊಂಡರೆ ಅಥವಾ ಕಾಲೇಜನ್ನು ಶಿಕ್ಷಣದ ಹಿತಾಸಕ್ತಿಗಳಿಗೆ ಪ್ರತಿಕೂಲವಾಗುವ ರೀತಿಯಲ್ಲಿ ನಡೆಸಿಕೊಂಡು ಬರುತ್ತಿದ್ದರೆ, ಸಂಯೋಜನೆಯ ಮೂಲಕ ಕಾಲೇಜಿಗೆ ಪ್ರದತ್ತವಾದ ಹಕ್ಕುಗಳನ್ನು ತಾತ್ಕಾಲಿಕವಾಗಿಯಾಗಲಿ ಅಥವಾ ಖಾಯಂ ಆಗಿಯಾಗಲಿ, ಪೂರ್ತಿಯಾಗಿ ಅಥವಾ ಭಾಗಶಃ ಹಿಂತೆಗೆದುಕೊಳ್ಳಬಹುದು ಅಥವಾ ಮಾರ್ಪಾಟು ಮಾಡಬಹುದು.

(2) ಅಂಥ ಹಕ್ಕುಗಳನ್ನು ಹಿಂತೆಗೆದುಕೊಳ್ಳವುದಕ್ಕೆ ಅಥವಾ ಮಾರ್ಪಾಟು ಮಾಡುವುದಕ್ಕೆ ಕಾರ್ಯನಿರ್ವಾಹಕ ಪರಿಷತ್ತಿನಲ್ಲಿ ಮಾತ್ರ ಸೂಚನೆಯನ್ನು ಪ್ರಾರಂಭಿಸತಕ್ಕದ್ದು. ಅಂಥ ಸೂಚನೆಯನ್ನು ಮಂಡಿಸಲು ಉದ್ದೇಶಿಸುವ ಕಾರ್ಯನಿರ್ವಾಹಕ ಪರಿಷತ್ತಿನ ಪದನಿಮಿತ್ತ ಸದಸ್ಯನೂ ಒಳಗೊಂಡಂತೆ ಯಾವೊಬ್ಬ ಸದಸ್ಯನು ಯಾವ ಕಾರಣದ ಮೇಲೆ ಅಂಥ ಸೂಚನೆಯನ್ನು ಮಾಡಲಾಗಿದೆಯೋ ಆ ಕಾರಣಗಳನ್ನು ಲಿಖಿತದಲ್ಲಿ ನಿರೂಪಿಸಿ ಒಂದು ನೋಟೀಸನ್ನು ಕೊಡತಕ್ಕದ್ದು.

(3) ಸದರಿ ಸೂಚನೆಯನ್ನು ಪರಿಗಣನೆಗೆ ತೆಗೆದುಕೊಳ್ಳುವುದಕ್ಕೆ ಮೊದಲು ಕಾರ್ಯನಿರ್ವಾಹಕ ಪರಿಷತ್ತು, ನೋಟೀಸಿನ ಒಂದು ಪ್ರತಿಯನ್ನು ಲಿಖಿತದಲ್ಲಿನ ನಿರೂಪಣೆಯಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಆ ಕಾಲೇಜಿನ ಪರವಾಗಿ ಲಿಖಿತದಲ್ಲಿ ಸಲ್ಲಿಸಿದ ಯಾವುದೇ ಮನವಿಯನ್ನು ಕಾರ್ಯನಿರ್ವಾಹಕ ಪರಿಷತ್ತು ಪರ್ಯಾಲೋಚಿಸುವುದು ಎಂಬ ತಿಳಿವಳಿಕೆಯೊಡನೆ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರಿಗೆ ಕಳುಹಿಸತಕ್ಕದ್ದು.

(4) (3)ನೇ ಉಪಪ್ರಕರಣದಲ್ಲಿ ಹಾಗೆ ನಿರ್ದಿಷ್ಟಪಡಿಸಿದ ಅವಧಿಯನ್ನು, ಅವಶ್ಯವಿದ್ದಲ್ಲಿ, ಕಾರ್ಯನಿರ್ವಾಹಕ ಪರಿಷತ್ತು ಯುಕ್ತ ಸಮಯದವರೆಗೆ ವಿಸ್ತರಿಸಬಹುದು.

(5) ಮನವಿಯನ್ನು ಸ್ವೀಕರಿಸಿದ ಮೇಲೆ ಅಥವಾ ಹಿಂದೆ ಹೇಳಲಾದ ಉಪಪ್ರಕರಣಗಳಲ್ಲಿ ಉಲ್ಲೇಖಿಸಲಾದ ಅವಧಿಯು ಮುಗಿದಮೇಲೆ, ಕಾರ್ಯನಿರ್ವಾಹಕ ಪರಿಷತ್ತು ಸೂಚನೆಯ ನೋಟೀಸನ್ನು, ಅದರಲ್ಲಿ ತಿಳಿಸಿದ ಕಾರಣಗಳನ್ನು ಮತ್ತು ಆ ಸಂಬಂಧದಲ್ಲಿ ಸ್ವೀಕರಿಸಿದ ಮನವಿಯನ್ನು ಪರ್ಯಾಲೋಚಿಸಿದ ತರುವಾಯ ಹಾಗೂ ಈ ಸಂಬಂಧದಲ್ಲಿ ರಚಿಸಲಾದ ಮತ್ತು ಅದರಿಂದ ಪ್ರಾಧಿಕೃತವಾದ ಸಮಿತಿಯಿಂದ ಅಂಥ ಪರಿಶೀಲನೆಯನ್ನು ನಡೆಸಿದ ತರುವಾಯ, ಅದಕ್ಕೆ ಅವಶ್ಯವೆಂದು ಕಂಡುಬರಬಹುದಾದ ಅಂಥ ಪರಿಶೀಲನೆಯನ್ನು ಮತ್ತು ಹೆಚ್ಚಿನ ವಿಚಾರಣೆಯನ್ನು ನಡೆಸಿದ ತರುವಾಯ, ಆ ಬಗೆಗಿನ ಕಾರಣಗಳಿಗೆ ಸಂಬಂಧಿಸಿದಂತೆ ಒಂದು ನಿರ್ಣಯವನ್ನು ಅಂಗೀಕರಿಸಬಹುದು ಮತ್ತು ಅದರ ವರದಿಯನ್ನು ವಿದ್ಯಾವಿಷಯಕ ಪರಿಷತ್ತಿಗೆ ಕಳುಹಿಸತಕ್ಕದ್ದು.

(6) (5)ನೇ ಉಪಪ್ರಕರಣದ ಅಡಿಯಲ್ಲಿ ವರದಿಯನ್ನು ಸ್ವೀಕರಿಸಿದ ಮೇಲೆ, ವಿದ್ಯಾವಿಷಯಕ ಪರಿಷತ್ತು ಅದಕ್ಕೆ ಅವಶ್ಯವೆಂದು ಕಂಡುಬರಬಹುದಾದಂಥ ಹೆಚ್ಚಿನ ವಿಚಾರಣೆ, ಯಾವುದಾದರೂ ಇದ್ದರೆ, ಅದನ್ನು ನಡೆಸಿದ ತರುವಾಯ, ಆ ವಿಷಯದಲ್ಲಿ ತನ್ನ ಅಭಿಪ್ರಾಯವನ್ನು ಅಭಿಲೇಖಿಸತಕ್ಕದ್ದು ಮತ್ತು ಕಾರ್ಯನಿರ್ವಾಹಕ ಪರಿಷತ್ತಿಗೆ ವಾಪಸು ಕಳುಹಿಸತಕ್ಕದ್ದು.

(7) ಕಾರ್ಯನಿರ್ವಾಹಕ ಪರಿಷತ್ತು, ವಿದ್ಯಾವಿಷಯಕ ಪರಿಷತ್ತಿನ ನಿರ್ಣಯವನ್ನು ಪರ್ಯಾಲೋಚಿಸಿದ ತರುವಾಯ ಸಂಯೋಜನೆಯನ್ನು ಹಿಂತೆಗೆದುಕೊಳ್ಳಬೇಕೆಂದು ಶಿಫಾರಸ್ಸು ಮಾಡುವ ಅಂತಿಮ ನಿರ್ಣಯವನ್ನು ಅಂಗೀಕರಿಸತಕ್ಕದ್ದು. ಅಂಥ ನಿರ್ಣಯವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯಲ್ಲಿ ಹಾಜರಿದ್ದ ಸದಸ್ಯರ ಮೂರನೇ ಎರಡರಷ್ಟು ಸದಸ್ಯರ ಬೆಂಬಲವನ್ನು ಪಡೆದಿರುವ ಹೊರತು ಅದರಿಂದ ಅಂಗೀಕೃತವಾಗಿರುವುದಾಗಿ ಭಾವಿಸತಕ್ಕದ್ದಲ್ಲ.

(8) ಸೂಚನೆಯ ನೋಟೀಸು, ಕಾಲೇಜಿನ ಉತ್ತರ, ಕಾರ್ಯನಿವಾಹಕ ಪರಿಷತ್ತು ಮತ್ತು ವಿದ್ಯಾವಿಷಯಕ ಪರಿಷತ್ತಿನ ನಿರ್ಣಯವೂ ಒಳಗೊಂಡಂತೆ ಎಲ್ಲಾ ದಸ್ತಾವೇಜುಗಳೊಂದಿಗೆ ಪ್ರಸ್ತಾವವನ್ನು ರಾಜ್ಯಸರ್ಕಾರಕ್ಕೆ ತೀರ್ಮಾನ ಕೈಗೊಳ್ಳವುದಕ್ಕಾಗಿ ಕುಲಸಚಿವನು ಒಪ್ಪಿಸತಕ್ಕದ್ದು.

(9) ರಾಜ್ಯ ಸರ್ಕಾರವು, ತನಗೆ ಅವಶ್ಯವೆಂದು ಕಂಡುಬರಬಹುದಾದಂಥ ಹೆಚ್ಚಿನ ವಿಚಾರಣೆಯನ್ನು ನಡೆಸಿದ ತರುವಾಯ, ಒಂದು ನಿರ್ದಿಷ್ಟ ಶೈಕ್ಷಣಿಕ ವರ್ಷದಿಂದ ಅನ್ವಯವಾಗುವಂತೆ, ಸಂಯೋಜನೆಯನ್ನು ಪೂರ್ತಿಯಾಗಿ ಅಥವಾ

ಭಾಗಶಃ ಹಿಂತೆಗೆದುಕೊಳ್ಳುವಂತೆ ಅಥವಾ ಮಾರ್ಪಾಟು ಮಾಡುವಂತೆ ಅಥವಾ ಪ್ರಸ್ತಾವವನ್ನು ತಿರಸ್ಕರಿಸುವಂತೆ ವಿಶ್ವವಿದ್ಯಾನಿಲಯಕ್ಕೆ ಆದೇಶಿಸಬಹುದು.

(10) ವಿಶ್ವವಿದ್ಯಾನಿಲಯವು, ಅಂಥ ನಿರ್ದೇಶನವನ್ನು ಸ್ವೀಕರಿಸಿದ ಮೇಲೆ ಅಂಥ ನಿರ್ದೇಶನದೊಂದಿಗೆ ಔಪಚಾರಿಕ ಆದೇಶವನ್ನು ಹೊರಡಿಸತಕ್ಕದ್ದು.

(11) ಸಂಯೋಜನೆಯನ್ನು ಪೂರ್ಣವಾಗಿ ಅಥವಾ ಭಾಗಶಃವಾಗಿ ಹಿಂತೆಗೆದುಕೊಂಡ ಕಾಲೇಜಿನ ವಿದ್ಯಾರ್ಥಿಗಳಿಗೆ, ನಿರ್ದಿಷ್ಟ ವ್ಯಾಸಂಗಕ್ರಮದ ಸಂಬಂಧದಲ್ಲಿ ಅಂಥ ವಿದ್ಯಾರ್ಥಿಗಳಿಗೆ ಸ್ಥಳಾವಕಾಶವನ್ನು ನೀಡುವಷ್ಟರ ಮಟ್ಟಿಗೆ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆಯನ್ನು ಹೆಚ್ಚಿಸುವ ಮೂಲಕ, ವಿಶ್ವವಿದ್ಯಾನಿಲಯವು, ಹತ್ತಿರದಲ್ಲಿರುವ ಕಾಲೇಜಿನಲ್ಲಿ ಅಂಥ ವಿದ್ಯಾರ್ಥಿಗಳಿಗೆ ಸ್ಥಳಾವಕಾಶವನ್ನು ಕಲ್ಪಿಸುವ ವ್ಯವಸ್ಥೆ ಮಾಡತಕ್ಕದ್ದು. ಅಂಥ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಸಂಯೋಜನೆಯನ್ನು ಹಿಂತೆಗೆದುಕೊಂಡ ಕಾಲೇಜಿನಿಂದ ವಿಶ್ವವಿದ್ಯಾನಿಲಯವು ಅವರನ್ನು ವರ್ಗಾಯಿಸಿದ ಕಾಲೇಜಿಗೆ ವರ್ಗಾಯಿಸತಕ್ಕದ್ದು.

68. ಸ್ವಾಯತ್ತ ಕಾಲೇಜು.– (1) ಈ ಅಧಿನಿಯಮದಲ್ಲಿ ಅಥವಾ ಅದರ ಅಡಿಯಲ್ಲಿ ರಚಿಸಲಾದ ಪರಿನಿಯಮಗಳು, ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳಲ್ಲಿ ಏನೇ ಇದ್ದಾಗ್ಯೂ, ವಿಶ್ವವಿದ್ಯಾನಿಲಯವು, ರಾಜ್ಯ ಸರ್ಕಾರದ ಪೂರ್ವ ಸಹಮತಿ ಪಡೆದು ಸಂಯೋಜನೆಗೊಂಡ ಕಾಲೇಜು, ವಿಭಾಗ ಅಥವಾ ಘಟಕಗಳನ್ನು ಯಾವುದೇ ವ್ಯಾಸಂಗ ಕ್ರಮಕ್ಕಾಗಿ ಈ ಸಂಬಂಧದಲ್ಲಿ ರಚಿಸಲಾದ ಪರಿನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರಕ್ರಿಯೆಯನ್ನು ಅನುಸರಿಸಿದ ತರುವಾಯ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ಮತ್ತು ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವ ಹಾಗೂ ಹೊಸ ಮತ್ತು ಸುಸಂಗತ ವ್ಯಾಸಂಗ ಕ್ರಮಗಳನ್ನು ಪ್ರಾರಂಭಿಸುವ ದೃಷ್ಟಿಯಿಂದ ನಿರ್ದಿಷ್ಟ ಪಡಿಸಬಹುದಾದಂಥ ಅವಧಿಗಾಗಿ ಸ್ವಾಯತ್ತ ಕಾಲೇಜೆಂದು ಹೆಸರಿಸಬಹುದು.

(2) ಈ ಸಂಬಂಧದಲ್ಲಿ ರಚಿಸಿದ ಪರಿನಿಯಮಗಳಿಗೆ ಒಳಪಟ್ಟು, ಸ್ವಾಯತ್ತ ಕಾಲೇಜೆಂದು ಹೆಸರಿಸಲಾದ ಕಾಲೇಜು ವ್ಯಾಸಂಗ ಕ್ರಮಗಳನ್ನು ರೂಪಿಸಲು ಸಮುಚಿತ ಬೋಧನಾ ಕ್ರಮಗಳನ್ನು ವ್ಯವಸ್ಥೆಗೊಳಿಸುವುದಕ್ಕಾಗಿ ವಿಶ್ವವಿದ್ಯಾನಿಲಯವು, ಪದವಿ ಅಥವಾ ಡಿಪ್ಲೋಮಗಳನ್ನು ಕೊಡುವುದಕ್ಕೆ ಸಂಬಂಧಿಸಿದಂತೆ ಮೌಲ್ಯಮಾಪನ ಪರೀಕ್ಷೆ ಮತ್ತು ಉಪಪರೀಕ್ಷೆಗಳನ್ನು ವ್ಯವಸ್ಥೆಗೊಳಿಸಲು ಮತ್ತು ವಿದ್ಯಾರ್ಥಿಗಳಿಗೆ ಪ್ರವೇಶ ಕೊಡುವ ಬಗ್ಗೆ ನಿಯಮಗಳನ್ನು ರಚಿಸಲು ಹಕ್ಕುಳ್ಳದ್ದಾಗಿರತಕ್ಕದ್ದು.

(3) ಪರಿನಿಯಮಗಳಲ್ಲಿ ನಿಯಮಿಸಬಹುದಾದಂಥ ನಿಯತಕಾಲಿಕ ಪುನರವಲೋಕನಕ್ಕೆ ಒಳಪಟ್ಟು ವಿಶ್ವವಿದ್ಯಾನಿಲಯವು, ರಾಜ್ಯಸರ್ಕಾರದ ಸಹಮತಿಯೊಂದಿಗೆ, ನಿರ್ದಿಷ್ಟಪಡಿಸಬಹುದಾದ ಅಂಥ ಹೆಚ್ಚಿನ ಅವಧಿಯವರೆಗೆ ವಿಶ್ವವಿದ್ಯಾನಿಲಯವು ಸ್ವಾಯತ್ತ ಕಾಲೇಜಿನ ಹೆಸರಿಸುವಿಕೆಯನ್ನು ಮುಂದುವರಿಸಬಹುದು ಅಥವಾ ಅಂಥ ಹೆಸರಿಸುವಿಕೆಯನ್ನು ರದ್ದುಗೊಳಿಸಬಹುದು.

(4) ಈ ಉದ್ದೇಶಕ್ಕಾಗಿ ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಪರಿಷತ್ತಿನೊಂದಿಗೆ ಸಮಾಲೋಚಿಸಿ ಪರಿನಿಯಮಗಳನ್ನು ರಚಿಸತಕ್ಕದ್ದು, ಮತ್ತು,–

(ಎ) ಸಂಯೋಜನೆಗೊಂಡ ಕಾಲೇಜು, ವಿಭಾಗ ಅಥವಾ ಘಟಕವನ್ನು ಯಾವ ವಿಧಾನ ಮತ್ತು ಯಾವ ಷರತ್ತುಗಳಿಗೆ ಒಳಪಟ್ಟು ಸ್ವಾಯತ್ತ ಕಾಲೇಜು ಎಂದು ಹೆಸರಿಸಬಹುದು ಅಥವಾ ಅಂಥ ಕಾಲೇಜಿನ ಹೆಸರಿಸುವಿಕೆಯನ್ನು ರದ್ದುಗೊಳಿಸಬಹುದೋ ಆ ವಿಧಾನ ಮತ್ತು ಷರತ್ತುಗಳು;

(ಬಿ) ಸ್ವಾಯತ್ತ ಕಾಲೇಜಿನ ಆಡಳಿತ ನಿಕಾಯ, ವಿದ್ಯಾವಿಷಯಕ ಪರಿಷತ್ತು, ಅಧ್ಯಯನ ಮಂಡಲಿ ಮತ್ತು ಪರೀಕ್ಷಕರ ಮಂಡಲಿಯ ರಚನೆ ಅಥವಾ ಪುನಾರಚನೆ, ಪ್ರಕಾರ್ಯಗಳು, ಅಧಿಕಾರಗಳು ಮತ್ತು ಕರ್ತವ್ಯಗಳನ್ನು ಒಳಗೊಂಡಂತೆ ಸ್ವಾಯತ್ತ ಕಾಲೇಜಿನ ಆಡಳಿತಕ್ಕೆ ಪ್ರಾಸಂಗಿಕವಾದ ವಿಷಯಗಳು;

(ಸಿ) ವಿದ್ಯಾರ್ಥಿಗಳ ಪ್ರವೇಶಕ್ಕೆ ಸಂಬಂಧಿಸಿದ ವಿಷಯಗಳು;

(ಡಿ) ಸ್ವಾಯತ್ತ ಕಾಲೇಜಿನ ಹೆಸರಿಸುವಿಕೆಯ ಮುಂದುವರಿಕೆ ಅಥವಾ ರದ್ದುಪಡಿಸುವಿಕೆ ಕುರಿತು ನಿಯತಕಾಲಿಕ ಪುನರವಲೋಕನ;

(ಇ) (2)ನೇ ಉಪಪ್ರಕರಣದಲ್ಲಿ ನಮೂದಿಸಿದ ವಿಷಯಗಳನ್ನು ಒಳಗೊಂಡಂತೆ ಸ್ವಾಯತ್ತ ಕಾಲೇಜಿನ ಕಾರ್ಯನಿರ್ವಹಣೆಗೆ ಸುಗಮವಾಗಬಹುದಾದ ಅಂಥ ಇತರ ವಿಷಯಗಳು; – ಇವುಗಳ ಬಗ್ಗೆ ಉಪಬಂಧಿಸತಕ್ಕದ್ದು.

69. ಕಾಲೇಜುಗಳ ಅಥವಾ ವ್ಯಾಸಂಗ ಕ್ರಮದ ಸ್ವಯಂ ಮುಚ್ಚುವಿಕೆ.– (1) ತನ್ನ ಅಸಾಮರ್ಥ್ಯದ ಅಥವಾ ಹಣಕಾಸು ಹೊಣೆಗಾರಿಕೆ ಅಥವಾ ಆಡಳಿತ ವ್ಯವಸ್ಥೆಯ ಕುಸಿತದ ದೃಷ್ಟಿಯಿಂದ ಕಾಲೇಜನ್ನು ಅಥವಾ ವ್ಯಾಸಂಗಕ್ರಮವನ್ನು ಮುಚ್ಚಲು ಉದ್ದೇಶಿಸಿರುವಂತಹ ಯಾವುದೇ ಕಾಲೇಜಿನ ಆಡಳಿತ ಮಂಡಲಿಯು, ವಿಶ್ವವಿದ್ಯಾನಿಲಯಕ್ಕೆ ಮತ್ತು ರಾಜ್ಯ ಸರ್ಕಾರಕ್ಕೆ,

ಕಾಲೇಜನ್ನು ಮುಚ್ಚುವುದಕ್ಕೆ ಮೊದಲು ಮೂರು ತಿಂಗಳುಗಳಿಗಿಂತ ಕಡಿಮೆಯಿಲ್ಲದಂತೆ ಆ ಬಗ್ಗೆ ಕಾರಣಗಳನ್ನು ತಿಳಿಸಿ ಲಿಖಿತ ನೋಟೀಸನ್ನು ನೀಡತಕ್ಕದ್ದು.

(2) ಕಾಲೇಜಿನ ಅಥವಾ ವ್ಯಾಸಂಗ ಕ್ರಮದ ಮುಚ್ಚುವಿಕೆಯ ಅರ್ಜಿಯನ್ನು ವಿದ್ಯಾವಿಷಯಕ ಪರಿಷತ್ತು ಮತ್ತು ಕಾರ್ಯನಿರ್ವಾಹಕ ಪರಿಷತ್ತು ಪರಿಗಣಿಸತಕ್ಕದ್ದು ಹಾಗೂ ಅದರ ಮೇಲೆ ಸೂಕ್ತ ನಿರ್ಣಯಗಳನ್ನು ಅಂಗೀಕರಿಸತಕ್ಕದ್ದು.

(3) ಕುಲಸಚಿವನು, ಅರ್ಜಿಯನ್ನು ಹಾಗೂ ವಿದ್ಯಾವಿಷಯಕ ಪರಿಷತ್ತಿನ ಮತ್ತು ಕಾರ್ಯನಿರ್ವಾಹಕ ಪರಿಷತ್ತಿನ ನಿರ್ಣಯಗಳನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು, ಅದು ಅದನ್ನು ಪರಿಗಣಿಸಿದ ತರುವಾಯ ಮುಚ್ಚುವ ಬಗ್ಗೆ ಅನುಮತಿ ನೀಡುವ ಅಥವಾ ಮುಚ್ಚುವಿಕೆಯನ್ನು ತಿರಸ್ಕರಿಸುವ ಬಗ್ಗೆ ವಿಶ್ವವಿದ್ಯಾನಿಲಯಕ್ಕೆ ನಿರ್ದೇಶನ ನೀಡತಕ್ಕದ್ದು ಮತ್ತು ವಿಶ್ವವಿದ್ಯಾನಿಲಯವು ಅಂಥ ನಿರ್ದೇಶನಗಳನ್ನು ಸ್ವೀಕರಿಸಿದ ತರುವಾಯ ಅದಕ್ಕನುಸಾರ ಆದೇಶಗಳನ್ನು ಹೊರಡಿಸತಕ್ಕದ್ದು.

(4) ಆಡಳಿತ ಮಂಡಲಿಯು, ಶೈಕ್ಷಣಿಕ ವರ್ಷದ ಚಾಲ್ತಿ ಅವಧಿಯಲ್ಲಿ ಮತ್ತು ವಿಶ್ವವಿದ್ಯಾನಿಲಯವು ಸಂಬಂಧಪಟ್ಟ ವ್ಯಾಸಂಗಕ್ರಮದ ವಾರ್ಷಿಕ ಪರೀಕ್ಷೆಗಳನ್ನು ನಡೆಸುವವರೆಗೆ ಮತ್ತು ವಿಶ್ವವಿದ್ಯಾನಿಲಯವು ಹಾಗೆ ಮಾಡುವುದಕ್ಕಾಗಿ ಒಂದು ಔಪಚಾರಿಕ ಆದೇಶವನ್ನು ಹೊರಡಿಸುವವರೆಗೆ ಕಾಲೇಜನ್ನು ಅಥವಾ ವ್ಯಾಸಂಗ ಕ್ರಮವನ್ನು ಮುಚ್ಚತಕ್ಕದ್ದಲ್ಲ.

(5) ಹಾಗೆ ಮುಚ್ಚಲಾದ ಕಾಲೇಜುಗಳ ವಿದ್ಯಾರ್ಥಿಗಳು ವರ್ಗಾವಣೆಯ ನಂತರ, ವಿಶ್ವವಿದ್ಯಾನಿಲಯವು, ಹತ್ತಿರವಿರುವ ಕಾಲೇಜಿನಲ್ಲಿ ಸಂಬಂಧಪಟ್ಟ ವ್ಯಾಸಂಗಕ್ರಮದಲ್ಲಿ ಪ್ರವೇಶ ಸಂಖ್ಯೆಯನ್ನು ಅಂಥ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ನೀಡುವಷ್ಟರಮಟ್ಟಿಗೆ ಹೆಚ್ಚಿಸಿ ಅವರಿಗೆ ಪ್ರವೇಶವನ್ನು ನೀಡತಕ್ಕದ್ದು ಮತ್ತು ಅಂಥ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಎಲ್ಲ ದಾಖಲೆಗಳನ್ನು ಹಾಗೆ ಮುಚ್ಚಲಾದ ಕಾಲೇಜಿನಿಂದ, ಯಾವ ಕಾಲೇಜಿಗೆ ಅಂಥ ವಿದ್ಯಾರ್ಥಿಗಳು ಪ್ರವೇಶವನ್ನು ಪಡೆದಿರುವರೋ ಅಲ್ಲಿಗೆ ವರ್ಗಾಯಿಸತಕ್ಕದ್ದು.

(6) (1)ನೇ ಉಪಪ್ರಕರಣದ ಅಡಿಯಲ್ಲಿ ನೋಟೀಸಿನ ಅವಧಿಯು ಮುಕ್ತಾಯವಾದ ತರುವಾಯ ತೊಂಬತ್ತು ದಿನಗಳೊಳಗೆ, ಹಾಗೆ ಮುಚ್ಚುವ ಬಗ್ಗೆ ಅನುಮತಿ ನೀಡುವ ಅಥವಾ ತಿರಸ್ಕರಿಸುವ ಯಾವುದೇ ನಿರ್ದೇಶನವನ್ನು ರಾಜ್ಯ ಸರ್ಕಾರವು ನೀಡದಿದ್ದರೆ, (4)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಕಾಲೇಜನ್ನು ಅಥವಾ ಸಂದರ್ಭಾನುಸಾರ ವ್ಯಾಸಂಗಕ್ರಮವನ್ನು ಮುಚ್ಚಲು ಆಡಳಿತ ಮಂಡಲಿಗೆ ಅನುಮತಿ ನೀಡಲಾಗಿದೆ ಎಂದು ಭಾವಿಸತಕ್ಕದ್ದು.

70. ಕೆಲವು ಸಂಸ್ಥೆಗಳಿಗೆ ಮನ್ನಣೆ.– (1) ಸಂಶೋಧನೆ ಅಥವಾ ನಿರ್ದಿಷ್ಟಪಡಿಸಿದ ಅಧ್ಯಯನಗಳನ್ನು ಅಥವಾ ಪರಿಣಿತ ಅಧ್ಯಯನಗಳನ್ನು ನಡೆಸುವ ಕಾಲೇಜನ್ನು ಹೊರತುಪಡಿಸಿ, ವಿಶ್ವವಿದ್ಯಾನಿಲಯದ ಪ್ರದೇಶದ ಒಳಗೆ ಅಥವಾ ಹೊರಗೆ ಇರುವ ಯಾವುದೇ ಸಂಸ್ಥೆಯನ್ನು ಪರಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಅಂಥ ಉದ್ದೇಶಕ್ಕಾಗಿ ಮತ್ತು ಅಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು, ಕಾರ್ಯನಿರ್ವಾಹಕ ಪರಿಷತ್ತು, ಮನ್ನಣೆ ಪಡೆದ ಸಂಸ್ಥೆಯೆಂದು ಮನ್ನಣೆಯನ್ನು ನೀಡಬಹುದು.

(2) ಪರಿನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ರೀತಿಯಲ್ಲಿ ಮತ್ತು ಅಂಥ ಕಾರಣಗಳಿಗಾಗಿ, ಅಂಥ ಮನ್ನಣೆಯನ್ನು ಪೂರ್ಣವಾಗಿಯಾಗಲಿ ಅಥವಾ ಭಾಗಶಃವಾಗಿಯಾಗಲಿ ಹಿಂತೆಗೆದುಕೊಳ್ಳಬಹುದು ಅಥವಾ ಮಾರ್ಪಾಟು ಮಾಡಬಹುದು.

71. ಸಂಯೋಜಿತ ಕಾಲೇಜುಗಳ ಮತ್ತು ಮಾನ್ಯತೆ ಪಡೆದ ಸಂಸ್ಥೆಗಳ ಪರಿವೀಕ್ಷಣೆ.– (1) ಖಾಯಂ ಆಗಿ ಸಂಯೋಜನೆಗೊಂಡ ಕಾಲೇಜು ಮತ್ತು ಮಾನ್ಯತೆ ಪಡೆದ ಸಂಸ್ಥೆಗಳೂ ಸೇರಿದಂತೆ ಪ್ರತಿಯೊಂದು ಸಂಯೋಜನೆಗೊಂಡ ಕಾಲೇಜು ಕುಲಸಚಿವನಿಗೆ, ಕಾರ್ಯನಿರ್ವಾಹಕ ಪರಿಷತ್ತು, ವಿದ್ಯಾವಿಷಯಕ ಪರಿಷತ್ತಿನೊಡನೆ ಸಮಾಲೋಚನೆ ನಡೆಸಿದ ತರುವಾಯ, ಆ ಕಾಲೇಜಿನ ದಕ್ಷತೆಯನ್ನು ಅಥವಾ ಸಂಸ್ಥೆಯು ಸಾಧಿಸಿದ ಶೈಕ್ಷಣಿಕ ಗುಣಮಟ್ಟವನ್ನು ತೀರ್ಮಾನಿಸುವುದಕ್ಕೆ ಅಗತ್ಯಪಡಿಸಬಹುದಾದಂಥ ವರದಿಗಳನ್ನು, ವಿವರ ಪಟ್ಟಿಕೆಗಳನ್ನು ಮತ್ತು ಇತರ ಮಾಹಿತಿಯನ್ನು ಒದಗಿಸತಕ್ಕದ್ದು.

(2) ಕಾರ್ಯನಿರ್ವಾಹಕ ಪರಿಷತ್ತು, ಅಂಥ ಪ್ರತಿಯೊಂದು ಕಾಲೇಜನ್ನು ಅಥವಾ ಸಂಸ್ಥೆಯನ್ನು, ಈ ಸಂಬಂಧದಲ್ಲಿ ರಚಿತವಾದ ಸಮಿತಿಯು ಕಾಲಕಾಲಕ್ಕೆ ಪರಿವೀಕ್ಷಣೆ ನಡೆಸುವಂತೆ ಮಾಡತಕ್ಕದ್ದು.

(3) ಕಾರ್ಯನಿರ್ವಾಹಕ ಪರಿಷತ್ತು, ಹಾಗೆ ಪರಿವೀಕ್ಷಿಸಲಾದ ಯಾವುದೇ ಸಂಯೋಜಿತ ಕಾಲೇಜನ್ನು ಅಥವಾ ಮಾನ್ಯತೆ ಪಡೆದ ಸಂಸ್ಥೆಯನ್ನು, ನಿರ್ದಿಷ್ಟಪಡಿಸಿದ ಅವಧಿಯೊಳಗೆ, ಯಾವುವೇ ವಿಷಯಗಳಿಗೆ ಸಂಬಂಧಿಸಿದಂತೆ ತನಗೆ ಅವಶ್ಯವೆಂದು ಕಂಡುಬರಬಹುದಾದಂಥ ಕ್ರಮಕೈಗೊಳ್ಳಲು ಕೋರಬಹುದು.

(4) ಶೈಕ್ಷಣಿಕ ಅಥವಾ ಸಂಶೋಧನೆ ಮತ್ತು ಆಡಳಿತಾತ್ಮಕ ಹಾಗೂ ಅದಕ್ಕೆ ಪೂರಕವಾದ ಎಲ್ಲಾ ವಿಷಯಗಳ ಸಂಬಂಧವಾಗಿ ವಿಶ್ವವಿದ್ಯಾನಿಲಯವು ಕಾಲಕಾಲಕ್ಕೆ ಹೊರಡಿಸುವ ನಿರ್ದೇಶನಗಳನ್ನು ಪ್ರತಿಯೊಂದು ಸಂಯೋಜಿತ ಕಾಲೇಜು ಅಥವಾ ಮಾನ್ಯತೆ ಪಡೆದ ಸಂಸ್ಥೆಯು ಪಾಲಿಸತಕ್ಕದ್ದು.

ಅಧ್ಯಾಯ XI

ಪಟ್ಟಿಗೆ ಸೇರಿಸುವಿಕೆ ಮತ್ತು ಪದವಿಗಳು

72. ವಿದ್ಯಾರ್ಥಿಗಳ ಪ್ರವೇಶಕ್ಕಾಗಿ ಅರ್ಹತೆ.– ಯಾವೊಬ್ಬ ವಿದ್ಯಾರ್ಥಿಯು ಕಾಲಕಾಲಕ್ಕೆ ಪರಿನಿಯಮದ ಮೂಲಕ ನಿಯಮಿಸಬಹುದಾದ ಅಂಥ ಅರ್ಹತೆಗಳನ್ನು ಆತನು ಹೊಂದಿದ್ದ ಹೊರತು, ವಿಶ್ವವಿದ್ಯಾಲಯದಲ್ಲಿ ಪದವಿ ಅಥವಾ ಡಿಪ್ಲೋಮಾ ಅಧ್ಯಯನ ಕ್ರಮಗಳ ಪ್ರವೇಶಕ್ಕೆ ಅರ್ಹನಾಗಿರತಕ್ಕದ್ದಲ್ಲ.

73. ಗೌರವ ಪದವಿಗಳು.– (1) ವಿದ್ಯಾವಿಷಯಕ ಪರಿಷತ್ತು ತನ್ನ ಸಭೆಯಲ್ಲಿ ಹಾಜರಿದ್ದ ಮೂರನೇ ಎರಡರ ಬಹುಮತದ ಸದಸ್ಯರು, ಯಾವೊಬ್ಬ ವ್ಯಕ್ತಿಗೆ, ಆತನ ಶ್ರೇಷ್ಠ ಸಾಧನೆ ಮತ್ತು ಸ್ಥಾನಮಾನದ ಕಾರಣದಿಂದಾಗಿ ಅವರ ಅಭಿಪ್ರಾಯದಲ್ಲಿ ಅಂಥ ಗೌರವ ಪದವಿ ಅಥವಾ ಇತರ ವಿದ್ಯಾವಿಷಯಕ ಪ್ರಶಸ್ತಿಯನ್ನು ಸ್ವೀಕರಿಸಲು ಯೋಗ್ಯ ಮತ್ತು ಸರಿಯಾದ ವ್ಯಕ್ತಿ ಎಂಬ ಆಧಾರದ ಮೇಲೆ ಗೌರವ ಪದವಿ ಅಥವಾ ವಿದ್ಯಾವಿಷಯಕ ಪ್ರಶಸ್ತಿಯನ್ನು ಪ್ರದಾನ ಮಾಡಬೇಕೆಂದು ಶಿಫಾರಸ್ಸು ಮಾಡಿದರೆ, ಕಾರ್ಯನಿರ್ವಾಹಕ ಪರಿಷತ್ತು, ಸಂಬಂಧಪಟ್ಟ ವ್ಯಕ್ತಿಗೆ ಅದನ್ನು ಪ್ರದಾನ ಮಾಡಲು ಕುಲಾಧಿಪತಿಯವರ ಅನುಮೋದನೆಗಾಗಿ ಶಿಫಾರಸ್ಸು ಮಾಡಬಹುದು.

(2) ಗೌರವ ಪದವಿಯನ್ನು ಅಥವಾ ಪ್ರಶಸ್ತಿಯನ್ನು ವಿಶೇಷ ಸಂದರ್ಭಗಳಲ್ಲಿ ಮಾತ್ರ ಪ್ರದಾನ ಮಾಡತಕ್ಕದ್ದು. ಅದನ್ನು ಕೇವಲ ಒಂದು ವಾಡಿಕೆಯ ಕ್ರಮವಾಗಿ ಪ್ರದಾನ ಮಾಡತಕ್ಕದ್ದಲ್ಲ. ಅನಮೋದಿಸಬಹುದಾದಂತೆ ವಿಶ್ವವಿದ್ಯಾಲಯದ ಯಾವುದೇ ವ್ಯಾಸಂಗ ಕ್ರಮಕ್ಕೆ (Faculty) ವಹಿಸಿಕೊಡಲಾಗಿರುವ ಯಾವುದೇ ಶೈಕ್ಷಣಿಕ, ಸಂಶೋಧನೆ ವಿಷಯದಲ್ಲಿ ಮುನ್ನಡೆಗಾಗಿ ಗಣನೀಯ ಕೊಡುಗೆ ನೀಡಿದ ಅಥವಾ ಶಿಕ್ಷಣದ ಧ್ಯೇಯಗಳಿಗಾಗಿ ವಿಶಿಷ್ಟ ಸೇವೆ ಸಲ್ಲಿಸಿದ ವ್ಯಕ್ತಿಗಳನ್ನು ಅಂಥ ಗೌರವ ಪದವಿಗಳ ನೀಡಿಕೆಯ ಉದ್ದೇಶಕ್ಕಾಗಿ ಗುರುತಿಸತಕ್ಕದ್ದು:

ಪರಂತು, ಏಕಕಾಲದಲ್ಲಿ ಇಬ್ಬರಿಗಿಂತ ಹೆಚ್ಚಿನ ಪ್ರಖ್ಯಾತ ವ್ಯಕ್ತಿಗಳಿಗೆ ಗೌರವ ಪದವಿಯನ್ನು (Honoris Causa) ಪ್ರಧಾನ ಮಾಡತಕ್ಕದ್ದಲ್ಲ.

(3) ವಿಜ್ಞಾನ ಅಥವಾ ತಂತ್ರಜ್ಞಾನ ಶಾಖೆಗಳ, ವೈಜ್ಞಾನಿಕ ಮತ್ತು ತಂತ್ರಜ್ಞಾನ ಸಂಸ್ಥೆಗಳಲ್ಲಿ ಯೋಜನೆ, ಸಂಘಟನೆ ಅಥವಾ ಅಭಿವೃದ್ಧಿಗೆ ಸಂಬಂಧಿಸಿದ ಶಾಖೆಗಳಲ್ಲಿನ ಅಂಥ ವ್ಯಕ್ತಿಗಳಿಗೆ ಡಾಕ್ಟರ್ ಆಫ್ ಸೈನ್ಸ್ (ಡಿಎಸ್‌ಸಿ) ಪದವಿಯನ್ನು ಹಾನರಿಸ್‌ಕಾಸಾ (ಗೌರವ ಪದವಿ) ಆಗಿ ಪ್ರದಾನ ಮಾಡಬಹುದು.

(4) ಪ್ರತಿಷ್ಠಿತ ನ್ಯಾಯವಾದಿಗಳು, ನ್ಯಾಯಾಧೀಶರು ಅಥವಾ ಜ್ಯೂರಿಗಳು, ರಾಜಕೀಯ ಗಣ್ಯವ್ಯಕ್ತಿಗಳಿಗೆ ಅಥವಾ ಸಾರ್ವಜನಿಕ ಕ್ಷೇತ್ರದ ಧ್ಯೇಯಗಳಿಗಾಗಿ ಗಮನಾರ್ಹ ಕೊಡುಗೆ ನೀಡಿದ ವ್ಯಕ್ತಿಗಳಿಗೆ ಡಾಕ್ಟರ್ ಆಫ್ ಲಾಸ್ (ಎಲ್‌ಎಲ್.ಡಿ) ಪದವಿಯನ್ನು ಹಾನರೀಸ್‌ಕಾಸ್ (ಗೌರವ ಪದವಿ) ಆಗಿ ಪ್ರದಾನ ಮಾಡಬಹುದು.

(5) ಕಲೆ, ಸಂಗೀತ, ಸಾಹಿತ್ಯ, ಪ್ರದರ್ಶನ ಕಲೆ, ಸಮಾಜ ವಿಜ್ಞಾನ ಅಥವಾ ಸಂಬಂಧಿತ ಕ್ಷೇತ್ರಗಳು ಯಾವುದೇ ವಿಭಾಗದಲ್ಲಿ ವೈಶಿಷ್ಟ್ಯವನ್ನು ಹೊಂದಿರುವ ಅಥವಾ ಸಾಹಿತ್ಯ ಮತ್ತು ಕಲೆಯ ಕಾರಣಕ್ಕೆ ಗಣನೀಯ ಕೊಡುಗೆಯನ್ನು ನೀಡಿರುವ ವ್ಯಕ್ತಿಗೆ ಹಾನೊರಿಸ್ ಕಾಸ್ ಡಾಕ್ಟರ್ ಆಫ್ ಲಿಟರೇಚರ್ (ಡಿ.ಲಿಟ್.) ಪದವಿಯನ್ನು ಪ್ರಧಾನ ಮಾಡಬಹುದು.

(6) ವ್ಯವಹಾರ, ಕೈಗಾರಿಕೆ ಅಥವಾ ಸಂಬಂಧಿತ ಕ್ಷೇತ್ರಗಳಲ್ಲಿ ವೈಶಿಷ್ಟ್ಯಗಳನ್ನುಳ್ಳ ಅಥವಾ ಈ ಕ್ಷೇತ್ರಗಳಿಗೆ ಗಣನೀಯ ಕೊಡುಗೆಯನ್ನು ನೀಡಿರುವ ವ್ಯಕ್ತಿಗೆ ಡಾಕ್ಟರ್ ಆಫ್ ಬಿಸಿನೆಸ್ ಸೈನ್ಸ್ (ಡಿ.ಬಿಎಸ್‌ಸಿ.) ಹಾನೊರಿಸ್ ಕಾಸ್ ಪದವಿಯನ್ನು ಪ್ರದಾನ ಮಾಡಬಹುದು.

74. ಪದವಿ ಅಥವಾ ಡಿಪ್ಲೊಮಾಗಳನ್ನು ಹಿಂತೆಗೆದುಕೊಳ್ಳುವುದು.– (1) ಯಾವೊಬ್ಬ ವ್ಯಕ್ತಿಯು, ಒಂದು ಪದವಿಯನ್ನು, ಡಿಪ್ಲೊಮಾವನ್ನು ಅಥವಾ ಸರ್ಟಿಫಿಕೇಟನ್ನು ಮೋಸದಿಂದ ಅಥವಾ ಸುಳ್ಳು ಜಾತಿ ಪ್ರಮಾಣಪತ್ರದ ಮೂಲಕ ಪಡೆದುಕೊಂಡಿದ್ದಾನೆಂದು ಕಂಡುಬಂದರೆ, ಕಾರ್ಯನಿರ್ವಾಹಕ ಪರಿಷತ್ತಿನ ಒಟ್ಟು ಸದಸ್ಯರ ಬಹುಮತದಿಂದ ಮತ್ತು ಆ ಸಭೆಯಲ್ಲಿ ಹಾಜರಿದ್ದು ಮತ ಚಲಾಯಿಸುವ ಮೂರನೆಯ ಎರಡು ಅಂಶಕ್ಕಿಂತ ಕಡಿಮೆಯಿಲ್ಲದ ಸದಸ್ಯರ ಬಹುಮತದಿಂದ ಅಂಗೀಕೃತವಾದ ನಿರ್ಣಯದ ಮೂಲಕ ವಿದ್ಯಾವಿಷಯಕ ಪರಿಷತ್ತಿನ ಶಿಫಾರಸ್ಸಿನ ಮೇಲೆ ಕಾರ್ಯನಿರ್ವಾಹಕ ಪರಿಷತ್ತು, ಅಂಥ ಯಾವೊಬ್ಬ ವ್ಯಕ್ತಿಗೆ ಪ್ರದಾನ ಮಾಡಲಾಗಿದ್ದ ಅಥವಾ ಕೊಡಲಾಗಿದ್ದ ಅಂಥ ಯಾವುದೇ ಪ್ರಶಸ್ತಿ, ಪದವಿ, ಡಿಪ್ಲೊಮಾ ಅಥವಾ ವಿಶೇಷಾಧಿಕಾರವನ್ನು ಹಿಂತೆಗೆದುಕೊಳ್ಳಬಹುದು.

(2) ಈ ಪ್ರಕರಣದ ಅಡಿಯಲ್ಲಿ ಯಾವೊಬ್ಬ ವ್ಯಕ್ತಿಯ ವಿರುದ್ಧ, ಕೈಗೊಳ್ಳಬೇಕೆಂದು ಪ್ರಸ್ತಾವಿಸಿದ ಕ್ರಮದ ವಿರುದ್ಧ ಕಾರಣ ತೋರಿಸಲು ಅವನಿಗೆ ಅವಕಾಶವನ್ನು ಕೊಟ್ಟ ಹೊರತು, ಯಾವುದೇ ಕ್ರಮ ಕೈಗೊಳ್ಳತಕ್ಕದ್ದಲ್ಲ.

(3) ಕಾರ್ಯನಿರ್ವಾಹಕ ಪರಿಷತ್ತು ಅಂಗೀಕರಿಸಿದ ನಿರ್ಣಯದ ಪ್ರತಿಯೊಂದನ್ನು ಸಂಬಂಧಪಟ್ಟ ವ್ಯಕ್ತಿಗೆ ಕೂಡಲೇ ಕಳುಹಿಸತಕ್ಕದ್ದು.

(4) ಕಾರ್ಯನಿರ್ವಾಹಕ ಪರಿಷತ್ತು ತೆಗೆದುಕೊಂಡ ತೀರ್ಮಾನದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು, ಅಂಥ ನಿರ್ಣಯವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ, ಕುಲಾಧಿಪತಿಗೆ ಅಪೀಲು ಸಲ್ಲಿಸಬಹುದು.

(5) ಅಂಥ ಅಪೀಲಿನ ಮೇಲೆ ಕುಲಾಧಿಪತಿಯವರ ತೀರ್ಮಾನವು ಅಂತಿಮವಾಗಿರತಕ್ಕದ್ದು.

ಅಧ್ಯಾಯ XII

ವಿಶ್ವವಿದ್ಯಾನಿಲಯ ಪುನರಾವಲೋಕನಾ ಆಯೋಗ ಮತ್ತು ಇತರ ನಿಕಾಯಗಳು

75. ವಿಶ್ವವಿದ್ಯಾನಿಲಯ ಪುನರಾವಲೋಕನಾ ಆಯೋಗದ ನೇಮಕ.– (1) ಕುಲಾಧಿಪತಿಯು ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ ವಿಶ್ವವಿದ್ಯಾನಿಲಯ ಪುನರಾವಲೋಕನಾ ಆಯೋಗವನ್ನು ರಚಿಸತಕ್ಕದ್ದು. ಆಯೋಗದ ಸದಸ್ಯರು ಗರಿಷ್ಠ ನಾಲ್ಕು ವರ್ಷಗಳ ಅವಧಿಯವರೆಗೆ ಪದಧಾರಣವನ್ನು ಮಾಡತಕ್ಕದ್ದು. ಒಂದು ವರ್ಷದಲ್ಲಿ ನಡೆದ ಪುನರಾವಲೋಕನಾ ಕಾರ್ಯಗಳ ಪುನರಾವಲೋಕನಾ ವರದಿಗಳನ್ನು ಆಯೋಗವು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿಗೆ ವಾರ್ಷಿಕವಾಗಿ ಸಲ್ಲಿಸತಕ್ಕದ್ದು ಮತ್ತು ನಾಲ್ಕು ವರ್ಷಗಳ ಅವಧಿಯೊಳಗಾಗಿ ಎಲ್ಲಾ ವಿಶ್ವವಿದ್ಯಾನಿಲಯಗಳ ಪುನರಾವಲೋಕನೆಯನ್ನು ಪೂರ್ಣಗೊಳಿಸತಕ್ಕದ್ದು.

(2) ಸರ್ಕಾರವು ಮಂಜೂರು ಮಾಡಿದ ನಿಧಿಗಳಿಂದ ಆಸೀನತಾ ಶುಲ್ಕಗಳು (Sitting fees) ಮತ್ತು ಸಭೆಗಳಲ್ಲಿ ಹಾಜರಾತಿಗಾಗಿ ಪ್ರಯಾಣ ಭತ್ಯೆ (ಟಿಎ), ತುಟ್ಟಿ ಭತ್ಯೆ (ಡಿಎ) ಗಳಿಗಾಗಿ ಸದಸ್ಯರುಗಳು ಅರ್ಹರಾಗಿರತಕ್ಕದ್ದು:

ಪರಂತು, ಅವರುಗಳು ಒಂದು ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿದಾಗ, ಸಂಬಂಧಪಟ್ಟ ವಿಶ್ವವಿದ್ಯಾನಿಲಯವು ಈ ಉದ್ದೇಶದ ಖರ್ಚುಗಳನ್ನು ಭರಿಸತಕ್ಕದ್ದು.

(3) ಆಯೋಗವು ಮೂವರು ಗಣ್ಯ ವ್ಯಕ್ತಿಗಳನ್ನು ಮೀರದಂತೆ, ಪ್ರಮುಖವಾಗಿ ರಾಜ್ಯದ ಅಥವಾ ಕೇಂದ್ರೀಯ ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿಗಳ ಅಥವಾ ರಾಷ್ಟ್ರೀಯ ಪ್ರಾಮುಖ್ಯತೆಯುಳ್ಳ ವಿದ್ಯಾಸಂಸ್ಥೆಗಳ ನಿರ್ದೇಶಕರನ್ನು ಒಳಗೊಂಡಿರತಕ್ಕದ್ದು, ಅವರಲ್ಲಿ ಒಬ್ಬರು ಅಧ್ಯಕ್ಷರಾಗಿರತಕ್ಕದ್ದು.

(4) ಅಧ್ಯಕ್ಷರು ಮತ್ತು ಸದಸ್ಯರುಗಳ ನೇಮಕಾತಿ ನಿಬಂಧನೆಗಳು ಮತ್ತು ಷರತ್ತುಗಳು ಕುಲಾಧಿಪತಿಯು ನಿರ್ಧರಿಸಬಹುದಾದಂತೆ ಇರತಕ್ಕದ್ದು.

(5) ಆಯೋಗವು ಅದು ಸೂಕ್ತವೆಂದು ಭಾವಿಸುವ ಅಂಥ ವಿಚಾರಣೆಯನ್ನು ನಡೆಸಿದ ತರುವಾಯ ಸಂಬಂಧಿಸಿದ ವಿಶ್ವವಿದ್ಯಾನಿಲಯದ ಕುರಿತು ಅದರ ಶಿಫಾರಸ್ಸುಗಳನ್ನು ಒಳಗೊಂಡ ವರದಿಯನ್ನು ಕುಲಾಧಿಪತಿಯವರಿಗೆ ಸಲ್ಲಿಸತಕ್ಕದ್ದು.

(6) ಕುಲಾಧಿಪತಿಯು ವಿಶ್ವವಿದ್ಯಾನಿಲಯದ ಕುರಿತಾದ ಶಿಫಾರಸ್ಸುಗಳನ್ನು ಒಳಗೊಂಡ ಆಯೋಗದ ವರದಿಯ ಪ್ರತಿಯನ್ನು ರಾಜ್ಯ ಸರ್ಕಾರಕ್ಕೆ ವರ್ಗಾಯಿಸಬಹುದು ಹಾಗೂ ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನೊಂದಿಗೆ ಸಮಾಲೋಚಿಸಿ ಅದು ಸೂಕ್ತವೆಂದು ಭಾವಿಸುವ ಅಂಥ ಕ್ರಮವನ್ನು ತೆಗೆದುಕೊಳ್ಳಬಹುದು.

(7) ರಾಜ್ಯ ಸರ್ಕಾರವು, ಅದರ ಶಿಫಾರಸ್ಸುಗಳು ಮತ್ತು ಅದರ ಮೇಲೆ ತೆಗೆದುಕೊಂಡ ಅನುಸರಣಾ ಕ್ರಮದ ವರದಿಯನ್ನು ಒಳಗೊಂಡ ಆಯೋಗದ ವರದಿಯನ್ನು ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

76. ಕುಂದುಕೊರತೆ ಸಮಿತಿ.– (1) ಪ್ರತಿಯೊಂದು ವಿಶ್ವವಿದ್ಯಾನಿಲಯದಲ್ಲೂ ಅದರ ವಿಭಾಗಗಳು, ಸಂಯೋಜಿತ ಕಾಲೇಜುಗಳು ಮತ್ತು ಮನ್ನಣೆ ಪಡೆದ ಸಂಸ್ಥೆಗಳಿಗೆ ಸೇರಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಹಾಗೂ ವಿದ್ಯಾರ್ಥಿಗಳ ಕುಂದುಕೊರತೆಗಳೊಂದಿಗೆ ವ್ಯವಹರಿಸಲು ಮತ್ತು ಮೂರು ತಿಂಗಳೊಳಗಾಗಿ ಕಾರ್ಯಸಾಧ್ಯವಾಗಬಹುದಾದಂತೆ ಅವುಗಳನ್ನು ಆಲಿಸಲು ಮತ್ತು ಪರಿಹರಿಸಲು ಒಂದು ಕುಂದುಕೊರತೆ ಸಮಿತಿಯು ಇರತಕ್ಕದ್ದು. ಸಮಿತಿಯು ಅದರ ಮೂಲಕ ವ್ಯವಹರಿಸಲಾದ ಕುಂದುಕೊರತೆಗಳ ಮೇಲೆ ಕಾರ್ಯನಿರ್ವಾಹಕ ಪರಿಷತ್ತಿಗೆ ನಿಯತಕಾಲಿಕ ವರದಿಗಳನ್ನು ಮಾಡತಕ್ಕದ್ದು.

(2) ಕುಂದುಕೊರತೆ ಸಮಿತಿಯ ರಚನೆ, ಅದರ ಅಧಿಕಾರಗಳು, ಪ್ರಕಾರ್ಯಗಳು ಮತ್ತು ಕುಂದುಕೊರತೆಗಳೊಂದಿಗೆ ವ್ಯವಹರಿಸುವಾಗ, ಅದನ್ನು ಮಾಡಲು ಅನುಸರಿಸಬೇಕಾದ ಕಾರ್ಯವಿಧಾನವು ಪರಿನಿಯಮಗಳ ಮೂಲಕ ಉಪಬಂಧಿಸಿದಂತೆ ಇರತಕ್ಕದ್ದು.

77. ರ್ಯಾಗಿಂಗ್ ತಡೆಗಟ್ಟುವಿಕೆ.– (1) ವಿಶ್ವವಿದ್ಯಾನಿಲಯದ ಕ್ಯಾಂಪಸ್ಸಿನಲ್ಲಿ ಮತ್ತು ಅದರ ಎಲ್ಲಾ ಸಂಯೋಜಿತ ಕಾಲೇಜುಗಳಲ್ಲಿ ಯಾವೊಬ್ಬ ವ್ಯಕ್ತಿಯೂ ರ್ಯಾಗಿಂಗ್ ಚಟುವಟಿಕೆಯಲ್ಲಿ ಪಾಲ್ಗೊಳ್ಳದಿರುವುದನ್ನು ಖಚಿತಪಡಿಸಿಕೊಳ್ಳಲು ಪ್ರತಿಯೊಂದು ವಿಶ್ವವಿದ್ಯಾನಿಲಯವು ಒಂದು ರ್ಯಾಗಿಂಗ್ ವಿರೋಧಿ ಸಮಿತಿಯನ್ನು ರಚಿಸತಕ್ಕದ್ದು.

(2) ರ್ಯಾಗಿಂಗ್ ವಿರೋಧಿ ಸಮಿತಿಯ ರಚನೆ, ಅಧಿಕಾರಿಗಳು ಮತ್ತು ಪ್ರಕಾರ್ಯಗಳು ಆರ್ಡಿನೆನ್ಸ್‌ಗಳ ಮೂಲಕ ಉಪಬಂಧಿಸಿದಂತೆ ಇರತಕ್ಕದ್ದು.

78. ಕೆಲವು ವಿಶೇಷ ಕೋಶಗಳ ಸೃಜನೆ.– (1) ಪ್ರತಿಯೊಂದು ವಿಶ್ವವಿದ್ಯಾನಿಲಯವು ಈ ಮುಂದಿನ ಕೋಶಗಳನ್ನು ಸ್ಥಾಪಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು, ಎಂದರೆ:–

(i) ಸಮಾನ ಅವಕಾಶ ಕೋಶ;

(ii) ಇ–ಆಡಳಿತ ಕೋಶ;

(iii) ಆಂತರಿಕ ಗುಣಮಟ್ಟ ಭರವಸೆ ಕೋಶ (ಐಕ್ಯೂಎಸಿ)

(iv) ಹಳೆಯ ವಿದ್ಯಾರ್ಥಿಗಳ (alumni) ಕೋಶ.

(2) ಮೇಲಿನ ಪ್ರತಿಯೊಂದು ಕೋಶಗಳ ರಚನೆ, ಅಧಿಕಾರಗಳು ಮತ್ತು ಪ್ರಕಾರ್ಯಗಳು ಆರ್ಡಿನೆನ್ಸ್‌ಗಳ ಮೂಲಕ ಉಪಬಂಧಿಸಿದಂತೆ ಇರತಕ್ಕದ್ದು.

79. ಲೈಂಗಿಕ ಕಿರುಕುಳದ ತಡೆಗಟ್ಟುವಿಕೆ.– (1) ಪ್ರತಿಯೊಂದು ವಿಶ್ವವಿದ್ಯಾನಿಲಯವು, ಅದರ ವಿದ್ಯಾರ್ಥಿಗಳ, ನೌಕರರ ಮತ್ತು ವಿದ್ವಾಂಸರ ಲೈಂಗಿಕ ಕಿರುಕುಳ ತಡೆಗಟ್ಟುವಿಕೆಯನ್ನು ಮತ್ತು ಇವುಗಳಿಗೆ ಸಂಬಂಧಿಸಿದಂತೆ ಅವರ ಕುಂದುಕೊರತೆಗಳನ್ನು ಪರಿಹರಿಸುವುದನ್ನು ಖಚಿತಪಡಿಸಿಕೊಳ್ಳಲು ಒಂದು ಸಮಿತಿಯನ್ನು ರಚಿಸತಕ್ಕದ್ದು.

(2) ಅಂಥ ಸಮಿತಿಯ ರಚನೆ, ಅಧಿಕಾರಗಳು ಮತ್ತು ಪ್ರಕಾರ್ಯಗಳು ಮತ್ತು ಶಿಕ್ಷೆಯ ಸ್ವರೂಪ ಹಾಗೂ ವಿಧಿಸಬೇಕಾದ ದಂಡನೆಗಳು ಆರ್ಡಿನೆನ್ಸ್‌ಗಳ ಮೂಲಕ ಉಪಬಂಧಿಸಿದಂತೆ ಇರತಕ್ಕದ್ದು.

80. ವಿದ್ಯಾರ್ಥಿಗಳ ಪರಿಷತ್ತು.– (1) ಪ್ರತಿಯೊಂದು ವಿಶ್ವವಿದ್ಯಾನಿಲಯವು ಪಠ್ಯೇತರ ಅಥವಾ ಸಾಂಸ್ಕೃತಿಕ ಸಂಗತಿಗಳ ಸಂಬಂಧದಲ್ಲಿ ಅವರ ಪಾತ್ರವನ್ನು ನಿರೂಪಿಸಲು ಮತ್ತು ಅವರ ಶ್ರೇಯೋಭಿವೃದ್ಧಿಯನ್ನು ಉಪಬಂಧಿಸಲು ವಿದ್ಯರ್ಥಿಗಳ ಪರಿಷತ್ತನ್ನು ರಚಿಸತಕ್ಕದ್ದು.

(2) ವಿದ್ಯಾರ್ಥಿಗಳ ಪರಿಷತ್ತಿನ ರಚನೆ ಮತ್ತು ಪ್ರಕಾರ್ಯಗಳು ಹಾಗೂ ಅದರ ಸಭೆಗಳ ಆವರ್ತನೆಯು ಆಡಿನೆನ್ಸ್‌ಗಳ ಮೂಲಕ ಉಪಬಂಧಿಸಿದಂತೆ ಇರತಕ್ಕದ್ದು.

ಅಧ್ಯಾಯ XIII

ಪರೀಕ್ಷೆಯ ಕೆಲಸದಲ್ಲಿ ತೊಡಗಿರುವ ವ್ಯಕ್ತಿಗಳ ಪ್ರಕಾರ್ಯಗಳು ಮತ್ತು ಜವಾಬ್ದಾರಿಗಳು

81. ಬೋಧಕರ ಕರ್ತವ್ಯಗಳು.– (1) ವಿಶ್ವವಿದ್ಯಾನಿಲಯದ ಅಥವಾ ಅದರ ಸಂಯೋಜಿತ ಕಾಲೇಜಿನ ಅಥವಾ ವಿದ್ಯಾಸಂಸ್ಥೆಯ ಪ್ರತಿಯೊಬ್ಬ ಬೋಧಕನು ಕಾಲಕಾಲಕ್ಕೆ ವಿಶ್ವವಿದ್ಯಾನಿಲಯದಿಂದ ಅವನಿಗೆ ವಹಿಸಲಾದ ಬೋಧನೆ, ಸಂಶೋಧನೆ, ಪರೀಕ್ಷೆ ಅಥವಾ ಯಾವುದೇ ಇತರ ಶೈಕ್ಷಣಿಕ ಕಾರ್ಯಕ್ಕೆ ಸಂಬಂಧಪಟ್ಟ ಕೆಲಸಗಳನ್ನು ನಿರ್ವಹಿಸತಕ್ಕದ್ದು.

(2) (1)ನೇ ಉಪಪ್ರಕರಣದ ಉದ್ದೇಶಕ್ಕಾಗಿ, ವಿಶ್ವವಿದ್ಯಾನಿಲಯದ ಮತ್ತು ಅದಕ್ಕೆ ಸಂಯೋಜನೆಗೊಂಡ ಕಾಲೇಜುಗಳ ಅಥವಾ ವಿದ್ಯಾಸಂಸ್ಥೆಗಳಲ್ಲಿಯೂ ಸಹ ಸೇವೆಯಲ್ಲಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯನ್ನು ಆಡಳಿತಾತ್ಮಕವಾಗಿ ವಿಶ್ವವಿದ್ಯಾನಿಲಯದ ನಿಯಂತ್ರಣಕ್ಕೆ ಒಳಪಡಿಸತಕ್ಕದ್ದು, ಅವರು ಕಾಲಕಾಲಕ್ಕೆ ವಿಶ್ವವಿದ್ಯಾನಿಲಯವು ನೀಡಿದ ಸೂಚನೆಗಳು ಅಥವಾ ಆದೇಶಗಳನ್ನು ಪಾಲಿಸತಕ್ಕದ್ದು.

82. ಪರೀಕ್ಷಾ ಕಾರ್ಯವನ್ನು ನೆರವೇರಿಸುವ ಹೊಣೆ:– (1) ಯಾವೊಬ್ಬ ವ್ಯಕ್ತಿಗೆ ಪ್ರಶ್ನೆ ಪತ್ರಿಕೆಯನ್ನು ಸಿದ್ಧಪಡಿಸುವುದು, ಪರಿವೀಕ್ಷಣೆ, ಮೇಲ್ವಿಚಾರಣೆ, ಉತ್ತರ ಪತ್ರಿಕೆಗಳ ಮೌಲ್ಯಮಾಪನ, ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸುವುದು, ಪ್ರಶ್ನೆ ಪತ್ರಿಕೆಗಳ ಮತ್ತು ಉತ್ತರ ಪತ್ರಿಕೆ ಪುಸ್ತಿಕೆಗಳ ಮುದ್ರಣ, ಅಂಕಪಟ್ಟಿಗಳ ಅಂಕಣತಯಾರಿ ಮತ್ತು ಸಿದ್ಧಪಡಿಸುವಿಕೆ ಹಾಗೂ ಪರೀಕ್ಷೆಗೆ ಸಂಬಂಧಿಸಿದ ಕಾರ್ಯಕ್ಕೆ ಮತ್ತು ಅದಕ್ಕೆ ಪ್ರಾಸಂಗಿಕವಾದ ಮತ್ತು ಅದಕ್ಕೆ ಸಂಬಂಧಿಸಿದ ಅಂಥ ಎಲ್ಲ ಚಟುವಟಿಕೆಗಳನ್ನು ವಹಿಸಲಾಗಿದೆಯೋ ಅಂಥ ಕರ್ತವ್ಯಗಳನ್ನು ಶೈಕ್ಷಣಿಕ ಗುಣಮಟ್ಟಗಳನ್ನು ಸಾಧಿಸುವುದಕ್ಕಾಗಿ ವಿವೇಕದಿಂದ ಮತ್ತು ಅತ್ಯಂತ ಹೆಚ್ಚಿನ ಪ್ರಾಮಾಣಿಕತೆಯಿಂದ ನಿರ್ವಹಿಸತಕ್ಕದ್ದು.

(2) (1) ನೇ ಉಪಪ್ರಕರಣದ ಅಡಿಯಲ್ಲಿ ಪರೀಕ್ಷಾ ಕಾರ್ಯವನ್ನು ಹಂಚಿಕೆ ಮಾಡಲಾಗಿರುವ ಯಾವೊಬ್ಬ ವ್ಯಕ್ತಿಯು, ಕರ್ತವ್ಯಗಳ ಉಲ್ಲಂಘನೆಯ ತಪ್ಪಿತಸ್ಥನೆಂದು ಕಂಡು ಬಂದರೆ ಅಥವಾ ದುರ್ನಡತೆಯಲ್ಲಿ ಒಳಗೊಂಡಿದ್ದರೆ, ಅಪರಾಧ ನಿರ್ಣಯವಾದ ತರುವಾಯ, ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(3) ಸಂಬಂಧಪಟ್ಟ ವಿಶ್ವವಿದ್ಯಾನಿಲಯದ ಪರೀಕ್ಷಾ ನಿಯಂತ್ರಕರು ನೀಡಿದ ದೂರಿನ ಮೇಲಲ್ಲದೆ ಈ ಪ್ರಕರಣದ ಅಡಿಯಲ್ಲಿ, ದಂಡನೀಯವಾದ ಒಂದು ಅಪರಾಧದ ಅಥವಾ ಅಂಥ ಅಪರಾಧದ ದುಷ್ಪ್ರೇರಣೆಯ ಸಂಜ್ಞೇಯತೆಯನ್ನು ಯಾವುದೇ ನ್ಯಾಯಾಲಯವು ತೆಗೆದುಕೊಳ್ಳತಕ್ಕದ್ದಲ್ಲ.

83. ಅಪರಾಧಗಳ ದುಷ್ಪ್ರೇರಣೆಗಾಗಿ ಶಿಕ್ಷೆ.– 82ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಪ್ರಚೋದಿಸುವ ಅಥವಾ ದುಷ್ಪ್ರೇರಿಸುವ ಯಾವೊಬ್ಬ ವ್ಯಕ್ತಿಯು, ಅಪರಾಧ ನಿರ್ಣಯವಾದ ತರುವಾಯ, ಆ ಪ್ರಕರಣದಲ್ಲಿ ಅದಕ್ಕಾಗಿ ಉಪಬಂಧಿಸಲಾದ ಅದೇ ಶಿಕ್ಷೆಯಿಂದ ದಂಡಿತನಾಗತಕ್ಕದ್ದು.

84. ಖಾಸಗಿ ಟ್ಯೂಷನ್ ಮೇಲೆ ಪ್ರತಿಬಂಧ.– (1) ವಿಶ್ವವಿದ್ಯಾನಿಲಯದ ಅಥವಾ ಸಂಯೋಜಿತ ಕಾಲೇಜಿನ ಅಥವಾ ವಿದ್ಯಾಸಂಸ್ಥೆಯ ಯಾವೊಬ್ಬ ಬೋಧಕನು, ವಿಶ್ವವಿದ್ಯಾನಿಲಯದ ಅಥವಾ ಅವನನ್ನು ನೇಮಕಮಾಡಿದ ಪ್ರಾಧಿಕಾರಿಯ ಅನುಮತಿ ಇಲ್ಲದೆ, ಆತನು ಖಾಸಗಿ ಟ್ಯೂಷನ್‌ನಲ್ಲಿ ಅಥವಾ ಯಾವುದೇ ಇತರ ಉದ್ಯೋಗ ಅಥವಾ ಕೆಲಸದಲ್ಲಿ ತೊಡಗತಕ್ಕದ್ದಲ್ಲ.

(2) ಮೇಲೆ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದಂತೆ ಯಾವುದೇ ಬೋಧಕನು ಖಾಸಗಿ ಟ್ಯೂಷನ್‌ನಲ್ಲಿ ಒಳಗೊಂಡಿರುವುದು ಕಂಡುಬಂದಲ್ಲಿ, ಆತನ ವಿರುದ್ಧ ಸಂಬಂಧಿತ ಶಿಸ್ತು ಪ್ರಾಧಿಕಾರಿಯು ಅಂದರೆ ವಿಶ್ವವಿದ್ಯಾನಿಲಯದ ನೌಕರರ ಸಂದರ್ಭದಲ್ಲಿ ಕಾರ್ಯನಿರ್ವಾಹಕ ಪರಿಷತ್ತು ಹಾಗೂ ಸಂಯೋಜಿತ ಕಾಲೇಜು ಅಥವಾ ವಿದ್ಯಾಸಂಸ್ಥೆಯ ನೌಕರರ ಸಂದರ್ಭದಲ್ಲಿ ವ್ಯವಸ್ಥಾಪನಾ ಮಂಡಳಿಯು ಶಿಸ್ತುಕ್ರಮವನ್ನು ಆರಂಭಿಸತಕ್ಕದ್ದು.

ಅಧ್ಯಾಯ XIV

ಸಂಕೀರ್ಣ ಮತ್ತು ತಾತ್ಕಾಲಿಕ ಉಪಬಂಧಗಳು

85. ಉನ್ನತ ಶಿಕ್ಷಣ ಮೂಲಸೌಕರ್ಯ ಅಭಿವೃದ್ಧಿ ಮಂಡಳಿ:– (1) ಒಂದು ಕೋಟಿ ರೂಪಾಯಿಗಳನ್ನು ಮೀರಿದ ಅಥವಾ ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿಯಮಿಸಬಹುದಾದ ಅಂಥ ಮೊತ್ತದ ಕಾಮಗಾರಿ ಮತ್ತು ಮೂಲ ಸೌಕರ್ಯದ ಅಭಿವೃದ್ಧಿಯನ್ನು ಅನುಮೋದಿಸಲು ಮತ್ತು ಮೇಲ್ವಿಚಾರಿಸಲು ಸರ್ಕಾರಿ ವಿದ್ಯಾ ಸಂಸ್ಥೆಗಳನ್ನು ಒಳಗೊಂಡು ಎಲ್ಲಾ ವಿಶ್ವವಿದ್ಯಾನಿಲಯಗಳಿಗಾಗಿ ಒಂದು ಉನ್ನತ ಶಿಕ್ಷಣ ಮೂಲಸೌಕರ್ಯ ಅಭಿವೃದ್ಧಿ ಮಂಡಳಿಯು ಇರತಕ್ಕದ್ದು.

(2) ಯಾವುದೇ ವಿಶ್ವವಿದ್ಯಾನಿಲಯವು ಒಂದು ಕೋಟಿ ರೂಪಾಯಿಗಳಿಗೂ ಮೀರಿದ ಮೂಲ ಸೌಕರ್ಯ ಅಭಿವೃದ್ಧಿ ಕಾರ್ಯವನ್ನು ಉನ್ನತ ಶಿಕ್ಷಣ ಮೂಲಸೌಕರ್ಯ ಅಭಿವೃದ್ಧಿ ಮಂಡಳಿಯ ಅನುಮೋದನೆಯಿಲ್ಲದೆ ಕೈಗೊಳ್ಳತಕ್ಕದಲ್ಲ.

(3) ಮಂಡಳಿಯು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಅಧ್ಯಕ್ಷರಾಗಿರತಕ್ಕದ್ದು ಮತ್ತು ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ಇತರ ನಾಲ್ಕು ಸದಸ್ಯರು;

(ಬಿ) ಸಂಬಂಧಪಟ್ಟ ವಿಶ್ವವಿದ್ಯಾನಿಯಲದ ಕುಲಪತಿ – ಸದಸ್ಯರು;

(ಸಿ) ರಾಜ್ಯದ ಮುಖ್ಯ ಇಂಜಿನಿಯರ್ ದರ್ಜೆಗೆ ಕಡಿಮೆಯಲ್ಲದ ಇಬ್ಬರು ಸಿವಿಲ್ ಇಂಜಿನಿಯರ್‌ಗಳು – ಸೇವೆಯಲ್ಲಿರುವವರು ಅಥವಾ ನಿವೃತ್ತರಾದವರು– ಸದಸ್ಯರು;

(ಡಿ) ರಾಜ್ಯದ ಮುಖ್ಯ ವಾಸ್ತು ಶಿಲ್ಪಿ ಅಥವಾ ಸೂಪರಿಂಟೆಂಡೆಂಟ್ ಇಂಜಿನಿಯರ್ ದರ್ಜೆಗೆ ಕಡಿಮೆಯಲ್ಲದ ಆತನ ನಾಮನಿರ್ದೇಶಿತ; ಮತ್ತು

(ಇ) ಸರ್ಕಾರದ ಉಪ ಕಾರ್ಯದರ್ಶಿ ದರ್ಜೆಗೆ ಕಡಿಮೆಯಲ್ಲದ ಒಬ್ಬ ಅಧಿಕಾರಿಯು ಸಂಚಾಲಕನಾಗಿರತಕ್ಕದ್ದು.

(4) ಮಂಡಳಿಯು ಅದರ ಪ್ರಧಾನ ಕಚೇರಿಯನ್ನು ಬೆಂಗಳೂರಿನಲ್ಲಿ ಹೊಂದಿರತಕ್ಕದ್ದು.

(5) ರಾಜ್ಯ ಸರ್ಕಾರವು ಮಂಡಳಿಯ ಸುಗಮ ಕಾರ್ಯನಿರ್ವಹಣೆಗೆ ಅಗತ್ಯವಿರುವ ಹುದ್ದೆಗಳನ್ನು ಸೃಜಿಸತಕ್ಕದ್ದು, ಅವುಗಳನ್ನು ಯಾವುದೇ ರಾಜ್ಯ ಸಿವಿಲ್ ಸೇವೆಗಳ ಅಥವಾ ವಿಶ್ವವಿದ್ಯಾನಿಲಯಗಳಿಂದ ನಿಯೋಜನೆ ಮೇರೆಗೆ ತುಂಬತಕ್ಕದ್ದು.

(6) ಮಂಡಳಿಯ ಅಧಿಕಾರಗಳು, ಪ್ರಕಾರ್ಯಗಳು ಮತ್ತು ಕರ್ತವ್ಯಗಳು ರಾಜ್ಯ ಸರ್ಕಾರವು ಈ ಸಂಬಂಧಿಸಿದಂತೆ ರಚಿಸುವ ನಿಯಮಗಳಲ್ಲಿ ನಿಯಮಿಸಿದಂತೆ ಇರತಕ್ಕದ್ದು

86. ಶಿಸ್ತು.– (1) ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಲ್ಲಿ ಶಿಸ್ತನ್ನು ಕಾಯ್ದುಕೊಂಡು ಬರುವ ಅಂತಿಮ ಪ್ರಾಧಿಕಾರಿಯು ಕುಲಪತಿಯಾಗಿರತಕ್ಕದ್ದು. ಈ ಸಂಬಂಧದಲ್ಲಿ ಅವನ ನಿರ್ದೇಶನಗಳನ್ನು ವಿಭಾಗಗಳ ಮುಖ್ಯಸ್ಥರು, ಕಾಲೇಜುಗಳು, ವಿದ್ಯಾರ್ಥಿನಿಲಯಗಳು ಮತ್ತು ಇತರ ವಿದ್ಯಾಸಂಸ್ಥೆಗಳು ಕಾರ್ಯಗತಗೊಳಿಸತಕ್ಕದ್ದು.

(2) (1)ನೇ ಉಪ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ,–

(ಎ) ಪರೀಕ್ಷೆಯ ಹಾಜರಾತಿಯಿಂದ ಒಬ್ಬ ವಿದ್ಯಾರ್ಥಿಯನ್ನು ಡಿಬಾರ್ ಮಾಡುವ ಶಿಕ್ಷೆಯನ್ನು ಕುಲಪತಿಯ ವರದಿಯ ಆಧಾರದ ಮೇಲೆ ಕಾರ್ಯನಿರ್ವಾಹಕ ಪರಿಷತ್ತು ಪರಿಗಣಿಸತಕ್ಕದ್ದು ಮತ್ತು ವಿಧಿಸತಕ್ಕದ್ದು; ಮತ್ತು

(ಬಿ) ಇಲಾಖೆ, ಕಾಲೇಜು, ವಿದ್ಯಾರ್ಥಿನಿಲಯ ಅಥವಾ ವಿದ್ಯಾಸಂಸ್ಥೆಯಿಂದ ಹೊರಹಾಕುವ ಶಿಕ್ಷೆಯನ್ನು ಕಾಲೇಜಿನ, ವಿದ್ಯಾರ್ಥಿನಿಲಯದ ಅಥವಾ ಸಂಬಂಧಪಟ್ಟ ವಿದ್ಯಾಸಂಸ್ಥೆ ಮುಖ್ಯಸ್ಥರು ವಿಧಿಸತಕ್ಕದ್ದು.

(3) ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರದ ಅಥವಾ ನಿಕಾಯದ ಯಾವುದೇ ನಿರ್ಣಯವನ್ನು ಯಾವೊಬ್ಬ ಸದಸ್ಯನಿಗೆ ನೋಟೀಸನ್ನು ಜಾರಿ ಮಾಡುವಲ್ಲಿಯ ಯಾವುದೇ ಅಕ್ರಮತೆಯ ಕಾರಣದಿಂದಾಗಿ ಅದು ಅಸಿಂಧುವೆಂದು ಭಾವಿಸತಕ್ಕದ್ದಲ್ಲ:

ಪರಂತು, ಅಂಥ ಪ್ರಾಧಿಕಾರದ ಅಥವಾ ನಿಕಾಯದ ನಡವಳಿಗಳು, ಅಂಥ ಅಕ್ರಮತೆಯಿಂದ ಪ್ರತಿಕೂಲವಾಗಿ ಬಾಧಕವಾಗತಕ್ಕದ್ದಲ್ಲ.

87. ಈ ಅಧಿನಿಯಮವು ಇತರ ಅಧಿನಿಯಮಗಳ ಮೇಲೆ ಹೆಚ್ಚಿನ ಪ್ರಭಾರವುಳ್ಳದ್ದಾಗಿರುವುದು.– ಈ ಅಧಿನಿಯಮವು ಮತ್ತು ಅದರ ಅಡಿಯಲ್ಲಿ ಮಾಡಿದ ಪರಿನಿಯಮಗಳು ಅಥವಾ ಆರ್ಡಿನೆನ್ಸ್‌ಗಳು ಅಥವಾ ವಿನಿಯಮಗಳು ಅಥವಾ ನಿಯಮಗಳು, ವಿಶ್ವವಿದ್ಯಾನಿಲಯದ ಪ್ರದೇಶದಲ್ಲಿರುವ ಯಾವುದೇ ಕಾಲೇಜಿನ ಸಂಬಂಧದಲ್ಲಿ, ಭಾರತ ಸಂವಿಧಾನದ ಏಳನೇ ಅನುಸೂಚಿಯ IIನೇ ಪಟ್ಟಿಯಲ್ಲಿ ನಮೂದು ಮಾಡಿದ ವಿಷಯಗಳ ಸಂಬಂಧದಲ್ಲಿ ಯಾವುದೇ ಇತರ ಅಧಿನಿಯಮದಲ್ಲಿ ಇದಕ್ಕೆ ಅಸಂಗತವಾದುದೇನೇ ಒಳಗೊಂಡಿದ್ದರೂ ಪರಿಣಾಮವುಳ್ಳವುಗಳಾಗಿರತಕ್ಕದ್ದು.

88. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.– ಈ ಅಧಿನಿಯಮದ, ಮತ್ತು ಅದರ ಅಡಿಯಲ್ಲಿ ರಚಿಸಿದ ಪರಿನಿಯಮಗಳು, ಆರ್ಡಿನೆನ್ಸ್‌ಗಳು, ವಿನಿಯಮಗಳು ಅಥವಾ ನಿಯಮಗಳಿಗೆ ಅನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ವಿಶ್ವವಿದ್ಯಾನಿಲಯದ ಅಥವಾ ಅದರ ಪ್ರಾಧಿಕಾರಿಗಳ, ನಿಕಾಯಗಳ ಅಥವಾ ಅಧಿಕಾರಿಗಳ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆ ಇರತಕ್ಕದ್ದಲ್ಲ ಮತ್ತು ಅದರಿಂದ ಯಾವುದೇ ಹಾನಿಗಳನ್ನು ಕ್ಲೇಮು ಮಾಡತಕ್ಕದ್ದಲ್ಲ.

89. ಅಧಿನಿಯಮ ಮತ್ತು ವ್ಯವಹರಣೆಗಳು ರಚನೆ, ರಿಕ್ತಸ್ಥಾನ, ಇತ್ಯಾದಿಗಳಲ್ಲಿನ ದೋಷದ ಆಧಾರದ ಮೇಲೆ ಮಾತ್ರವೇ ಅಸಿಂಧುವಾಗತಕ್ಕದ್ದಲ್ಲ.– ವಿಶ್ವವಿದ್ಯಾನಿಲಯದ ಕಾರ್ಯನಿರ್ವಾಹಕ ಪರಿಷತ್ತು ಅಥವಾ ಯಾವುದೇ ಇತರ ಪ್ರಾಧಿಕಾರ ಅಥವಾ ನಿಕಾಯವನ್ನು ಯುಕ್ತವಾಗಿ ರಚಿಸಿರದಿದ್ದರೆ ಅಥವಾ ಯಾವುದೇ ಕಾಲದಲ್ಲಿ ಅದರ ರಚನೆಯಲ್ಲಿ ಅಥವಾ ಪುನರ್‌ರಚನೆಯಲ್ಲಿ ಯಾವುದೇ ದೋಷವಿದ್ದರೆ ಮತ್ತು ಯಾವುದೇ ಅಂಥ ಪ್ರಾಧಿಕಾರದ ಸದಸ್ಯರ ಸ್ಥಾನವು ಖಾಲಿಯಿದ್ದರೆ, ಅಂಥ ಪ್ರಾಧಿಕಾರದ ಅಥವಾ ನಿಕಾಯದ ಯಾವುದೇ ಕಾರ್ಯ ಅಥವಾ ವ್ಯವಹರಣೆಯು, ಅಂಥ ಯಾವುದೇ ಕಾರಣ ಅಥವಾ ಕಾರಣಗಳ ಆಧಾರದ ಮೇಲೆ ಅಸಿಂಧುವಾಗತಕ್ಕದ್ದಲ್ಲ.

90. ವಿಶ್ವವಿದ್ಯಾನಿಲಯದೊಡನೆ ಸಂಯೋಜಿತ ಕಾಲೇಜುಗಳ ಸಂಬಂಧ.– ವಿಶ್ವವಿದ್ಯಾನಿಲಯದೊಡನೆ ಸಂಯೋಜಿತ ಕಾಲೇಜುಗಳ ಸಂಬಂಧವು, ಈ ಸಂಬಂಧದಲ್ಲಿ ರಚಿಸಲಾಗುವ ಪರಿನಿಯಮಗಳಿಗೆ ಒಳಪಟ್ಟಿರತಕ್ಕದ್ದು. ಅಂಥ ಪರಿನಿಯಮಗಳು, ವಿಶೇಷವಾಗಿ, ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತವಾದ ಕಾಲೇಜುಗಳ ಸಂಬಂಧದಲ್ಲಿ, ಗ್ರಂಥಾಲಯಗಳು, ಪ್ರಯೋಗಶಾಲೆಗಳು ಮತ್ತು ಬೋಧನೆ ಮತ್ತು ಸಂಶೋಧನೆಗಾಗಿ ಇತರ ಸಲಕರಣೆಗಳ ಸಂಬಂಧದಲ್ಲಿ ಅಂಥ ಕಾಲೇಜುಗಳು ಒದಗಿಸಿದ ಸೌಲಭ್ಯಗಳ ಬಗ್ಗೆ ವಹಿಸಿದ ವೆಚ್ಚದ ಸಂಬಂಧದಲ್ಲಿ ಸಮನ್ವಯ ಮತ್ತು ನಿಯಂತ್ರಣ ಮಾಡುವ ಕುರಿತಾದ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

91. ವಿಶ್ವವಿದ್ಯಾನಿಲಯಕ್ಕೆ ಸರ್ಕಾರಿ ಕಾಲೇಜುಗಳ ವರ್ಗಾವಣೆ.– (1) ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ, ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಅಂಥ ದಿನಾಂಕದಿಂದ ಜಾರಿಗೆ ಬರುವಂತೆ ಮತ್ತು ಅಂಥ ಷರತ್ತುಗಳಿಗೊಳಪಟ್ಟು ಅದರ ಯಾವುವೇ ಕಾಲೇಜುಗಳು, ಅಧಿಕಾರ ವ್ಯಾಪ್ತಿಯ ಪ್ರದೇಶದಲ್ಲಿರುವ ಅಂಥ ಕಾಲೇಜುಗಳ ಯಾವುದೇ ವಿದ್ಯಾರ್ಥಿನಿಲಯ ಅಥವಾ ಇತರ ಕಟ್ಟಡಗಳನ್ನು ಮತ್ತು ಅಂಥ ಕಾಲೇಜಿನ ಪೀಠೋಪಕರಣಗಳ ವಸ್ತುಗಳು, ಗ್ರಂಥಾಲಯ, ಪುಸ್ತಕಗಳು, ಪ್ರಯೋಗ ಶಾಲೆ, ದಾಸ್ತಾನುಗಳು, ಸಾಧನಗಳು, ಸಲಕರಣೆಗಳು, ಸಜ್ಜು ಸಲಕರಣೆಗಳು ಮತ್ತು ಸಾಮಗ್ರಿಗಳನ್ನು ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿಸತಕ್ಕದ್ದು. ಅಂಥ ಆದೇಶದ ಪ್ರಕಟಣೆಯ ತರುವಾಯ, ಅಂಥ ಕಾಲೇಜು ಸಂಬಂಧಪಟ್ಟ ವಿಶ್ವವಿದ್ಯಾನಿಲಯದ ಘಟಕ ಕಾಲೇಜು ಆಗಿ ನಿರ್ವಹಣೆ ಮತ್ತು ಆಡಳಿತಕ್ಕೊಳಪಡತಕ್ಕದ್ದು ಮತ್ತು ಆದೇಶದಲ್ಲಿ ನಮೂದಿಸಿದ ಸ್ವತ್ತುಗಳು ವಿಶ್ವವಿದ್ಯಾನಿಲಯದ ಸ್ವತ್ತುಗಳಾಗತಕ್ಕದ್ದು.

(2) ಈ ಅಧಿನಿಯಮದಲ್ಲಿರುವುದಾವುದೂ, (1)ನೇ ಉಪ ಪ್ರಕರಣದ ಅಡಿಯಲ್ಲಿ ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿಸಲಾದ ಯಾವುದೇ ಭೂಮಿ ಅಥವಾ ಕಟ್ಟಡವನ್ನು ಮಾರಾಟ ಮಾಡಲು, ಗುತ್ತಿಗೆಗೆ ಕೊಡಲು, ವಿನಿಮಯ ಮಾಡಲು ಅಥವಾ ಇತರ ರೀತಿಯಲ್ಲಿ ವಿಲೇ ಮಾಡಲು ವಿಶ್ವವಿದ್ಯಾನಿಲಯಕ್ಕೆ ಅಧಿಕಾರವನ್ನು ನೀಡಲಾಗಿದೆ ಎಂದು ಭಾವಿಸತಕ್ಕದ್ದಲ್ಲ.

(3) (1)ನೇ ಉಪ ಪ್ರಕರಣದ ಅಡಿಯಲ್ಲಿ ಮಾಡಿದ ಆದೇಶದ ಮೂಲಕ ಯಾವುದೇ ಕಾಲೇಜನ್ನು ವಿಶ್ವವಿದ್ಯಾನಿಲಯದ ನಿರ್ವಹಣೆ ಮತ್ತು ಆಡಳಿತಕ್ಕೆ ವರ್ಗಾಯಿಸಲಾಗಿದ್ದಲ್ಲಿ, ಆಗ ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಸದರಿ ಆದೇಶದ ಪ್ರಕಟಣೆಯ ದಿನಾಂಕದ ನಿಕಟ ಪೂರ್ವದಲ್ಲಿ, ಆ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿದ್ದ ಅಥವಾ ಅದಕ್ಕೆ ಸೇರಿದ, ರಾಜ್ಯ ಸರ್ಕಾರದ ಬೋಧಕ ಸಿಬ್ಬಂದಿ ಮತ್ತು ಇತರ ನೌಕರ ವರ್ಗದ ಎಲ್ಲಾ ಸದಸ್ಯರು ವಿಶ್ವವಿದ್ಯಾನಿಲಯದಲ್ಲಿರುವ ಹುದ್ದೆಗಳ ಸೂಕ್ತ ವೃಂದಕ್ಕೆ ಮತ್ತು ಪ್ರವರ್ಗಕ್ಕೆ ವರ್ಗಾವಣೆಯಾಗತಕ್ಕದ್ದು:

ಪರಂತು, ವಿಶ್ವವಿದ್ಯಾನಿಲಯಕ್ಕೆ ಕಾಲೇಜನ್ನು ವರ್ಗಾಯಿಸಿದ ಸಂದರ್ಭದಲ್ಲಿ, ಅಂಥ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರಿಗೆ, ರಾಜ್ಯಾಧೀನ ಸೇವೆಗಳಲ್ಲಿ ಮುಂದುವರಿಯಲು ಅಥವಾ ವಿಶ್ವವಿದ್ಯಾನಿಲಯದ ಸೇವೆಗಳಲ್ಲಿ ವಿಲೀನಗೊಳ್ಳುವ ಬಗ್ಗೆ ಆಯ್ಕೆಯನ್ನು ಚಲಾಯಿಸಲು ಒಂದು ಅವಕಾಶವನ್ನು ನೀಡತಕ್ಕದ್ದು.

92. ಪರಿನಿಯಮಗಳು, ಆರ್ಡಿನೆನ್ಸ್‌ಗಳು, ವಿನಿಯಮಗಳು ಮತ್ತು ನಿಯಮಗಳ ಮುಂದುವರಿಕೆ.– (1) ಈ ಅಧಿನಿಯಮದ ಸೂಕ್ತ ಉಪಬಂಧಗಳ ಅಡಿಯಲ್ಲಿ, ಪರಿನಿಯಮಗಳು, ಆರ್ಡಿನೆನ್ಸ್‌ಗಳು, ವಿನಿಯಮಗಳು ಮತ್ತು ನಿಯಮಗಳನ್ನು ರಚಿಸುವವರೆಗೆ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ಅಥವಾ ಈ ಅಧಿನಿಯಮದ ಅಡಿಯಲ್ಲಿ ನಿರಸನಗೊಳಿಸಿದ ಇತರ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಮಾಡಿದ ಹಾಗೂ ಈ ಅಧಿನಿಯಮದ ಪ್ರಾರಂಭದ ನಿಕಟಪೂರ್ವದಲ್ಲಿ ಜಾರಿಯಲ್ಲಿರುವ ಪರಿನಿಯಮಗಳು, ಆರ್ಡಿನೆನ್ಸ್‌ಗಳು, ವಿನಿಯಮಗಳು ಮತ್ತು ನಿಯಮಗಳ ಉಪಬಂಧಗಳು, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಿರುವಷ್ಟರ ಮಟ್ಟಿಗೆ, ರಾಜ್ಯಸರ್ಕಾರದ ಮೂಲಕ ಕುಲಾಧಿಪತಿಯವರಿಂದ ಪಡೆದುಕೊಂಡ ಅನುಮೋದನೆಯೊಡನೆ, ಕುಲಪತಿಯು ಅದರಲ್ಲಿ ಮಾಡಬಹುದಾದ ಅಂಥ ಅಳವಡಿಕೆಗಳು ಅಥವಾ ಮಾರ್ಪಾಡುಗಳಿಗೆ ಒಳಪಟ್ಟು, ಈ ಅಧಿನಿಯಮದ ಸೂಕ್ತ ಉಪಬಂಧಗಳ ಅಡಿಯಲ್ಲಿ ಮಾಡಿದ ಪರಿನಿಯಮಗಳು, ಆರ್ಡಿನೆನ್ಸ್‌ಗಳು, ವಿನಿಯಮಗಳು ಮತ್ತು ನಿಯಮಗಳೆಂದು ಭಾವಿಸತಕ್ಕದ್ದು.

(2) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000ದ ಅಥವಾ ಈ ಅಧಿನಿಯಮದ ಅಡಿಯಲ್ಲಿ ನಿರಸನಗೊಳಿಸಿದ ಇತರ ಅಧಿನಿಯಮಗಳ ಅಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾನಿಲಯದ ಕುಲಪತಿಯ ಹುದ್ದೆಯನ್ನು ಧಾರಣ ಮಾಡಿದ ವ್ಯಕ್ತಿಯು, ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು, ಈ ಅಧಿನಿಯಮವನ್ನು ಅಂಗೀಕರಿಸಿರದಿದ್ದರೆ ಹೇಗೋ ಹಾಗೆ ಅವರು ಪದವನ್ನು ಧಾರಣ ಮಾಡಬಹುದಾಗಿದ್ದ ದಿನಾಂಕದವರೆಗೆ ಪದಧಾರಣ ಮಾಡುವುದು ಮುಂದುವರಿಯತಕ್ಕದ್ದು.

93. ತಾತ್ಕಾಲಿಕ ಉಪಬಂಧಗಳು.– ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಸಂಬಂಧಪಟ್ಟ ಕುಲಪತಿಯು ಕುಲಾಧಿಪತಿಯವರ ಪೂರ್ವಾನುಮೋದನೆಯೊಂದಿಗೆ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ, ವಿಶ್ವವಿದ್ಯಾನಿಲಯದ ಎಲ್ಲಾ ಅಥವಾ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸಬಹುದು ಮತ್ತು ಆ ಉದ್ದೇಶಕ್ಕಾಗಿ ಈ ಅಧಿನಿಯಮದ ಮೂಲಕ ವಿಶ್ವವಿದ್ಯಾನಿಲಯದ ಯಾವುವೆ ಪ್ರಾಧಿಕಾರವು ಚಲಾಯಿಸಬೇಕಾದ ಯಾವುವೇ ಅಧಿಕಾರಗಳನ್ನು ಅಥವಾ ನಿರ್ವಹಿಸಬೇಕಾದ ಯಾವುವೇ ಕರ್ತವ್ಯಗಳನ್ನು ಅಥವಾ ಈ ಅಧಿನಿಯಮದಲ್ಲಿ ಉಪಬಂಧಿಸಿದಂತೆ ಅಂಥ ಪ್ರಾಧಿಕಾರವು ಅಸ್ತಿತ್ವಕ್ಕೆ ಬರುವವರೆಗೆ ಚಲಾಯಿಸಬಹುದು ಅಥವಾ ನೆರವೇರಿಸಬಹುದು.

94. ತೊಂದರೆಗಳನ್ನು ನಿವಾರಿಸಲು ಅಧಿಕಾರ.– (1) ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರದ ಪ್ರಥಮ ರಚನೆ ಅಥವಾ, ಪುನರ್ ರಚನೆಗೆ ಅಥವಾ ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವುದಕ್ಕೆ ಸಂಬಂಧಿಸಿದಂತೆ ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು ಅಂಥ ತೊಂದರೆಯನ್ನು ನಿವಾರಿಸುವುದಕ್ಕಾಗಿ ಅವಶ್ಯಕವೆಂದು ಅಥವಾ ಸೂಕ್ತವೆಂದು ತನಗೆ ಕಂಡುಬರಬಹುದಾದ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದ ಅಂಥ ಉಪಬಂಧಗಳನ್ನು ಅಧಿಸೂಚನೆಯ ಮೂಲಕ ರಚಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಐದು ವರ್ಷಗಳ ಅವಧಿಯು ಮುಕ್ತಾಯವಾದ ತರುವಾಯ ಅಂಥ ಯಾವುದೇ ಅಧಿಸೂಚನೆಯನ್ನು ಹೊರಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಅಧಿಸೂಚನೆಯನ್ನು ಅದನ್ನು ಹೊರಡಿಸಿದ ತರುವಾಯ ಆದಷ್ಟು ಬೇಗನೇ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಒಂದು ಅಧಿವೇಶನ ಅಥವಾ ಎರಡು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಮೂವತ್ತು ದಿನಗಳ ಒಟ್ಟು ಅವಧಿಯಲ್ಲಿ ಅದು ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಿದ ಅಧಿವೇಶನ ಅಥವಾ ನಿಕಟೋತ್ತರ ಅಧಿವೇಶನಗಳು ಮುಕ್ತಾಯವಾಗುವ ಮೊದಲು ವಿಧಾನಮಂಡಲದ ಯಾವುದೇ ಸದನವು ಆ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟನ್ನು ಅಥವಾ ನಿರ್ದೇಶನವನ್ನು ಮಾಡಬೇಕೆಂದು ಒಪ್ಪಿದರೆ ಅಥವಾ ಅಧಿಸೂಚನೆಯನ್ನು ಮಾಡಬಾರದೆಂದು ತೀರ್ಮಾನಿಸಿದರೆ ಮತ್ತು ಇನ್ನೊಂದು ಸದನವು ಅಂಥ ಮಾರ್ಪಾಟನ್ನು ಅಥವಾ ನಿರ್ದೇಶನವನ್ನು ಒಪ್ಪಿದರೆ ಆ ತರುವಾಯ ಅಂಥ ಅಧಿಸೂಚನೆಯು ಅಂಥ ಮಾರ್ಪಾಟಾದ ರೀತಿಯಲ್ಲಿ ಮಾತ್ರ

ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರವಾಗಿ ಪರಿಣಾಮಕಾರಿಯಾಗತಕ್ಕದಲ್ಲ. ಆದಾಗ್ಯೂ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಆ ಅಧಿಸೂಚನೆಯ ಅಡಿಯಲ್ಲಿ ಈ ಹಿಂದೆ ಮಾಡಲಾದ ಯಾವುದರ ಮಾನ್ಯತೆಗೂ ಪ್ರತಿಕೂಲವಾಗಿರತಕ್ಕದ್ದಲ್ಲ.

95. ನಿರಸನ ಮತ್ತು ಉಳಿಸುವಿಕೆಗಳು.– (1) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2017 ಜಾರಿಗೆ ಬರುವ ದಿನಾಂಕದಿಂದ ಈ ಮುಂದಿನ ಅಧಿನಿಯಮಗಳು ಈ ಮೂಲಕ ನಿರಸಿತವಾಗತಕ್ಕದ್ದು:

(ಎ) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 (2001ರ ಕರ್ನಾಟಕ ಅಧಿನಿಯಮ 29);

(ಬಿ) ಕನ್ನಡ ವಿಶ್ವವಿದ್ಯಾನಿಲಯ ಅಧಿನಿಯಮ, 1991 (1991ರ ಕರ್ನಾಟಕ ಅಧಿನಿಯಮ 23);

(ಸಿ) ವಿಶ್ವೇಶ್ವರಯ್ಯ ತಂತ್ರಜ್ಞಾನ ವಿಶ್ವವಿದ್ಯಾಲಯ ಅಧಿನಿಯಮ, 1994 (1994ರ ಕರ್ನಾಟಕ ಅಧಿನಿಯಮ 39);

(ಡಿ) ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಅಧಿನಿಯಮ, 1992 (1994ರ ಕರ್ನಾಟಕ ಅಧಿನಿಯಮ 46);

(ಇ) ಕರ್ನಾಟಕ ರಾಜ್ಯ ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಅಧಿನಿಯಮ, 2009 (2009ರ ಕರ್ನಾಟಕ ಅಧಿನಿಯಮ 25);

(ಎಫ್) ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ, 2009 (2010ರ ಕರ್ನಾಟಕ ಅಧಿನಿಯಮ 13); ಮತ್ತು

(ಜಿ) ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಅಧಿನಿಯಮ, 2011 (2012ರ ಕರ್ನಾಟಕ ಅಧಿನಿಯಮ 11) :

ಪರಂತು, ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ, 1899ರ 6ನೇ ಪ್ರಕರಣದ ಉಪಬಂಧಗಳು, ಸದರಿ ಅಧಿನಿಯಮದ ನಿರಸನದ ಸಂಬಂಧದಲ್ಲಿ ಅನ್ವಯವಾಗತಕ್ಕದ್ದು ಮತ್ತು ಸದರಿ ಕಾನೂನಿನ ಮತ್ತು ಸದರಿ ಅಧಿನಿಯಮದ 8 ಮತ್ತು 24ನೇ ಪ್ರಕರಣಗಳ ಉಪಬಂಧಗಳು ಸದರಿ ಅಧಿನಿಯಮವನ್ನು ಮತ್ತು ಉಪಬಂಧಗಳನ್ನು ನಿರಸನಗೊಳಿಸಿದ್ದರೆ ಮತ್ತು ಈ ಅಧಿನಿಯಮದ ಮೂಲಕ ಪುನಃ ಅಧಿನಿಯಮಿಸಲಾಗಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

(2) ಅಂಥ ನಿರಸನವಿದ್ದರೂ ಸ್ಥಾಪಿಸಿದ ಎಲ್ಲಾ ವಿಶ್ವವಿದ್ಯಾಲಯಗಳು, ಮಾಡಿದ ಎಲ್ಲಾ ನೇಮಕಾತಿಗಳು ನಿರಸನಗೊಳಿಸಿದ ಅಧಿನಿಯಮದ ಅಡಿಯಲ್ಲಿ ಮಾಡಿದ ಅಥವಾ ಕೈಗೊಂಡಿರುವುದಾವುದೂ, ಈ ಅಧಿನಿಯಮದ ಅಡಿಯಲ್ಲಿ ಮಾಡಲಾದಂತೆ ಸಿಂಧುವಾಗಿವೆ ಮತ್ತು ಮುಂದುವರೆದಿವೆ ಎಂದು ಭಾವಿಸತಕ್ಕದ್ದು.

ಅನುಸೂಚಿ I

(13ನೇ ಪ್ರಕರಣವನ್ನು ನೋಡಿ)

ವಿಶ್ವವಿದ್ಯಾಲಯಗಳ ಪ್ರಾದೇಶಿಕ ಅಧಿಕಾರವ್ಯಾಪ್ತಿ

ಕ್ರಮ ಸಂಖ್ಯೆ	ವಿಶ್ವವಿದ್ಯಾಲಯ	ಕೇಂದ್ರಕಾರ್ಯಸ್ಥಾನ	ಪ್ರಾದೇಶಿಕ ವ್ಯಾಪ್ತಿ
1.	ಬೆಂಗಳೂರು ವಿಶ್ವವಿದ್ಯಾನಿಲಯ	ಜ್ಞಾನಭಾರತಿ ಕ್ಯಾಂಪಸ್ ಬೆಂಗಳೂರು	ಕರ್ನಾಟಕ ವಿಧಾನಸಭೆ ಚುನಾವಣಾ ಕ್ಷೇತ್ರಗಳಾದ ಬೆಂಗಳೂರು ಜಿಲ್ಲೆಯ ವಿಜಯನಗರ, ಪದ್ಮನಾಭನಗರ, ಬೊಮ್ಮನಹಳ್ಳಿ, ಆನೇಕಲ್, ಬೆಂಗಳೂರು ದಕ್ಷಿಣ, ಯಶವಂತಪುರ, ರಾಜರಾಜೇಶ್ವರಿನಗರ, ದಾಸರಹಳ್ಳಿ, ಮಹಾಲಕ್ಷ್ಮಿ ಲೇಔಟ್ ಮತ್ತು ಗೋವಿಂದರಾಜ ನಗರ, ಬೆಂಗಳೂರು ಗ್ರಾಮೀಣ ಜಿಲ್ಲೆಯ ನೆಲಮಂಗಲ, ರಾಮನಗರ ಜಿಲ್ಲೆಯ ಮಾಗಡಿ, ರಾಮನಗರ, ಕನಕಪುರ ಮತ್ತು ಚನ್ನಪಟ್ಟಣ
2.	ಬೆಂಗಳೂರು ಕೇಂದ್ರೀಯ ವಿಶ್ವವಿದ್ಯಾನಿಲಯ	ಬೆಂಗಳೂರು ಕೇಂದ್ರೀಯ ಕಾಲೇಜು ಕ್ಯಾಂಪಸ್ ಬೆಂಗಳೂರು	ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಬೆಂಗಳೂರು, ಮಹಾರಾಣಿ ಮಹಿಳಾ ಕಲಾ, ವಾಣಿಜ್ಯ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜು, ಬೆಂಗಳೂರು ಮತ್ತು ಶ್ರೀಮತಿ. ವಿಹೆಚ್‌ಡಿ ಸೆಂಟ್ರಲ್ ಇನ್ಸ್‌ಟಿಟ್ಯೂಟ್ ಆಫ್ ಹೋಮ್ ಸೈನ್ಸ್, ಬೆಂಗಳೂರು ಇವನ್ನು

			ಹೊರತುಪಡಿಸಿ ಕರ್ನಾಟಕ ವಿಧಾನಸಭೆ ಚುನಾವಣಾ ಕ್ಷೇತ್ರಗಳಾದ ಬೆಂಗಳೂರು ಜಿಲ್ಲೆಯ ಶಾಂತಿನಗರ, ಬ್ಯಾಟರಾಯನಪುರ, ಯಲಹಂಕ, ಮಲ್ಲೇಶ್ವರಮ್, ಹೆಬ್ಬಾಳ, ಶಿವಾಜಿನಗರ, ಗಾಂಧಿನಗರ, ಚಾಮರಾಜ ಪೇಟೆ, ಚಿಕ್ಕಪೇಟೆ, ಬಸವನಗುಡಿ, ಬಿಟಿಎಮ್ ಲೇಔಟ್, ಜಯನಗರ ಮತ್ತು ರಾಜಾಜಿನಗರ.
3.	ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯ	ಜಂಗಮಕೋಟೆ (ಶಿಡ್ಲಘಟ್ಟ ತಾಲ್ಲೂಕು)	ಕರ್ನಾಟಕ ವಿಧಾನಸಭೆ ಚುನಾವಣಾ ಕ್ಷೇತ್ರಗಳಾದ ಕೋಲಾರ ಜಿಲ್ಲೆಯ ಶ್ರೀನಿವಾಸಪುರ, ಮುಳಬಾಗಿಲು, ಕೋಲಾರ ಗೋಲ್ಡ್ ಫೀಲ್ಡ್, ಬಂಗಾರಪೇಟೆ, ಕೋಲಾರ, ಮಾಲೂರು ಮತ್ತು ಕೋಲಾರ ಪಿಜಿ ಸೆಂಟರ್; ಬೆಂಗಳೂರು ಜಿಲ್ಲೆಯ ಕೆ.ಆರ್. ಪುರಂ, ಪುಲಕೇಶಿನಗರ, ಸರ್ವಜ್ಞನಗರ, ಸಿ ವಿ ರಾಮನ್ ನಗರ ಮತ್ತು ಮಹದೇವಪುರ; ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು, ಬಾಗೇಪಲ್ಲಿ, ಚಿಕ್ಕಬಳ್ಳಾಪುರ, ಶಿಡ್ಲಘಟ್ಟ ಮತ್ತು ಚಿಂತಾಮಣಿ; ಬೆಂಗಳೂರು ಗ್ರಾಮೀಣ ಜಿಲ್ಲೆಯ ದೇವನಹಳ್ಳಿ, ದೊಡ್ಡಬಳ್ಳಾಪುರ ಮತ್ತು ಹೊಸಕೋಟೆ
4	ಮೈಸೂರು ವಿಶ್ವವಿದ್ಯಾನಿಲಯ	ಮೈಸೂರು	ಸರ್ಕಾರಿ ಕಾಲೇಜು, ಮಂಡ್ಯ ಹೊರತುಪಡಿಸಿ ಕಂದಾಯ ಜಿಲ್ಲೆಗಳಾದ ಚಾಮರಾಜನಗರ, ಹಾಸನ, ಮಂಡ್ಯ ಮತ್ತು ಮೈಸೂರು
5	ಕರ್ನಾಟಕ ವಿಶ್ವವಿದ್ಯಾನಿಲಯ	ಧಾರವಾಡ	ಕಂದಾಯ ಜಿಲ್ಲೆಗಳಾದ ಧಾರವಾಡ, ಗದಗ, ಹಾವೇರಿ ಮತ್ತು ಉತ್ತರ ಕನ್ನಡ
6	ಗುಲ್ಬರ್ಗಾ ವಿಶ್ವವಿದ್ಯಾನಿಲಯ	ಕಲಬುರ್ಗಿ	ಕಂದಾಯ ಜಿಲ್ಲೆಗಳಾದ ಕಲಬುರ್ಗಿ ಮತ್ತು ಬೀದರ್
7	ಮಂಗಳೂರು ವಿಶ್ವವಿದ್ಯಾನಿಲಯ	ಕೊಣಜೆ ಮಂಗಳೂರು ತಾಲ್ಲೂಕು	ಕಂದಾಯ ಜಿಲ್ಲೆಗಳಾದ ದಕ್ಷಿಣ ಕನ್ನಡ, ಕೊಡಗು ಮತ್ತು ಉಡುಪಿ
8	ಕುವೆಂಪು ವಿಶ್ವವಿದ್ಯಾನಿಲಯ	ಶಂಕರಘಟ್ಟ ಶಿವಮೊಗ್ಗ	ಕಂದಾಯ ಜಿಲ್ಲೆಗಳಾದ ಚಿಕ್ಕಮಗಳೂರು ಮತ್ತು ಶಿವಮೊಗ್ಗ
9	ತುಮಕೂರು ವಿಶ್ವವಿದ್ಯಾನಿಲಯ	ತುಮಕೂರು	ಕಂದಾಯ ಜಿಲ್ಲೆಗಳಾದ ತುಮಕೂರು
10	ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾನಿಲಯ	ಬಳ್ಳಾರಿ	ಕಂದಾಯ ಜಿಲ್ಲೆಗಳಾದ ಬಳ್ಳಾರಿ ಮತ್ತು ಕೊಪ್ಪಳ
11	ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯ	ಬೆಳಗಾವಿ	ಕಂದಾಯ ಜಿಲ್ಲೆಗಳಾದ ಬೆಳಗಾವಿ, ಬಾಗಲಕೋಟೆ ಮತ್ತು ವಿಜಯಪುರ
12	ದಾವಣಗೆರೆ ವಿಶ್ವವಿದ್ಯಾನಿಲಯ	ದಾವಣಗೆರೆ	ಕಂದಾಯ ಜಿಲ್ಲೆಗಳಾದ ಚಿತ್ರದುರ್ಗ ಮತ್ತು ದಾವಣಗೆರೆ
13	ಕನ್ನಡ ವಿಶ್ವವಿದ್ಯಾನಿಲಯ	ಹಂಪಿ ಕಮಲಾಪುರ ಪುರಸಭೆ ಮಿತಿಗಳೊಳಗೆ ಅಥವಾ ಈ ಯುನಿಟ್ ಗಳ ಸುತ್ತಮುತ್ತ ಹತ್ತು ಕಿಲೋಮೀಟರ್‌ಗಳ	ಇಡೀ ರಾಜ್ಯ (ಏಕಾತ್ಮಕ ಸ್ವರೂಪದ ವಿಶ್ವವಿದ್ಯಾನಿಲಯ)

		ದೂರದ ಒಳಗಿನ ಯಾವುದೇ ಸ್ಥಳ	
14	ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ	ಬೆಳಗಾವಿ	ತಾಂತ್ರಿಕ ಶೈಕ್ಷಣಿಕ ಸಂಸ್ಥೆಗಳ ಸಂಯೋಜನೆಗಾಗಿ ಇಡೀ ರಾಜ್ಯ
15	ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ	ಮೈಸೂರು	ಇಡೀ ರಾಜ್ಯ
16	ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ	ವಿಜಯಪುರ	ರಾಜ್ಯದಲ್ಲಿನ ಮಹಿಳಾ ಕಾಲೇಜುಗಳನ್ನು ಮಾತ್ರವೇ ಸಂಯೋಜಿಸುವುದಕ್ಕಾಗಿ ಇಡೀ ರಾಜ್ಯ
17	ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ	ಮೈಸೂರು	ಇಡೀ ರಾಜ್ಯ (ಏಕಾತ್ಮಕ ಸ್ವರೂಪದ ವಿಶ್ವವಿದ್ಯಾಲಯ)
18	ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ	ಬೆಂಗಳೂರು ಜಿಲ್ಲೆ	ಸಂಸ್ಕೃತ ಕಾಲೇಜುಗಳ ಸಂಯೋಜನೆಯ ಸಂಬಂಧದಲ್ಲಿ ಇಡೀ ರಾಜ್ಯ
19	ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ	ಹಾವೇರಿ ಜಿಲ್ಲೆಯ ಗೊಟಗೋಡಿ	ಇಡೀ ರಾಜ್ಯ (ಏಕಾತ್ಮಕ ಸ್ವರೂಪದ ವಿಶ್ವವಿದ್ಯಾಲಯ)
20	ಮಂಡ್ಯ ಏಕಾತ್ಮಕ ಸ್ವರೂಪದ ವಿಶ್ವವಿದ್ಯಾನಿಲಯ	ಮಂಡ್ಯ	ಸರ್ಕಾರಿ ಕಾಲೇಜು, ಮಂಡ್ಯ ಒ ಏಕಾತ್ಮಕ ಸ್ವರೂಪದ ವಿಶ್ವವಿದ್ಯಾನಿಲಯ
21	ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾನಿಲಯ	ಬೆಂಗಳೂರು	ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಬೆಂಗಳೂರು, ಮಹಾರಾಣಿ ಮಹಿಳಾ ಕಲಾ, ವಾಣಿಜ್ಯ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜು, ಬೆಂಗಳೂರು ಮತ್ತು ಶ್ರೀಮತಿ. ವಿಹೆಚ್‌ಡಿ ಸೆಂಟ್ರಲ್ ಇನ್ಸ್‌ಟಿಟ್ಯೂಟ್ ಆಫ್ ಹೋಮ್ ಸೈನ್ಸ್, ಬೆಂಗಳೂರು ಒಳಗೊಂಡಿದೆ
22	ರಾಯಚೂರು ವಿಶ್ವವಿದ್ಯಾನಿಲಯ	ರಾಯಚೂರು	ಕಂದಾಯ ಜಿಲ್ಲೆಗಳಾದ ರಾಯಚೂರು ಮತ್ತು ಯಾದಗಿರಿ

ಟಿಪ್ಪಣಿ: ಬೆಂಗಳೂರು ಕೇಂದ್ರೀಯ ವಿಶ್ವವಿದ್ಯಾನಿಲಯ ಮತ್ತು ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಗುಲ್ಬರ್ಗಾ ವಿಶ್ವವಿದ್ಯಾನಿಲಯ ಮತ್ತು ಕ್ರಮ ಸಂಖ್ಯೆ 6, 20 ಮತ್ತು 21ರ ಪ್ರಾದೇಶಿಕ ವ್ಯಾಪ್ತಿಯ ಬದಲಾವಣೆಯನ್ನು ಕುರಿತ ಉಪಬಂಧಗಳು ಈ ಉದ್ದೇಶಕ್ಕಾಗಿ ಗೊತ್ತುಪಡಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

ಅನುಸೂಚಿ II

(5ನೇ ಪ್ರಕರಣವನ್ನು ನೋಡಿ)

ನಿರ್ದಿಷ್ಟ ಉದ್ದೇಶದ ವಿಶ್ವವಿದ್ಯಾನಿಲಯಗಳ ಧ್ಯೇಯೋದ್ದೇಶಗಳು

1. ಕನ್ನಡ ವಿಶ್ವವಿದ್ಯಾನಿಲಯ (ಏಕಾತ್ಮಕ ಸ್ವರೂಪದ ವಿಶ್ವವಿದ್ಯಾನಿಲಯ) (1991ರ ಕರ್ನಾಟಕ ಅಧಿನಿಯಮ 23)

ಈ ಮುಂದಿನವುಗಳಿಗಾಗಿ ಇದು ಏಕಾತ್ಮಕ ವಿಶ್ವವಿದ್ಯಾನಿಲಯವಾಗಿರುವುದು ಎಂದರೆ:–

(ಎ) ಭಾರತದೊಳಗೆ ಮತ್ತು/ಅಥವಾ ವಿದೇಶದಿಂದ ಈ ಕ್ಷೇತ್ರಗಳಲ್ಲಿ ಆಸಕ್ತಿಯಿರುವ ವ್ಯಕ್ತಿಗಳ ಶಿಕ್ಷಣ/ತರಬೇತಿಯ ಸಾಮರ್ಥ್ಯದೊಂದಿಗೆ ಕನ್ನಡ ಭಾಷೆ ಮತ್ತು ಸಾಹಿತ್ಯದ ಅಧ್ಯಯನಗಳು ಮತ್ತು ಸಂಶೋಧನೆಯ ಪ್ರಮುಖ ಕೇಂದ್ರವಾಗಲು;

(ಬಿ) ಹಿಂದಿನ ಕಾಲದಿಂದಲೂ ಬೆಳೆದು ಬಂದ ಹಲವಾರು ವಿಷಯ ಕ್ಷೇತ್ರಗಳ ಅಂದರೆ, ಕಲೆ, ಸಂಸ್ಕೃತಿ, ಸಂಗೀತ, ನೃತ್ಯ, ನಾಟಕ, ಜಾನಪದ, ಚಿತ್ರಕಲೆ, ಶಿಲ್ಪಕಲೆ, ವಾಸ್ತುಶಿಲ್ಪ, ವ್ಯಾಕರಣ, ಭಾಷಾಶಾಸ್ತ್ರ, ಇತಿಹಾಸ, ಧರ್ಮ, ತರ್ಕಶಾಸ್ತ್ರ, ಭೂಗೋಳ,

ಖಗೋಳಶಾಸ್ತ್ರ, ಜ್ಯೋತಿಷ್ಯಶಾಸ್ತ್ರ, ದೇಸಿ ಔಷಧ, ವಿಜ್ಞಾನ, ತಂತ್ರಜ್ಞಾನ, ಕರಕುಶಲತೆಗಳು ಮತ್ತು ಇತರವುಗಳಲ್ಲಿ ಕನ್ನಡ ಭಾಷೆ ಮತ್ತು ಸಾಹಿತ್ಯದ ಆಧಾರದ ಮೇಲೆ ಉನ್ನತ ಕಲಿಕೆ ಮತ್ತು ಸಂಶೋಧನಾ ಸೌಕರ್ಯಗಳನ್ನು ಒದಗಿಸುವುದು;

(ಸಿ) ಸಂಬಂಧಪಟ್ಟ ಪ್ರಕಟಣೆಗಳನ್ನು ಇತರ ಭಾಷೆಗಳಿಂದ ಕನ್ನಡಕ್ಕೆ ಮತ್ತು ಕನ್ನಡದಿಂದ ಇತರ ಭಾಷೆಗೆ ಭಾಷಾಂತರವನ್ನು ಕೈಗೊಳ್ಳುವುದು;

(ಡಿ) ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಕನ್ನಡದಲ್ಲಿರುವ ಪ್ರಾಚೀನ ತಾಳೆಗರಿ ಹಸ್ತಪ್ರತಿಗಳ ವಿದ್ವತ್‌ಪೂರ್ಣ ಸಾಮಗ್ರಗಳ ರಕ್ಷಣೆ ಮತ್ತು ಪ್ರಕಟಣೆಯನ್ನು ಕೈಗೊಳ್ಳುವುದು;

(ಇ) ರಾಜ್ಯದಲ್ಲಿ ಮತ್ತು ಬೇರೆಡೆಯಲ್ಲಿ ಲಭ್ಯವಿರುವ ಶಿಲಾಶಾಸನ ಮತ್ತು ಕೆತ್ತನೆಗಳನ್ನು ಸಂಗ್ರಹಿಸಲು ಮತ್ತು ಸಂರಕ್ಷಿಸುವುದು;

(ಎಫ್) ಮೇಲಿನ ಆಧಾರದಲ್ಲಿ ಕನ್ನಡ ಭಾಷೆ, ಸಂಸ್ಕೃತಿ ಮತ್ತು ಇತಿಹಾಸದ ಮೇಲೆ ಸಂಶೋಧನೆ ಕೈಗೊಳ್ಳುವುದು ಹಾಗೂ ಅದನ್ನು ಸಮಾಜದಲ್ಲಿ ಹೆಚ್ಚಿನ ರೀತಿಯಲ್ಲಿ ಪ್ರಚಾರ ಮಾಡುವುದು;

(ಜಿ) ವ್ಯವಸಾಯ ಮತ್ತು ಇತರ ಕ್ಷೇತ್ರಗಳಲ್ಲಿ ಬಳಸುವಂತ ಕನ್ನಡದ ಹಾಡುಗಳು, ಗಾದೆಮಾತುಗಳು, ನುಡಿಗಟ್ಟುಗಳು, ಜಾನಪದ ಮತ್ತು ಇತರ ಅಂಶಗಳನ್ನು ಸರ್ವೆಗಳನ್ನು ನಡೆಸುವ ಮೂಲಕ ಸಂಗ್ರಹಿಸುವುದು ಹಾಗೂ ಪ್ರಕಟಿಸುವುದು.

(ಎಚ್) ಆಧುನಿಕ ತಂತ್ರಜ್ಞಾನಗಳನ್ನು ಬಳಸಿ ಪ್ರಾಚೀನ ಕನ್ನಡ ಭಾಷೆ ಮತ್ತು ಗ್ರಂಥಗಳ ಮೇಲಿನ ಸಂಶೋಧನೆಗೆ ಉತ್ತೇಜಿಸುವುದು.

(ಐ) ಕನ್ನಡ ಭಾಷೆಯನ್ನು ಬಳಸಿ ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಕಲಿಯಲು ಶಿಕ್ಷಣ ಮಾಧ್ಯಮವನ್ನಾಗಿ ಜನಪ್ರಿಯಗೊಳಿಸುವುದು.

(ಜೆ) ಆರ್ಯ ಮತ್ತು ಇತರ ದ್ರಾವಿಡ ಭಾಷೆಗಳ ಸಂಬಂಧದಲ್ಲಿ ಕನ್ನಡ ಭಾಷೆ ಮತ್ತು ಅದರ ಬೆಳವಣಿಗೆಯ ತೌಲನಿಕ ಅಧ್ಯಯನಗಳನ್ನು ನಡೆಸುವುದು;

(ಕೆ) ವರ್ತಮಾನ ಕಾಲಘಟ್ಟದಲ್ಲಿ ಕನ್ನಡ ಪರಂಪರೆಯ ಸಂರಕ್ಷಣೆ ಮತ್ತು ಅದರ ಘನತೆಯನ್ನು ಹೆಚ್ಚಿಸುವ ದೃಷ್ಟಿಕೋನದಿಂದ ಎಲ್ಲಾ ಅಂಥ ಶೈಕ್ಷಣಿಕ ಮತ್ತು ಸಂಶೋಧನಾ ಉಪಕ್ರಮಗಳನ್ನು ತೆಗೆದುಕೊಳ್ಳುವುದು;

(ಎಲ್) ಕನ್ನಡದ ಶಾಸ್ತ್ರಿಯ ಭಾಷಾ ಅಂಶವನ್ನು ಅಭಿವೃದ್ಧಿಪಡಿಸುವುದು.

2. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ

ಈ ಮುಂದಿನವುಗಳಿಗಾಗಿ ಇದು ಸಂಯೋಜಿಸುವ ತಾಂತ್ರಿಕ ವಿಶ್ವವಿದ್ಯಾನಿಲಯವಾಗಿರತಕ್ಕದ್ದು, ಎಂದರೆ:–

(ಎ) ಉದ್ಯೋಗ ವಲಯದ, ಸಮಾಜದ ಮತ್ತು ರಾಷ್ಟ್ರೀಯ ಅಭಿವೃದ್ಧಿ ಯೋಜನೆಗಳ ಅಗತ್ಯಗಳನ್ನು ಪೂರೈಸಲು ರಾಜ್ಯದಲ್ಲಿ ಸಮರ್ಪಕ ರೀತಿಯ ಮತ್ತು ಗುಣಮಟ್ಟದ ಮಾನವ ಸಂಪನ್ಮೂಲದ ಅಗತ್ಯವನ್ನು ಉಪಬಂಧಿಸುವುದು.

(ಬಿ) ಸಂಶೋಧನೆ, ನಾವಿನ್ಯತೆ, ಅನ್ವೇಷಣೆ ಮತ್ತು ಉತ್ಪನ್ನ ಅಭಿವೃದ್ಧಿಗಳ ಮೂಲಕ ಜ್ಞಾನದ ಗಡಿಗಳನ್ನು ವಿಸ್ತರಿಸುವುದು.

(ಸಿ) ಪರಿಸರದಲ್ಲಿ ಯುವಸೂಕ್ಷ್ಮತೆಯನ್ನು ಬೆಳೆಸುವುದು ಮತ್ತು ನೈಜ ಸಮಸ್ಯೆಗಳ ಮತ್ತು ಸಾಮಾಜಿಕ ಅಗತ್ಯಗಳ ಪ್ರಜ್ಞೆಯನ್ನು ಅಚ್ಚೊತ್ತವುದು.

(ಡಿ) ಪ್ರಪಂಚದ ವಿವಿಧ ಭಾಗಗಳಲ್ಲಿ ಕ್ಷಿಪ್ರಗತಿಯಲ್ಲಿ ಬೆಳೆಯುತ್ತಿರುವ ವೈಜ್ಞಾನಿಕ ಮತ್ತು ತಾಂತ್ರಿಕ ಜ್ಞಾನದಿಂದ ಪ್ರಯೋಜನಗಳನ್ನು ಶೋಧಿಸುವುದು.

(ಇ) ಮಾನವ ಸಮಾಜದ ಮತ್ತು ರಾಷ್ಟ್ರದ ಸೇವೆಯಲ್ಲಿ ತಾಂತ್ರಿಕ ಶಿಕ್ಷಣದ ಪ್ರಧಾನ ಗುರಿಗಳು ಮತ್ತು ಜವಾಬ್ದಾರಿಗಳನ್ನು ನಿರೂಪಿಸುವುದು.

(ಎಫ್) ಯುವಜನರಲ್ಲಿ ಉದ್ಯಮಶೀಲತೆಗಾಗಿ ಉತ್ತಮ ಸಾಮರ್ಥ್ಯವನ್ನು ಬೆಳೆಸುವುದು.

(ಜಿ) ಸಮುದಾಯದಲ್ಲಿ ಅಗತ್ಯವಿರುವ ಏಜೆನ್ಸಿಗಳಿಗೆ ತಂತ್ರಜ್ಞಾನದ ಸುಗಮ ಮತ್ತು ಪರಿಣಾಮಕಾರಿ ವರ್ಗಾವಣೆಯ ಕೊಡುಗೆಯನ್ನು ನೀಡವುದು.

(ಎಚ್) ಪಾಲಿಟೆಕ್ನಿಕ್‌ಗಳು ಮತ್ತು ಕೈಗಾರಿಕಾ ತರಬೇತಿ ಶಾಲೆಗಳು/ಸಂಸ್ಥೆಗಳನ್ನು ಹೊರತುಪಡಿಸಿ ಎಲ್ಲಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳನ್ನು ಅದರ ಅಧಿಕಾರ ಕ್ಷೇತ್ರ ವ್ಯಾಪ್ತಿಯಲ್ಲಿ ಸಂಯೋಜಿಸುವುದು.

(ಐ) ತಾಂತ್ರಿಕ ಶಿಕ್ಷಣದ ಮುಂದಾಳುವಾಗಿ ರಾಜ್ಯದ ಘನತೆಯನ್ನು ಹೆಚ್ಚಿಸುವ ದೃಷ್ಟಿಕೋನದಿಂದ ಎಲ್ಲಾ ಅಂಥ ಶೈಕ್ಷಣಿಕ ಮತ್ತು ಸಂಶೋಧನಾ ಉಪಕ್ರಮಗಳನ್ನು ತೆಗೆದುಕೊಳ್ಳುವುದು.

3. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಈ ಮುಂದಿನವುಗಳಿಗಾಗಿ ಇದು ಸಂಯೋಜಿಸಲಾಗದ ದೂರ ಶಿಕ್ಷಣ ಅಥವಾ ಕಲಿಕಾ ವಿಶ್ವವಿದ್ಯಾನಿಲಯವಾಗಿರತಕ್ಕದ್ದು, ಎಂದರೆ:–

(ಎ) ಎಲ್ಲಾ ವಯೋಮಾನದ ವ್ಯಕ್ತಿಗಳಿಗಾಗಿ ವೆಚ್ಚ ಪರಿಣಾಮ ವಿಧಾನದಲ್ಲಿ ದೂರ ಶಿಕ್ಷಣದ ಮೂಲಕ ಉನ್ನತ ಶಿಕ್ಷಣಕ್ಕೆ ಪ್ರವೇಶ ಹೆಚ್ಚಳವನ್ನು ಉಪಬಂಧಿಸುವುದು.

(ಬಿ) ನಿಯತ ಸಂಶೋಧನೆ ಮತ್ತು ಅಭಿವೃದ್ಧಿ ಚಟುವಟಿಕೆಗಳ ಮೂಲಕ ಅದರ ಕಾರ್ಯಕ್ರಮಗಳ ಗುಣಮಟ್ಟ ಮಾನಕ ಮತ್ತು ಸುಸಂಬದ್ಧತೆಯನ್ನು ಹೆಚ್ಚಿಸುವ ಮತ್ತು ನಿರ್ವಹಿಸುವ ಕ್ರಮಗಳನ್ನು ತೆಗೆದುಕೊಳ್ಳುವುದು.

(ಸಿ) ರಾಜ್ಯದೊಳಗಿನ ಮತ್ತು ಭಾರತ ಮತ್ತು ವಿದೇಶದಲ್ಲಿಯ ಯಾವುದೇ ಭಾಗದಲ್ಲಿ ದೂರ ಶಿಕ್ಷಣ ಪ್ರಶಿಕ್ಷಣಾರ್ಥಿಗಳಿಗೆ ಆಧುನಿಕ ಮಾಹಿತಿ, ಸಂಪರ್ಕ ಮತ್ತು ಸಂಬಂಧಿತ ತಂತ್ರಜ್ಞಾನಗಳ ಬಳಕೆಯಿಂದ ಶೈಕ್ಷಣಿಕ ಕಾರ್ಯಕ್ರಮಗಳು ತೃಪ್ತಿಕರವಾಗಿ ಅವರಿಗೆ ತಲುಪುವುದನ್ನು ಖಚಿತಪಡಿಸುವುದು:

ಪರಂತು, ಯಾವುದೇ ಕ್ಯಾಂಪಸೇತರ ಕೇಂದ್ರಗಳು/ಅಧ್ಯಾಯನ ಕೇಂದ್ರಗಳು/ ಸಂಯೋಜಿತ ಕಾಲೇಜುಗಳನ್ನು ರಾಜ್ಯದ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯ ಹೊರಗೆ ಸ್ಥಾಪಿಸತಕ್ಕದ್ದಲ್ಲ ಮತ್ತು ಈ ಉದ್ದೇಶಕ್ಕಾಗಿ ಯಾವುದೇ ಫ್ರ್ಯಾಂಚೈಸಿಗಳನ್ನು ನೇಮಿಸತಕ್ಕದ್ದಲ್ಲ.

(ಡಿ) ದೇಶದಲ್ಲಿ ಮುಕ್ತ ವಿಶ್ವವಿದ್ಯಾನಿಲಯಗಳ ಮುನ್ನಡೆಯುವ ದೃಷ್ಟಿಕೋನದಿಂದ ಎಲ್ಲಾ ಶೈಕ್ಷಣಿಕ ಮತ್ತು ಸಂಶೋಧನಾ ಉಪಕ್ರಮಗಳನ್ನು ತೆಗೆದುಕೊಳ್ಳುವುದು.

4. ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ಈ ಮುಂದಿನವುಗಳಿಗಾಗಿ ಇದು ಮಹಿಳಾ ಕಾಲೇಕುಗಳನ್ನು ಸಂಯೋಜಿಸುವ ವಿಶ್ವವಿದ್ಯಾನಿಲಯವಾಗಿರತಕ್ಕದ್ದು, ಎಂದರೆ:–

(ಎ) ಮಹಿಳೆಯರ ಉನ್ನತ ಶಿಕ್ಷಣ ಕಲಿಕೆ ಮತ್ತು ಅನುಸರಣೆಯ ಪ್ರಗತಿಯನ್ನು ಹೆಚ್ಚಿಸುವುದು.

(ಬಿ) ರಾಜ್ಯಾದ್ಯಂತ ವಿಶೇಷ ಸಂಸ್ಥೆಗಳನ್ನು ರಚಿಸುವ ಮೂಲಕ ಮಹಿಳೆಯರಿಗೆ ಹೆಚ್ಚಿನ ಅವಕಾಶಗಳು ಲಭ್ಯವಿರುವ ಅಂದರೆ, ವೈದ್ಯಕೀಯ, ಶುಶ್ರೂಷಕ, ಗೃಹವಿಜ್ಞಾನ, ಟೆಕ್ಸ್‌ಟೈಲ್ಸ್, ಕಲೆ ಮತ್ತು ಸಂಸ್ಕೃತಿಯ ಉನ್ನತ ಶಿಕ್ಷಣ ಕ್ಷೇತ್ರಗಳಿಗೆ ಗಮನ ನೀಡುವುದು ಮತ್ತು ಸಶಕ್ತಗೊಳಿಸುವುದು.

(ಸಿ) ಹೊಸ ಬೆಳವಣಿಗೆಯ ಕ್ಷೇತ್ರಗಳಾದ ಕ್ರೀಡೆ/ಸಾಹಸ/ಸಾಹಿತ್ಯ/ಪತ್ರಿಕೋದ್ಯಮ ಇತ್ಯಾದಿಗಳಲ್ಲಿ ಮಹಿಳೆಯರ ಶಕ್ತಿಯನ್ನು ಅಳವಡಿಸಿಕೊಳ್ಳುವುದು.

(ಡಿ) ಮಹಿಳೆಯರಿಗೆ ಸಂಬಂಧಿಸಿದಂತೆ ಪ್ರಸ್ತುತವಾಗಿ ರಾಜ್ಯದಲ್ಲಿನ ಇತರ ವಿಶ್ವವಿದ್ಯಾನಿಯಲಗಳ ವ್ಯಾಪ್ತಿಯೊಳಗೆ ಬರದಿರುವ ವಿವಾದಗಳು ಮತ್ತು ಕಾಳಜಿಗಳ ಕುರಿತು ಅಧ್ಯಯನಗಳನ್ನು ಮತ್ತು ಸಂಶೋಧನೆಯನ್ನು ಕೈಗೊಳ್ಳುವುದು.

(ಇ) ಪ್ರಾದೇಶಿಕ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಸಂದರ್ಭದಲ್ಲಿ ಮಹಿಳೆಯರ ಸಮಸ್ಯೆಗಳನ್ನು ಪರಿಗಣಿಸಿ, ಅವರಿಗೆ ಹೊಸದಾದ ಮತ್ತು ವಾಸ್ತವ ಪರಿಹಾರಗಳನ್ನು ಪಡೆಯಲು ಚಿಂತಕರ ಚಾವಡಿಯಂತೆ ಸೇವೆ ನೀಡುವುದು.

(ಎಫ್) ಹಲವಾರು ವಿಷಯ ಕ್ಷೇತ್ರಗಳಿಗೆ ವಿಶೇಷವಾಗಿ ಸ್ವಾತಂತ್ರ್ಯ ಹೋರಾಟ ಮತ್ತು ರಾಷ್ಟ್ರೀಯ ಅಭಿವೃದ್ಧಿಗಳಿಗೆ ಮಹಿಳೆಯರ ಕೊಡುಗೆಗಳು ಮತ್ತು ಮಹಿಳೆಯರಿಗೆ ಸಂಬಂಧಿತ ವಿಷಯಗಳ ಮಾಹಿತಿ ಕಣಜವನ್ನು ಅಭಿವೃದ್ಧಿಪಡಿಸುವುದು.

(ಜಿ) ಮಹಿಳೆಯರ ಅಧ್ಯಯನಗಳನ್ನು ಬೆಂಬಲಿಸುವ ಮತ್ತು ಒಟ್ಟಾರೆಯಾಗಿ ಸಮಾಜದಲ್ಲಿ ಮಹಿಳೆಯು ಎದ್ದುನಿಲ್ಲುವುದನ್ನು ವರ್ಧಿಸುವ ದೃಷ್ಟಿಕೋನದಿಂದ ಅಂಥ ಎಲ್ಲಾ ಶೈಕ್ಷಣಿಕ ಮತ್ತು ಸಂಶೋಧನಾ ಉಪಕ್ರಮಗಳನ್ನು ಕೈಗೊಳ್ಳುವುದು.

5. ಕರ್ನಾಟಕ ರಾಜ್ಯ ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ

ಇದು ಈ ಮುಂದಿನವುಗಳಿಗಾಗಿ ಏಕಾತ್ಮಕ ವಿಶ್ವವಿದ್ಯಾನಿಲಯವಾಗಿರತಕ್ಕದ್ದು, ಎಂದರೆ:–

(ಎ) ಕಲಿಕಾ ಪ್ರಗತಿ ಮತ್ತು ಸಂಶೋಧನಾ ಮುಂದುವರಿಕೆ, ದಾಖಲೀಕರಣ, ಶ್ರವ್ಯ ಮತ್ತು ದೃಶ್ಯ ಮುದ್ರಣಗಳ ಪ್ರಕಟಣೆಗಳನ್ನು ಅನನ್ಯವಾಗಿ ಮುಂದುವರಿಸಲು, ಸಂಗೀತ ಮತ್ತು ಪ್ರದರ್ಶಕ ಕಲೆಗಳ ಎಲ್ಲಾ ವಿಭಾಗಗಳನ್ನು ಜನಪ್ರಿಯಗೊಳಿಸುವುದಕ್ಕಾಗಿ ಏಕಾತ್ಮಕ ಮತ್ತು ವಸತಿಯುಕ್ತ ಸ್ವರೂಪದ್ದಾಗಿರುವುದು.

(ಬಿ) ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶಾಲ ಕ್ಷೇತ್ರದಲ್ಲಿ ಅಧ್ಯಯನ, ಬೋಧನೆ, ಸಂಶೋಧನೆ ಮತ್ತು ಜ್ಞಾನ ಪ್ರಸಾರವನ್ನು ನಡೆಸುವುದು.

(ಸಿ) ರಾಷ್ಟ್ರೀಯತೆ, ಭಾಷೆ, ಜಾತಿ ಮತ್ತು ವರ್ಗಗಳ ಬೇಲಿಗಳಿಲ್ಲದೆ ಸಂಗೀತ ಮತ್ತು ಪ್ರದರ್ಶಕ ಕಲೆಗಳನ್ನು ಭಾರತೀಯ ಸಾಂಸ್ಕೃತಿಕ ಪರಂಪರೆಯ ಪ್ರತೀಕವಾಗಿ ಪ್ರಸರಿಸುವುದು.

6. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಇದು ಈ ಮುಂದಿನವುಗಳಿಗಾಗಿ ಸಂಸ್ಕೃತ ಕಾಲೇಜುಗಳಿಗೆ ಸಂಬಂಧಿಸಿದಂತೆ ಇದು ಸಂಯೋಜನೆ ನೀಡುವ ವಿಶ್ವವಿದ್ಯಾಲಯವಾಗಿರತಕ್ಕದ್ದು, ಎಂದರೆ:–

(ಎ) ಸಂಸ್ಕೃತ ಭಾಷೆ, ಸಾಹಿತ್ಯ ಮತ್ತು ವ್ಯಾಕರಣ, ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಮೀಮಾಂಸ, ವೇದಾಂತ ಮುಂತಾದ ವೇದ ಮತ್ತು ಶಾಸ್ತ್ರಾಧ್ಯಯನದಲ್ಲಿ ಮತ್ತು ಜೈನ ಧರ್ಮ ಶಾಸ್ತ್ರ ಮತ್ತಿತ್ತರ ಪೂರಕ ಶಿಕ್ಷಣದಲ್ಲೂ ಸಹ ಬೋಧನೆ ಮತ್ತು ಸಂಶೋಧನೆಯ ಅತ್ಯುನ್ನತ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುವುದು;

(ಬಿ) ಕರ್ನಾಟಕದಲ್ಲಿ ದೊರೆಯುವ ಸಂಸ್ಕೃತ ಸಾಹಿತ್ಯದ ವಿಶಿಷ್ಟ ಗುಣಲಕ್ಷಣಗಳಿಗೆ ವಿಶೇಷವಾದ ಒತ್ತನ್ನು ನೀಡಿ ವೇದ, ಆಗಮ ಮತ್ತು ಸಜಾತೀಯ ಸಾಹಿತ್ಯದ ಅಧ್ಯಯನದ ಸಾಂಪ್ರದಾಯಿಕ ಪದ್ಧತಿಯನ್ನು ಸಂರಕ್ಷಿಸುವುದು, ಪೋಷಿಸುವುದು ಮತ್ತು ಉತ್ತೇಜಿಸುವುದು;

(ಸಿ) ವೇದ ಹಾಗೂ ಇತರ ಅಧ್ಯಯನ ವಿಷಯಗಳಲ್ಲಿ ಅಡಗಿರುವ ಜ್ಞಾನ ಬಂಡಾರವನ್ನು ಹಾಗೂ ಆಧುನಿಕ ಜಗತ್ತಿಗೆ ಎಷ್ಟು ಉಲ್ಲೇಖಾರ್ಹ ಎಂಬ ಮಹತ್ವವನ್ನು ಸರ್ವರಿಗೂ ತಿಳಿಯಪಡಿಸುವುದು;

(ಡಿ) ಸಂಸ್ಕೃತ ಭಾಷೆಯಲ್ಲಿ ಉಗಮವಾಗಿ ಬೆಳೆದು ನಿಂತ ಭಗವದ್ಗೀತೆ ಆಧಾರಿತ ಆಡಳಿತ ವಿಜ್ಞಾನ, ಯೋಗ ಆಧಾರಿತ ಮಾನವ ಮನಶಾಸ್ತ್ರ, ಪರಿಸರ ಸಮತೋಲನ ಸಂಬಂಧಿತ ಆರೋಗ್ಯ ಸಂಬಂಧಿ ಸಾಂಪ್ರದಾಯಿಕ ಜ್ಞಾನ, ಪುರಾತತ್ವ ಶಾಸ್ತ್ರ, ಪ್ರಾಚೀನ ವಿಜ್ಞಾನಗಳು, ಆಗಮ ಶಾಸ್ತ್ರ, ಆಯುರ್ವೇದ, ವಿಜ್ಞಾನ ಮಾನವಿಕ ಶಾಸ್ತ್ರಗಳು, ನಟನೆ ಕಲೆಗಳು, ಲಲಿತ ಕಲೆಗಳು ಮತ್ತು ಸಂವಾದ ವಿಜ್ಞಾನ, ವೇದಾಧ್ಯಯನ ಮತ್ತು ವೇದ ಭಾಷಾಧ್ಯಯನ ಮತ್ತಿತ್ತರ ವಿಜ್ಞಾನಗಳ ರಂಗದಲ್ಲಿ ಮುಂದುವರಿದ ಅಧ್ಯಯನ ಮತ್ತು ಸಂಶೋಧನೆಗೆ ಅನುಕೂಲ ಕಲ್ಪಿಸುವುದು ಮತ್ತು ಅದನ್ನು ನಿಯಂತ್ರಿಸುವುದು;

(ಇ) ವೇದ ಮತ್ತು ಶಾಸ್ತ್ರಗಳಲ್ಲಿ ಜ್ಞಾನ ಸಂವರ್ಧನೆ ಹಾಗೂ ಪ್ರಜ್ಞೆಯ ಉನ್ನತಸ್ತರಗಳ ಸಾಧನೆಯ ಹಾದಿಯಲ್ಲಿ ಕಂಡುಬರುವ ವಿವೇಚನಾಯುಕ್ತ ತರ್ಕ ಸಮ್ಮತ ವಿಧಾನ ಹಾಗೂ ವೈಜ್ಞಾನಿಕವಾದಂಥ ನಿಲುವುಗಳು ಎಷ್ಟು ಗಹನವಾದುದು ಎಂಬುದನ್ನು ಸರ್ವರಿಗೂ ಎತ್ತಿ ತೋರುವುದು;

(ಎಫ್) ಭಾರತೀಯ ಜ್ಞಾನ ಪರಂಪರೆಯನ್ನು ಕ್ರೋಢೀಕರಿಸಿ, ಪುನರುಜ್ಜೀವನಗೊಳಿಸಿ ಉತ್ತೇಜಿಸುವುದು ಹಾಗೂ ವೇದ ಮತ್ತು ಸಂಸ್ಕೃತ ಸಾಹಿತ್ಯದಲ್ಲಿ ಒಳಗೊಂಡ ವೈಜ್ಞಾನಿಕ ವಿಚಾರಗಳನ್ನು ವಿಶೇಷವಾಗಿ ಕೃಷಿ, ಖಗೋಳ ಶಾಸ್ತ್ರ, ಜೀವ ಶಾಸ್ತ್ರ, ರಸಾಯನಶಾಸ್ತ್ರ, ಮಾನವಿಕ ಶಾಸ್ತ್ರಗಳು, ಮಾಹಿತಿ ತಂತ್ರಜ್ಞಾನ, ಕಾನೂನು ಮತ್ತು ನ್ಯಾಯಶಾಸ್ತ್ರ, ಆಡಳಿತ, ಗಣಿತ, ಲೋಹಶಾಸ್ತ್ರ, ಪವನಶಾಸ್ತ್ರ, ಭೌತಶಾಸ್ತ್ರ, ಸಾಮಾಜಿಕ ವಿಜ್ಞಾನಗಳಲ್ಲಿ ಅಳವಡಿಸಲು ಹಾಗೂ ಆಧುನಿಕ ವಿಜ್ಞಾನ ಮತ್ತು ತಾಂತ್ರಿಕ ಅಧ್ಯಯನಗಳಲ್ಲಿ ಯೋಗವನ್ನು ಸಮ್ಮಿಲನಗೊಳಿಸುವುದು;

(ಜಿ) ವೇದದ ಅಧಿಕಾರಯುತ (ಭಾಷ್ಯಗಳ) ವ್ಯಾಖ್ಯಾನಗಳ ಬಗ್ಗೆ ಜನಜಾಗೃತಿ ಮೂಡಿಸುವುದು;

(ಎಚ್) ಒಂದೇ ಬಗೆಯ ಧ್ಯೇಯೋದ್ದೇಶವುಳ್ಳ ಎಲ್ಲಾ ವಿಶ್ವವಿದ್ಯಾಲಯಗಳು ಮತ್ತು ಸಂಸ್ಥೆಗಳು ಮಾಡಿದ ಪ್ರಯತ್ನಗಳ ಕೂಡುಬಲವನ್ನು ಅಭಿವೃದ್ಧಿಪಡಿಸುವ ದೃಷ್ಟಿಯಿಂದ ಪರಸ್ಪರ ವ್ಯವಸ್ಥೆಗಳು ಮತ್ತು ಸಂವಾದ ಸಂಪರ್ಕ ಸೌಕರ್ಯಗಳೊಂದಿಗೆ ಅಂಥ ವೇದ ಹಾಗೂ ಸಂಸ್ಕೃತ ವಿದ್ಯಾಸಂಸ್ಥೆಗಳ ಮತ್ತು ಶೈಕ್ಷಣಿಕ ಹಾಗೂ ಸಂಶೋಧನಾ ಅಭಿಮುಖ ಸಂಸ್ಥೆಗಳ ಒಂದು ಜಾಲವನ್ನು ರಚಿಸುವುದು;

(ಐ) ಸಂಸ್ಕೃತ ಮತ್ತು ವೇದಗಳಲ್ಲಿರುವ ವಿಚಾರಧಾರೆಯನ್ನು ಒಳಗೊಂಡ ಸಾಹಿತ್ಯ ಬಂಡಾರವನ್ನು ಆಧುನಿಕ ಭಾರತೀಯ ಮತ್ತು ವಿದೇಶಿ ಭಾಷೆಗಳಲ್ಲಿ ಸೃಷ್ಟಿಸುವುದು.

(ಜೆ) ಎಲ್ಲಾ ವೇದಗಳು ಶಾಸ್ತ್ರೀಕ ಕೃತಿಗಳು ಮತ್ತು ಅವಕ್ಕೆ ಸಂಬಂಧಪಟ್ಟ ಗ್ರಂಥಗಳು, ಭಾಷ್ಯಗಳು ಮತ್ತು ವ್ಯಾಖ್ಯಾನಗಳನ್ನು ಕನ್ನಡ ಮತ್ತು ಇತರ ಭಾಷೆಗಳಿಗೆ ಭಾಷಾಂತರಿಸುವುದು ಮತ್ತು ಪ್ರಕಟಿಸುವುದು;

(ಕೆ) ವೇದ ಪಠನಗಳು ಮತ್ತು ಸಂಬಂಧಪಟ್ಟ ಸಾಂಪ್ರದಾಯಿಕ ಆಚರಣೆಗಳ ಧ್ವನಿ ಮತ್ತು ಧ್ವನಿ–ದೃಶ್ಯ ದಾಖಲೆಗಳನ್ನು ತಯಾರಿಸುವುದು;

(ಎಲ್) ವಿಶ್ವವಿದ್ಯಾಲಯದಲ್ಲಿ ಅಂತರ–ವ್ಯಾಸಂಗವಿಷಯಗಳ ಅಧ್ಯಯನ ಮತ್ತು ಸಂಶೋಧನೆಯನ್ನು ಉತ್ತೇಜಿಸಲು ಮತ್ತು ಅಂತದ್ದೇ ಇತರ ಸಂಬಂಧಪಟ್ಟ ಚಟುವಟಿಕೆಗಳನ್ನು ವಿಶ್ವವಿದ್ಯಾಲಯದ ಮಟ್ಟದಲ್ಲಿ ಸೌಹಾರ್ದರೀತಿಯಲ್ಲಿ ನಡೆಸಿಕೊಂಡು ಬರಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದು;

(ಎಂ) ಸಂಸ್ಕೃತದಲ್ಲಿ ಒಂದು ಓರಿಯಂಟಲ್ ಸಂಸ್ಥೆಯನ್ನು ಸ್ಥಾಪಿಸಿ ಅಪೂರ್ವ ಹಸ್ತಪ್ರತಿಗಳು ಮತ್ತು ಪುರಾತನ ಕೃತಿಗಳನ್ನು ಸಂಗ್ರಹಿಸುವುದು, ಸಂರಕ್ಷಿಸುವುದು ಮತ್ತು ಟೀಕೆಟಿಪ್ಪಣಿಗಳೊಂದಿಗೆ ಸಂಪಾದನೆ ಮಾಡುವುದು ಮತ್ತು ಪ್ರಕಟಿಸುವುದು.

(ಎನ್) ಇರುವ ಎಲ್ಲಾ ಹಸ್ತಪ್ರತಿಗಳ ಮತ್ತು ಸಂಸ್ಕೃತ ಗ್ರಂಥಗಳ ಬಂಡಾರವನ್ನು ಕಂಪ್ಯೂಟರ್‌ಗೆ ಅಳವಡಿಸಿ ಡಿಜಿಟಲ್ ರೂಪದಲ್ಲಿ ಸಂಗ್ರಹಿಸುವುದು.

(ಒ) ವಿಶ್ವವಿದ್ಯಾಲಯ/ವಿಭಾಗಗಳ ಮೂಲಕ ಅತ್ಯುನ್ನತ ಮಟ್ಟದ ಸಂಶೋಧನಾ ಜರ್ನಲ್‌ಗಳನ್ನು ಹೊರತರುವುದು.

(ಪಿ) ಪ್ರಾಚೀನ ಜ್ಞಾನಪದ್ಧತಿಗಳಲ್ಲಿ ಇರುವ ಸಂದೇಶವನ್ನು ಉತ್ತೇಜಿಸುವ ದೃಷ್ಟಿಯಿಂದ ವಿಚಾರಗೋಷ್ಠಿಗಳು, ಸಮ್ಮೇಳನಗಳು, ಕಾರ್ಯಗಾರಗಳು, ವಿದ್ವತ್‌ಗೋಷ್ಠಿಗಳನ್ನು ಏರ್ಪಡಿಸುವುದು.

(ಕ್ಯೂ) ವಿಶ್ವವಿದ್ಯಾಲಯಗಳು ನಿರ್ವಹಿಸಿಕೊಂಡುಬರದ ವಿದ್ಯಾಸಂಸ್ಥೆಗಳನ್ನು ಸಂಯೋಜಿತ ಕಾಲೇಜುಗಳು/ಮಹಾ ಪಾಠಶಾಲೆಗಳು ಮತ್ತು ಪಾಠಶಾಲೆಗಳಾಗಿ ವಿಶ್ವವಿದ್ಯಾಲಯದ ವಿಶೇಷ ಅವಕಾಶಗಳಿಗೆ ಸೇರಿಸಿಕೊಳ್ಳುವುದು.

(ಆರ್) ಸಂಯೋಜಿತ ಕಾಲೇಜುಗಳು/ಮಹಾಪಾಠ ಶಾಲೆಗಳು/ಪಾಠಶಾಲೆಗಳಿಗೆ ಅಗತ್ಯವಾಗಬಹುದಾದಂಥ ಬೋಧನೆ ಮತ್ತು ಮಾರ್ಗದರ್ಶನವನ್ನು ಒದಗಿಸಲು ವಿಶೇಷ ಸಂಶೋಧನಾ ಕೇಂದ್ರಗಳನ್ನು ರಚಿಸುವುದು.

(ಎಸ್) ವಿಶ್ವವಿದ್ಯಾಲಯದ ಮೇಲ್ಕಂಡ ಧ್ಯೇಯೋದ್ದೇಶಗಳಿಗೆ ಸಂಬಂಧಪಟ್ಟ ಅಥವಾ ಪ್ರಾಸಂಗಿಕವಾದ ಇತರೆ ಯಾವುದೇ ಚಟುವಟಿಕೆಗಳನ್ನು ಕೈಗೊಳ್ಳುವುದು.

(ಟಿ) ಪ್ರೌಢ ಸಂಶೋಧನೆಗಳನ್ನು ನಡೆಸುವುದಕ್ಕಾಗಿ ವಿವಿಧ ವಿದ್ಯಾ ವಿಷಯಗಳಲ್ಲಿ "ಅಧ್ಯಯನ ಪೀಠ"ಗಳನ್ನು ಸ್ಥಾಪಿಸುವುದು.

7. ಜಾನಪದ ವಿಶ್ವವಿದ್ಯಾಲಯ.– ಈ ಮುಂದಿನವುಗಳಿಗಾಗಿ ಇದು ಏಕಾತ್ಮಕ ವಿಶ್ವವಿದ್ಯಾನಿಲವಾಗಿರತಕ್ಕದ್ದು,–

(ಎ) ಕರ್ನಾಟಕದ ಜನಪದ, ಸಾಹಿತ್ಯ, ಕಲೆ, ಸಂಗೀತ, ರಂಗಭೂಮಿ, ಕರಕುಶಲಕಲೆ, ಜನಪದ ವೈದ್ಯಪದ್ಧತಿ, ಆಹಾರ, ಪಾನೀಯ, ಗುಡಿಕೈಗಾರಿಕೆ ಮೊದಲಾದ ಎಲ್ಲ ವಿಷಯಗಳನ್ನು ಒಳಗೊಂಡ ಕ್ಷೇತ್ರಗಳಲ್ಲಿ ಉನ್ನತ ಶಿಕ್ಷಣ ಮತ್ತು ಸಂಶೋಧನೆಗೆ ಅವಕಾಶವನ್ನು ಕಲ್ಪಿಸುವುದು;

(ಬಿ) ಕನ್ನಡ ಹಾಗೂ ಇತರ ದ್ರಾವಿಡ ಭಾಷೆಗಳನ್ನು ಮಾತನಾಡುವ ಜನರ ಮತ್ತು ಇತರ ಭಾಷೆಗಳನ್ನು ಮಾತನಾಡುವ ಜನರ ಸಂಸ್ಕೃತಿ ಅಧ್ಯಯನಕ್ಕೆ ಅವಕಾಶ ಕಲ್ಪಿಸುವುದು;

(ಸಿ) "ದೇಶೀಯವು ಏಕ ಅಲ್ಲ; ಅದು ಅನೇಕ" ಎಂಬ ಸ್ಪಷ್ಟ ತಿಳಿವಳಿಕೆಯೊಂದಿಗೆ ದೇಶೀಯ ಸಾಂಪ್ರದಾಯಿಕ ಜ್ಞಾನ ಪರಂಪರೆಗಳ ಅಧ್ಯಯನಕ್ಕೆ ಅವಕಾಶವನ್ನು ಕಲ್ಪಿಸುವುದು;

(ಡಿ) ಕರ್ನಾಟಕದ ಎಲ್ಲ ಅಲಕ್ಷಿತ ಗ್ರಾಮೀಣ ಸಮುದಾಯಗಳ ಹಾಗೂ ಬುಡಕಟ್ಟುಗಳ ಅಭಿವೃದ್ಧಿಗೆ ನೆರವಾಗುವುದು;

(ಇ) ಜಾಗತೀಕರಣದ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ದೇಶೀಯ ಸಂಸ್ಕೃತಿಗಳನ್ನು ಬಲಪಡಿಸುವುದು;

(ಎಫ್) ಎಲ್ಲ ದೇಶಗಳಿಗೆ, ಅದರಲ್ಲೂ ವಿಶೇಷವಾಗಿ, ಅಭಿವೃದ್ಧಿಶೀಲ ದೇಶಗಳಿಗೆ ಮಾದರಿಯಾಗುವಂಥ ರೀತಿಯಲ್ಲಿ ಈ ವಿಶ್ವವಿದ್ಯಾಲಯವನ್ನು ಪ್ರವರ್ತಿಸುವುದು;

(ಜಿ) ಕರ್ನಾಟಕದ ವಿವಿಧ ಪ್ರದೇಶಗಳಲ್ಲಿಯ ಎಲ್ಲ ಸಮುದಾಯಗಳ ಜಾನಪದವನ್ನು ವಿಸ್ತೃತ ಕ್ಷೇತ್ರಕಾರ್ಯದ ಮೂಲಕ ವೈಜ್ಞಾನಿಕವಾಗಿ ಸಂಗ್ರಹಿಸಿ, ಸಂಪಾದಿಸಿ ಪ್ರಕಟಿಸುವುದು;

(ಎಚ್) ಸಂಗ್ರಹಿಸಿದ ಜಾನಪದ ಸಾಮಗ್ರಿಯನ್ನು ವ್ಯವಸ್ಥಿತ ವಿಧಾನದಿಂದ ಡಿಜಿಟಲ್ ರೂಪದಲ್ಲಿ ಬಹುಮುಖೀ ದಾಖಲೀಕರಣವನ್ನು ಕೈಗೊಂಡು ಅದನ್ನು ಸಂರಕ್ಷಿಸುವುದು;

(ಐ) ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಲಭ್ಯವಾಗುವ ಗ್ರಾಮೀಣ ಹಾಗೂ ಬುಡಕಟ್ಟು ಜೀವನದಲ್ಲಿ ಬಳಕೆಯಲ್ಲಿರುವ ವಸ್ತುಗಳನ್ನು, ಅವು ಕಣ್ಮರೆಯಾಗುವ ಮೊದಲೇ ಸಂಗ್ರಹಿಸುವುದು ಮತ್ತು ಅವುಗಳನ್ನು ಒಳಾಂಗಣ ಹಾಗೂ ಬಯಲು ವಸ್ತು ಸಂಗ್ರಹಾಲಯಗಳಲ್ಲಿ ವ್ಯವಸ್ಥಿತವಾಗಿ ಪ್ರದರ್ಶನ ಮಾಡುವುದು ಹಾಗೂ ಆ ಸ್ಥಳಗಳನ್ನು ಪ್ರವಾಸಿ ಆಕರ್ಷಣೆಯ ತಾಣಗಳನ್ನಾಗಿ ರೂಪಿಸುವುದು;

(ಜೆ) ಶಾಲೆ, ಕಾಲೇಜು ಹಾಗೂ ಉನ್ನತ ಶಿಕ್ಷಣಕೇಂದ್ರಗಳಲ್ಲಿ ಜಾನಪದವನ್ನು ಒಂದು ಕಲಿಕೆಯ ವಿಷಯವಾಗಿ ಅಳವಡಿಸುವುದು ಹಾಗೂ ವಿಶ್ವವಿದ್ಯಾಲಯದ ಮಟ್ಟದಲ್ಲಿ ಸಂಶೋಧನೆ ನಡೆಸಲು ಅವಕಾಶವನ್ನು ಮಾಡಿಕೊಟ್ಟು ಪದವಿಗಳನ್ನು ಪ್ರದಾನ ಮಾಡುವುದು. ಹಾಗೆಯೇ ದೂರಶಿಕ್ಷಣದ ಮೂಲಕ ಆಸಕ್ತ ಜನರಿಗೆ ಶಿಕ್ಷಣವನ್ನು ನೀಡುವುದು;

(ಕೆ) ಆಸಕ್ತ ಜನರಿಗೆ ದೂರ ಶಿಕ್ಷಣದ ಮೂಲಕ ಕಲಿಸುವುದು.

(ಎಲ್) ಜಾನಪದವನ್ನು ಬಹು ಶಿಸ್ತೀಯ ಹಾಗೂ ಅಂತರಶಿಸ್ತೀಯ ನೆಲೆಗಳಲ್ಲಿ ಅಧ್ಯಯನ ಮಾಡುವುದು ಮತ್ತು ಉನ್ನತ ಮಟ್ಟಗಳಲ್ಲಿ ಸಂಶೋಧನೆಗೆ ಪ್ರೋತ್ಸಾಹವನ್ನು ನೀಡುವುದು;

(ಎಂ) ಕರ್ನಾಟಕದ ವಿವಿಧ ಭಾಷೆಗಳ ಮತ್ತು ಸಮುದಾಯಗಳ ಜಾನಪದವನ್ನು ತೌಲನಿಕವಾಗಿ ಅಧ್ಯಯನ ಮಾಡುವುದು;

(ಎನ್) ಕರ್ನಾಟಕದ ಜಾನಪದವನ್ನು ಭಾರತದ ಇತರ ರಾಜ್ಯಗಳ ಜಾನಪದದೊಡನೆ ತೌಲನಿಕವಾಗಿ ಅಧ್ಯಯನ ನಡೆಸಲು ಉತ್ತೇಜಿಸುವುದು. ಅದರಂತೆಯೇ ದಕ್ಷಿಣ ಏಷಿಯಾ ಹಾಗೂ ವಿಶ್ವದ ಇತರ ದೇಶಗಳ, ಅದರಲ್ಲೂ ವಿಶೇಷವಾಗಿ, ಅಭಿವೃದ್ಧಿಶೀಲ ದೇಶಗಳ ಜಾನಪದ ಅಧ್ಯಯನವನ್ನು ನಡೆಸಲು ಪ್ರೋತ್ಸಾಹ ನೀಡುವುದು. ಈ ಉದ್ದೇಶಗಳನ್ನು

ನೆರವೇರಿಸುವುದಕ್ಕಾಗಿ ಕರ್ನಾಟಕದ, ಭಾರತದ ಮತ್ತು ವಿಶ್ವದ ಇತರ ವಿಶ್ವವಿದ್ಯಾಲಯಗಳು / ಸಂಶೋಧನಾ ಸಂಸ್ಥೆಗಳೊಡನೆ ಒಪ್ಪಂದ ಮಾಡಿಕೊಳ್ಳುವುದು.

(ಒ) ಕರ್ನಾಟಕದ ಜಾನಪದವನ್ನು ಮತ್ತು ಮಹತ್ವಪೂರ್ಣ ಜಾನಪದ ಅಧ್ಯಯನಗಳನ್ನು ಇಂಗ್ಲಿಷ್, ಹಿಂದಿ ಮತ್ತು ಭಾರತೀಯ ಹಾಗೂ ವಿದೇಶಿ ಇತರ ಭಾಷೆಗಳಿಗೆ ಅನುವಾದವನ್ನು ಮಾಡುವುದು. ಹಾಗೆಯೇ ಭಾರತದ ಮತ್ತು ವಿಶ್ವದ ಇತರ ಭಾಷೆಗಳಲ್ಲಿ ಲಭ್ಯವಿರುವ ಜಾನಪದ ಪಠ್ಯಗಳನ್ನು ಹಾಗೂ ಮಹತ್ವದ ಅಧ್ಯಯನಗಳನ್ನು ಕನ್ನಡಕ್ಕೆ ಅನುವಾದವನ್ನು ಮಾಡುವುದು;

(ಪಿ) ವಿಶ್ವವಿದ್ಯಾಲಯವು ಜಾನಪದ ಅಧ್ಯಯನದ ವೈವಿಧ್ಯತೆಯ ಪ್ರಕಟಣೆಗಾಗಿ ಪ್ರಸಾರಾಂಗವನ್ನು ಸ್ಥಾಪಿಸುವುದು. ಪ್ರಸಾರಾಂಗದ ಮೂಲಕ ಪುಸ್ತಕಗಳ ಪ್ರಕಟಣೆ, ವಾರ್ತಾಪತ್ರಗಳು, ಸಂಶೋಧನಾ ಪತ್ರಿಕೆಗಳು ಮೊದಲಾದ ಪ್ರಕಟಣೆಗಳನ್ನು ಹೊರತರುವುದು. ಬಹುಮಾಧ್ಯಮದ ಮೂಲಕ ಜಾನಪದ ಕಲೆ ಮತ್ತು ಸಂಸ್ಕೃತಿಯನ್ನು ಪ್ರಚಾರ ಮಾಡುವುದು. ಜಾನಪದದ ಬಗ್ಗೆ ಜನಸಾಮಾನ್ಯರಲ್ಲಿ ತಿಳುವಳಿಕೆಯನ್ನು ಮೂಡಿಸಲು ವಿದ್ವಾಂಸರು ಮತ್ತು ಕಲಾವಿದರಿಂದ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸುವುದು;

(ಕ್ಯೂ) ಸ್ವಾವಲಂಬಿ ಮತ್ತು ಸ್ವ ಉದ್ಯೋಗ ಕಲ್ಪಿಸುವ ಗುಡಿಕೈಗಾರಿಕೆಗಳ ಹಾಗೂ ವೃತ್ತಿ ಕೌಶಲಗಳ ಸಂವರ್ಧನೆಗೆ ಪ್ರಯತ್ನವನ್ನು ನಡೆಸುವುದು;

(ಆರ್) ಪಾರಂಪರಿಕ ಕಸಬುದಾರಿಕೆಯ ಉತ್ಪನ್ನಗಳಿಗೆ ಮಾರುಕಟ್ಟೆಯನ್ನು ಕಲ್ಪಿಸಿಕೊಡುವುದು ಮತ್ತು ಆರ್ಥಿಕ ಭದ್ರತೆಯನ್ನು ಒದಗಿಸುವುದು;

(ಎಸ್) ಜಾನಪದದಲ್ಲಿರಬಹುದಾದ ಎಲ್ಲ ಅಸಂಗತ, ಅವೈಚಾರಿಕ, ಅಮಾನವೀಯ ಹಾಗೂ ಅವೈಜ್ಞಾನಿಕ ಅಂಶಗಳನ್ನು ನಿವಾರಿಸಿ ಸಮಾಜದ ಸ್ವಾಸ್ಥ್ಯ ಹಾಗೂ ಸಾಮರಸ್ಯವನ್ನು ಸಾಧಿಸಲು ಅವಶ್ಯಕವಾದ ಶಿಕ್ಷಣವನ್ನು ನೀಡುವುದು;

(ಟಿ) ಅಲಕ್ಷಿತ ಸಮುದಾಯದವರಿಗೆ ಆಧುನಿಕ ಶಿಕ್ಷಣವನ್ನು ನೀಡುವ ಮೂಲಕ ಅವರನ್ನು ಸಮಾಜದ ಮುಖ್ಯವಾಹಿನಿಗೆ ತಂದು ಅವರಲ್ಲಿ ಆತ್ಮಸ್ಥೈರ್ಯವನ್ನು ಉಂಟುಮಾಡುವುದು. ಅನೌಪಚಾರಿಕ ಶಿಕ್ಷಣ, ಸಮೂಹ ಸಂವಹನ ಹಾಗೂ ಗ್ರಾಮೀಣಾಭಿವೃದ್ಧಿ ಚಟುವಟಿಕೆಗಳಲ್ಲಿ ಜಾನಪದವನ್ನು ಪೂರ್ಣಪ್ರಮಾಣದಲ್ಲಿ ಬಳಸಿಕೊಳ್ಳುವ ಉದ್ದೇಶಕ್ಕಾಗಿ ಒಂದು ಪ್ರತ್ಯೇಕ ಅಭಿವೃದ್ಧಿ ಅಧ್ಯಯನ ವಿಭಾಗವನ್ನು ತೆರೆಯುವುದು;

(ಯು) ಜಾನಪದ ಅಧ್ಯಯನ ವಿಷಯಕ್ಕೆ ಪ್ರಸ್ತುತ ಎನಿಸುವ ಯೋಜನೆಗಳನ್ನು ರೂಪಿಸಿ ಅವುಗಳನ್ನು ಕಾಲಕಾಲಕ್ಕೆ ಕಾರ್ಯಗತಗೊಳಿಸುವುದು.

8. ಮಂಡ್ಯ ಏಕಾತ್ಮಕ ಸ್ವರೂಪದ ವಿಶ್ವವಿದ್ಯಾನಿಲಯ, ಮಂಡ್ಯ.– ಇದು ಏಕಾತ್ಮಕ ಸ್ವರೂಪದ ವಿಶ್ವವಿದ್ಯಾನಿಲಯವಾಗಿರತಕ್ಕದ್ದು,–

(ಎ) ಅಸ್ತಿತ್ವದಲ್ಲಿರುವ ವಿದ್ಯಾಸಂಸ್ಥೆಗಳಲ್ಲಿ ಹೆಚ್ಚುವರಿ ಸಾಮರ್ಥ್ಯವನ್ನು ಸೃಜಿಸುವ ಮೂಲಕ ಸಾಂಸ್ಥಿಕ ತಳಹದಿಯನ್ನು ವಿಸ್ತರಿಸುವುದು ಮತ್ತು ಒಟ್ಟು ಪ್ರವೇಶ ದಾಖಲಾತಿ ಅನುಪಾತ (ಜಿಇಆರ್) ವೃದ್ಧಿಸುವುದಕ್ಕಾಗಿ ಹೊಸ ಸಂಸ್ಥೆಗಳನ್ನು ಸ್ಥಾಪಿಸುವುದು.

(ಬಿ) ವೆಚ್ಚ ಪರಿಣಾಮ ಉನ್ನತ ಶಿಕ್ಷಣವನ್ನು ಉಪಬಂಧಿಸುವುದು.

(ಸಿ) ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ವಿಶೇಷವಾಗಿ ದುರ್ಬಲ ವ್ಯಕ್ತಿಗಳಿಗೆ ಸಾಕಷ್ಟು ಅವಕಾಶಗಳನ್ನು ಒದಗಿಸುವ ಮೂಲಕ ಉನ್ನತ ಶಿಕ್ಷಣದಲ್ಲಿ ಸಮಾನತೆಯನ್ನು ಸಾಧಿಸುವುದು.

(ಡಿ) ವಿಶ್ವವಿದ್ಯಾನಿಲಯಗಳಲ್ಲಿ ಯುವ ವಿದ್ವಾಂಸರಿಗಾಗಿ ಗಮನಾರ್ಹ ಸಂಶೋಧನಾ ಪರಿಸರವನ್ನು ನಿರ್ಮಿಸುವುದು ಮತ್ತು ರಾಷ್ಟ್ರೀಯ/ಅಂತರರಾಷ್ಟ್ರೀಯ ಸಂಶೋಧನಾ ಸಹಕಾರವನ್ನು ಬಲಪಡಿಸುವುದು.

(ಇ) ಜ್ಞಾನಾಭಿವೃದ್ಧಿಗಾಗಿ ಹೊಸ ಅವಕಾಶಗಳೊಂದಿಗೆ ಉತ್ತು ಸಾಂಪ್ರದಾಯಿಕ ಪದ್ಧತಿಗಳನ್ನು ಜೋಡಿಸುವುದು.

(ಎಫ್) ಕಾರ್ಮಿಕ ಮಾರುಕಟ್ಟೆ ಮತ್ತು ಅಂತರರಾಷ್ಟ್ರೀಯ ಗುಣಮಟ್ಟಗಳನ್ನು ಪೂರೈಸುವುದು.

9. ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾನಿಲಯ, ಬೆಂಗಳೂರು.– ಇದು ಸಂಯೋಜಿಸಲಾಗದ (non-attiliating) (ಏಕಾತ್ಮಕ ಸ್ವರೂಪದ) ವಿಶ್ವವಿದ್ಯಾನಿಲಯವಾಗಿರತಕ್ಕದ್ದು,–

(ಎ) ಅಸ್ತಿತ್ವದಲ್ಲಿರುವ ವಿದ್ಯಾಸಂಸ್ಥೆಗಳಲ್ಲಿ ಹೆಚ್ಚುವರಿ ಸಾಮರ್ಥ್ಯವನ್ನು ಸೃಜಿಸುವ ಮೂಲಕ ಸಾಂಸ್ಥಿಕ ತಳಹದಿಯನ್ನು ವಿಸ್ತರಿಸುವುದು ಮತ್ತು ಜಿಇಆರ್ ವೃದ್ಧಿಸುವುದಕ್ಕಾಗಿ ಹೊಸ ಸಂಸ್ಥೆಗಳನ್ನು ಸ್ಥಾಪಿಸುವುದು.

(ಬಿ) ವಿದ್ಯಾವಿಭಾಗಗಳು ಮತ್ತು ಸಂಸ್ಥೆಗಳ ನಡುವಿನ ಸಹಕಾರವನ್ನು ತೀಕ್ಷ್ಣಗೊಳಿಸುವುದು

(ಸಿ) ವೆಚ್ಚ ಪರಿಣಾಮ ಉನ್ನತ ಶಿಕ್ಷಣವನ್ನು ಉಪಬಂಧಿಸುವುದು.

(ಡಿ) ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ವಿಶೇಷವಾಗಿ ದುರ್ಬಲ ವ್ಯಕ್ತಿಗಳಿಗೆ ಸಾಕಷ್ಟು ಅವಕಾಶಗಳನ್ನು ಒದಗಿಸುವ ಮೂಲಕ ಉನ್ನತ ಶಿಕ್ಷಣದಲ್ಲಿ ಸಮಾನತೆಯನ್ನು ಸಾಧಿಸುವುದು.

(ಇ) ವಿಶ್ವವಿದ್ಯಾನಿಲಯಗಳಲ್ಲಿ ಯುವ ವಿದ್ವಾಂಸರಿಗಾಗಿ ಗಮನಾರ್ಹ ಸಂಶೋಧನಾ ಪರಿಸರವನ್ನು ನಿರ್ಮಿಸುವುದು ಮತ್ತು ರಾಷ್ಟ್ರೀಯ/ಅಂತರರಾಷ್ಟ್ರೀಯ ಸಂಶೋಧನಾ ಸಹಕಾರವನ್ನು ಬಲಪಡಿಸುವುದು.

(ಎಫ್) ವಿರಳ ಸಂಶೋಧನೆಗಳನ್ನು ಪ್ರಶಸ್ತಗೊಳಿಸಲು ಸಂಪರ್ಕ, ಸಹಯೋಗ ಮತ್ತು ಸಹಕಾರದ ವೇದಿಕೆಯಾಗಿ ಸೇವೆ ನೀಡುವುದು.

(ಜಿ) ಜ್ಞಾನಾಭಿವೃದ್ಧಿಗಾಗಿ ಹೊಸ ಅವಕಾಶಗಳೊಂದಿಗೆ ಉತ್ತು ಸಾಂಪ್ರದಾಯಿಕ ಪದ್ಧತಿಗಳನ್ನು ಜೋಡಿಸುವುದು.

(ಎಚ್) ಕಾರ್ಮಿಕ ಮಾರುಕಟ್ಟೆ ಮತ್ತು ಅಂತರರಾಷ್ಟ್ರೀಯ ಗುಣಮಟ್ಟಗಳನ್ನು ಪೂರೈಸುವುದು.

ಅನುಸೂಚಿ III

(30ನೇ ಪ್ರಕರಣವನ್ನು ನೋಡಿ)

ಕಾರ್ಯನಿರ್ವಾಹಕ ಪರಿಷತ್ತು

ಈ ಕೆಳಗಿನ ವಿಶೇಷ ಉದ್ದೇಶದ ವಿಶ್ವವಿದ್ಯಾಲಯಗಳ ಸಂಬಂಧದಲ್ಲಿ ಕಾರ್ಯನಿರ್ವಾಹಕ ಪರಿಷತ್ತಿಗೆ ನಾಮನಿರ್ದೇಶನ ಮಾಡಬೇಕಾದ ಹೆಚ್ಚುವರಿ ವ್ಯಕ್ತಿಗಳು, ಎಂದರೆ:–

ಎ. ಕನ್ನಡ ವಿಶ್ವವಿದ್ಯಾಲಯ:

(ಎ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಅಥವಾ ಕಾರ್ಯದರ್ಶಿ ಅಥವಾ ಉಪ ಕಾರ್ಯದರ್ಶಿ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಆತನ ನಾಮನಿರ್ದೇಶಿತರು;

(ಬಿ) ಕನ್ನಡ ಮತ್ತು ಸಂಸ್ಕೃತಿ ನಿರ್ದೇಶಕರು;

(ಸಿ) ಪುರಾತತ್ವ (ಆರ್ಕಿಯಾಲಜಿ) ನಿರ್ದೇಶಕರು;

(ಡಿ) ಕನ್ನಡ ಸಾಹಿತ್ಯ, ಚರಿತ್ರೆ, ಕರ್ನಾಟಕ ಸಂಸ್ಕೃತಿ, ನಾಟಕ, ವಾಸ್ತುಶಿಲ್ಪ, ಪುರಾತತ್ವ ಶಾಸ್ತ್ರ, ಶಿಲ್ಪಶಾಸ್ತ್ರ, ವರ್ಣಕಲೆ, ಜಾನಪದ ಅಧ್ಯಯನ, ಧರ್ಮ, ತತ್ವಶಾಸ್ತ್ರ, ಸಾಮಾಜಿಕ ಚಳುವಳಿಗಳ ಕ್ಷೇತ್ರದಲ್ಲಿ ಮತ್ತು ಕನ್ನಡ ವಿಶ್ವವಿದ್ಯಾಲಯವು ಅನುಸರಿಸುತ್ತಿರುವ ಅಧ್ಯಯನಗಳ ಇತರ ಸಂಬಂಧಿತ ಕ್ಷೇತ್ರಗಳಲ್ಲಿ ತಮ್ಮ ಶ್ರೇಷ್ಠವಾದ ಕೊಡುಗೆಯನ್ನು ನೀಡಿರುವ ಸರ್ಕಾರವು ನಾಮನಿರ್ದೇಶನ ಮಾಡಿದ ಎಂಟು ವ್ಯಕ್ತಿಗಳು.

ಬಿ. ಕರ್ನಾಟಕ ರಾಜ್ಯ ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ

(ಎ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ಅಥವಾ ಉಪ ಕಾರ್ಯದರ್ಶಿ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಆತನ ನಾಮನಿರ್ದೇಶಿತರು;

(ಬಿ) ಮಹಾನಿರ್ದೇಶಕರು, ಪುರಾತತ್ವ ಇಲಾಖೆ, ಭಾರತ ಸರ್ಕಾರ ಅಥವಾ ಆತನ ನಾಮನಿರ್ದೇಶಿತರು;

(ಸಿ) ಸಂಗೀತ, ಪ್ರದರ್ಶನಕಲೆಗಳ ಕ್ಷೇತ್ರದಲ್ಲಿ ಪ್ರಸಿದ್ಧ ಶಿಕ್ಷಣ ತಜ್ಞರು, ಮತ್ತು ಇತರ ತತ್ಸಂಬಂಧಿತ ವೃತ್ತಿಗಳ ವ್ಯಕ್ತಿಗಳ ಪೈಕಿಯಿಂದ ಕುಲಾಧಿಪತಿಯವರು ನಾಮನಿರ್ದೇಶಿಸಿದ ಇಬ್ಬರು ಸದಸ್ಯರು, ಇವರ ಪೈಕಿ ಒಬ್ಬರು ಮಹಿಳೆ ಆಗಿರತಕ್ಕದ್ದು.

(ಡಿ) ಸಂಗೀತ ಮತ್ತು ಪ್ರದರ್ಶಕ ಕಲೆಗಳಲ್ಲಿ ವಿಖ್ಯಾತ ಕಲಾವಿದರು, ಶಿಕ್ಷಣ ತಜ್ಞರು ಅಥವಾ ಸಂಗೀತ ಮತ್ತು ಪ್ರದರ್ಶಕ ಕಲೆಗಳಲ್ಲಿ ಪ್ರಶಸ್ತಿ ವಿಜೇತರು ಅಥವಾ ಇತರ ವೃತ್ತಿಗಳ ವ್ಯಕ್ತಿಗಳಿಂದ ಆಯ್ದು ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ಆರು ವ್ಯಕ್ತಿಗಳು, ಅವರಲ್ಲಿ,–

(i) ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಒಬ್ಬ ವ್ಯಕ್ತಿ;

(ii) ಇತರ ಹಿಂದುಳಿದ ವರ್ಗಗಳಿಗೆ ಸೇರಿದ ಒಬ್ಬ ವ್ಯಕ್ತಿ;

(iii) ಒಬ್ಬ ಮಹಿಳೆ;

(iv) ಧಾರ್ಮಿಕ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಒಬ್ಬ ವ್ಯಕ್ತಿ; ಮತ್ತು

(v) ಇತರೆ ಇಬ್ಬರು.

– ಇರತಕ್ಕದ್ದು

ಪರಂತು, ಘಟಕ ಕಾಲೇಜಿನಲ್ಲಿ ಅಥವಾ ವಿಶ್ವವಿದ್ಯಾಲಯದಲ್ಲಿ ಯಾವುದೇ ಸಾಮರ್ಥ್ಯದಲ್ಲಿ ನಿಯೋಜಿತನಾದ ಯಾವೊಬ್ಬ ವ್ಯಕ್ತಿಯೂ ನಾಮನಿರ್ದೇಶನಕ್ಕೆ ಅರ್ಹನಾಗಿರತಕ್ಕದ್ದಲ್ಲ.

(vi) ಕರ್ನಾಟಕ ವಿಧಾನಸಭೆಯಿಂದ ಮತ್ತು ಕರ್ನಾಟಕ ವಿಧಾನ ಪರಿಷತ್ತಿನಿಂದ ತಮ್ಮಲ್ಲಿಯೇ ಅನುಕ್ರಮವಾಗಿ ಚುನಾಯಿತರಾದ ಒಬ್ಬೊಬ್ಬ ಸದಸ್ಯರು.

ಸಿ. ಕರ್ನಾಟಕ ಜಾನಪದ ವಿಶ್ವವಿದ್ಯಾಲಯ:

(ಎ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ಅಥವಾ ಉಪ ಕಾರ್ಯದರ್ಶಿ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಅತನ ನಾಮನಿರ್ದೇಶಿತರು;

(ಬಿ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು;

(ಸಿ) ಜ್ಯೇಷ್ಠತೆಯ ಆಧಾರದ ಮೇಲೆ ಸರದಿಯ ಮೇಲೆ ಒಂದು ವರ್ಷದ ಅವಧಿಗಾಗಿ ಕುಲಪತಿಯವರಿಂದ ನಾಮನಿರ್ದೇಶಿತರಾದ ಒಬ್ಬ ಡೀನ್;

(ಡಿ) ಮೂರು ವರ್ಷಗಳ ಅವಧಿಗಾಗಿ ಸರ್ಕಾರವು ನಾಮನಿರ್ದೇಶನ ಮಾಡಿದ ಖ್ಯಾತ ಜಾನಪದ ತಜ್ಞರ ಪೈಕಿ ಆರು ಶ್ರೇಷ್ಠ ಜನಪದ ಅಧ್ಯಾಯಿಗಳು, ಅವರಲ್ಲಿ,–

(i) ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಗಳಿಗೆ ಸೇರಿದ ಒಬ್ಬರು ಇರತಕ್ಕದ್ದು;

(ii) ಇತರ ಹಿಂದುಳಿದ ವರ್ಗಗಳಿಗೆ ಸೇರಿದ ಒಬ್ಬರು ಇರತಕ್ಕದ್ದು;

(iii) ಒಬ್ಬರು ಮಹಿಳೆ ಇರತಕ್ಕದ್ದು;

(iv) ಧಾರ್ಮಿಕ ಅಲ್ಪಸಂಖ್ಯಾತರಿಗೆ ಸೇರಿದ ಒಬ್ಬರು ಇರತಕ್ಕದ್ದು;

(v) ಇತರೆ ಇಬ್ಬರು ಇರತಕ್ಕದ್ದು:

ಡಿ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ:

(ಎ) ಮಹಾನಿರ್ದೇಶಕರು, ಪುರಾತತ್ವ ಇಲಾಖೆ, ಭಾರತ ಸರ್ಕಾರ ಅಥವಾ ಅವರ ನಾಮನಿರ್ದೇಶಿತರು;

(ಬಿ) ಪ್ರಸಿದ್ಧ ಶಿಕ್ಷಣ ತಜ್ಞರು, ಸಂಸ್ಕೃತ ವಿದ್ವಾಂಸರು ಅಥವಾ ಇತರ ವೃತ್ತಿಗಳ ವ್ಯಕ್ತಿಗಳ ಪೈಕಿಯಿಂದ ಕುಲಾಧಿಪತಿಯವರು ನಾಮನಿರ್ದೇಶಿಸಿದ ಇಬ್ಬರು ಸದಸ್ಯರು, ಇವರ ಪೈಕಿ ಒಬ್ಬರು ಮಹಿಳೆ ಆಗಿರತಕ್ಕದ್ದು.

(ಸಿ) ಪ್ರಸಿದ್ಧ ಸಂಸ್ಕೃತ ಶಿಕ್ಷಣ ತಜ್ಞರು ಅಥವಾ ಸಂಸ್ಕೃತ ಸಾಹಿತ್ಯಕೃತಿ ರಚಿಸಿದ ಪ್ರಸಿದ್ಧ ವ್ಯಕ್ತಿಗಳು ಮತ್ತು ಪ್ರಶಸ್ತಿ ವಿಜೇತರು ಅಥವಾ ಇತರ ವೃತ್ತಿಗಳ ವ್ಯಕ್ತಿಗಳಿಂದ ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ಆರು ವ್ಯಕ್ತಿಗಳು, ಅವರಲ್ಲಿ,–

(i) ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಒಬ್ಬ ವ್ಯಕ್ತಿ;

(ii) ಇತರ ಹಿಂದುಳಿದ ವರ್ಗಗಳಿಗೆ ಸೇರಿದ ಒಬ್ಬ ವ್ಯಕ್ತಿ,

(iii) ಒಬ್ಬ ಮಹಿಳೆ

(iv) ಧಾರ್ಮಿಕ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಒಬ್ಬ ವ್ಯಕ್ತಿ ಮತ್ತು

(v) ಇತರೆ ಇಬ್ಬರು.

ಇ. ಮಂಡ್ಯ ಏಕಾತ್ಮಕ ಸ್ವರೂಪದ ವಿಶ್ವವಿದ್ಯಾಲಯ, ಮಂಡ್ಯ

ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ವಿಶ್ವವಿದ್ಯಾಲಯದ ಕಾರ್ಯ ನಿರ್ವಾಹಕ ಪರಿಷತ್ತು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು:

(ಎ) ಕುಲಪತಿ/ನಿರ್ದೇಶಕರು (ಛೇರ್ಮನ್);

(ಬಿ) ಕಾಲೇಜು ಶಿಕ್ಷಣದ ಆಯುಕ್ತರು ಅಥವಾ ಜಂಟಿ ನಿರ್ದೇಶಕರ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಅತನ ನಾಮನಿರ್ದೇಶಿತರು;

(ಸಿ) ಜ್ಯೇಷ್ಠತೆಯ ಅನುಸಾರವಾಗಿ, ಸರದಿಯ ಮೇಲೆ, ಒಂದು ವರ್ಷದ ಅವಧಿಗಾಗಿ ಕುಲಪತಿಯವರು/ಸಂಬಂಧಪಟ್ಟ ವಿಶ್ವವಿದ್ಯಾಲಯದ ನಿರ್ದೇಶಕರು ನಾಮನಿರ್ದೇಶನ ಮಾಡಿದ ವ್ಯಾಸಂಗಕ್ರಮದ (ಫ್ಯಾಕಲ್ಟಿ) ಡೀನ್;

(ಡಿ) ವಿಶ್ವವಿದ್ಯಾಲಯಗಳ ನಿವೃತ್ತ ಕುಲಪತಿಗಳು/ರಾಷ್ಟ್ರೀಯ ಪ್ರಾಮುಖ್ಯತೆಯುಳ್ಳ ಸಂಸ್ಥೆಗಳ ನಿರ್ದೇಶಕರು/ಪ್ರಾಧ್ಯಾಪಕರುಗಳಿಗೆ ಆದ್ಯತೆಯನ್ನು ನೀಡಿ, ಶ್ರೇಷ್ಠ ಶಿಕ್ಷಣ ತಜ್ಞರು ಮತ್ತು ವಿಜ್ಞಾನಿಗಳ ಪೈಕಿ, ಮೂರು ವರ್ಷಗಳ ಅವಧಿಗಾಗಿ, ಕುಲಾಧಿಪತಿಯವರು ನಾಮನಿರ್ದೇಶನ ಮಾಡಿದ ಒಬ್ಬ ವ್ಯಕ್ತಿ;

(ಇ) ವೃತ್ತಿ ವಿದ್ಯಾರ್ಹತೆಯೊಂದಿಗೆ ಸ್ನಾತಕೋತ್ತರ ಪದವಿ/ಪದವಿಯ ಕನಿಷ್ಠ ವಿದ್ಯಾರ್ಹತೆಯನ್ನು ಹೊಂದಿರುವ, ಮೂರು ವರ್ಷಗಳ ಅವಧಿಗಾಗಿ ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಮೂವರು ವ್ಯಕ್ತಿಗಳು, ಅವರಲ್ಲಿ ಅನುಸೂಚಿತ ಜಾತಿಗಳು/ಅನುಸೂಚಿತ ಪಂಗಡಗಳಿಗೆ ಸೇರಿದ, ಅಲ್ಪಸಂಖ್ಯಾತರು/ಇತರ ಹಿಂದುಳಿದ ವರ್ಗಗಳಿಗೆ ಸೇರಿದ ಮತ್ತು ಇತರ ವರ್ಗಕ್ಕೆ ಸೇರಿದ ಒಬ್ಬೊಬ್ಬರು, ಅವರ ಪೈಕಿ ಒಬ್ಬರು ಮಹಿಳೆಯರಿರತಕ್ಕದ್ದು;

(ಎಫ್) ಕುಲಪತಿಯವರು ನಾಮನಿರ್ದೇಶನ ಮಾಡಿದ, ವಿದ್ಯಾಲಯದಲ್ಲಿ ಸಂಬಂಧಪಟ್ಟ ಅಧ್ಯಯನಗಳ ವಿಭಾಗದೊಳಗೆ ವಿಷಯವನ್ನು ಬೋಧಿಸುತ್ತಿರುವ ಇಬ್ಬರು ಶಿಕ್ಷಕರು;

(ಜಿ) ಜ್ಯೇಷ್ಠತೆಯ ಆಧಾರದಲ್ಲಿ ಸರದಿಯ ಮೂಲಕ ಒಂದು ವರ್ಷದ ಅವಧಿಗಾಗಿ ಕುಲಪತಿಯವರು/ನಿರ್ದೇಶಕರು ನಾಮನಿರ್ದೇಶನ ಮಾಡಿದ ಸಂಬಂಧಪಟ್ಟ ವಿಶ್ವವಿದ್ಯಾಲಯದ ಒಬ್ಬರು ಪ್ರಾಧ್ಯಾಪಕರು.

(ಎಚ್) ಸರದಿಯ ಮೂಲಕ, ಒಂದು ವರ್ಷದ ಅವಧಿಗಾಗಿ ಕುಲಪತಿಯವರು/ನಿರ್ದೇಶಕರು ನಾಮನಿರ್ದೇಶನ ಮಾಡಿದ ಸಂಬಂಧಪಟ್ಟ ವಿಶ್ವವಿದ್ಯಾಲಯದ ಪ್ರಸಿದ್ಧರಾದ ಒಬ್ಬರು ಹಳೆಯ ವಿದ್ಯಾರ್ಥಿ (alumnus).

(ಐ) ರಿಜಿಸ್ಟ್ರಾರ್‌ರವರು ಕಾರ್ಯದರ್ಶಿಯಾಗಿರತಕ್ಕದ್ದು.

ಎಫ್. ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ, ಬೆಂಗಳೂರು.

ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ, ಬೆಂಗಳೂರು ಇದರ ಕಾರ್ಯನಿರ್ವಾಹಕ ಪರಿಷತ್ತು, ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು:

(ಎ) ಕುಲಪತಿ/ನಿರ್ದೇಶಕರು (ಛೇರ್ಮನ್);

(ಬಿ) ಕಾಲೇಜು ಶಿಕ್ಷಣದ ಆಯುಕ್ತರು ಅಥವಾ ಜಂಟಿ ನಿರ್ದೇಶಕರ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಅತನ ನಾಮನಿರ್ದೇಶಿತರು;

(ಸಿ) ಜ್ಯೇಷ್ಠತೆಯ ಅನುಸಾರವಾಗಿ, ಸರದಿಯ ಮೇಲೆ, ಒಂದು ವರ್ಷದ ಅವಧಿಗಾಗಿ ಕುಲಪತಿಯವರು/ಸಂಬಂಧಪಟ್ಟ ವಿಶ್ವವಿದ್ಯಾಲಯದ ನಿರ್ದೇಶಕರು ನಾಮನಿರ್ದೇಶನ ಮಾಡಿದ ವ್ಯಾಸಂಗ ವಿಭಾಗ (ಫ್ಯಾಕಲ್ಟಿ) ಡೀನ್;

(ಡಿ) ವಿಶ್ವವಿದ್ಯಾಲಯಗಳ ನಿವೃತ್ತ ಕುಲಾಧಿಪತಿಗಳು/ರಾಷ್ಟ್ರೀಯ ಪ್ರಾಮುಖ್ಯತೆಯುಳ್ಳ ಸಂಸ್ಥೆಗಳ ನಿರ್ದೇಶಕರು/ಪ್ರಾಧ್ಯಾಪಕರುಗಳಿಗೆ ಆದ್ಯತೆಯನ್ನು ನೀಡಿ, ಶ್ರೇಷ್ಠ ಶಿಕ್ಷಣ ತಜ್ಞರು ಮತ್ತು ವಿಜ್ಞಾನಿಗಳ ಪೈಕಿ, ಮೂರು ವರ್ಷಗಳ ಅವಧಿಗಾಗಿ, ಕುಲಾಧಿಪತಿಯವರು ನಾಮನಿರ್ದೇಶನ ಮಾಡಿದ ಒಬ್ಬ ವ್ಯಕ್ತಿ;

(ಇ) ವೃತ್ತಿ ವಿದ್ಯಾರ್ಹತೆಯೊಂದಿಗೆ ಸ್ನಾತಕೋತ್ತರ ಪದವಿ/ಪದವಿಯ ಕನಿಷ್ಠ ವಿದ್ಯಾರ್ಹತೆಯನ್ನು ಹೊಂದಿರುವ, ಮೂರು ವರ್ಷಗಳ ಅವಧಿಗಾಗಿ ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಮೂವರು ವ್ಯಕ್ತಿಗಳು, ಅವರಲ್ಲಿ ಅನುಸೂಚಿತ ಜಾತಿಗಳು/ಅನುಸೂಚಿತ ಪಂಗಡಗಳಿಗೆ ಸೇರಿದ, ಅಲ್ಪಸಂಖ್ಯಾತರು/ಇತರ ಹಿಂದುಳಿದ ವರ್ಗಗಳಿಗೆ ಸೇರಿದ ಮತ್ತು ಇತರ ವರ್ಗಕ್ಕೆ ಸೇರಿದ ಒಬ್ಬೊಬ್ಬರು, ಅವರ ಪೈಕಿ ಒಬ್ಬರು ಮಹಿಳೆಯರಿರತಕ್ಕದ್ದು;

(ಎಫ್) ಕುಲಪತಿಯವರು ನಾಮನಿರ್ದೇಶನ ಮಾಡಿದ, ವಿದ್ಯಾಲಯದಲ್ಲಿ ಸಂಬಂಧಪಟ್ಟ ಅಧ್ಯಯನಗಳ ವಿಭಾಗದೊಳಗೆ ವಿಷಯವನ್ನು ಬೋಧಿಸುತ್ತಿರುವ ಇಬ್ಬರು ಶಿಕ್ಷಕರು;

(ಜಿ) ಜ್ಯೇಷ್ಠತೆಯ ಆಧಾರದಲ್ಲಿ ಸರದಿಯ ಮೂಲಕ ಒಂದು ವರ್ಷದ ಅವಧಿಗಾಗಿ ಕುಲಪತಿಯವರು/ನಿರ್ದೇಶಕರು ನಾಮನಿರ್ದೇಶನ ಮಾಡಿದ ಸಂಬಂಧಪಟ್ಟ ವಿಶ್ವವಿದ್ಯಾಲಯದ ಒಬ್ಬರು ಪ್ರಾಧ್ಯಾಪಕರು.

(ಎಚ್) ಸರದಿಯ ಮೂಲಕ, ಒಂದು ವರ್ಷದ ಅವಧಿಗಾಗಿ ಕುಲಪತಿಯವರು/ನಿರ್ದೇಶಕರು ನಾಮನಿರ್ದೇಶನ ಮಾಡಿದ ಸಂಬಂಧಪಟ್ಟ ವಿಶ್ವವಿದ್ಯಾಲಯದ ಪ್ರಸಿದ್ಧರಾದ ಒಬ್ಬರು ಹಳೆಯ ವಿದ್ಯಾರ್ಥಿ (alumnus).

(ಐ) ರಿಜಿಸ್ಟ್ರಾರ್‌ರವರು ಕಾರ್ಯದರ್ಶಿಯಾಗಿರತಕ್ಕದ್ದು.

ಅನುಸೂಚಿ–(IV)

(32ನೇ ಪ್ರಕರಣವನ್ನು ನೋಡಿ)

ವಿದ್ಯಾ ವಿಷಯಕ ಪರಿಷತ್ತು

ಈ ಮುಂದಿನ ವಿಶೇಷ ಉದ್ದೇಶದ ವಿಶ್ವವಿದ್ಯಾನಿಲಗಳ ಸಂಬಂಧದಲ್ಲಿ ವಿದ್ಯಾವಿಷಯಕ ಪರಿಷತ್ತಿಗೆ ರಾಜ್ಯ ಸರ್ಕಾರವು ನಾಮನಿರ್ದೇಶಿಸಬೇಕಾಗಿರುವ ಹೆಚ್ಚುವರಿ ವ್ಯಕ್ತಿಗಳು, ಎಂದರೆ:–

ಎ. ಕನ್ನಡ ವಿಶ್ವವಿದ್ಯಾನಿಲಯ;

(ಎ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ, ಸರ್ಕಾರದ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ ಅಥವಾ ಉಪಕಾರ್ಯದರ್ಶಿ ದರ್ಜೆಗಿಂತ ಕಡಿಮೆ ಇರದ ದರ್ಜೆಯ ಆತನ ನಾಮನಿರ್ದೇಶಿತ;

(ಬಿ) ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ;

(ಸಿ) ಪ್ರಾಚ್ಯವಸ್ತು ನಿರ್ದೇಶಕರು;

(ಡಿ) ಕನ್ನಡ ವಿಶ್ವವಿದ್ಯಾನಿಲಯವು ಅಧ್ಯಯನಗಳನ್ನು ನಡೆಸುತ್ತಿರುವ ಕನ್ನಡ ಸಾಹಿತ್ಯ, ಇತಿಹಾಸ, ಕರ್ನಾಟಕ ಸಂಸ್ಕೃತಿ, ನಾಟಕ, ವಸ್ತುಶಿಲ್ಪ, ಪುರಾತತ್ವ, ಶಿಲ್ಪಶಾಸ್ತ್ರ, ಚಿತ್ರಕಲೆ, ಜಾನಪದ, ಧರ್ಮ, ತತ್ತ್ವಶಾಸ್ತ್ರ, ಸಾಮಾಜಿಕ ಚಳುವಳಿಗಳು ಮತ್ತು ಇತರ ತತ್ಸಂಬಂಧಿ ಕ್ಷೇತ್ರಗಳಲ್ಲಿ ತಮ್ಮ ಮಹೋನ್ನತ ಕೊಡುಗೆ ನೀಡಿರುವುದಕ್ಕಾಗಿ ಪ್ರಸಿದ್ಧರಾಗಿರುವ ಸರ್ಕಾರವು ನಾಮನಿರ್ದೇಶಿಸಿದ ಎಂಟು ಜನ, ಸರ್ಕಾರವು ನಿರ್ದಿಷ್ಟ ಪಡಿಸಿದಂತೆ ಇವರಲ್ಲಿ ಒಬ್ಬ ಸದಸ್ಯರು ಅನುಸೂಚಿತ ಜಾತಿಗೆ, ಒಬ್ಬರು ಅನುಸೂಚಿತ ಪಂಗಡಕ್ಕೆ ಸೇರಿರತಕ್ಕದ್ದು, ಒಬ್ಬರು ಮಹಿಳೆಯಾಗಿರತಕ್ಕದ್ದು, ಒಬ್ಬರು ಧರ್ಮದ ಆಧಾರದ ಮೇಲೆ ಅಲ್ಪಸಂಖ್ಯಾತ ವರ್ಗಕ್ಕೆ ಹಾಗೂ ಒಬ್ಬರು ಹಿಂದುಳಿದ ವರ್ಗಗಳಿಗೆ ಸೇರಿದವರಾಗಿರತಕ್ಕದ್ದು.

ಬಿ. ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾಲಯ;

(ಎ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ ಅಥವಾ ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆ ಇರದ ಆತನ ನಾಮನಿರ್ದೇಶಿತ;

(ಬಿ) ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ;

(ಸಿ) ಗಾಯನ ಸಂಗೀತ ಮತ್ತು ಪ್ರದರ್ಶನ ಕಲೆಗಳು, ವಾದ್ಯ ಸಂಗೀತ ಮತ್ತು ಸಂಗೀತ ಶಾಸ್ತ್ರ ಕ್ಷೇತ್ರಗದಲ್ಲಿ ತಮ್ಮ ಮಹೋನ್ನತ ಕೊಡುಗೆ ನೀಡಿರುವ, ಸರ್ಕಾರವು ನಾಮನಿರ್ದೇಶನ ಮಾಡಿದ ಎಂಟು ಜನ, ಸರ್ಕಾರವು ನಿರ್ದಿಷ್ಟಪಡಿಸಿದಂತೆ ಇವರಲ್ಲಿ ಒಬ್ಬ ಸದಸ್ಯನು ಅನುಸೂಚಿತ ಜಾತಿಗೆ ಮತ್ತು ಒಬ್ಬ ಸದಸ್ಯನು ಅನುಸೂಚಿತ ಪಂಗಡಕ್ಕೆ ಸೇರಿದವರಾಗಿರತಕ್ಕದ್ದು, ಒಬ್ಬರು ಮಹಿಳೆಯಾಗಿರತಕ್ಕದ್ದು, ಒಬ್ಬರು ಧರ್ಮಾಧಾರಿತ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದವರಾಗಿರತಕ್ಕದ್ದು ಮತ್ತು ಒಬ್ಬರು ಹಿಂದುಳಿದ ವರ್ಗಗಳಿಗೆ ಸೇರಿದವರಾಗಿರತಕ್ಕದ್ದು.

ಸಿ. ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ:

(ಎ) ಜಾನಪದದಲ್ಲಿ ತಜ್ಞರಾಗಿರುವವರ ಪೈಕಿಯಿಂದ ಮೂರು ವರ್ಷಗಳ ಅವಧಿಗಾಗಿ ಸರ್ಕಾರವು ನಾಮನಿರ್ದೇಶಿಸಿದ ಆರು ವ್ಯಕ್ತಿಗಳು, ಇವರಲ್ಲಿ ಒಬ್ಬ ಸದಸ್ಯರು ಅನುಸೂಚಿತ ಜಾತಿಗೆ ಅಥವಾ ಅನುಸೂಚಿತ ಪಂಗಡಕ್ಕೆ, ಒಬ್ಬರು ಇತರ ಹಿಂದುಳಿದ ವರ್ಗಕ್ಕೆ ಸೇರಿದವರಾಗಿರತಕ್ಕದ್ದು. ಒಬ್ಬರು ಮಹಿಳೆಯರನ್ನು ಪ್ರತಿನಿಧಿಸತಕ್ಕದ್ದು, ಒಬ್ಬರು ಧಾರ್ಮಿಕ ಅಲ್ಪಸಂಖ್ಯಾತರನ್ನು ಹಾಗೂ ಇಬ್ಬರು ಇತರರನ್ನು ಪ್ರತಿನಿಧಿಸುವವರಾಗಿರತಕ್ಕದ್ದು;

(ಬಿ) ಅಧ್ಯಕ್ಷ, ಕರ್ನಾಟಕ ಜಾನಪದ ಅಕಾಡೆಮಿ;

(ಸಿ) ಅಧ್ಯಕ್ಷ, ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ;

(ಡಿ) ಅಧ್ಯಕ್ಷ, ತುಳು ಅಕಾಡೆಮಿ;

(ಇ) ಅಧ್ಯಕ್ಷ, ಕೊಡವ ಅಕಾಡೆಮಿ;

(ಎಫ್) ಅಧ್ಯಕ್ಷ, ಕನ್ನಡ ಸಾಹಿತ್ಯ ಪರಿಷತ್ತು;

(ಜಿ) ಅಧ್ಯಕ್ಷ, ಕರ್ನಾಟಕ ಸಾಹಿತ್ಯ ಅಕಾಡೆಮಿ;

(ಹೆಚ್) ಅಧ್ಯಕ್ಷ, ಕರ್ನಾಟಕ ಲಲಿತಕಲಾ ಅಕಾಡೆಮಿ;

(ಐ) ನಿರ್ದೇಶಕ, ವಿದ್ಯಾವಿಷಯಕ, ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಲಿ;

(ಜೆ) ಕುಲಸಚಿವರು, ಸದಸ್ಯ ಕಾರ್ಯದರ್ಶಿ;

ಪರಂತು, ಯಾವುದೇ ಸಾಮರ್ಥ್ಯದಲ್ಲಿ ವಿಶ್ವವಿದ್ಯಾನಿಲಯದ ನಿಯೋಜನೆಯಲ್ಲಿರುವ ಯಾವೊಬ್ಬ ವ್ಯಕ್ತಿಯು ನಾಮನಿರ್ದೇಶನಕ್ಕೆ ಅರ್ಹನಾಗಿರತಕ್ಕದ್ದಲ್ಲ.

ಡಿ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ:

(ಎ) ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ;

(ಬಿ) ಪುರಾತತ್ವ ನಿರ್ದೇಶಕ;

(ಸಿ) ಸಂಸ್ಕೃತ ಸಾಹಿತ್ಯ, ಇತಿಹಾಸ, ನಾಟಕ, ವಾಸ್ತುಶಿಲ್ಪ, ಪುರಾತತ್ವ, ಶಿಲ್ಪಕಲೆ, ತತ್ವಶಾಸ್ತ್ರ, ಸಾಮಾಜಿಕ ಚಳುವಳಿಗಳು, ಕರ್ನಾಟಕ ಸಂಸ್ಕೃತ ಮತ್ತು ವೇದ ವಿಶ್ವವಿದ್ಯಾಲಯವು ಅಧ್ಯಯನ ನಡೆಸುತ್ತಿರುವ ವೇದಗಳು ಮತ್ತು ಇತರ ತತ್ಸಂಬಂಧಿ ಕ್ಷೇತ್ರಗಳಲ್ಲಿ ತಮ್ಮ ಮಹೋನ್ನತ ಕೊಡುಗೆ ನೀಡಿರುವುದಕ್ಕೆ ಪ್ರಸಿದ್ಧರಾಗಿರುವ ಸರ್ಕಾರವು ನಾಮನಿರ್ದೇಶಿಸಿದ ಎಂಟು ಜನ, ಇವರಲ್ಲಿ ಸರ್ಕಾರವು ನಿರ್ದಿಷ್ಟಪಡಿಸಿದಂತೆ ಒಬ್ಬರು ಅನುಸೂಚಿತ ಜಾತಿಗೆ ಮತ್ತು ಒಬ್ಬರು ಅನುಸೂಚಿತ ಪಂಗಡಕ್ಕೆ ಸೇರಿದವರಾಗಿರತಕ್ಕದ್ದು, ಒಬ್ಬರು ಮಹಿಳೆಯರಾಗಿರತಕ್ಕದ್ದು ಹಾಗೂ ಒಬ್ಬರು ಹಿಂದುಳಿದ ವರ್ಗಗಳಿಗೆ ಸೇರಿದವರಾಗಿರತಕ್ಕದ್ದು;

(ಡಿ) ಜ್ಯೇಷ್ಠತೆಯ ಕ್ರಮದಲ್ಲಿ ಸರದಿ ಮೂಲಕ ಎರಡು ವರ್ಷಗಳ ಅವಧಿಗಾಗಿ ಕುಲಪತಿಯು ನಾಮನಿರ್ದೇಶಿಸಿದ ಸಂಯೋಜಿತ ಕಾಲೇಜುಗಳ ಐವರಿಗಿಂತ ಹೆಚ್ಚಾಗಿರದ ಪ್ರಾಂಶುಪಾಲರು.

ಇ. ಮಂಡ್ಯ ಏತಾನ್ಮಕ ಸ್ವರೂಪದ ವಿಶ್ವವಿದ್ಯಾನಿಲಯ, ಮಂಡ್ಯ:

ಈ ಅಧಿನಿಯಮದಲ್ಲಿ ಏನೇ ಇದ್ದಾಗ್ಯೂ ಮಂಡ್ಯ ಏತಾನ್ಮಕ ಸ್ವರೂಪದ ವಿಶ್ವವಿದ್ಯಾನಿಲಯ ವಿದ್ಯಾವಿಷಯಕ ಪರಿಷತ್ತು ಈ ವಿಶ್ವವಿದ್ಯಾನಿಯಲಗಳ ಅತ್ಯುನ್ನತ ವಿದ್ಯಾವಿಷಯಕ ನಿಕಾಯವಾಗಿರಕ್ಕದ್ದು ಮತ್ತು ಅದು, ಈ ಮುಂದಿನ ಸಂಯೋಜನೆಯನ್ನು ಹೊಂದಿರತಕ್ಕದ್ದು, ಎಂದರೆ:–

(ಎ) ಕುಲಪತಿ/ನಿರ್ದೇಶಕ (ಅಧ್ಯಕ್ಷ);

(ಬಿ) ಕಾಲೇಜು ಶಿಕ್ಷಣದ ಆಯುಕ್ತ ಅಥವಾ ಜಂಟಿ ನಿರ್ದೇಶಕನ ದರ್ಜೆಗಿಂತ ಕಡಿಮೆ ಇರದ ದರ್ಜೆಯ ಆತನ ನಾಮನಿರ್ದೇಶಿತ;

(ಸಿ) ಪ್ರತಿಯೊಬ್ಬರನ್ನು ಮೂರು ವರ್ಷಗಳ ಅವಧಿಗಾಗಿ ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ ಕುಲಾಧಿಪತಿಯು ನಾಮನಿರ್ದೇಶಿಸಿದ ಸಂಶೋಧನೆ ಮತ್ತು ಅಭಿವೃದ್ಧಿ, ಕೈಗಾರಿಕೆ, ವಾಣಿಜ್ಯ, ಬ್ಯಾಂಕಿಂಗ್ ಅಥವಾ ಯಾವುದೇ ಇತರ ವೃತ್ತಿಗೆ ಸೇರಿದ ಸುಪ್ರಸಿದ್ಧ ಮತ್ತು ಅನುಭವಿ ಒಬ್ಬ ವ್ಯಕ್ತಿ;

(ಡಿ) ಸುಪ್ರಸಿದ್ಧ ಶಿಕ್ಷಣ ತಜ್ಞರ ಪಟ್ಟಿಯಿಂದ ಮೂರು ವರ್ಷಗಳ ಅವಧಿಗಾಗಿ ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ಮೂರು ಜನ ಸುಪ್ರಸಿದ್ಧ ಮತ್ತು ಅನುಭವಿ ವ್ಯಕ್ತಿಗಳು; ಇವರಲ್ಲಿ ಒಬ್ಬರು ಅನುಸೂಚಿತ ಜಾತಿ/ ಅನುಸೂಚಿತ ಪಂಗಡಗಳಿಗೆ ಹಾಗೂ ಒಬ್ಬರು ಇತರ ಹಿಂದುಳಿದ ವರ್ಗಗಳಿಗೆ ಹಾಗೂ ಒಬ್ಬರು ಇತರ ವರ್ಗಕ್ಕೆ ಸೇರಿದವರಾಗಿರತಕ್ಕದ್ದು.

(ಇ) ವಿಶ್ವವಿದ್ಯಾನಿಲಯದ ಎಲ್ಲಾ ವ್ಯಾಸಂಗ ವಿಭಾಗಗಳ ಡೀನ್‌ಗಳು;

(ಎಫ್) ಒಂದು ವರ್ಷದ ಅವಧಿಗಾಗಿ ರಾಜ್ಯ ಸರ್ಕಾರದ ಅನುಮೋದನೆಯೊಂದಿಗೆ ಕುಲಪತಿ/ನಿರ್ದೇಶಕರು ನಾಮನಿರ್ದೇಶಿಸಿದ ಸಂಬಂಧಪಟ್ಟ ವಿಶ್ವವಿದ್ಯಾನಿಲಯ ಒಬ್ಬ ಖ್ಯಾತ ಹಳೆಯ ವಿದ್ಯಾರ್ಥಿ;

(ಜಿ) ಪರೀಕ್ಷಾ ನಿಯಂತ್ರಕ;

(ಹೆಚ್) ಕುಲಸಚಿವರು ಕಾರ್ಯದರ್ಶಿಯಾಗಿರತಕ್ಕದ್ದು.

ಎಫ್. ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ, ಬೆಂಗಳೂರು:

ಈ ಅಧಿನಿಯಮದಲ್ಲಿ ಏನೇ ಇದ್ದರೂ, ವಿದ್ಯಾ ವಿಷಯಕ ಪರಿಷತ್ತು ಈ ವಿಶ್ವವಿದ್ಯಾಲಯಗಳ ಅತ್ಯುನ್ನತ ವಿದ್ಯಾವಿಷಯಕ ನಿಕಾಯವಾಗಿರತಕ್ಕದ್ದು ಮತ್ತು ಇದು ಈ ಮುಂದಿನವರಿಂದ ಸಂಯೋಜನೆವಾಗಿರತಕ್ಕದ್ದು, ಎಂದರೆ:–

(ಎ) ಕುಲಪತಿ/ನಿರ್ದೇಶಕ (ಅಧ್ಯಕ್ಷ);

(ಬಿ) ಕಾಲೇಜು ಶಿಕ್ಷಣದ ಆಯುಕ್ತ ಅಥವಾ ಜಂಟಿ ನಿರ್ದೇಶಕನ ದರ್ಜೆಗಿಂತ ಕಡಿಮೆ ಇರದ ದರ್ಜೆಯು ಆತನ ನಾಮನಿರ್ದೇಶಿತ;

(ಸಿ) ಪ್ರತಿ ಮೂರು ವರ್ಷಗಳ ಅವಧಿಗಾಗಿ ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ ಕುಲಾಧಿಪತಿಯು ನಾಮನಿರ್ದೇಶಿಸಿದ ಸಂಶೋಧನೆ ಮತ್ತು ಅಭಿವೃದ್ಧಿ, ಕೈಗಾರಿಕೆ, ವಾಣಿಜ್ಯ, ಬ್ಯಾಂಕಿಗ್ ಅಥವಾ ಯಾವುದೇ ಇತರ ವೃತ್ತಿಗೆ ಸೇರಿರುವ ಒಬ್ಬ ಸುಪ್ರಸಿದ್ಧ ಮತ್ತು ಅನುಭವಿ ವ್ಯಕ್ತಿ;

(ಡಿ) ಸುಪ್ರಸಿದ್ಧ ಶಿಕ್ಷಣ ತಜ್ಞರ ಪಟ್ಟಿಯಿಂದ ಮೂರು ವರ್ಷಗಳ ಅವಧಿಗಾಗಿ ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ಮೂರು ಜನ ಸುಪ್ರಸಿದ್ಧ ಮತ್ತು ಅನುಭವಿ ವ್ಯಕ್ತಿಗಳು; ಇವರಲ್ಲಿ ಅನುಸೂಚಿತ ಜಾತಿ/ ಅನುಸೂಚಿತ ಪಂಗಡಗಳಿಗೆ ಹಾಗೂ ಒಬ್ಬರು ಇತರ ಹಿಂದುಳಿದ ವರ್ಗಗಳಿಗೆ ಹಾಗೂ ಒಬ್ಬರು ಇತರ ವರ್ಗಕ್ಕೆ ಸೇರಿದವರಾಗಿರತಕ್ಕದ್ದು.

(ಇ) ವಿಶ್ವವಿದ್ಯಾಲಯಕ್ಕೆ ಎಲ್ಲಾ ವ್ಯಾಸಾಂಗ ವಿಭಾಗಗಳ ಡೀನ್‌ಗಳು;

(ಎಫ್) ಒಂದು ವರ್ಷದ ಅವಧಿಗಾಗಿ ರಾಜ್ಯ ಸರ್ಕಾರದ ಅನುಮೋದನೆಯೊಂದಿಗೆ ಕುಲಪತಿ/ನಿರ್ದೇಶಕರು ನಾಮನಿರ್ದೇಶಿಸಿದ ಸಂಬಂಧಪಟ್ಟ ವಿಶ್ವವಿದ್ಯಾನಿಲಯ ಒಬ್ಬ ಖ್ಯಾತ ಹಳೆಯ ವಿದ್ಯಾರ್ಥಿ;

(ಜಿ) ಪರೀಕ್ಷಾ ನಿಯಂತ್ರಕ;

(ಹೆಚ್) ಕುಲಸಚಿವರು ಕಾರ್ಯದರ್ಶಿಯಾಗಿರತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000ವು (2001ರ ಕರ್ನಾಟಕ ಅಧಿನಿಯಮ 29) ಒಂದು ಸಮಗ್ರ ಅಧಿನಿಯಮಿತಿಯಾಗಿದ್ದು ಇದು ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿ ಅಡಿಯಲ್ಲಿ ಬರುವ ರಾಜ್ಯ ವಿಶ್ವವಿದ್ಯಾನಿಲಯಗಳಿಗೆ ಸಂಬಂಧಿಸಿದ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 1976ನ್ನು (1976ರ ಕರ್ನಾಟಕ ಅಧಿನಿಯಮ 28) ಬದಲಾಯಿಸಿದೆ ಮತ್ತು ಅಂಥ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸುವಲ್ಲಿ ಜಾರಿಯಲ್ಲಿರುವ ಅನೇಕ ಅಧಿನಿಯಮಗಳನ್ನು ಬದಲಾಯಿಸಿದೆ ಹಾಗೂ ಅದಕ್ಕೆ ಸಂಬಂಧಿಸಿದ ಮತ್ತು ಅದಕ್ಕೆ ಪ್ರಾಸಂಗಿಕವಾದ ಇತರ ವಿಷಯಗಳನ್ನು ಒಳಗೊಂಡಿತ್ತು.

ಪ್ರಸ್ತುತ, ಏಳು ವಿಶ್ವವಿದ್ಯಾನಿಲಯಗಳ ಅಧಿನಿಯಮಗಳು ಜಾರಿಯಲ್ಲಿದ್ದು, ಪ್ರತಿಯೊಂದೂ ಕಾರ್ಯನಿರ್ವಹಣೆಯಲ್ಲಿ ವಿಭಿನ್ನವಾಗಿರುತ್ತದೆ. ಈ ವಿಶ್ವವಿದ್ಯಾನಿಲಯಗಳ ಮೇಲ್ವಿಚಾರಣೆಯನ್ನು ಮಾಡುವಲ್ಲಿ ಏಕರೂಪತೆಯನ್ನು ತರುವುದು ಅವಶ್ಯಕವಾಗಿದೆ ಎಂದು ರಾಜ್ಯ ಸರ್ಕಾರವು ಪರಿಗಣಿಸಿದೆ.

ಆದ್ದರಿಂದ, ಎಲ್ಲಾ ಅಂಥ ರಾಜ್ಯ ವಿಶ್ವವಿದ್ಯಾನಿಲಯಗಳ ಶೈಕ್ಷಣಿಕ ಸಾಧನೆ, ಪರಿಶೋಧನೆ, ವಿಸ್ತರಣೆ ಮತ್ತು ಸಂಬಂಧಿತ ಚಟುವಟಿಕೆಗಳ ವಿಶೇಷ ಗುಣಲಕ್ಷಣಗಳನ್ನು ಉಳಿಸಿಕೊಂಡು, ಈ ಅಂಶಗಳು ಅವುಗಳ ಮುಂದಿನ ಬೆಳವಣಿಗೆಗೆ ಪರಿಣಾಮಕಾರಿಯಾಗಿ ಬಳಕೆಯಾಗಿ, ಅವುಗಳ ನಿರ್ವಹಣೆಯನ್ನು ಕ್ರೋಢೀಕರಿಸುವ ಮತ್ತು ವೃದ್ಧಿಸುವ ಹಾಗೂ ಆಡಳಿತದಲ್ಲಿ ಏಕರೂಪತೆಯನ್ನು ತರುವ ಗುರಿಯನ್ನು ಈ ಮೂಲಕ ಉದ್ದೇಶಿಸಲಾಗಿರುವ ಹೊಸ ಶಾಸನವು ಹೊಂದಿದೆ.

ಪರಂತು, ಇವು, ವಿಶ್ವವಿದ್ಯಾನಿಲಯಗಳ ಆಡಳಿತ ಮತ್ತು ಹಣಕಾಸು ವ್ಯವಸ್ಥಾಪನೆಗೆ ಸಂಬಂಧಿಸಿದ ಹೊಸ ಅಧಿನಿಯಮಿತಿಯ ಉಪಬಂಧಗಳೊಂದಿಗೆ ವಿರುದ್ಧವಾಗಿರುವುದಿಲ್ಲ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕ, 2017, ಇದು ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯಡಿಯಲ್ಲಿನ ಅಸ್ತಿತ್ವದಲ್ಲಿರುವ ಎಲ್ಲಾ ರಾಜ್ಯ ವಿಶ್ವವಿದ್ಯಾನಿಲಯಗಳನ್ನು, ತಮ್ಮ ಆಡಳಿತ ಮತ್ತು ಪ್ರಕಾರ್ಯಗಳ ಕುರಿತು ಅನುಸರಿಸಬೇಕಾದ ಸಾಮಾನ್ಯ ನಿಯಮಗಳನ್ನು ಖಚಿತ ಪಡಿಸಿಕೊಳ್ಳುವುದಕ್ಕೆ, ಒಂದೇ ಸೂರಿನಡಿಯಲ್ಲಿ ತರುತ್ತಿದೆ.

ಮೇಲಿನ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು, ಈ ವಿಧೇಯಕದಲ್ಲಿ ಈ ಮುಂದಿನ ಪ್ರಮುಖವಾದ ಬದಲಾವಣೆಗಳನ್ನು ತರಲಾಗಿದೆ, ಎಂದರೆ:–

(1) ಈ ವಿಧೇಯಕದ ಅಡಿಯಲ್ಲಿ ಕುಲಪತಿಯ ನೇಮಕಾತಿಯ ಉದ್ದೇಶದ ಶೋಧನಾ ಮತ್ತು ಆಯ್ಕೆ ಸಮಿತಿಯು ಈ ಮುಂದಿನವರನ್ನು, ಎಂದರೆ, ಕುಲಪತಿಗಳು, ಮಾಜಿ ಕುಲಪತಿಗಳು ಅಥವಾ ರಾಷ್ಟ್ರೀಯ ಪ್ರಾಮುಖ್ಯತೆಯ ಸಂಸ್ಥೆಗಳ ನಿರ್ದೇಶಕರ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಪ್ರಸಿದ್ಧ ಶಿಕ್ಷಣ ತಜ್ಞರನ್ನು ಮಾತ್ರ ಒಳಗೊಂಡಿರುತ್ತದೆ.

(2) ನಿರಸಿತ ಅಧಿನಿಯಮಗಳಲ್ಲಿನ ಸೆನೆಟ್, ಸಿಂಡಿಕೇಟ್ ಅಥವಾ ಕಾರ್ಯನಿರ್ವಾಹಕ ಪರಿಷತ್ತು ಇವುಗಳನ್ನು ಕಾರ್ಯನಿರ್ವಾಹಕ ಪರಿಷತ್ತು ಎಂದು ಮರು ನಾಮಗೊಳಿಸಿದೆ.

(3) ವಿಶ್ವವಿದ್ಯಾನಿಲಯದ ಪರಿಣಾಮಕಾರಿ ಚರ್ಚೆಗಳು ಮತ್ತು ಶೈಕ್ಷಣಿಕ ಗುಣಮಟ್ಟಗಳನ್ನು ನಿರ್ವಹಿಸುವುದಕ್ಕಾಗಿ ವಿಧೇಯಕದಲ್ಲಿ ಕಾರ್ಯನಿರ್ವಾಹಕ ಪರಿಷತ್ತಿನ ಮತ್ತು ವಿದ್ಯಾವಿಷಯಕ ಪರಿಷತ್ತಿನ ಸದಸ್ಯರನ್ನು ನಾಮನಿರ್ದೇಶನ ಮಾಡಲು ವಿದ್ಯಾರ್ಹತೆಗಳನ್ನು ನಿರ್ದಿಷ್ಟಪಡಿಸಲಾಗಿದೆ.

(4) ಹೊಸ ವಿಧೇಯಕದಲ್ಲಿ ಕುಲಪತಿಯ ನೇಮಕಾತಿಗಾಗಿ ವಿದ್ಯಾರ್ಹತೆಯನ್ನು ನಿರ್ದಿಷ್ಟಪಡಿಸಲಾಗಿದೆ.

(5) ವಿಶ್ವವಿದ್ಯಾನಿಲಯದ ಉತ್ತಮ ಆಡಳಿತ ಮತ್ತು ಸುಗಮ ಕಾರ್ಯನಿರ್ವಾಹಣೆಗಾಗಿ ಕುಲಪತಿಯ ಪದವು ಖಾಲಿಯಾದಾಗ ಕಾರ್ಯನಿರ್ವಹಣೆಯ ವ್ಯವಸ್ಥೆಯನ್ನು ಮಾಡಲು ಉಪಬಂಧಿಸಲಾಗಿದೆ ಮತ್ತು ಪ್ರಸ್ತುತ ಕುಲಸಚಿವ (ಮೌಲ್ಯಮಾಪನ) ಇವರನ್ನು ಪರೀಕ್ಷಾ ನಿಯಂತ್ರಕರು ಎಂದು ಮರು ನಾಮಗೊಳಿಸಲಾಗಿದೆ.

(6) ರಾಜ್ಯದಲ್ಲಿನ ವಿಶ್ವವಿದ್ಯಾನಿಲಯಗಳಲ್ಲಿಯ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ಪ್ರಾರಂಭಿಕ ನೇರ ನೇಮಕಾತಿಯಲ್ಲಿ ಗುಣಮಟ್ಟವನ್ನು ಹೆಚ್ಚಿಸಲು ಮತ್ತು ಕಾರ್ಯವಿಧಾನದಲ್ಲಿ ಪಾರದರ್ಶಕತೆಯನ್ನು ತರಲು ರಾಜ್ಯ ಸರ್ಕಾರದ ಮೂಲಕ ಒಂದು ಸಾಮಾನ್ಯ ನೇಮಕಾತಿ ಮಂಡಲಿಯನ್ನು ಸ್ಥಾಪಿಸಲಾಗಿದೆ.

(7) ಅಕ್ರಮತೆಗಳನ್ನು ತಪ್ಪಿಸಲು ಮತ್ತು ಪ್ರಮಾಣಕಗಳ ಅನ್ವಯ ಪ್ರಕ್ರಿಯೆಯನ್ನು ಶೀಘ್ರಗೊಳಿಸಲು ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಿಗಾಗಿ ರಾಜ್ಯ ಸರ್ಕಾರವು ಮೂಲ ಸೌಕರ್ಯ ಅಭಿವೃದ್ಧಿಗಾಗಿ ಒಂದು ಸಾಮಾನ್ಯ ಮಂಡಲಿಯನ್ನು ಸ್ಥಾಪಿಸಿದೆ.

(8) ಏಕಾತ್ಮಕ ಸ್ವರೂಪದ ಅಥವಾ ಕ್ಲಸ್ಟರ್ ವಿಶ್ವವಿದ್ಯಾನಿಲಯಗಳ ವಿಶೇಷ ಲಕ್ಷಣಗಳನ್ನು ಸಂರಕ್ಷಿಸಿಕೊಂಡು ಅವುಗಳ ಕ್ರಮಬದ್ಧ ಕಾರ್ಯನಿರ್ವಹಣೆ ಮತ್ತು ನಿಯಂತ್ರಣಕ್ಕಾಗಿ ಉಪಬಂಧಗಳನ್ನು ಮಾಡಲಾಗಿದೆ.

(9) ಸಮಾನವಾದ, ಶೀಘ್ರವಾದ ಮತ್ತು ಪರಿಣಾಮಕಾರಿ ನಿರ್ಧಾರವನ್ನು ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಕುಲಾಧಿಪತಿಯು ರಾಜ್ಯ ಸರ್ಕಾರದೊಡನೆ ಸಮಾಲೋಚಿಸಿ ಎಲ್ಲಾ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತು ಜ್ಞಾಪನ ಪತ್ರ

ಖಂಡ 47: (1)ನೇ ಉಪಖಂಡವು ಈ ಅಧಿನಿಯಮದ ಎಲ್ಲಾ ಅಥವಾ ಯಾವುದೇ ಉದ್ದೇಶವನ್ನು ನೆರವೇರಿಸಲು, ವಿಶೇಷವಾಗಿ ನೇರ ನೇಮಕಾತಿಗಾಗಿ ವ್ಯಕ್ತಿಗಳ ಆಯ್ಕೆಯ ಸಾಮಾನ್ಯ ಮಂಡಲಿ, ಉನ್ನತ ಶಿಕ್ಷಣ ಮೂಲ ಸೌಕರ್ಯ ಅಭಿವೃದ್ಧಿ ಮಂಡಲಿ ಮತ್ತು ವಿಶ್ವವಿದ್ಯಾನಿಲಯ ಪುನರಾವಲೋಕನ ಆಯೋಗ ಇವುಗಳ ರಚನೆ, ಅಧಿಕಾರಗಳು ಮತ್ತು ಪ್ರಕಾರ್ಯಗಳ ಕುರಿತು, ಪೂರ್ವ ಪ್ರಕಟಣೆಯ ತರುವಾಯ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಖಂಡ 60: (2)ನೇ ಉಪಖಂಡವು, ಮಂಡಲಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು ಹಾಗೂ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಮತ್ತು ಆಯ್ಕೆಯಾದ ಅಭ್ಯರ್ಥಿಗಳನ್ನು ಯಾವುದೇ ವಿಶ್ವವಿದ್ಯಾಲಯಕ್ಕೆ ಹಂಚಿಕೆ ಮಾಡುವ ವಿಧಾನದ ಕುರಿತಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಖಂಡ 85: (1)ನೇ ಉಪಖಂಡವು, ಉನ್ನತ ಶಿಕ್ಷಣ ಮೂಲಸೌಕರ್ಯ ಅಭಿವೃದ್ಧಿ ಮಂಡಲಿಯು ಯಾವ ಮೊಬಲಗಿಗಿಂತ ಹೆಚ್ಚಿನ ಮೊಬಲಗಿನ ಕಾಮಗಾರಿ ಮತ್ತು ಮುಲಸೌಕರ್ಯದ ಅಭಿವೃದ್ಧಿಯ ಮೇಲ್ವಿಚಾರಣೆಯನ್ನು ಮಾಡಬೇಕೋ ಆ ಹೆಚ್ಚಿನ ಮೊತ್ತವನ್ನು ನಿಯಮಗಳ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

(2) (6)ನೇ ಉಪ ಖಂಡವು ಉನ್ನತ ಶಿಕ್ಷಣ ಮೂಲಸೌಕರ್ಯ ಅಭಿವೃದ್ಧಿ ಮಂಡಲಿಯ ಅಧಿಕಾರಗಳು, ಪ್ರಕಾರ್ಯಗಳು ಮತ್ತು ಕರ್ತವ್ಯಗಳ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಪ್ರಸ್ತಾವಿತ ಪ್ರತ್ಯಾಯೋಜಿತ ಶಾಸನಾತ್ಮಕ ಅಧಿಕಾರವು ವಾಡಿಕೆಯ ಸ್ವರೂಪದ್ದಾಗಿದೆ.

ಬಸವರಾಜ ರಾಯರೆಡ್ಡಿ
ಉನ್ನತ ಶಿಕ್ಷಣ ಮಂತ್ರಿಗಳು.

ಎಸ್. ಮೂರ್ತಿ
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY
FOURTEENTH LEGISLATIVE ASSEMBLY
FOURTEENTH SESSION
THE KARNATAKA STATE UNIVERSITIES BILL, 2017
(L.A. Bill No. 26 of 2017)

ಹಾಗೂ ಬುಡಕಟ್ಟು ಉಪ ಯೋಜನೆ ನಿಧಿಯೆಂದು ಕರೆಯತಕ್ಕದ್ದು. ಒಂದು ನಿರ್ದಿಷ್ಟ ಹಣಕಾಸು ವರ್ಷಕ್ಕೆ ಹಂಚಿಕೆ ಮಾಡಿರುವ ಮೊತ್ತವು ಖರ್ಚಾಗದೆ ಉಳಿದ ಸಂದರ್ಭದಲ್ಲಿ, ಅದನ್ನು ಮುಂದಿನ ಹಣಕಾಸು ವರ್ಷದ ಹಂಚಿಕೆಗೆ ಸೇರಿಸಬಹುದು, ಆದರೆ ಆ ವರ್ಷವೂ ಮೀರಿದ ನಂತರ ಅದನ್ನು ಮುಂದುವರೆಸತಕ್ಕದ್ದಲ್ಲ:

xx xx xx

15. ಅನುಸೂಚಿತ ಜಾತಿ ಉಪ–ಯೋಜನೆಗಳು ಹಾಗೂ ಬುಡಕಟ್ಟು ಉಪ–ಯೋಜನೆಗಳ ಅಡಿಯಲ್ಲಿ ಸೇರಿಸಬೇಕಾದ ಸ್ಕೀಮುಗಳು.– ಇಲಾಖೆಗಳ ಉಪ–ಯೋಜನೆಗಳು ಈ ಅಧಿನಿಯಮ ಹಾಗೂ ಇದರ ಅಡಿಯಲ್ಲಿ ರಚಿಸಲಾದ ನಿಯಮಗಳಲ್ಲಿ ಹೇಳಲಾದ ನಿಬಂಧನೆಗಳಿಗನುಸಾರವಾಗಿ ಅನುಸೂಚಿತ ಜಾತಿಗಳು/ಅನುಸೂಚಿತ ಪಂಗಡಗಳ ವ್ಯಕ್ತಿಗಳಿಗೆ ಅಥವಾ ಅನುಸೂಚಿತ ಜಾತಿಗಳು/ಅನುಸೂಚಿತ ಪಂಗಡಗಳ ಕುಟುಂಬಗಳಿಗೆ ಅಥವಾ ಅನುಸೂಚಿತ ಜಾತಿಗಳು/ಅನುಸೂಚಿತ ಪಂಗಡಗಳ ಜನರ ವಾಸಸ್ಥಳಗಳಿಗೆ ಅಥವಾ ಬುಡಕಟ್ಟು ಪ್ರದೇಶಗಳಿಗೆ ನೇರ ಮತ್ತು ಪ್ರಮಾಣ ನಿರ್ಧರಿಸಬಹುದಾದ ಪ್ರಯೋಜನ ಒದಗಿಸುವಂಥ ಮತ್ತು ಅಭಿವೃದ್ಧಿಯಲ್ಲಿನ ಅಂತರಗಳನ್ನು ತುಂಬಲು ಸಾಧ್ಯಗೊಳಿಸುವಂಥ ಸ್ಕೀಮುಗಳನ್ನು ಮಾತ್ರ ಒಳಗೊಂಡಿರತಕ್ಕದ್ದು:

ಪರಂತು, ಸ್ಕೀಮುಗಳು, ವಾರ್ಷಿಕ ಹಾಗೂ ಪಂಚವಾರ್ಷಿಕ ಯೋಜನೆಗಳಿಗೆ ಹಾಗೂ ಯೋಜನಾ ಇಲಾಖೆಯು ಸೂಚಿಸಬಹುದಾದಂಥ ಕರ್ನಾಟಕ ಸರ್ಕಾರದ ಆದ್ಯತೆಗಳಿಗೆ ಅನುಗುಣವಾಗಿರತಕ್ಕದ್ದು.

xx xx xx

KARNATAKA LEGISLATIVE ASSEMBLY

FOURTEENTH LEGISLATIVE ASSEMBLY

FOURTEENTH SESSION

THE KARNATAKA SCHEDULED CASTES SUB-PLAN AND TRIBAL SUB-PLAN (PLANNING, ALLOCATION AND UTILIZATION OF FINANCIAL RESOURCES) (AMENDMENT) BILL, 2017

(L.A. Bill No. 29 of 2017)

A Bill to amend the Karnataka Scheduled Castes Sub-Plan and Tribal sub-plan (Planning, Allocation and Utilization of Financial Resources) Act, 2013;

Whereas it is expedient to amend the Karnataka Scheduled Castes Sub-Plan and Tribal sub-plan (Planning, Allocation and Utilization of Financial Resources) Act, 2013 (Karnataka Act 65 of 2013) for the purposes hereinafter appearing;

Be it enacted by Karnataka State Legislature in the sixty-eighth year of the Republic of India as follows:-

1. Short title and commencement.- (1) This Act may be called the Karnataka Scheduled Castes Sub-Plan and Tribal sub-plan (Planning, Allocation and Utilization of Financial Resources) (Amendment) Act, 2017.

(2) It shall come into force at once.

2. Substitution of expression.- In the Karnataka Scheduled Castes Sub-Plan and Tribal sub-plan (Planning, Allocation and Utilization of Financial Resources) Act, 2013 (Karnataka Act 65 of 2013) (hereinafter referred to as the principal Act) in the title, preamble, short title and in the Act,-

(i) for the words "plan" or "plan outlay" or "annual plan" wherever they occur, the words "allocable budget" shall be substituted; and

(ii) for the words "sub-plan" wherever they occur, the words "sub-allocation" shall be substituted.

3. Amendment of section 2.- In section 2 of the principal Act,-

(i) clause (a) shall be renumbered as clause (aa), and before clause (aa) as so renumbered the following shall be inserted, namely:-

"(a) "allocable Budget" means the total expenditure in the Consolidated Fund of the State excluding exempted expenditure;

(ii) after clause (aa) as so renumbered the following shall be inserted, namely:-

(ab) "exempted expenditure" means the expenditure exempted from the applicability of this Act and includes expenditure on salary, salary Grant in aid, pension, administrative expenditure, principal repayment and interest payment on account of the State Government's own borrowings and off-budget borrowings by the State Government

Undertakings and any other expenditure of administrative nature notified by the Government;"

(iii) in clause (l) for the words “forty percent” the words “such percentage as may be prescribed” shall be substituted.

(iv) clasue (n), shall be omitted.

4. Amendment of section 3.- In section 3 of the principal Act, in sub-section (2),-

(i) in the entries relating item (b), for the words "Ex-officio Member", the words "Vice-Chairman" shall be substituted;

(ii) after item (g) and entries relating thereto the following shall be inserted, namely:-

"(ga) The Chief Secretary to Government - Ex-officio member"

5. Amendment of section 5.- In section 5 of the principal Act, in sub-section (1), in the entries relating to serial number (3), for the words "Ex-officio Member", the words " Ex-officio Member Secretary" shall be substituted.

6. Amendment of section 11.- In section 11 of the principal Act, after sub-section (2) the following shall be inserted, namely:-

"(3) The Government may constitute at taluka level Monitoring Committees in such manner with such Members as may be prescribed which shall also be responsible for implementation of the Scheduled Castes sub allocation and Tribal sub allocation."

7. Amendment of section 13.- In section 13 of the principal Act, for the words "In case of unspent amount out of Allocation in a particular financial year, the same may be added to the next year Allocation" the words and figures "In case of unspent amount out of Allocation in a particular financial year, in a particular demand, determined as per the Audited Accounts, the same may be added to the allocation for the financial year, next to the immediately succeeding financial year to the same demand of the concerned Administrative Department and demand of Social Welfare Department in the ratio of 2:1 respectively" shall be substituted.

8. Amendment of section 15.- In section 15 of the principal Act, in proviso, for the words "Annual and Five Year Plans and", the word "Development" shall be substituted.

STATEMENT OF OBJECTS AND REASONS

It is considered necessary to amend the “The Karnataka Scheduled Castes Sub-Plan and Tribal Sub-Plan (Planning, Allocation and Utilization of Financial Resources) Act, 2013” (Karnataka Act 65 of 2013) to,-

(i) substitute the words "allocable budget" for the word "plan" and to substitute the word "sub-allocable budget" for the word "sub-plan" in view of the merging of plan and non-plan distinction in the budgeting process of the Government, words plan or outlay or annual plan.

(ii) define the words "allocable budget" and "exempted expenditure” which are included in the amendment.

(iii) change the percentage of SC/ST population from 40% to such percentages as may be prescribed by the Government for purpose of defining SC/ST habitation.

(iv) the designate the Hon'ble Minister for social welfare as Vice-Chairman and also to include the Chief Secretary as member of the SC/ST State Development Council. Further designation of Secretary, Social Welfare as Member Secretary of Council.

(v) constitute Taluk level monitoring committee by rules for implementation of Scheduled Castes Sub-Plan and Tribal Sub-Plan.

(vi) to amend section 13 to allocate the unspent amount in any financial year to next to the immediately succeeding financial year in the ratio of 2:1 between the concerned administrative departments and Social Welfare Department for effective use of funds under SCSP/TSP.

(vii) substitute the word "development" for the words "annual and five year plans and", in the proviso to section 15.

Hence the Bill

FINANCIAL MEMORANDUM

The amendments proposed is in pursuance to para 16 of the Budget Speech 2017-18. Which reads as follows:-

"**Amendment to the Karnataka Scheduled Castes Sub-Plan and Tribal Sub-Plan (Planning, Allocation and Utilization of Financial Resources) Act, 2013.**

16. Till now, 24.10% of Plan was considered for earmarking under SCSP/TSP and Non-Plan expenditure was not considered in the base. This will change as Plan and Non-Plan distinction will no longer be there from FY17-18. From this base, the exempted expenditure that includes salary, salary GIA, pension, administrative expenditure, principal repayment and interest payment on account of the State Government's borrowing and off-budget borrowings by the State Government Undertakings and any such expenditure of administrative nature so notified by the Government will be excluded. Allocable budget, which is the Total Consolidated Fund expenditure less Exempted expenditure, will be used as a base to calculate the SCSP/TSP allocation. 24.1% of this base will be earmarked for SCSP/TSP. An amendment to this effect will be moved in this Session."

The exact financial allocations etc., cannot be quantified at this juncture which will be known only at the time of allocation of budget.

H.ANJANEYA
Minister for Social Welfare and Backward Classes Welfare

S. Murthy
Secretary (I/c)
Karnataka Legislative Assembly

ANNEXURE

Extract from the Karnataka Scheduled Castes Sub-Plan and Tribal sub-plan (Planning, Allocation and Utilization of Financial Resources) Act, 2013

(Karnataka Act 65 of 2013)

xx xx xx

THE KARNATAKA SCHEDULED CASTES SUB-PLAN AND TRIBAL SUB-PLAN (PLANNING, ALLOCATION AND UTILIZATION OF FINANCIAL RESOURCES) ACT, 2013

(Received the assent of the Governor on the twenty-sixth day of December, 2013)

An Act to provide for earmarking a portion of state plan outlay for the Scheduled Castes Subplan and Tribal Sub-Plan in proportion to the population of Scheduled Castes and Scheduled Tribes and to put in place an institutional mechanism for preparation, implementation and monitoring of subplan and for matters connected therewith or incidental thereto;

Whereas it is expedient to provide for earmarking a portion of state plan outlay for the Scheduled Castes Sub-plan and Tribal Sub-Plan in proportion to the population of Scheduled Castes and Scheduled Tribes and to put in place an institutional mechanism for preparation, implementation and monitoring of sub-plan and for matters connected therewith or incidental thereto;

Be it enacted by Karnataka State Legislature in the Sixty-fourth year of the Republic of India as follows:-

Chapter – I
Preliminary

1. Short title and commencement.- (1) This Act may be called the Karnataka Scheduled Castes Sub-Plan and Tribal Sub-Plan (Planning, Allocation and Utilization of Financial Resources) Act, 2013.

(2) It shall come into force on such date as the State Government may, by notification in the Karnataka Gazette, appoint, and different dates may be appointed for different provisions of this Act.

2. Definitions.- In this Act, unless the context otherwise requires,.-

(a) "Department" means a Government Department entrusted with the implementation of the plan schemes for the welfare of the Scheduled Castes and the Scheduled Tribes;

xx xx xx

(l) "Scheduled Castes or Scheduled Tribe habitation" means any habitation where population of the Scheduled Castes or the Scheduled Tribes or combined population of the Scheduled Castes and the Scheduled Tribes is not less than forty percent of the total population of the habitation;

xx xx xx

(n) "Total Plan Outlay of the State" means the plan outlay for which resources of the State are applied.

xx xx xx

3. The State Council for Development of the Scheduled Castes or the Scheduled Tribes.-

xx xx xx

(2) The State council shall consist of the following, namely:-

xx xx xx

(b) The Minister for Social Welfare - Ex-officio Member

xx xx xx

5. Nodal Agency and Nodal Department.- (1) The Nodal Agency for the Scheduled Castes Sub-Plan/Tribal Sub-Plan shall consist of the following, namely:-

xx xx xx

(3) The Secretary/Principal Secretary to Government Social Welfare Department - Ex-officio Member

xx xx xx

13. Earmarking of the scheduled Castes sub-plan/tribal sub-plan fund from plan outlays.- The State Government shall, in every financial year, earmark in such manner as may be prescribed, a portion of the total plan outlays of the State which shall be proportionate to the Scheduled Castes/Scheduled Tribe population of the State, to be called as the Scheduled Castes Sub-Plan and Tribal Sub Plan fund. In case of unspent amount out of allocation in a particular financial year, the same may be added to the next year allocation, but shall not be carried further beyond that year:

xx xx xx

15. Schemes to be included under the Scheduled Castes Sub-Plans and Tribal Sub Plans.-

xx xx xx

Provided that the schemes shall be consistent with the annual and five year Plans and priorities of the State of Karnataka as may be communicated by the Planning department.

xx xx xx

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಕಿ7) ಪ್ರತಿಗಳು: 150

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–IVA	ಬೆಂಗಳೂರು, ಸೋಮವಾರ, ಜೂನ್ ೧೯, ೨೦೧೭ (ಜ್ಯೇಷ್ಠ ೨೯, ಶಕ ವರ್ಷ ೧೯೩೯)	ನಂ. ೫೫೧
Part–IVA	Bengaluru, Monday, June 19, 2017 (Jyeshta 29, Shaka Varsha 1939)	No. 551

KARNATAKA LEGISLATIVE ASSEMBLY SECRETARIAT

NOTIFICATION

No.KLA/LGA/30/Bill/2017, Bengaluru, Dated 19.06.2017

The following Bill was introduced in Legislative Assembly on 19.06.2017.

ಕರ್ನಾಟಕ ವಿಧಾನ ಸಭೆ

ಹದಿನಾಲ್ಕನೇ ವಿಧಾನಸಭೆ

ಹದಿನಾಲ್ಕನೇ ಅಧಿವೇಶನ

ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ (ಆರ್ಜನೆ ಮತ್ತು ವರ್ಗಾವಣೆ) (ತಿದ್ದುಪಡಿ) ವಿಧೇಯಕ, 2017

(2017ರ ವಿಧಾನಸಭೆಯ ವಿಧೇಯಕ ಸಂಖ್ಯೆ–30)

ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996ನ್ನು (1996ರ ಕರ್ನಾಟಕ ಅಧಿನಿಯಮ ಸಂಖ್ಯೆ 19) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ (ಆರ್ಜನೆ ಮತ್ತು ವರ್ಗಾವಣೆ) (ತಿದ್ದುಪಡಿ) ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 21ನೇ ಪ್ರಕರಣದ ತಿದ್ದುಪಡಿ.– ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996ರ (1996ರ ಕರ್ನಾಟಕ ಅಧಿನಿಯಮ ಸಂಖ್ಯೆ 19) 21ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಕ್ರಮಸಂಖ್ಯೆ 10, 11, 12 ಮತ್ತು 13 ಹಾಗೂ ಅವುಗಳಿಗೆ ಸಂಬಂಧಿಸಿದ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕದ ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಪಿಟಿಷನ್ ಸಂಖ್ಯೆ: 32560/96ರಲ್ಲಿ ಟ್ರಸ್ಟಿಗಳ ಮಂಡಳಿಯಲ್ಲಿ ರಷ್ಯಾದ ಪ್ರತಿನಿಧಿಗಳನ್ನು ಸೇರಿಸಿರುವುದು ಅಧಿಕಾರಾತೀತವೆಂದು (ultra-vires) ಆದೇಶಿಸಿದೆ. ಆದುದರಿಂದ ಟ್ರಸ್ಟಿಗಳ ಮಂಡಳಿಯಲ್ಲಿ ರಷ್ಯಾದ ಪ್ರತಿನಿಧಿಗಳಿಗೆ ಸಂಬಂಧಿಸಿದ ಉಪಬಂಧಗಳನ್ನು ಬಿಟ್ಟುಬಿಡುವುದು ಅವಶ್ಯಕವಾಗಿದೆ.

ಆದುದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಕಾಗೋಡು ತಿಮ್ಮಪ್ಪ
ಕಂದಾಯ ಮಂತ್ರಿಗಳು

ಎಸ್. ಮೂರ್ತಿ
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

ಅನುಬಂಧ

ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996ರ
(1996ರ ಕರ್ನಾಟಕ ಅಧಿನಿಯಮ ಸಂಖ್ಯೆ 19) ಉದ್ಧೃತ ಭಾಗ

XX XX XX

21. ಟ್ರಸ್ಟಿಗಳ ಮಂಡಲಿ.– (1) ಎಸ್ಟೇಟಿನ ಆಡಳಿತ ಮತ್ತು ನಿರ್ವಹಣೆಗಾಗಿ ಕೆಳಕಂಡವರನ್ನು ಒಳಗೊಂಡ ಒಂದು ಟ್ರಸ್ಟಿಗಳ ಮಂಡಲಿ ಇರತಕ್ಕದ್ದು:–

1. ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ – ಅಧ್ಯಕ್ಷರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, – ಸದಸ್ಯ ಕರ್ನಾಟಕ ಸರ್ಕಾರ
3. ಸರ್ಕಾರದ ಕಾರ್ಯದರ್ಶಿ, ಕಾನೂನು ಇಲಾಖೆ – ಸದಸ್ಯ ಕರ್ನಾಟಕ ಸರ್ಕಾರ.
4. ಅರಣ್ಯ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ, – ಸದಸ್ಯ ಕರ್ನಾಟಕ ಸರ್ಕಾರ.
5. ಸರ್ಕಾರದ ಕಾರ್ಯದರ್ಶಿ, ಕೃಷಿ ಮತ್ತು ತೋಟಗಾರಿಕೆ ಇಲಾಖೆ – ಸದಸ್ಯ ಕರ್ನಾಟಕ ಸರ್ಕಾರ
6. ಸರ್ಕಾರದ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, – ಸದಸ್ಯ ಕರ್ನಾಟಕ ಸರ್ಕಾರ
7. ರಾಜ್ಯ ಸರ್ಕಾರದಿಂದ ನಾಮ ನಿರ್ದೇಶಿತನಾಗುವ ರಾಜ್ಯ ಲಲಿತ ಕಲಾ – ಸದಸ್ಯ
   ಅಕೆಡಮಿಯನ್ನು ಪ್ರತಿನಿಧಿಸುವ ಒಬ್ಬ ವ್ಯಕ್ತಿ.
8. ಕಾರ್ಯದರ್ಶಿ, ಸಂಸ್ಕೃತಿ ಇಲಾಖೆ, ಭಾರತ ಸರ್ಕಾರ ಅಥವಾ – ಸದಸ್ಯ ಅವರ ಪ್ರತಿನಿಧಿ.
9. ವಿದೇಶಾಂಗ ಕಾರ್ಯದರ್ಶಿ, ವಿದೇಶಾಂಗ ವ್ಯವಹಾರಗಳ ಮಂತ್ರಾಲಯ, – ಸದಸ್ಯ ಭಾರತ ಸರ್ಕಾರ ಅಥವಾ ಅವರ ಪ್ರತಿನಿಧಿ.
10. ದೆಹಲಿಯಲ್ಲಿರುವ ರಷ್ಯಾ ಗಣರಾಜ್ಯದ ರಾಯಭಾರಿ – ಸದಸ್ಯ
11. ರಷ್ಯಾ ಗಣರಾಜ್ಯದ ರಾಯಭಾರ ಕಚೇರಿಯ ಸಂಸ್ಕೃತಿ ಇಲಾಖೆಯ – ಸದಸ್ಯ ಮುಖ್ಯಸ್ಥರು ಅಥವಾ ಹುದ್ದೆಯ ಉತ್ತರಾಧಿಕಾರಿ

12. ಪ್ರೊ.ಎ.ಎ.ಕುಟ್‌ಸೆನ್‌ಕೋವ್, ನಿರ್ದೇಶಕರು, ಇಂಡಿಯೊಲಾಜಿಕಲ್ – ಸದಸ್ಯ ಅಧ್ಯಯನ ಕೇಂದ್ರ, ರಷ್ಯಾ ವಿಜ್ಞಾನಿಗಳ ಅಕೆಡೆಮಿ ಅಥವಾ ಅವರ ಹುದ್ದೆಯ ಉತ್ತರಾಧಿಕಾರಿ

13. ಶ್ರೀ ವಿ.ವಿ. ಅನಿಶಿಮೋವ್, ಉಪಾಧ್ಯಕ್ಷರು, ರಷ್ಯಾ ಇಂಡಿಯಾ ಕಲಾ – ಸದಸ್ಯ ಸಂಘ ಮಾಸ್ಕೋ, ಅಥವಾ ಅವರ ಹುದ್ದೆಯ ಉತ್ತರಾಧಿಕಾರಿ

14. ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತನಾಗುವ ಕರ್ನಾಟಕ ಚಿತ್ರಕಲಾ – ಸದಸ್ಯ ಪರಿಷತ್ತನ್ನು ಪ್ರತಿನಿಧಿಸುವ ಒಬ್ಬ ವ್ಯಕ್ತಿ

15. ಕಾರ್ಯನಿರ್ವಾಹಕ ಅಧಿಕಾರಿ – ಸದಸ್ಯ ಕಾರ್ಯದರ್ಶಿ

XX XX XX

KARNATAKA LEGISLATIVE ASSEMBLY
FOURTEENTH LEGISLATIVE ASSEMBLY
FOURTEENTH SESSION

THE ROERICH AND DEVIKARANI ROERICH ESTATE (ACQUISITION AND TRANSFER) (AMENDMENT) BILL, 2017

(L.A. Bill No. 30 of 2017)

A Bill further to amend the Roerich and Devikarani Roerich Estate (Acquisition and Transfer) Act, 1996.

Whereas it is expedient further to amend the Roerich and Devikarani Roerich Estate (Acquisition and Transfer) Act, 1996 (Karnataka Act 19 of 1996), for the purposes hereinafter appearing.

Be it enacted by the Karnataka State Legislature in the sixty-eighth year of the Republic of India as follows:-

1. Short title and commencement.– (1) This Act may be called the Roerich and Devikarani Roerich Estate (Acquisition and Transfer) (Amendment) Act, 2017.

(2) It shall come into force at once.

2. Amendment of Section 21.- In section 21 of the Roerich and Devikarani Roerich Estate (Acquisition and Transfer) Act, 1996, (Karnataka Act 19 of 1996) in sub-section(1), serial numbers 10, 11, 12 and 13 and the entries relating thereto shall be omitted.

STATEMENT OF OBJECTS AND REASONS

In Writ Petition Number: 32560/96 the Hon'ble High Court of Karnataka has ordered that inclusion of Russian representatives in the Board of Trustees is ultra vires. Therefore it is necessary to omit the provisions regarding Russian representatives in the Board of Trustees.

Hence, the Bill.

FINANCIAL MEMORANDUM

There is no extra expenditure involved in the proposed Legislative measure.

KAGODU THIMMAPPA
Minister for Revenue

S. Murthy
Secretary (I/c)
Karnataka Legislative Assembly

ANNEXURE

EXTRACT FROM THE ROERICH AND DEVIKARANI ROERICH ESTATE (ACQUISITION AND TRANSFER) ACT, 1996.

XXX XXX XXX

21. The Board of Trustees.- (1) There shall be a Board of Trustees for the administration and management of the Estate, consisting of the following:-

1	The Chief Secretary to Government	-	Chairman
2	The Principal Secretary to Government	-	Member Revenue department, Government of Karnataka
3	The Secretary to Government	-	Member Department of Law, Government of Karnataka
4	The Secretary to Government	-	Member Incharge of Forest Department, Government of Karnataka.
5	The Secretary to Government, Agriculture and Horticulture Department	-	Member Government of Karnataka.
6	The Secretary to Government, Kannada and Culture Department,	-	Member Government of Karnataka.
7	A person to represent the State Lalitha Kala Academy to be	-	Member nominated by the State Government.
8	Secretary, Department of Culture, Government of India or his representative	-	Member
9	Foreign Secretary, Ministry of External	-	Member Affairs, Government of India or his representative.
10	Ambassador of the Russian	-	Member Federation in Delhi.
11	Head of the Culture Department of the Embassy of the Russian Federation or his successor in office	-	Member
12	Prof. A. A. Kutsenkov, Director, Centre of Indiological Studies, Russian Academy of Sciences or	-	Member his successor in office.
13	Mr. V. V. Anisimov, Vice-President, Russian Indian Arts Club, Moscow, or his successor in office	-	Member
14	A person to represent the Karnataka Chitrakala Parishat, to be nominated by the State Government.	-	Member
15	The Executive Officer.	-	Member-Secretary

XXX XXX XXX

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 150

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–IVA	ಬೆಂಗಳೂರು, ಮಂಗಳವಾರ, ಜೂನ್ ೨೦, ೨೦೧೭ (ಜ್ಯೇಷ್ಠ ೩೦, ಶಕ ವರ್ಷ ೧೯೩೯)	ನಂ. ೫೫೪
Part–IVA	Bengaluru, Tuesday, June 20, 2017 (Jyeshta 30, Shaka Varsha 1939)	No. 554

KARNATAKA LEGISLATIVE ASSEMBLY SECRETARIAT

NOTIFICATION

No.KLA/LGA/32/Bill/2017, Bengaluru, Dated 20.06.2017

The following Bill was introduced in Legislative Assembly on 20.06.2017.

ಕರ್ನಾಟಕ ವಿಧಾನ ಸಭೆ
ಹದಿನಾಲ್ಕನೇ ವಿಧಾನಸಭೆ
ಹದಿನಾಲ್ಕನೇ ಅಧಿವೇಶನ
ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕ, 2017
(2017ರ ವಿಧಾನಸಭೆಯ ವಿಧೇಯಕ ಸಂಖ್ಯೆ–32)

ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ ಅಧಿನಿಯಮ, 1986ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ ಅಧಿನಿಯಮ, 1986ನ್ನು (1986ರ ಕರ್ನಾಟಕ ಅಧಿನಿಯಮ 22) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 4ನೇ ಪ್ರಕರಣದ ತಿದ್ದುಪಡಿ.– ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ ಅಧಿನಿಯಮ, 1986ರ (1986ರ ಕರ್ನಾಟಕ ಅಧಿನಿಯಮ 22) 4ನೇ ಪ್ರಕರಣದಲ್ಲಿ (2)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(3) ಈ ಅಧಿನಿಯಮ ಮತ್ತು ಅದರ ಅಡಿಯಲ್ಲಿ ಮಾಡಿದ ವಿನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ವಿದ್ಯಾಲಯವು ಶೇಕಡ ಮೂವತ್ತಕ್ಕಿಂತ ಕಡಿಮೆಯಲ್ಲದಷ್ಟು ಸೀಟುಗಳನ್ನು ಕರ್ನಾಟಕ ನಿವಾಸಿ ವಿದ್ಯಾರ್ಥಿಗಳಿಗೆ ಮೀಸಲಿರಿಸತಕ್ಕದ್ದು.

ವಿವರಣೆ: ಈ ಪ್ರಕರಣದ ಉದ್ದೇಶಕ್ಕಾಗಿ 'ಕರ್ನಾಟಕ ನಿವಾಸಿ ವಿದ್ಯಾರ್ಥಿ' ಎಂದರೆ,–

(i) ಅರ್ಹತಾ ಪರೀಕ್ಷೆಯ ಹಿಂದಿನ ಹತ್ತು ವರ್ಷಗಳಿಗೆ ಕಡಿಮೆಯಲ್ಲದ ಅವಧಿಯವರೆಗೆ ವಿದ್ಯಾರ್ಥಿ ಅಥವಾ ಆತನ ತಂದೆ ಅಥವಾ ತಾಯಿ ಕರ್ನಾಟಕ ರಾಜ್ಯದಲ್ಲಿ ವಾಸಿಸುತ್ತಿರಬೇಕು; ಮತ್ತು

(ii) ವಿದ್ಯಾರ್ಥಿಯು ಅರ್ಹತಾ ಪರೀಕ್ಷೆಯ ಹಿಂದಿನ ಐದು ವರ್ಷಗಳಿಗೆ ಕಡಿಮೆ ಇಲ್ಲದ ಅವಧಿಗಾಗಿ ಕರ್ನಾಟಕ ರಾಜ್ಯದಲ್ಲಿರುವ ಮಾನ್ಯತೆ ಪಡೆದ ಯಾವುದಾದರೂ ಒಂದು ಶೈಕ್ಷಣಿಕ ಸಂಸ್ಥೆಗಳಲ್ಲಿ ವಿದ್ಯಾಭ್ಯಾಸ ಮಾಡಿರಬೇಕು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ನಿವಾಸಿ ವಿದ್ಯಾರ್ಥಿಗಳಿಗಾಗಿ ಶೇಕಡ ಮೂವತ್ತಕ್ಕಿಂತ ಕಡಿಮೆಯಿಲ್ಲದ ಸೀಟುಗಳನ್ನು ಮೀಸಲಿರಿಸಲು ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ ಅಧಿನಿಯಮ, 1986ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ, ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವ

ಟಿ.ಬಿ. ಜಯಚಂದ್ರ
ಕಾನೂನು, ಸಂಸದೀಯ ವ್ಯವಹಾರಗಳು ಮತ್ತು
ಸಣ್ಣ ನೀರಾವರಿ ಮಂತ್ರಿಗಳು.

ಎಸ್. ಮೂರ್ತಿ
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

ಅನುಬಂಧ

ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ ಅಧಿನಿಯಮ, 1986ರ (1986ರ ಕರ್ನಾಟಕ ಅಧಿನಿಯಮ 22)

ಉದ್ಧೃತ ಭಾಗ

xx **xx** **xx**

4. ವಿದ್ಯಾಲಯದ ಉದ್ದೇಶಗಳು ಇತ್ಯಾದಿ.–

xx **xx** **xx**

(2) ವಿದ್ಯಾಲಯವು ಲಿಂಗಭೇದವಿಲ್ಲದೆ, ಜನಾಂಗ, ಪಂಥ, ಜಾತಿ ಅಥವಾ ವರ್ಗಗಳನ್ನು ಪರಿಗಣಿಸದೆ ಎಲ್ಲ ಧರ್ಮದ, ಎಲ್ಲಾ ವ್ಯಕ್ತಿಗಳಿಗೂ ಮುಕ್ತವಾಗಿರತಕ್ಕದ್ದು ಮತ್ತು ಯಾವೊಬ್ಬ ಅರ್ಹರಾಗಿರತಕ್ಕ ವ್ಯಕ್ತಿಗೆ ಅಲ್ಲಿಗೆ ಬೋಧಕನಾಗಿ ಅಥವಾ ವಿದ್ಯಾರ್ಥಿಯಾಗಿ ಪ್ರವೇಶ ನೀಡಲು ಅಥವಾ ಅಲ್ಲಿ ಯಾವುದೇ ಪದವನ್ನು ಹೊಂದಲು ಅಥವಾ ಅಲ್ಲಿ ಪದವಿಯನ್ನು ಪಡೆಯಲು ಅಥವಾ ಅಲ್ಲಿನ ಯಾವುದೇ ವಿಶೇಷಾಧಿಕಾರವನ್ನು ಅನುಭವಿಸಲು ಧಾರ್ಮಿಕ ನಂಬಿಕೆಯ ಅಥವಾ ಉದ್ದೇಶಗಳ ಎಂಥದೇ ಪರೀಕ್ಷೆಯನ್ನು ವಿಧಿಸುವುದು ಕಾನೂನುಬದ್ಧವಾಗಿರತಕ್ಕದ್ದಲ್ಲ.

xx **xx** **xx**

KARNATAKA LEGISLATIVE ASSEMBLY

FOURTEENTH LEGISLATIVE ASSEMBLY

FOURTEENTH SESSION

THE NATIONAL LAW SCHOOL OF INDIA (AMENDMENT) BILL, 2017

(L.A. Bill No. 32 of 2017)

A Bill further to amend the National Law School of India Act, 1986.

Whereas, it is expedient to amend the National Law School of India Act, 1986 (Karnataka Act 22 of 1986) for the purposes hereinafter appearing;

Be it enacted by the Karnataka State Legislature in the sixty eighth year of the Republic of India as follows.-

1. Short title and commencement.- (1) This Act may be called the National Law School of India (Amendment) Act, 2017.

(2) It shall come into force at once.

2. Amendment of section 4.- In section 4 of the National Law School of India Act, 1986 (Karnataka Act 22 of 1986) after sub-section (2), the following shall be inserted, namely:-

"(3) Notwithstanding anything contained in this Act and the regulations made thereunder, the school shall reserve not less than thirty percent of seats for resident students of Karnataka.

Explanation: For the purpose of section "resident student of Karnataka" means,-

(i) a student who or either of whose parents has resided in the State of Karnataka for a period of not less than ten years preceding the qualifying examination; and

(ii) a student who has studied in any one of the recognized educational institutions in the State for a period of not less than five years preceding to the qualifying examination."

STATEMENT OF OBJECTS AND REASONS

It is considered necessary to amend the National Law School of India Act, 1986, to reserve not less than thirty percent of seats for resident students of Karnataka.

Hence the Bill.

FINANCIAL MEMORANDUM

There is no extra expenditure involved in the proposed Legislative measure.

T.B.JAYACHANDRA

Minister for Law, Parliamentary Affairs and Minor Irrigation

S. Murthy

Secretary (I/c)

Karnataka Legislative Assembly

ANNEXURE

Extract from the National Law School of India Act, 1986 (Karnataka Act No. 22 of 1986)

XX XX XX

4. The Objects of the School etc.-

XX XX XX

(2) The School shall be open to all persons of either sex irrespective of race, creed, caste or class of all religions and it shall not be lawful for the school to impose on any person any test whatsoever of religious belief or profession in order to entitle him to be admitted thereto as a teacher or a student or to hold any office therein or to graduate thereat or to enjoy or to exercise any privilege thereof.

XX XX XX

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 150

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–IVA Part–IVA	ಬೆಂಗಳೂರು, ಮಂಗಳವಾರ, ಜೂನ್ ೨೦, ೨೦೧೭ (ಜ್ಯೇಷ್ಠ ೩೦, ಶಕ ವರ್ಷ ೧೯೩೯) Bengaluru, Tuesday, June 20, 2017 (Jyeshta 30, Shaka Varsha 1939)	ನಂ. ೫೫೫ No. 555

KARNATAKA LEGISLATIVE ASSEMBLY SECRETARIAT

NOTIFICATION

No.KLA/LGA/33/Bill/2017, Bengaluru, Dated 20.06.2017

The following Bill was introduced in Legislative Assembly on 20.06.2017.

ಕರ್ನಾಟಕ ವಿಧಾನ ಸಭೆ

ಹದಿನಾಲ್ಕನೇ ವಿಧಾನಸಭೆ

ಹದಿನಾಲ್ಕನೇ ಅಧಿವೇಶನ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2017

(2017ರ ವಿಧಾನಸಭೆಯ ವಿಧೇಯಕ ಸಂಖ್ಯೆ–33)

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಅಧಿನಿಯಮ, 2016ನ್ನು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಅಧಿನಿಯಮ, 2016ನ್ನು (2016ರ ಕರ್ನಾಟಕ ಅಧಿನಿಯಮ 16) ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ (ತಿದ್ದುಪಡಿ) ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 15ನೇ ಪ್ರಕರಣದ ತಿದ್ದುಪಡಿ.– ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಅಧಿನಿಯಮ, 2016ರ (2016ರ ಕರ್ನಾಟಕ ಅಧಿನಿಯಮ 16) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 15ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ "ಅರವತ್ತೈದು" ಎಂಬ ಪದಕ್ಕೆ "ಅರವತ್ತೇಳು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು ಮತ್ತು ಹಾಗೆ ಯಾವಾಗಲೂ ಪ್ರತಿಯೋಜಿಸಲಾಗಿದೆ ಎಂದು ಭಾವಿಸತಕ್ಕದ್ದು.

3. 17ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 17ನೇ ಪ್ರಕರಣದಲ್ಲಿ,–

(ಎ) (1)ನೇ ಉಪಪ್ರಕರಣದ ಪರಂತುಕದಲ್ಲಿ "ವಿಶ್ವವಿದ್ಯಾಲಯದಲ್ಲಿ ಇರುವಂಥ" ಎಂಬ ಪದಗಳ ತರುವಾಯ "ಪ್ರಾಧ್ಯಾಪಕರಾಗಿರುವ ಸಂದರ್ಭದಲ್ಲಿ ರಿಜಿಸ್ಟ್ರಾರ್‌ರವರನ್ನು ಅಥವಾ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ಬಿ) (2)ನೇ ಉಪಪ್ರಕರಣದಲ್ಲಿ "ವಿಶ್ವವಿದ್ಯಾಲಯದಲ್ಲಿಯ" ಎಂಬ ಪದದ ತರುವಾಯ "ಪ್ರಾಧ್ಯಾಪಕರಾಗಿರುವ ಸಂದರ್ಭದಲ್ಲಿ ರಿಜಿಸ್ಟ್ರಾರ್‌ರವರನ್ನು ಅಥವಾ" ಎಂಬ ಪದಗಳನ್ನು ಸೇರಿಸತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 34) ಈ ಮುಂದಿನವುಗಳಿಗೆ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ, ಎಂದರೆ:–

(i) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000ರಲ್ಲಿರುವಂತೆ ಕುಲಪತಿಗಳ ವಯೋಮಿತಿಯೊಂದಿಗೆ ಅನುರೂಪವಾಗಿರುವಂತೆ, ಕುಲಪತಿಯವರ ಪದವನ್ನು ಹೊಂದಲು ಮೇಲಿನ ವಯೋಮಿತಿಯನ್ನು ಅರವತ್ತೇಳು ವರ್ಷಗಳಿಗೆ ಹೆಚ್ಚಿಸಲು; ಮತ್ತು

(ii) ಕುಲಪತಿಯ ಹುದ್ದೆಯು ತಾತ್ಕಾಲಿಕವಾಗಿ ಖಾಲಿಯಾದಲ್ಲಿ ಮತ್ತು ಭರ್ತಿಯಾಗದೇ ಉಳಿದಲ್ಲಿ, ಆತನು ಪ್ರಾಧ್ಯಾಪಕನಾಗಿರುವ ಸಂದರ್ಭದಲ್ಲಿ ರಿಜಿಸ್ಟ್ರಾರನನ್ನು, ಕುಲಪತಿಯ ಕರ್ತವ್ಯಗಳನ್ನು ನೆರವೇರಿಸಲು, ಆತನನ್ನು ಪದನಾಮೀಕರಿಸಲು ಅಥವಾ ನೇಮಕ ಮಾಡಲು,

– ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಹೆಚ್. ಕೆ. ಪಾಟೀಲ್
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು

ಎಸ್. ಮೂರ್ತಿ
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

ಅನುಬಂಧ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಅಧಿನಿಯಮ, 2016ರ (2016ರ ಕರ್ನಾಟಕ ಅಧಿನಿಯಮ 16) ಉದ್ಧೃತ ಭಾಗ

Xx xx xx

15. ಕುಲಪತಿಗಳು.–

Xx xx xx

(3) ಕುಲಪತಿಗಳು ಶೈಕ್ಷಣಿಕ ವ್ಯಕ್ತಿ ಮತ್ತು ಪ್ರಾಧ್ಯಾಪಕರಾಗಿರತಕ್ಕದ್ದು, ಅವರು ನಾಲ್ಕು ವರ್ಷಗಳ ಅವಧಿಯವರೆಗೆ ಅಥವಾ ಅವರ ವಯಸ್ಸು ಅರವತ್ತೈದು ವರ್ಷವಾಗುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಹುದ್ದೆಯನ್ನು ಹೊಂದಿರತಕ್ಕದ್ದು.

Xx xx xx

17. ಕುಲಪತಿಯವರ ಸ್ಥಾನವು ಖಾಲಿಯಿರುವಾಗ ಕೆಲಸದ ವ್ಯವಸ್ಥೆ.– (1) ರಜೆ, ಖಾಯಿಲೆ ಅಥವಾ ಇನ್ನಾವುದೇ ಕಾರಣದಿಂದಾಗಿ ಕುಲಪತಿಯವರ ತಾತ್ಕಾಲಿಕ ಗೈರುಹಾಜರಿಯಲ್ಲಿ, ಕುಲಾಧಿಪತಿಯವರು, ಕುಲಪತಿಯವರ ಕರ್ತವ್ಯಗಳನ್ನು ನಡೆಸಿಕೊಂಡು ಹೋಗುವುದಕ್ಕೆ ತಾವು ಸೂಕ್ತವೆಂದು ಭಾವಿಸುವಂಥ ವ್ಯವಸ್ಥೆಯನ್ನು ಮಾಡಬಹುದು:

ಪರಂತು, ಕುಲಾಧಿಪತಿಯವರು ಅಂಥ ವ್ಯವಸ್ಥೆಯನ್ನು ಮಾಡುವವರೆಗೆ ಕುಲಪತಿಯವರು ಒಂದು ತಿಂಗಳು ಮೀರದಂಥ ಅವಧಿಗೆ ಅಥವಾ ಕುಲಾಧಿಪತಿಯವರು ವ್ಯವಸ್ಥೆ ಮಾಡುವವರೆಗೆ, ಅವರೆಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ, ವಿಶ್ವವಿದ್ಯಾಲಯದಲ್ಲಿ ಇರುವಂಥ ನಿರ್ದೇಶಕರು, ಶಾಲೆಗಳ ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಅಥವಾ ನಿರ್ದೇಶಕರು, ಸಂಶೋಧನೆ, ಅನ್ವೇಷಣೆ ಮತ್ತು ಮೌಲ್ಯಮಾಪನಾ ಇವರುಗಳ ಪೈಕಿ ಅತ್ಯಂತ ಹಿರಿಯ ನಿರ್ದೇಶಕರನ್ನು ಕುಲಪತಿಯವರ ಪ್ರಸಕ್ತ ಕರ್ತವ್ಯಗಳ ಪ್ರಭಾರವಹಿಸಲು ಹೆಸರಿಸಬಹುದು.

(2) ಕುಲಪತಿಯವರ ಸ್ಥಾನವು ಭರ್ತಿಯಾಗದೆ ಖಾಲಿ ಉಳಿದಿರುವ ಅವಧಿಯವರೆಗೆ, ಕುಲಾಧಿಪತಿಯವರು ನೇಮಿಸಬಹುದಾದಂಥ, ವಿಶ್ವವಿದ್ಯಾಲಯದಲ್ಲಿಯ ನಿರ್ದೇಶಕರು, ಶಾಲೆಗಳ ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಅಥವಾ ನಿರ್ದೇಶಕರು, ಸಂಶೋಧನೆ, ಅನ್ವೇಷಣೆ ಮತ್ತು ಮೌಲ್ಯಮಾಪನಾ ಇವರುಗಳ ಪೈಕಿ ಅತ್ಯಂತ ಹಿರಿಯ ನಿರ್ದೇಶಕರು ಕುಲಪತಿಯಾಗಿ ಕಾರ್ಯ ನಿರ್ವಹಿಸತಕ್ಕದ್ದು ಮತ್ತು ಹಾಗೆ ನೇಮಕಗೊಂಡ ವ್ಯಕ್ತಿಯು, ಕುಲಪತಿಯವರ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಎಲ್ಲಾ ವಿಶೇಷಾಧಿಕಾರಗಳಿಗೂ ಹಾಗೂ ಈ ಕುರಿತು ರಚಿಸಲಾದ ವಿನಿಯಮಗಳಾವುವಾದರೂ ಇದ್ದಲ್ಲಿ, ಅವುಗಳಿಗನ್ವಯ ಕುಲಾಧಿಪತಿಯವರು ನಿರ್ಧರಿಸಬಹುದಾದಂಥ ಉಪಲಬ್ಧಿಗಳು ಮತ್ತು ಭತ್ಯೆಗಳಿಗೂ ಹಕ್ಕುಳ್ಳವರಾಗಿರತಕ್ಕದ್ದು.

KARNATAKA LEGISLATIVE ASSEMBLY
FOURTEENTH LEGISLATIVE ASSEMBLY
FOURTEENTH SESSION

THE KARNATAKA STATE RURAL DEVELOPMENT AND PANCHAYAT RAJ UNIVERSITY (AMENDMENT) BILL, 2017

(L.A. Bill No. 33 of 2017)

A Bill to amend the Karnataka State Rural Development and Panchayat Raj University Act, 2016.

Whereas, it is expedient to amend the Karnataka State Rural Development and Panchayat Raj University Act, 2016 (Karnataka Act 16 of 2016) for the purposes hereinafter appearing;

Be it enacted by the Karnataka State Legislature in the Sixty Eighth year of the Republic of India, as follows:-

1. Short title and commencement.- (1) This Act may be called the Karnataka State Rural Development and Panchayat Raj University (Amendment) Act, 2017.

(2) It shall come into force at once.

2. Amendment of section 15.- In the Karnataka State Rural Development and Panchayat Raj University Act, 2016 (Karnataka Act 16 of 2016) (hereinafter referred to as the Principal Act), in section15, in sub-section(3) for the words “Sixty five years”, the words “Sixty seven years”, shall be and shall always be deem to have been substituted.

3. Amendment of section17.- In section 17 of the Principal Act,-

(a) in sub-section (1), in the proviso, after the word “designate”, the words “Registrar in case if he is a Professor or” shall be inserted; and

(b) in sub-section (2), after the word “unfilled” the words “Registrar in case if he is a Professor or” shall be inserted.

STATEMENT OF OBJECTS AND REASONS

It is considered necessary to amend the Karnataka State Rural Development and Panchayat Raj University Act, 2016 (Karnataka Act 16 of 2016),-

(i) to enhance the upper age limit to hold office of Vice Chancellor to sixty seven years which is in conformity with the age limit of Vice Chancellors in the Karnataka State Universities Act, 2000; and

(ii) to make provisions also to designate or to appoint the Registrar in case if he is a Professor, to carry out the duties of the Vice Chancellor if the post of Vice Chancellor is temporarily vacant and if remains unfilled.

Hence, the Bill.

FINANCIAL MEMORANDUM

There is no extra expenditure involved in the proposed legislative measure.

H.K.PATIL
Minister for Rural Development
and Panchayat Raj

S. Murthy
Secretary (I/c)
Karnataka Legislative Assembly

ANNEXURE

EXTRACT FROM THE KARNATAKA STATE RURAL DEVELOPMENT AND PANCHAYAT RAJ UNIVERSITY ACT, 2016

(KARNATAKA ACT 16 OF 2016)

XX XX XX

15. Vice Chancellor.-

XX XX XX

(3) The Vice Chancellor who shall be an academic person and a Professor, shall hold office for a term of four years or till he attains the age of sixty five years, whichever is earlier.

XX XX XX

17. Arrangement of work during vacancy in the office of the Vice-Chancellor.- (1) During the temporary absence of the Vice-Chancellor by reason of leave, illness or any other cause, the Chancellor may make such arrangements as he deems fit for carrying on the duties of the Vice-Chancellor.

Provided that, pending the making of such arrangements by the Chancellor, the Vice-Chancellor may designate the senior most Director amongst the Director of Training, Publication and Supervision of schools or the Director, Centre for Research, Innovation and Evaluation, to be incharge of the current duties of the Vice-Chancellor for a period not exceeding one month or till arrangements are made by the Chancellor, whichever is earlier.

(2) During the period when a vacancy in the office of the Vice-Chancellor remains unfilled, the senior most Director amongst the Director of Training, Publication and Supervision of all schools or the Director, Centre for Research, Innovation and Evaluation, as the Chancellor may appoint shall act as Vice-Chancellor and the person so appointed shall have all the powers and shall be entitled to all the privileges of the Vice-Chancellor and to such emoluments and allowances as may be determined by the Chancellor in accordance with the Regulations, if any, framed in this behalf.

XX XX XX

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಕಿ7) ಪ್ರತಿಗಳು: 150

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–IVA	ಬೆಂಗಳೂರು, ಮಂಗಳವಾರ, ಜೂನ್ ೨೦, ೨೦೧೭ (ಜ್ಯೇಷ್ಠ ೩೦, ಶಕ ವರ್ಷ ೧೯೩೯)	ನಂ. ೫೫೬
Part–IVA	Bengaluru, Tuesday, June 20, 2017 (Jyeshta 30, Shaka Varsha 1939)	No. 556

KARNATAKA LEGISLATIVE ASSEMBLY SECRETARIAT

NOTIFICATION

No.KLA/LGA/34/Bill/2017, Bengaluru, Dated 20.06.2017

The following Bill was introduced in Legislative Assembly on 20.06.2017.

ಕರ್ನಾಟಕ ವಿಧಾನ ಸಭೆ

ಹದಿನಾಲ್ಕನೇ ವಿಧಾನಸಭೆ

ಹದಿನಾಲ್ಕನೇ ಅಧಿವೇಶನ

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕ, 2017

(2017ರ ವಿಧಾನಸಭೆಯ ವಿಧೇಯಕ ಸಂಖ್ಯೆ–34)

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ ಅಧಿನಿಯಮ, 1993ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ ಅಧಿನಿಯಮ, 1993ನ್ನು (1993ರ ಕರ್ನಾಟಕ ಅಧಿನಿಯಮ 14) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ (ತಿದ್ದುಪಡಿ) ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೆ ಜಾರಿಗೆ ಬರತಕ್ಕದ್ದು.

2. 2ನೇ ಪ್ರಕರಣದ ತಿದ್ದುಪಡಿ.– ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ ಅಧಿನಿಯಮ, 1993ರ (1993ರ ಕರ್ನಾಟಕ ಅಧಿನಿಯಮ 14) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದ (9ಎ) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಎಂದರೆ:–

"(9ಎ) "ಗೊತ್ತುಪಡಿಸಿದ ನ್ಯಾಯಾಲಯ" ಎಂದರೆ, ಗ್ರಾಮ ಪಂಚಾಯತಿಗಳು, ತಾಲ್ಲೂಕು ಪಂಚಾಯತಿಗಳು ಮತ್ತು ಜಿಲ್ಲಾ ಪಂಚಾಯತಿಗಳಿಗೆ ಸಂಬಂಧಿಸಿದ ಚುನಾವಣಾ ವಿವಾದಗಳ ಅಧಿವಿಚಾರಣೆಯನ್ನು ನಡೆಸಲು ಗೊತ್ತುಪಡಿಸಿದ ಅಧಿಕಾರ ವ್ಯಾಪ್ತಿಯುಳ್ಳ ಮತ್ತು ಪಂಚಾಯತ್ ಪ್ರದೇಶವು ಅಥವಾ ಪಂಚಾಯತ್ ಪ್ರದೇಶದ ಬಹಳಷ್ಟು ಭಾಗವು

ಅನುಕ್ರಮವಾಗಿ ಯಾವ ನ್ಯಾಯಾಧೀಶರ ಅಧಿಕಾರ ವ್ಯಾಪ್ತಿಗೆ ಒಳಪಡುತ್ತದೋ, ಆ ಅಧಿಕಾರವ್ಯಾಪ್ತಿಯುಳ್ಳ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ."

3. 13ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 13ನೇ ಪ್ರಕರಣದ (1)ನೇ ಉಪಪ್ರಕರಣದ (ಸಿ) ಖಂಡವನ್ನು ಬಿಟ್ಟುಬಿಡತಕ್ಕದ್ದು.

4. 48ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 48ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಮೊದಲನೇ ಪರಂತುಕಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"ಪರಂತು, ಗ್ರಾಮಪಂಚಾಯತಿಯ ಅಧ್ಯಕ್ಷ ಅಥವಾ ಉಪಾಧ್ಯಕ್ಷನು,–

(i) ದೈಹಿಕ ಅಥವಾ ಮಾನಸಿಕ ಅಶಕ್ತತೆ ಉಳ್ಳವನೆಂದು, ರಾಜ್ಯ ಚುನಾವಣಾ ಆಯೋಗವು ಅನುಮೋದಿಸಿರುವ ಸಕ್ಷಮ ಪ್ರಾಧಿಕಾರವು ಪ್ರಮಾಣೀಕರಿಸಿರುವುದರ ರುಜುವಾತಿನ ಆಧಾರದ ಮೇಲೆ; ಅಥವಾ

(ii) ಕೇಂದ್ರ ಸರ್ಕಾರದಲ್ಲಿ ಅಥವಾ ರಾಜ್ಯ ಸರ್ಕಾರದಲ್ಲಿ ಅಥವಾ ಸಾರ್ವಜನಿಕ ಉದ್ಯಮಗಳಲ್ಲಿ ಉದ್ಯೋಗದಲ್ಲಿರುವುದರ ಆಧಾರದ ಮೇಲೆ;

– ತನ್ನ ಪದಕ್ಕೆ ಅಥವಾ ಸದಸ್ಯತ್ವಕ್ಕೆ ರಾಜೀನಾಮೆಯನ್ನು ನೀಡತಕ್ಕದ್ದು, ಅಥವಾ ಆತನನ್ನು ತೆಗೆದುಹಾಕಲು ಬದ್ಧನಾಗಿರತಕ್ಕದ್ದು."

5. 64ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 64ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ "ಅಥವಾ ಜಾಹೀರಾತು ಫಲಕಗಳನ್ನು ನಿಲ್ಲಿಸಲು" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

6. 129ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 129ನೇ ಪ್ರಕರಣದ (1)ನೇ ಉಪಪ್ರಕರಣದ (ಡಿ) ಖಂಡವನ್ನು ಮತ್ತು ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

7. 141ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 141ನೇ ಪ್ರಕರಣದ (2)ನೇ ಉಪಪ್ರಕರಣದ (ಎ) ಖಂಡದಲ್ಲಿ "ತರುವಾಯ ಪ್ರತಿಯೊಂದು ಸಾಮಾನ್ಯ ಸಭೆಯ ದಿನಾಂಕವನ್ನು ತಾಲ್ಲೂಕು ಪಂಚಾಯತಿಯ ಹಿಂದಿನ ಸಭೆಯಲ್ಲಿ ಗೊತ್ತುಪಡಿಸತಕ್ಕದ್ದು" ಎಂಬ ಪದಗಳಿಗೆ "ತರುವಾಯದ ಪ್ರತಿಯೊಂದು ಸಾಮಾನ್ಯ ಸಭೆಯ ದಿನಾಂಕವನ್ನು ಅಧ್ಯಕ್ಷನು ತೀರ್ಮಾನಿಸತಕ್ಕದ್ದು ಹಾಗೂ ಅದನ್ನು ಆತನು ತಕ್ಷಣದ ಹಿಂದಿನ ತಾಲ್ಲೂಕು ಪಂಚಾಯತಿಯ ಸಭೆಯಲ್ಲಿ ತಿಳಿಸತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

8. 157ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 157ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿ "ಕಾರ್ಯದರ್ಶಿಯು" ಎಂಬ ಪದಕ್ಕೆ "ಕಾರ್ಯನಿರ್ವಾಹಕ ಅಧಿಕಾರಿಯು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

9. 168ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 168ನೇ ಪ್ರಕರಣದ (1)ನೇ ಉಪಪ್ರಕರಣದ (ಡಿ) ಖಂಡವನ್ನು ಮತ್ತು ಅದರ ಅಡಿಯಲ್ಲಿಯ ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

10. 180ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 180ನೇ ಪ್ರಕರಣದ (2)ನೇ ಉಪಪ್ರಕರಣದ (ಎ) ಖಂಡದಲ್ಲಿ "ತರುವಾಯ ಪ್ರತಿಯೊಂದು ಸಾಮಾನ್ಯ ಸಭೆಯ ದಿನಾಂಕವನ್ನು ಜಿಲ್ಲಾ ಪಂಚಾಯತಿಯ ಹಿಂದಿನ ಸಭೆಯಲ್ಲಿ ಗೊತ್ತುಪಡಿಸತಕ್ಕದ್ದು" ಎಂಬ ಪದಗಳಿಗೆ "ತರುವಾಯದ ಪ್ರತಿಯೊಂದು ಸಾಮಾನ್ಯ ಸಭೆಯ ದಿನಾಂಕವನ್ನು ಅಧ್ಯಕ್ಷನು ತೀರ್ಮಾನಿಸತಕ್ಕದ್ದು ಹಾಗೂ ಅದನ್ನು ಆತನು ತಕ್ಷಣದ ಹಿಂದಿನ ಜಿಲ್ಲಾ ಪಂಚಾಯತಿಯ ಸಭೆಯಲ್ಲಿ ತಿಳಿಸತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

11. 199ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 199ನೇ ಪ್ರಕರಣದ (3)ನೇ ಉಪಪ್ರಕರಣದ (ಸಿ) ಖಂಡವನ್ನು ಬಿಟ್ಟುಬಿಡತಕ್ಕದ್ದು.

12. 246ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 246ನೇ ಪ್ರಕರಣದಲ್ಲಿ, "ರಾಜ್ಯ ಲೆಕ್ಕಪತ್ರ ನಿಯಂತ್ರಕರು" ಎಂಬ ಪದಗಳು ಎಲ್ಲೆಲ್ಲಿ ಬರುವವೋ ಅಲ್ಲೆಲ್ಲ "ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ ಇಲಾಖೆ" ಎಂಬ ಪದಗಳನ್ನು ಪ್ರತ್ಯಯಗಳೊಂದಿಗೆ, ಅಲ್ಪವಿರಾಮ ಚಿಹ್ನೆಯೊಂದಿಗೆ ಹಾಗೂ ವ್ಯಾಕರಣ ವ್ಯತ್ಯಾಸಗಳೊಂದಿಗೆ ಪ್ರತಿಯೋಜಿಸತಕ್ಕದ್ದು.

13. 296ಎ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 296ಎ ಪ್ರಕರಣದ (1)ನೇ ಉಪಪ್ರಕರಣದಲ್ಲಿ "ಅಧಿಕಾರಿಯನ್ನು" ಎಂಬ ಪದಕ್ಕೆ ಮೊದಲು "ನಿವೃತ್ತ" ಎಂಬ ಪದವನ್ನು ಸೇರಿಸತಕ್ಕದ್ದು ಮತ್ತು ಯಾವಾಗಲೂ ಹಾಗೆ ಸೇರಿಸಲಾಗಿದೆ ಎಂದು ಭಾವಿಸತಕ್ಕದ್ದು.

14. 308ಎಬಿ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 308ಎಬಿ ಪ್ರಕರಣದ (1)ನೇ ಉಪಪ್ರಕರಣದಲ್ಲಿ "ರಾಜ್ಯ ಚುನಾವಣಾ ಆಯೋಗವು" ಎಂಬ ಪದಗಳಿಗೆ "ಚುನಾವಣಾಧಿಕಾರಿಯು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

15. 308ಎಡಿ ಹೊಸ ಪ್ರಕರಣದ ಸೇರ್ಪಡೆ.– ಮೂಲ ಅಧಿನಿಯಮದ 308ಎಸಿ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"308ಎಡಿ. ಚುನಾವಣಾ ವೆಚ್ಚದ ಲೆಕ್ಕ ಮತ್ತು ಆ ವೆಚ್ಚದ ಗರಿಷ್ಠ ಮೊತ್ತ.– (1) ಈ ಅಧಿನಿಯಮದ ಅಡಿಯಲ್ಲಿ ಜಿಲ್ಲಾ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯಿತಿ ಚುನಾವಣೆಯಲ್ಲಿ ಪ್ರತಿಯೊಬ್ಬ ಅಭ್ಯರ್ಥಿಯು ತಾನಾಗಿಯೇ ಆಗಲಿ ಅಥವಾ ತನ್ನ ಚುನಾವಣಾ ಏಜಂಟಿನಿಂದಾಗಲಿ, ಎಲ್ಲಾ ವೆಚ್ಚಗಳಿಗೆ, ತನ್ನನ್ನು ನಾಮನಿರ್ದೇಶನ ಮಾಡಿದ ದಿನಾಂಕದಿಂದ ಅದರ ಫಲಿತಾಂಶವು ಘೋಷಿತವಾದ ದಿನಾಂಕದ ನಡುವೆ, ಎರಡೂ ದಿನಾಂಕಗಳು ಸೇರಿದಂತೆ, ಚುನಾವಣೆಯ ಸಂಬಂಧದಲ್ಲಿ ತಾನು ಅಥವಾ ತನ್ನ ಚುನಾವಣಾ ಏಜೆಂಟನು ವಹಿಸಿದ ಅಥವಾ ಪ್ರಾಧೀಕರಿಸಿದ ಎಲ್ಲ ವೆಚ್ಚಗಳ ಬಗ್ಗೆ ಪ್ರತ್ಯೇಕವಾದ ಮತ್ತು ಸರಿಯಾದ ಲೆಕ್ಕವನ್ನು ಇಡತಕ್ಕದ್ದು.

(2) (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಅಭ್ಯರ್ಥಿಯ ಚುನಾವಣೆಯ ಸಂಬಂಧದಲ್ಲಿ ಒಂದು ರಾಜಕೀಯ ಪಕ್ಷವು ಅಥವಾ ಯಾವುದೇ ಇತರ ಅಸೋಶಿಯೇಷನ್ ಅಥವಾ ನಿಕಾಯ ಅಥವಾ ವ್ಯಕ್ತಿಗಳು ಅಥವಾ ಯಾವೊಬ್ಬ ವ್ಯಕ್ತಿಯು (ಅಭ್ಯರ್ಥಿ ಅಥವಾ ಆತನ ಚುನಾವಣಾ ಏಜೆಂಟನನ್ನು ಹೊರತುಪಡಿಸಿ) ವಹಿಸಿದ ಅಥವಾ ಪ್ರಾಧೀಕರಿಸಿದ ಯಾವುದೇ ವೆಚ್ಚವನ್ನು ಅಭ್ಯರ್ಥಿಯು ಅಥವಾ ಆತನ ಚುನಾವಣಾ ಏಜೆಂಟನು (1)ನೇ ಉಪ ಪ್ರಕರಣದ ಉದ್ದೇಶಕ್ಕಾಗಿ ಚುನಾವಣೆಗೆ ಸಂಬಂಧಿಸಿದಂತೆ ವಹಿಸಿದ ಅಥವಾ ಪ್ರಾಧೀಕರಿಸಿದ ವೆಚ್ಚವೆಂದು ಭಾವಿಸತಕ್ಕದ್ದಲ್ಲ.

ವಿವರಣೆ 1: ಈ ಉಪಪ್ರಕರಣದ ಉದ್ದೇಶಕ್ಕಾಗಿ **"**ರಾಜಕೀಯ ಪಕ್ಷ**"**ವು, ತತ್ಕಾಲದಲ್ಲಿ ಜಾರಿಯಲ್ಲಿರುವ 1968ರ ಚುನಾವಣಾ ಚಿಹ್ನೆಗಳು (ಮೀಸಲಾತಿ ಮತ್ತು ಹಂಚಿಕೆ) ಆದೇಶದಲ್ಲಿನ ಅರ್ಥವನ್ನೇ ಹೊಂದಿರತಕ್ಕದ್ದು.

ವಿವರಣೆ 2: ಸಂದೇಹಗಳ ನಿವಾರಣೆಗಾಗಿ, ಸರ್ಕಾರದ ಸೇವೆಯಲ್ಲಿರುವ ಅಥವಾ ಜಿಲ್ಲಾ ಪಂಚಾಯಿತಿ ಅಥವಾ ಸಂದರ್ಭಾನುಸಾರವಾಗಿ ತಾಲ್ಲೂಕು ಪಂಚಾಯಿತಿ ಸೇವೆಯಲ್ಲಿರುವ ಯಾವೊಬ್ಬ ವ್ಯಕ್ತಿಯು, (ಅಭ್ಯರ್ಥಿಯು ಧಾರಣ ಮಾಡಿದ ಹುದ್ದೆಯ ಕಾರಣದಿಂದಾಗಲಿ ಅಥವಾ ಇತರ ಯಾವುದೇ ಕಾರಣದಿಂದಾಗಲಿ) ಯಾವೊಬ್ಬ ಅಭ್ಯರ್ಥಿ ಅಥವಾ ಅವನ ಚುನಾವಣಾ ಏಜೆಂಟ್ ಅಥವಾ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಮ್ಮತಿಯೊಡನೆ ಕಾರ್ಯನಿರ್ವಹಿಸುವ ಇತರ ಯಾವೊಬ್ಬ ವ್ಯಕ್ತಿಗಾಗಿ, ವ್ಯಕ್ತಿಗೆ, ಅಥವಾ ವ್ಯಕ್ತಿಯ ಸಂಬಂಧದಲ್ಲಿ ತನ್ನ ಅಧಿಕೃತ ಕರ್ತವ್ಯದ ನೆರವೇರಿಕೆಯಲ್ಲಿ ಅಥವಾ ನೆರವೇರಿಕೆ ಎಂದು ತಾತ್ಪರ್ಯವಾಗುವಲ್ಲಿ ಮಾಡಿದ ಯಾವುದೇ ವ್ಯವಸ್ಥೆ, ಒದಗಿಸಿದ ಸೌಲಭ್ಯಗಳು ಅಥವಾ ಮಾಡಿದ ಯಾವುದೇ ಇತರ ಕಾರ್ಯ ಅಥವಾ ಕೃತ್ಯದ ಸಂಬಂಧದಲ್ಲಿ ವಹಿಸಿದ ಯಾವುದೇ ವೆಚ್ಚವನ್ನು, ಈ ಪ್ರಕರಣದ ಉದ್ದೇಶಕ್ಕಾಗಿ ಒಬ್ಬ ಅಭ್ಯರ್ಥಿಯು ಅಥವಾ ಚುನಾವಣಾ ಏಜೆಂಟನು, ಚುನಾವಣೆಯ ಸಂಬಂಧದಲ್ಲಿ ವಹಿಸಿದ ಅಥವಾ ಪ್ರಾಧೀಕರಿಸಿದ ವೆಚ್ಚವೆಂಬುದಾಗಿ ಭಾವಿಸತಕ್ಕದ್ದಲ್ಲ ಎಂದು ಈ ಮೂಲಕ ಘೋಷಿಸಲಾಗಿದೆ.

(3) ಲೆಕ್ಕಪತ್ರವು, ನಿಯಮಿಸಬಹುದಾದ ಅಂತಹ ವಿವರಗಳನ್ನು ಒಳಗೊಂಡಿರತಕ್ಕದ್ದು.

(4) ಸದರಿ ಒಟ್ಟು ವೆಚ್ಚವು ನಿಯಮಿಸಬಹುದಾದ ಅಂತಹ ಮೊತ್ತವನ್ನು ಮೀರತಕ್ಕದ್ದಲ್ಲ."

16. 310ಎ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 310ಎ ಪ್ರಕರಣದ (2)ನೇ ಉಪಪ್ರಕರಣದ (v) ಖಂಡದಲ್ಲಿ **"**ಪ್ರತಿ ಜಿಲ್ಲಾ ಪಂಚಾಯತಿಯಿಂದ**"** ಎಂಬ ಪದಗಳಿಗೆ **"**ಸರ್ಕಾರದಿಂದ**"** ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

17. ಅನುಸೂಚಿ–IVರ ತಿದ್ದುಪಡಿ.– ಮೂಲ ಅಧಿನಿಯಮದ ಅನುಸೂಚಿ–IVರಲ್ಲಿ, (ಸಿ) ಖಂಡ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು.

18. ಬಾಕಿಯಿರುವ ಪ್ರಕರಣಗಳ ವರ್ಗಾವಣೆ.– ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ (ತಿದ್ದುಪಡಿ) ಅಧಿನಿಯಮ, 2017 ಜಾರಿಗೆ ಬಂದ ದಿನಾಂಕದಂದು ಜಿಲ್ಲಾ ಪಂಚಾಯತಿಯ ಚುನಾವಣೆ ವಿವಾದಗಳಿಗೆ ಸಂಬಂಧಿಸಿದಂತೆ, ಅಧಿಕಾರ ವ್ಯಾಪಿಯುಳ್ಳ ಜಿಲ್ಲಾ ನ್ಯಾಯಾಧೀಶರ ಮುಂದೆ ಬಾಕಿಯಿರುವ ಎಲ್ಲಾ ಪ್ರಕರಣಗಳನ್ನು ಅಧಿಕಾರವ್ಯಾಪ್ತಿಯುಳ್ಳ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಕ್ಕೆ ಕೂಡಲೇ ವರ್ಗಾಯಿಸತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ ಅಧಿನಿಯಮ, 1993ನ್ನು (1993ರ ಕರ್ನಾಟಕ ಅಧಿನಿಯಮ 14) ಈ ಮುಂದಿನವುಗಳಿಗಾಗಿ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ, ಎಂದರೆ:–

(1) ಗ್ರಾಮ ಪಂಚಾಯತಿ, ತಾಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಯ ಚುನಾವಣಾ ವಿವಾದಗಳನ್ನು ನಿರ್ವಹಿಸಲು ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಕ್ಕೆ ಅಧಿಕಾರವ್ಯಾಪ್ತಿಯನ್ನು ವಹಿಸುವುದು.

(2) 13ನೇ ಪ್ರಕರಣದ (1)ನೇ ಉಪಪ್ರಕರಣದ (ಸಿ) ಖಂಡದ ಉಪಬಂಧವನ್ನು ಬಿಟ್ಟುಬಿಡುವುದು.

(3) ಸರಕುಗಳು ಮತ್ತು ಸೇವಾ ತೆರಿಗೆಯು ಜಾರಿಯಾದ ಪರಿಣಾಮವಾಗಿ ಪಂಚಾಯತಿಯು ಜಾಹೀರಾತು ತೆರಿಗೆಯನ್ನು ವಿಧಿಸುವ ಕುರಿತಾದ ಉಪಬಂಧಗಳನ್ನು ಬಿಟ್ಟುಬಿಡುವುದು.

ಕೆಲವು ಇತರ ಆನುಷಂಗಿಕ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತು ಜ್ಞಾಪನ ಪತ್ರ

ಖಂಡ: 15	(1) 15ನೇ ಖಂಡದ ಮೂಲಕ ಸೇರಿಸಲು ಉದ್ದೇಶಿಸಿರುವ 308ಎಡಿ ಪ್ರಕರಣದ (3)ನೇ ಉಪಪ್ರಕರಣವು ಚುನಾವಣಾ ವೆಚ್ಚಗಳ ಲೆಕ್ಕಪತ್ರವು ಒಳಗೊಳ್ಳಬೇಕಾದ ವಿವರಗಳ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. (2) 15ನೇ ಖಂಡದ ಮೂಲಕ ಸೇರಿಸಲು ಉದ್ದೇಶಿಸಿರುವ 308ಎಡಿ ಪ್ರಕರಣದ (4)ನೇ ಉಪಪ್ರಕರಣವು ಮೀರಲಾಗದಂಥ ಗರಿಷ್ಠ ಚುನಾವಣಾ ವೆಚ್ಚದ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

ಹೆಚ್. ಕೆ. ಪಾಟೀಲ್
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್‌ಮಂತ್ರಿಗಳು

ಎಸ್. ಮೂರ್ತಿ
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

ಅನುಬಂಧ

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ
(1993ರ ಕರ್ನಾಟಕ ಅಧಿನಿಯಮ 14) ಉದ್ಧೃತ ಭಾಗ

XX XX XX

2. ಅರ್ಥ ವಿವರಣೆಗಳು.– ಈ ಅಧಿನಿಯಮದಲ್ಲಿ, ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯ ಇರದಿದ್ದರೆ,–

XX XX XX

(9ಎ) **"ಗೊತ್ತುಪಡಿಸಿದ ನ್ಯಾಯಾಲಯ"** ಎಂದರೆ, ಗ್ರಾಮ ಪಂಚಾಯತಿಗಳಿಗೆ ಮತ್ತು ತಾಲ್ಲೂಕು ಪಂಚಾಯತಿಗಳಿಗೆ ಸಂಬಂಧಿಸಿದ ಚುನಾವಣಾ ವಿವಾದಗಳನ್ನು ಅಧಿವಿಚಾರಣೆಯನ್ನು ನಡೆಸಲು ಅಧಿಕಾರ ವ್ಯಾಪ್ತಿಯುಳ್ಳ ಗೊತ್ತುಪಡಿಸಿದ, ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಮತ್ತು ಪಂಚಾಯತ್ ಪ್ರದೇಶವು ಅಥವಾ ಪಂಚಾಯತ್ ಪ್ರದೇಶದ ಬಹಳಷ್ಟು ಭಾಗವು ಯಾವ ಜಿಲ್ಲಾ ಪಂಚಾಯತ್‌ಗಳ ವ್ಯಾಪ್ತಿಗೆ ಬರುವವೋ ಆ ಜಿಲ್ಲಾ ಪಂಚಾಯತಿಗಳು ಅನುಕ್ರಮವಾಗಿ ಯಾವ ಜಿಲ್ಲಾ ನ್ಯಾಯಾಧೀಶರ ಅಧಿಕಾರ ವ್ಯಾಪ್ತಿಗೆ ಒಳಪಡುತ್ತವೋ ಆ ಜಿಲ್ಲಾ ಪಂಚಾಯತ್‌ಗಳಿಗೆ

ಸಂಬಂಧಿಸಿದ ಚುನಾವಣಾ ವಿವಾದಗಳ ಅಧಿವಿಚಾರಣೆಗಾಗಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಜಿಲ್ಲಾ ನ್ಯಾಯಾಧೀಶರ ನ್ಯಾಯಾಲಯ.

XX XX XX

13. ಸದಸ್ಯರ ಸ್ಥಾನವು ಖಾಲಿಯಾಗುವುದು.– (1) ಗ್ರಾಮ ಪಂಚಾಯತಿಯ ಸದಸ್ಯನು,–

(ಎ) 12ನೇ ಪ್ರಕರಣದಲ್ಲಿ ಹೇಳಿರುವ ಯಾವುವೇ ಅನರ್ಹತೆಗಳಿಗೊಳಗಾಗಿದ್ದರೆ ಅಥವಾ ಒಳಗಾದರೆ; ಅಥವಾ

(ಬಿ) 53ನೇ ಪ್ರಕರಣದ (4) ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಮತ ಚಲಾಯಿಸಿದರೆ ಅಥವಾ ಚರ್ಚೆಯಲ್ಲಿ ಭಾಗವಹಿಸಿದರೆ; ಅಥವಾ

(ಸಿ) ಗ್ರಾಮ ಪಂಚಾಯತಿಯ ಅನುಮತಿ ಇಲ್ಲದೆ ಗ್ರಾಮ ಪಂಚಾಯತಿಯ ಮೂರಕ್ಕಿಂತ ಹೆಚ್ಚು ಅನುಕ್ರಮ ಸಾಮಾನ್ಯ ಸಭೆಗಳಿಗೆ ಗೈರು ಹಾಜರಾದರೆ,–

–ಸಂದರ್ಭಾನುಸಾರ ಅವನ ಸ್ಥಾನವು ಖಾಲಿಯಾಗಿರುವುದಾಗಿ ಅಥವಾ ಖಾಲಿಯಾಗಿದೆ ಎಂದು ಭಾವಿಸತಕ್ಕದ್ದು:

XX XX XX

48. ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ರಾಜೀನಾಮೆ ಅಥವಾ ತೆಗೆದುಹಾಕುವಿಕೆ.– (1) ಗ್ರಾಮ ಪಂಚಾಯತಿಯ ಅಧ್ಯಕ್ಷನು, ತನ್ನ ಸಹಿ ಸಹಿತ ಅಸಿಸ್ಟೆಂಟ್ ಕಮೀಷನರ್ ಅವರಿಗೆ ಬರಹದಲ್ಲಿ ಬರೆದು ತನ್ನ ಹುದ್ದೆಗೆ ರಾಜೀನಾಮೆ ನೀಡಬಹುದು ಮತ್ತು ಗ್ರಾಮ ಪಂಚಾಯತಿಯ ಉಪಾಧ್ಯಕ್ಷನು ತನ್ನ ಸಹಿ ಸಹಿತ ಅಧ್ಯಕ್ಷರಿಗೆ ಬರಹದಲ್ಲಿ ಬರೆದು ಮತ್ತು ಅಧ್ಯಕ್ಷನು ಇಲ್ಲದಿದ್ದಾಗ ತನ್ನ ಸಹಿ ಸಹಿತ ಅಸಿಸ್ಟೆಂಟ್ ಕಮೀಷನರ್ ಅವರಿಗೆ ಬರಹದಲ್ಲಿ ಬರೆದು ತನ್ನ ಹುದ್ದೆಗೆ ರಾಜೀನಾಮೆ ನೀಡಬಹುದು.

ಪರಂತು, ಗ್ರಾಮ ಪಂಚಾಯತಿಯ ಅಧ್ಯಕ್ಷ ಅಥವಾ ಉಪಾಧ್ಯಕ್ಷನು, ತನ್ನ ಪದಕ್ಕೆ ಅಥವಾ ಸದಸ್ಯತ್ವಕ್ಕೆ ರಾಜೀನಾಮೆಯನ್ನು ನೀಡತಕ್ಕದ್ದು ಅಥವಾ,–

(i) ದೈಹಿಕ ಅಥವಾ ಮಾನಸಿಕ ಅಶಕ್ತತೆ ಉಳ್ಳವನೆಂದು ರಾಜ್ಯ ಚುನಾವಣಾ ಆಯೋಗವು ಅನುಮೋದಿಸಿರುವ ಸಕ್ಷಮ ಪ್ರಾಧಿಕಾರವು ಪ್ರಮಾಣೀಕರಿಸಿರುವುದರ ರುಜುವಾತಿನ ಆಧಾರದ ಮೇಲೆ; ಅಥವಾ

(ii) ಕೇಂದ್ರ ಸರ್ಕಾರದಲ್ಲಿ ಅಥವಾ ರಾಜ್ಯ ಸರ್ಕಾರದಲ್ಲಿ ಅಥವಾ ಸಾರ್ವಜನಿಕ ಉದ್ಯಮಗಳಲ್ಲಿ ಉದ್ಯೋಗದಲ್ಲಿರುವುದರ ಆಧಾರದ ಮೇಲೆ;

– ಆತನನ್ನು ತೆಗೆದುಹಾಕಲು ಬದ್ಧನಾಗಿರತಕ್ಕದ್ದು:

XX XX XX

64. ಕಟ್ಟಡಗಳ ನಿರ್ಮಾಣದ ಬಗ್ಗೆ ನಿಯಂತ್ರಣ.– (1) ಗೊತ್ತುಪಡಿಸಬಹುದಾದಂಥ ನಿಯಮಗಳಿಗೊಳಪಟ್ಟು ಯಾವನೇ ವ್ಯಕ್ತಿಯು, ಗ್ರಾಮ ಪಂಚಾಯತಿಯಿಂದ ಬರಹದ ಅನುಮತಿಯಿಲ್ಲದೆ ಯಾವುದೇ ಕಟ್ಟಡವನ್ನು ನಿರ್ಮಿಸತಕ್ಕದ್ದಲ್ಲ ಅಥವಾ ಅಸ್ತಿತ್ವದಲ್ಲಿರುವ ಯಾವುದೇ ಕಟ್ಟಡವನ್ನು ಬದಲಾಯಿಸತಕ್ಕದ್ದಲ್ಲ ಅಥವಾ ಜಾಹೀರಾತು ಫಲಕಗಳನ್ನು ನಿಲ್ಲಿಸಲು ಅಥವಾ ಆವರಣಗಳ ಒಳಗೆ ಖಾಲಿ ಇರುವ ಯಾವುದೇ ಜಾಗದಲ್ಲಿ ಅಥವಾ ಆ ಸ್ಥಳಕ್ಕೆ ಹೊಂದಿಕೊಂಡಿರುವ ಮೊಬೈಲ್ ಟವರ್‌ಗಳನ್ನು ಸ್ಥಾಪಿಸಲು ಅದಕ್ಕೆ ಸೇರ್ಪಡೆ ಮಾಡತಕ್ಕದ್ದಲ್ಲ ಅಥವಾ ಯಾವುದೇ ಕಟ್ಟಡವನ್ನು ಪುನರ್‌ನಿರ್ಮಿಸತಕ್ಕದ್ದಲ್ಲ. ಉಪವಿಧಿಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಶುಲ್ಕವನ್ನು ಸಂದಾಯ ಮಾಡಿದ ಮೇಲೆ ಅನುಮತಿಯನ್ನು ನೀಡಬಹುದು.

XX XX XX

129. ಸ್ಥಾನವು ಖಾಲಿಯಾಗುವುದು.– (1) ತಾಲ್ಲೂಕು ಪಂಚಾಯತಿಯ ಯಾವನೇ ಸದಸ್ಯನು,–

XX XX XX

(ಡಿ) ಚುನಾಯಿತ ಸದಸ್ಯನಾಗಿರುವ ಅವನು, ಆರು ತಿಂಗಳು ಮೀರದ ಗೈರು ಹಾಜರಿಗಾಗಿ ಅವನಿಗೆ ತಾಲ್ಲೂಕು ಪಂಚಾಯತಿಯು ಅನುಮತಿ ನೀಡಿದ್ದ ಹೊರತು, ತಾಲ್ಲೂಕು ಪಂಚಾಯತಿಯ ಮೂರಕ್ಕೂ ಮೀರದ ಅನುಕ್ರಮ ಸಾಮಾನ್ಯ ಸಭೆಗಳಿಗೆ ಗೈರು ಹಾಜರಾದರೆ

–ಅವನ ಸ್ಥಾನವು, ಸಂದರ್ಭಾನುಸಾರ ಖಾಲಿಯಾಗಿದೆಯೆಂದು ಅಥವಾ ಖಾಲಿಯಾಗಿರುವುದಾಗಿ ಭಾವಿಸತಕ್ಕದ್ದು:

ಪರಂತು, (ಡಿ) ಖಂಡದ ಅಡಿಯಲ್ಲಿ ಗೈರುಹಾಜರಾಗಲು ಅನುಮತಿಗಾಗಿ ತಾಲ್ಲೂಕು ಪಂಚಾಯಿತಿಗೆ ಸದಸ್ಯನು ಅರ್ಜಿಯನ್ನು ಸಲ್ಲಿಸಿರುವಲ್ಲಿ ಮತ್ತು ಆ ಅರ್ಜಿಯ ದಿನಾಂಕದಿಂದ ಒಂದು ತಿಂಗಳಿನ ಅವಧಿಯೊಳಗೆ, ತಾಲ್ಲೂಕು ಪಂಚಾಯತಿಯು ಆ ಅರ್ಜಿಯ ಬಗ್ಗೆ ಅದರ ತೀರ್ಮಾನವನ್ನು ಅರ್ಜಿದಾರನಿಗೆ ತಿಳಿಸಲು ತಪ್ಪಿದಲ್ಲಿ, ಕೋರಿಕೊಂಡ ಅನುಮತಿಯನ್ನು ತಾಲ್ಲೂಕು ಪಂಚಾಯತಿಯು ಮಂಜೂರ್ಮಾಡಿರುವುದಾಗಿ ಭಾವಿಸತಕ್ಕದ್ದು.

XX XX XX

141. ತಾಲ್ಲೂಕು ಪಂಚಾಯತಿಯ ಸಭೆಗಳು.– (1) **XX XX XX**

(2) (ಎ) ತಾಲ್ಲೂಕು ಪಂಚಾಯತಿಯ ಪ್ರಥಮ ಸಭೆಯ ದಿನಾಂಕವನ್ನು ಅದರ ಮೊದಲ ರಚನೆಯ ಅಥವಾ ಪುನರಚನೆಯ ತರುವಾಯ 1[ಅಥವಾ ಸಂದರ್ಭಾನುಸಾರ ಅಧ್ಯಕ್ಷನ ಅಥವಾ ಉಪಾಧ್ಯಕ್ಷನ ಚುನಾವಣೆಯ ಉದ್ದೇಶಕ್ಕಾಗಿ ನಡೆಸಲಾಗುವ ತರುವಾಯದ ಸಭೆಯ ದಿನಾಂಕವನ್ನು]1 ಅಸಿಸ್ಟೆಂಟ್ ಕಮಿಷನರ್ ಅವರು ಗೊತ್ತುಪಡಿಸತಕ್ಕದ್ದು, ಅವರು ಅಂಥ ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು ಮತ್ತು ತರುವಾಯ ಪ್ರತಿಯೊಂದು ಸಾಮಾನ್ಯ ಸಭೆಯ ದಿನಾಂಕವನ್ನು ತಾಲ್ಲೂಕು ಪಂಚಾಯತಿಯ ಹಿಂದಿನ ಸಭೆಯಲ್ಲಿ ಗೊತ್ತುಪಡಿಸತಕ್ಕದ್ದು, ಪರಂತು, ಅಧ್ಯಕ್ಷನು ಸಾಕಷ್ಟು ಕಾರಣಗಳಿಗಾಗಿ ಆ ಸಭೆಯ ದಿವಸವನ್ನು ತರುವಾಯದ ದಿನಾಂಕಕ್ಕೆ ಬದಲಾಯಿಸಬಹುದು. ಅಧ್ಯಕ್ಷನು, ಸೂಕ್ತವೆಂದು ತಾನು ಯೋಚಿಸಿದಾಗಲೆಲ್ಲ ವಿಶೇಷ ಸಬೆಯನ್ನು ಕರೆಯಬಹುದು ಮತ್ತು ಸದಸ್ಯರ ಒಟ್ಟು ಸಂಖ್ಯೆಯ ಮೂರನೇ ಒಂದು ಭಾಗಕ್ಕಿಂತ ಕಡಿಮೆಯಿಲ್ಲದಷ್ಟು ಸದಸ್ಯರ ಬರಹದಲ್ಲಿನ ಕೋರಿಕೆಯ ಮೇರೆಗೆ ಮತ್ತು ಅಂಥ ಕೋರಿಕೆಯನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ದಿವಸಗಳೊಳಗೆ ಅದನ್ನು ಕರೆಯತಕ್ಕದ್ದು. ಅಂಥ ಕೋರಿಕೆಯಲ್ಲಿ ಯಾವ ಉದ್ದೇಶಕ್ಕಾಗಿ ಆ ಸಭೆಯನ್ನು ಕರೆಯಲು ಉದ್ದೇಶಿಸಲಾಗಿದೆಯೋ ಆ ವಿಷಯವನ್ನು ನಿರ್ದಿಷ್ಟಪಡಿಸತಕ್ಕದ್ದು. ಅಧ್ಯಕ್ಷನು ವಿಶೇಷ ಸಭೆಯನ್ನು ಕರೆಯಲು ತಪ್ಪಿದರೆ, ಉಪಾಧ್ಯಕ್ಷನು ಅಥವಾ ಸದಸ್ಯರ ಒಟ್ಟು ಸಂಖ್ಯೆಯ ಮೂರನೇ ಒಂದರಷ್ಟು ಸದಸ್ಯರು ಅಂಥ ಕೋರಿಕೆಯನ್ನು ಸಲ್ಲಿಸಿದ ತರುವಾಯ ಹದಿನೈದು ದಿವಸಗಳಿಗೆ ಮೀರದೆ ಒಂದು ದಿನ ವಿಶೇಷ ಸಭೆಯನ್ನು ಕರೆಯಬಹುದು ಮತ್ತು ಸದಸ್ಯರಿಗೆ ನೋಟೀಸನ್ನು ಕೊಡಲು ಮತ್ತು ಸಭೆಯನ್ನು ಕರೆಯಲು ಅವಶ್ಯವಾಗಬಹುದಾದಂಥ ಕ್ರಮವನ್ನು ಕೈಗೊಳ್ಳಲು ಕಾರ್ಯನಿರ್ವಾಹಕ ಅಧಿಕಾರಿಯನ್ನು ಅಗತ್ಯಪಡಿಸಬಹುದು.

XX XX XX

157. ದಾಖಲೆ ಇತ್ಯಾದಿಗಳನ್ನು ಕಡ್ಡಾಯವಾಗಿ ಕೋರಲು ಕಾರ್ಯನಿರ್ವಾಹಕ ಅಧಿಕಾರಿಯ ಹಕ್ಕು.–

XX XX XX

(4) ಈ ಪ್ರಕರಣದ ಅಡಿಯಲ್ಲಿ ಕಾರ್ಯದರ್ಶಿಯು ಮಾಡಿದ ಆದೇಶದ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಅಪೀಲು ಮಾಡಿಕೊಳ್ಳಲು ಅವಕಾಶವಿರತಕ್ಕದ್ದು.

XX XX XX

168. ಸ್ಥಾನವು ಖಾಲಿಯಾಗಿರುವುದು.– (1) ಜಿಲ್ಲಾ ಪಂಚಾಯತಿಯ ಯಾವನೇ ಸದಸ್ಯನು,–

XX XX XX

(ಡಿ) ಚುನಾಯಿತ ಸದಸ್ಯನಾಗಿರುವ ಅವನು ಆರು ತಿಂಗಳು ಮೀರದ ಗೈರುಹಾಜರಿಗಾಗಿ ಅವನಿಗೆ ಜಿಲ್ಲಾ ಪಂಚಾಯತಿಯು ಅನುಮತಿಯನ್ನು ಕೊಟ್ಟಿದ್ದ ಹೊರತು, ಜಿಲ್ಲಾ ಪಂಚಾಯತಿಯ ಮೂರಕ್ಕೂ ಮೀರಿದ ಅನುಕ್ರಮ ಸಾಮಾನ್ಯ ಸಭೆಗಳಿಗೆ ಗೈರುಹಾಜರಾದರೆ

–ಅವನ ಸ್ಥಾನವು ಸಂದರ್ಭಾನುಸಾರ ಖಾಲಿಯಾಗಿದೆಯೆಂದು ಅಥವಾ ಖಾಲಿಯಾಗಿರುವುದಾಗಿ ಭಾವಿಸತಕ್ಕದ್ದು:

ಪರಂತು, (ಡಿ) ಖಂಡದ ಅಡಿಯಲ್ಲಿ ಗೈರು ಹಾಜರಾಗಲು ಅನುಮತಿಗಾಗಿ ಜಿಲ್ಲಾ ಪಂಚಾಯತಿಗೆ ಸದಸ್ಯನು ಅರ್ಜಿಯನ್ನು ಸಲ್ಲಿಸಿರುವಲ್ಲಿ ಮತ್ತು ಆ ಅರ್ಜಿಯ ದಿನಾಂಕದಿಂದ ಒಂದು ತಿಂಗಳಿನ ಅವಧಿಯೊಳಗೆ ಜಿಲ್ಲಾ ಪಂಚಾಯತಿಯು ಆ ಅರ್ಜಿಯ ಬಗ್ಗೆ ತನ್ನ ತೀರ್ಮಾನವನ್ನು ಅರ್ಜಿದಾರನಿಗೆ ತಿಳಿಸಲು ತಪ್ಪಿದಲ್ಲಿ ಕೋರಿಕೊಂಡ ಅನುಮತಿಯನ್ನು ಜಿಲ್ಲಾ ಪಂಚಾಯತಿಯು ಮಂಜೂರ್ಮಾಡಿದೆಯಾಗಿ ಭಾವಿಸತಕ್ಕದ್ದು.

XX XX XX

180. ಜಿಲ್ಲಾ ಪಂಚಾಯತಿಯ ಸಭೆಗಳು.– (1) **XX XX XX**

(2) (ಎ) ಜಿಲ್ಲಾ ಪಂಚಾಯತಿಯ ಪ್ರಥಮ ಸಭೆಯ ದಿನಾಂಕವನ್ನು ಅದರ ಮೊದಲ ರಚನೆಯ ಅಥವಾ ಪುನರಚನೆಯ ತರುವಾಯ ಅಥವಾ ಸಂದರ್ಭಾನುಸಾರ ಅಧ್ಯಕ್ಷನ ಅಥವಾ ಉಪಾಧ್ಯಕ್ಷನ ಚುನಾವಣೆಯ ಉದ್ದೇಶಕ್ಕಾಗಿ ನಡೆಸಲಾಗುವ ತರುವಾಯದ ಸಭೆಯ ದಿನಾಂಕವನ್ನು ಕಮಿಶನರ್ ಅವರು ಗೊತ್ತುಪಡಿಸತಕ್ಕದ್ದು. ಅವರು ಅಂಥ ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು ಮತ್ತು ತರುವಾಯ ಪ್ರತಿಯೊಂದು ಸಾಮಾನ್ಯ ಸಭೆಯ ದಿನಾಂಕವನ್ನು ಜಿಲ್ಲಾ ಪಂಚಾಯತಿಯ ಹಿಂದಿನ ಸಭೆಯಲ್ಲಿ ಗೊತ್ತುಪಡಿಸತಕ್ಕದ್ದು. ಪರಂತು ಅಧ್ಯಕ್ಷನು ಸಾಕಷ್ಟು ಕಾರಣಗಳಿಗಾಗಿ ಆ ಸಭೆಯ ದಿವಸವನ್ನು ತರುವಾಯದ ದಿನಾಂಕಕ್ಕೆ ಬದಲಾಯಿಸಬಹುದು. ಅಧ್ಯಕ್ಷನು ಸೂಕ್ತವೆಂದು ತಾನು ಯೋಚಿಸಿದಾಗಲೆಲ್ಲಾ ವಿಶೇಷ ಸಭೆಯನ್ನು ಕರೆಯಬಹುದು ಮತ್ತು ಸದಸ್ಯರ ಒಟ್ಟು ಸಂಖ್ಯೆಯ ಮೂರನೇ ಒಂದು ಭಾಗಕ್ಕಿಂತ ಕಡಿಮೆಯಿಲ್ಲದಷ್ಟು ಸದಸ್ಯರ ಬರಹದಲ್ಲಿನ ಕೋರಿಕೆಯ ಮೇರೆಗೆ ಮತ್ತು ಅಂಥ ಕೋರಿಕೆಯನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ದಿವಸಗಳೊಳಗೆ ಅದನ್ನು ಕರೆಯತಕ್ಕದ್ದು. ಅಂಥ ಕೋರಿಕೆಯಲ್ಲಿ ಯಾವ ಉದ್ದೇಶಕ್ಕಾಗಿ ಆ ಸಭೆಯನ್ನು ಕರೆಯಲು

ಉದ್ದೇಶಿಸಲಾಗಿದೆಯೋ ಆ ವಿಷಯವನ್ನು ನಿರ್ದಿಷ್ಟಪಡಿಸತಕ್ಕದ್ದು. ಅಧ್ಯಕ್ಷನು ವಿಶೇಷ ಸಭೆಯನ್ನು ಕರೆಯಲು ತಪ್ಪಿದರೆ ಉಪಾಧ್ಯಕ್ಷನು ಅಥವಾ ಸದಸ್ಯರ ಒಟ್ಟು ಸಂಖ್ಯೆಯ ಮೂರನೇ ಒಂದರಷ್ಟು ಸದಸ್ಯರು ಅಂಥ ಕೋರಿಕೆಯನ್ನು ಸಲ್ಲಿಸಿದ ತರುವಾಯ ಹದಿನೈದು ದಿವಸಗಳಿಗೆ ಮೀರದ ಒಂದು ದಿನ ವಿಶೇಷ ಸಭೆಯನ್ನು ಕರೆಯಬಹುದು ಮತ್ತು ಸದಸ್ಯರಿಗೆ ನೋಟೀಸನ್ನು ಕೊಡಲು ಮತ್ತು ಸಭೆಯನ್ನು ಕರೆಯಲು ಅವಶ್ಯವಾಗಬಹುದಾದಂಥ ಕ್ರಮವನ್ನು ಕೈಗೊಳ್ಳಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನು ಅಗತ್ಯಪಡಿಸಬಹುದು.

XX XX XX

199. ಗ್ರಾಮ ಪಂಚಾಯತಿಗಳು ತೆರಿಗೆಗಳ ದರ ವಿಧಿಸುವುದು ಇತ್ಯಾದಿ.–

XX XX XX

(3) ಗ್ರಾಮ ಪಂಚಾಯತಿಯು, IVನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಗರಿಷ್ಠ ದರವನ್ನು ಮೀರದಂತೆ ಮತ್ತು ಗೊತ್ತುಪಡಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ವಿನಾಯಿತಿಗೊಳಪಟ್ಟು, ಗ್ರಾಮ ಪಂಚಾಯತಿಯು ಉಪವಿಧಿಗಳ ಮೂಲಕ ನಿರ್ಧರಿಸಬಹುದಾದಂಥ ದರಗಳಲ್ಲಿ ಕೆಳಕಂಡ ಎಲ್ಲ ಅಥವಾ ಯಾವುವೇ ತೆರಿಗೆಗಳು ಅಥವಾ ಫೀಜುಗಳನ್ನು ವಿಧಿಸಬಹುದು, ಎಂದರೆ:–

(ಎ) ಚಲನಚಿತ್ರ ಪ್ರದರ್ಶನಗಳನ್ನು ಹೊರತುಪಡಿಸಿ, ಯಾವುವೇ ಇತರ ಮನರಂಜನೆಗಳ ಮೇಲೆ ತೆರಿಗೆ;

(ಬಿ) ಮೋಟಾರು ವಾಹನಗಳನ್ನು ಹೊರತುಪಡಿಸಿ ಇತರ ವಾಹನಗಳ ಮೇಲೆ ತೆರಿಗೆ;

(ಸಿ) ಜಾಹೀರಾತುಗಳು ಮತ್ತು ಜಾಹೀರಾತು ಪ್ರಕಟಣಾ ಫಲಕಗಳು;

XX XX XX

246. ಲೆಕ್ಕಪತ್ರಗಳ ಪರಿಶೋಧನೆ.– (1) ಪ್ರತಿಯೊಂದು ಗ್ರಾಮ ಪಂಚಾಯತಿಯ ಲೆಕ್ಕಪತ್ರಗಳನ್ನು ಪ್ರತಿವರ್ಷ, ರಾಜ್ಯ ಲೆಕ್ಕಪತ್ರ ನಿಯಂತ್ರಕರು ಅಧಿಕಾರ ನೀಡಿರುವಂಥ ಅಧಿಕಾರಿಯು (ಇದರಲ್ಲಿ ಇನ್ನು ಮುಂದೆ ಲೆಕ್ಕಪರಿಶೋಧಕ ಎಂದು ಕರೆಯಲಾಗಿದೆ) ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರ (ಕರ್ತವ್ಯಗಳು, ಅಧಿಕಾರಗಳು ಸೇವಾ ಷರತ್ತುಗಳು) ಅಧಿನಿಯಮ, 1971ರ (1971ರ ಕೇಂದ್ರ ಅಧಿನಿಯಮ 56) ಉಪಬಂಧಗಳಿಗನುಸಾರವಾಗಿ (1)ನೇ ಉಪ ಪ್ರಕರಣದ ಅಡಿಯಲ್ಲಿ ಲೆಕ್ಕಪರಿಶೋಧನೆಗೆ ತಾಂತ್ರಿಕ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆಯನ್ನು ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರವರು ಒದಗಿಸತಕ್ಕದ್ದು ಮತ್ತು ಗ್ರಾಮ ಪಂಚಾಯತಿಗಳ ಲೆಕ್ಕಗಳ ಪರೀಕ್ಷಾರ್ಥ ತಪಾಸಣೆ ಮಾಡತಕ್ಕದ್ದು, ಲೆಕ್ಕ ಪರಿಶೋಧನೆ ಮಾಡತಕ್ಕದ್ದು.

XX XX XX

(11) ರಾಜ್ಯ ಲೆಕ್ಕಪತ್ರ ಇಲಾಖೆಯ ನಿಯಂತ್ರಕರು ಲೆಕ್ಕ ಪರಿಶೋಧನಾ ವರದಿಯ ಬಗ್ಗೆ ಮಾಡಿದ ಸಂಕ್ಷಿಪ್ತ ಅಭಿಪ್ರಾಯೋಕ್ತಿಗಳನ್ನು ಮತ್ತು ಗ್ರಾಮ ಪಂಚಾಯತಿಗಳು ಸರಿಪಡಿಸಿರುವುದನ್ನು ಸರ್ಕಾರಕ್ಕೆ ಒಪ್ಪಿಸತಕ್ಕದ್ದು.

(12) ರಾಜ್ಯ ಲೆಕ್ಕಪತ್ರಗಳ ಇಲಾಖೆಯ ನಿಯಂತ್ರಕರು, ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳ ಸಂಬಂಧದಲ್ಲಿ ಕ್ರೋಢಿಕೃತ ವಾರ್ಷಿಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಮತ್ತು ರಾಜ್ಯ ಸರ್ಕಾರವು ಅಂಥ ವರದಿಯನ್ನು ರಾಜ್ಯ ವಿಧಾನಮಂಡಲದ ಉಭಯಸದನಗಳ ಮುಂದೆ ಮಂಡಿಸತಕ್ಕದ್ದು.

XX XX XX

296ಎ. ಕುಂದು ಕೊರತೆ ನಿವಾರಣಾ ಪ್ರಾಧಿಕಾರ.– (1) ರಾಜ್ಯ ಸರ್ಕಾರವು, ರಾಜ್ಯ ಪತ್ರದಲ್ಲಿ ಅಧಿಸೂಚನೆಯ ಮೂಲಕ ಪ್ರತಿಯೊಂದು ಜಿಲ್ಲೆಯಲ್ಲಿ, ನಿವೃತ್ತ ಜಿಲ್ಲಾ ನ್ಯಾಯಾಧೀಶ ಅಥವಾ ವಿಶೇಷ ಡೆಪ್ಯೂಟಿ ಕಮೀಷನರ್ ದರ್ಜೆಗೆ ಕಡಿಮೆಯಿಲ್ಲದ ದರ್ಜೆಯ ಅಧಿಕಾರಿಯನ್ನು ಒಳಗೊಂಡ ಕುಂದು ಕೊರತೆ ನಿವಾರಣಾ ಪ್ರಾಧಿಕಾರಿಯನ್ನಾಗಿ ನೇಮಿಸತಕ್ಕದ್ದು.

XX XX XX

308ಎಬಿ. ನಾಮ ಪತ್ರಗಳನ್ನು ಸಲ್ಲಿಸುವುದು ಮೊದಲಾದವುಗಳಿಗಾಗಿ ದಿನಾಂಕಗಳ ಅಧಿಸೂಚನೆ. (1) ಸದಸ್ಯನನ್ನು ಆಯ್ಕೆ ಮಾಡುವಂತೆ ಚುನಾವಣಾ ಕ್ಷೇತ್ರವನ್ನು ಕೋರುವ ಅಧಿಸೂಚನೆಯನ್ನು ಹೊರಡಿಸಿದ ಕೂಡಲೇ, ರಾಜ್ಯ ಚುನಾವಣಾ ಆಯೋಗವು ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ,–

XX XX XX

310ಎ. ರಾಜ್ಯ ಪಂಚಾಯತಿ ಪರಿಷತ್ತು.– (1) **XX XX XX**

(2) ರಾಜ್ಯ ಪಂಚಾಯತಿ ಪರಿಷತ್ತು,–

(i) ಮುಖ್ಯ ಮಂತ್ರಿಯವರನ್ನು ಅಧ್ಯಕ್ಷರನ್ನಾಗಿ;

(ii) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರನ್ನು ಉಪಾಧ್ಯಕ್ಷರನ್ನಾಗಿ;

(iii) ಸರ್ಕಾರದಿಂದ ನಾಮನಿರ್ದೇಶಿಸಲ್ಪಟ್ಟ ಇತರ ಐವರು ಸಚಿವರುಗಳನ್ನು ಸದಸ್ಯರುಗಳನ್ನಾಗಿ; ಎಲ್ಲಾ ಜಿಲ್ಲಾ ಪಂಚಾಯತಿಗಳ ಅಧ್ಯಕ್ಷರನ್ನು ಸದಸ್ಯರನ್ನಾಗಿ;

(iv) ಎಲ್ಲಾ ಜಿಲ್ಲಾ ಪಂಚಾಯತಿಗಳ ಅಧ್ಯಕ್ಷರನ್ನು ಸದಸ್ಯರನ್ನಾಗಿ;

(v) ಪ್ರತಿ ಜಿಲ್ಲಾ ಪಂಚಾಯತಿಯಿಂದ ನಾಮನಿರ್ದೇಶಿಸಲ್ಪಟ್ಟ ನಾಲ್ಕು ಗ್ರಾಮ ಪಂಚಾಯತಿಗಳ ಅಧ್ಯಕ್ಷರು, ಪ್ರತಿಯೊಂದು ಕಂದಾಯ ವಿಭಾಗದಿಂದ ಒಬ್ಬರು ಹಾಗೂ ಒಂದು ತಾಲ್ಲೂಕು ಪಂಚಾಯತಿಯ ಅಧ್ಯಕ್ಷರುಗಳನ್ನು ಸದಸ್ಯರುಗಳನ್ನಾಗಿ;

XX XX XX

ಅನುಸೂಚಿ – IV

(199ನೇ ಪ್ರಕರಣವನ್ನು ನೋಡಿ)

ಸ್ವತ್ತಿನ ಮೇಲೆ ತೆರಿಗೆ : ಕಟ್ಟಡದ ಮೇಲೆ ತೆರಿಗೆ

ಸಿ	ಜಾಹಿರಾತುಗಳು ಮತ್ತು ಹೋರ್ಡಿಂಗ್‌ಗಳ ಮೇಲೆ ತೆರಿಗೆ: ಪ್ರತಿ ಚ.ಮೀ.ಗೆ ಅಥವಾ ಅದರ ಭಾಗಕ್ಕೆ	ಸ್ವತ್ತಿನ ಬಂಡವಾಳ ಮೌಲ್ಯದ ಮೇಲೆ ಶೇಕಡಾ 0.01ಕ್ಕಿಂತ ಕಡಿಮೆಯಲ್ಲದ ಆದರೆ ಶೇಕಡಾ 0.02ಕ್ಕಿಂತ ಹೆಚ್ಚಲ್ಲದ. ತಿಂಗಳೊಂದಕ್ಕೆ ಐದು ರೂಪಾಯಿಗಳು

XX XX XX

KARNATAKA LEGISLATIVE ASSEMBLY
FOURTEENTH LEGISLATIVE ASSEMBLY
FOURTEENTH SESSION
THE KARNATAKA GRAM SWARAJ AND PANCHAYAT RAJ
(AMENDMENT) BILL, 2017
(L.A. Bill No. 34 of 2017)

A Bill further to amend the Karnataka Gram Swaraj and Panchayat Raj Act, 1993.

Whereas, it is expedient further to amend the Karnataka Gram Swaraj and Panchayat Raj Act, 1993 (Karnataka Act 14 of 1993) for the purposes hereinafter appearing;

Be it enacted by the Karnataka State Legislature in the sixty-eighth year of the Republic of India, as follows:-

1. Short title and commencement.- (1) This Act may be called the Karnataka Gram Swaraj and Panchayat Raj (Amendment) Act, 2017.

(2) It shall come into force at once.

2. Amendment of section 2.- In section 2 of the Karnataka Gram Swaraj and Panchayat Raj Act, 1993 (Karnataka Act 14 of 1993) (hereinafter referred to as the principal Act), for clause (9A), the following shall be substituted, namely:-

"(9A) "Designated Court" means the jurisdictional Court of Senior Civil Judge designated for the trial of election disputes related to Gram Panchayats, Taluk Panchayats and Zilla Panchayats, in whose territorial jurisdiction respectively, the panchayat area or a major portion of the panchayat area is situated."

3. Amendment of section 13.- In section 13 of the principal Act, in sub-section (1), clause (c), shall be omitted.

4. Amendment of section 48.- In sub-section(1) of section 48 of the principal Act, for the first proviso the following shall be substituted, namely:-

Provided that Adhyaksha or Upadhyaksha of a Gram Panchayat shall,-

(i) on the grounds of proven physical or mental incapacity certified by a competent authority approved by the State Election Commission; or;

(ii) on the grounds of securing employment in central Government or State Government or public undertakings;

-resign his office or membership, or be liable for removal.

5. Amendment of section 64.- In section 64 of the principal Act, in sub-section (1), the words "or errect advertisement hoarding" shall be omitted.

6. Amendment of section 129.- In section 129 of the principal Act, in sub-section (1), clause (d) and the proviso shall be omitted.

7. Amendment of section 141.- In section 141 of the principal Act, in sub-section (2), in clause (a), for the words "the date of subsequent ordinary meeting shall fixed at the previous meeting", the words "the date of each subsequent ordinary meeting shall be decided by the Adhyaksha and he shall inform the same at the immediately preceding meeting" shall be substituted.

8. Amendment of section 157.- In section 157 of the principal Act, in sub-section (4), for the word "Secretary", the words "the Executive Officer" shall be substituted.

9. Amendment of section 168.- In section 168 of the principal Act, in sub-section (1), clause (d) and the proviso there under shall be omitted.

10. Amendment of section 180.- In section 180 of the Principal Act, in sub-section (2), in clause (a), for the words "the date of subsequent ordinary meeting shall fixed at the previous meeting", the words "the date of each subsequent ordinary meeting shall be decided by the Adhyaksha and he shall inform the same at the immediately preceding meeting" shall be substituted.

11. Amendment of section 199.- In section 199 of the principal Act, in sub-section (3), clause (c) shall be omitted.

12. Amendment of section 246.- In section 246 of the principal Act, for the words "Controller of State Accounts" wherever it appears, the words "Director General, Karnataka State Accounts And Audit Department" shall be substituted.

13. Amendment of section 296A.- In section 296A of the principal Act, in sub-section (1), for the words, "district judge or an", the words "district judge or a retired" shall be and shall always be deemed to have been substituted.

14. Amendment of section 308-AB.- In section 308AB of the principal Act, in sub-section (1), for the words "State Election Commission", the words "Returning Officer" shall be substituted.

15. Insertion of section 308AD.- After section 308AC of the principal Act, the following shall be inserted, namely:-

"308-AD. Account of election expenses and maximum thereof.- (1) Every candidate at an election to Zilla Panchayat or Taluk Panchayat under this Act shall either by himself or by his election agent, keep a separate and correct account of all expenditure in connection with the election, incurred or authorized by him or by his election agent between the date of which he has been nominated and the date of declaration of the result thereof, both dates inclusive.

(2) Any expenditure incurred or authorized in connection with the election of the candidate referred to in sub-section (1) by a political party or by any other association or body or persons or by any individual (other than the candidate or his election agent) shall not be deemed to be the expenditure in connection with the election incurred or authorized by the candidate or by his election agent for the purpose of sub-section (1).

Explanation 1: For the purposes of this sub-section, 'Political Party' shall have the same meaning as in the Election Symbols (Reservation and Allotment) Order, 1968 for the time being in force.

Explanation 2: For the removal of doubts, it is hereby declared that any expenditure incurred in respect of any arrangement made facilities provided or any other act or thing done by any person in the service of the Government or the service of the Zilla Panchayat or Taluk Panchayat as the case may be, the discharge or purported discharge of his official duty for, or to, or in relation to any candidate or his election agent or any other person acting with the consent of the candidate or his election agent (whether by reason of the office held by the candidate or for any other reason) shall not be deemed to be expenditure in connection with the election incurred or authorized by a candidate or by his election agent for the purpose of this section.

(3) The account shall contain such particulars as may be prescribed.

(4) The total of the said expenditure shall not exceed such amount as may be prescribed."

16. Amendment of section 310A.- In section 310A of the principal Act, in sub-section (2), in clause (v), for the words "each Zilla Panchayat", the words "the Government" shall be substituted.

17. Amendment of schedule-IV.- In schedule-IV to the principal Act, clause (c) and entries relating thereto shall be omitted.

18. Transfer of Pending Cases.- All cases pending pertaining to election disputes of the Zilla Panchayat before the jurisdictional District Judge on the date of commencement of the Karnataka Gram Swaraj and Panchayat Raj (Amendment) Act, 2017 shall immediately be transferred to the jurisdictional court of Senior Civil Judge.

STATEMENT OF OBJECTS AND REASONS

It is considered necessary to amend the Karnataka Grama Swaraj and Panchayat Raj Act, 1993 (Karnataka Act 14 of 1993) to,-

(1) entrust the jurisdiction of handling of election disputes of Gram Panchayat, Taluk Panchayat and Zilla Panchayat to the court of Senior Civil Judge.
(2) omit the provision of clause (c) of sub-section (1) of section 13.
(3) omit the provisions regarding levy of advertisement tax by panchayat consequent on the enforcement of Goods and Services Tax.

Certain other consequential amendments are also made.

Hence the Bill.

FINANCIAL MEMORANDUM

There is no extra expenditure involved in the proposed legislative measure.

MEMORANDUM REGARDING DELEGATED LEGISLATION

Clause 15:

(1) Sub-section (3) of section 308AD sought to be inserted by clause 15 empowers the State Government to make rules regarding particulars to be contained in the account of election expenses.

(2) Sub-section (4) of section 308AD sought to be inserted by clause 15 empowers the State Government to make rules regarding the maximum amount of election expenditure which shall not be exceeded.

The proposed delegation of Legislative Power is normal in character.

H.K.PATIL
Minister for Rural Development
and Panchayat Raj

S. Murthy
Secretary (I/c)
Karnataka Legislative Assembly

ANNEXURE

Extract from the Karnataka Gram Swaraj and Panchayat Raj Act, 1993 (Karnataka Act 14 of 1993)

XX XX XX

2. Definitions.- In this Act, unless the context otherwise requires,-

XX XX XX

(9A) "Designated Court" means the jurisdictional Court of Senior Civil Judge designated for the trial of election disputes related to Gram Panchayats and Taluk Panchayats and the court of the jurisdictional District judge for the trial of election disputes relating to Zilla Panchayats, in whose territorial jurisdiction respectively, the panchayat area or a major portion of the panchayat area is situated.

XX XX XX

13. Vacation of seat by members.- (1) If a member of a Grama Panchayat,-

(a) is or becomes subject to any of the disqualifications mentioned in section 12 ; or

(b) votes or takes part in discussion in contravention of the provisions of sub-section (4) of section 53; or

(c) absents himself for more than three consecutive ordinary meetings of the Grama Panchayat without the leave of the Grama Panchayat

his seat shall be deemed to be or to have become, as the case may be vacant:

XX XX XX

48. Resignation or removal of Adhyaksha and Upadhyaksha.- (1) The Adhyaksha of the Grama Panchayat may resign his office by writing under his hand addressed to the Assistant Commissioner and the Upadhyaksha of the Grama Panchayat may resign his office by writing under his hand addressed to the Adhyaksha and in absence of the Adhyaksha to the Assistant Commissioner.

Provided that Adhyaksha or Upadhyaksha of a Gram Panchayat shall resign his office or membership, or liable for removal,-

(i) on the grounds of proven physical or mental incapacity certified by a competent authority approved by the State Election Commission; or

(ii) on the grounds of securing employment in central Government or State Government or public undertakings.

XX XX XX

64. Regulation of the erection of buildings.- (1) Subject to such rules as may be prescribed, no person shall erect any building or alter or add to any existing building or errect advertisement hoarding or set up mobile towers atop or alongside or in any vacant space within the premises or reconstruct any building without the written permission of the Grama Panchayat. The permission may be granted on payment of such fees as may be specified by bye-laws.

XX XX XX

129. Vacancy of seat.- (1) If any member of a Taluk Panchayat,-

XX XX XX

(d) being an elected member absents himself, for more than three consecutive ordinary meetings of the Taluk Panchayat unless leave so to absent himself, which shall not exceed six months, had been granted by the Taluk Panchayat.

his seat shall be deemed to be or to have become, as the case may be, vacant.

Provided that where an application is made by a member to the Taluk Panchayat for leave to absent himself under clause (d) and the Taluk Panchayat fails to inform the applicant of its decision on the application within a period of one month from the date of the application the leave applied for shall be deemed to have been granted by the Taluk Panchayat.

XX XX XX

141. Meetings of Taluk Panchayat.-

XX XX XX

(2) (a) The date of the first meeting of the Taluk Panchayat after the first Constitution or reconstitution, or the date of subsequent meeting for the purpose of election of Adhysksha or Upadhyksha, as the case may be shall be fixed by the Assistant Commissioner who shall preside at such meeting and date of each subsequent ordinary meeting shall be fixed at the previous meeting of the Taluk Panchayat, provided that the Adhyaksha may for sufficient reasons, alter the day of the meeting to a subsequent date. The Adhyaksha may, whenever he thinks fit and shall, upon the written request of not less than one-third of the total number of members and on a date within fifteen days from the receipt of such request, call a special meeting. Such request shall specify the object for which the meeting is proposed to be called. If the Adhyaksha fails to call a special meeting, the Upadhyaksha or one-third of the total number of members may call the special meeting for a day not more than fifteen days after presentation of such request and require the Executive Officer to give notice to the members and to take such action as may be necessary to convene the meeting.

XX XX XX

157. Executive Officer's right to requisition records. etc.-

XX XX XX

(4) An appeal shall lie from an order of the Executive Officer under this section to the Chief Executive Officer.

XX XX XX

168. Vacancy of Seats.- (1) If any member of a Zilla Panchayat,-

XX XX XX

(d) being an elected member, absents himself, for more than three consecutive ordinary meetings of the Zilla Panchayat unless leave so to absents himself, which shall not exceed six months, had been granted by the Zilla Panchayat his seat shall be deemed to be or to have become, as the case may be, vacant:

Provided that where an application is made by a member to the Zilla Panchayat for leave to absents himself under clause (d) and the Zilla Panchayat fails to inform the applicant of its decision on the application within a period of one month from the date of the application the leave applied for shall be deemed to have been granted by the Zilla Panchayat.

XX XX XX

180. Meetings of Zilla Panchayat.-

XX XX XX

(2) (a) The date of the first meeting of the Zilla Panchayat after the first constitution or reconstitution or the date of subsequent meeting for the purpose of election of Adhyaksha or Upadhyaksha as the case may be shall be fixed by the Commissioner who shall preside at such meeting and date of each subsequent ordinary meeting shall be fixed at the previous meeting of the Zilla Panchayat, provided that the Adhyaksha of Zilla Panchayat may for sufficient reasons, alter the date of the meeting to a subsequent date. The Adhyaksha may, whenever he thinks fit and shall, upon the written request of not less than one-third of the total number of members and on a date within fifteen days from the receipt of such request, call a special meeting. Such request shall specify the object for which the meeting is proposed to be called. If the Adhyaksha fails to call a special meeting, the Upadhyaksha or one-third of the total number of members of the Zilla Panchayat may call the special meeting for a day not more than fifteen days after presentation of such request and require the Chief Executive Officer to give notice to the members and to take such action as may be necessary to convene the meeting.

XX XX XX

199. Levy of taxes, rates, etc., by Grama Panchayats.-

XX XX XX

(3) A Grama Panchayat may also levy all or any of the following taxes and fee at such rates as the Grama panchayat may by bye-laws determine but not exceeding the maximum specified in Schedule IV and in such manner and subject to such exemptions as may be prescribed, namely:-

(a) tax on entertainment other than cinematograph shows;

(b) tax on vehicles, other than motor vehicles;

(c) tax on advertisement and hoardings;

XX XX XX

246. Audit of accounts.- (1) The accounts of every Grama Panchayat shall be audited each year by such officer as may be authorised by the Controller of State Accounts (hereinafter referred to as the auditor) The Comptroller and Auditor General shall provide technical guidance and supervision for audit of accounts under this section in accordance with the provisions of Comptroller and Auditor General's (Duties, Powers and Conditions of Service) Act, 1971 (Central Act 56 of 1971) and also undertake test checks of the accounts of the Grama Panchayaths.

XX XX XX

(11) The Controller of State Accounts Department shall submit a summary of observations made in the audit report and rectifications made by the Grama Panchayats to the Government.

(12) The Controller of State Accounts Department shall submit to the Government a consolidated Annual Report in respect of all the Grama Panchayats of the State and the State Government shall lay such report before both the houses of the State Legislature.

XX XX XX

296A. Grievance Redressal Authority.– (1) The State Government may, by notification in the official gazette, constitute for every District a Grievance Redressal Authority consisting of a retired district judge or an officer not below the rank of special deputy commissioner.

XX XX XX

308AB. Notification of dates for nominations etc. – (1) As soon as the notification of election to elect a member is issued, the state election commission shall, by notification in the Official Gazette, notify, –

XX XX XX

310A. State Panchayat Council.-

XX XX XX

(2) The State Panchayat Council shall consist of,-

(i) the Chief Minister as Chairman,

(ii) the Minister for rural Development and Panchayat Raj as ViceChairman,

(iii) five other ministers nominated by the Government as members,

(iv) Adhyakshas of all the Zilla panchayats as members;

(v) the Adhyakshas of four Gram Panchayats, one from each revenue divisionand one Taluk Panchayath nominated by each Zilla Panchayath as members and;

XX XX XX

SCHEDULE-IV
(See Section 199)

Tax on Property : Tax on buildings

C. Tax on advertisement and hoardings: For every square meter or part thereof.	Not less than 0.01% but not more than 0.02% on Capital Value of the Property Five rupees per month.

XX XX XX

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 150

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–IVA	ಬೆಂಗಳೂರು, ಮಂಗಳವಾರ, ಜೂನ್ ೨೦, ೨೦೧೭ (ಜ್ಯೇಷ್ಠ ೩೦, ಶಕ ವರ್ಷ ೧೯೩೯)	ನಂ. ೫೫೭
Part–IVA	Bengaluru, Tuesday, June 20, 2017 (Jyeshta 30, Shaka Varsha 1939)	No. 557

KARNATAKA LEGISLATIVE ASSEMBLY SECRETARIAT

NOTIFICATION

No.KLA/LGA/35/Bill/2017, Bengaluru, Dated 20.06.2017

The following Bill was introduced in Legislative Assembly on 20.06.2017.

ಕರ್ನಾಟಕ ವಿಧಾನ ಸಭೆ

ಹದಿನಾಲ್ಕನೇ ವಿಧಾನಸಭೆ

ಹದಿನಾಲ್ಕನೇ ಅಧಿವೇಶನ

ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ವಿಧೇಯಕ, 2017

(2017ರ ವಿಧಾನಸಭೆಯ ವಿಧೇಯಕ ಸಂಖ್ಯೆ–35)

ಕರ್ನಾಟಕ ರಾಜ್ಯದಲ್ಲಿ ರಸ್ತೆ ಸುರಕ್ಷತಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ ಮತ್ತು ರಸ್ತೆ ಸುರಕ್ಷತಾ ನಿಧಿಯನ್ನು ಸ್ಥಾಪಿಸುವುದಕ್ಕಾಗಿ, ರಸ್ತೆ ಸುರಕ್ಷತಾ ಪ್ರಾಧಿಕಾರವನ್ನು ರಚಿಸಲು ಹಾಗೂ ಅದಕ್ಕೆ ಸಂಬಂಧಿಸಿದ ಮತ್ತು ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧವನ್ನು ಕಲ್ಪಿಸಲು ಒಂದು ವಿಧೇಯಕ.

ಕರ್ನಾಟಕ ರಾಜ್ಯದಲ್ಲಿ ರಸ್ತೆ ಸುರಕ್ಷತಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ ಮತ್ತು ರಸ್ತೆ ಸುರಕ್ಷತಾ ನಿಧಿಯನ್ನು ಸ್ಥಾಪಿಸುವುದಕ್ಕಾಗಿ, ರಸ್ತೆ ಸುರಕ್ಷತಾ ಪ್ರಾಧಿಕಾರವನ್ನು ರಚಿಸಲು ಹಾಗೂ ಅದಕ್ಕೆ ಸಂಬಂಧಿಸಿದ ಮತ್ತು ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧವನ್ನು ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು, ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ, ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು ಹಾಗೂ ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು ಮತ್ತು ಯಾವುದೇ ಅಂಥ ಉಪಬಂಧದಲ್ಲಿ 'ಈ ಅಧಿನಿಯಮದ ಪ್ರಾರಂಭಕ್ಕೆ' ಎಂದು ಮಾಡಿದ ಯಾವುದೇ ಉಲ್ಲೇಖವನ್ನು ಆ ಉಪಬಂಧ ಜಾರಿಗೆ ಬರುವುದಕ್ಕೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

2. ಪರಿಭಾಷೆಗಳು.– (1) ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) **"ಅಪಘಾತ"** ಎಂದರೆ, ಸಾರ್ವಜನಿಕ ರಸ್ತೆಯಲ್ಲಿ ಮೋಟಾರು ವಾಹನದ ಬಳಕೆಯ ಕಾರಣದಿಂದಾಗಿ, ಯಾವುವೇ ಸಾರ್ವಜನಿಕ ಸ್ವತ್ತುಗಳಿಗೆ, ಇತರ ವಾಹನಗಳಿಗೆ ಅಥವಾ ಸಂದರ್ಭಾನುಸಾರವಾಗಿ ಯಾವುದೇ

ಸ್ವತ್ತಿಗೆ ಹಾನಿಯನ್ನು ಉಂಟು ಮಾಡಿದ ಅಥವಾ ಯಾವೊಬ್ಬ ವ್ಯಕ್ತಿಗೆ ಮರಣ, ದೈಹಿಕ ಗಾಯವನ್ನು ಉಂಟು ಮಾಡಿದ ಯಾವುದೇ ಘಟನೆ;

(ಬಿ) "ಅಪರ ಆಯುಕ್ತ" ಎಂದರೆ, ಸಾರಿಗೆ ಇಲಾಖೆಯ ಅಪರ ಆಯುಕ್ತ (ರಸ್ತೆ ಸುರಕ್ಷತೆ);

(ಸಿ) "ಪ್ರಾಧಿಕಾರ" ಎಂದರೆ, 4ನೇ ಪ್ರಕರಣದ ಅಡಿಯಲ್ಲಿ ರಚಿಸಿದ 'ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ';

(ಡಿ) "ಆಯುಕ್ತ" ಎಂದರೆ, ಸಾರಿಗೆ ಇಲಾಖೆಯ ಸಾರಿಗೆ ಮತ್ತು ರಸ್ತೆ ಸುರಕ್ಷತಾ ಆಯುಕ್ತ, ಆತನು ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರಕ್ಕೂ ಸಹ ಆಯುಕ್ತನಾಗಿರತಕ್ಕದ್ದು;

(ಇ) "ಪರಿಷತ್ತು" ಎಂದರೆ, 3ನೇ ಪ್ರಕರಣದ ಅಡಿಯಲ್ಲಿ ರಚಿಸಿದ ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪರಿಷತ್ತು;

(ಎಫ್) "ಜಿಲ್ಲೆ" ಎಂದರೆ, ಕಂದಾಯ ಜಿಲ್ಲೆ;

(ಜಿ) "ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ" ಎಂದರೆ, 21ನೇ ಪ್ರಕರಣದ ಅಡಿಯಲ್ಲಿ ರಚಿಸಿದ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ;

(ಹೆಚ್) "ನಿಧಿ" ಎಂದರೆ, 13ನೇ ಪ್ರಕರಣ ಅಡಿಯಲ್ಲಿ ರಚಿಸಿದ 'ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ನಿಧಿ';

(ಐ) "ಸ್ಥಳೀಯ ಪ್ರಾಧಿಕಾರ" ಎಂದರೆ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ (1993ರ ಕರ್ನಾಟಕ ಅಧಿನಿಯಮ, 14) ಅಡಿಯಲ್ಲಿ ರಚಿಸಿದ ಪಂಚಾಯತ್ ಅಥವಾ ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976ರ (1977ರ ಕರ್ನಾಟಕ ಅಧಿನಿಯಮ, 14) ಅಡಿಯಲ್ಲಿ ರಚಿಸಿದ ನಗರ ಪಾಲಿಕೆಗಳು;

(ಜೆ) "ಸಾರ್ವಜನಿಕ ರಸ್ತೆ"ಯು ಸಾರ್ವಜನಿಕರು ಪ್ರವೇಶಾವಕಾಶ ಹೊಂದಿರುವ ಯಾವುದೇ ಖಾಸಗಿ ರಸ್ತೆಯನ್ನು ಮತ್ತು ಸಂಚಾರಿ ವಿಭಾಜಕಗಳು, ರಸ್ತೆ ವಿಭಾಜಕಗಳು ಮತ್ತು ಪಾದಚಾರಿ ರಸ್ತೆಗಳನ್ನು ಒಳಗೊಳ್ಳುತ್ತದೆ;

(ಕೆ) "ನಿಯಮಿಸಲಾದ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಎಲ್) "ವಿನಿಯಮಗಳು" ಎಂದರೆ, 40ನೇ ಪ್ರಕರಣದ ಅಡಿಯಲ್ಲಿ ರಚಿಸಿದ ವಿನಿಯಮಗಳು;

(ಎಮ್) "ವಾಹನ"ವು ಮಾನವರ, ಪ್ರಾಣಿಗಳ ಅಥವಾ ಸರಕುಗಳ ಸಾಗಣೆಗಾಗಿ ಅಥವಾ ಚಲನವಲನಕ್ಕಾಗಿ ಬಳಸಲಾಗುವ ಅಥವಾ ಬಳಸಲು ಸಾಧ್ಯವಿರುವ ಯಾವುವೇ ವಿಶೇಷ ವಾಹನ (contraption) ಅಥವಾ ಸಾಧನವನ್ನು (device) ಒಳಗೊಳ್ಳುತ್ತದೆ.

(2) ಈ ಅಧಿನಿಯಮದಲ್ಲಿ ಬಳಸಿದ ಆದರೆ ಪರಿಭಾಷಿಸಿರದ ಪದಗಳು ಮತ್ತು ಪದಾವಳಿಗಳು, ಮೋಟಾರು ವಾಹನಗಳ ಅಧಿನಿಯಮ, 1988ರಲ್ಲಿ (1988ರ ಕೇಂದ್ರ ಅಧಿನಿಯಮ 59), ಕರ್ನಾಟಕ ಹೆದ್ದಾರಿ ಅಧಿನಿಯಮ, 1964ರಲ್ಲಿ (1964ರ ಕರ್ನಾಟಕ ಅಧಿನಿಯಮ, 44) ಅಥವಾ ಅದರಡಿಯಲ್ಲಿ ರಚಿಸಿದ ನಿಯಮಗಳಲ್ಲಿ ಅವುಗಳಿಗೆ ಕ್ರಮವಾಗಿ ನೀಡಿದ ಅರ್ಥಗಳನ್ನೇ ಹೊಂದಿರತಕ್ಕದ್ದು.

3. ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪರಿಷತ್ತಿನ ರಚನೆ.– (1) ರಾಜ್ಯ ಸರ್ಕಾರವು, ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರುವಂತೆ, ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪರಿಷತ್ತು ಎಂದು ಕರೆಯಲಾಗುವ ಒಂದು ಪರಿಷತ್ತನ್ನು ರಚಿಸಬಹುದು.

(2) ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪರಿಷತ್ತು ಈ ಮುಂದಿನ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು:–

(ಎ)	ಸಾರಿಗೆ ಇಲಾಖೆಯ ಪ್ರಭಾರ ಹೊಂದಿರುವ ಸಚಿವರು	ಅಧ್ಯಕ್ಷ
(ಬಿ)	ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ	ಉಪಾಧ್ಯಕ್ಷ
(ಸಿ)	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ, ಒಳಾಡಳಿತ ಇಲಾಖೆ	ಪದನಿಮಿತ್ತ ಸದಸ್ಯ
(ಡಿ)	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ	ಪದನಿಮಿತ್ತ ಸದಸ್ಯ
(ಇ)	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರುಗಳು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ	ಪದನಿಮಿತ್ತ ಸದಸ್ಯ

(ಎಫ್)	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ	ಪದನಿಮಿತ್ತ ಸದಸ್ಯ
(ಜಿ)	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ	ಪದನಿಮಿತ್ತ ಸದಸ್ಯ
(ಎಚ್)	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಾರಿಗೆ ಇಲಾಖೆ	ಪದನಿಮಿತ್ತ ಸದಸ್ಯ
(ಐ)	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ	ಪದನಿಮಿತ್ತ ಸದಸ್ಯ
(ಜೆ)	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾನೂನು ಇಲಾಖೆ	ಪದನಿಮಿತ್ತ ಸದಸ್ಯ
(ಕೆ)	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ	ಪದನಿಮಿತ್ತ ಸದಸ್ಯ
(ಎಲ್)	ಪೊಲೀಸ್ ಮಹಾನಿರ್ದೇಶಕ ಮತ್ತು ಮಹಾ ನಿರೀಕ್ಷಕ	ಪದನಿಮಿತ್ತ ಸದಸ್ಯ
(ಎಂ)	ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ರಸ್ತೆ ಸುರಕ್ಷತಾ ಆಯುಕ್ತ	ಸದಸ್ಯ
(ಎನ್)	ಅಪರ ಆಯುಕ್ತ	ಸದಸ್ಯ ಕಾರ್ಯದರ್ಶಿ
(ಒ)	ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ರಸ್ತೆ ಸುರಕ್ಷತಾ ಕ್ಷೇತ್ರದಲ್ಲಿ ತಜ್ಞರಾಗಿರುವ ಇಬ್ಬರು ವ್ಯಕ್ತಿಗಳು	ಸದಸ್ಯರು

(3) ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪರಿಷತ್ತು, ಅದು ಅವಶ್ಯವೆಂದು ಭಾವಿಸಬಹುದಾದ ಅಂಥ ಇತರ ಸಚಿವರು, ರಾಜ್ಯ ಸರ್ಕಾರದ ಅಧಿಕಾರಿಗಳು ಮತ್ತು ಇತರ ತಜ್ಞರನ್ನು ವಿಶೇಷ ಆಹ್ವಾನಿತರನ್ನಾಗಿ ಆಹ್ವಾನಿಸಬಹುದು.

(4) ಯಾವೊಬ್ಬ ವ್ಯಕ್ತಿಯು, ಆತನು,–

(ಎ) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಅಧಃಪತನವನ್ನೊಳಗೊಂಡ ಅಪರಾಧಕ್ಕಾಗಿ ಸಿದ್ಧದೋಷಿಯಾಗಿದ್ದರೆ ಮತ್ತು ಕಾರಾವಾಸದ ಶಿಕ್ಷೆಗೆ ಗುರಿಯಾಗಿದ್ದರೆ; ಅಥವಾ

(ಬಿ) ಅಸ್ವಸ್ಥಚಿತ್ತನಾಗಿದ್ದರೆ ಮತ್ತು ಸಕ್ಷಮ ನ್ಯಾಯಾಲಯವು ಹಾಗೆಂದು ನಿಲುವು ತಾಳಿ ಘೋಷಿಸಿದ್ದರೆ; ಅಥವಾ

(ಸಿ) ಅವಿಮುಕ್ತ ದಿವಾಳಿಯಾಗಿದ್ದರೆ; ಅಥವಾ

(ಡಿ) ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಮಾಲಿಕತ್ವ ಹೊಂದಿದ ನಿಕಾಯ ಅಥವಾ ನಿಗಮದ ಸೇವೆಯಿಂದ ತೆಗೆದುಹಾಕಲ್ಪಟ್ಟಿದ್ದರೆ ಅಥವಾ ವಜಾಗೊಂಡಿದ್ದರೆ;

(ಇ) ಸ್ವತಃ ಆಗಲಿ ಅಥವಾ ಪಾಲುದಾರನಾಗಿಯಾಗಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ, ಪ್ರಾಧಿಕಾರದ ಆದೇಶದ ಮೂಲಕ ಮಾಡಿದ ಯಾವುದೇ ಕಾರ್ಯದಲ್ಲಿ ಅಥವಾ ಪ್ರಾಧಿಕಾರದೊಂದಿಗೆ ಅಥವಾ ಅದರ ಅಧೀನದಲ್ಲಿ ಅಥವಾ ಅದರ ಮೂಲಕ ಅಥವಾ ಅದರ ಪರವಾಗಿ ಮಾಡಿಕೊಂಡ ಯಾವುದೇ ಒಪ್ಪಂದದಲ್ಲಿ ಅಥವಾ ನಿಯೋಜನೆಯಲ್ಲಿ ಯಾವುದೇ ಷೇರನ್ನು ಅಥವಾ ಹಿತಾಸಕ್ತಿಯನ್ನು ಹೊಂದಿದ್ದರೆ; ಅಥವಾ

(ಎಫ್) ಪ್ರಾಧಿಕಾರದ ಪರವಾಗಿ ಸಂದಾಯಿತ ಕಾನೂನು ವೃತ್ತಿದಾರನಾಗಿ ನಿಯೋಜಿತನಾಗಿದ್ದರೆ ಅಥವಾ ಪ್ರಾಧಿಕಾರದ ವಿರುದ್ಧ ಕಾನೂನು ವೃತ್ತಿದಾರನಾಗಿ ನಿಯೋಜನೆಯನ್ನು ಒಪ್ಪಿಕೊಂಡಿದ್ದರೆ,

– ಸದಸ್ಯನಾಗಲು ಅರ್ಹನಾಗತಕ್ಕದ್ದಲ್ಲ.

(5) ಪರಿಷತ್ತು, ಕನಿಷ್ಠಪಕ್ಷ ಆರು ತಿಂಗಳುಗಳಿಗೆ ಒಂದು ಬಾರಿ ಸಭೆ ಸೇರತಕ್ಕದ್ದು. ಸರ್ಕಾರೇತರ ಸದಸ್ಯರು ಸಭೆಗಳಿಗೆ ಹಾಜರಾಗುವುದಕ್ಕೆ ನಿಯಮಿಸಲಾದ ಉಪವೇಶನ ಶುಲ್ಕ ಅಥವಾ ಪ್ರವಾಸ ಭತ್ಯೆ ಅಥವಾ ದಿನ ಭತ್ಯೆಯನ್ನು ಹೊಂದಲು ಅರ್ಹರಾಗಿರತಕ್ಕದ್ದು.

(6) ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪರಿಷತ್ತು ಸಲಹಾತ್ಮಕ ಸ್ವರೂಪದ್ದಾಗಿರತಕ್ಕದ್ದು ಮತ್ತು ಕರ್ನಾಟಕ ರಾಜ್ಯದಲ್ಲಿ ರಸ್ತೆ ಸುರಕ್ಷತಾ ಕ್ರಮಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರಕ್ಕೆ ಸಲಹೆ ನೀಡತಕ್ಕದ್ದು.

4. ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ರಚನೆ.– (1) ರಾಜ್ಯ ಸರ್ಕಾರವು, ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, "ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ" ಎಂದು ಕರೆಯಲಾಗುವ ಒಂದು ಪ್ರಾಧಿಕಾರವನ್ನು ರಚಿಸಬಹುದು.

(2) ಪ್ರಾಧಿಕಾರವು, ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಅಧಿಕಾರಗಳೊಂದಿಗೆ, ಚರ ಮತ್ತು ಸ್ಥಿರ ಎರಡು ಸ್ವತ್ತಿನ ಆರ್ಜನೆಗೆ, ಧಾರಣಕ್ಕೆ ಮತ್ತು ವಿಲೆಗೆ ಹಾಗೂ ಕರಾರು ಮಾಡಿಕೊಳ್ಳಲು ಮೇಲೆ ಹೇಳಿದ ಹೆಸರಿನ ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ ಒಂದು ನಿಕಾಯವಾಗಿರತಕ್ಕದ್ದು ಹಾಗೂ ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೊಳಗಾಗತಕ್ಕದ್ದು.

(3) ಪ್ರಾಧಿಕಾರದ ಕೇಂದ್ರ ಕಚೇರಿಯು ಬೆಂಗಳೂರು ನಗರದಲ್ಲಿರತಕ್ಕದ್ದು.

5. ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ.– ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರವು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು:

(ಎ)	ಸರ್ಕಾರದ ಮುಖ್ಯ ಕಾರ್ಯದರ್ಶಿ	ಅಧ್ಯಕ್ಷ
(ಬಿ)	ಸಾರಿಗೆ ಇಲಾಖೆಯ ಪ್ರಧಾನ ಕಾರ್ಯದರ್ಶಿ	ಉಪಾಧ್ಯಕ್ಷ
(ಸಿ)	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ, ಒಳಾಡಳಿತ ಇಲಾಖೆ	ಪದನಿಮಿತ್ತ ಸದಸ್ಯ
(ಡಿ)	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ	ಪದನಿಮಿತ್ತ ಸದಸ್ಯ
(ಇ)	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರುಗಳು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ	ಪದನಿಮಿತ್ತ ಸದಸ್ಯ
(ಎಫ್)	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ	ಪದನಿಮಿತ್ತ ಸದಸ್ಯ
(ಜಿ)	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ	ಪದನಿಮಿತ್ತ ಸದಸ್ಯ
(ಎಚ್)	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ	ಪದನಿಮಿತ್ತ ಸದಸ್ಯ
(ಐ)	ಪೊಲೀಸ್ ಮಹಾನಿರ್ದೇಶಕ ಮತ್ತು ಮಹಾ ನಿರೀಕ್ಷಕ	ಪದನಿಮಿತ್ತ ಸದಸ್ಯ
(ಜೆ)	ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ಆಯುಕ್ತ	ಸದಸ್ಯ
(ಕೆ)	ಅಪರ ಆಯುಕ್ತ	ಸದಸ್ಯ ಕಾರ್ಯದರ್ಶಿ

6. ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ಪ್ರಕಾರ್ಯಗಳು.– ಪ್ರಾಧಿಕಾರವು ಈ ಮುಂದಿನ ಪ್ರಕಾರ್ಯಗಳನ್ನು ಹೊಂದಿರತಕ್ಕದ್ದು, ಎಂದರೆ:–

(i) ಪರಿಣಾಮಕಾರಿ ರಸ್ತೆ ಸುರಕ್ಷತಾ ನೀತಿಗಳನ್ನು ರೂಪಿಸುವುದು ಹಾಗೂ ಕಾಲಕಾಲಕ್ಕೆ ರಸ್ತೆ ಸುರಕ್ಷತೆಗೆ ಸಂಬಂಧಿಸಿದ ಪರಿಯೋಜನೆಗಳನ್ನು, ಕಾರ್ಯಕ್ರಮಗಳನ್ನು ಮತ್ತು ಸ್ಕೀಮುಗಳನ್ನು ರೂಪಿಸುವುದು ಹಾಗೂ ಅವುಗಳನ್ನು ಜಾರಿಗೊಳಿಸುವುದು;

(ii) ರಸ್ತೆ ಸುರಕ್ಷತಾ ಕ್ರಮಗಳನ್ನು (standards) ಮತ್ತು ಕಾರ್ಯವಿಧಾನಗಳನ್ನು ನಿಯಮಿಸುವುದು ಮತ್ತು ಜಾರಿಗೊಳಿಸುವುದು ಹಾಗೂ ನಿಯಮಿಸಲಾದ ಕ್ರಮಗಳು ಮತ್ತು ಕಾರ್ಯವಿಧಾನಗಳಿಗನುಸಾರವಾಗಿ ನಡೆದುಕೊಳ್ಳುವುದು ಅಥವಾ ನಡೆದುಕೊಳ್ಳುವಂತೆ ಮಾಡುವುದು;

(iii) ಸಾಮಾನ್ಯವಾಗಿ ರಸ್ತೆಗಳ ಸೂಕ್ತ ಮತ್ತು ಸುರಕ್ಷಿತ ಬಳಕೆಗೆ ಸಂಬಂಧಿಸಿದಂತೆ ವಾಹನ ಚಾಲಕರು, ಮೋಟಾರು ಸವಾರರು ಮತ್ತು ಇತರ ಸಾರ್ವಜನಿಕರನ್ನು ಸುಶಿಕ್ಷಿತರನ್ನಾಗಿ ಮಾಡುವುದನ್ನು ಒಳಗೊಂಡಂತೆ ರಸ್ತೆ ಸುರಕ್ಷತಾ ಅರಿವು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು;

(iv) ರಸ್ತೆ ಸುರಕ್ಷತೆ ಕುರಿತು ಸಂಶೋಧನೆ ನಡೆಸುವುದು ಹಾಗೂ ಯೋಜನೆ, ನೀತಿ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ರಸ್ತೆ ಅಪಘಾತಗಳಿಗೆ ಸಂಬಂಧಿಸಿದ ಮಾಹಿತಿ ಮತ್ತು ಅಂಕಿ–ಅಂಶಗಳ ಮೌಲ್ಯಮಾಪನ ಮಾಡುವುದು;

(v) ರಸ್ತೆ ಸುರಕ್ಷತೆಗೆ ಸಂಬಂಧಿಸಿದಂತೆ ಕರ್ತವ್ಯಗಳನ್ನು ನಿಭಾಯಿಸುತ್ತಿರುವ ಎಲ್ಲಾ ಏಜನ್ಸಿಗಳ ಮತ್ತು ಸರ್ಕಾರಿ ಇಲಾಖೆಗಳ ಪ್ರಕಾರ್ಯಗಳನ್ನು ಸಮನ್ವಯಗೊಳಿಸುವುದು;

(vi) ರಸ್ತೆ ಸುರಕ್ಷತೆ ಮತ್ತು ಸಂಚಾರ ನಿರ್ವಹಣೆ ಕುರಿತಂತೆ ಹಿತಾಸಕ್ತಿಯುಳ್ಳ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಏಜನ್ಸಿಗಳೊಂದಿಗೆ ಸಂಪರ್ಕ ಸಾಧಿಸುವುದು;

(vii) ಅಪಘಾತ ನಡೆಯುವ ಸ್ಥಳದಲ್ಲಿ ರಕ್ಷಣಾ ಕಾರ್ಯಾಚರಣೆಗಾಗಿ ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ (ಕೆಎಸ್ಆರ್ಎಸ್ಎ) ಮುಂದಾಳತ್ವದಲ್ಲಿ ಸ್ವ–ಸಹಾಯ ಗುಂಪುಗಳನ್ನು ರೂಪಿಸುವುದು;

(viii) ನಿಧಿ ನಿರ್ವಹಣೆ;

(ix) ರಸ್ತೆ ಸುರಕ್ಷತಾ ಸ್ಕೀಮುಗಳು ಮತ್ತು ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ವೆಚ್ಚವನ್ನು ಮಂಜೂರು ಮಾಡುವುದು;

(x) ರಸ್ತೆ ಸುರಕ್ಷತಾ ಪರಿಯೋಜನೆಗಳಿಗಾಗಿ ಮತ್ತು ರಸ್ತೆ ಸುರಕ್ಷತೆಗೆ ಸಂಬಂಧಿಸಿದ ಸಲಕರಣೆಗಳು ಮತ್ತು ಸಾಧನಗಳ ಖರೀದಿಗಾಗಿ ಮತ್ತು ಅಳವಡಿಕೆಗಾಗಿ ವೆಚ್ಚವನ್ನು ಮಂಜೂರು ಮಾಡುವುದು;

(xi) ರಸ್ತೆ ಸುರಕ್ಷತೆಗೆ ಸಂಬಂಧಿಸಿದ ವಿಷಯಗಳನ್ನು ಕುರಿತ ಅಧ್ಯಯನಗಳು, ಪರಿಯೋಜನೆಗಳು ಮತ್ತು ಸಂಶೋಧನೆಯನ್ನು ನಡೆಸುವುದಕ್ಕಾಗಿ ವೆಚ್ಚವನ್ನು ಮಂಜೂರು ಮಾಡುವುದು;

(xii) ದೈಹಿಕ ಅಥವಾ ಮಾನಸಿಕ ಆಘಾತ–ಕಾಳಜಿ (trauma-care) ಕಾರ್ಯಕ್ರಮಗಳಿಗೆ ಅಥವಾ ಕಾರ್ಯಚಟುವಟಿಕೆಗಳಿಗೆ ವೆಚ್ಚವನ್ನು ಮಂಜೂರು ಮಾಡುವುದು;

(xiii) ಪ್ರಾಧಿಕಾರದ ಆಡಳಿತಾತ್ಮಕ ವೆಚ್ಚವನ್ನು ಮಂಜೂರು ಮಾಡುವುದು;

(xiv) ರಸ್ತೆ ಸುರಕ್ಷತಾ ಕ್ರಮಗಳಿಗೆ ಸಂಬಂಧಿಸಿದ ವಿಷಯಗಳಿಗೆ ಸಂಬಂಧಿಸಿದ ವೆಚ್ಚವನ್ನು ಮಂಜೂರು ಮಾಡುವುದು;

(xv) ಈ ಅಧಿನಿಯಮದ ಉದ್ದೇಶಗಳಿಗೆ ಸಂಬಂಧಿಸಿದಂತೆ ನಿಯಮಿಸಬಹುದಾದ ಅಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸುವುದು;

(xvi) ಪೊಲೀಸ್ ಇಲಾಖೆಯ ಮುಖಾಂತರ ಸಮಗ್ರ ರಸ್ತೆ ಅಪಘಾತ ದತ್ತಾಂಶಾಧಾರಿತ ನಿರ್ವಹಣಾ ವ್ಯವಸ್ಥೆಯನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು;

(xvii) ಕ್ರಿಯಾ ಯೋಜನೆಯ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳುವುದು ಹಾಗೂ ಇಡೀ ಹಿತಾಸಕ್ತ ಇಲಾಖೆಗಳ ಎಂದರೆ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಪೊಲೀಸ್, ಸಾರಿಗೆ, ಶಿಕ್ಷಣ, ಆರೋಗ್ಯ, ನಗರಾಭಿವೃದ್ಧಿ, ಅಬಕಾರಿ ಮುಂತಾದಂಥ ಇಲಾಖೆಗಳ ಮೂಲಕ ರಸ್ತೆ ಸುರಕ್ಷತೆ ಕುರಿತ ಮಾನ್ಯ ಸರ್ವೋಚ್ಚ ನ್ಯಾಯಾಲಯ ಸಮಿತಿಯ ನಿರ್ದೇಶನಗಳಿಗನುಸಾರವಾಗಿ ಕಾಲಕಾಲಕ್ಕೆ ಅದನ್ನು ಪರಿಷ್ಕರಿಸುವುದು;

(xviii) ರಸ್ತೆ ಸುರಕ್ಷತೆ ಕುರಿತ ಮಾನ್ಯ ಸರ್ವೋಚ್ಚ ನ್ಯಾಯಾಲಯ ಸಮಿತಿಯೊಂದಿಗೆ ಸಂಪರ್ಕ ಸಾಧಿಸುವುದು ಮತ್ತು ರಸ್ತೆ ಸುರಕ್ಷತೆ ಕುರಿತ ಮಾನ್ಯ ಸರ್ವೋಚ್ಚ ನ್ಯಾಯಾಲಯ ಸಮಿತಿಯು ಕರೆಯುವ ಎಲ್ಲಾ ಸಭೆಗಳಿಗೆ ಅಥವಾ ಪರಿಶೀಲನಾ ಸಭೆಗಳಿಗೆ ಹಾಜರಾಗುವುದು ಹಾಗೂ ರಸ್ತೆ ಸುರಕ್ಷತೆ ಕುರಿತ ಮಾನ್ಯ ಸರ್ವೋಚ್ಚ ನ್ಯಾಯಾಲಯ ಸಮಿತಿಯು ನೀಡುವ ಎಲ್ಲ ಅಂಥ ನಿರ್ದೇಶನಗಳ ಅನುಪಾಲನೆಗೆ ಕೇಳುವ ಎಲ್ಲಾ ಅಂಥ ಮಾಹಿತಿ ಅಥವಾ ವರದಿಗಳು ಅಥವಾ ಚರ್ಚೆ ಅಥವಾ ಅಂಕಿ–ಅಂಶಗಳು ಅಥವಾ ದಾಖಲೆಗಳು, ಮುಂತಾದವನ್ನು ಒದಗಿಸುವುದು. ಎಲ್ಲ ಹಿತಾಸಕ್ತ ಇಲಾಖೆಗಳು ಮಾನ್ಯ ಸರ್ವೋಚ್ಚ ನ್ಯಾಯಾಲಯ

ಸಮಿತಿಯ ಎಲ್ಲ ನಿರ್ದೇಶನಗಳನ್ನು ಕಡ್ಡಾಯವಾಗಿ (invariably) ಅನುಷ್ಠಾನಗೊಳಿಸತಕ್ಕದ್ದು ಹಾಗೂ ನಿಯಮಿಸಲಾದ ಅವಧಿಯೊಳಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯ ಸಮಿತಿಯು ಕೇಳುವ ಎಲ್ಲಾ ದತ್ತಾಂಶ ಅಥವಾ ಮಾಹಿತಿ ದಾಖಲೆಗಳನ್ನು ಸಹ ಒದಗಿಸುವುದು; ಮತ್ತು

(xix) ರಸ್ತೆ ಸುರಕ್ಷತಾ ಕ್ರಮಗಳ ಅನುಷ್ಠಾನದ ಉದ್ದೇಶಕ್ಕಾಗಿ ವಿಶೇಷ ಜಾರಿ ಕ್ರಮಗಳನ್ನು (drives) ನಿರ್ವಹಿಸುವ ಅಧಿಕಾರವನ್ನು ಹಿತಾಸಕ್ತ ಇಲಾಖೆಗಳ ಮುಖ್ಯಸ್ಥರು ಹೊಂದಿರುವುದು.

7. ಸಭೆಗಳು.– (1) ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ಮತ್ತು ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಗಳು, ಪ್ರಾಧಿಕಾರದ ಅಥವಾ ಸಂದರ್ಭಾನುಸಾರವಾಗಿ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯ ಅಧ್ಯಕ್ಷರು, ನಿರ್ಧರಿಸಬಹುದಾದ ಅಂಥ ಸಮಯಕ್ಕೆ ಮತ್ತು ಸ್ಥಳದಲ್ಲಿ ಸಭೆ ಸೇರತಕ್ಕದ್ದು ಮತ್ತು ಸಭೆಗಳಲ್ಲಿ ವ್ಯವಹರಿಸಬೇಕಾದಂಥ ವಿಷಯಗಳಿಗೆ ಸಂಬಂಧಿಸಿದಂತೆ ವಿನಿಯಮಗಳ ಮೂಲಕ ರಚಿಸಬಹುದಾದ ಅಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು.

(2) ಪ್ರಾಧಿಕಾರದ ಪ್ರತಿಯೊಂದು ಸಭೆಯ ಅಧ್ಯಕ್ಷತೆಯನ್ನು ಅಧ್ಯಕ್ಷ ಅಥವಾ ಆತನ ಗೈರುಹಾಜರಿಯಲ್ಲಿ, ಉಪಾಧ್ಯಕ್ಷ ಅಥವಾ ಸಂದರ್ಭಾನುಸಾರವಾಗಿ ಉಪಸ್ಥಿತರಿರುವ ಸದಸ್ಯರು ಆಯ್ಕೆ ಮಾಡಿದ ಒಬ್ಬ ಸದಸ್ಯನು ವಹಿಸತಕ್ಕದ್ದು.

(3) ಪ್ರಾಧಿಕಾರವು ಕನಿಷ್ಠಪಕ್ಷ ಮೂರು ತಿಂಗಳಿಗೊಮ್ಮೆ ಸಭೆ ಸೇರತಕ್ಕದ್ದು.

(4) ಪ್ರಾಧಿಕಾರದ ಸಭೆಯ ಗಣಪೂರ್ತಿ (ಕೋರಂ) ಐದು ಆಗಿರತಕ್ಕದ್ದು.

8. ವ್ಯವಹಾರ ನಿರ್ವಹಣೆ.–ಪ್ರಾಧಿಕಾರವು ನಿರ್ಧರಿಸಬೇಕಾದ ಪ್ರತಿಯೊಂದು ವಿಷಯವನ್ನು, ಉಪಸ್ಥಿತರಿರುವ ಸದಸ್ಯರ ಬಹುಮತದ ನಿರ್ಣಯಕ್ಕನುಸಾರವಾಗಿ, ಪ್ರಾಧಿಕಾರದ ಸಭೆಗಳಲ್ಲಿ ಪರಿಗಣಿಸತಕ್ಕದ್ದು ಮತ್ತು ಸಂದರ್ಭಾನುಸಾರವಾಗಿ ನಿರ್ವಹಿಸತಕ್ಕದ್ದು.

9. ಖಾಲಿ ಸ್ಥಾನಗಳು, ಇತ್ಯಾದಿ ಪ್ರಾಧಿಕಾರದ ವ್ಯವಹರಣೆಗಳನ್ನು ಅಸಿಂಧುಗೊಳಿಸುವಂತಿಲ್ಲ.– ಪ್ರಾಧಿಕಾರದ ಯಾವುದೇ ಕ್ರಮವನ್ನು ಅಥವಾ ವ್ಯವಹರಣೆಗಳನ್ನು, ಯಾವುದೇ ಖಾಲಿಸ್ಥಾನವಿರುವ ಅಥವಾ ಪ್ರಾಧಿಕಾರದ ರಚನೆಯಲ್ಲಿನ ದೋಷದ ಕಾರಣ ಮಾತ್ರದಿಂದಲೇ ಪ್ರಶ್ನಿಸತಕ್ಕದ್ದಲ್ಲ ಅಥವಾ ಅಸಿಂಧುಗೊಳಿಸತಕ್ಕದ್ದಲ್ಲ.

10. ರಸ್ತೆ ಸುರಕ್ಷತಾ ಆಯುಕ್ತ.– ಸಾರಿಗೆ ಮತ್ತು ರಸ್ತೆ ಸುರಕ್ಷತಾ ಆಯುಕ್ತನು ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ಆಯುಕ್ತನು ಸಹ ಆಗಿರತಕ್ಕದ್ದು. ಅಪರ ಆಯುಕ್ತನು ಪ್ರಾಧಿಕಾರದ ಅಪರ ಆಯುಕ್ತನಾಗಿರತಕ್ಕದ್ದು.

11. ಪ್ರಾಧಿಕಾರದ ಆಡಳಿತಾತ್ಮಕ ಮುಖ್ಯಸ್ಥ.– ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ಆಯುಕ್ತನು, ಪ್ರಾಧಿಕಾರದ ಪ್ರಕಾರ್ಯ ನಿರ್ವಹಣೆಗಾಗಿ ಆಡಳಿತಾತ್ಮಕ ಮುಖ್ಯಸ್ಥನಾಗಿರತಕ್ಕದ್ದು ಮತ್ತು ಅಪರ ಆಯುಕ್ತನು ಆತನಿಗೆ ನೆರವಾಗತಕ್ಕದ್ದು.

12. ನಿಧಿಯ ಸ್ಥಾಪನೆ.– (1) ಪ್ರಾಧಿಕಾರದ ರಚನೆಯ ತರುವಾಯ, ಒಂದು ವರ್ಷದ ಒಳಗಾಗಿ, 'ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ನಿಧಿ' ಎಂದು ಕರೆಯಲಾಗುವ ಒಂದು ನಿಧಿಯನ್ನು ಸ್ಥಾಪಿಸತಕ್ಕದ್ದು.

(2) ಈ ಮುಂದಿನವುಗಳನ್ನು ನಿಧಿಗೆ ಜಮೆ ಮಾಡತಕ್ಕದ್ದು:–

(ಎ) ರಾಜ್ಯ ಸರ್ಕಾರವು ನೀಡಿದ ಅನುದಾನಗಳು, ಸಾಲಗಳು, ಕೊಡುಗೆಗಳು ಅಥವಾ ಮುಂಗಡಗಳು;

(ಬಿ) ಕೇಂದ್ರ ಸರ್ಕಾರವು ನೀಡಿದ ಅನುದಾನಗಳು, ಸಾಲಗಳು, ಕೊಡುಗೆಗಳು ಅಥವಾ ಮುಂಗಡಗಳು;

(ಸಿ) ಸಾರ್ವಜನಿಕ ಮತ್ತು ಖಾಸಗಿ ಸಂಸ್ಥೆಗಳು ಅಥವಾ ಸಂಘಟನೆಗಳು ನೀಡಿದ ಕೊಡುಗೆಗಳು;

(ಡಿ) 30ನೇ ಪ್ರಕರಣದ ಅಡಿಯಲ್ಲಿ ಸಂಗ್ರಹಿಸಿದ ರಾಜಿ ಶುಲ್ಕ; ಮತ್ತು

(ಇ) ಸ್ಮಾರ್ಟ್ ಕಾರ್ಡ್‌ಗಳನ್ನು ನೀಡುವ ಮೂಲಕ ಸಂಗ್ರಹಿಸಿದ ಶುಲ್ಕದ ಮೊತ್ತ;

– ಇವುಗಳನ್ನು ರಸ್ತೆ ಸುರಕ್ಷತಾ ನಿಧಿಗೆ ಜಮೆ ಮಾಡತಕ್ಕದ್ದು.

(3) ರಾಜ್ಯ ಸರ್ಕಾರವು, ಮೋಟಾರು ವಾಹನಗಳ ಅಧಿನಿಯಮ, 1988ರ (1988ರ ಕೇಂದ್ರ ಅಧಿನಿಯಮ, 59) 200ನೇ ಪ್ರಕರಣದ ಅಡಿಯಲ್ಲಿ ಹಿಂದಿನ ವರ್ಷದಲ್ಲಿ ಸಂಗ್ರಹಿಸಿದ ರಾಜಿ ಶುಲ್ಕದ ಶೇಕಡಾ ಐವತ್ತಕ್ಕೆ ಸಮನಾದ ಮೊತ್ತವನ್ನು ಪ್ರತಿವರ್ಷ ನಿಧಿಗೆ ನೀಡತಕ್ಕದ್ದು.

(4) ನಿಯಮಿಸಬಹುದಾದ ಅಂಥ ಇತರ ನಿಧಿಯ ಮೂಲಗಳು.

13. ಉಪಕರವನ್ನು ವಿಧಿಸುವುದು ಮತ್ತು ಸಂಗ್ರಹಿಸುವುದು.– (1) ವಾಹನ ನೋಂದಣಿ ಸಮಯದಲ್ಲಿ, ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದ ಅಂಥ ದರದಲ್ಲಿ, ಒಂದು ಸಾವಿರ ರೂಪಾಯಿಗಳಿಗೆ ಹೆಚ್ಚಿರದಂಥ ಏಕಕಾಲಿಕ ಉಪಕರವನ್ನು ವಿಧಿಸತಕ್ಕದ್ದು ಮತ್ತು ಸಂಗ್ರಹಿಸತಕ್ಕದ್ದು. ಬೇರೆ ಬೇರೆ ವರ್ಗದ ಮೋಟಾರು ವಾಹನಗಳಿಗಾಗಿ ಬೇರೆ ಬೇರೆ ದರಗಳನ್ನು ವಿಧಿಸಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

(3) ನೋಂದಣಿ ಪ್ರಾಧಿಕಾರವು, ನೋಂದಣಿ ಸಮಯದಲ್ಲಿ ಹಾಗೆ ವಿಧಿಸಿದ ಉಪಕರವನ್ನು ಸಂಗ್ರಹಿಸತಕ್ಕದ್ದು ಮತ್ತು ನಿಯಮಿಸಬಹುದಾದ ಅಂಥ ರೀತಿಯಲ್ಲಿ ಅದನ್ನು ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ನಿಧಿಗೆ ಇರಸಾಲು (remit) ಮಾಡತಕ್ಕದ್ದು.

14. ನಿಧಿಯನ್ನು ನಿಹಿತಗೊಳಿಸುವುದು ಮತ್ತು ನಿರ್ವಹಿಸುವುದು.– (1) ನಿಧಿಯನ್ನು ಪ್ರಾಧಿಕಾರದಲ್ಲಿ ನಿಹಿತಗೊಳಿಸತಕ್ಕದ್ದು ಮತ್ತು ಅದನ್ನು ಪ್ರಾಧಿಕಾರವು ನಿರ್ವಹಿಸತಕ್ಕದ್ದು.

(2) ಪ್ರಾಧಿಕಾರವು, ನಿಯಮಿಸಬಹುದಾದ ಅಂಥ ರೀತಿಯಲ್ಲಿ ಅದರಲ್ಲಿ ನಿಹಿತಿಗೊಳಿಸಿದ ನಿಧಿಯನ್ನು ನಿರ್ವಹಿಸತಕ್ಕದ್ದು.

(3) ನಿಧಿಯ ಭಾಗವಾಗಿರುವ ಎಲ್ಲಾ ಮೊತ್ತವನ್ನು, ಪ್ರಾಧಿಕಾರವು ನಿರ್ಧರಿಸಬಹುದಾದಂತೆ ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಠೇವಣಿ ಇಡತಕ್ಕದ್ದು ಮತ್ತು ಖಾತೆಯನ್ನು ಪ್ರಾಧಿಕಾರವು ನಿರ್ಧರಿಸಬಹುದಾದಂಥ ರೀತಿಯಲ್ಲಿ ರಸ್ತೆ ಸುರಕ್ಷತಾ ಆಯುಕ್ತನು ಮತ್ತು ಅಪರ ಆಯುಕ್ತನು ಜಂಟಿಯಾಗಿ ನಿರ್ವಹಿಸತಕ್ಕದ್ದು.

15. ನಿಧಿಯ ಬಳಕೆ.– ನಿಧಿಯನ್ನು ಈ ಮುಂದಿನ ಎಲ್ಲ ಅಥವಾ ಯಾವುದಾದರೂ ಒಂದು ಉದ್ದೇಶಗಳಿಗೆ ಉಪಯೋಗಿಸತಕ್ಕದ್ದು, ಎಂದರೆ:–

(ಎ) ರಸ್ತೆ ಸುರಕ್ಷತಾ ಕಾರ್ಯಕ್ರಮಗಳು;

(ಬಿ) ರಸ್ತೆ ಸುರಕ್ಷತೆಗೆ ಸಂಬಂಧಿಸಿದ ಜಾಗೃತಿ ಕಾರ್ಯಕ್ರಮಗಳು;

(ಸಿ) ರಸ್ತೆ ಸುರಕ್ಷತೆಗೆ ಸಂಬಂಧಿಸಿದ ಸಲಕರಣೆಗಳ ಖರೀದಿ;

(ಡಿ) ಪರಿಯೋಜನೆಗಳು, ತರಬೇತಿಗಳನ್ನು ಕುರಿತ ಅನುಮೋದಿತ ಅಧ್ಯಯನಗಳಿಗೆ ನಿಧಿ ಒದಗಿಸಲು;

(ಇ) ದೈಹಿಕ ಅಥವಾ ಮಾನಸಿಕ ಆಘಾತ–ಕಾಳಜಿ (trauma-care) ಕಾರ್ಯಕ್ರಮಗಳು ಮತ್ತು ತತ್ಸಂಬಂಧಿ ಕಾರ್ಯಚಟುವಟಿಕೆಗಳು;

(ಎಫ್) ಪ್ರಾಧಿಕಾರದ ಆಡಳಿತಾತ್ಮಕ ವೆಚ್ಚಗಳು;

(ಜಿ) ಪ್ರಾಧಿಕಾರವು ಸೂಕ್ತವೆಂದು ಭಾವಿಸಬಹುದಾದಂಥ ರಸ್ತೆ ಸುರಕ್ಷತೆಗೆ ಸಂಬಂಧಿಸಿದ ವಿಷಯಗಳ ಮೇಲಿನ ವೆಚ್ಚ; ಮತ್ತು

(ಹೆಚ್) ನಿಯಮಿಸಬಹುದಾದ ಯಾವುದೇ ಇತರ ಉದ್ದೇಶ.

16. ಅಪಘಾತಗಳ ಕಾರಣಗಳನ್ನು ನಿವಾರಿಸಲು ಆದೇಶಿಸುವ ಅಧಿಕಾರ.– (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ಯಾವೊಬ್ಬ ವ್ಯಕ್ತಿಯ ಮೂಲಕ ಅಥವಾ ಅನ್ಯಥಾ ರೀತಿಯಲ್ಲಿ ಸಲ್ಲಿಸಿದ ದೂರು ಅಥವಾ ವರದಿಯ ಆಧಾರದ ಮೇಲೆ ಪ್ರಾಧಿಕಾರಕ್ಕೆ,–

(ಎ) ಸಾರ್ವಜನಿಕ ರಸ್ತೆಯಲ್ಲಿ ಯಾವೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳ ಕೃತ್ಯವು; ಅಥವಾ

(ಬಿ) ಯಾವುದೇ ಮನ್ನಣೆ ಪಡೆದ ಆಡಳಿತಾತ್ಮಕ ಪ್ರಾಧಿಕಾರದ ಅನುಮೋದನೆ ಇಲ್ಲದೆ ಸಾರ್ವಜನಿಕ ರಸ್ತೆಯಲ್ಲಿ ಕಮಾನುಗಳು, ಬ್ಯಾನರ್‌ಗಳು, ಬಟ್ಟೆ ಮೇಲ್ಹಾವಣಿಗಳು, ಟೆಂಟುಗಳು, ಪೆಂಡಾಲುಗಳು, ಕಂಬಗಳು, ವೇದಿಕೆಗಳು, ಭಾಷಣ ವೇದಿಕೆಗಳು, ಪ್ರತಿಮೆಗಳು, ಸ್ಮಾರಕಗಳು ಮತ್ತು ಅಂತಹುವೇ ಇತರ ನಿರ್ಮಿತಿಗಳನ್ನು ಒಳಗೊಂಡಂತೆ ಯಾವುದೇ ವಾಹನ, ಪ್ರಾಣಿ, ನಿರ್ಮಿತಿಯನ್ನು ಇರಿಸಿರುವುದು ಅಥವಾ ನಿಲ್ಲಿಸಿರುವುದು; ಅಥವಾ

(ಸಿ) ಸಾರ್ವಜನಿಕ ರಸ್ತೆಯಲ್ಲಿ ಪ್ರಾಣಿಗಳ ಅಥವಾ ವಾಹನಗಳ ಚಲನವಲನವು; ಅಥವಾ

(ಡಿ) ಸಾರ್ವಜನಿಕ ರಸ್ತೆಯ ಸಮೀಪದಲ್ಲಿರುವ ಯಾವುದೇ ಮರ, ನಿರ್ಮಿತಿ ಅಥವಾ ನಿರ್ಮಿಸಿದ ಕಟ್ಟಡವು; ಅಥವಾ

(ಇ) ಸಾರ್ವಜನಿಕ ರಸ್ತೆಯ ಸಮೀಪದಲ್ಲಿರುವ ಯಾವುದೇ ಕಟ್ಟಡದ ಅಥವಾ ಆವರಣದ ಪ್ರವೇಶ ಮತ್ತು ನಿರ್ಗಮನವು,

– ಅಪಘಾತಗಳನ್ನುಂಟು ಮಾಡುವ ಅಥವಾ ಸಂಚಾರದ ಮುಕ್ತ ಹರಿವಿಗೆ ಅಡಚಣೆಯನ್ನುಂಟು ಮಾಡುವ ಅಥವಾ ಯಾವುದೇ ವಾಹನ ಚಾಲಕನ ಗಮನವನ್ನು ಭಂಗಗೊಳಿಸುವ ಅಥವಾ ದೃಷ್ಟಿಗೆ ಅಡಚಣೆಯುಂಟು ಮಾಡುವ ರೀತಿಯಲ್ಲಿದೆ ಎಂದು ಮನವರಿಕೆಯಾದಲ್ಲಿ, ಕರ್ನಾಟಕ ರಸ್ತೆ ಸುರಕ್ಷತಾ ಪ್ರಾಧಿಕಾರದ ಆಯುಕ್ತರು, ಅದರ ಕಾರಣಗಳನ್ನು ದಾಖಲಿಸಿದ

ನಂತರ, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಸಂಬಂಧಪಟ್ಟ ವ್ಯಕ್ತಿಗೆ ತಾನು ಅವಶ್ಯವೆಂದು ಪರಿಗಣಿಸಬಹುದಾದಂತೆ ಎರಡು ತಿಂಗಳ ಒಳಗಾಗಿ ಅಂಥ ಕ್ರಮಗಳನ್ನು ತೆಗೆದುಕೊಳ್ಳಲು ನಿರ್ದೇಶಿಸಬಹುದು ಮತ್ತು ಅಂಥ ವ್ಯಕ್ತಿಯು ಪ್ರಾಧಿಕಾರವು ನಿರ್ದಿಷ್ಟಪಡಿಸಬಹುದಾದ ಅಂಥ ಸಮಯದೊಳಗೆ ನಿರ್ದೇಶನವನ್ನು ಪಾಲಿಸಲು ಬದ್ಧನಾಗಿರತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ತುರ್ತು ಸಂದರ್ಭದಲ್ಲಿ, ಕರ್ನಾಟಕ ರಸ್ತೆ ಸುರಕ್ಷತಾ ಪ್ರಾಧಿಕಾರದ ಆಯುಕ್ತನು, ಅಪಘಾತವನ್ನು ಅಥವಾ ಸಂದರ್ಭಾನುಸಾರ ಅಡಚಣೆಯನ್ನು ತಡೆಯಲು ಅವಶ್ಯವಿರಬಹುದಾದ ಅಂಥ ಕ್ರಮವನ್ನು ತೆಗೆದುಕೊಳ್ಳಬಹುದು ಮತ್ತು ನಿಯಮಿಸಬಹುದಾದ ಅಂಥ ರೀತಿಯಲ್ಲಿ ಅದಕ್ಕೆ ಜವಾಬ್ದಾರನಾದ ವ್ಯಕ್ತಿಯಿಂದ ಅದರ ವೆಚ್ಚವನ್ನು ವಸೂಲು ಮಾಡಬಹುದು.

17. ಕಾಮಗಾರಿಗಳನ್ನು ಕೈಗೊಳ್ಳಲು ಆದೇಶಿಸುವ ಅಧಿಕಾರ.– (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ಸಾರ್ವಜನಿಕ ರಸ್ತೆಯಲ್ಲಿ ಸುರಕ್ಷತೆಯನ್ನು ಕಾಪಾಡಲು ಅಂಥ ರಸ್ತೆಯಲ್ಲಿ ಯಾವುದೇ ಕಾಮಗಾರಿ ಅಥವಾ ಸುಧಾರಣೆಯನ್ನು ಕೈಗೊಳ್ಳುವುದು ಅವಶ್ಯವೆಂದು ಪ್ರಾಧಿಕಾರವು ಪರಿಗಣಿಸಿದರೆ, ಹಾಗೆ ಆದೇಶಿಸುವುದು ಪ್ರಾಧಿಕಾರಕ್ಕೆ ಕಾನೂನುಸಮ್ಮತವಾಗಿರತಕ್ಕದ್ದು ಮತ್ತು ಪ್ರಾಧಿಕಾರವು ನಿರ್ದಿಷ್ಟಪಡಿಸಬಹುದಾದ ಅಂಥ ಕಾಮಗಾರಿಗಳನ್ನು ಅಥವಾ ಸುಧಾರಣೆಗಳನ್ನು ಅಂಥ ಸಮಯದೊಳಗೆ ಕೈಗೊಳ್ಳಲು ಪ್ರತಿಯೊಂದು ಸಂಬಂಧಪಟ್ಟ ರಾಜ್ಯ ಸರ್ಕಾರಿ ಇಲಾಖೆ ಅಥವಾ ಸ್ಥಳೀಯ ಪ್ರಾಧಿಕಾರ ಅಥವಾ ಯಾವುದೇ ಇತರ ಪ್ರಾಧಿಕಾರವು, ಬದ್ಧವಾಗಿರತಕ್ಕದ್ದು:

ಪರಂತು, ಕರ್ನಾಟಕ ಹೆದ್ದಾರಿ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 44) ಅಡಿಯಲ್ಲಿ ಗೊತ್ತುಪಡಿಸಿದ ಸಂಬಂಧಪಟ್ಟ ಕ್ಷೇತ್ರದ ಹೆದ್ದಾರಿ ಪ್ರಾಧಿಕಾರದೊಂದಿಗೆ ಪೂರ್ವ ಸಮಾಲೋಚನೆ ನಡೆಸಿದ ಹೊರತು, ಈ ಉಪಪ್ರಕರಣದ ಅಡಿಯಲ್ಲಿ ಯಾವುದೇ ಆದೇಶವನ್ನು, ಸದರಿ ಅಧಿನಿಯಮದ ಅಡಿಯಲ್ಲಿ ಹಾಗೆಂದು ಘೋಷಿತವಾದ ಯಾವುದೇ ಹೆದ್ದಾರಿಯ ಸಂಬಂಧದಲ್ಲಿ ಹೊರಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಿದ ಆದೇಶಗಳನ್ನು ಜಾರಿಗೆ ತರುವಲ್ಲಿ ಪ್ರಾಧಿಕಾರಕ್ಕೆ ನೆರವು ನೀಡುವುದು ರಾಜ್ಯ ಸರ್ಕಾರದ, ಸ್ಥಳೀಯ ಪ್ರಾಧಿಕಾರದ ಅಥವಾ ಯಾವುದೇ ಇತರ ಪ್ರಾಧಿಕಾರದ ಪ್ರತಿಯೊಬ್ಬ ಅಧಿಕಾರಿಯ ಕರ್ತವ್ಯವಾಗಿರತಕ್ಕದ್ದು.

18. ವೆಚ್ಚವನ್ನು ವಸೂಲಿ ಮಾಡುವ ಅಧಿಕಾರ.– ಯಾವೊಬ್ಬ ವ್ಯಕ್ತಿಯು, 13ನೇ ಪ್ರಕರಣದ ಅಡಿಯಲ್ಲಿ ಜಾರಿ ಮಾಡಲಾದ ಲಿಖಿತ ಆದೇಶವನ್ನು ತಿರಿಸ್ಕರಿಸಿದರೆ ಅಥವಾ ಆದೇಶವನ್ನು ಪಾಲಿಸಲು ವಿಫಲನಾದರೆ, ಪ್ರಾಧಿಕಾರವು ಅಪಾಯವನ್ನು ತಡೆಯಲು ಮತ್ತು ಸಾರ್ವಜನಿಕರ ಸುರಕ್ಷತೆಯನ್ನು ಸುನಿಶ್ಚಿತಗೊಳಿಸಲು ಅಂಥ ಕ್ರಮವನ್ನು ತೆಗೆದುಕೊಳ್ಳಬಹುದು ಹಾಗೂ ಅಂಥ ವ್ಯಕ್ತಿಯಿಂದ ಅದರ ನ್ಯಾಯಯುತ ಬಡ್ಡಿ ಸಹಿತ ವೆಚ್ಚವನ್ನು ವಸೂಲು ಮಾಡಿಕೊಳ್ಳಬಹುದು.

19. ಭೂ ಕಂದಾಯ ಬಾಕಿ ಎಂಬಂತೆ ವಸೂಲು ಮಾಡಬಹುದಾದ ಮೊತ್ತಗಳು.– ಈ ಅಧಿನಿಯಮದ ಅಡಿಯಲ್ಲಿ ಪ್ರಾಧಿಕಾರಕ್ಕೆ ಬರಬೇಕಾದ ಯಾವುದೇ ಮೊತ್ತವನ್ನು, ವಸೂಲಿಯ ಯಾವುದೇ ಇತರ ವಿಧಾನಕ್ಕೆ ಬಾಧಕವಾಗದಂತೆ, ಬಾಕಿ ಇರುವ ಭೂ ಕಂದಾಯದ ಬಾಕಿ ಎಂಬಂತಹುದೇ ರೀತಿಯಲ್ಲಿ ವಸೂಲು ಮಾಡಬಹುದು.

20. ಪ್ರತ್ಯಾಯೋಜನೆ.– ಪ್ರಾಧಿಕಾರವು, ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ, ತಾನು ಸೂಕ್ತವೆಂದು ಭಾವಿಸಬಹುದಾದಂಥ ನಿರ್ಬಂಧಗಳಿಗೆ ಒಳಪಟ್ಟು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ರಸ್ತೆ ಸುರಕ್ಷತಾ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾಕ್ಕಾಗಿ, ತಾನು ಅವಶ್ಯವೆಂದು ಪರಿಗಣಿಸಬಹುದಾದ ಅಂಥ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ರಸ್ತೆ ಸುರಕ್ಷತಾ ಆಯುಕ್ತನಿಗೆ, ರಸ್ತೆ ಸುರಕ್ಷತಾ ಅಪರ ಆಯುಕ್ತನಿಗೆ ಅಥವಾ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಗೆ ಪ್ರತ್ಯಾಯೋಜಿಸಬಹುದು.

21. ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ.– ರಾಜ್ಯದಲ್ಲಿ ಮೋಟಾರು ವಾಹನಗಳ ಅಧಿನಿಯಮ, 1988ರ (1988ರ ಕೇಂದ್ರ ಅಧಿನಿಯಮ 59) 215ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ ಈಗಾಗಲೇ ರಚನೆಗೊಂಡಿರುವ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಗಳು, ನಿಯಮಿಸಬಹುದಾದ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

22. ಸಿಬ್ಬಂದಿ.– (1) ಪ್ರಾಧಿಕಾರವು, ರಾಜ್ಯ ಸರ್ಕಾರದ ಪೂರ್ವಾನುಮೋದನೆಯಂದಿಗೆ, ಈ ಅಧಿನಿಯಮದ ಅಡಿಯಲ್ಲಿನ ಅದರ ಪ್ರಕಾರ್ಯಗಳ ನಿರ್ವಹಣೆಗೆ ಅದು ಅವಶ್ಯವೆಂದು ಭಾವಿಸಬಹುದಾದ ಅಂಥ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ನೇಮಕ ಮಾಡಬಹುದು.

(2) ಸಿಬ್ಬಂದಿಯ ಪದನಾಮ, ನೇಮಕಾತಿ ವಿಧಾನ ಮತ್ತು ಇತರ ಸೇವಾ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

23. ವೆಚ್ಚಗಳು.– ಸಿಬ್ಬಂದಿ ಮತ್ತು ಇತರ ನೌಕರರ ವೇತನ ಮತ್ತು ಭತ್ಯೆಗಳನ್ನು ಒಳಗೊಂಡು ನಿಧಿಯ ನಿರ್ವಹಣೆಯ ಎಲ್ಲಾ ವೆಚ್ಚಗಳನ್ನು ನಿಧಿಯಿಂದ ಭರಿಸತಕ್ಕದ್ದು.

24. ಲೆಕ್ಕಪತ್ರಗಳು.– ನಿಧಿಯ ಲೆಕ್ಕಪತ್ರಗಳನ್ನು ನಿಯಮಿಸಬಹುದಾದ ಅಂಥ ರೀತಿಯಲ್ಲಿ ರಸ್ತೆ ಸುರಕ್ಷತಾ ಆಯುಕ್ತರು ನಿರ್ವಹಿಸತಕ್ಕದ್ದು.

25. ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯು ವರದಿಗಳು, ಇತ್ಯಾದಿಯನ್ನು ಸಲ್ಲಿಸುವುದು.– ಪ್ರತಿಯೊಂದು ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯು, ಅಂಥ ವರದಿಗಳನ್ನು ಮತ್ತು ವಿವರಗಳನ್ನು ಹಾಗೂ ಕಾಲಕಾಲಕ್ಕೆ ಅಗತ್ಯಪಡಿಸಬಹುದಾದಂಥ ಮಾಹಿತಿಯನ್ನು ರಸ್ತೆ ಸುರಕ್ಷತಾ ಆಯುಕ್ತರಿಗೆ ಒದಗಿಸತಕ್ಕದ್ದು ಮತ್ತು ರಸ್ತೆ ಸುರಕ್ಷತಾ ಆಯುಕ್ತರು, ವಾರ್ಷಿಕವಾಗಿ, ಪ್ರಾಧಿಕಾರಕ್ಕೆ ಕ್ರೋಢೀಕೃತ ವರದಿಯನ್ನು ಸಲ್ಲಿಸತಕ್ಕದ್ದು.

26. ವಾರ್ಷಿಕ ವರದಿ.– (1) ಪ್ರಾಧಿಕಾರವು, ಪ್ರತಿಯೊಂದು ಹಣಕಾಸು ವರ್ಷಾವಧಿಗಾಗಿ, ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ಮತ್ತು ಅಂಥ ಅವಧಿಯೊಳಗೆ, ಹಿಂದಿನ ವರ್ಷದ ತನ್ನ ಕಾರ್ಯಚಟುವಟಿಕೆಗಳ ಸಂಪೂರ್ಣ ಲೆಕ್ಕವನ್ನು ನೀಡುವ ಒಂದು ವಾರ್ಷಿಕ ವರದಿಯನ್ನು ಸಿದ್ಧಪಡಿಸಕ್ಕದ್ದು ಮತ್ತು ಅಂಥ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(2) ರಾಜ್ಯ ಸರ್ಕಾರವು, ಅದನ್ನು ಸ್ವೀಕರಿಸಿದ ನಂತರ, ಸಾಧ್ಯವಾದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಮುಂದೆ ಅಂಥ ಪ್ರತಿಯೊಂದು ವರದಿಯನ್ನು ಮಂಡಿಸುವಂತೆ ಮಾಡತಕ್ಕದ್ದು.

27. ಲೆಕ್ಕಪರಿಶೋಧನೆ.– (1) ಪ್ರಾಧಿಕಾರದ ಲೆಕ್ಕಪತ್ರಗಳನ್ನು ಮಹಾಲೇಖಪಾಲರು ಲೆಕ್ಕಪರಿಶೋಧನೆ ಮಾಡತಕ್ಕದ್ದು.

(2) ಪ್ರಾಧಿಕಾರವು, ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ಅಧಿಕಾರಿಗಳ ಮೂಲಕ ಪ್ರತಿ ವರ್ಷ ಲೆಕ್ಕಪತ್ರಗಳ ಆಂತರಿಕ ಲೆಕ್ಕಪರಿಶೋಧನೆಯನ್ನು ನಡೆಸತಕ್ಕದ್ದು.

(3) ಲೆಕ್ಕಪರಿಶೋಧಕರು ಪ್ರಮಾಣೀಕರಿಸಿದ ಪ್ರಾಧಿಕಾರದ ಲೆಕ್ಕಪತ್ರಗಳನ್ನು, ಅವುಗಳ ಮೇಲಿನ ಲೆಕ್ಕಪರಿಶೋಧನಾ ವರದಿಯೊಂದಿಗೆ ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಮತ್ತು ಅದನ್ನು ವಿಧಾನಸಭೆಯ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

(4) ಪ್ರಾಧಿಕಾರವು, ವರದಿಯ ಆಧಾರದ ಮೇಲೆ ರಾಜ್ಯ ಸರ್ಕಾರವು ಆದೇಶಿಸಬಹುದಾದ ಅಂಥ ಸರಿಪಡಿಕೆ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

28. ಪ್ರಾಧಿಕಾರದ ಆದೇಶವನ್ನು ಪಾಲಿಸಲು ವಿಫಲವಾದುದಕ್ಕೆ ದಂಡನೆ.– (1) ಈ ಅಧಿನಿಯಮದ ಅಡಿಯಲ್ಲಿನ ಪ್ರಾಧಿಕಾರದ ಅಥವಾ ರಸ್ತೆ ಸುರಕ್ಷತಾ ಆಯುಕ್ತನ ಅಥವಾ ಯಾವುದೇ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯ ಯಾವುದೇ ಆದೇಶವನ್ನು ಪಾಲಿಸಲು ನಿರಾಕರಿಸುವ ಅಥವಾ ವಿಫಲನಾಗುವ ಯಾವೊಬ್ಬ ವ್ಯಕ್ತಿಯು, ಆರು ತಿಂಗಳುಗಳ ಅವಧಿಯ ಕಾರಾವಾಸದಿಂದ ಅಥವಾ ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(2) ಮುಂದುವರೆದ ಅಪರಾಧದ ಸಂದರ್ಭದಲ್ಲಿ, ಅಪರಾಧವು ಮುಂದುವರಿಯುವವರೆಗೆ ಪ್ರತಿ ದಿನಕ್ಕೆ ಒಂದು ಸಾವಿರ ರೂಪಾಯಿಗಳ ಜುಲ್ಮಾನೆಯನ್ನು ವಿಧಿಸತಕ್ಕದ್ದು.

29. ಪ್ರಾಧಿಕಾರಕ್ಕೆ ಅಡಚಣೆ ಉಂಟುಮಾಡಿದ್ದಕ್ಕಾಗಿ ದಂಡನೆ.– ಪ್ರಾಧಿಕಾರ ಅಥವಾ ರಸ್ತೆ ಸುರಕ್ಷತಾ ಆಯುಕ್ತ, ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಅಥವಾ ಪ್ರಾಧಿಕಾರದ ಅಥವಾ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯ ಯಾವೊಬ್ಬ ಅಧಿಕಾರಿ ಅಥವಾ ಈ ಅಧಿನಿಯಮದ ಅಡಿಯಲ್ಲಿನ ಪ್ರಕಾರ್ಯಗಳನ್ನು ನಿರ್ವಹಿಸಲು ಅವುಗಳಿಂದ ನಿಯೋಜಿತನಾದ ಅಥವಾ ತೊಡಗಿದ ಯಾವೊಬ್ಬ ವ್ಯಕ್ತಿಗೆ ಅಡಚಣೆ ಒಡ್ಡುವ ಯಾರೇ ಆಗಲಿ, ಗರಿಷ್ಠ ಮೂರು ವರ್ಷಗಳ ಅವಧಿಯ ಕಾರಾವಾಸದಿಂದ ಅಥವಾ ಇಪ್ಪತ್ತೈದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾಗಿರುವ ಜುಲ್ಮಾನೆಯಿಂದ ಅಥವಾ ಅವೆರಡರಿಂದ ದಂಡಿತನಾಗತಕ್ಕದ್ದು.

30. ಅಪರಾಧಗಳ ರಾಜಿ.– 28ನೇ ಮತ್ತು 29ನೇ ಪ್ರಕರಣಗಳ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧವನ್ನು, ಅಭಿಯೋಜನೆಯನ್ನು ಪ್ರಾರಂಭಿಸುವ ಮೊದಲಾಗಲಿ ಅಥವಾ ನಂತರವಾಗಲಿ, ರಾಜ್ಯ ಸರ್ಕಾರವು ರಾಜ್ಯಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆಯ ಮೂಲಕ, ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದ ಅಂಥ ಅಧಿಕಾರಿಗಳು ಅಥವಾ ಪ್ರಾಧಿಕಾರಗಳು ಮತ್ತು ಅಂಥ ಮೊತ್ತಕ್ಕೆ ರಾಜಿ ಮಾಡಿಸಬಹುದು.

31. ಕಂಪನಿಗಳಿಂದ ಅಪರಾಧಗಳು.– ಈ ಅಧಿನಿಯಮದ ಅಡಿಯಲ್ಲಿ ದಂಡಿಸಬಹುದಾದ ಅಪರಾಧವನ್ನು ಯಾವುದೇ ಸಮಯದಲ್ಲಿ ಒಂದು ಕಂಪನಿಯು ಮಾಡಿದ್ದರೆ, ಅಪರಾಧವು ನಡೆದ ಕಾಲದಲ್ಲಿ, ಆ ಕಂಪನಿಯ ವ್ಯವಹರಣೆಗಳ ನಿರ್ವಹಣೆಗಾಗಿ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಅದಕ್ಕೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು

ಮತ್ತು ಕಂಪನಿಯನ್ನು ಆ ಅಪರಾಧದ ಹೊಣೆಗಾರರೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವನು ತನ್ನ ವಿರುದ್ಧದ ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು:

ಪರಂತು, ಈ ಅಧಿನಿಯಮದ ಅಡಿಯಲ್ಲಿ ದಂಡಿಸಬಹುದಾದ ಒಂದು ಅಪರಾಧವನ್ನು ಕಂಪನಿಯು ಮಾಡಿದ್ದರೆ ಮತ್ತು ಆ ಅಪರಾಧವು ಕಂಪನಿಯ ಯಾವೊಬ್ಬ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ಅಥವಾ ಅವನ ಕಡೆಯಿಂದಾದ ಯಾವುದೇ ನಿರ್ಲಕ್ಷ್ಯದ ಕಾರಣದಿಂದ ಅಪರಾಧವು ಸಂಭವಿಸಿತೆಂದು ಹೇಳಬಹುದಾದರೆ ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ಬಗ್ಗೆ ದೋಷಿಯೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವನು ತನ್ನ ವಿರುದ್ಧದ ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು.

ವಿವರಣೆ:– ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) 'ಕಂಪೆನಿ' ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಒಂದು ಫರ್ಮ್ ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ;

(ಬಿ) 'ನಿರ್ದೇಶಕ' ಎಂದರೆ, ಒಂದು ಫರ್ಮ್‌ನ ಸಂಬಂಧದಲ್ಲಿ ಫರ್ಮ್‌ನಲ್ಲಿಯ ಪಾಲುದಾರ.

32. ಅಪೀಲುಗಳು.– (1) ಈ ಅಧಿನಿಯಮದ ಅಡಿಯಲ್ಲಿ ಪ್ರಾಧಿಕಾರದ ಅಥವಾ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯ ಯಾವೊಬ್ಬ ಅಧಿಕಾರಿಯು ಹೊರಡಿಸಿದ ಯಾವುದೇ ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು, ನಿಯಮಿಸಬಹುದಾದ ಅಂಥ ಸಮಯದೊಳಗೆ, ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಮೇಲ್ಮನವಿ ನ್ಯಾಯಾಧಿಕರಣಕ್ಕೆ ಅಪೀಲನ್ನು ಸಲ್ಲಿಸಬಹುದು. ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಜಿಲ್ಲಾ ನ್ಯಾಯಾಧೀಶರ ದರ್ಜೆಗೆ ಕಡಿಮೆಯಿಲ್ಲದ ಹುದ್ದೆಗಳನ್ನು ಹೊಂದಿರುವ ಅಥವಾ ಅಂತಹುದೇ ಹುದ್ದೆಯನ್ನು ಹೊಂದಿದ್ದ ಒಬ್ಬ ನ್ಯಾಯಿಕ ಅಧಿಕಾರಿಯನ್ನು ಒಳಗೊಂಡ, ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಮೇಲ್ಮನವಿ ನ್ಯಾಯಾಧಿಕರಣವನ್ನು ರಚಿಸತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಸಲ್ಲಿಸಲಾದ ಅಂಥ ಪ್ರತಿಯೊಂದು ಅಪೀಲು ನಿಯಮಿಸಬಹುದಾದ ಅಂಥ ಶುಲ್ಕವನ್ನು ಹೊಂದಿರತಕ್ಕದ್ದು.

(3) (1)ನೇ ಉಪಪ್ರಕರಣದ ಅಡಿಯಲ್ಲಿ ಅಪೀಲನ್ನು ಸ್ವೀಕರಿಸಿದ ತರುವಾಯ, ಅಪೀಲು ನ್ಯಾಯಾಧಿಕರಣವು, ಅಹವಾಲನ್ನು ಹೇಳಿಕೊಳ್ಳಲು ಅಪೀಲುದಾರನಿಗೆ ಅವಕಾಶವನ್ನು ನೀಡಿದ ತರುವಾಯ ಸಾಧ್ಯವಾದಷ್ಟು ಬೇಗನೇ ಅಪೀಲನ್ನು ವಿಲೆ ಮಾಡತಕ್ಕದ್ದು.

33. ಪ್ರಾಧಿಕಾರದ ಸದಸ್ಯರು ಮತ್ತು ಸಿಬ್ಬಂದಿಗಳು ಲೋಕನೌಕರರಾಗಿರುವುದು.– ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಲಾದ ಯಾವುವೇ ನಿಯಮಗಳ ಉಪಬಂಧಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವಾಗ ಅಥವಾ ಕಾರ್ಯನಿರ್ವಹಿಸುತ್ತಿದ್ದಾರೆಂದು ಅಭಿಪ್ರಾಯವನ್ನು ಹೊಂದಿದ್ದಾಗ, ಪ್ರಾಧಿಕಾರದ ಎಲ್ಲಾ ಸದಸ್ಯರು ಮತ್ತು ನೌಕರರನ್ನು ಭಾರತೀಯ ದಂಡ ಸಂಹಿತೆ, 1860ರ (1860ರ ಕೇಂದ್ರ ಅಧಿನಿಯಮ 45) 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕನೌಕರರೆಂದು ಭಾವಿಸತಕ್ಕದ್ದು.

34. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.– ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಅಡಿಯಲ್ಲಿ ಅಥವಾ ಅದರ ಅನುಸರಣೆಯಲ್ಲಿ, ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಯಾವುದೇ ಕೃತ್ಯಕ್ಕಾಗಿ, ರಾಜ್ಯ ಸರ್ಕಾರ ಅಥವಾ ಪ್ರಾಧಿಕಾರ ಅಥವಾ ರಾಜ್ಯ ಸರ್ಕಾರದ ಯಾವೊಬ್ಬ ಅಧಿಕಾರಿ ಅಥವಾ ಪ್ರಾಧಿಕಾರದ ಯಾವೊಬ್ಬ ಸದಸ್ಯ ಅಥವಾ ಇತರ ನೌಕರರ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರೆ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

35. ಅಪರಾಧಗಳ ಸಂಜ್ಞೇಯತೆ.– ರಸ್ತೆ ಸುರಕ್ಷತಾ ಆಯುಕ್ತನ ಪೂರ್ವಾನುಮತಿಯೊಂದಿಗೆ ಸಲ್ಲಿಸಲಾದ, ಅಂಥ ಅಪರಾಧವನ್ನು ಉಂಟುಮಾಡುವ ಅಂಶಗಳನ್ನು ಒಳಗೊಂಡ ಲಿಖಿತದಲ್ಲಿ ವರದಿಯನ್ನು ಮಾಡಿದ ಹೊರತು, ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧವನ್ನು ಯಾವುದೇ ನ್ಯಾಯಾಲಯವು ಸಂಜ್ಞೇಯತೆಗೆ ತೆಗೆದುಕೊಳ್ಳತಕ್ಕದ್ದಲ್ಲ.

36. ಸಿವಿಲ್ ನ್ಯಾಯಾಲಯಗಳ ಅಧಿಕಾರವ್ಯಾಪ್ತಿಯ ಪ್ರತಿಷೇಧ.– ರಾಜ್ಯ ಸರ್ಕಾರ ಅಥವಾ ಪ್ರಾಧಿಕಾರ ಅಥವಾ ರಾಜ್ಯ ಸರ್ಕಾರದ ಅಥವಾ ಪ್ರಾಧಿಕಾರದ ಮೂಲಕ ಅಧಿಕೃತನಾದ ಯಾವೊಬ್ಬ ಅಧಿಕಾರಿಯು ತೀರ್ಮಾನಿಸಬೇಕೆಂದು, ನಿರ್ಧರಿಸಬೇಕೆಂದು ಅಥವಾ ವ್ಯವಹರಿಸಬೇಕೆಂದು ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಅಗತ್ಯಪಡಿಸಲಾದ ಯಾವುದೇ ವಿಷಯವನ್ನು ನಿರ್ಧರಿಸಲು ಅಥವಾ ಯಾವುದೇ ಪ್ರಶ್ನೆಯನ್ನು ತೀರ್ಮಾನಿಸಲು, ನಿರ್ಧರಿಸಲು ಅಥವಾ ಅದರೊಂದಿಗೆ ವ್ಯವಹರಿಸಲು ಯಾವುದೇ ಸಿವಿಲ್ ನ್ಯಾಯಾಲಯವು ಅಧಿಕಾರವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ.

37. ಅಧಿನಿಯಮವು ಕರ್ನಾಟಕ ಹೆದ್ದಾರಿ ಅಧಿನಿಯಮ 1964ನ್ನು ಅಲ್ಪೀಕರಣಗೊಳಿಸುವಂತಿಲ್ಲ.– ಈ ಅಧಿನಿಯಮದ ಉಪಬಂಧಗಳು, ಕರ್ನಾಟಕ ಹೆದ್ದಾರಿ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 44) ಉಪಬಂಧಗಳಿಗೆ ಪೂರಕವಾಗಿರತಕ್ಕದ್ದು ಆದರೆ ಅಲ್ಪೀಕರಣಗೊಳಿಸತಕ್ಕದ್ದಲ್ಲ.

38. ನಿರ್ದೇಶನಗಳನ್ನು ನೀಡಲು ಅಧಿಕಾರ.– ರಾಜ್ಯ ಸರ್ಕಾರವು, ಪ್ರಾಧಿಕಾರದ ಕಾರ್ಯನೀತಿಯ ವಿಷಯಗಳಲ್ಲಿ ಪ್ರಾಧಿಕಾರಕ್ಕೆ ನಿರ್ದೇಶನಗಳನ್ನು ನೀಡಬಹುದು ಮತ್ತು ಅಂಥ ನಿರ್ದೇಶನಗಳನ್ನು ಜಾರಿಗೊಳಿಸುವುದಕ್ಕೆ ಪ್ರಾಧಿಕಾರವು ಬದ್ಧವಾಗಿರತಕ್ಕದ್ದು.

39. ನಿಯಮಗಳನ್ನು ರಚಿಸಲು ಅಧಿಕಾರ.– (1) ರಾಜ್ಯ ಸರ್ಕಾರವು, ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಪೂರ್ವ ಪ್ರಕಟಣೆಯ ತರುವಾಯ, ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ, ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಮುಂದಿನ ಎಲ್ಲಾ ಅಥವಾ ಯಾವುದೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) ಪ್ರಾಧಿಕಾರವು ನಿರ್ವಹಿಸಬೇಕಾದ ಪ್ರಕಾರ್ಯಗಳು;

(ಬಿ) ಉಪಕರವನ್ನು ಸಂಗ್ರಹಿಸಬೇಕಾದ ಮತ್ತು ನಿಧಿಗೆ ಜಮೆ ಮಾಡಬೇಕಾದ ವಿಧಾನ;

(ಸಿ) ನಿಧಿಗಳನ್ನು ಬಳಸತಕ್ಕ ಉದ್ದೇಶಗಳು;

(ಡಿ) ಪ್ರಾಧಿಕಾರದ ಅಧಿಕಾರಿಗಳು ಮತ್ತು ಸಿಬ್ಬಂದಿಯ ಪದನಾಮ, ನೇಮಕಾತಿ ವಿಧಾನ ಮತ್ತು ಇತರ ಸೇವಾ ಷರತ್ತುಗಳು;

(ಇ) 24ನೇ ಪ್ರಕರಣದ ಅಡಿಯಲ್ಲಿ ರಸ್ತೆ ಸುರಕ್ಷತಾ ಆಯುಕ್ತನು ನಿಧಿಯ ಲೆಕ್ಕಪತ್ರಗಳನ್ನು ನಿರ್ವಹಿಸಬೇಕಾದ ವಿಧಾನ;

(ಎಫ್) 26ನೇ ಪ್ರಕರಣದ ಅಡಿಯಲ್ಲಿ ವಾರ್ಷಿಕ ವರದಿಯನ್ನು ಸಿದ್ಧಪಡಿಸಬೇಕಾದ ನಮೂನೆ ಮತ್ತು ಸಮಯ;

(ಜಿ) 32ನೇ ಪ್ರಕರಣದ ಅಡಿಯಲ್ಲಿ ಅಪೀಲನ್ನು ದಾಖಲುಮಾಡುವ ಸಮಯ ಹಾಗೂ ಶುಲ್ಕ; ಮತ್ತು

(ಎಚ್) ಅಗತ್ಯವಾದಂತೆ ಅಥವಾ ನಿಯಮಿಸಬಹುದಾದಂತೆ ಯಾವುದೇ ಇತರ ವಿಷಯ.

(3) ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚಿನ ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಹದಿನಾಲ್ಕು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನಗಳ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನದ ಮುಕ್ತಾಯಕ್ಕೆ ಮೊದಲು ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಉಭಯ ಸದನಗಳೂ ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಉಭಯ ಸದನಗಳೂ ಒಪ್ಪಿದರೆ, ಆ ನಿಯಮದ ಆ ಮಾರ್ಪಾಟು ಅಥವಾ ರದ್ದತಿಯು ಅಧಿಸೂಚಿಸಿದ ದಿನಾಂಕದಿಂದ ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಸಂದರ್ಭಾನುಸಾರವಾಗಿ ಯಾವುದೇ ಪರಿಣಾಮ ಹೊಂದಿರತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದತಿಯು ಆ ನಿಯಮದ ಅಡಿಯಲ್ಲಿ ಹಿಂದೆ ಮಾಡಿದ ಯಾವುದೇ ಕೃತ್ಯದ ಮಾನ್ಯತೆಗೆ ಬಾಧಕವಾಗತಕ್ಕದ್ದಲ್ಲ.

40. ವಿನಿಯಮಗಳು.– ಪ್ರಾಧಿಕಾರದ ಅಥವಾ ಸಂದರ್ಭಾನುಸಾರವಾಗಿ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯ ಮುಂದೆ ಬರುವ ಎಲ್ಲ ಸಭೆಗಳಿಗಾಗಿ ಮತ್ತು ವಿಷಯಗಳ ವಿಲೆಗಾಗಿ, ಪ್ರಾಧಿಕಾರ ಮತ್ತು ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯ ಮೂಲಕ ಅಳವಡಿಸಿಕೊಳ್ಳಬೇಕಾದ ಕಾರ್ಯವಿಧಾನದ ಸಂಬಂಧದಲ್ಲಿ ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಪ್ರಾಧಿಕಾರವು ವಿನಿಯಮಗಳನ್ನು ರಚಿಸಬಹುದು.

41. ತೊಂದರೆಗಳ ನಿವಾರಣೆ.– (1) ಈ ಅಧಿನಿಯಮದ ಉಪಬಂಧಗಳಿಗೆ ಪರಿಣಾಮ ನೀಡುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದಲ್ಲಿ, ರಾಜ್ಯ ಸರ್ಕಾರವು, ಸಂದರ್ಭವು ಅಗತ್ಯಪಡಿಸಬಹುದಾದಂತೆ, ಆದೇಶದ ಮೂಲಕ, ತೊಂದರೆಯನ್ನು ನಿವಾರಿಸುವ ಉದ್ದೇಶಕ್ಕಾಗಿ ಅದಕ್ಕೆ ಅವಶ್ಯವೆಂದು ಕಂಡುಬರುವ, ಈ ಅಧಿನಿಯಮ ಅಥವಾ ಅದರಡಿಯಲ್ಲಿ ರಚಿಸಲಾದ ನಿಯಮಗಳಿಗೆ ಅಸಂಗತವಾಗದ ಯಾವುದನ್ನಾದರೂ ಮಾಡಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳ ತರುವಾಯ ಯಾವುದೇ ಅಂಥ ಆದೇಶವನ್ನು ಹೊರಡಿಸತಕ್ಕದ್ದಲ್ಲ.

(2) ಈ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಆದೇಶವನ್ನು ವಿಧಾನಮಂಡಲದ ಮುಂದೆ ಮಂಡಿಸತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಡಾ. ರಾಜಶೇಖರನ್ ಅವರು ಸಲ್ಲಿಸಿದ ರಿಟ್ ಅರ್ಜಿ ಸಂಖ್ಯೆ.295/2012(ಪಿಐಎಲ್–ಸಿವಿಲ್)ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ರಾಷ್ಟ್ರದಲ್ಲಿ ನಡೆಯುವ ರಸ್ತೆ ಅಪಘಾತಗಳ ನಿಯಂತ್ರಣಕ್ಕೆ ಸಂಬಂಧಿಸಿದಂತೆ 22ನೇ ಏಪ್ರಿಲ್ 2014ರಂದು ಒಂದು ಐತಿಹಾಸಿಕ ತೀರ್ಪನ್ನು ನೀಡಿದೆ. ಈ ತೀರ್ಪಿನ ಅನುಸರಣೆಯಲ್ಲಿ, ಕೇಂದ್ರ ಸರ್ಕಾರವು 30ನೇ ಮೇ 2014ರಂದು, ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರನ್ನು ಅಧ್ಯಕ್ಷರನ್ನಾಗಿ ಮತ್ತು ಇಬ್ಬರು ರಸ್ತೆ ಸುರಕ್ಷತಾ ತಜ್ಞರನ್ನು ಸದಸ್ಯರನ್ನಾಗಿ ಒಳಗೊಂಡಿರುವ ಒಂದು "ರಸ್ತೆ ಸುರಕ್ಷತಾ ಸಮಿತಿ"ಯನ್ನು ರಚಿಸಿದೆ. ಸದರಿ ಸಮಿತಿಯು, ಕರ್ನಾಟಕ ರಾಜ್ಯವನ್ನು ಒಳಗೊಂಡಂತೆ ಎಲ್ಲಾ ರಾಜ್ಯಗಳಿಗೆ ಈಗಾಗಲೇ ಅನೇಕ ನಿರ್ದೇಶನಗಳನ್ನು ನೀಡಿದ್ದು, ಸದರಿ ನಿರ್ದೇಶನಗಳನ್ನು ಅನುಷ್ಠಾನಮಾಡುವುದಕ್ಕಾಗಿ ನಿರ್ದೇಶನಗಳನ್ನು ನೀಡಿದೆ. ರಸ್ತೆ ಸುರಕ್ಷತಾ ಕ್ರಮಗಳನ್ನು ಅನುಷ್ಠಾನಗೊಳಿಸಲು ಮತ್ತು ರಾಜ್ಯದಲ್ಲಿ ಅದರ ಪರಿಣಾಮಗಳನ್ನು ಸುನಿಶ್ಚಿತಗೊಳಿಸುವುದು ಸರ್ಕಾರದ ಹೊಣೆಗಾರಿಕೆಯಾಗಿದೆ.

ಆದುದರಿಂದ, ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರವನ್ನು ಸ್ಥಾಪಿಸಿ, ಅದಕ್ಕೆ ಶಾಸನಾತ್ಮಕ ಅಧಿಕಾರಗಳನ್ನು ನೀಡಲು ಉಪಬಂಧ ಕಲ್ಪಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ರಚನೆಗಾಗಿ 2017–18ನೇ ವರ್ಷದ ಆಯವ್ಯಯದಲ್ಲಿ, 5.00 ಕೋಟಿ ರೂಪಾಯಿಗಳನ್ನು ಹಂಚಿಕೆ ಮಾಡಲಾಗಿದೆ.

ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತು ಜ್ಞಾಪನ ಪತ್ರ

ಖಂಡ: 6	(15)ನೇ ಉಪಖಂಡವು ಪ್ರಾಧಿಕಾರವು ಚಲಾಯಿಸಬೇಕಾದ ಅಂಥ ಇತರ ಪ್ರಕಾರ್ಯಗಳ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.
ಖಂಡ: 12	(4)ನೇ ಉಪಖಂಡವು ಅಂಥ ಇತರ ನಿಧಿಯ ಮೂಲಗಳ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.
ಖಂಡ: 13	(3)ನೇ ಉಪಖಂಡವು ನೋಂದಣಿ ಪ್ರಾಧಿಕಾರವು ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ನಿಧಿಗೆ ಉಪಕರವನ್ನು ಇರಸಾಲು ಮಾಡುವ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.
ಖಂಡ: 14	(2)ನೇ ಉಪಖಂಡವು ಪ್ರಾಧಿಕಾರವು ರಸ್ತೆ ಸುರಕ್ಷತಾ ನಿಧಿಯನ್ನು ನಿರ್ವಹಿಸಬೇಕಾದ ವಿಧಾನವನ್ನು ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.
ಖಂಡ: 15	(ಹೆಚ್) ಬಾಬುವು ರಸ್ತೆ ಸುರಕ್ಷತಾ ನಿಧಿ ಬಳಕೆಯ ಯಾವುದೇ ಇತರ ಉದ್ದೇಶದ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.
ಖಂಡ: 16	(2)ನೇ ಉಪಖಂಡವು ಅಪಘಾತಕ್ಕೆ ಕಾರಣನಾದ ವ್ಯಕ್ತಿಯಿಂದ ವೆಚ್ಚವನ್ನು ವಸೂಲುಮಾಡಬೇಕಾದ ವಿಧಾನದ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.
ಖಂಡ: 21	ಜಿಲ್ಲಾ ಮತ್ತು ಸುರಕ್ಷತಾ ಸಮಿತಯು ನಿರ್ವಹಿಸಬೆಕಾದ ಪ್ರಕಾರ್ಯಗಳು ಮತ್ತು ಚಲಾಯಿಸಬೇಕಾದ ಅಧಿಕಾರಗಳ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.
ಖಂಡ: 22	(2)ನೇ ಉಪಖಂಡವು ಪ್ರಾಧಿಕಾರದ ಅಧಿಕಾರಿಗಳು ಮತ್ತು ಸಿಬ್ಬಂದಿಯ ನೇಮಕಾತಿಗಾಗಿ ಪದನಾಮ, ನೇಮಕಾತಿಯ ವಿಧಾನ ಮತ್ತು ಇತರ ಸೇವಾ ಷರತ್ತುಗಳ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಖಂಡ: 24	ರಸ್ತೆ ಸುರಕ್ಷತಾ ಆಯುಕ್ತರು ನಿಧಿಯ ಲೆಕ್ಕಪತ್ರಗಳನ್ನು ನಿರ್ವಹಿಸುವ ವಿಧಾನದ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.
ಖಂಡ: 26	(1)ನೇ ಉಪಖಂಡವು ಪ್ರಾಧಿಕಾರದ ವಾರ್ಷಿಕ ವರದಿಯನ್ನು ಸಿದ್ಧಪಡಿಸುವ ನಮೂನೆ ಮತ್ತು ಸಮಯದ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.
ಖಂಡ: 32	(i) (1)ನೇ ಉಪಖಂಡವು ಬಾಧಿತನಾದ ವ್ಯಕ್ತಿಯು ಅಪೀಲನ್ನು ಸಲ್ಲಿಸುವ ಸಮಯದ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. (ii) (2)ನೇ ಉಪಖಂಡವು ಬಾಧಿತನಾದ ವ್ಯಕ್ತಿಯು ಅಪೀಲಿನೊಂದಿಗೆ ಸಲ್ಲಿಸುವ ಶುಲ್ಕದ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.
ಖಂಡ: 39	ಪೂರ್ವಪ್ರಕಟಣೆಯ ತರುವಾಯ ಈ ಅಧಿನಿಯಮದ ಯಾವುದೇ ಅಥವಾ ಎಲ್ಲ ಉದ್ದೇಶಗಳನ್ನು ಕಾರ್ಯಗತಗೊಳಿಸುವ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

ರಾಮಲಿಂಗಾ ರೆಡ್ಡಿ
ಸಾರಿಗೆ ಮಂತ್ರಿಗಳು

ಎಸ್. ಮೂರ್ತಿ
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY
FOURTEENTH LEGISLATIVE ASSEMBLY
FOURTEENTH SESSION
THE KARNATAKA STATE ROAD SAFETY AUTHORITY BILL, 2017
(L.A. Bill No. 35 of 2017)

A Bill to provide for the constitution of a Road Safety Authority for the implementation of Road Safety programmes and for the establishment of a Road Safety Fund in the State of Karnataka, and for matters connected therewith and incidental thereto.

Whereas it is expedient to provide for the constitution of a Road Safety Authority for the implementation of Road Safety programmes and for the establishment of a Road Safety Fund in the State of Karnataka, and for matters connected therewith and incidental thereto:

Be it enacted by the Karnataka State Legislature in the sixty-eighth year of the Republic of India as follows:-

1. Short title and commencement (1) This Act may be called the Karnataka State Road Safety Authority Act, 2017.

"ಅಲ್ಲದೇ ಪರಂತು, 21ನೇ ಜನವರಿ 2016ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲಾದ ದಿನಾಂಕ:11.12.2015ರ ಸರ್ಕಾರದ ಆದೇಶ ಸಂಖ್ಯೆ ಎಜಿಡಿ 94 ಎಎಂಎಸ್ 2015ರಲ್ಲಿ ಕರ್ನಾಟಕ ಕೃಷಿ ವ್ಯವಹಾರ ಮತ್ತು ಆಹಾರ ಸಂಸ್ಕರಣೆ ಕಾರ್ಯನೀತಿ 2015ರಲ್ಲಿ ನಿರ್ದಿಷ್ಟಪಡಿಸಿದ ಅಥವಾ ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದ ಯಾವುದೇ ಇತರ ಮಾರ್ಪಾಡುಗಳಂತೆ ಅರ್ಹ ಕೈಗಾರಿಕಾ ಉದ್ಯಮಗಳಿಗೆ (eligible industrial enterprises) ಸಂಬಂಧಿಸಿದಂತೆ ಬರೆದುಕೊಟ್ಟ ಅಥವಾ ಅನುಕೂಲಕರವಾಗುವ ಯಾವುದೇ ಲಿಖಿತಗಳ ಮೇಲೆ ಸಂದಾಯ ಮಾಡಬೇಕಾದ ಸ್ಟಾಂಪು ಶುಲ್ಕವನ್ನು ರಾಜ್ಯ ಸರ್ಕಾರವು, ಸಾರ್ವಜನಿಕ ಹಿತಾಸಕ್ತಿಯಲ್ಲಿ, ಅಧಿಸೂಚನೆಯ ಮೂಲಕ, 21ನೇ ಜನವರಿ 2016ರಿಂದ ಜಾರಿಗೆ ಬರುವಂತೆ ಕಾರ್ಯನೀತಿಯ ಅವಧಿಯಲ್ಲಿ ನಿಯಮಿಸಲಾದ ಪ್ರಾಧಿಕಾರದಿಂದ ಆ ಪರಿಣಾಮಕ್ಕೆ ಪ್ರಮಾಣಪತ್ರವನ್ನು ಒದಗಿಸುವುದಕ್ಕೆ ಒಳಪಟ್ಟು ಕಡಿಮೆ ಮಾಡಬಹುದು ಅಥವಾ ಮಾಫಿ ಮಾಡಬಹುದು."

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 34) ಈ ಮುಂದಿನವುಗಳಿಗೆ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ, ಎಂದರೆ:–

(i) ಕೃಷಿ ವ್ಯವಹಾರ ಮತ್ತು ಆಹಾರ ಸಂಸ್ಕರಣೆ ಕಾರ್ಯನೀತಿ 2015ರಲ್ಲಿ ಮಾಡಲಾದ ಪ್ರಸ್ತಾವಗಳನ್ನು ಪರಿಣಾಮಕಾರಿಯಾಗಿಸುವುದು; ಮತ್ತು

(ii) ಕೃಷಿ ವ್ಯವಹಾರ ಮತ್ತು ಆಹಾರ ಸಂಸ್ಕರಣೆ ಕೈಗಾರಿಕೋದ್ಯಮಗಳ ಬೆಳವಣಿಗೆಗೆ ಪ್ರಚೋದನೆ ನೀಡುವುದು.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಕಾಗೋಡು ತಿಮ್ಮಪ್ಪ
ಕಂದಾಯ ಮಂತ್ರಿಗಳು

ಎಸ್. ಮೂರ್ತಿ
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

ಅನುಬಂಧ

ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ, 34) ಉದ್ಧೃತ ಭಾಗ

Xxx xxx xxx

9.ಸುಂಕಗಳನ್ನು ಕಡಿಮೆ ಮಾಡಲು, ಮಾಫಿ ಮಾಡಲು ಅಥವಾ ಅವುಗಳ ಬಗ್ಗೆ ರಾಜಿಮಾಡಿಕೊಳ್ಳಲು ಅಧಿಕಾರ.– (1) ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ನಿಯಮ ಅಥವಾ ಆದೇಶದ ಮೂಲಕ,–

(ಎ) **Xxx xxx xxx**

ಅಲ್ಲದೇ ಪರಂತು, ನಿಯಮಿಸಲಾದ ಪ್ರಾಧಿಕಾರದಿಂದ ಆ ಪರಿಣಾಮಕ್ಕೆ ಪ್ರಮಾಣ ಪತ್ರವನ್ನು ಹಾಜರುಪಡಿಸುವುದಕ್ಕೆ ಒಳಪಟ್ಟು, ಕಾಲಕಾಲಕ್ಕೆ ರಾಜ್ಯ ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದಿಷ್ಟಪಡಿಸಲಾದ ಮಾಹಿತಿ ತಂತ್ರಜ್ಞಾನ/ಮಾಹಿತಿ ತಂತ್ರಜ್ಞಾನ ಸಾಧ್ಯತಾ ಸೇವೆಗಳು/ನವೋದ್ಯಮಗಳು/ ಅನಿಮೇಷನ್/ಗೇಮಿಂಗ್(ಆಟೋಟ)/ಕಂಪ್ಯೂಟರ್ ಗ್ರಾಫಿಕ್ಸ್ (ಗಣಕ ರೇಖಾ ವಿನ್ಯಾಸ) / ದೂರ ಸಂಪರ್ಕ/ಬಿ.ಪಿ.ಓ /ಕೆ.ಪಿ.ಓ/ಇತರ ಜ್ಞಾನಾಧಾರಿತ ಕೈಗಾರಿಕೆಗಳಿಗಾಗಿ ಹೊಸ ಹೂಡಿಕೆ ಉತ್ತೇಜನ ನೀತಿಯ ಸಂಬಂಧದಲ್ಲಿ, (ನೀತಿ ಎಂದರೆ: ತಂತ್ರಜ್ಞಾನ/ಮಾಹಿತಿ ತಂತ್ರಜ್ಞಾನ ಸಾಧ್ಯತಾ ಸೇವೆಗಳು/ಅನ್ವೇಷಣಾ ಉತ್ತೇಜಕಗಳ ಕಾರ್ಯನೀತಿ), ಸಂಬಂಧಪಟ್ಟ ವ್ಯಕ್ತಿಗಳ ಮೂಲಕ ಅಥವಾ ಅವರ ನಡುವೆ ಬರೆಯಲಾದ ಯಾವುದೇ ಲಿಖಿತದ ಮೇಲೆ ಸಂದಾಯ ಮಾಡಬಹುದಾದ ಸ್ಟಾಂಪು ಸುಂಕವನ್ನು, ರಾಜ್ಯ ಸರ್ಕಾರವು, ಸಾರ್ವಜನಿಕ ಹಿತಾಸಕ್ತಿಯಲ್ಲಿ, ಅಧಿಸೂಚನೆಯ ಮೂಲಕ 16ನೇ ಜನವರಿ 2014ರಿಂದ ಜಾರಿಗೆ ಬರುವಂತೆ ಐದು ವರ್ಷಗಳಿಗಾಗಿ ಕಡಿಮೆ ಮಾಡಬಹುದು ಅಥವಾ ಮಾಫಿ ಮಾಡಬಹುದು.

Xxx xxx xxx

KARNATAKA LEGISLATIVE ASSEMBLY
FOURTEENTH LEGISLATIVE ASSEMBLY
FOURTEENTH SESSION

THE KARNATAKA STAMP (SECOND AMENDMENT) BILL, 2017
(L.A. Bill No. 31 of 2017)

A Bill further to amend the Karnataka Stamp Act, 1957.

Whereas it is expedient further to amend the Karnataka Stamp Act, 1957 (Karnataka Act 34 of 1957), for the purposes hereinafter appearing;

Be it enacted by the Karnataka State Legislature in the sixty-eighth year of the Republic of India as follows:-

1. Short title and commencement.– (1) This Act may be called the Karnataka Stamp (Second Amendment) Act, 2017.

(2) It shall come into force at once.

2. Amendment of Section 9.- In section 9 of the Karnataka Stamp Act, 1957, (Karnataka Act 34 of 1957) in sub-section (1), in clause (a), after the last proviso, the following shall be inserted, namely:-

"Provided also that the State Government may in public interest, by notification, with effect from 21st January, 2016, reduce or remit during the policy period, stamp duty payable on the instruments to be specified therein, executed by or in favour of the eligible industrial enterprises, in connection with the Karnataka Agribusiness and Food Processing Policy 2015, specified in the Government Order No.AGD 94 AMS 2015, dated: 11.12.2015, published in the Karnataka Gazette, dated: 21st January, 2016 or any other modifications specified by the State Government from time to time subject to production of a certificate to that effect from the Prescribed Authority."

STATEMENT OF OBJECTS AND REASONS

It is consider necessary further to amend the Karnataka Stamp Act, 1957 (Karnataka Act No. 34 of 1957) to give effect to,-

(i) the proposals made in the Agribusiness and Food Processing Policy, 2015; and

(ii) give impetus to the growth in the Agribusiness and Food Processing Industrial Enterprises.

Hence the bill.

FINANCIAL MEMORANDUM

There is no extra expenditure involved in the proposed Legislative measure.

KAGODU THIMMAPPA
Minister for Revenue

S. Murthy
Secretary (I/c)
Karnataka Legislative Assembly

ANNEXURE

Extract from the Karnataka Stamp Act, 1957
(Karnataka Act No. 34 of 1957)

XXX XXX XXX

9. Power to reduce, remit or compound duties.- (1) The State Government may, by rule or order published in the Official Gazette,—

XXX XXX XXX

Provided also that the State Government may, in public interest, by notification, reduce or remit, for a period of five years with effect from 16th January 2014, the stamp duty payable on any instrument executed by or between the concerned persons, in connection with the new Investment Incentive Policy (i.e. policy: IT, ITes, Innovation Incentives Policy) for the IT/ITes/Start-ups/ Animation /Gaming / Computer Graphics /Telecom/ BPO/KPO/other knowledge based industries, specified by general or special order of the State Government from time to time subject to production of a certificate to that effect from the prescribed Authority.

XXX XXX XXX

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 150

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–IVA	ಬೆಂಗಳೂರು, ಬುಧವಾರ, ಜೂನ್ ೨೧, ೨೦೧೭ (ಜ್ಯೇಷ್ಠ ೩೧, ಶಕ ವರ್ಷ ೧೯೩೯)	ನಂ. ೫೬೨
Part–IVA	Bengaluru, Wednesday, June 21, 2017 (Jyeshta 31, Shaka Varsha 1939)	No. 562

KARNATAKA LEGISLATIVE ASSEMBLY SECRETARIAT

NOTIFICATION

No.KLA/LGA/36/Bill/2017, Bengaluru, Dated 20.06.2017

The following Bill was introduced in Legislative Assembly on 20.06.2017.

ಕರ್ನಾಟಕ ವಿಧಾನ ಸಭೆ
ಹದಿನಾಲ್ಕನೇ ವಿಧಾನಸಭೆ
ಹದಿನಾಲ್ಕನೇ ಅಧಿವೇಶನ
ಕರ್ನಾಟಕ ಸಾರ್ವಜನಿಕ ಸುರಕ್ಷೆಯ (ಕ್ರಮಗಳ) ಜಾರಿ ವಿಧೇಯಕ, 2017
(2017ರ ವಿಧಾನಸಭೆಯ ವಿಧೇಯಕ ಸಂಖ್ಯೆ–36)

ರಾಜ್ಯದಲ್ಲಿನ ಕಾರ್ಯಸಂಸ್ಥೆಗಳಲ್ಲಿ ಸಾರ್ವಜನಿಕ ಸುರಕ್ಷೆಯ ಕ್ರಮಗಳನ್ನು ಉಪಬಂಧಿಸುವುದಕ್ಕಾಗಿ ಒಂದು ವಿಧೇಯಕ.

ರಾಜ್ಯದಲ್ಲಿನ ಕಾರ್ಯಸಂಸ್ಥೆಗಳಲ್ಲಿ ಸಾರ್ವಜನಿಕ ಸುರಕ್ಷೆಯ ಕ್ರಮಗಳಿಗೆ ಉಪಬಂಧಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ಮತ್ತು ಅದಕ್ಕೆ ಪ್ರಾಸಂಗಿಕ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು.

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಕರ್ನಾಟಕ ಸಾರ್ವಜನಿಕ ಸುರಕ್ಷೆಯ (ಕ್ರಮಗಳ) ಜಾರಿ ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976ರ ಅಡಿಯಲ್ಲಿ ರಚನೆಯಾದ ಇತರ ನಗರಪಾಲಿಕೆಗಳ ಸಮಗ್ರ ಪ್ರದೇಶಗಳು ಮತ್ತು ರಾಜ್ಯ ಸರ್ಕಾರವು ಕಾಲಕಾಲಕ್ಕೆ ಗುರುತಿಸಿ ಮತ್ತು ಅಧಿಸೂಚಿಸಬಹುದಾದ ಅಂಥ ಇತರ ಪ್ರದೇಶಗಳು ಮತ್ತು ಸ್ಥಳಗಳಿಗೆ ವ್ಯಾಪ್ತವಾಗುತ್ತದೆ.

(3) ಇದು, ರಾಜ್ಯ ಸರ್ಕಾರವು, ಕರ್ನಾಟಕ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

2. ಪರಿಭಾಷೆಗಳು.– ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) **"ಕಾರ್ಯಸಂಸ್ಥೆ"** ಒಂದೇ ಸಮಯದಲ್ಲಿ ನೂರು ಜನ ಅಥವಾ ಹೆಚ್ಚು ಜನರು ಸಾರ್ವಜನಿಕವಾಗಿ ಒಟ್ಟುಗೂಡುವ ಸಂಭಾವ್ಯತೆಯೊಂದಿಗೆ ಜನರು ಬಹುಸಂಖ್ಯೆಯಲ್ಲಿ ಮತ್ತೆ ಮತ್ತೆ ಬರುವ ಸ್ಥಳಗಳಾದ ವಾಣಿಜ್ಯ ಸಂಸ್ಥೆಗಳು, ಕೈಗಾರಿಕಾ ಸಂಸ್ಥೆಗಳು, ಧಾರ್ಮಿಕ ಸ್ಥಳಗಳು, ಶೈಕ್ಷಣಿಕ ಸಂಸ್ಥೆಗಳು, ಆಸ್ಪತ್ರೆಗಳು, ಕ್ರೀಡಾ ಸಂಕೀರ್ಣಗಳು, ರೈಲ್ವೆ ನಿಲ್ದಾಣಗಳು, ಬಸ್ ನಿಲ್ದಾಣಗಳು, ಸಂಘಟಿತ ಧಾರ್ಮಿಕ ಕೂಟಗಳು (congregations) ಸೇರುವ ಸ್ಥಳಗಳು, ಈ ಅಧಿನಿಯಮದ

ಉದ್ದೇಶಕ್ಕಾಗಿ ಕಾರ್ಯ ಸಂಸ್ಥೆಯಾಗಿ ಸರ್ಕಾರವು ಅಧಿಸೂಚನೆಯ ಮೂಲಕ ಘೋಷಿಸಬಹುದಾದ ಅಂಥ ಇತರ ಕಾರ್ಯ ಸಂಸ್ಥೆಗಳು ಇಂಥ ಸ್ಥಳಗಳು;

(ಬಿ) **"ಸರ್ಕಾರ"** ಎಂದರೆ, ಕರ್ನಾಟಕ ರಾಜ್ಯ ಸರ್ಕಾರ;

(ಸಿ) **"ಪರವಾನಗಿ"** ಎಂದರೆ, ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976 ಅಥವಾ ಬೆಂಗಳೂರು ಸಿನಿಮಾಗಳು (ನಿಯಂತ್ರಣ) ಅಧಿನಿಯಮ, 1964 ಅಥವಾ ಕರ್ನಾಟಕ ಶಿಕ್ಷಣ ಅಧಿನಿಯಮ, 1983 ಅಥವಾ ಈ ಉದ್ದೇಶಕ್ಕಾಗಿ ಸಂಬಂಧಪಟ್ಟ ಅಧಿನಿಯಮಗಳ ಅಡಿಯಲ್ಲಿ ರಚಿಸಲಾದ ಯಾವುದೇ ಇತರ ಅಧಿನಿಯಮ ಅಥವಾ ನಿಯಮಗಳ ಅಡಿಯಲ್ಲಿ ಕಾರ್ಯ ಸಂಸ್ಥೆಯೊಂದನ್ನು ಸ್ಥಾಪಿಸಲು ಅಥವಾ ನಡೆಸಲು, ಪಡೆಯಲಾದ ನ್ಯಾಯಸಮ್ಮತವಾದ ಅನುಮತಿ ಅಥವಾ ಪರವಾನಗಿ;

(ಡಿ) **"ಪರವಾನಗಿ (ಮಂಜೂರಾತಿ) ಪ್ರಾಧಿಕಾರ"** ಎಂದರೆ, ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 ಅಥವಾ ಕರ್ನಾಟಕ ಸಿನಿಮಾಗಳ (ನಿಯಂತ್ರಣ) ಅಧಿನಿಯಮ, 1964 ಅಥವಾ ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ ಅಡಿಯಲ್ಲಿ ಸಂಸ್ಥೆಯೊಂದನ್ನು ಸ್ಥಾಪಿಸಲು ಅಥವಾ ನಡೆಸಲು ಪರವಾನಗಿಯನ್ನು ನೀಡಲು ಸಕ್ಷಮವಾದ ಪ್ರಾಧಿಕಾರ ಅಥವಾ ಸಂಸ್ಥೆಯೊಂದನ್ನು ನಡೆಸುವುದಕ್ಕಾಗಿ ಅನುಮತಿ ಅಥವಾ ಪರವಾನಗಿಯನ್ನು ನೀಡುವ ಸಕ್ಷಮವಾದ ಪ್ರಾಧಿಕಾರ;

(ಇ) **"ಅಧಿಸೂಚನೆ"** ಎಂದರೆ, ಕರ್ನಾಟಕ ರಾಜ್ಯಪತ್ರದಲ್ಲಿ ಸರ್ಕಾರವು ಪ್ರಕಟಿಸಿದ ಅಧಿಸೂಚನೆ ಮತ್ತು ಅಧಿಸೂಚಿತ ಪದವನ್ನು ಅದಕ್ಕನುಸಾರವಾಗಿ ಅರ್ಥೈಸತಕ್ಕದ್ದು;

(ಎಫ್) **"ನಿಯಮಿಸಲಾದ"** ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ನಿಯಮಗಳ ಮೂಲಕ ಸರ್ಕಾರದಿಂದ ನಿಯಮಿಸಲಾದುದು;

(ಜಿ) **"ಸಾರ್ವಜನಿಕ ಸುರಕ್ಷೆಯ ಕ್ರಮಗಳು"** ಎಂದರೆ, ಸರ್ಕಾರವು ನಿಯಮಿಸಬಹುದಾದ ಕಾರ್ಯ ಸಂಸ್ಥೆಗಳ ಮತ್ತು ಅವುಗಳ ವಾಹನ ನಿಲುಗಡೆ (parking) ಪ್ರದೇಶಗಳಲ್ಲಿ,–

(i) ಭೌತಿಕ ಮತ್ತು ತಾಂತ್ರಿಕ ಸಾಧನಗಳ ಮೂಲಕ ಗಮ್ಯನಿಯಂತ್ರಕಗಳು (Access Controls) ;

(ii) ಮೂವತ್ತು ದಿನಗಳಿಗಾಗಿ ವಿಡಿಯೋ ಫೂಟೇಜ್ (Video footage) ಸಂಗ್ರಹಣೆಯನ್ನು ಒದಗಿಸುವ ತೆರಪಿಲ್ಲದ ವಿದ್ಯುನ್ಮಂಡಲ ದೂರದರ್ಶಕ ನಿಗಾವಣೆ (Closed circuit television surveillance) ಮೂಲಕ ನಿಗಾವಣೆ;

(iii) ಸರ್ಕಾರವು ಅಧಿಸೂಚಿಸಿದ ನಿರ್ದಿಷ್ಟ ವಿವರಣೆಗಳನ್ನು ದೃಢವಾಗಿ ಪಾಲಿಸುವ ತಾಂತ್ರಿಕ ಸಲಕರಣೆ; ಮತ್ತು

(iv) ಸಾರ್ವಜನಿಕ ಸುರಕ್ಷತೆಯನ್ನು ಹೆಚ್ಚಿಸಲು ಕಾಲಕಾಲಕ್ಕೆ ಸರ್ಕಾರವು ಅಧಿಸೂಚಿಸುವ ಇತರ ಯಾವುದೇ ತಾಂತ್ರಿಕ ಸಲಕರಣೆ,

– ಇವುಗಳನ್ನು ಅಳವಡಿಸುವ ಮೂಲಕ, ಪ್ರವೇಶ ಮತ್ತು ನಿರ್ಗಮನ ಸ್ಥಳಗಳಲ್ಲಿನ ಗಮ್ಯ ನಿಯಂತ್ರಕಗಳು ಮತ್ತು ತೆರಪಿಲ್ಲದ ವಿದ್ಯುನ್ಮಂಡಲ ದೂರದರ್ಶಕ ನಿಗಾವಣೆ.

3. ಸಾರ್ವಜನಿಕ ಸುರಕ್ಷೆಯ ಕ್ರಮಗಳನ್ನು ಒದಗಿಸಲು ಹೊಣೆಗಾರಿಕೆ.– **(1)** ಕಾರ್ಯ ಸಂಸ್ಥೆಯೊಂದನ್ನು ನಡೆಸುತ್ತಿರುವ ಪ್ರತಿಯೊಬ್ಬ ಮಾಲೀಕ ಅಥವಾ ವ್ಯವಸ್ಥಾಪಕ ಅಥವಾ ವ್ಯಕ್ತಿ ಅಥವಾ ವ್ಯಕ್ತಿಗಳು, ತಮ್ಮ ಸಂಸ್ಥೆಯನ್ನು ಸಂದರ್ಶಿಸುವ ಸಾರ್ವಜನಿಕರ ಸುರಕ್ಷೆ ಮತ್ತು ಭದ್ರತೆಯನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಸಾರ್ವಜನಿಕ ಸುರಕ್ಷೆಯ ಕ್ರಮಗಳನ್ನು ಒದಗಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(2) ಕಾರ್ಯ ಸಂಸ್ಥೆಯೊಂದನ್ನು ನಡೆಸುತ್ತಿರುವ ಪ್ರತಿಯೊಬ್ಬ ಮಾಲೀಕ ಅಥವಾ ವ್ಯವಸ್ಥಾಪಕ ಅಥವಾ ವ್ಯಕ್ತಿ ಅಥವಾ ವ್ಯಕ್ತಿಗಳು, ಮೂವತ್ತು ದಿನಗಳ ಅಥವಾ ಸರ್ಕಾರವು ಅಧಿಸೂಚಿಸಿದ ಅವಧಿಗಾಗಿ ವಿಡಿಯೋ ಫೂಟೇಜ್ (video footage) ಅನ್ನು ಕ್ರಮಬದ್ಧವಾಗಿ ಉಳಿಸತಕ್ಕದ್ದು ಅಥವಾ ಸಂಗ್ರಹಿಸತಕ್ಕದ್ದು ಮತ್ತು ಪ್ರದೇಶದ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಪೊಲೀಸ್ ನಿರೀಕ್ಷಕನು ಅಥವಾ ಸರ್ಕಾರವು ಅಧಿಸೂಚಿಸಬಹುದಾದ ಯಾವೊಬ್ಬ ಇತರ ಪ್ರಾಧಿಕಾರಿಯು ಅಗತ್ಯಪಡಿಸಿದಾಗಲೆಲ್ಲಾ ಅದನ್ನು ಒದಗಿಸತಕ್ಕದ್ದು.

4. ನಿಯತಕಾಲಿಕ ವಿವರಪಟ್ಟಿಕೆಗಳನ್ನು ದಾಖಲು ಮಾಡುವ ಹೊಣೆಗಾರಿಕೆ.– **(1)** ಕಾರ್ಯ ಸಂಸ್ಥೆಯೊಂದನ್ನು ನಡೆಸುತ್ತಿರುವ ಪ್ರತಿಯೊಬ್ಬ ಮಾಲೀಕ ಅಥವಾ ವ್ಯವಸ್ಥಾಪಕ ಅಥವಾ ವ್ಯಕ್ತಿ ಅಥವಾ ವ್ಯಕ್ತಿಗಳು, ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಸಂಬಂಧಪಟ್ಟ ಪೊಲೀಸ್ ನಿರೀಕ್ಷಕನಿಗೆ, ಪ್ರತಿ ಮೂರು ತಿಂಗಳಿಗೊಮ್ಮೆ, ಸಾರ್ವಜನಿಕ ಸುರಕ್ಷಾ ಕ್ರಮಗಳನ್ನು ಒದಗಿಸಲಾಗಿದೆ, ಕ್ರಮಬದ್ಧವಾಗಿ ನಿರ್ವಹಿಸಲಾಗಿದೆ ಮತ್ತು ಸಂಬಂಧಪಟ್ಟ ಸಲಕರಣೆಗಳು ಸುಸ್ಥಿತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ ಎಂದು ಪ್ರಮಾಣೀಕರಿಸುವ ನಿಯತಕಾಲಿಕ ವಿವರಪಟ್ಟಿಕೆಗಳನ್ನು, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಅಂಥ ನಮೂನೆಯಲ್ಲಿ ದಾಖಲು ಮಾಡತಕ್ಕದ್ದು. ನಿಯತಕಾಲಿಕ ವಿವರಪಟ್ಟಿಕೆಗಳನ್ನು ದಾಖಲು

ಮಾಡಲು ವಿಫಲರಾಗುವ ಅಂಥವರು ಮೊದಲ ಸಲಕ್ಕೆ ಎರಡು ಸಾವಿರ ರೂಪಾಯಿಗಳ ಮತ್ತು ತದನಂತರದ ಪ್ರಸಂಗಗಳಿಗೆ ನಾಲ್ಕು ಸಾವಿರ ರೂಪಾಯಿಗಳ ಜುಲ್ಮಾನೆಯನ್ನು ಪಾವತಿಸಲು ಹೊಣೆಗಾರರಾಗತಕ್ಕದ್ದು.

(2) ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಕಾರ್ಯ ಸಂಸ್ಥೆಯೊಂದನ್ನು ನಡೆಸುತ್ತಿರುವ ಪ್ರತಿಯೊಬ್ಬ ಮಾಲೀಕ ಅಥವಾ ವ್ಯವಸ್ಥಾಪಕ ಅಥವಾ ವ್ಯಕ್ತಿ ಅಥವಾ ವ್ಯಕ್ತಿಗಳು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಅಥವಾ ಪರವಾನಗಿಯ ನವೀಕರಣದ ಮುಂದಿನ ದಿನಾಂಕಕ್ಕಿಂತ ಮೊದಲು, ಇವೆರಡರಲ್ಲಿ ಯಾವುದು ಮೊದಲೋ, ಅಂದಿನಿಂದ ಮೂರು ತಿಂಗಳುಗಳ ಅವಧಿಯೊಳಗೆ ಸಾರ್ವಜನಿಕ ಸುರಕ್ಷಾ ಕ್ರಮಗಳನ್ನು ಕಾರ್ಯರೂಪಕ್ಕೆ ತರತಕ್ಕದ್ದು.

5. ಆವರಣಗಳನ್ನು ಪರಿಶೀಲಿಸಲು ಪೊಲೀಸ್ ನಿರೀಕ್ಷಕನ ಅಧಿಕಾರಗಳು.– ನಿಯಮಗಳಲ್ಲಿ ನಿರ್ದಿಷ್ಟ ಪಡಿಸಲಾದಂತೆ, ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಪೊಲೀಸ್ ನಿರೀಕ್ಷಕನು, ಯಾವುದೇ ಸಮಯದಲ್ಲಿ, ಪೂರ್ವ ಸೂಚನೆಯಿಲ್ಲದೇ, ಯಾವುದೇ ಸಂಸ್ಥೆಯನ್ನು ಪ್ರವೇಶಿಸಿ, ಸಾರ್ವಜನಿಕ ಸುರಕ್ಷಾ ಕ್ರಮಗಳ ಅಳವಡಿಸುವಿಕೆ ಮತ್ತು ಕಾರ್ಯನಿರ್ವಹಣೆಯ ಕುರಿತು ಪರಿಶೀಲಿಸಬಹುದು ಮತ್ತು ತಪಾಸಣೆ ಮಾಡಬಹುದು ಹಾಗೂ ಯಾವುದೇ ಕರ್ತವ್ಯಲೋಪ ಅಥವಾ ಉಲ್ಲಂಘನೆಯ ಸಂದರ್ಭದಲ್ಲಿ, ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿ ಹೊಂದಿರುವ ಸಹಾಯಕ ಪೊಲೀಸ್ ಆಯುಕ್ತ (ಎಸಿಪಿ) ಅಥವಾ ಸಂದರ್ಭಾನುಸಾರವಾಗಿ ಸಂಬಂಧಪಟ್ಟ ಉಪ–ವಿಭಾಗೀಯ ಪೊಲೀಸ್ ಅಧಿಕಾರಿ (ಎಸ್‌ಡಿಪಿಒ) ಇವರಿಗೆ ವರದಿಯನ್ನು ಕಳುಹಿಸತಕ್ಕದ್ದು.

6. ಸಾರ್ವಜನಿಕ ಸುರಕ್ಷಾ ಕ್ರಮಗಳನ್ನು ಒದಗಿಸಲು ತಪ್ಪುವುದು.– **(1)** ಸಂಬಂಧಪಟ್ಟ ಪ್ರದೇಶದ ಸಹಾಯಕ ಪೊಲೀಸ್ ಆಯುಕ್ತ ಅಥವಾ ಸಂದರ್ಭಾನುಸಾರವಾಗಿ ಉಪ–ವಿಭಾಗೀಯ ಪೊಲೀಸ್ ಅಧಿಕಾರಿಯು (ಎಸ್‌ಡಿಪಿಒ), 5ನೇ ಪ್ರಕರಣದ ಅಡಿಯಲ್ಲಿ ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿ ಹೊಂದಿರುವ ಸಂಬಂಧಪಟ್ಟ ಪೊಲೀಸ್ ನಿರೀಕ್ಷಕನಿಂದ ವರದಿಯನ್ನು ಸ್ವೀಕರಿಸಿದ ಮೇಲೆ, ಪಾಲನೆ ಮಾಡದಿರುವ ಸಂದರ್ಭದಲ್ಲಿ ಪಾಲನೆ ಮಾಡದಿರುವ ಸಂದರ್ಭದಲ್ಲಿ ಅಂಥ ಸಂಸ್ಥೆಯನ್ನು ನಡೆಸುತ್ತಿರುವ ಮಾಲೀಕ ಅಥವಾ ವ್ಯವಸ್ಥಾಪಕ ಅಥವಾ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ, ಅನುಪಾಲನೆಗಾಗಿ ಹದಿನೈದು ದಿನಗಳ ಸಮಯವನ್ನು ನೀಡಿ, ಕಾರಣ ಕೇಳುವ ನೋಟೀಸನ್ನು ನೀಡತಕ್ಕದ್ದು.

(2) ಅಂಥ ಯಾವುದೇ ಕಾರ್ಯಸಂಸ್ಥೆಯನ್ನು ನಡೆಸುತ್ತಿರುವ ಒಬ್ಬ ಮಾಲೀಕ ಅಥವಾ ವ್ಯವಸ್ಥಾಪಕ ಅಥವಾ ವ್ಯಕ್ತಿ ಅಥವಾ ವ್ಯಕ್ತಿಗಳು, (1)ನೇ ಉಪಪ್ರಕರಣದ ಅಡಿಯಲ್ಲಿ ನೀಡಲಾದ ಕಾರಣ ಕೇಳುವ ನೋಟೀಸನ್ನು ಸ್ವೀಕರಿಸಿದ ಮೇಲೆ, ನೋಟೀಸಿನ ನಿರ್ದೇಶನಗಳನ್ನು ಪಾಲಿಸಲು ತಪ್ಪಿದಲ್ಲಿ, ಸಂಬಂಧಪಟ್ಟ ಸಹಾಯಕ ಪೊಲೀಸ್ ಆಯುಕ್ತ (ಎಸಿಪಿ) ಅಥವಾ ಸಂದರ್ಭಾನುಸಾರವಾಗಿ, ಉಪ–ವಿಭಾಗೀಯ ಪೊಲೀಸ್ ಅಧಿಕಾರಿಯು (ಎಸ್‌ಡಿಪಿಒ), ಅಂಥ ಸಂಸ್ಥೆಯನ್ನು ನಡೆಸುತ್ತಿರುವ ಮಾಲೀಕ ಅಥವಾ ವ್ಯವಸ್ಥಾಪಕ ಅಥವಾ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ,–

(i) ಕರ್ತವ್ಯಲೋಪದ ಮೊದಲ ತಿಂಗಳಿಗಾಗಿ–ರೂ.5000/–ಗಳ

(ii) ಕರ್ತವ್ಯಲೋಪದ ಎರಡನೇ ತಿಂಗಳಿಗಾಗಿ–ರೂ.10000/–ಗಳ,

– ರಾಜಿ ಮಾಡಿಕೊಳ್ಳುವ ಶುಲ್ಕವನ್ನು (compounding fee) ವಿಧಿಸಬಹುದು.

(3) ಅಂಥ ಯಾವುದೇ ಕಾರ್ಯಸಂಸ್ಥೆಯನ್ನು ನಡೆಸುತ್ತಿರುವ ಮಾಲೀಕ ಅಥವಾ ವ್ಯವಸ್ಥಾಪಕ ಅಥವಾ ವ್ಯಕ್ತಿ ಅಥವಾ ವ್ಯಕ್ತಿಗಳು ಒಂದು ತಿಂಗಳ ಅವಧಿಯೊಳಗಾಗಿ ನಿರ್ದೇಶನಗಳನ್ನು ಪಾಲಿಸುವಲ್ಲಿ ವಿಫಲರಾದ ಯಾವುದೇ ಸಂದರ್ಭದಲ್ಲಿ, ನಿಯಮಗಳಲ್ಲಿ ನಿರ್ದಿಷ್ಟಪಡಿಸಲಾದ ಮೇಲ್ವಿಚಾರಣಾ ಸಮಿತಿಯು, ಅಂಥ ಯಾವುದೇ ಸಂಸ್ಥೆಯನ್ನು ನಡೆಸುತ್ತಿರುವ ಮಾಲೀಕ ಅಥವಾ ವ್ಯಕ್ತಿ ಅಥವಾ ವ್ಯಕ್ತಿಗಳು ನೀಡಿದ ವಿವರಣೆಯನ್ನು ಪರಿಶೀಲಿಸತಕ್ಕದ್ದು ಮತ್ತು ವಿವರಣೆಯು ತೃಪ್ತಿಕರವಾಗದೇ ಇದ್ದಲ್ಲಿ, ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಪೊಲೀಸ್ ನಿರೀಕ್ಷಕನು ಆವರಣವನ್ನು ತಾತ್ಕಾಲಿಕವಾಗಿ ಸೀಲು ಮಾಡಿ, ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿ ಹೊಂದಿರುವ ಸಹಾಯಕ ಪೊಲೀಸ್ ಆಯುಕ್ತ (ಎಸಿಪಿ) ಅಥವಾ ಸಂದರ್ಭಾನುಸಾರವಾಗಿ ಉಪ–ವಿಭಾಗೀಯ ಪೊಲೀಸ್ ಅಧಿಕಾರಿಯ (ಎಸ್‌ಡಿಪಿಒ) ಮೂಲಕ ಸಂಬಂಧಪಟ್ಟ ಪರವಾನಗಿ ಪ್ರಾಧಿಕಾರಕ್ಕೆ ವರದಿಯನ್ನು ಸಲ್ಲಿಸತಕ್ಕದ್ದು:

ಪರಂತು, ದತ್ತಿ ಇಲಾಖೆಗಳ ಧಾರ್ಮಿಕ ಸಂಸ್ಥೆಗಳು ಅಥವಾ ಯಾವುದೇ ಇತರ ಧಾರ್ಮಿಕ ಸ್ಥಳ ಮತ್ತು ಶೈಕ್ಷಣಿಕ ಸಂಸ್ಥೆಗಳನ್ನು ಸೀಲು ಮಾಡತಕ್ಕದ್ದಲ್ಲ.

(4) ಸಂಬಂಧಪಟ್ಟ, ಪರವಾನಗಿ ಪ್ರಾಧಿಕಾರವು, (3)ನೇ ಉಪಪ್ರಕರಣದ ಅಡಿಯಲ್ಲಿನ ಅಂಥ ವರದಿಯನ್ನು ಸ್ವೀಕರಿಸಿದ ಮೇಲೆ, ಅಂಥ ಸಂಸ್ಥೆಯನ್ನು ನಡೆಸುತ್ತಿರುವ ಮಾಲೀಕ ಅಥವಾ ವ್ಯವಸ್ಥಾಪಕ ಅಥವಾ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಕಾರಣ ಕೇಳುವ ನೋಟೀಸನ್ನು ನೀಡಿ ಪರವಾನಗಿಯನ್ನು ರದ್ದುಪಡಿಸತಕ್ಕದ್ದು.

7. ಅಪೀಲುಗಳು.– **(1)** ಈ ಅಧಿನಿಯಮದ ಅಡಿಯಲ್ಲಿ ಸಹಾಯಕ ಪೊಲೀಸ್ ಆಯುಕ್ತ ಅಥವಾ ಉಪ–ವಿಭಾಗೀಯ ಪೊಲೀಸ್ ಅಧಿಕಾರಿಯು ಮಾಡಿದ ಆದೇಶ ಅಥವಾ ಯಾವುದೇ ಕ್ರಮದಿಂದಾಗಿ ಬಾಧಿತನಾದ ಯಾವೊಬ್ಬ ವ್ಯಕ್ತಿ ಅಥವಾ ಕಾರ್ಯಸಂಸ್ಥೆಯು, ಆದೇಶದ ಅಥವಾ ಕ್ರಮದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ

ಅಧಿಕಾರವ್ಯಾಪ್ತಿಯುಳ್ಳ ಉಪ ಪೊಲೀಸ್ ಆಯುಕ್ತನಿಗೆ ಅಥವಾ ಸಂದರ್ಭಾನುಸಾರವಾಗಿ ಪೊಲೀಸ್ ಅಧೀಕ್ಷಕನಿಗೆ ಅಪೀಲನ್ನು ಸಲ್ಲಿಸಬಹುದು. ಉಪ ಪೊಲೀಸ್ ಆಯುಕ್ತನು ಅಥವಾ ಸಂದರ್ಭಾನುಸಾರವಾಗಿ ಪೊಲೀಸ್ ಅಧೀಕ್ಷಕನು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಅಹವಾಲನ್ನು ಆಲಿಸಿ ಅಪೀಲನ್ನು ವಿಲೆ ಮಾಡತಕ್ಕದ್ದು.

(2) ಉಪ ಪೊಲೀಸ್ ಆಯುಕ್ತನ ಅಥವಾ ಪೋಲೀಸ್ ಅಧೀಕ್ಷಕನ ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿ ಅಥವಾ ಕಾರ್ಯಸಂಸ್ಥೆಯು, ಅಂಥ ಆದೇಶದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ, ಪೊಲೀಸ್ ಆಯುಕ್ತನಿಗೆ ಅಥವಾ ಸಂದರ್ಭಾನುಸಾರ ಪೋಲೀಸ್ ಮಹಾನಿರೀಕ್ಷಕನಿಗೆ ಎರಡನೇ ಅಪೀಲನ್ನು ಸಲ್ಲಿಸಬಹುದು, ಮತ್ತು ಎಲ್ಲಾ ಪ್ರಕರಣಗಳಲ್ಲಿ ಪೊಲೀಸ್ ಆಯುಕ್ತನ ಅಥವಾ ಪೋಲೀಸ್ ಮಹಾನಿರೀಕ್ಷನ ಆದೇಶವು ಅಂತಿಮವಾಗಿರತಕ್ಕದ್ದು. ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಅಂಥ ಅರ್ಜಿಗಳನ್ನು ಪೊಲೀಸ್ ಆಯುಕ್ತನು ಅಥವಾ ಪೋಲೀಸ್ ಮಹಾನಿರೀಕ್ಷಕನು ವಿಲೆ ಮಾಡತಕ್ಕದ್ದು.

8. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.– ಈ ಅಧಿನಿಯಮದ ಅಥವಾ ಅದರಡಿಯಲ್ಲಿ ಮಾಡಲಾದ ಯಾವುದೇ ನಿಯಮ ಅಥವಾ ಆದೇಶದ ಅಡಿಯಲ್ಲಿ, ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಯಾವುದೇ ಕೃತ್ಯಕ್ಕಾಗಿ, ಯಾವೊಬ್ಬ ಪ್ರಾಧಿಕಾರಿ ಅಥವಾ ಅಧಿಕಾರಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರೆ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

9. ಉಳಿಸುವಿಕೆಗಳು.– ಈ ಅಧಿನಿಯಮದ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳಿಗೆ ಹೆಚ್ಚುವರಿಯಾಗಿರತಕ್ಕದ್ದೇ ಹೊರತು ಅದಕ್ಕೆ ಬಾಧಕವನ್ನುಂಟುಮಾಡುವಂತಿರತಕ್ಕದಲ್ಲ. ಈ ಅಧಿನಿಯಮದಲ್ಲಿರುವುದಾವುದೂ, ಈ ಅಧಿನಿಯಮದ ಹೊರತಾಗಿ ಯಾವೊಬ್ಬ ವ್ಯಕ್ತಿಯ ವಿರುದ್ಧ ಪ್ರಾರಂಭಿಸಬೇಕಾಗಿರುವ ಅಥವಾ ಮಾಡಬೇಕಾಗಿರುವ ಯಾವುದೇ ವ್ಯವಹರಣೆಗಳಿಂದ (ತನಿಖೆಯ ಮೂಲಕವಾಗಿರಲಿ ಅಥವಾ ಅನ್ಯಥಾ ಆಗಿರಲಿ) ಆತನನ್ನು ವಿನಾಯಿತಿಗೊಳಿಸತಕ್ಕದ್ದಲ್ಲ.

10. ನಿಯಮಗಳ ರಚನಾಧಿಕಾರ.– (1) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಸರ್ಕಾರವು, ಅಧಿಸೂಚನೆಯ ಮೂಲಕ, ಪೂರ್ವ ಪ್ರಕಟಣೆಯ ತರುವಾಯ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚಿನ ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಹದಿನಾಲ್ಕು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನಗಳ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನದ ಮುಕ್ತಾಯಕ್ಕೆ ಮೊದಲು ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಉಭಯ ಸದನಗಳೂ ಒಪ್ಪಿದರೆ ಆ ನಿಯಮದ ಆ ಮಾರ್ಪಾಟು ಅಥವಾ ರದ್ದತಿಯು ಅಧಿಸೂಚಿಸಿದ ದಿನಾಂಕದಿಂದ ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಸಂದರ್ಭಾನುಸಾರವಾಗಿ ಯಾವುದೇ ಪರಿಣಾಮ ಹೊಂದಿರತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದತಿಯು ಆ ನಿಯಮದ ಅಡಿಯಲ್ಲಿ ಹಿಂದೆ ಮಾಡಿದ ಯಾವುದೇ ಕೃತ್ಯದ ಮಾನ್ಯತೆಗೆ ಬಾಧಕವಾಗತಕ್ಕದ್ದಲ್ಲ.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಸಾರ್ವಜನಿಕ ಸುರಕ್ಷೆಯ (ಕ್ರಮಗಳ) ಜಾರಿ ವಿಧೇಯಕ, 2017 ರ ಉದ್ದೇಶಗಳು ಈ ಮುಂದಿನಂತಿವೆ:

(i) ಕಳ್ಳತನವನ್ನು ಒಳಗೊಂಡು ಸಾರ್ವಜನಿಕ ಭದ್ರತೆ ಮತ್ತು ಸಾರ್ವಜನಿಕ ಸುವ್ಯವಸ್ಥೆಯ ಸಲುವಾಗಿ ಅಪರಾಧಗಳ ತಡೆ, ಪತ್ತೆ ಮತ್ತು ಕಂಡುಹಿಡಿಯುವ ಹಾಗೂ ವ್ಯಕ್ತಿಗಳ ದೃಶ್ಯದಾಖಲೆಯನ್ನು ನಿರ್ವಹಿಸುವ ಸಾರ್ವಜನಿಕ ನಿಗಾ ವ್ಯವಸ್ಥೆಯೊಳಗೆ ಪೋಲೀಸ್ ಇಲಾಖೆಯು ಪ್ರವೇಶ ಮಾಡಲು ಇರುವ ಅವಶ್ಯಕತೆಯನ್ನು ಸಾಧ್ಯಗೊಳಿಸುವುದು;

(ii) ಭಯೋತ್ಪಾದಕ ದಾಳಿಯನ್ನು ಒಳಗೊಂಡು ಭದ್ರತೆಯ ಆತಂಕಗಳ ವಿರುದ್ಧ ಸುರಕ್ಷತೆಯನ್ನು ನೀಡಲು ಪ್ರತಿಬಂಧಾತ್ಮಕ ಕಾನೂನು ವ್ಯವಸ್ಥೆಯನ್ನು ಸುಧಾರಣೆಗೊಳಿಸುವುದು;

(iii) ಅಪರಾಧ ಪ್ರಮಾಣಗಳನ್ನು, ಭಯೋತ್ಪಾದನೆ, ಕಾನೂನು ಬಾಹಿರ ಚಟುವಟಿಕೆಗಳನ್ನು ನಿರ್ಬಂಧಿಸುವುದು ಹಾಗೂ ಸಾರ್ವಜನಿಕರಿಗೆ ಸುರಕ್ಷಿತ ಮತ್ತು ಸುಭದ್ರ ವಾತಾವರಣವನ್ನು ಸುನಿಶ್ಚಿತಗೊಳಿಸುವ ಮೂಲಕ ವಿವಿಧ ಅಪರಾಧಗಳ ತನಿಖೆ, ಅಭಿಯೋಜನೆ ಹಾಗೂ ವಿಚಾರಣೆಗಳಿಗೆ ನೆರವು ನೀಡುವುದು;

ಆದುದರಿಂದ,–

ಆದುದರಿಂದ,

(i) ರಾಜ್ಯದಲ್ಲಿನ ವಾಣಿಜ್ಯ ಕಾರ್ಯಸಂಸ್ಥೆಗಳು, ಕೈಗಾರಿಕಾ ಕಾರ್ಯಸಂಸ್ಥೆಗಳು, ಧಾರ್ಮಿಕ ಸ್ಥಳಗಳು, ಶೈಕ್ಷಣಿಕ ಸಂಸ್ಥೆಗಳು, ಆಸ್ಪತ್ರೆಗಳು, ಕ್ರೀಡಾ ಸಂಕೀರ್ಣಗಳು, ರೈಲ್ವೆ ನಿಲ್ದಾಣಗಳು, ಬಸ್ ನಿಲ್ದಾಣಗಳು, ಸಂಘಟಿತ ಧಾರ್ಮಿಕ ಕೂಟಗಳು ಸೇರುವ ಸ್ಥಳಗಳಂತಹ ಕಾರ್ಯಸಂಸ್ಥೆಗಳಲ್ಲಿ ಹಾಗೂ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಕಾರ್ಯಸಂಸ್ಥೆಗಳಲ್ಲಿ ಸಾರ್ವಜನಿಕ ಸುರಕ್ಷೆಯ ಕ್ರಮಗಳಿಗೆ;

(ii) ಕಾರ್ಯಸಂಸ್ಥೆಗಳ ಮಾಲೀಕರು ತಮ್ಮ ಸ್ವಂತ ವೆಚ್ಚದಲ್ಲಿ ಸಿಸಿಟಿವಿಗಳಂಥ ಸಾರ್ವಜನಿಕ ನಿಗಾ ವ್ಯವಸ್ಥೆಗಳನ್ನ ಅಳವಡಿಸಿಕೊಳ್ಳಲು ಮತ್ತು ನಿರ್ದಿಷ್ಟ ಅಪರಾಧಗಳ ತನಿಖೆಯಲ್ಲಿ ಅಗತ್ಯವಿದ್ದಾಗಲೆಲ್ಲಾ ನಿಯೋಜಿತ ಪೋಲೀಸ್ ಅಧಿಕಾರಿಗಳಿಗೆ 30 ದಿನಗಳವರೆಗೆ ದೃಶ್ಯ ದಾಖಲೆಗಳು ಲಭ್ಯವಾಗುವಂತೆ ಮಾಡುವುದಕ್ಕೆ ಉಪಬಂಧ ಕಲ್ಪಿಸಲು;

(iii) ಅಧಿಸೂಚಿತ ಕಾರ್ಯಸಂಸ್ಥೆಯಲ್ಲಿನ ವಿಡಿಯೋ ಫೂಟೇಜ್‌ನ ಅಳವಡಿಕೆ ಮತ್ತು ಸೂಕ್ತ ನಿರ್ವಹಣೆಗಾಗಿ ಹೊಣೆಗಾರರನ್ನಾಗಿಸಲು;

(iv) ಸಾರ್ವಜನಿಕ ನಿಗಾ ವ್ಯವಸ್ಥೆಯ ಅಳವಡಿಕೆಯಲ್ಲಿ ವಿಫಲವಾಗುವ ಅಧಿಸೂಚಿತ ಕಾರ್ಯಸಂಸ್ಥೆಗಳಿದ್ದರೆ ಅವುಗಳಿಗೆ ದಂಡದ ಉಪಬಂಧಗಳಿಗೆ

ಹಾಗೂ ಅದಕ್ಕೆ ಸಂಬಂಧಿಸಿದ ಮತ್ತು ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಪ್ರತ್ಯಾಯೋಜಿತ ಶಾಸನ ರಚನಾಧಿಕಾರ ಕುರಿತು ಜ್ಞಾಪನಪತ್ರ

ಖಂಡ 4:	(1)ನೇ ಉಪಖಂಡವು ಕಾರ್ಯಸಂಸ್ಥೆಯೊಂದನ್ನು ನಡೆಸುತ್ತಿರುವ ಮಾಲೀಕ ಅಥವಾ ವ್ಯವಸ್ಥಾಪಕ ಅಥವಾ ವ್ಯಕ್ತಿಗಳು ನಿಯತಕಾಲಿಕ ವಿವರಪಟ್ಟಿಕೆಗಳನ್ನು ದಾಖಲು ಮಾಡುವ ವಿಧಾನ ಮತ್ತು ನಮೂನೆಯ ಕುರಿತಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.
ಖಂಡ 5:	ಪೊಲೀಸ್ ನಿರೀಕ್ಷಕನು ಪರಿಶೀಲನೆ ಮಾಡಬೇಕಾದ ಆವರಣಗಳ ಅಧಿಕಾರವ್ಯಾಪ್ತಿಯನ್ನು ನಿರ್ದಿಷ್ಟಪಡಿಸುವ ಕುರಿತಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.
ಖಂಡ 7:	(i) (1)ನೇ ಉಪಖಂಡವು ಉಪ ಪೊಲೀಸ್ ಆಯುಕ್ತನು ಅಥವಾ ಸಂದರ್ಭಾನುಸಾರವಾಗಿ ಪೊಲೀಸ್ ಅಧೀಕ್ಷಕನು ಅಪೀಲನ್ನು ಆಲಿಸುವ ಮತ್ತು ವಿಲೇ ಮಾಡುವ ಕುರಿತಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. (ii) (2)ನೇ ಉಪಖಂಡವು ಪೊಲೀಸ್ ಆಯುಕ್ತನು ಅಥವಾ ಪೊಲೀಸ್ ಮಹಾನಿರೀಕ್ಷಕನು ಎರಡನೇ ಅಪೀಲನ್ನು ಮಾಡಿರುವ ವ್ಯಕ್ತಿಗಳ ಅರ್ಜಿಗಳನ್ನು ವಿಲೇ ಮಾಡುವ ವಿಧಾನದ ಕುರಿತಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.
ಖಂಡ 10:	ಈ ಅಧಿನಿಯಮದ ಯಾವುದೇ ಅಥವಾ ಎಲ್ಲಾ ಉದ್ದೇಶಗಳನ್ನು ಕಾರ್ಯಗತಗೊಳಿಸಲು ಪೂರ್ವ ಪ್ರಕಟಣೆಯ ತರುವಾಯ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

ಡಾ॥ ಜಿ. ಪರಮೇಶ್ವರ್
ಗೃಹ ಮಂತ್ರಿಗಳು

ಎಸ್. ಮೂರ್ತಿ
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY
FOURTEENTH LEGISLATIVE ASSEMBLY
FOURTEENTH SESSION

THE KARNATAKA PUBLIC SAFETY (MEASURES) ENFORCEMENT BILL, 2017
(L.A. Bill No. 36 of 2017)

A Bill to provide for the Public Safety Measures at the Establishments in the State.

Whereas it is expedient to provide for the Public Safety Measure at the Establishments in the State and for matters connected therewith or incidental thereto.

Be it enacted by the Karnataka State Legislature in the Sixty-eighth year of the Republic of India, as follows:-

1. Short title, extent and commencement.- (1) This Act may be called the Karnataka Public Safety (Measures) Enforcement Act, 2017.

(2) It extends to the whole areas of Bruhat Bengaluru Mahanagar Palike and other Corporations constituted under the Karnataka Municipal Corporations Act, 1976, and to such other areas and places as may be identified and notified by the State Government from time to time.

(3) It shall come into force on such date as the State Government may, by notification in the official Gazette, appoint.

2. Definitions.- In this Act unless the context otherwise requires,-

(a) **"Establishment"** means a place frequented by large number of people with a likelihood of public gathering of hundred people or more at a time or Five Hundred per day such as commercial establishments, industrial establishments, religious places, educational institutions, hospitals, sports complexes, railway stations, bus stations, places of organized congregations, such other establishments as the Government, may by notification declare to be an establishment for the purpose of this Act;

(b) **"Government"** means the state Government of Karnataka;

(c) **"License"** means a valid permission or license to build or run an establishment obtained under the Karnataka Municipal Corporations Act, 1976 or the Bangalore Cinemas (Regulation) Act, 1964 or the Karnataka Education Act, 1983 or any other Act or the rules made under the relevant Acts for this purpose;

(d) **The Licensing (sanctioning) Authority"** means an authority competent to issue license to build or run an establishment under the Karnataka Municipal Corporations Act, 1976 or the Karnataka Cinemas (Regulation) Act, 1964 or the Karnataka Education Act, 1983 or an authority competent to issue permission or license for running an establishment;

(e) **"Notification"** means a notification published by the Government in the Karnataka Gazette and the word notified shall be construed accordingly;

(f) **Prescribed"** means prescribed by the Government by rules made under this Act;

(g) **Public Safety Measures"** means Access Controls and Closed Circuit Television Surveillance at entry and exit points and common public places of the establishments and their parking areas as prescribed by the Government by installing;

(i) Access Controls through Physical and Technical means;

(ii) Surveillance through Closed circuit television surveillance cameras with a provision for storage of video footage for thirty days;

(iii) The technical equipment;adhering to the specifications notified by the Government; and

(iv) Any other technical equipment as notified by the Government from time to time to enhance public safety.

3. Liability to provide Public Safety Measures.- (1) Every owner or manager or person or the persons who are running an establishment shall, provide and maintain public safety measures so as to ensure safety and security of the public visiting their establishment; and

(2) Every owner or manager or person or the persons who are running an establishment shall save or store video footage properly for a period of thirty days or as notified by the Government and provide the same as and when required by an Inspector of Police having jurisdiction over the area or any other authority as may be notified by the Government.

4. Liability for filing periodical returns.- (1) Every owner or manager or person or the persons who are running an establishment shall file periodical returns in such manner and in such proforma as may be prescribed, certifying that the Public Safety Measures are provided, properly maintained and the relevant equipments are in working condition, once in every three months, to the concerned Inspector of Police having jurisdiction over the area. Those failing to file periodical returns are liable to pay a fine of rupees two thousand in the first instance and rupees four thousand from subsequent instance.

(2) Every owner or manager or person or the persons who are running an establishment as on the date of commencement of this Act, shall, implement public safety measures within a period of three months from the date of commencement of this Act or before the next date of renewal of license, whichever is earlier.

5. Powers of Inspectors of Police to inspect premises.- The Inspector of Police having jurisdiction over the area, as specified in the rules, may at any time, without prior notice, enter into any establishment, inspect and check as regards the installation and functioning of the public safety measures and in case of any default or violation shall send a report to the Assistant Commissioner of Police (ACP) or as the case may be the Sub Divisional Police Officer (SDPO) concerned having jurisdiction over the area.

6. Failure to provide Public Safety Measures.- (1) The Assistant Commissioner of Police (ACP) or as the case may be the Sub Divisional Police Officer (SDPO) of the area concerned shall, on receipt of report from the concerned Inspector of Police having jurisdiction over the area under section 5, in case of non compliance issue a show cause notice to the owner or manager or person or the persons who are running any such establishment, giving fifteen days time for compliance.

(2) An owner or manager or person or the persons who are running any such establishment, on receipt of show cause notice issued under sub-section (1), fails to comply with the directions of notice, the concerned Assistant Commissioner of Police (ACP) or as the case may be the Sub Divisional Police Officer (SDPO) may, levy a compounding fee on the owner or manager or person or the persons who are running such establishment,-

(i) for the first month of default - Rs. 5,000/-

(ii) for the second month of default - Rs. 10,000/-

(3) In case of any failure on the part of the owner or manager or person or the persons who are running any such establishment, to comply with the directions, within a period of one month supervisory committee as specified in the rules shall examine explanation of the owner or person or persons who are running any such establishment and if the explanation in not satisfactory, the Inspector of Police having jurisdiction over the area shall, seal the premises temporarily and send a report to licensing authority concerned, through the Assistant Commissioner of Police (ACP) or as the case may be the Sub Divisional Police Officer (SDPO) having jurisdiction over the area:

Provided that the religious institutions of Endowments Department or any other religious place and educational institutions shall not be sealed.

(4) The licensing authority concerned shall, on receipt of such report under sub-section (3), issue show cause notice to the owner/manager/ person or the persons who are running any such establishment and shall cancel license.

7.Appeals .- (1) Any person or establishment aggrieved by the order under or any of action of Assistant Commissioner of Police or sub-division police officer taken under this Act, may prefer an appeal to the jurisdictional Deputy Commissioner of Police or Superintendent of Police as the case may be within thirty days from the date of order or action. The Deputy Commissioner of Police or Superintendent of Police as the case may be shall hear and dispose the appeal in such manner as may be prescribed.

(2) Any person or establishment aggrieved by the order of the Deputy Commissioner of Police or Superintendent of Police; may prefer a second appeal to the Commissioner of Police or the Inspector General of Police of the range as the case may be, within thirty days from the date of such

order and in all cases order of the Commissioner of Police or the Inspector General of Police shall be final. The Commissioner of Police or the Inspector General of Police shall dispose such applications in such manner as may be prescribed.

8. **Protection of action taken in good faith.-** No suit, prosecution or legal proceedings shall lie against any authority or officer for anything done in good faith or intended to be done in pursuance of this Act or any rule or order made thereunder.

9. Savings.- The provisions of this Act shall be in addition to and not in derogation of provisions of any other law for the time being in force and nothing contained in this Act, shall exempt any person from any proceeding (whether by way of investigation or otherwise), which might apart from this Act, be instituted or taken against him.

10. Power to make rules.- (1) The Government may, by notification, after previous publication make rules for carrying out all or any of the purposes of this Act.

(2) Every rule made under this Act shall, immediately after it is made, be laid before the Legislature of the State, if it is in session and if it is not in session, in the session immediately following for a total period of fourteen days which may be comprised in one session or in two successive sessions and if, before the expiration of the session in which it is so laid or the session immediately following the Legislature of the State agrees in making any modification in the rule or in the annulment of the rule, the rule shall, from the date on which the modification or annulment is notified, have effect only in such modified form or shall stand annulled as the case may be, so however, that any such modification or annulment shall be without prejudice to the validity of anything previously done under that rule.

STATEMENT OF OBJECTS AND REASONS

The object of the Karnataka Public Safety (Measures) Enforcement Bill, 2017 is,-

(i) to enable the need of the Police Department to have access to a public surveillance system to maintain a visual record of individuals in order to prevent, track and detect crimes including thefts and public security and public order;

(ii) to improve preventive policing to safeguard against security threats including terrorist attacks;

(iii) to curb crime rates, terrorism, illegal activities, aid in investigation, prosecution and trial of various crimes by ensuring a safer and secured atmosphere to the public;

Therefore, it is considered necessary to provide for,-

(i) the Public Safety Measures at the Establishments in the State such as Commercial establishments, industrial establishments, religious places, educational institutions, hospitals, sports complexes, railway stations, bus stations, places of organised congregations and such other establishments as specified by the Government by notification;

(ii) installation of public surveillance system such as CCTVs by owners of establishments at their own cost and to provide for making available video recordings up to 30 days to the designated police authorities as and when required in the investigation of specific crimes;

(iii) the liability for installation and proper maintenance of video footage on the notified establishment;

(iv) penal provisions if notified establishments fails to install the public surveillance.

and matters connected therewith or incidental thereto.

Hence, the Bill.

FINANCIAL MEMORANDUM

There is no extra expenditure involved in the proposed legislative measure.

MEMORANDUM REGARDING DELEGATED LEGISLATION

Clause 4:		Sub-clause (1) empowers the State Government to make rules regarding the manner and proforma for filing periodical returns by the owner or manager or persons who are running an establishment.
Clause 5:		Empowers the State Government to make rules regarding the jurisdiction over the area may be specified for inspection of premises by the Inspectors of Police.
Clause 7:	(i)	Sub-clause (1) empowers the State Government to make rules regarding the manner of hearing and disposing of the Appeal by the Deputy Commissioner of Police or the Superintendent of Police as the case may be.
	(ii)	Sub-clause (2) empowers the State Government to make rules regarding the manner of disposal of applications of persons who preferred a second appeal to the Commissioner of Police or the Inspector General of Police as the case may be.
Clause 10:	Empowers the State Government to make rules by notification after previous publication to carry out any or all purposes of this Act.	

The proposed delegation of Legislative power is normal in character.

DR. G. PARAMESHWAR
Minister for Home

S. Murthy
Secretary (I/c)
Karnataka Legislative Assembly

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಕಿ7) ಪ್ರತಿಗಳು: 150

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–IVA	ಬೆಂಗಳೂರು, ಗುರುವಾರ, ಜೂನ್ ೨೨, ೨೦೧೭ (ಆಷಾಢ ೦೧, ಶಕ ವರ್ಷ ೧೯೩೯)	ನಂ. ೫೬೩
Part–IVA	**Bengaluru, Thursday, June 22, 2017 (Ashada 01, Shaka Varsha 1939)**	**No. 563**

ಕರ್ನಾಟಕ ವಿಧಾನ ಸಭೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕವಿಸಸ/880/ಶಾರಶಾ/2013–17, ಬೆಂಗಳೂರು, ದಿನಾಂಕ: 21–06–2017.

ಸೋಮವಾರ, ದಿನಾಂಕ 05ನೇ ಜೂನ್, 2017 ರಂದು ಪ್ರಾರಂಭವಾದ 14ನೇ ವಿಧಾನಸಭೆಯ ಹದಿನಾಲ್ಕನೇ ಅಧಿವೇಶವನ್ನು ಬುಧವಾರ, ದಿನಾಂಕ 21ನೇ ಜೂನ್, 2017 ರಂದು ಅನಿರ್ಧಿಷ್ಟ ಕಾಲದವರೆಗೆ ಮುಂದೂಡಲಾಯಿತು.

ಎಸ್. ಮೂರ್ತಿ
ಕಾರ್ಯದರ್ಶಿ(I/C)
ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY SECRETARIAT

NOTIFICATION

NO. KLAS/880/LGA/2013-17, Bengaluru, Dated: 21-06-2017

The Meeting of the Fourteenth Session of the Fourteenth Legislative Assembly, which commenced on Monday, the 05th June, 2017 is adjourned sine-die on Wednesday, the 21st June, 2017.

S.MURTHY
Secretary (I/c)
Karnataka Legislative Assembly

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: ೫೦

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–IVA	ಬೆಂಗಳೂರು, ಗುರುವಾರ, ಜೂನ್ ೨೨, ೨೦೧೭ (ಆಷಾಢ ೦೧, ಶಕ ವರ್ಷ ೧೯೩೯)	ನಂ. ೫೬೪
Part–IVA	**Bengaluru, Thursday, June 22, 2017 (Ashada 01, Shaka Varsha 1939)**	**No. 564**

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕವಿಪ/ಶಾರಶಾ/55/133ನೇಮು.ಅ/2017, ಬೆಂಗಳೂರು, ದಿನಾಂಕ: 21.06.2017.

05ನೇ ಜೂನ್, 2017ರ ಸೋಮವಾರದಂದು ಪ್ರಾರಂಭವಾದ ಕರ್ನಾಟಕ ವಿಧಾನ ಪರಿಷತ್ತಿನ ನೂರ ಮೂವತ್ತಮೂರನೇ ಅಧಿವೇಶನದ ಮುಂದುವರೆದ ಉಪವೇಶನವನ್ನು ದಿನಾಂಕ 21**ನೇ ಜೂನ್, 2017ರ** ಬುಧವಾರದಂದು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಯಿತು.

ಶ್ರೀನಿವಾಸ
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

KARNATAKA LEGISLATIVE COUNCIL SECRETARIAT

NOTIFICATION

NO. KLC/LGC/55/133rd A.S./SD/2017, BENGALURU, DATED: 21.06.2017.

The Hundred and Thirty Third Adjourned Session of Karnataka Legislative Council which had commenced on Monday, the **05th June, 2017** stands adjourned sine-die on **Wednesday**, the **21st June, 2017.**

SRINIVASA
Secretary
Karnataka Legislative Council

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: ೫೦

RNI No. KARBIL/2001/47147



ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–IVA	ಬೆಂಗಳೂರು, ಶನಿವಾರ, ಜೂನ್ ೨೪, ೨೦೧೭ (ಆಷಾಢ ೦೩, ಶಕ ವರ್ಷ ೧೯೩೯)	ನಂ. ೫೭೧
Part–IVA	Bengaluru, Saturday, June 24, 2017 (Ashada 03, Shaka Varsha 1939)	No. 571

FOOD, CIVIL SUPPLIES CONSUMER AFFAIRS AND LEGAL METROLOGY SECRETARIAT

NOTIFICATION

No: FCS 17 RPR 2011, Bengaluru, dated: 22.06.2017

In exercise of the powers conferred by sub-section (5) of section 24 of the National Food Security Act 2013 and Section 3 read with Section 5 of the Essential Commodities Act 1955 the Government of Karnataka has made the rules called the Karnataka Essential commodities Public Distribution (Control) order 2016 and amendment orders issued in vide notification No.FCS 17 RPR 2011 dated 20.05.2017 & 05.06.2017 the Government here by make the following order, further to amend the Karnataka Essential Commodities Public Distribution (Control) order 2016.

ORDER

1) Title and Commencement: (1) This order may be called the Karnataka Essential Commodities Public Distribution (Control) (Amendment) order 2017.

(2) It shall come into force from the date of its publication in the State official gazette.

2) Amendment of Rules-7:

In the Karnataka Essential Commodities Public Distribution (Control) order 2016 the following proviso in the Sub rule (1) of rule 7 is hereby withdrawn;

> "**Provided that the authorized authority shall not renew the authorizations of Fair price shops run by private individuals who have attained the age of 65 years and who do not possess minimum educational qualification of SSLC".**

By order and in the name of Governor of Karnataka,

ARCHANA M.S.
Under Secretary to Government
Food, Civil Supplies Consumer Affairs
and Legal Metrology Department

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: ೨೦೦

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–IVA	ಬೆಂಗಳೂರು, ಶನಿವಾರ, ಜೂನ್ ೨೪, ೨೦೧೭ (ಆಷಾಢ ೦೩, ಶಕ ವರ್ಷ ೧೯೩೯)	ನಂ. ೫೭೨
Part–IVA	**Bengaluru, Saturday, June 24, 2017 (Ashada 03, Shaka Varsha 1939)**	**No. 572**

FINANCE SECRETARIAT

NOTIFICATION-I

No: FD 10 CSL 2017, Bengaluru, dated: 24.06.2017

The draft of the following Rules, further to amend the Karnataka Value Added Tax Rules, 2005, which the Government of Karnataka proposes to make in exercise of the powers conferred by sub-section (1) of Section 88 of the Karnataka Value Added Tax Act, 2003 (Karnataka Act 32 of 2004) is hereby published as required by the said sub-section for the information of all persons likely to be affected thereby and notice is hereby given that the said draft will be taken into consideration after fifteen days from the date of its publication in the Official Gazette.

Any objections or suggestions, which may be received by the State Government from any person with respect to the said draft before the expiry of the period specified above, will be considered by the State Government. Objections or suggestions may be addressed to the Additional Chief Secretary to Government, Finance Department, Vidhana Soudha, Bengaluru – 560 001.

DRAFT RULES

1. Title and Commencement.- (1) These Rules may be called the Karnataka Value Added Tax (Amendment) Rules, 2017.

(2) They shall come into force from the date of their final publication in the Official Gazette.

2. Amendment of Rule 3.– In the Karnataka Value Added Tax Rules, 2005, in Rule 3, after Explanation-IV, the following shall be deemed to have been inserted with effect from 1st day of April 2005, namely:-

"Explanation – V - for the purpose of clause (h) of sub-rule (2) of Rule 3, all amounts collected by way of tax under the Act by a dealer shall not include all amounts collected by way of tax under Section 3-A of the Karnataka Tax on Entry of Goods Act, 1979."

By Order and in the name of the Governor of Karnataka,

K.S. Padmavathi
Under Secretary to Government,
Finance Department (C.T-1).

NOTIFICATION-II

NO. FD 10 CSL 2017, Bengaluru, dated: 24/06/2017

The draft of the following Rules, further to amend The Karnataka Sales Tax Rules, 1957, which the Government of Karnataka proposes to make in exercise of the powers conferred by sub-sections (1) and (2) of Section 38 of the Karnataka Sales Tax Act, 1957 (Karnataka Act No.25 of 1957) is hereby published as required by the said sub-sections for the information of all persons likely to be affected thereby and notice is hereby given that the said draft will be taken into consideration after fifteen days from the date of its publication in the Official Gazette.

Any objections or suggestions, which may be received by the State Government from any person with respect to the said draft before the expiry of the period specified above, will be considered by the State Government. Objections or suggestions may be addressed to the Additional Chief Secretary to Government, Finance Department, Vidhana Soudha, Bengaluru – 560 001.

DRAFT RULES

1. Title and Commencement.- (1) These Rules may be called The Karnataka Sales Tax (Amendment) Rules, 2017.

(2) They shall come into force from the date of their final publication in the Official Gazette.

2. Amendment of Rule 6.- In the Karnataka Sales Tax Rules, 1957, in Rule 6 after explanation-III, the following shall be deemed to have been inserted with effect from 1st day of April 1992, namely:-

"Explanation–IV - for the purpose of clause (h) of sub-rule (4) of Rule 6, all amounts collected by way of tax under the Act by **a** dealer shall not include all amounts collected by way of tax under Section 3-A of the Karnataka Tax on Entry of Goods Act, 1979."

By Order and in the name of the Governor of Karnataka,

K.S. Padmavathi
Under Secretary to Government,
Finance Department (C.T-1).

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಕಿ7) ಪ್ರತಿಗಳು: 100

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–IVA	ಬೆಂಗಳೂರು, ಶನಿವಾರ, ಜೂನ್ ೨೪, ೨೦೧೭ (ಆಷಾಢ ೦೩, ಶಕ ವರ್ಷ ೧೯೩೯)	ನಂ. ೫೭೩
Part–IVA	**Bengaluru, Saturday, June 24, 2017 (Ashada 03, Shaka Varsha 1939)**	**No. 573**

CABINET AFFAIRS AND PERSONNEL AND ADMINISTRATIVE REFORMS SECRETARIAT

NOTIFICATION

No. GS 64 GOB 2013, Bengaluru, Dated: 24th June, 2017

Sri Siddaramaiah, Chief Minister of Karnataka vide his letter No. PSCM/1189/2017 dated 23-06-2017 has forwarded the letter of resignation of Dr. G. Parameshwara, Minister for Home from the Council of Ministers with the recommendation for its acceptance.

I have accepted the recommendation of the Chief Minister and in exercise of the powers vested in me under Article 164(1) of the Constitution of India, **I, VAJUBHAI VALA, Governor of Karnataka,** hereby accept the resignation of Dr. G. Parameshwara, Minister for Home from the Council of Ministers, with immediate effect.

VAJUBHAI VALA
Governor of Karnataka

By order and in the name of the Governor of Karnataka

No. DCA 110 GAM 2013
Dated : 24th June, 2017

R.S. Shivakumar
Under Secretary to Government-II
D.P.A.R. (State Protocol)

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: ೩೦೦

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–IVA	ಬೆಂಗಳೂರು, ಮಂಗಳವಾರ, ಜೂನ್ ೨೭, ೨೦೧೭ (ಆಷಾಢ ೦೬, ಶಕ ವರ್ಷ ೧೯೩೯)	ನಂ. ೫೭೪
Part–IVA	Bengaluru, Tuesday, June 27, 2017 (Ashada 06, Shaka Varsha 1939)	No. 574

ಸಂಸದೀಯ ವ್ಯವಹಾರಗಳ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಂವ್ಯಶಾಇ 28 ಶಾಸನ 2017, ಬೆಂಗಳೂರು, ದಿನಾಂಕ: 27.06.2017

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ಕ್ಕೆ 2017ರ ಜೂನ್ ತಿಂಗಳ 27ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2017ರ ಕರ್ನಾಟಕ ಅಧಿನಿಯಮ ಸಂಖ್ಯೆ: 27 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

2017ರ ಕರ್ನಾಟಕ ಅಧಿನಿಯಮ ಸಂಖ್ಯೆ: 27

(2017ರ ಜೂನ್ 27ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017

(2017ರ ಜೂನ್ 27ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ರಾಜ್ಯದಿಂದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ರಾಜ್ಯದೊಳಗಿನ ಪೂರೈಕೆಯ ಮೇಲೆ ತೆರಿಗೆಯನ್ನು ವಿಧಿಸಲು ಮತ್ತು ಸಂಗ್ರಹಿಸಲು ಹಾಗೂ ಅದಕ್ಕೆ ಸಂಬಂಧಿಸಿದ ಮತ್ತು ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:–

ಅಧ್ಯಾಯ – I
ಪ್ರಾರಂಭಿಕ

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು ಸಮಗ್ರ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗುತ್ತದೆ.

(3) ಇದು ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು:

ಪರಂತು, ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ನಿಗದಿಪಡಿಸಬಹುದು ಮತ್ತು ಯಾವುದೇ ಉಪಬಂಧದಲ್ಲಿ ಈ ಅಧಿನಿಯಮದ ಪ್ರಾರಂಭದ ಯಾವುದೇ ಉಲ್ಲೇಖವನ್ನು ಆ ಉಪಬಂಧ ಜಾರಿಗೆ ಬಂದ ಉಲ್ಲೇಖವನ್ನಾಗಿ ಅರ್ಥೈಸತಕ್ಕದ್ದು.

2. ಪರಿಭಾಷೆಗಳು.– ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,– **(1) "ಕ್ರಮಾರ್ಹ ಕ್ಲೇಮು"** ಎಂದರೆ ಸ್ವತ್ತು ಹಸ್ತಾಂತರ ಅಧಿನಿಯಮ, 1882ರ (1882ರ ಕೇಂದ್ರ ಅಧಿನಿಯಮ 4) ಪ್ರಕರಣ 3 ರಲ್ಲಿ ಇದಕ್ಕೆ ನೀಡಲಾದ ಅರ್ಥವನ್ನೇ ಇಲ್ಲೂ ಹೊಂದಿರತಕ್ಕದ್ದು;

(2) "ಬಟವಾಡೆ ವಿಳಾಸ" ಎಂದರೆ, ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡನ್ನೂ ತಲುಪಿಸಲು ನೋಂದಾಯಿತ ವ್ಯಕ್ತಿಯು ನೀಡುವ ತೆರಿಗೆ ಬೆಲೆಪಟ್ಟಿಯಲ್ಲಿ (invoice) ನಮೂದಾದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡನ್ನು ಸ್ವೀಕರಿಸುವವನ ಬಟವಾಡೆ ವಿಳಾಸ;

(3) "ದಾಖಲೆಯಲ್ಲಿನ ವಿಳಾಸ" ಎಂದರೆ, ಪೂರೈಕೆದಾರನ ದಾಖಲೆಗಳಲ್ಲಿ ಲಭ್ಯವಿರುವಂತಹ ಸ್ವೀಕರಿಸುವವನ ವಿಳಾಸ;

(4) "ನ್ಯಾಯನಿರ್ಣಯ ಪ್ರಾಧಿಕಾರ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಆದೇಶ ಅಥವಾ ನಿರ್ಣಯವನ್ನು ಹೊರಡಿಸಲು ನೇಮಕವಾದ ಅಥವಾ ಪ್ರಾಧಿಕೃತವಾದ ಯಾವುದೇ ಪ್ರಾಧಿಕಾರ, ಆದರೆ ಈ ಪ್ರಾಧಿಕಾರವು ಆಯುಕ್ತರು, ಪುನರೀಕ್ಷಣಾ ಪ್ರಾಧಿಕಾರ, ಪೂರ್ವಭಾವಿ ನಿರ್ಣಯದ ಪ್ರಾಧಿಕಾರ, ಪೂರ್ವಭಾವಿ ನಿರ್ಣಯದ ಅಪೀಲು ಪ್ರಾಧಿಕಾರ, ಅಪೀಲು ಪ್ರಾಧಿಕಾರ ಮತ್ತು ಅಪೀಲು ನ್ಯಾಯಾಧಿಕರಣಗಳನ್ನು ಒಳಗೊಳ್ಳುವುದಿಲ್ಲ;

(5) "ಏಜೆಂಟ್" ಎಂದರೆ, ಮತ್ತೊಬ್ಬನ ಪರವಾಗಿ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆ ಅಥವಾ ಸ್ವೀಕೃತಿಯ ವ್ಯವಹಾರವನ್ನು ನಡೆಸುತ್ತಿರುವ, ಕಾರಕ (factor), ದಲ್ಲಾಳಿ, ಕಮೀಷನ್ ಏಜೆಂಟು, ಅರ್ಹತಿಯ, ಭರವಸೆ ಕೊಡುವ ಏಜೆಂಟು, ಹರಾಜುದಾರ ಅಥವಾ ಯಾವುದೇ ಇತರೆ ವಾಣಿಜ್ಯ ಏಜೆಂಟನ್ನು ಒಳಗೊಂಡಂತೆ, ಯಾವುದೇ ಹೆಸರಿನಿಂದ ಕರೆಯಲಾಗುವ ಒಬ್ಬ ವ್ಯಕ್ತಿ;

(6) "ಸಮಗ್ರ ವಹಿವಾಟು" ಎಂದರೆ, ಅಖಿಲ ಭಾರತ ವ್ಯಾಪ್ತಿಯ ಆಧಾರದಲ್ಲಿ ಲೆಕ್ಕಹಾಕಬೇಕಾದ, ಒಂದೇ ಶಾಶ್ವತ ಖಾತೆ ಸಂಖ್ಯೆ (ಪ್ಯಾನ್)ಯನ್ನು ಹೊಂದಿರುವ ಎಲ್ಲಾ ವ್ಯಕ್ತಿಗಳ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಎಲ್ಲಾ ತೆರಿಗೆದಾಯಕ ಪೂರೈಕೆಗಳ (ಒಬ್ಬ ವ್ಯಕ್ತಿಯಿಂದ ಹಿಮ್ಮುಖ ತೆರಿಗೆ ವಿಧಿಸುವಿಕೆಯ ಆಧಾರದಲ್ಲಿ ತೆರಿಗೆ ಸಂದಾಯ ಮಾಡಬೇಕಾದ ಒಳಮುಖ ಪೂರೈಕೆಗಳ ಮೌಲ್ಯವನ್ನು ಹೊರತುಪಡಿಸಿ), ತೆರಿಗೆ ವಿನಾಯಿತಿ ಪೂರೈಕೆಗಳ, ರಫ್ತುಗಳ ಮತ್ತು ಅಂತರರಾಜ್ಯ ಪೂರೈಕೆಗಳ ಒಟ್ಟು ಮೌಲ್ಯ ಮತ್ತು ಇದು ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಕೇಂದ್ರಾಡಳಿತ ಪ್ರದೇಶ ತೆರಿಗೆ ಮತ್ತು ಉಪಕರಗಳನ್ನು ಒಳಗೊಂಡಿರುವುದಿಲ್ಲ;

(7) "ಕೃಷಿಕ" ಎಂದರೆ,–

(ಎ) ಸ್ವಂತ ದುಡಿಮೆಯ ಮೂಲಕ, ಅಥವಾ

(ಬಿ) ಕುಟುಂಬದ ದುಡಿಮೆಯ ಮೂಲಕ, ಅಥವಾ

(ಸಿ) ನಗದು ಅಥವಾ ವಸ್ತುವಿನ ರೂಪದಲ್ಲಿ ಸಂದಾಯ ಮಾಡಬೇಕಾದ ಮಜೂರಿಗಾಗಿ ಕಾರ್ಯನಿರ್ವಹಿಸುವ ನೌಕರರ ಮೂಲಕ ಅಥವಾ ವೈಯಕ್ತಿಕ ಮೇಲ್ವಿಚಾರಣೆ ಅಥವಾ ಕುಟುಂಬದ ಯಾವೊಬ್ಬ ಸದಸ್ಯನ ಮೇಲ್ವಿಚಾರಣೆಯಲ್ಲಿ ಕೂಲಿಗೆ ನೇಮಿಸಿಕೊಳ್ಳಲಾದ ಕಾರ್ಮಿಕರ ಮೂಲಕ;

–ಭೂಮಿಯ ಸಾಗುವಳಿಯನ್ನು ಕೈಗೊಳ್ಳುವ ಒಬ್ಬ ವ್ಯಕ್ತಿ ಅಥವಾ ಒಂದು ಹಿಂದೂ ಅವಿಭಕ್ತ ಕುಟುಂಬ;

(8) "ಅಪೀಲು ಪ್ರಾಧಿಕಾರ" ಎಂದರೆ, ಪ್ರಕರಣ 107ರಲ್ಲಿ ಉಲ್ಲೇಖಿಸಿಲಾದ, ಮನವಿಗಳ ವಿಚಾರಣೆ ಮಾಡುವುದಕ್ಕಾಗಿ ನೇಮಕವಾದ ಅಥವಾ ಪ್ರಾಧಿಕೃತವಾದ ಒಂದು ಪ್ರಾಧಿಕಾರ;

(9) "ಅಪೀಲು ನ್ಯಾಯಾಧಿಕರಣ" ಎಂದರೆ, ಪ್ರಕರಣ 109ರಲ್ಲಿ ಅಡಿಯಲ್ಲಿ ಉಲ್ಲೇಖಿಸಲಾದ ಸರಕು ಮತ್ತು ಸೇವೆಗಳ ತೆರಿಗೆ ಅಪೀಲು ನ್ಯಾಯಾಧಿಕರಣ;

(10) "ಗೊತ್ತುಪಡಿಸಲಾದ ದಿನ" ಎಂದರೆ, ಈ ಅಧಿನಿಯಮದ ಉಪಬಂಧಗಳು ಜಾರಿಗೆ ಬರತಕ್ಕ ದಿನಾಂಕ;

(11) "ಕರನಿರ್ಧರಣೆ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ತೆರಿಗೆ ಬಾಧ್ಯತೆಯನ್ನು ನಿರ್ಧರಿಸುವುದು ಮತ್ತು ಇದು ಸ್ವಯಂ–ಕರನಿರ್ಧರಣೆ, ಮರು–ಕರನಿರ್ಧರಣೆ, ತಾತ್ಕಾಲಿಕ ಕರನಿರ್ಧರಣೆ, ಕ್ಷಿಪ್ರ ಕರನಿರ್ಧರಣೆ ಮತ್ತು ಅತ್ಯುತ್ತಮ ವಿವೇಚನಾ ಕರನಿರ್ಧರಣೆಯನ್ನು ಒಳಗೊಳ್ಳುತ್ತದೆ;

(12) "ಸಹವರ್ತಿ ಉದ್ಯಮ" ಎಂಬುದು ಆದಾಯ ತೆರಿಗೆ ಅಧಿನಿಯಮ, 1961ರ (1961ರ ಕೇಂದ್ರ ಅಧಿನಿಯಮ 43) ಪ್ರಕರಣ 92ಎ ಯಲ್ಲಿ ಇದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

(13) "ಲೆಕ್ಕಪರಿಶೋಧನೆ" ಎಂದರೆ, ಘೋಷಿಸಿದ ವಹಿವಾಟಿನ, ಸಂದಾಯ ಮಾಡಿದ ತೆರಿಗೆಗಳ, ಕ್ಲೇಮು ಮಾಡಿದ ಮರುಪಾವತಿಯ, ಮತ್ತು ಉಪಯೋಗಿಸಿದ ಹೂಡುವಳಿ ತೆರಿಗೆ ಜಮೆಯ ಸರಿಯಾಗಿರುವಿಕೆಯನ್ನು ಪರಿಶೀಲಿಸಲು ಹಾಗೂ ಈ ಅಧಿನಿಯಮದ ಉಪಬಂಧಗಳು ಅಥವಾ ಅವುಗಳಡಿಯಲ್ಲಿ ಮಾಡಲಾದ ನಿಯಮಗಳಿಗೆ ಸಂಬಂಧಿಸಿದಂತೆ ಆತನ ಅನುಪಾಲನೆಯನ್ನು ನಿರ್ಧರಿಸಲು, ಈ ಅಧಿನಿಯಮದ ಅಡಿಯಲ್ಲಿ ಅಥವಾ ಇದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರೆ ಯಾವುದೇ ಕಾನೂನಿನ ಅಡಿಯಲ್ಲಿ ನೋಂದಾಯಿತ ವ್ಯಕ್ತಿಯು ನಿರ್ವಹಿಸಿದ ಅಥವಾ ಒದಗಿಸಿದ ದಾಖಲೆಗಳ, ರಿಟರ್ನಗಳ ಮತ್ತು ಇತರೇ ದಸ್ತಾವೇಜುಗಳ ಪರೀಕ್ಷೆ;

(14) "ಪ್ರಾಧಿಕೃತ ಬ್ಯಾಂಕು" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆ ಅಥವಾ ಇತರೆ ಯಾವುದೇ ಮೊತ್ತಗಳನ್ನು ಸಂಗ್ರಹಿಸಲು ಕೇಂದ್ರ ಸರ್ಕಾರದಿಂದ ಪ್ರಾಧಿಕೃತಗೊಂಡ ಒಂದು ಬ್ಯಾಂಕು ಅಥವಾ ಒಂದು ಬ್ಯಾಂಕಿನ ಶಾಖೆ;

(15) "ಅಧಿಕೃತ ಪ್ರತಿನಿಧಿ" ಎಂದರೆ, ಪ್ರಕರಣ 116ರಲ್ಲಿ ಉಲ್ಲೇಖಿಸಲಾಗಿರುವ ಪ್ರತಿನಿಧಿ;

(16) "ಮಂಡಳಿ" ಎಂದರೆ, ಕೇಂದ್ರ ರಾಜಸ್ವ ಮಂಡಳಿಗಳ ಅಧಿನಿಯಮ 1963ರ (1963ರ ಕೇಂದ್ರ ಅಧಿನಿಯಮ 54) ಅಡಿಯಲ್ಲಿ ಸ್ಥಾಪಿತವಾದ ಕೇಂದ್ರ ಅಬಕಾರಿ ಮತ್ತು ಸೀಮಾಸುಂಕ ಮಂಡಳಿ;

(17) "ವ್ಯವಹಾರ" ವು ಈ ಕೆಳಗಿನವುಗಳನ್ನೂ ಒಳಗೊಂಡಿರುತ್ತವೆ,–

(ಎ) ಹಣಕಾಸಿನ ಲಾಭಕ್ಕಾಗಿ ಅಥವಾ ಲಾಭವಿಲ್ಲದ, ಯಾವುದೇ ವ್ಯಾಪಾರ, ವಾಣಿಜ್ಯ, ತಯಾರಿಕೆ, ವೃತ್ತಿ, ಕಸುಬು, ವ್ಯಾಪಾರ ಸಾಹಸ, ಬಾಜಿಕಟ್ಟುವಿಕೆ ಅಥವಾ ಅದೇ ರೀತಿಯ ಇತರೇ ಯಾವುದೇ ಚಟುವಟಿಕೆ;

(ಬಿ) ಉಪ–ಖಂಡ (ಎ)ನ ಚಟುವಟಿಕೆಗಳಿಗೆ ಸಂಬಂಧಿಸಿದ ಅಥವಾ ಪ್ರಾಸಂಗಿಕವಾದ ಅಥವಾ ಪೂರಕವಾದ ಯಾವುದೇ ಚಟುವಟಿಕೆ ಅಥವಾ ವ್ಯವಹಾರ;

(ಸಿ) ಪರಿಮಾಣ, ಆವರ್ತನ, ನಿರಂತರತೆ ಅಥವಾ ನಿಯತತೆ ಇರುವ ಅಥವಾ ಇಲ್ಲದಿರುವ ಉಪ–ಖಂಡ (ಎ) ದಲ್ಲಿ ಹೇಳಲಾದ ಚಟುವಟಿಕೆ ಅಥವಾ ವ್ಯವಹಾರದ ಸ್ವರೂಪದಲ್ಲಿನ ಯಾವುದೇ ಅಂಥ ಚಟುವಟಿಕೆ ಅಥವಾ ವ್ಯವಹಾರ;

(ಡಿ) ವ್ಯವಹಾರದ ಪ್ರಾರಂಭ ಅಥವಾ ಮುಕ್ತಾಯಗಳಿಗೆ ಸಂಬಂಧಿಸಿದ, ಬಂಡವಾಳ ಸರಕುಗಳನ್ನೂ ಒಳಗೊಂಡ ಸರಕುಗಳ ಮತ್ತು ಸೇವೆಗಳ ಪೂರೈಕೆ ಅಥವಾ ಸ್ವಾಧೀನ ಪಡಿಸಿಕೊಳ್ಳುವಿಕೆ;

(ಇ) ಒಂದು ಕ್ಲಬ್, ಸಂಘ, ಸೊಸೈಟಿ ಅಥವಾ ಅಂತಹ ಒಂದು ಸಂಸ್ಥೆ ತನ್ನ ಸದಸ್ಯರಿಗೆ (ವಂತಿಗೆ ಅಥವಾ ಇತರ ಯಾವುದೇ ಪ್ರತಿಫಲಕ್ಕಾಗಿ) ಒದಗಿಸಲಾದ ಸೌಲಭ್ಯಗಳು ಅಥವಾ ಸೌಕರ್ಯಗಳು;

(ಎಫ್) ಯಾವುದೇ ಆವರಣಕ್ಕೆ ಪ್ರತಿಫಲಕ್ಕಾಗಿ ವ್ಯಕ್ತಿಗಳಿಗೆ ನೀಡಲಾದ ಪ್ರವೇಶ;

(ಜಿ) ತನ್ನ ವ್ಯಾಪಾರದ, ವೃತ್ತಿಯ ಅಥವಾ ಕಸುಬಿನ ಪಥದಲ್ಲಿ ಅಥವಾ ಅಭಿವೃದ್ಧಿಯಲ್ಲಿ ಒಪ್ಪಿತಗೊಂಡ ಒಂದು ಹುದ್ದೆಯನ್ನು ಹಿಡಿದ ಒಬ್ಬ ವ್ಯಕ್ತಿಯು ಪೂರೈಕೆ ಮಾಡಿದ ಸೇವೆಗಳು;

(ಎಚ್) ಟೋಟಲೈಸೇಟರ್ ಮೂಲಕ ಅಥವಾ ಬುಕ್ ಮೇಕರನಿಗೆ ನೀಡಲಾದ ಪರವಾನಿಗೆಯ ಮೂಲಕ ಒಂದು ರೇಸ್ ಕ್ಲಬ್ಬು ಒದಗಿಸಿದ ಸೇವೆಗಳು; ಮತ್ತು

(ಐ) ಕೇಂದ್ರ ಸರ್ಕಾರ, ಒಂದು ರಾಜ್ಯ ಸರ್ಕಾರ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರ ಸಾರ್ವಜನಿಕ ಪ್ರಾಧಿಕಾರವಾಗಿ ಕಾರ್ಯ ನಿರ್ವಹಿಸುತ್ತಿರುವಾಗ ಕೈಗೊಳ್ಳಲಾದ ಯಾವುದೇ ಚಟುವಟಿಕೆ ಅಥವಾ ವ್ಯವಹಾರ;

(18) "ವ್ಯವಹಾರ ಶ್ರೇಣಿ" ಎಂದರೆ, ಒಂದು ಸರಕು ಅಥವಾ ಒಂದು ಸೇವೆ ಅಥವಾ ಸಂಬಂಧಿಸಿದ ಸರಕುಗಳ ಅಥವಾ ಸೇವೆಗಳ ಒಂದು ಸಮೂಹ, ಇವುಗಳ ಪೂರೈಕೆಯಲ್ಲಿ ತೊಡಗಿರುವ, ಪ್ರತ್ಯೇಕವಾಗಿ ಗುರುತಿಸಬಹುದಾದ ಉದ್ಯಮದ ಒಂದು ಘಟಕ ಮತ್ತು ಇದು ಇತರೆ ವ್ಯವಹಾರ **ಶ್ರೇಣಿ**ಗಳಿಂದ ಭಿನ್ನವಾದ ನಷ್ಟಸಂಭವನೀಯತೆ ಮತ್ತು ಪ್ರತಿಫಲಗಳನ್ನು ಹೊಂದಿರುತ್ತದೆ;

ವಿವರಣೆ: ಈ ಖಂಡದ ಸಲುವಾಗಿ ಸರಕುಗಳು ಅಥವಾ ಸೇವೆಗಳು ಪರಸ್ಪರ ಸಂಬಂಧಪಟ್ಟಿವೆಯೇ ಎಂಬುದನ್ನು ನಿರ್ಧರಿಸುವಲ್ಲಿ ಪರಿಗಣಿಸಬೇಕಾದ ಅಂಶಗಳಲ್ಲಿ ಈ ಕೆಳಗಿನವುಗಳನ್ನೂ ಒಳಗೊಂಡಿರುತ್ತವೆ,–

(ಎ) ಸರಕು ಅಥವಾ ಸೇವೆಗಳ ಸ್ವರೂಪ;

(ಬಿ) ಉತ್ಪಾದನಾ ಪ್ರಕ್ರಿಯೆಗಳ ಸ್ವರೂಪ;

(ಸಿ) ಸರಕು ಅಥವಾ ಸೇವೆಗಳ ಗ್ರಾಹಕರುಗಳ ಗುಂಪು ಅಥವಾ ವರ್ಗ;

(ಡಿ) ಸರಕುಗಳ ಹಂಚಿಕೆ ಅಥವಾ ಸೇವೆಗಳ ಪೂರೈಕೆಗೆ ಬಳಸುವ ವಿಧಾನಗಳು; ಮತ್ತು

(ಇ) ಬ್ಯಾಂಕ್ ವ್ಯವಹಾರ, ವಿಮೆ ಅಥವಾ ಸಾರ್ವಜನಿಕ ಸೌಲಭ್ಯಗಳನ್ನು ಒಳಗೊಂಡಂತೆ ನಿಯಂತ್ರಣಾ ಪರಿಸರದ (ಎಲ್ಲಿ ಅನ್ವಯವೋ ಅಲ್ಲಿ) ಸ್ವರೂಪ;

(19) "ಬಂಡವಾಳ ಸರಕುಗಳು" ಎಂದರೆ, ಹೂಡುವಳಿ ತೆರಿಗೆ ಜಮೆಯ ಕ್ಲೇಮು ಮಾಡಿದ ವ್ಯಕ್ತಿಯು ತನ್ನ ಲೆಕ್ಕಪುಸ್ತಕಗಳಲ್ಲಿ ಯಾವ ಸರಕುಗಳ ಮೌಲ್ಯವನ್ನು ಬಂಡವಾಳೀಕೃತಗೊಳಿಸಿರುತ್ತಾನೆಯೋ ಆ ಸರಕುಗಳು ಮತ್ತು ಆ ಸರಕುಗಳನ್ನು ಆ ವ್ಯವಹಾರದ ಪಥದಲ್ಲಿ ಅಥವಾ ಮುಂದುವರಿಕೆಯಲ್ಲಿ ಬಳಸಲಾಗಿರಬೇಕು ಅಥವಾ ಬಳಸಲು ಉದ್ದೇಶಿಸಲಾಗಿರಬೇಕು;

(20) "ಸಾಂದರ್ಭಿಕ ತೆರಿಗೆದಾಯಕ ವ್ಯಕ್ತಿ" ಎಂದರೆ ಪ್ರಧಾನ ಕರ್ತನಾಗಿಯಾಗಲೀ ಅಥವಾ ಏಜೆಂಟ್ ಆಗಿಯಾಗಲೀ ಅಥವಾ ಯಾವುದೇ ಇನ್ನಿತರ ಸಾಮರ್ಥ್ಯದಲ್ಲಿಯಾಗಲೀ, ತೆರಿಗೆದಾಯಕ ಕ್ಷೇತ್ರವ್ಯಾಪ್ತಿಯಲ್ಲಿ ಸ್ಥಿರವ್ಯಾಪಾರ ಸ್ಥಳವನ್ನು ಹೊಂದಿಲ್ಲದೇ, ವ್ಯಾಪಾರದ ಪಥದಲ್ಲಿ ಅಥವಾ ಅದರ ಮುಂದುವರಿಕೆಯಲ್ಲಿ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಯನ್ನು ಒಳಗೊಳ್ಳುವ ವ್ಯವಹಾರಗಳನ್ನು ಕೈಗೊಳ್ಳುವ ವ್ಯಕ್ತಿ;

(21) "ಕೇಂದ್ರ ತೆರಿಗೆ" ಎಂದರೆ, ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ ಪ್ರಕರಣ 9ರ ಅಡಿಯಲ್ಲಿ ವಿಧಿಸಲಾದ ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ;

(22) "ಉಪಕರ" ಎಂದರೆ ಸರಕು ಮತ್ತು ಸೇವೆಗಳ ತೆರಿಗೆ (ರಾಜ್ಯಗಳಿಗೆ ಪರಿಹಾರ) ಅಧಿನಿಯಮದಲ್ಲಿ ಇದಕ್ಕೆ ನೀಡಲಾದ ಅರ್ಥವನ್ನು ಹೊಂದಿರತಕ್ಕದ್ದು;

(23) "ಚಾರ್ಟರ್ಡ್ ಅಕೌಂಟೆಂಟ್" ಎಂದರೆ, ಚಾರ್ಟರ್ಡ್ ಅಕೌಂಟೆಂಟ್ ಅಧಿನಿಯಮ, 1949ರ (1949ರ ಕೇಂದ್ರ ಅಧಿನಿಯಮ 38) ಪ್ರಕರಣ 2ರ ಉಪಪ್ರಕರಣ (1)ರ ಖಂಡ (ಬಿ) ಯಲ್ಲಿ ಪರಿಭಾಷಿಸಲಾದ ಒಬ್ಬ ಚಾರ್ಟರ್ಡ್ ಅಕೌಂಟೆಂಟ್;

(24) "ಆಯುಕ್ತರು" ಎಂದರೆ, ಪ್ರಕರಣ 3ರ ಅಡಿಯಲ್ಲಿ ನೇಮಕಗೊಂಡ ರಾಜ್ಯ ತೆರಿಗೆಯ ಆಯುಕ್ತರು;

(25) "ಮಂಡಳಿಯಲ್ಲಿನ ಆಯುಕ್ತರು" ಎಂದರೆ, ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ ಪ್ರಕರಣ 168ರಲ್ಲಿ ಉಲ್ಲೇಖಿಸಲಾದ ಆಯುಕ್ತರು;

(26) "ಸಾಮಾನ್ಯ ಪೋರ್ಟಲ್" ಎಂದರೆ, ಪ್ರಕರಣ 146ರಲ್ಲಿ ಉಲ್ಲೇಖಿಸಲಾದ ಸರಕು ಮತ್ತು ಸೇವೆಗಳ ತೆರಿಗೆಯ ಸಾಮಾನ್ಯ ವಿದ್ಯುನ್ಮಾನ ಪೋರ್ಟಲ್;

(27) "ಸಾಮಾನ್ಯ ಕೆಲಸದ ದಿನಗಳು" ಎಂದರೆ, ಕೇಂದ್ರ ಸರ್ಕಾರದಿಂದಲಾಗಲೀ ಅಥವಾ ರಾಜ್ಯ ಸರ್ಕಾರದಿಂದಲಾಗಲೀ ಅಧಿಕೃತ ರಜಾದಿನವಾಗಿ ಘೋಷಿಸದ ಅನುಕ್ರಮವಾಗಿ ಬರುವ ಅಂತಹ ಕೆಲಸದ ದಿನಗಳು;

(28) "ಕಂಪನಿ ಕಾರ್ಯದರ್ಶಿ" ಎಂದರೆ, ಕಂಪನಿ ಕಾರ್ಯದರ್ಶಿಗಳ ಅಧಿನಿಯಮ, 1980 ರ (1980ರ ಕೇಂದ್ರ ಅಧಿನಿಯಮ 56) ಪ್ರಕರಣ 2ರ ಉಪ–ಪ್ರಕರಣ (1)ರ ಖಂಡ (ಸಿ) ನಲ್ಲಿ ಪರಿಭಾಷಿಸಿಸಲಾಗಿರುವ ಒಬ್ಬ ಕಂಪನಿ ಕಾರ್ಯದರ್ಶಿ;

(29) "ಸಕ್ಷಮ ಪ್ರಾಧಿಕಾರ" ಎಂದರೆ, ಸರ್ಕಾರದಿಂದ ಅಧಿಸೂಚಿಸಬಹುದಾದ ಅಂಥ ಪ್ರಾಧಿಕಾರ;

(30) "ಸಂಯುಕ್ತ ಪೂರೈಕೆ" ಎಂದರೆ, ಒಬ್ಬ ತೆರಿಗೆದಾಯಕ ವ್ಯಕ್ತಿಯಿಂದ ಸ್ವೀಕರಿಸುವವನಿಗೆ ಮಾಡಲಾದ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಅಥವಾ ಅವುಗಳ ಯಾವುದೇ ಸಂಯೋಜನೆಗಳನ್ನು ಒಳಗೊಂಡಿರುವ ಒಂದು ಪೂರೈಕೆ ಮತ್ತು ಅವುಗಳನ್ನು ಸಾಮಾನ್ಯವಾದ ಒಂದು ವ್ಯವಹಾರದ ಕ್ರಮದಲ್ಲಿ ಸಹಜವಾಗಿ ಕಂತೆ ಮಾಡಿ ಒಂದು ಮತ್ತೊಂದರ ಜೊತೆಗಿನ ಸಂಬಂಧದಲ್ಲಿ ಪೂರೈಸಲಾಗಿರುತ್ತದೆ ಹಾಗೂ ಅವುಗಳಲ್ಲಿ ಒಂದು ಪ್ರಧಾನ ಪೂರೈಕೆಯಾಗಿರುತ್ತದೆ;

ದೃಷ್ಟಾಂತ: ಸರಕುಗಳನ್ನು ಪ್ಯಾಕುಮಾಡಿ ವಿಮೆಯೊಂದಿಗೆ ಸಾಗಾಣಿಕೆ ಮಾಡಿದ್ದಲ್ಲಿ, ಸರಕುಗಳ, ಪ್ಯಾಕುಮಾಡುವ ಸಾಮಗ್ರಿಗಳ, ಸಾಗಾಣಿಕೆಯ ಮತ್ತು ವಿಮೆಯ ಪ್ರತ್ಯೇಕ ಪೂರೈಕೆಗಳು ಒಂದು ಸಂಯುಕ್ತ ಪೂರೈಕೆಯಾಗಿದೆ ಮತ್ತು ಸರಕುಗಳ ಪೂರೈಕೆಯು ಆ ಸಂಯುಕ್ತ ಪೂರೈಕೆಯ ಪ್ರಧಾನ ಪೂರೈಕೆಯಾಗಿದೆ;

(31) "ಪ್ರತಿಫಲ" ಎಂಬುದು, ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಗೆ ಸಂಬಂಧಿಸಿದಂತೆ:–

(ಎ) ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಗೆ ಸಂಬಂಧಿಸಿದಂತೆಯಾಗಲೀ ಅಥವಾ ಅದಕ್ಕೆ ಪ್ರತಿಕ್ರಿಯೆಯಾಗಿಯಾಗಲೀ ಅಥವಾ ಅದರ ಪ್ರೇರೇಪಣೆಗೋಸ್ಕರವಾಗಲೀ, ಸ್ವೀಕರಿಸುವವನಿಂದಲಾದರೂ ಆಗಿರಬಹುದು ಅಥವಾ ಇತರೇ ಯಾವುದೇ ವ್ಯಕ್ತಿಯಿಂದಲಾದರೂ ಆಗಿರಬಹುದು, ಹಣದ ರೂಪದಲ್ಲಾಗಲೀ ಅಥವಾ ಅನ್ಯ ರೂಪದಲ್ಲಾಗಲೀ, ಮಾಡಿದ ಅಥವಾ ಮಾಡಬಹುದಾದ ಯಾವುದೇ ಸಂದಾಯವನ್ನು ಒಳಗೊಳ್ಳುತ್ತದೆ, ಆದರೆ ಇದು ಕೇಂದ್ರ ಸರ್ಕಾರ ಅಥವಾ ಒಂದು ರಾಜ್ಯ ಸರ್ಕಾರದಿಂದ ನೀಡಲಾದ ಯಾವುದೇ ಸಹಾಯಧನವನ್ನು ಒಳಗೊಂಡಿರತಕ್ಕದ್ದಲ್ಲ;

(ಬಿ) ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಗೆ ಸಂಬಂಧಿಸಿದಂತೆಯಾಗಲೀ ಅಥವಾ ಅದಕ್ಕೆ ಪ್ರತಿಕ್ರಿಯೆಯಾಗಿಯಾಗಲೀ ಅಥವಾ ಅದರ ಪ್ರೇರೇಪಣೆಗೋಸ್ಕರವಾಗಲೀ, ಸ್ವೀಕರಿಸುವವನಿಂದಲಾದರೂ ಆಗಿರಬಹುದು ಅಥವಾ ಇತರೇ ಯಾವುದೇ ವ್ಯಕ್ತಿಯಿಂದಲಾದರೂ ಆಗಿರಬಹುದು, ಯಾವುದೇ ಕ್ರಿಯೆಯನ್ನು ಮಾಡುವುದರ ಅಥವಾ ಮಾಡದಿರುವುದರ ಹಣಕಾಸಿನ ರೂಪದ ಮೌಲ್ಯವನ್ನು ಒಳಗೊಳ್ಳುತ್ತದೆ, ಆದರೆ ಇದು ಕೇಂದ್ರ ಸರ್ಕಾರ ಅಥವಾ ಒಂದು ರಾಜ್ಯ ಸರ್ಕಾರದಿಂದ ನೀಡಲಾದ ಯಾವುದೇ ಸಹಾಯಧನವನ್ನು ಒಳಗೊಂಡಿರತಕ್ಕದ್ದಲ್ಲ:

ಪರಂತು, ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಗೆ ಸಂಬಂಧಿಸಿದಂತೆ ನೀಡಲಾಗಿರುವ ಠೇವಣಿಯನ್ನು, ಪೂರೈಕೆದಾರ ಆ ಠೇವಣಿಯನ್ನು ಪೂರೈಕೆಯ ಪ್ರತಿಫಲ ಎಂದು ಪರಿಗಣಿಸದ ಹೊರತು ಅದನ್ನು ಪೂರೈಕೆಗಾಗಿ ಮಾಡಲಾದ ಪಾವತಿ ಎಂದು ತಿಳಿಯತಕ್ಕದ್ದಲ್ಲ;

(32) "ಸರಕುಗಳ ನಿರಂತರ ಪೂರೈಕೆ" ಎಂದರೆ, ಒಂದು ಕರಾರಿನ ಅಡಿಯಲ್ಲಿ ವೈರ್, ಕೇಬಲ್, ಪೈಪ್‌ಲೈನ್ ಅಥವಾ ಇತರ ವಾಹಿನಿಗಳ ಮೂಲಕ ಅಥವಾ ಅವುಗಳ ಮೂಲಕವಲ್ಲದೆಯೂ ಸಹ, ನಿರಂತರವಾಗಿ ಅಥವಾ ಆವರ್ತಿತವಾಗಿ, ಒದಗಿಸಿದ ಅಥವಾ ಒದಗಿಸಲು ಒಪ್ಪಿರುವ, ಮತ್ತು ಅದಕ್ಕಾಗಿ ಪೂರೈಕೆದಾರನು ಸ್ವೀಕರಿಸುವವನಿಗೆ ನಿಯಮಿತವಾಗಿ ಅಥವಾ ನಿಯತಕಾಲಿಕವಾಗಿ ಬೆಲೆಪಟ್ಟಿಯನ್ನು ನೀಡುವ ಸರಕುಗಳ ಒಂದು ಪೂರೈಕೆ ಮತ್ತು ಸರ್ಕಾರವು, ಅಂಥ ಷರತ್ತುಗಳಿಗೆ ಒಳಪಟ್ಟು, ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದ ಅಂಥ ಸರಕುಗಳ ಪೂರೈಕೆಯನ್ನು ಒಳಗೊಳ್ಳುತ್ತದೆ;

(33) "ಸೇವೆಗಳ ನಿರಂತರ ಪೂರೈಕೆ" ಎಂದರೆ, ಒಂದು ಕರಾರಿನ ಅಡಿಯಲ್ಲಿ ನಿಯತಕಾಲಿಕ ಪಾವತಿಯ ಬಾಧ್ಯತೆಗಳೊಂದಿಗೆ, ಮೂರು ತಿಂಗಳುಗಳಿಗಿಂತ ಹೆಚ್ಚಿನ ಅವಧಿಗೆ ನಿರಂತರವಾಗಿ ಅಥವಾ ಆವರ್ತಿತವಾಗಿ ಒದಗಿಸಿದ ಅಥವಾ ಒದಗಿಸಲು ಒಪ್ಪಿರುವ ಸೇವೆಗಳ ಪೂರೈಕೆ ಮತ್ತು ಸರ್ಕಾರವು, ಅಂಥ ಷರತ್ತುಗಳಿಗೊಳಪಟ್ಟು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದ ಅಂತಹ ಸೇವೆಗಳ ಪೂರೈಕೆಯನ್ನು ಒಳಗೊಳ್ಳುತ್ತದೆ;

(34) "ಸಾಗಣಿಕೆ ವಾಹನ"ವು ಒಂದು ನೌಕೆ, ಒಂದು ವಿಮಾನ ಮತ್ತು ಒಂದು ವಾಹನವನ್ನೂ ಒಳಗೊಳ್ಳುತ್ತದೆ;

(35) "ಕಾಸ್ಟ್ ಅಕೌಂಟೆಂಟ್" ಎಂದರೆ, ಕಾಸ್ಟ್ ಮತ್ತು ವರ್ಕ್ಸ್ ಅಕೌಂಟೆಂಟ್ಸ್ ಅಧಿನಿಯಮ, 1959ರ (1959ರ ಕೇಂದ್ರ ಅಧಿನಿಯಮ 23) ಪ್ರಕರಣ 2ರ ಉಪಪ್ರಕರಣ (1)ರ ಖಂಡ (ಸಿ)ಯಲ್ಲಿ ಪರಿಭಾಷಿಸಲಾಗಿರುವ ಒಬ್ಬ **"ಕಾಸ್ಟ್ ಅಕೌಂಟೆಂಟ್"**;

(36) "ಪರಿಷತ್" ಎಂದರೆ, ಸಂವಿಧಾನದ ಅನುಚ್ಛೇದ 279ಎ ಅಡಿಯಲ್ಲಿ ಸ್ಥಾಪಿಸಲಾದ ಸರಕು ಮತ್ತು ಸೇವೆಗಳ ಪರಿಷತ್;

(37) "ಜಮೆ ಚೀಟಿ" ಎಂದರೆ, ನೋಂದಾಯಿತ ವ್ಯಕ್ತಿಯು ಪ್ರಕರಣ 34ರ ಉಪಪ್ರಕರಣ (1)ರ ಅಡಿಯಲ್ಲಿ ನೀಡಿದ ದಸ್ತಾವೇಜು;

(38) "ಖರ್ಚು ಚೀಟಿ" ಎಂದರೆ, ನೋಂದಾಯಿತ ವ್ಯಕ್ತಿಯು ಪ್ರಕರಣ 34ರ ಉಪಪ್ರಕರಣ (3)ರ ಅಡಿಯಲ್ಲಿ ನೀಡಿದ ದಸ್ತಾವೇಜು;

(39) "ಪರಿಭಾವಿತ ರಫ್ತುಗಳು" ಎಂದರೆ, ಪ್ರಕರಣ 147ರ ಅಡಿಯಲ್ಲಿ ಅಧಿಸೂಚಿಸಬಹುದಾದ ಸರಕುಗಳ ಅಂಥ ಪೂರೈಕೆಗಳು;

(40) "ನೇಮಿತ ಪ್ರಾಧಿಕಾರ" ಎಂದರೆ, ಆಯುಕ್ತರಿಂದ ಅಧಿಸೂಚಿಸಬಹುದಾದ ಅಂಥ ಪ್ರಾಧಿಕಾರ;

(41) "ದಸ್ತಾವೇಜು" ಎಂಬುದು, ಲಿಖಿತ ಅಥವಾ ಮುದ್ರಿತವಾದ ಯಾವುದೇ ತರಹದ ದಾಖಲೆ ಮತ್ತು ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000ರ (2000ರ ಕೇಂದ್ರ ಅಧಿನಿಯಮ 21) ಪ್ರಕರಣ 2ರ ಖಂಡ (ಟಿ)ಯಲ್ಲಿ ಪರಿಭಾಷಿಸಿರುವಂತೆ ವಿದ್ಯುನ್ಮಾನ ದಾಖಲೆಗಳನ್ನು ಒಳಗೊಳ್ಳುತ್ತದೆ;

(42) ಭಾರತದಲ್ಲಿ ಉತ್ಪಾದಿಸಿ ರಫ್ತು ಮಾಡಲಾದ ಯಾವುದೇ ಸರಕುಗಳಿಗೆ ಸಂಬಂಧಿಸಿದಂತೆ, **"ಸುಂಕ ವಾಪಸಾತಿ"** ಎಂದರೆ, ಅಂಥ ಸರಕುಗಳ ಉತ್ಪಾದನೆಯಲ್ಲಿ ಬಳಸಿದ ಯಾವುದೇ ಆಮದಾದ ಹೂಡುವಳಿಗಳ ಮೇಲೆ ಅಥವಾ ಯಾವುದೇ ದೇಶೀಯ

ಹೂಡುವಳಿಗಳ ಅಥವಾ ಹೂಡುವಳಿ ಸೇವೆಗಳ ಮೇಲೆ ವಿಧಿಸಬಹುದಾದ ತೆರಿಗೆ, ಸುಂಕ ಅಥವಾ ಉಪಕರಗಳ ಮೇಲಿನ ರಿಯಾಯಿತಿ;

(43) "ವಿದ್ಯುನ್ಮಾನ ನಗದು ಖಾತೆ" ಎಂದರೆ, ಪ್ರಕರಣ 49ರ ಉಪಪ್ರಕರಣ (1)ರಲ್ಲಿ ಉಲ್ಲೇಖಿಸಲಾಗಿರುವ ವಿದ್ಯುನ್ಮಾನ ನಗದು ಖಾತೆ;

(44) "ವಿದ್ಯುನ್ಮಾನ ವಾಣಿಜ್ಯ" ಎಂದರೆ, ಡಿಜಿಟಲ್ ಅಥವಾ ವಿದ್ಯುನ್ಮಾನ ಜಾಲದ ಮುಖಾಂತರ ಡಿಜಿಟಲ್ ಉತ್ಪನ್ನಗಳನ್ನೂ ಒಳಗೊಂಡಂತೆ ಸರಕು ಅಥವಾ ಸೇವೆಗಳ ಅಥವಾ ಅವೆರಡರ ಪೂರೈಕೆ;

(45) "ವಿದ್ಯುನ್ಮಾನ ವಾಣಿಜ್ಯ ನಿರ್ವಾಹಕ" ಎಂದರೆ, ವಿದ್ಯುನ್ಮಾನ ವಾಣಿಜ್ಯಕ್ಕಾಗಿ ಡಿಜಿಟಲ್ ಅಥವಾ ವಿದ್ಯುನ್ಮಾನ ಸೌಲಭ್ಯ ಅಥವಾ ವೇದಿಕೆಯನ್ನು ಹೊಂದಿರುವ, ನಡೆಸುವ ಅಥವಾ ನಿರ್ವಹಿಸುವ ಯಾವೊಬ್ಬ ವ್ಯಕ್ತಿ;

(46) "ವಿದ್ಯುನ್ಮಾನ ಜಮಾ ಖಾತೆ" ಎಂದರೆ, ಪ್ರಕರಣ 49ರ ಉಪಪ್ರಕರಣ (2)ರಲ್ಲಿ ಉಲ್ಲೇಖಿಸಲಾಗಿರುವ ವಿದ್ಯುನ್ಮಾನ ಜಮಾ ಖಾತೆ;

(47) "ವಿನಾಯಿತಿ ಪೂರೈಕೆ" ಎಂದರೆ, ಶೂನ್ಯ ತೆರಿಗೆದರವನ್ನು ಆಕರ್ಷಿಸುವ ಯಾವುದೇ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆ ಅಥವಾ ಪ್ರಕರಣ 11ರ ಅಡಿಯಲ್ಲಿ ಅಥವಾ ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಪ್ರಕರಣ 6ರ ಅಡಿಯಲ್ಲಿ ತೆರಿಗೆಯಿಂದ ಸಂಪೂರ್ಣ ವಿನಾಯಿತಿ ಹೊಂದಿರುವ ಯಾವುದೇ ಸರಕುಗಳ ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆ ಮತ್ತು ಇದು ತೆರಿಗೆರಹಿತ ಪೂರೈಕೆಗಳನ್ನೂ ಸಹ ಒಳಗೊಂಡಿರುತ್ತದೆ;

(48) "ಅಸ್ತಿತ್ವದಲ್ಲಿರುವ ಕಾನೂನು" ಎಂದರೆ, ಈ ಅಧಿನಿಯಮವು ಜಾರಿಗೆ ಬರುವ ಮೊದಲು, ಅಂಥ ಕಾನೂನು, ಅಧಿಸೂಚನೆ, ಆದೇಶ, ನಿಯಮ ಅಥವಾ ನಿಯಂತ್ರಣವನ್ನು ಮಾಡುವ ಅಧಿಕಾರವನ್ನು ಹೊಂದಿರುವ ಶಾಸನಸಭೆ ಅಥವಾ ಪ್ರಾಧಿಕಾರ ಅಥವಾ ವ್ಯಕ್ತಿಯಿಂದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಮೇಲೆ ತೆರಿಗೆಯನ್ನು ವಿಧಿಸಿ ಸಂಗ್ರಹಿಸುವುದಕ್ಕಾಗಿ ಹೊರಡಿಸಿದ ಅಥವಾ ಮಾಡಿದ ಯಾವುದೇ ಕಾನೂನು, ಅಧಿಸೂಚನೆ, ಆದೇಶ, ನಿಯಮ ಅಥವಾ ನಿಯಂತ್ರಣ;

(49) "ಕುಟುಂಬ"ಎಂದರೆ,–

(ಎ) ವ್ಯಕ್ತಿಯ ಪತಿ ಅಥವಾ ಪತ್ನಿ ಮತ್ತು ಮಕ್ಕಳು, ಹಾಗೂ

(ಬಿ) ಆ ವ್ಯಕ್ತಿಯ ಮೇಲೆ ಪೂರ್ಣವಾಗಿ ಅಥವಾ ಹೆಚ್ಚಿನದಾಗಿ ಅವಲಂಬಿತರಾದ ವ್ಯಕ್ತಿಯ ತಂದೆ–ತಾಯಿ, ಅಜ್ಜ–ಅಜ್ಜಿ, ಸಹೋದರರು ಮತ್ತು ಸಹೋದರಿಯರು;

(50) "ಸ್ಥಿರವಾದ ಕಾರ್ಯಸ್ಥಳ" ಎಂದರೆ, ಸೇವೆಗಳ ಪೂರೈಕೆಗಾಗಿ ಅಥವಾ ಸ್ವಂತ ಅಗತ್ಯತೆಗಳಿಗೆ ಸೇವೆಗಳನ್ನು ಸ್ವೀಕರಿಸಿ ಬಳಸುವುದಕ್ಕಾಗಿ, ಮಾನವ ಮತ್ತು ತಾಂತ್ರಿಕ ಸಂಪನ್ಮೂಲಗಳ ದೃಷ್ಟಿಯಿಂದ ಸಾಕಷ್ಟು ಪ್ರಮಾಣದ ಶಾಶ್ವತತೆಯಿಂದ ಹಾಗೂ ಸೂಕ್ತವಾದ ಸಂರಚನೆಯಿಂದ ಗುರುತಿಸಲ್ಪಟ್ಟ (ನೋಂದಾಯಿತ ವ್ಯವಹಾರ ಸ್ಥಳವನ್ನು ಹೊರತುಪಡಿಸಿದ) ಒಂದು ಸ್ಥಳ;

(51) "ನಿಧಿ" ಎಂದರೆ, ಪ್ರಕರಣ 57ರ ಅಡಿಯಲ್ಲಿ ಸ್ಥಾಪಿತವಾದ ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿ;

(52) "ಸರಕು" ಎಂದರೆ, ಹಣ ಮತ್ತು ಭದ್ರತಾಪತ್ರಗಳನ್ನು ಹೊರತುಪಡಿಸಿದ ಎಲ್ಲಾ ಬಗೆಯ ಚರ ಸ್ವತ್ತುಗಳು, ಆದರೆ ಇದು ಕ್ರಮಾರ್ಹ ಕ್ಲೇಮಗಳು, ಬೆಳೆಯುತ್ತಿರುವ ಫಸಲುಗಳು, ಹುಲ್ಲು ಮತ್ತು ಪೂರೈಕೆಗಿಂತ ಮೊದಲು ಅಥವಾ ಪೂರೈಕೆ ಕರಾರಿನ ಅಡಿಯಲ್ಲಿ ಬೇರ್ಪಡಿಸಲೊಪ್ಪಿರುವ ಭೂಮಿಗೆ ಲಗತ್ತಾಗಿರುವ ಅಥವಾ ಅದರ ಭಾಗವಾಗಿರುವ ವಸ್ತುಗಳನ್ನು ಒಳಗೊಂಡಿರುತ್ತದೆ;

(53) "ಸರ್ಕಾರ" ಎಂದರೆ, ಕರ್ನಾಟಕ ಸರ್ಕಾರ;

(54) "ಸರಕು ಮತ್ತು ಸೇವೆಗಳ ತೆರಿಗೆ (ರಾಜ್ಯಗಳಿಗೆ ಪರಿಹಾರ) ಅಧಿನಿಯಮ" ಎಂದರೆ, ಸರಕು ಮತ್ತು ಸೇವೆಗಳ ತೆರಿಗೆ (ರಾಜ್ಯಗಳಿಗೆ ಪರಿಹಾರ) ಅಧಿನಿಯಮ, 2017 (2017ರ ಕೇಂದ್ರ ಅಧಿನಿಯಮ 15);

(55) "ಸರಕು ಮತ್ತು ಸೇವೆಗಳ ತೆರಿಗೆ ವೃತ್ತಿನಿರತ" ಎಂದರೆ, ಪ್ರಕರಣ 48ರ ಅಡಿಯಲ್ಲಿ, ಅಂಥ ವೃತ್ತಿನಿರತನಾಗಿ ಕಾರ್ಯನಿರ್ವಹಿಸಲು ಅನುಮೋದಿಸಲಾದ ಒಬ್ಬ ವ್ಯಕ್ತಿ;

(56) "ಭಾರತ" ಎಂದರೆ, ಸಂವಿಧಾನದ ಅನುಚ್ಛೇದ 1ರಲ್ಲಿ ಉಲ್ಲೇಖಿಸಲಾದ ಭಾರತ ದೇಶದ ಪ್ರದೇಶ, ಅದರ ರಾಜ್ಯ ಕ್ಷೇತ್ರೀಯ ಜಲಕ್ಷೇತ್ರ, ಸಮುದ್ರ ತಳ ಮತ್ತು ಅಂತಹ ಜಲಕ್ಷೇತ್ರಗಳ ತಳಮಣ್ಣು, ಭೂಖಂಡದ ಭೂಭುಜ, ವಿಶೇಷ ಆರ್ಥಿಕ ವಲಯ ಅಥವಾ ಟೆರಿಟೋರಿಯಲ್ ವಾಟರ್ಸ್, ಕಾಂಟಿನೆಂಟಲ್ ಶೆಲ್ಫ್, ಎಕ್ಸ್‌ಕ್ಲೂಸಿವ್ ಎಕನಾಮಿಕ್ ಝೋನ್ ಅಂಡ್ ಅದರ್ ಮಾರಿಟೈಮ್ ಝೋನ್ಸ್ ಅಧಿನಿಯಮ 1976 ರಲ್ಲಿ (1976ರ ಕೇಂದ್ರ ಅಧಿನಿಯಮ 80) ಉಲ್ಲೇಖಿತವಾಗಿರುವ ಯಾವುದೇ ಅನ್ಯ ಸಾಗರ ವಲಯ ಹಾಗೂ ಅದರ ಭೂಪ್ರದೇಶ ಮತ್ತು ರಾಜ್ಯ ಕ್ಷೇತ್ರೀಯ ಜಲಕ್ಷೇತ್ರದ ಮೇಲಿನ ವಾಯುಪ್ರದೇಶ;

(57) "ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ" ಎಂದರೆ, ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕೇಂದ್ರ ಅಧಿನಿಯಮ 13);

(58) "ಏಕೀಕೃತ ತೆರಿಗೆ" ಎಂದರೆ, ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿ ವಿಧಿಸಿದ ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ;

(59) "ಹೂಡುವಳಿ" ಎಂದರೆ, ಪೂರೈಕೆದಾರನಿಂದ ವ್ಯವಹಾರದ ಪಥದಲ್ಲಿ ಅಥವಾ ಮುಂದುವರಿಕೆಯಲ್ಲಿ ಬಳಸಿದ ಅಥವಾ ಬಳಸಲು ಉದ್ದೇಶಿಸಲಾಗಿರುವ ಬಂಡವಾಳ ಸರಕುಗಳಲ್ಲದ ಯಾವುದೇ ಸರಕುಗಳು;

(60) "ಹೂಡುವಳಿ ಸೇವೆ" ಎಂದರೆ, ಪೂರೈಕೆದಾರನಿಂದ ವ್ಯವಹಾರದ ಪಥದಲ್ಲಿ ಅಥವಾ ಮುಂದುವರಿಕೆಯಲ್ಲಿ ಬಳಸಿದ ಅಥವಾ ಬಳಸಲು ಉದ್ದೇಶಿಸಲಾಗಿರುವ ಯಾವುದೇ ಸೇವೆಗಳು;

(61) "ಹೂಡುವಳಿ ಸೇವೆ ಹಂಚಿಕೆದಾರ" ಎಂದರೆ, ಹೂಡುವಳಿ ಸೇವೆಗಳ ಸ್ವೀಕೃತಿ ಬಗ್ಗೆ ಪ್ರಕರಣ 31ರ ಅಡಿಯಲ್ಲಿ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆದಾರನು ನೀಡಿದ ತೆರಿಗೆ ಬೆಲೆಪಟ್ಟಿಗಳನ್ನು ಸ್ವೀಕರಿಸಿ ಸದರಿ ಸೇವೆಗಳ ಮೇಲೆ

ಸಂದಾಯಮಾಡಿದ ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಏಕೀಕೃತ ತೆರಿಗೆ ಅಥವಾ ಕೇಂದ್ರಾಡಳಿತ ಪ್ರದೇಶ ತೆರಿಗೆಯ ಜಮೆಯನ್ನು ಸದರಿ ಕಛೇರಿಯ ಪ್ಯಾನ್ ಅನ್ನೇ ಹೊಂದಿರುವ ತೆರಿಗೆದಾಯಕ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆದಾರನಿಗೆ ಹಂಚುವ ಉದ್ದೇಶಕ್ಕಾಗಿ ನಿಗದಿತ ದಸ್ತಾವೇಜನ್ನು ನೀಡುವ ಆ ಪೂರೈಕೆದಾರನ ಕಛೇರಿ;

(62) ತೆರಿಗೆದಾಯಕ ವ್ಯಕ್ತಿಗೆ ಸಂಬಂಧಿಸಿದಂತೆ **"ಹೂಡುವಳಿ ತೆರಿಗೆ"** ಎಂದರೆ, ತಾನು ಸ್ವೀಕರಿಸಿದ ಯಾವುದೇ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಯ ಮೇಲೆ ವಿಧಿಸಲಾದ ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಏಕೀಕೃತ ತೆರಿಗೆ ಅಥವಾ ಕೇಂದ್ರಾಡಳಿತ ಪ್ರದೇಶ ತೆರಿಗೆ ಮತ್ತು ಅದು,–

(ಎ) ಸರಕುಗಳ ಆಮದಿನ ಮೇಲೆ ವಿಧಿಸಲಾದ ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆಯನ್ನು;

(ಬಿ) ಪ್ರಕರಣ 9ರ ಉಪ–ಪ್ರಕರಣ (3) ಮತ್ತು (4)ನೇ ಉಪಬಂಧಗಳ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆಯನ್ನು;

(ಸಿ) ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಪ್ರಕರಣ 5ರ ಉಪ–ಪ್ರಕರಣ (3) ಮತ್ತು (4)ನೇ ಉಪಬಂಧಗಳ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆಯನ್ನು; ಅಥವಾ

(ಡಿ) ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಪ್ರಕರಣ 9ರ ಉಪ–ಪ್ರಕರಣ (3) ಮತ್ತು (4)ನೇ ಉಪಬಂಧಗಳ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆಯನ್ನು,

–ಒಳಗೊಳ್ಳುತ್ತದೆ, ಆದರೆ ಇದು ರಾಜಿ ತೆರಿಗೆ ಪದ್ಧತಿಯಡಿಯಲ್ಲಿ ಸಂದಾಯ ಮಾಡಿದ ತೆರಿಗೆಯನ್ನು ಒಳಗೊಳ್ಳುವುದಿಲ್ಲ;

(63) "ಹೂಡುವಳಿ ತೆರಿಗೆ ಜಮೆ" ಎಂದರೆ, ಹೂಡುವಳಿ ತೆರಿಗೆಯ ಜಮೆ;

(64) "ಸರಕುಗಳ ರಾಜ್ಯದೊಳಗಿನ ಪೂರೈಕೆ" ಎಂಬುದು ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಪ್ರಕರಣ 8ರಲ್ಲಿ ಇದಕ್ಕೆ ನೀಡಲಾದ ಅರ್ಥವನ್ನು ಹೊಂದಿರತಕ್ಕದ್ದು;

(65) "ಸೇವೆಗಳ ರಾಜ್ಯದೊಳಗಿನ ಪೂರೈಕೆ" ಎಂಬುದು ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಪ್ರಕರಣ 8ರಲ್ಲಿ ಇದಕ್ಕೆ ನೀಡಲಾದ ಅರ್ಥವನ್ನು ಹೊಂದಿರತಕ್ಕದ್ದು;

(66) "ಬೆಲೆಪಟ್ಟಿ ಅಥವಾ ತೆರಿಗೆ ಬೆಲೆಪಟ್ಟಿ" ಎಂದರೆ, ಪ್ರಕರಣ 31ರಲ್ಲಿ ಉಲ್ಲೇಖಿಸಲಾಗಿರುವ ಬೆಲೆಪಟ್ಟಿ;

(67) ಒಬ್ಬ ವ್ಯಕ್ತಿಗೆ ಸಂಬಂಧಿಸಿದಂತೆ **"ಒಳಮುಖ ಪೂರೈಕೆ"** ಎಂದರೆ, ಪ್ರತಿಫಲಕ್ಕಾಗಿ ಅಥವಾ ಪ್ರತಿಫಲವಿಲ್ಲದೆ, ಖರೀದಿ, ಸ್ವಾಧೀನಪಡಿಸಿಕೊಳ್ಳುವಿಕೆ ಅಥವಾ ಯಾವುದೇ ಇತರೇ ಮೂಲಗಳ ಮೂಲಕವಾಗಿ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡನ್ನು ಸ್ವೀಕರಿಸುವುದು;

(68) "ಮಜೂರಿ ಕೆಲಸ" ಎಂದರೆ, ಮತ್ತೊಬ್ಬ ನೋಂದಾಯಿತ ವ್ಯಕ್ತಿಗೆ ಸೇರಿದ ಸರಕುಗಳ ಮೇಲೆ ಒಬ್ಬ ವ್ಯಕ್ತಿಯು ಕೈಗೊಳ್ಳುವ ಯಾವುದೇ ಉಪಚರಣೆ (treatment) ಅಥವಾ ಸಂಸ್ಕರಣೆ ಮತ್ತು "ಮಜೂರಿ ಕೆಲಸಗಾರ" ಎಂಬ ಪದಾವಳಿಯನ್ನು ತದನುಸಾರವಾಗಿಯೇ ಅರ್ಥೈಸತಕ್ಕದ್ದು;

(69) "ಸ್ಥಳೀಯ ಪ್ರಾಧಿಕಾರ" ಎಂದರೆ:–

(ಎ) ಸಂವಿಧಾನದ ಅನುಚ್ಛೇದ 243ರ ಖಂಡ (ಡಿ) ದಲ್ಲಿ ಪರಿಭಾಷಿಸಿರುವಂತಹ ಒಂದು **"ಪಂಚಾಯತ್"**;

(ಬಿ) ಸಂವಿಧಾನದ ಅನುಚ್ಛೇದ 243ಪಿ ಯ ಖಂಡ (ಇ) ದಲ್ಲಿ ಪರಿಭಾಷಿಸಿರುವಂತಹ ಒಂದು **"ಪುರಸಭೆ"**;

(ಸಿ) ಪೌರಾಡಳಿತ ಅಥವಾ ಸ್ಥಳೀಯ ನಿಧಿಯ ನಿಯಂತ್ರಣ ಅಥವಾ ನಿರ್ವಹಣೆ ಮಾಡಲು ಕಾನೂನು ಬದ್ಧವಾದ ಹಕ್ಕುಳ್ಳಂತಹ ಅಥವಾ ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರದಿಂದ ವಹಿಸಿಕೊಡಲಾದ ಯಾವುದೇ ಪುರಸಭಾ ಸಮಿತಿ, ಜಿಲ್ಲಾ ಪರಿಷತ್, ಜಿಲ್ಲಾ ಮಂಡಳಿ ಮತ್ತು ಇತರ ಪ್ರಾಧಿಕಾರ;

(ಡಿ) ದಂಡು ಪ್ರದೇಶಗಳ ಅಧಿನಿಯಮ, 2006ರ (2006ರ ಕೇಂದ್ರ ಅಧಿನಿಯಮ 41) ಪ್ರಕರಣ 3 ರಲ್ಲಿ ಪರಿಭಾಷಿಸಿರುವಂತಹ ಒಂದು ದಂಡು ಪ್ರದೇಶ ಮಂಡಳಿ;

(ಇ) ಸಂವಿಧಾನದ ಆರನೇ ಅನುಸೂಚಿಯ ಅಡಿಯಲ್ಲಿ ರಚಿಸಲಾದ ಒಂದು ಪ್ರಾದೇಶಿಕ ಪರಿಷತ್ ಅಥವಾ ಒಂದು ಜಿಲ್ಲಾ ಪರಿಷತ್;

(ಎಫ್) ಸಂವಿಧಾನದ ಅನುಚ್ಛೇದ 371ರ ಅಡಿಯಲ್ಲಿ ರಚಿಸಲಾದ ಒಂದು ಅಭಿವೃದ್ಧಿ ಮಂಡಳಿ ಅಥವಾ;

(ಜಿ) ಸಂವಿಧಾನದ ಅನುಚ್ಛೇದ 371ಎ ದ ಅಡಿಯಲ್ಲಿ ರಚಿಸಲಾದ ಒಂದು ಪ್ರಾದೇಶಿಕ ಪರಿಷತ್;

(70) "ಸೇವೆಗಳನ್ನು ಸ್ವೀಕರಿಸುವವನ ಸ್ಥಾನ" ಎಂದರೆ,–

(ಎ) ಯಾವ ವ್ಯವಹಾರ ಸ್ಥಳಕ್ಕೆ ನೋಂದಣಿಯನ್ನು ಪಡೆಯಲಾಗಿದೆಯೋ ಆ ಸ್ಥಳದಲ್ಲಿ ಒಂದು ಪೂರೈಕೆಯನ್ನು ಸ್ವೀಕರಿಸಿದ್ದಲ್ಲಿ, ಅಂತಹ ವ್ಯವಹಾರ ಸ್ಥಳದ ಸ್ಥಾನ;

(ಬಿ) ಯಾವ ವ್ಯವಹಾರ ಸ್ಥಳಕ್ಕೆ ನೋಂದಣಿಯನ್ನು ಪಡೆಯಲಾಗಿದೆಯೋ ಆ ಸ್ಥಳವಲ್ಲದ ಒಂದು ಸ್ಥಳದಲ್ಲಿ (ಬೇರೆಡೆಯಲ್ಲಿನ ಒಂದು ಸ್ಥಿರವಾದ ಕಾರ್ಯಸ್ಥಳ) ಒಂದು ಪೂರೈಕೆಯನ್ನು ಸ್ವೀಕರಿಸಿದ್ದಲ್ಲಿ, ಅಂತಹ ಸ್ಥಿರವಾದ ಕಾರ್ಯಸ್ಥಳದ ಸ್ಥಾನ;

(ಸಿ) ವ್ಯವಹಾರ ಸ್ಥಳ ಅಥವಾ ಸ್ಥಿರವಾದ ಕಾರ್ಯಸ್ಥಳ ಇಂತಹ ಒಂದಕ್ಕಿಂತ ಹೆಚ್ಚಿನ ಕಾರ್ಯಸ್ಥಳಗಳಲ್ಲಿ ಪೂರೈಕೆಯನ್ನು ಸ್ವೀಕರಿಸಿದ್ದಲ್ಲಿ, ಪೂರೈಕೆಯನ್ನು ಸ್ವೀಕರಿಸುವವನಿಗೆ ಅತಿ ಹೆಚ್ಚು ನೇರವಾಗಿ ಸಂಬಂಧಿಸಿರುವ ಕಾರ್ಯಸ್ಥಳದ ಸ್ಥಾನ;

(ಡಿ) ಅಂಥ ಸ್ಥಳಗಳು ಇಲ್ಲದಿದ್ದಾಗ, ಸ್ವೀಕರಿಸುವವನ ವಾಡಿಕೆಯ ವಾಸಸ್ಥಳದ ಸ್ಥಾನ;

(71) "ಸೇವೆಗಳ ಪೂರೈಕೆದಾರನ ಸ್ಥಾನ" ಎಂದರೆ,–

(ಎ) ಯಾವ ವ್ಯವಹಾರ ಸ್ಥಳಕ್ಕೆ ನೋಂದಣಿಯನ್ನು ಪಡೆಯಲಾಗಿದೆಯೋ ಆ ಸ್ಥಳದಲ್ಲಿ ಒಂದು ಪೂರೈಕೆಯನ್ನು ಮಾಡಿದ್ದಲ್ಲಿ, ಅಂತಹ ವ್ಯವಹಾರ ಸ್ಥಳದ ಸ್ಥಾನ;

(ಬಿ) ಯಾವ ವ್ಯವಹಾರ ಸ್ಥಳಕ್ಕೆ ನೋಂದಣಿಯನ್ನು ಪಡೆಯಲಾಗಿದೆಯೋ ಆ ಸ್ಥಳವಲ್ಲದ ಒಂದು ಸ್ಥಳದಲ್ಲಿ (ಬೇರೆಡೆಯಲ್ಲಿನ ಒಂದು ಸ್ಥಿರವಾದ ಕಾರ್ಯಸ್ಥಳ) ಒಂದು ಪೂರೈಕೆಯನ್ನು ಮಾಡಿದ್ದಲ್ಲಿ, ಅಂತಹ ಸ್ಥಿರವಾದ ಕಾರ್ಯಸ್ಥಳದ ಸ್ಥಾನ;

(ಸಿ) ವ್ಯವಹಾರ ಸ್ಥಳ ಅಥವಾ ಸ್ಥಿರವಾದ ಕಾರ್ಯಸ್ಥಳ ಇಂತಹ ಒಂದಕ್ಕಿಂತ ಹೆಚ್ಚಿನ ಕಾರ್ಯಸ್ಥಳಗಳಲ್ಲಿ ಪೂರೈಕೆಯನ್ನು ಮಾಡಿದ್ದಲ್ಲಿ, ಪೂರೈಕೆಯನ್ನು ಮಾಡುವವನಿಗೆ ಅತಿ ಹೆಚ್ಚು ನೇರವಾಗಿ ಸಂಬಂಧಿಸಿರುವ ಕಾರ್ಯಸ್ಥಳದ ಸ್ಥಾನ;

(ಡಿ) ಅಂಥ ಸ್ಥಳಗಳು ಇಲ್ಲದಿದ್ದಾಗ, ಪೂರೈಕೆದಾರನ ವಾಡಿಕೆಯ ವಾಸಸ್ಥಳದ ಸ್ಥಾನ;

(72) "ಉತ್ಪಾದನೆ" ಎಂದರೆ, ಕಚ್ಚಾ ಪದಾರ್ಥ ಅಥವಾ ಹೂಡುವಳಿಗಳನ್ನು ಯಾವುದೇ ವಿಧಾನದಲ್ಲಿ ಸಂಸ್ಕರಿಸುವುದು, ಮತ್ತು ಇದರ ಪರಿಣಾಮವಾಗಿ ಪ್ರತ್ಯೇಕ ಹೆಸರು, ಗುಣಲಕ್ಷಣ ಮತ್ತು ಉಪಯೋಗವನ್ನು ಹೊಂದಿರುವ ಒಂದು ಹೊಸ ಉತ್ಪನ್ನ ಹೊರಬರುವುದು ಮತ್ತು "ತಯಾರಕ" ಎಂಬ ಪದಾವಳಿಯನ್ನು ತದನುಸಾರವಾಗಿಯೇ ಅರ್ಥೈಸತಕ್ಕದ್ದು;

(73) "ಮಾರುಕಟ್ಟೆ ಮೌಲ್ಯ" ಎಂದರೆ, ಸ್ವೀಕರಿಸುವವನು ಮತ್ತು ಪೂರೈಕೆದಾರನು ಸಂಬಂಧಿತರಾಗಿಲ್ಲದಿದ್ದಾಗ, ಅದೇ ಬಗೆಯ ಮತ್ತು ಗುಣಮಟ್ಟದ ಮತ್ತು ಅದೇ ಅಥವಾ ಸರಿಸುಮಾರು ಅದೇ ಸಮಯದಲ್ಲಿ ಮತ್ತು ಅದೇ ವಾಣಿಜ್ಯ ಸ್ಥರದಲ್ಲಿ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡನ್ನು ಪಡೆಯುವ ಸಲುವಾಗಿ ಪೂರೈಕೆಯನ್ನು ಸ್ವೀಕರಿಸುವವನು ಸಂದಾಯ ಮಾಡಬೇಕಾದ ಪೂರ್ಣ ಮೊತ್ತ;

(74) "ಮಿಶ್ರ ಪೂರೈಕೆ" ಎಂದರೆ, ಒಬ್ಬ ತೆರಿಗೆದಾಯಕ ವ್ಯಕ್ತಿಯು ಮಾಡಿದ ಪರಸ್ಪರ ಸಂಬಂಧವಿರುವ, ಸರಕುಗಳ ಅಥವಾ ಸೇವೆಗಳ ಅಥವಾ ಅವುಗಳ ಯಾವುದೇ ಸಂಯೋಜನೆಯ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಪ್ರತ್ಯೇಕವಾದ, ಆದರೆ ಸಂಯುಕ್ತ ಪೂರೈಕೆಯಲ್ಲದ, ಪೂರೈಕೆಗಳು;

ದೃಷ್ಟಾಂತ: ಡಬ್ಬಿಯಲ್ಲಿ ಹಾಕಿಟ್ಟ ಆಹಾರಗಳು, ಸಿಹಿ ತಿನಿಸುಗಳು, ಚಾಕೊಲೆಟ್‌ಗಳು, ಕೇಕುಗಳು, ಒಣಹಣ್ಣುಗಳು, ಅನಿಲಯುಕ್ತ ಪಾನೀಯ ಮತ್ತು ಹಣ್ಣಿನ ರಸಗಳನ್ನು ಒಳಗೊಂಡ ಪ್ಯಾಕೇಜಿನ ಒಂದು ಪೂರೈಕೆಯನ್ನು ಒಂದೇ ಬೆಲೆಯಲ್ಲಿ ಪೂರೈಕೆ ಮಾಡುವುದು ಮಿಶ್ರ ಪೂರೈಕೆ. ಇಂತಹ ಪ್ರತಿಯೊಂದು ಪದಾರ್ಥಗಳನ್ನು ಪ್ರತ್ಯೇಕವಾಗಿ ಪೂರೈಕೆ ಮಾಡಬಹುದು ಮತ್ತು ಇವುಗಳು ಮತ್ತೊಂದರ ಮೇಲೆ ಅವಲಂಬಿತವಾಗಿರುವುದಿಲ್ಲ. ಒಂದು ವೇಳೆ ಈ ಪದಾರ್ಥಗಳು ಪ್ರತ್ಯೇಕವಾಗಿ ಪೂರೈಕೆಯಾದಲ್ಲಿ ಇದು ಮಿಶ್ರ ಪೂರೈಕೆಯಾಗುವುದಿಲ್ಲ;

(75) "ಹಣ"ಎಂದರೆ, ಬಾಧ್ಯತೆಯನ್ನು ಇತ್ಯರ್ಥಗೊಳಿಸುವುದಕ್ಕಾಗಿ ಅಥವಾ ಮತ್ತೊಂದು ವರ್ಗನಾಮದ ಹಣವನ್ನು (ಡಿನಾಮಿನೇಷನ್) ಭಾರತೀಯ ಕಾನೂನುಸಮ್ಮತ ಚಲಾವಣೆಯ ಹಣದೊಂದಿಗೆ ವಿನಿಮಯ ಮಾಡಲು ಪ್ರತಿಫಲ ರೂಪದಲ್ಲಿ ಬಳಕೆಯಾದಂತಹ, ಭಾರತೀಯ ಅಧಿಕೃತ ನಾಣ್ಯರೂಪ ಅಥವಾ ಯಾವುದೇ ವಿದೇಶಿ ನಾಣ್ಯಪದ್ಧತಿ (ಕರೆನ್ಸಿ), ಧನಾದೇಶ, ಪ್ರಾಮಿಸರಿ ನೋಟ್, ವಿನಿಮಯ ಪತ್ರ, ಲೆಟರ್ ಆಫ್ ಕ್ರೆಡಿಟ್, ಡ್ರಾಫ್ಟ್, ಪೇ ಆರ್ಡರ್, ಪ್ರಯಾಣಿಕರ ಚೆಕ್, ಮನಿ ಆರ್ಡರ್, ಅಂಚೆ ಅಥವಾ ವಿದ್ಯುನ್ಮಾನ ಹಣಪಾವತಿ ಅಥವಾ ಭಾರತೀಯ ರಿಸರ್ವ್ ಬ್ಯಾಂಕಿನಿಂದ ಮನ್ನಣೆ ಪಡೆದ ಯಾವುದೇ ಇತರ ಸಾಧನಗಳು ಆದರೆ ತನ್ನ ನಾಣ್ಯಸಂಗ್ರಹಣಾ (ನ್ಯೂಮಿಸ್ಮಾಟಿಕ್) ಮೌಲ್ಯಕ್ಕಾಗಿ ಇಟ್ಟಿರುವ ಯಾವುದೇ ನಾಣ್ಯಪದ್ಧತಿ(ಕರೆನ್ಸಿ)ಯನ್ನು ಇದು ಒಳಗೊಳ್ಳತಕ್ಕದ್ದಲ್ಲ;

(76) "ಮೋಟಾರು ವಾಹನ" ಎಂದರೆ ಮೋಟಾರು ವಾಹನಗಳ ಅಧಿನಿಯಮ 1988ರ (1988ರ ಕೇಂದ್ರ ಅಧಿನಿಯಮ 59) ಪ್ರಕರಣ 2ರ ಖಂಡ 28 ದಲ್ಲಿ ಇದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

(77) "ಅನಿವಾಸಿ ತೆರಿಗೆದಾಯಕ ವ್ಯಕ್ತಿ" ಎಂದರೆ, ಪ್ರಧಾನ ಕರ್ತನಾಗಿ ಅಥವಾ ಏಜೆಂಟನಾಗಿ ಅಥವಾ ಯಾವುದೇ ಇನ್ನಿತರ ಸಾಮರ್ಥ್ಯದಲ್ಲಿ, ಭಾರತದಲ್ಲಿ ಸ್ಥಿರ ವ್ಯಾಪಾರಸ್ಥಳ ಅಥವಾ ವಾಸಸ್ಥಳವನ್ನು ಹೊಂದಿಲ್ಲದೇ, ವ್ಯಾಪಾರದ ಪಥದಲ್ಲಿ ಅಥವಾ ಅದರ ಮುಂದುವರಿಕೆಯಲ್ಲಿ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಯನ್ನು ಒಳಗೊಂಡ ವ್ಯವಹಾರಗಳನ್ನು ಸಾಂದರ್ಭಿಕವಾಗಿ ಕೈಗೊಳ್ಳುವ ವ್ಯಕ್ತಿ;

(78) "ತೆರಿಗೆರಹಿತ ಪೂರೈಕೆ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ಅಥವಾ ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿ ತೆರಿಗೆಯನ್ನು ವಿಧಿಸಲು ಬಾರದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಅಂತಹ ಪೂರೈಕೆ;

(79) "ತೆರಿಗೆ ರಹಿತ ಕ್ಷೇತ್ರ" ಎಂದರೆ, ತೆರಿಗೆದಾಯಕ ಕ್ಷೇತ್ರದಿಂದ ಹೊರಗಿರುವ ಕ್ಷೇತ್ರ;

(80) "ಅಧಿಸೂಚನೆ" ಎಂದರೆ, ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಿಸಲಾದ ಅಧಿಸೂಚನೆ ಹಾಗೂ 'ಅಧಿಸೂಚಿಸು' ಮತ್ತು 'ಅಧಿಸೂಚಿಸಲಾಗಿದೆ' ಎನ್ನುವ ಪದಾವಳಿಗಳನ್ನು ತದಾನುಸಾರವಾಗಿ ಅರ್ಥೈಸತಕ್ಕದ್ದು;

(81) "ಅನ್ಯ ಕ್ಷೇತ್ರ"ವು ಒಂದು ರಾಜ್ಯದಲ್ಲಿ ಅಡಕವಾಗಿರುವ ಕ್ಷೇತ್ರಗಳು ಹಾಗೂ ಖಂಡ (114)ರ ಉಪ–ಖಂಡ (ಎ) ಇಂದ (ಇ)ವರೆಗೆ ಉಲ್ಲೇಖಿಸಿರುವ ಕ್ಷೇತ್ರಗಳನ್ನು ಹೊರತುಪಡಿಸಿದ ಇತರ ಕ್ಷೇತ್ರಗಳನ್ನು ಒಳಗೊಳ್ಳುತ್ತದೆ;

(82) ಒಬ್ಬ ತೆರಿಗೆದಾಯಕ ವ್ಯಕ್ತಿಗೆ ಸಂಬಂಧಿಸಿದಂತೆ **"ಹುಟ್ಟುವಳಿ ತೆರಿಗೆ"** ಎಂದರೆ, ಆತನು ಹಿಮ್ಮುಖ ವಿಧಿಸುವಿಕೆಯ ಆಧಾರದ ಮೇಲೆ ಸಂದಾಯ ಮಾಡಬೇಕಾದ ತೆರಿಗೆಯನ್ನು ಹೊರತುಪಡಿಸಿ, ಆತನಿಂದ ಅಥವಾ ಆತನ ಏಜೆಂಟ್‌ನಿಂದ ಮಾಡಿದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ತೆರಿಗೆದಾಯಕ ಪೂರೈಕೆಯ ಮೇಲೆ ಈ ಅಧಿನಿಯಮದಡಿ ವಿಧಿಸಬಹುದಾದ ತೆರಿಗೆ;

(83) ಒಬ್ಬ ತೆರಿಗೆದಾಯಕ ವ್ಯಕ್ತಿಗೆ ಸಂಬಂಧಿಸಿದಂತೆ **"ಹೊರಮುಖ ಪೂರೈಕೆ"** ಎಂದರೆ, ಮಾರಾಟ, ವರ್ಗಾವಣೆ, ವಸ್ತುವಿನಿಮಯ, ವಿನಿಮಯ, ಪರವಾನಗಿ, ಬಾಡಿಗೆ, ಭೋಗ್ಯ ಅಥವಾ ವಿಲೇವಾರಿ ಅಥವಾ ಯಾವುದೇ ಇತರ ಪ್ರಕಾರದಲ್ಲಿಯಾದರೂ, ಅಂಥ

ವ್ಯಕ್ತಿಯಿಂದ ವ್ಯವಹಾರದ ಪಥದಲ್ಲಿ ಅಥವಾ ಮುಂದುವರಿಕೆಯಲ್ಲಿ ಮಾಡಲಾದ ಅಥವಾ ಮಾಡಲು ಒಪ್ಪಿರುವ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆ;

(84) "ವ್ಯಕ್ತಿ" ಎಂಬುದು ಈ ಕೆಳಗಿನವುಗಳನ್ನು ಒಳಗೊಳ್ಳುವುದು:–

(ಎ) ಒಬ್ಬ ವ್ಯಕ್ತಿ;

(ಬಿ) ಒಂದು ಹಿಂದೂ ಅವಿಭಕ್ತ ಕುಟುಂಬ;

(ಸಿ) ಒಂದು ಕಂಪನಿ;

(ಡಿ) ಒಂದು ವ್ಯಾಪಾರಸಂಸ್ಥೆ;

(ಇ) ಒಂದು ಪರಿಮಿತ ಹೊಣೆಗಾರಿಕೆಯ ಪಾಲುಗಾರಿಕೆ;

(ಎಫ್) ಭಾರತದಲ್ಲಿ ಅಥವಾ ಭಾರತದ ಹೊರಗಡೆ, ನಿಗಮಿತವಾದ ಅಥವಾ ನಿಗಮಿತವಾಗಿರದ, ವ್ಯಕ್ತಿಗಳ ಒಂದು ಸಂಘ ಅಥವಾ ಸಂಸ್ಥೆ;

(ಜಿ) ಯಾವುದೇ ಕೇಂದ್ರ ಅಧಿನಿಯಮ, ರಾಜ್ಯ ಅಧಿನಿಯಮ ಅಥವಾ ಪ್ರಾದೇಶಿಕ ಅಧಿನಿಯಮದ ಅಡಿಯಲ್ಲಿ ಸ್ಥಾಪಿಸಿದ ನಿಗಮ ಅಥವಾ ಕಂಪನಿ ಅಧಿನಿಯಮ 2013ರ (2013ರ ಕೇಂದ್ರ ಅಧಿನಿಯಮ 18) ಪ್ರಕರಣ 2ರ ಉಪಪ್ರಕರಣ (45)ರಲ್ಲಿ ಪರಿಭಾಷಿಸಿರುವಂತೆ ಯಾವುದೇ ಸರ್ಕಾರಿ ನಿಗಮ;

(ಹೆಚ್) ಭಾರತದ ಹೊರಗಿನ ದೇಶದ ಕಾನೂನಿನ ಪ್ರಕಾರ ಅಥವಾ ಅದರ ಅಡಿಯಲ್ಲಿ ನಿಗಮಿತವಾದ ಯಾವುದೇ ನಿಗಮಿತ ಸಂಸ್ಥೆ;

(ಐ) ಸಹಕಾರಿ ಸಂಘಗಳಿಗೆ ಸಂಬಂಧಿಸಿದ ಯಾವುದೇ ಕಾನೂನಿನ ಅಡಿಯಲ್ಲಿ ನೋಂದಾಯಿತವಾದ ಒಂದು ಸಹಕಾರಿ ಸಂಘ;

(ಜೆ) ಒಂದು ಸ್ಥಳೀಯ ಪ್ರಾಧಿಕಾರ;

(ಕೆ) ಕೇಂದ್ರ ಸರ್ಕಾರ ಅಥವಾ ಒಂದು ರಾಜ್ಯ ಸರ್ಕಾರ;

(ಎಲ್) ಸಂಘಗಳ ನೋಂದಣಿ ಅಧಿನಿಯಮ 1860ರ (1860ರ ಕೇಂದ್ರ ಅಧಿನಿಯಮ 21) ಅಡಿಯಲ್ಲಿ ಪರಿಭಾಷಿಸಿದಂತೆ ಒಂದು ಸಂಘ;

(ಎಮ್) ಟ್ರಸ್ಟ್; ಮತ್ತು

(ಎನ್) ಈ ಮೇಲಿನ ಯಾವುದೇ ಉಪಖಂಡದಲ್ಲಿ ಸೇರಿರದ ಪ್ರತಿಯೊಬ್ಬ ಕೃತಕ ನ್ಯಾಯಿಕ ವ್ಯಕ್ತಿ;

(85) "ವ್ಯವಹಾರದ ಸ್ಥಳ" ಎಂಬುದು ಈ ಮುಂದಿನವುಗಳನ್ನು ಒಳಗೊಳ್ಳುವುದು:–

(ಎ) ಯಾವ ಸ್ಥಳದಿಂದ ಸಾಮಾನ್ಯವಾಗಿ ವ್ಯವಹಾರವನ್ನು ನಡೆಸಲಾಗುವುದೋ ಆ ಸ್ಥಳ ಮತ್ತು ಇದು ಉಗ್ರಾಣ, ಗೋದಾಮು ಅಥವಾ ತೆರಿಗೆದಾಯಕ ವ್ಯಕ್ತಿಯು ತನ್ನ ಸರಕನ್ನು ಸಂಗ್ರಹಿಸುವ, ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡನ್ನು ಪೂರೈಕೆ ಮಾಡುವ ಅಥವಾ ಸ್ವೀಕರಿಸುವ ಯಾವುದೇ ಇತರ ಸ್ಥಳವನ್ನು ಒಳಗೊಳ್ಳುತ್ತದೆ; ಅಥವಾ

(ಬಿ) ತೆರಿಗೆದಾಯಕ ವ್ಯಕ್ತಿ, ತನ್ನ ಲೆಕ್ಕಪುಸ್ತಕಗಳನ್ನು ನಿರ್ವಹಿಸುವ ಸ್ಥಳ; ಅಥವಾ

(ಸಿ) ಯಾವುದೇ ಹೆಸರಿನಿಂದ ಕರೆಯಲಾಗುವ ಒಬ್ಬ ಏಜೆಂಟ್‌ನ ಮೂಲಕ ತೆರಿಗೆದಾಯಕ ವ್ಯಕ್ತಿಯು ವ್ಯವಹಾರದಲ್ಲಿ ತೊಡಗಿರುವ ಸ್ಥಳ;

(86) "ಪೂರೈಕೆಯ ಸ್ಥಳ" ಎಂದರೆ, ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಧ್ಯಾಯ V ರಲ್ಲಿ ಉಲ್ಲೇಖಿಸಿದಂತಹ, ಪೂರೈಕೆಯ ಸ್ಥಳ;

(87) "ನಿಯಮಿಸಲಾದ" ಎಂದರೆ, ಪರಿಷತ್ತಿನ ಶಿಫಾರಸ್ಸಿನ ಮೇಲೆ, ಈ ಅಧಿನಿಯಮದ ಅಡಿಯಲ್ಲಿ ಮಾಡಲಾದ ನಿಯಮಗಳಿಂದ ನಿಯಮಿಸಲಾದುದು;

(88) "ಪ್ರಧಾನಕರ್ತ" ಎಂದರೆ, ಯಾರ ಪರವಾಗಿ ಒಬ್ಬ ಏಜೆಂಟನು ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆ ಅಥವಾ ಸ್ವೀಕೃತಿಯ ವ್ಯವಹಾರವನ್ನು ನಡೆಸುವವನೋ ಆ ಒಬ್ಬ ವ್ಯಕ್ತಿ;

(89) "ಪ್ರಧಾನ ವ್ಯವಹಾರಸ್ಥಳ" ಎಂದರೆ, ನೋಂದಣಿ ಪ್ರಮಾಣ ಪತ್ರದಲ್ಲಿ ಪ್ರಧಾನ ವ್ಯವಹಾರಸ್ಥಳ ಎಂದು ನಿರ್ದಿಷ್ಟಪಡಿಸಿರುವ ವ್ಯವಹಾರದ ಸ್ಥಳ;

(90) "ಪ್ರಧಾನ ಪೂರೈಕೆ" ಎಂದರೆ, ಸಂಯುಕ್ತ ಪೂರೈಕೆಯ ಪ್ರಧಾನ ಅಂಶವನ್ನು ಹೊಂದಿರುವ ಸರಕು ಅಥವಾ ಸೇವೆಗಳ ಪೂರೈಕೆ ಮತ್ತು ಆ ಸಂಯುಕ್ತ ಪೂರೈಕೆಯ ಭಾಗವಾಗಿರುವ ಇತರ ಯಾವುದೇ ಪೂರೈಕೆಯು ಆ ಪೂರೈಕೆಗೆ ಪೂರಕವಾಗಿರುತ್ತದೆ;

(91) ಈ ಅಧಿನಿಯಮದ ಅಡಿಯಲ್ಲಿ ನಿರ್ವಹಿಸಬೇಕಾದ ಯಾವುದೇ ಕಾರ್ಯಭಾರಕ್ಕೆ ಸಂಬಂಧಿಸಿದಂತೆ **'ಯುಕ್ತ ಅಧಿಕಾರಿ'** ಎಂದರೆ, ಆಯುಕ್ತರು ಅಥವಾ ಆಯುಕ್ತರಿಂದ ಆ ಕಾರ್ಯಭಾರಕ್ಕೆ ನಿಯುಕ್ತಿಗೊಳಿಸಲಾದ ರಾಜ್ಯ ತೆರಿಗೆಯ ಅಧಿಕಾರಿ;

(92) "ತ್ರೈಮಾಸಿಕ" ಎಂದರೆ, ಒಂದು ಕ್ಯಾಲೆಂಡರ್ ವರ್ಷದ ಮಾರ್ಚ್, ಜೂನ್, ಸೆಪ್ಟಂಬರ್ ಮತ್ತು ಡಿಸೆಂಬರಿನ ಕೊನೆಯ ದಿನದಂದು ಕೊನೆಗೊಳ್ಳುವ ಅನುಕ್ರಮವಾದ ಮೂರು ಕ್ಯಾಲೆಂಡರ್ ತಿಂಗಳುಗಳನ್ನು ಒಳಗೊಂಡ ಒಂದು ಅವಧಿ;

(93) ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಯನ್ನು **"ಸ್ವೀಕರಿಸುವವನು"** ಎಂದರೆ:–

(ಎ) ಎಲ್ಲಿ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಗಾಗಿ ಪ್ರತಿಫಲವನ್ನು ಸಂದಾಯ ಮಾಡಬೇಕಾಗುವುದೋ, ಆ ಪ್ರತಿಫಲವನ್ನು ಸಂದಾಯ ಮಾಡಲು ಬಾಧ್ಯಸ್ಥನಾದ ವ್ಯಕ್ತಿ;

(ಬಿ) ಎಲ್ಲಿ ಸರಕುಗಳ ಪೂರೈಕೆಗಾಗಿ ಪ್ರತಿಫಲವನ್ನು ಸಂದಾಯ ಮಾಡಬೇಕಿಲ್ಲವೋ, ಅಲ್ಲಿ ಸರಕುಗಳನ್ನು ಯಾರಿಗೆ ಬಟವಾಡೆ ಮಾಡಲಾಗುವುದೋ ಅಥವಾ ಲಭ್ಯಗೊಳಿಸಲಾಗುವುದೋ ಅಥವಾ ಸರಕುಗಳ ಸ್ವಾಧೀನತೆ ಅಥವಾ ಉಪಯೋಗವನ್ನು ಯಾರಿಗೆ ನೀಡಲಾಗುವುದೋ ಅಥವಾ ಲಭ್ಯಗೊಳಿಸಲಾಗುವುದೋ, ಆ ವ್ಯಕ್ತಿ; ಮತ್ತು;

(ಸಿ) ಎಲ್ಲಿ ಸೇವೆಯ ಪೂರೈಕೆಗೆ ಪ್ರತಿಫಲವನ್ನು ಸಂದಾಯ ಮಾಡಬೇಕಿಲ್ಲವೋ, ಅಲ್ಲಿ ಯಾರಿಗೆ ಸೇವೆಯನ್ನು ನೀಡಲಾಗುತ್ತದೆಯೋ, ಆ ವ್ಯಕ್ತಿ,

–ಮತ್ತು ಪೂರೈಕೆಯನ್ನು ಯಾರಿಗೆ ಮಾಡಲಾಗುವುದೋ ಆ ವ್ಯಕ್ತಿಯ ಸಂಬಂಧದಲ್ಲಿ ಮಾಡುವ ಯಾವುದೇ ಉಲ್ಲೇಖವನ್ನು ಪೂರೈಕೆಯನ್ನು ಸ್ವೀಕರಿಸುವವನಿಗೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು ಮತ್ತು ಪೂರೈಕೆ ಮಾಡಲಾದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡಕ್ಕೆ ಸಂಬಂಧಿಸಿದಂತೆ ಸ್ವೀಕರಿಸುವವನ ಪರವಾಗಿ ಕಾರ್ಯನಿರ್ವಹಿಸುವ ಒಬ್ಬ ಏಜೆಂಟ್‌ನನ್ನೂ ಸಹ ಒಳಗೊಳ್ಳತಕ್ಕದ್ದು;

(94) "ನೋಂದಾಯಿತ ವ್ಯಕ್ತಿ" ಎಂದರೆ, ಪ್ರಕರಣ 25ರ ಅಡಿಯಲ್ಲಿ ನೋಂದಾಯಿತನಾಗಿರುವ ಒಬ್ಬ ವ್ಯಕ್ತಿ, ಆದರೆ ವಿಶಿಷ್ಟ ಗುರುತಿನ ಸಂಖ್ಯೆಯನ್ನು ಹೊಂದಿರುವ ವ್ಯಕ್ತಿಯನ್ನು ಇದು ಒಳಗೊಳ್ಳುವುದಿಲ್ಲ;

(95) "ವಿನಿಯಮಗಳು" ಎಂದರೆ, ಪರಿಷತ್ತಿನ ಶಿಫಾರಸ್ಸಿನ ಮೇಲೆ ಈ ಅಧಿನಿಯಮದ ಅಡಿಯಲ್ಲಿ ಸರ್ಕಾರದಿಂದ ಮಾಡಿದ ವಿನಿಯಮಗಳು;

(96) ಸರಕುಗಳಿಗೆ ಸಂಬಂಧಿಸಿದಂತೆ, **"ತೆಗೆಯುವುದು"** ಎಂದರೆ,–

(ಎ) ಪೂರೈಕೆದಾರನಿಂದ ಅಥವಾ ಅಂತಹ ಪೂರೈಕೆದಾರನ ಪರವಾಗಿ ಕಾರ್ಯನಿರ್ವಹಿಸುತ್ತಿರುವ ಯಾವುದೇ ಇತರ ವ್ಯಕ್ತಿಯಿಂದ ಸರಕುಗಳನ್ನು ತಲುಪಿಸುವುದಕ್ಕಾಗಿ ರವಾನಿಸುವುದು ಅಥವಾ;

(ಬಿ) ಸ್ವೀಕರಿಸುವವನಿಂದ ಅಥವಾ ಅಂತಹ ಸ್ವೀಕರಿಸುವವನ ಪರವಾಗಿ ಕಾರ್ಯ ನಿರ್ವಹಿಸುತ್ತಿರುವ ಯಾವುದೇ ಇತರ ವ್ಯಕ್ತಿಯಿಂದ ಸರಕುಗಳನ್ನು ಪಡೆಯುವುದು;

(97) "ರಿಟರ್ನ್" ಎಂದರೆ, ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಪ್ರಕಾರ ಅಥವಾ ಅದರ ಅಡಿಯಲ್ಲಿ ನಿಯಮಿಸಿದ ಅಥವಾ ಆನ್ಯಥಾ ಒದಗಿಸಬೇಕೆಂದು ಅಗತ್ಯಪಡಿಸಿದ ಯಾವುದೇ ರಿಟರ್ನ್;

(98) "ಹಿಮ್ಮುಖ ವಿಧಿಸುವಿಕೆ (reverse charge)" ಎಂದರೆ, ಈ ಅಧಿನಿಯಮದ ಪ್ರಕರಣ 9ರ ಉಪಪ್ರಕರಣ (3) ಅಥವಾ (4)ರ ಅಡಿಯಲ್ಲಿ ಅಥವಾ ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಪ್ರಕರಣ 5ರ ಉಪಪ್ರಕರಣ (3) ಅಥವಾ (4)ರ ಅಡಿಯಲ್ಲಿ, ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆದಾರನ ಬದಲಾಗಿ, ಅಂಥ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡನ್ನು ಸ್ವೀಕರಿಸುವವನು ಮಾಡಬೇಕಾಗಿರುವ ತೆರಿಗೆ ಸಂದಾಯ ಬಾಧ್ಯತೆ;

(99) "ಪುನರೀಕ್ಷಣಾ ಪ್ರಾಧಿಕಾರ" ಎಂದರೆ, ನಿರ್ಣಯಗಳ ಅಥವಾ ಆದೇಶಗಳ ಪುನರೀಕ್ಷಣೆಗಾಗಿ 108ನೇ ಪ್ರಕರಣದಲ್ಲಿ ಉಲ್ಲೇಖಿಸಲಾಗಿರುವ, ನೇಮಕವಾದ ಅಥವಾ ಪ್ರಾಧಿಕೃತವಾದ ಒಂದು ಪ್ರಾಧಿಕಾರ;

(100) "ಅನುಸೂಚಿ" ಎಂದರೆ, ಈ ಅಧಿನಿಯಮಕ್ಕೆ ಲಗತ್ತಿಸಲಾದ ಅನುಸೂಚಿ;

(101) "ಭದ್ರತಾ ಪತ್ರಗಳು" ಎಂದರೆ, ಭದ್ರತಾ ಪತ್ರಗಳ ಕರಾರುಗಳು (ನಿಯಂತ್ರಣ) ಅಧಿನಿಯಮ, 1956ರ (1956ರ ಕೇಂದ್ರ ಅಧಿನಿಯಮ 42) ಪ್ರಕರಣ 2ರ ಖಂಡ (ಹೆಚ್) ನಲ್ಲಿ ಇದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

(102) "ಸೇವೆಗಳು" ಎಂದರೆ, ಸರಕು, ಹಣ ಮತ್ತು ಭದ್ರತಾಪತ್ರಗಳಲ್ಲದವುಗಳು, ಆದರೆ ಹಣದ ಉಪಯೋಗಕ್ಕೆ ಸಂಬಂಧಿಸಿದ ಅಥವಾ ಒಂದು ನಮೂನೆಯ ನಾಣ್ಯಪದ್ಧತಿ (ಕರೆನ್ಸಿ)ಯಿಂದ ಮತ್ತೊಂದು ನಮೂನೆಯ ನಾಣ್ಯಪದ್ಧತಿ (ಕರೆನ್ಸಿ)ಗೆ ನಗದಿನ ಮೂಲಕವಾಗಿಯಾಗಲೀ ಅಥವಾ ಇತರ ಯಾವುದೇ ವಿಧಾನಗಳ ಮೂಲಕವಾಗಲೀ ಅದರ ಪರಿವರ್ತನೆ ಮತ್ತು ಆ ಕಾರ್ಯಕ್ಕಾಗಿ ಪ್ರತ್ಯೇಕ ಪ್ರತಿಫಲವನ್ನು ವಿಧಿಸುವ ಚಟುವಟಿಕೆಗಳನ್ನು ಒಳಗೊಳ್ಳುತ್ತದೆ;

(103) "ರಾಜ್ಯ", ಎಂದರೆ, ಕರ್ನಾಟಕ ರಾಜ್ಯ;

(104) "ರಾಜ್ಯ ತೆರಿಗೆ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ವಿಧಿಸಲಾದ ತೆರಿಗೆ;

(105) "ಪೂರೈಕೆದಾರ" ಎಂದರೆ, ಯಾವುದೇ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡಕ್ಕೆ ಸಂಬಂಧಿಸಿದಂತೆ, ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡನ್ನು ಪೂರೈಕೆ ಮಾಡುವ ವ್ಯಕ್ತಿ ಮತ್ತು ಇದು, ಪೂರೈಕೆ ಮಾಡುವ ಸರಕುಗಳು ಅಥವಾ ಸೇವೆಗಳು ಅಥವಾ ಅವುಗಳೆರಡಕ್ಕೆ ಸಂಬಂಧಿಸಿದಂತೆ ಅಂತಹ ಪೂರೈಕೆದಾರನ ಪರವಾಗಿ ಆ ಕಾರ್ಯ ಮಾಡುವ ಒಬ್ಬ ಏಜೆಂಟ್‌ನನ್ನು ಒಳಗೊಳ್ಳತಕ್ಕದ್ದು;

(106) "ತೆರಿಗೆ ಅವಧಿ" ಎಂದರೆ, ಯಾವ ಅವಧಿಗೆ ರಿಟರ್ನ್ ಅನ್ನು ಸಲ್ಲಿಸುವುದು ಅವಶ್ಯವಿರುವುದೋ ಆ ಅವಧಿ;

(107)"ತೆರಿಗೆದಾಯಕ ವ್ಯಕ್ತಿ" ಎಂದರೆ, ಪ್ರಕರಣ 22ರ ಅಥವಾ ಪ್ರಕರಣ 24ರ ಅಡಿಯಲ್ಲಿ ನೋಂದಣಿಯಾಗಿರುವ ಅಥವಾ ನೋಂದಣಿಗೆ ಬಾಧ್ಯಸ್ಥನಾಗಿರುವ ಒಬ್ಬ ವ್ಯಕ್ತಿ;

(108) "ತೆರಿಗೆದಾಯಕ ಪೂರೈಕೆ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ತೆರಿಗೆ ವಿಧಿಸಬಹುದಾದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆ;

(109) "ತೆರಿಗೆದಾಯಕ ಕ್ಷೇತ್ರ" ಎಂದರೆ, ಈ ಅಧಿನಿಯಮದ ಉಪಬಂಧಗಳು ಅನ್ವಯವಾಗುವ ಕ್ಷೇತ್ರ;

(110) "ದೂರಸಂಪರ್ಕ ಸೇವೆ" ಎಂದರೆ, ತಂತಿ, ರೇಡಿಯೋ, ದೃಶ್ಯ ಅಥವಾ ಇತರ ವಿದ್ಯುತ್‌ಕಾಂತೀಯ ಮಾಧ್ಯಮಗಳ ಮೂಲಕ, ಚಿಹ್ನೆಗಳ, ಸಂಕೇತಗಳ, ಲಿಖಿತದ, ಪ್ರತಿರೂಪಗಳ ಮತ್ತು ಶಬ್ದಗಳ ಅಥವಾ ಯಾವುದೇ ಸ್ವರೂಪದ ಮಾಹಿತಿಯ ಯಾವುದೇ ಪ್ರಸರಣ

ಅಥವಾ ಸ್ವೀಕರಣೆಯ ಮೂಲಕ ಬಳಕೆದಾರರಿಗೆ ದೊರಕಿಸಿಕೊಡಲಾದ (ವಿದ್ಯುನ್ಮಾನ ಅಂಚೆ, ಧ್ವನಿ–ಅಂಚೆ, ದತ್ತಾಂಶ ಸೇವೆಗಳು, ಶ್ರವ್ಯಪಠ್ಯ ಸೇವೆಗಳು, ದೃಶ್ಯಪಠ್ಯ ಸೇವೆಗಳು, ರೇಡಿಯೋ ಪೇಜಿಂಗ್, ಮತ್ತು ಸೆಲ್ಯುಲರ್ ಮೊಬೈಲ್ ದೂರವಾಣಿ ಸೇವೆಗಳನ್ನು ಒಳಗೊಂಡಂತೆ) ಯಾವುದೇ ಸ್ವರೂಪದ ಸೇವೆ;

(111) "ಕೇಂದ್ರ ಸರಕು ಮತ್ತು ಸೇವೆಗಳ ಅಧಿನಿಯಮ" ಎಂದರೆ, ಕೇಂದ್ರ ಸರಕು ಮತ್ತು ಸೇವೆಗಳ ಅಧಿನಿಯಮ, 2017 (2017ರ ಕೇಂದ್ರ ಅಧಿನಿಯಮ 12);

(112) "ರಾಜ್ಯದಲ್ಲಿನ ವಹಿವಾಟು ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿನ ವಹಿವಾಟು" ಎಂದರೆ, ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಏಕೀಕೃತ ತೆರಿಗೆ ಅಥವಾ ಕೇಂದ್ರಾಡಳಿತ ಪ್ರದೇಶ ತೆರಿಗೆ ಮತ್ತು ಉಪಕರಗಳನ್ನು ಹೊರತುಪಡಿಸಿದ, ಒಂದು ರಾಜ್ಯದೊಳಗೆ ಒಬ್ಬ ತೆರಿಗೆದಾಯಕ ವ್ಯಕ್ತಿಯು ಮಾಡಿದ ಎಲ್ಲ ತೆರಿಗೆದಾಯಕ ಪೂರೈಕೆಗಳ (ಅವುಗಳ ಮೇಲೆ ಹಿಮ್ಮುಖ ವಿಧಿಸುವಿಕೆಯ ಆಧಾರದಲ್ಲಿ ತೆರಿಗೆ ಸಂದಾಯ ಮಾಡಬೇಕಾದ ಒಳಮುಖ ಪೂರೈಕೆಗಳ ಮೌಲ್ಯವನ್ನು ಹೊರತುಪಡಿಸಿ) ಮತ್ತು ವಿನಾಯಿತಿ ಪೂರೈಕೆಗಳ ಹಾಗೂ ಆ ರಾಜ್ಯದಿಂದ ಸದರಿ ತೆರಿಗೆದಾಯಕ ವ್ಯಕ್ತಿಯು ಮಾಡಿದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ರಫ್ತುಗಳ ಮತ್ತು ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಅಂತರ–ರಾಜ್ಯ ಪೂರೈಕೆಗಳ ಒಟ್ಟು ಮೌಲ್ಯ;

(113) "ವಾಡಿಕೆ ವಾಸಸ್ಥಳ" ಎಂದರೆ,–

(ಎ) ಒಬ್ಬ ವ್ಯಕ್ತಿಗೆ ಸಂಬಂಧಿಸಿದಂತೆ, ಆ ವ್ಯಕ್ತಿಯು ಸಾಮಾನ್ಯವಾಗಿ ಎಲ್ಲಿ ವಾಸಿಸುತ್ತಾನೋ ಆ ಸ್ಥಳ;

(ಬಿ) ಇತರೆ ಪ್ರಕರಣಗಳಲ್ಲಿ, ವ್ಯಕ್ತಿಯು ನಿಗಮಿತಗೊಂಡಿರುವ ಅಥವಾ ಅನ್ಯಥಾ ಕಾನೂನುಸಮ್ಮತವಾಗಿ ಸ್ಥಾಪಿತವಾಗಿರುವ ಸ್ಥಳ;

(114) "ಕೇಂದ್ರಾಡಳಿತ ಪ್ರದೇಶ" ಎಂದರೆ,–

(ಎ) ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು;

(ಬಿ) ಲಕ್ಷದ್ವೀಪ;

(ಸಿ) ದಾದ್ರ ಮತ್ತು ನಗರ್ ಹವೇಲಿ;

(ಡಿ) ದಮನ್ ಮತ್ತು ದಿವ್;

(ಇ) ಚಂಡೀಘಡ; ಮತ್ತು

(ಎಫ್) ಅನ್ಯ ಕ್ಷೇತ್ರ;

– ಇವುಗಳ ಕ್ಷೇತ್ರ;

ವಿವರಣೆ: ಈ ಅಧಿನಿಯಮದ ಉದ್ದೇಶಗಳಿಗಾಗಿ, ಉಪಖಂಡ (ಎ) ಯಿಂದ (ಎಫ್)ಗಳಲ್ಲಿ ಉಲ್ಲೇಖಿಸಿರುವ ಪ್ರತಿಯೊಂದು ಕೇತ್ರವನ್ನು ಪ್ರತ್ಯೇಕ ಕೇಂದ್ರಾಡಳಿತ ಪ್ರದೇಶ ಎಂದು ಪರಿಗಣಿಸತಕ್ಕದ್ದು;

(115) "ಕೇಂದ್ರಾಡಳಿತ ಪ್ರದೇಶ ತೆರಿಗೆ" ಎಂದರೆ, ಕೇಂದ್ರಾಡಳಿತ ಪ್ರದೇಶ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿ ವಿಧಿಸಲಾದ ಕೇಂದ್ರಾಡಳಿತ ಪ್ರದೇಶ ಸರಕು ಮತ್ತು ಸೇವೆಗಳ ತೆರಿಗೆ;

(116) "ಕೇಂದ್ರಾಡಳಿತ ಪ್ರದೇಶ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ" ಎಂದರೆ, ಕೇಂದ್ರಾಡಳಿತ ಪ್ರದೇಶ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕೇಂದ್ರ ಅಧಿನಿಯಮ 14);

(117) "ಸಿಂಧುವಾದ ರಿಟರ್ನ್" ಎಂದರೆ, ಪ್ರಕರಣ 39ರ ಉಪಪ್ರಕರಣ (1)ದ ಅಡಿಯಲ್ಲಿ ಒದಗಿಸಿ ಅದರಲ್ಲಿರುವ ಸ್ವಯಂ–ನಿರ್ಧರಿತ ತೆರಿಗೆಯನ್ನು ಪೂರ್ಣವಾಗಿ ಸಂದಾಯ ಮಾಡಲಾಗಿರುವ ಒಂದು ರಿಟರ್ನ್;

(118) "ವೋಚರ್" ಎಂದರೆ, ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಗಾಗಿ ಅದನ್ನು ಪ್ರತಿಫಲದಂತೆ ಅಥವಾ ಭಾಗಶಃ ಪ್ರತಿಫಲದಂತೆ ಒಪ್ಪಿಕೊಳ್ಳಬೇಕಾದ ಬಾಧ್ಯತೆಯಿರುವ ಒಂದು ಲಿಖಿತಪತ್ರ ಮತ್ತು ಅಂಥ ಲಿಖಿತಪತ್ರದಲ್ಲಿ ಅಥವಾ ಸಂಬಂಧಪಟ್ಟ ದಾಖಲೆಪತ್ರಗಳಲ್ಲಿ, ಆ ಸಾಧನದ ಬಳಕೆಯ ನಿಬಂಧನೆಗಳು ಮತ್ತು ಷರತ್ತುಗಳನ್ನು ಒಳಗೊಂಡಂತೆ ಪೂರೈಕೆ ಮಾಡಬೇಕಾದ ಸರಕು ಅಥವಾ ಸೇವೆಗಳನ್ನು ಅಥವಾ ಅವುಗಳೆರಡನ್ನೂ ಅಥವಾ ಅವುಗಳ ಸಂಭಾವ್ಯ ಪೂರೈಕೆದಾರರ ಗುರುತನ್ನು ಸೂಚಿಸಲಾಗಿರುವ ಒಂದು ಲಿಖಿತಪತ್ರ;

(119) "ಗುತ್ತಿಗೆ ಕಾಮಗಾರಿ" ಎಂದರೆ, ಅಂತಹ ಕರಾರನ್ನು ಕಾರ್ಯಗತಗೊಳಿಸುವಾಗ ಅದರಲ್ಲಿ ಸರಕುಗಳ ಸ್ವತ್ತಿನ ವರ್ಗಾವಣೆಯನ್ನು ಒಳಗೊಂಡಿರುವ (ಸ್ವತ್ತಿನ ರೂಪದಲ್ಲಿಯಾಗಲೀ ಅಥವಾ ಯಾವುದೇ ಇತರ ರೂಪದಲ್ಲಿಯಾಗಲೀ), ಯಾವುದೇ ಸ್ಥಿರಸ್ವತ್ತನ್ನು ಕಟ್ಟುವ, ನಿರ್ಮಿಸುವ, ಸೃಷ್ಟಿಸುವ (fabrication), ಪೂರ್ಣಗೊಳಿಸುವ, ನಿಲ್ಲಿಸುವ, ಅನುಸ್ಥಾಪಿಸುವ, ಜೋಡಿಸುವ, ಉತ್ತಮಗೊಳಿಸುವ, ಮಾರ್ಪಡಿಸುವ, ದುರಸ್ತಿಯ, ನಿರ್ವಹಣೆಯ, ನವೀಕರಣದ, ವ್ಯತ್ಯಾಸಗೊಳಿಸುವ ಅಥವಾ ಚಾಲನೆಗೆ ತರುವುದರ ಒಂದು ಕರಾರು;

(120) ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, ಕೇಂದ್ರಾಡಳಿತ ಪ್ರದೇಶ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ ಮತ್ತು ಸರಕು ಮತ್ತು ಸೇವೆಗಳ ತೆರಿಗೆ (ರಾಜ್ಯಗಳಿಗೆ ಪರಿಹಾರ) ಅಧಿನಿಯಮಗಳ ಅಡಿಯಲ್ಲಿ ಪರಿಭಾಷಿಸಲಾದ ಆದರೆ ಈ ಅಧಿನಿಯಮದಲ್ಲಿ ಪರಿಭಾಷಿಸದೇ ಉಪಯೋಗಿಸಿದ ಪದಗಳು ಮತ್ತು ಪದಾವಳಿಗಳು ಆ ಅಧಿನಿಯಮಗಳಲ್ಲಿ ಅವುಗಳಿಗೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು.

ಅಧ್ಯಾಯ –II
ಆಡಳಿತ

3. ಈ ಅಧಿನಿಯಮದ ಅಡಿಯಲ್ಲಿ ಅಧಿಕಾರಿಗಳು.– ಈ ಅಧಿನಿಯಮದ ಉದ್ದೇಶಗಳಿಗಾಗಿ, ಸರ್ಕಾರವು, ಅಧಿಸೂಚನೆಯ ಮೂಲಕ, ಈ ಕೆಳಗೆ ಹೆಸರಿಸಲಾದ ಅಧಿಕಾರಿಗಳ ವರ್ಗಗಳನ್ನು ನೇಮಕಗೊಳಿಸತಕ್ಕದ್ದು :–

(ಎ) ರಾಜ್ಯ ತೆರಿಗೆ ಆಯುಕ್ತರು,

(ಬಿ) ರಾಜ್ಯ ತೆರಿಗೆ ಅಪರ ಆಯುಕ್ತರು,

(ಸಿ) ರಾಜ್ಯ ತೆರಿಗೆ ಜಂಟಿ ಆಯುಕ್ತರು,

(ಡಿ) ರಾಜ್ಯ ತೆರಿಗೆ ಉಪ ಆಯುಕ್ತರು,

(ಇ) ರಾಜ್ಯ ತೆರಿಗೆ ಸಹಾಯಕ ಆಯುಕ್ತರು, ಮತ್ತು

(ಎಫ್) ಅದು ಯುಕ್ತ ಎಂದು ಭಾವಿಸಬಹುದಾದ ಯಾವುದೇ ಇತರ ಅಧಿಕಾರಿಗಳ ವರ್ಗ:

ಪರಂತು, ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ರ (2004ರ ಕರ್ನಾಟಕ ಅಧಿನಿಯಮ 32) ಅಡಿಯಲ್ಲಿ ನೇಮಕವಾದ ಅಧಿಕಾರಿಗಳನ್ನು, ಈ ಅಧಿನಿಯಮದ ಅಡಿಯಲ್ಲಿ ನೇಮಕ ಮಾಡಲಾದ ಅಧಿಕಾರಿಗಳು ಎಂದು ಪರಿಭಾವಿಸತಕ್ಕದ್ದು.

4. ಅಧಿಕಾರಿಗಳ ನೇಮಕಾತಿ.– (1) ಸರ್ಕಾರವು, ಪ್ರಕರಣ 3ರ ಅಡಿಯಲ್ಲಿ ಅಧಿಸೂಚಿಸಿದ ಅಧಿಕಾರಿಗಳಿಗೆ ಹೆಚ್ಚುವರಿಯಾಗಿ, ತಾನು ಸೂಕ್ತವೆಂದು ಪರಿಗಣಿಸಬಹುದಾದ ಅಂಥ ವ್ಯಕ್ತಿಗಳನ್ನು ಈ ಅಧಿನಿಯಮದ ಅಡಿಯಲ್ಲಿ ಅಧಿಕಾರಿಗಳಾಗಿ ನೇಮಕಮಾಡಬಹುದು.

(2) ಆಯುಕ್ತರು ರಾಜ್ಯದಾದ್ಯಂತ ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದು, ಮತ್ತು ಇತರ ಎಲ್ಲಾ ಅಧಿಕಾರಿಗಳು, ನಿರ್ದಿಷ್ಟಪಡಿಸಬಹುದಾದ ಷರತ್ತುಗಳಿಗೆ ಒಳಪಟ್ಟು, ರಾಜ್ಯದಾದ್ಯಂತ ಅಥವಾ ಆಯುಕ್ತರು ತಮ್ಮ ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದ ಯಾವುದೇ ಸ್ಥಳೀಯ ಪ್ರದೇಶಗಳ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದು.

5. ಅಧಿಕಾರಿಗಳ ಅಧಿಕಾರಗಳು.– (1) ಆಯುಕ್ತರು ವಿಧಿಸಬಹುದಾದ ಅಂತಹ ಷರತ್ತುಗಳು ಮತ್ತು ಮಿತಿಗಳಿಗೆ ಒಳಪಟ್ಟು, ರಾಜ್ಯ ತೆರಿಗೆಯ ಒಬ್ಬ ಅಧಿಕಾರಿಯು ಈ ಅಧಿನಿಯಮದ ಅಡಿಯಲ್ಲಿ ಆತನಿಗೆ ಪ್ರದತ್ತಗೊಳಿಸಿದ ಅಧಿಕಾರಗಳನ್ನು ಚಲಾಯಿಸಬಹುದು ಮತ್ತು ಆತನಿಗೆ ವಹಿಸಲಾದ ಕರ್ತವ್ಯಗಳನ್ನು ನಿರ್ವಹಿಸಬಹುದು.

(2) ರಾಜ್ಯ ತೆರಿಗೆಯ ಒಬ್ಬ ಅಧಿಕಾರಿಯು, ತನಗೆ ಅಧೀನನಾದ ರಾಜ್ಯ ತೆರಿಗೆಯ ಇತರ ಯಾವುದೇ ಅಧಿಕಾರಿಗೆ ಈ ಅಧಿನಿಯಮದ ಅಡಿಯಲ್ಲಿ ಪ್ರದತ್ತಗೊಳಿಸಲಾದ ಅಧಿಕಾರಗಳನ್ನು ಚಲಾಯಿಸಬಹುದು ಮತ್ತು ವಿಧಿಸಲಾದ ಕರ್ತವ್ಯಗಳನ್ನು ನಿರ್ವಹಿಸಬಹುದು.

(3) ಆಯುಕ್ತರು, ತಮ್ಮಿಂದ ಈ ಸಂಬಂಧದಲ್ಲಿ ನಿರ್ದಿಷ್ಟಪಡಿಸಬಹುದಾದ ಅಂತಹ ಷರತ್ತುಗಳು ಮತ್ತು ಮಿತಿಗಳಿಗೆ ಒಳಪಟ್ಟು, ತಮಗೆ ಅಧೀನನಾದ ಯಾವೊಬ್ಬ ಇತರ ಅಧಿಕಾರಿಗೆ ತಮ್ಮ ಅಧಿಕಾರಗಳನ್ನು ಪ್ರತ್ಯಾಯೋಜಿಸಬಹುದು.

(4) ಈ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಒಂದು ಅಪೀಲು ಪ್ರಾಧಿಕಾರವು, ರಾಜ್ಯ ತೆರಿಗೆಯ ಯಾವೊಬ್ಬ ಇತರ ಅಧಿಕಾರಿಗೆ ಪ್ರದತ್ತಗೊಳಿಸಲಾದ ಅಧಿಕಾರಗಳನ್ನು ಚಲಾಯಿಸತಕ್ಕದ್ದಲ್ಲ ಅಥವಾ ವಿಧಿಸಲಾದ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದಲ್ಲ.

6. ಕೆಲವು ಸನ್ನಿವೇಶಗಳಲ್ಲಿ ಕೇಂದ್ರ ತೆರಿಗೆಯ ಅಧಿಕಾರಿಗಳನ್ನು ಯುಕ್ತ ಅಧಿಕಾರಿಯಾಗಿ ಪ್ರಾಧಿಕೃತಗೊಳಿಸುವುದು.– (1) ಈ ಅಧಿನಿಯಮದ ಉಪಬಂಧಗಳಿಗೆ ಬಾಧಕವಾಗದಂತೆ, ಪರಿಷತ್ತಿನ ಶಿಫಾರಸ್ಸಿನ ಅನ್ವಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಿದ ಷರತ್ತುಗಳಿಗೆ ಒಳಪಟ್ಟು, ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿ ನೇಮಕವಾದ ಅಧಿಕಾರಿಗಳು ಈ ಅಧಿನಿಯಮದ ಉದ್ದೇಶಗಳಿಗಾಗಿ ಯುಕ್ತ ಅಧಿಕಾರಿಗಳಾಗಿ ಪ್ರಾಧಿಕೃತಗೊಂಡಿರುತ್ತಾರೆ.

(2) ಉಪಪ್ರಕರಣ (1)ರ ಅಡಿಯಲ್ಲಿ ಹೊರಡಿಸಲಾದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿರುವ ಷರತ್ತುಗಳಿಗೆ ಒಳಪಟ್ಟು,–

(ಎ) ಯಾವುದೇ ಯುಕ್ತ ಅಧಿಕಾರಿಯು ಈ ಅಧಿನಿಯಮದ ಅಡಿಯಲ್ಲಿ ಒಂದು ಆದೇಶವನ್ನು ಹೊರಡಿಸಿದ್ದಲ್ಲಿ, ಕೇಂದ್ರ ಸರಕು ಮತ್ತು ಸೇವೆಗಳ ಅಧಿನಿಯಮದ ಅಡಿಯಲ್ಲಿಯೂ ಸಹ, ಸದರಿ ಅಧಿನಿಯಮದಿಂದ ಪ್ರಾಧಿಕೃತಗೊಂಡಂತೆ, ಒಂದು ಆದೇಶವನ್ನು ಹೊರಡಿಸಿ, ಕೇಂದ್ರ ತೆರಿಗೆಯ ಕ್ಷೇತ್ರವ್ಯಾಪ್ತಿಯ ಅಧಿಕಾರಿಗೆ ಮಾಹಿತಿಯನ್ನು ನೀಡತಕ್ಕದ್ದು.

(ಬಿ) ಕೇಂದ್ರ ಸರಕು ಮತ್ತು ಸೇವೆಗಳ ಅಧಿನಿಯಮದ ಅಡಿಯಲ್ಲಿನ ಒಬ್ಬ ಯುಕ್ತ ಅಧಿಕಾರಿಯು ಒಂದು ವಿಷಯದ ಮೇಲೆ ಯಾವುದೇ ನಡಾವಳಿಯನ್ನು ಪ್ರಾರಂಭಿಸಿದ್ದಲ್ಲಿ, ಈ ಅಧಿನಿಯಮದ ಅಡಿಯಲ್ಲಿನ ಯುಕ್ತ ಅಧಿಕಾರಿಯು ಅದೇ ವಿಷಯದ ಮೇಲೆ ಯಾವುದೇ ನಡಾವಳಿಗಳನ್ನು ಪ್ರಾರಂಭಿಸತಕ್ಕದ್ದಲ್ಲ.

(3) ಈ ಅಧಿನಿಯಮದ ಅಡಿಯಲ್ಲಿ ನೇಮಕವಾದ ಒಬ್ಬ ಅಧಿಕಾರಿಯಿಂದ ಹೊರಡಿಸಲಾದ ಯಾವುದೇ ಆದೇಶದ, ಎಲ್ಲಿ ಅನ್ವಯವಾಗುವುದೋ ಅಲ್ಲಿ, ತಿದ್ದುಪಡಿ, ಮನವಿ ಮತ್ತು ಪುನರೀಕ್ಷಣೆಗಳ ಯಾವುದೇ ನಡಾವಳಿಗಳನ್ನು, ಕೇಂದ್ರ ಸರಕು ಮತ್ತು ಸೇವೆಗಳ ಅಧಿನಿಯಮದ ಅಡಿಯಲ್ಲಿ ನೇಮಕವಾದ ಒಬ್ಬ ಅಧಿಕಾರಿಯು ಮಾಡತಕ್ಕದ್ದಲ್ಲ.

ಅಧ್ಯಾಯ –III
ತೆರಿಗೆಯ ವಿಧಿಸುವಿಕೆ ಮತ್ತು ಸಂಗ್ರಹಿಸುವಿಕೆ

7. ಪೂರೈಕೆಯ ವ್ಯಾಪ್ತಿ.– (1) ಈ ಅಧಿನಿಯಮದ ಉದ್ದೇಶಗಳಿಗಾಗಿ **"ಪೂರೈಕೆ"** ಪದವು ಈ ಕೆಳಕಂಡವುಗಳನ್ನು ಒಳಗೊಂಡಿರುತ್ತದೆ,–

(ಎ) ವ್ಯವಹಾರದ ಕ್ರಮದಲ್ಲಿ ಅಥವಾ ಅದರ ಮುಂದುವರಿಕೆಯಲ್ಲಿ, ಪ್ರತಿಫಲಕ್ಕಾಗಿ, ಒಬ್ಬ ವ್ಯಕ್ತಿಯು ಮಾಡಿದ ಅಥವಾ ಮಾಡಲು ಒಪ್ಪಿರುವ, ಮಾರಾಟ, ವರ್ಗಾವಣೆ, ವಸ್ತುವಿನಿಮಯ, ವಿನಿಮಯ, ಪರವಾನಗಿ, ಬಾಡಿಗೆ, ಭೋಗ್ಯ ಅಥವಾ ವಿಲೇವಾರಿಗಳಂತಹ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಯ ಎಲ್ಲಾ ಪ್ರಕಾರಗಳು;

(ಬಿ) ವ್ಯವಹಾರದ ಕ್ರಮದಲ್ಲಿ ಅಥವಾ ಅದರ ಮುಂದುವರಿಕೆಯಲ್ಲಿ ಆಗಲೀ ಅಥವಾ ಅವುಗಳು ಇಲ್ಲದೆಯಾಗಲೀ, ಪ್ರತಿಫಲಕ್ಕಾಗಿ ಮಾಡಿದ ಸೇವೆಗಳ ಆಮದು;

(ಸಿ) ಪ್ರತಿಫಲವಿಲ್ಲದೆ ಮಾಡಲಾದ ಅಥವಾ ಮಾಡಲು ಒಪ್ಪಿರುವ ಅನುಸೂಚಿ I ರಲ್ಲಿ ನಿರ್ದಿಷ್ಟಪಡಿಸಿದ ಚಟುವಟಿಕೆಗಳು;

(ಡಿ) ಅನುಸೂಚಿ II ರಲ್ಲಿ ಉಲ್ಲೇಖಿಸಿದಂತೆ ಸರಕುಗಳ ಪೂರೈಕೆ ಅಥವಾ ಸೇವೆಗಳ ಪೂರೈಕೆ ಎಂದು ಪರಿಗಣಿಸಬೇಕಾದ ಚಟುವಟಿಕೆಗಳು.

(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ ಈ ಕೆಳಕಂಡವುಗಳನ್ನು ಸರಕುಗಳ ಪೂರೈಕೆಯೂ ಅಲ್ಲ ಅಥವಾ ಸೇವೆಗಳ ಪೂರೈಕೆಯೂ ಅಲ್ಲ ಎಂದು ಪರಿಗಣಿಸತಕ್ಕದ್ದು –

(ಎ) ಅನುಸೂಚಿ III ರಲ್ಲಿ ನಿರ್ದಿಷ್ಟಪಡಿಸಲಾದ ಚಟುವಟಿಕೆಗಳು ಅಥವಾ ವ್ಯವಹಾರಗಳು; ಅಥವಾ

(ಬಿ) ಪರಿಷತ್ತಿನ ಶಿಫಾರಸ್ಸಿನ ಅನ್ವಯ ಸರ್ಕಾರವು ಅಧಿಸೂಚಿಸಬಹುದಾದ, ಕೇಂದ್ರ ಸರ್ಕಾರ, ಒಂದು ರಾಜ್ಯ ಸರ್ಕಾರ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರಗಳು, ಸಾರ್ವಜನಿಕ ಪ್ರಾಧಿಕಾರಗಳಾಗಿ ಕೈಗೊಂಡ, ಅಂತಹ ಚಟುವಟಿಕೆಗಳು ಅಥವಾ ವ್ಯವಹಾರಗಳು;

(3) ಉಪಪ್ರಕರಣ (1) ಮತ್ತು (2)ರ ಉಪಬಂಧಗಳಿಗೆ ಒಳಪಟ್ಟು, ಪರಿಷತ್ತಿನ ಶಿಫಾರಸ್ಸಿನ ಅನ್ವಯ ಸರ್ಕಾರವು ಅಧಿಸೂಚನೆಯ ಮೂಲಕ ವ್ಯವಹಾರಗಳನ್ನು,–

(ಎ) ಸರಕುಗಳ ಪೂರೈಕೆ ಎಂದು ಮತ್ತು ಸೇವೆಗಳ ಪೂರೈಕೆಯಲ್ಲವೆಂದೂ; ಅಥವಾ

(ಬಿ) ಸೇವೆಗಳ ಪೂರೈಕೆ ಎಂದು ಮತ್ತು ಸರಕುಗಳ ಪೂರೈಕೆಯಲ್ಲವೆಂದೂ,

– ಪರಿಗಣಿಸಲು ನಿರ್ದಿಷ್ಟಪಡಿಸಬಹುದು.

8. ಸಂಯುಕ್ತ ಮತ್ತು ಮಿಶ್ರ ಪೂರೈಕೆಗಳ ಮೇಲೆ ತೆರಿಗೆ ಬಾಧ್ಯತೆ.– ಒಂದು ಸಂಯುಕ್ತ ಪೂರೈಕೆಯ ಅಥವಾ ಒಂದು ಮಿಶ್ರ ಪೂರೈಕೆಯ ಮೇಲಿನ ತೆರಿಗೆ ಬಾಧ್ಯತೆಯನ್ನು ಈ ಕೆಳಕಂಡ ವಿಧಾನದಲ್ಲಿ ನಿರ್ಧರಿಸತಕ್ಕದ್ದು, ಎಂದರೆ,–

(ಎ) ಎರಡು ಅಥವಾ ಹೆಚ್ಚಿನ ಪೂರೈಕೆಗಳನ್ನು ಒಳಗೊಂಡಿರುವ, ಅವುಗಳಲ್ಲಿ ಒಂದು ಪ್ರಧಾನ ಪೂರೈಕೆಯಾಗಿರುವಂತಹ, ಒಂದು ಸಂಯುಕ್ತ ಪೂರೈಕೆಯನ್ನು ಅಂತಹ ಪ್ರಧಾನ ಪೂರೈಕೆಯ ಪೂರೈಕೆಯಾಗಿ ಪರಿಗಣಿಸತಕ್ಕದ್ದು; ಮತ್ತು

(ಬಿ) ಎರಡು ಅಥವಾ ಹೆಚ್ಚಿನ ಪೂರೈಕೆಗಳನ್ನು ಒಳಗೊಂಡಿರುವ, ಒಂದು ಮಿಶ್ರ ಪೂರೈಕೆಯನ್ನು, ಆ ಪೂರೈಕೆಗಳಲ್ಲಿ ಅತಿ ಹೆಚ್ಚಿನ ತೆರಿಗೆ ದರ ಅನ್ವಯವಾಗುವ ನಿರ್ದಿಷ್ಟ ಪೂರೈಕೆಯ ಪೂರೈಕೆಯಾಗಿ ಪರಿಗಣಿಸತಕ್ಕದ್ದು.

9. ವಿಧಿಸುವಿಕೆ ಹಾಗೂ ಸಂಗ್ರಹ.– (1) ಉಪ–ಪ್ರಕರಣ (2)ರ ಉಪಬಂಧಗಳಿಗೆ ಒಳಪಟ್ಟು, ಮಾನವ ಉಪಭೋಗಕ್ಕಾಗಿ ಮಾಡಿದ ಮದ್ಯಪಾನೀಯಗಳ ಪೂರೈಕೆಯನ್ನು ಹೊರತು ಪಡಿಸಿದ, ರಾಜ್ಯದೊಳಗಿನ ಎಲ್ಲಾ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಗಳ ಪ್ರಕರಣ 15ರ ಅಡಿಯಲ್ಲಿ ನಿರ್ಧರಿಸಲಾದ ಮೌಲ್ಯದ ಮೇಲೆ, ಈ ಸಂಬಂಧದಲ್ಲಿ, ಪರಿಷತ್ತಿನ ಶಿಫಾರಸ್ಸಿನ ಅನ್ವಯ, ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದ, ಆದರೆ ಶೇಕಡ ಇಪ್ಪತ್ತನ್ನು ಮೀರದ, ಅಂತಹ ದರದಲ್ಲಿ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಎಂದು ಕರೆಯಲ್ಪಡುವ ತೆರಿಗೆಯನ್ನು ವಿಧಿಸತಕ್ಕದ್ದು ಮತ್ತು ಅದನ್ನು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಸಂಗ್ರಹಿಸತಕ್ಕದ್ದು ಹಾಗೂ ಅದನ್ನು ತೆರಿಗೆದಾಯಕ ವ್ಯಕ್ತಿಯು ಪಾವತಿ ಮಾಡತಕ್ಕದ್ದು.

(2) ಪೆಟ್ರೋಲಿಯಂ ಕಚ್ಚಾ ತೈಲ, ಹೈಸ್ಪೀಡ್ ಡೀಸೆಲ್, ಮೋಟಾರ್ ಸ್ಪಿರಿಟ್ (ಸಾಮಾನ್ಯವಾಗಿ ಹೆಸರಿಸಿದಂತೆ ಪೆಟ್ರೋಲ್), ನೈಸರ್ಗಿಕ ಅನಿಲ ಮತ್ತು ಏವಿಯೇಷನ್ ಟರ್ಬೈನ್ ಇವುಗಳ ಪೂರೈಕೆಗಳ ಮೇಲೆ, ಪರಿಷತ್ತಿನ ಶಿಫಾರಸ್ಸಿನ ಅನ್ವಯ, ಸರ್ಕಾರದಿಂದ ಅಧಿಸೂಚಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರುವಂತೆ, ರಾಜ್ಯ ತೆರಿಗೆಯನ್ನು ವಿಧಿಸತಕ್ಕದ್ದು.

(3) ಪರಿಷತ್ತಿನ ಶಿಫಾರಸ್ಸಿನ ಅನ್ವಯ, ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಿದ ಅಂತಹ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಯ ವರ್ಗಗಳ ಮೇಲಿನ ತೆರಿಗೆಯನ್ನು, ಹಿಮ್ಮುಖ ವಿಧಿಸುವಿಕೆ ಆಧಾರದಲ್ಲಿ, ಆ ಸರಕು

ಅಥವಾ ಸೇವೆಗಳು ಅಥವಾ ಅವುಗಳೆರಡನ್ನು ಸ್ವೀಕರಿಸುವವನು ಪಾವತಿ ಮಾಡತಕ್ಕದ್ದು ಮತ್ತು ಆ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಗೆ ಸಂಬಂಧಿಸಿದಂತೆ ತೆರಿಗೆಯನ್ನು ಪಾವತಿಸಲು ಬಾಧ್ಯತೆಯುಳ್ಳ ವ್ಯಕ್ತಿಯಾಗಿದ್ದರೆ ಹೇಗೋ ಹಾಗೆ ಈ ಅಧಿನಿಯಮದ ಎಲ್ಲಾ ಉಪಬಂಧಗಳು ಅಂತಹ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡನ್ನು ಸ್ವೀಕರಿಸುವವನಿಗೆ ಅನ್ವಯವಾಗತಕ್ಕದ್ದು.

(4) ನೋಂದಾಯಿತನಲ್ಲದ ಒಬ್ಬ ಪೂರೈಕೆದಾರನಿಂದ ಒಬ್ಬ ನೋಂದಾಯಿತ ವ್ಯಕ್ತಿಗೆ ಆದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಗೆ ಸಂಬಂಧಿಸಿದಂತೆ ರಾಜ್ಯ ತೆರಿಗೆಯನ್ನು, ಹಿಮ್ಮುಖ ವಿಧಿಸುವಿಕೆ ಆಧಾರದಲ್ಲಿ ಅಂತಹ ನೋಂದಾಯಿತ ವ್ಯಕ್ತಿಯು ಸ್ವೀಕರಿಸುವವನಾಗಿ ಸಂದಾಯ ಮಾಡತಕ್ಕದ್ದು ಮತ್ತು ಆ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಗೆ ಸಂಬಂಧಿಸಿದಂತೆ ತೆರಿಗೆಯನ್ನು ಪಾವತಿಸಲು ಬಾಧ್ಯತೆಯುಳ್ಳ ವ್ಯಕ್ತಿಯಾಗಿ ಈ ಅಧಿನಿಯಮದ ಎಲ್ಲಾ ಉಪಬಂಧಗಳು ಅಂತಹ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡನ್ನು ಸ್ವೀಕರಿಸುವವನಿಗೆ ಅನ್ವಯವಾಗತಕ್ಕದ್ದು.

(5) ಪರಿಷತ್ತಿನ ಶಿಫಾರಸ್ಸಿನ ಅನ್ವಯ, ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದ ಅಂಥ ಸೇವೆಗಳ ವರ್ಗಗಳ, ರಾಜ್ಯದೊಳಗಿನ ಪೂರೈಕೆಗಳ ಮೇಲಿನ ತೆರಿಗೆಯನ್ನು, ಅಂತಹ ಸೇವೆಗಳು ತಮ್ಮ ಮುಖಾಂತರ ಪೂರೈಕೆಯಾಗಿದ್ದಲ್ಲಿ, ವಿದ್ಯುನ್ಮಾನ ವಾಣಿಜ್ಯ ನಿರ್ವಾಹಕನು ಪಾವತಿ ಮಾಡತಕ್ಕದ್ದು ಮತ್ತು ತಾನೇ ಅಂಥ ಸೇವೆಗಳ ಪೂರೈಕೆದಾರನೆಂಬಂತೆ ಆ ಸೇವೆಗಳ ಪೂರೈಕೆಗೆ ಸಂಬಂಧಿಸಿದ ತೆರಿಗೆಯನ್ನು ಪಾವತಿಸಲು ಬಾಧ್ಯತೆಯುಳ್ಳ ವ್ಯಕ್ತಿಯಾಗಿ ಈ ಅಧಿನಿಯಮದ ಎಲ್ಲಾ ಉಪಬಂಧಗಳು ಅಂಥ ವಿದ್ಯುನ್ಮಾನ ವಾಣಿಜ್ಯ ನಿರ್ವಾಹಕನಿಗೆ ಅನ್ವಯವಾಗತಕ್ಕದ್ದು:

ಪರಂತು, ಒಬ್ಬ ವಿದ್ಯುನ್ಮಾನ ವಾಣಿಜ್ಯ ನಿರ್ವಾಹಕನು ತೆರಿಗೆದಾಯಕ ಕ್ಷೇತ್ರದಲ್ಲಿ ಭೌತಿಕವಾಗಿ ಉಪಸ್ಥಿತನಿಲ್ಲದಿದ್ದಲ್ಲಿ, ಯಾವುದೇ ಉದ್ದೇಶಕ್ಕಾಗಿ ತೆರಿಗೆದಾಯಕ ಕ್ಷೇತ್ರದಲ್ಲಿ ಸದರಿ ವಿದ್ಯುನ್ಮಾನ ವಾಣಿಜ್ಯ ನಿರ್ವಾಹಕನನ್ನು ಪ್ರತಿನಿಧಿಸುವ ಯಾವುದೇ ವ್ಯಕ್ತಿಯು, ತೆರಿಗೆಯನ್ನು ಸಂದಾಯ ಮಾಡುವುದಕ್ಕೆ ಬಾಧ್ಯನಾಗಿರತಕ್ಕದ್ದು:

ಮತ್ತು ಪರಂತು, ಒಬ್ಬ ವಿದ್ಯುನ್ಮಾನ ವಾಣಿಜ್ಯ ನಿರ್ವಾಹಕನು ತೆರಿಗೆದಾಯಕ ಕ್ಷೇತ್ರದಲ್ಲಿ ಭೌತಿಕವಾಗಿ ಉಪಸ್ಥಿತನಿಲ್ಲದಿದ್ದಲ್ಲಿ ಹಾಗೂ ಸದರಿ ಕ್ಷೇತ್ರದಲ್ಲಿ ತನ್ನ ಪ್ರತಿನಿಧಿಯನ್ನು ಸಹ ಅವನು ಹೊಂದಿರದಿದ್ದಲ್ಲಿ, ಅಂತಹ ವಿದ್ಯುನ್ಮಾನ ವಾಣಿಜ್ಯ ನಿರ್ವಾಹಕನು ತೆರಿಗೆಯನ್ನು ಸಂದಾಯ ಮಾಡುವ ಉದ್ದೇಶಕ್ಕಾಗಿ ತೆರಿಗೆದಾಯಕ ಕ್ಷೇತ್ರದಲ್ಲಿ ಒಬ್ಬ ವ್ಯಕ್ತಿಯನ್ನು ನೇಮಿಸತಕ್ಕದ್ದು ಮತ್ತು ಅಂಥ ವ್ಯಕ್ತಿಯು ತೆರಿಗೆಯನ್ನು ಸಂದಾಯ ಮಾಡುವುದಕ್ಕೆ ಬಾಧ್ಯನಾಗಿರತಕ್ಕದ್ದು.

10. ರಾಜಿ ತೆರಿಗೆ ವಿಧಿಸುವಿಕೆ.– (1) ಈ ಅಧಿನಿಯಮದಲ್ಲಿ ಒಳಗೊಂಡಿರುವ ಯಾವುದಕ್ಕಾದರೂ ತದ್ವಿರುದ್ಧವಾದುದು ಏನೇ ಇದ್ದರೂ, ಆದರೆ ಪ್ರಕರಣ 9ರ ಉಪಪ್ರಕರಣ (3) ಮತ್ತು (4)ರ ಉಪಬಂಧಗಳಿಗೆ ಒಳಪಟ್ಟು, ಹಿಂದಿನ ಹಣಕಾಸು ವರ್ಷದಲ್ಲಿ ಐವತ್ತು ಲಕ್ಷ ರೂಪಾಯಿಗಳನ್ನು ಮೀರಿರದ ಸಮಗ್ರ ವಹಿವಾಟು ಹೊಂದಿದ ಒಬ್ಬ ನೋಂದಾಯಿತ ವ್ಯಕ್ತಿಯು, ಸಂದಾಯ ಮಾಡಬೇಕಾದ ತೆರಿಗೆಯ ಬದಲು, ನಿಯಮಿಸಬಹುದಾದ ಅಂಥ ದರದಲ್ಲಿ ಲೆಕ್ಕಹಾಕಲಾದ ಆದರೆ,–

(ಎ) ತಯಾರಿಕನಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿನ ವಹಿವಾಟಿನ ಶೇಕಡಾ ಒಂದರಷ್ಟನ್ನು;

(ಬಿ) ಅನುಸೂಚಿ IIರ ಕಂಡಿಕೆ 6ರ ಖಂಡ (ಬಿ)ದಲ್ಲಿ ಉಲ್ಲೇಖಿಸಿರುವ ಪೂರೈಕೆ ಮಾಡುವುದರಲ್ಲಿ ತೊಡಗಿರುವ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿನ ವಹಿವಾಟಿನ ಶೇಕಡಾ ಎರಡುವರೆಯಷ್ಟನ್ನು; ಮತ್ತು

(ಸಿ) ಯಾವುದೇ ಇತರ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿನ ವಹಿವಾಟಿನ ಶೇಕಡಾ ಅರ್ಧದಷ್ಟನ್ನು,

– ಮೀರದ ಒಂದು ಮೊತ್ತವನ್ನು, ನಿಯಮಿಸಬಹುದಾದ ಅಂಥ ಷರತ್ತುಗಳು ಮತ್ತು ನಿರ್ಬಂಧಗಳಿಗೆ ಒಳಪಟ್ಟು, ಸಂದಾಯ ಮಾಡಲು ಆಯ್ಕೆ ಮಾಡಿಕೊಳ್ಳಬಹುದು:

ಪರಂತು, ಸದರಿ ಮಿತಿಯನ್ನು, ಐವತ್ತು ಲಕ್ಷ ರೂಪಾಯಿಗಳಿಂದ ಒಂದು ಕೋಟಿ ರೂಪಾಯಿಗಳನ್ನು ಮೀರದಂತೆ, ಪರಿಷತ್ತು ಶಿಫಾರಸ್ಸು ಮಾಡಬಹುದಾದ ಅಂಥ ಹೆಚ್ಚಿನ ಮೊತ್ತಕ್ಕೆ, ಸರ್ಕಾರವು ಅಧಿಸೂಚನೆಯ ಮೂಲಕ ಹೆಚ್ಚಳ ಮಾಡಬಹುದು.

(2) ನೋಂದಾಯಿತ ವ್ಯಕ್ತಿಯು, ಉಪ–ಪ್ರಕರಣ (1)ರ ಅಡಿಯಲ್ಲಿ ಆಯ್ಕೆ ಮಾಡಿಕೊಳ್ಳಲು ಅರ್ಹನಾಗಿರಬೇಕಾದರೆ,–

(ಎ) ಅವನು ಅನುಸೂಚಿ II ರ ಕಂಡಿಕೆ 6ರ ಖಂಡ (ಬಿ)ಯಲ್ಲಿ ಉಲ್ಲೇಖಿಸಿರುವ ಪೂರೈಕೆಗಳನ್ನು ಹೊರತು ಪಡಿಸಿದ ಸೇವೆಗಳ ಪೂರೈಕೆಯಲ್ಲಿ ತೊಡಗಿರಬಾರದು;

(ಬಿ) ಅವನು ಈ ಅಧಿನಿಯಮದ ಅಡಿಯಲ್ಲಿ ತೆರಿಗೆಯನ್ನು ವಿಧಿಸಲಾಗದಂಥ ಯಾವುದೇ ಸರಕುಗಳನ್ನು ಪೂರೈಕೆ ಮಾಡುವುದರಲ್ಲಿ ತೊಡಗಿರಬಾರದು;

(ಸಿ) ಅವನು ಸರಕುಗಳ ಯಾವುದೇ ಅಂತರ–ರಾಜ್ಯ ಹೊರಮುಖ ಪೂರೈಕೆ ಮಾಡುವುದರಲ್ಲಿ ತೊಡಗಿರಬಾರದು;

(ಡಿ) ಅವನು ಪ್ರಕರಣ 52ರ ಅಡಿಯಲ್ಲಿ ಮೂಲದಲ್ಲಿ ತೆರಿಗೆಯನ್ನು ಸಂಗ್ರಹಿಸುವುದು ಅಗತ್ಯವಿರುವಂಥ ಒಬ್ಬ ವಿದ್ಯುನ್ಮಾನ ವಾಣಿಜ್ಯದ ನಿರ್ವಾಹಕನ ಮೂಲಕ ಯಾವುದೇ ಸರಕುಗಳನ್ನು ಪೂರೈಕೆ ಮಾಡುವುದರಲ್ಲಿ ತೊಡಗಿರಬಾರದು; ಅಥವಾ

(ಇ) ಅವನು ಪರಿಷತ್ತಿನ ಶಿಫಾರಸ್ಸಿನ ಮೇಲೆ ಅಧಿಸೂಚಿಸಬಹುದಾದ ಸರಕುಗಳ ಉತ್ಪಾದಕನಾಗಿರಬಾರದು:

ಪರಂತು, ಒಂದಕ್ಕಿಂತ ಹೆಚ್ಚಿನ ನೋಂದಾಯಿತ ವ್ಯಕ್ತಿಗಳು (ಆದಾಯ ತೆರಿಗೆ ಅಧಿನಿಯಮ, 1961ರ (1961ರ ಕೇಂದ್ರ ಅಧಿನಿಯಮ 43) ಅಡಿಯಲ್ಲಿ ನೀಡಿದ) ಒಂದೇ ಶಾಶ್ವತ ಖಾತೆ ಸಂಖ್ಯೆಯನ್ನು ಹೊಂದಿದ್ದಲ್ಲಿ, ಅಂಥ ಎಲ್ಲಾ ನೋಂದಾಯಿತ ವ್ಯಕ್ತಿಗಳು ಉಪಪ್ರಕರಣ (1)ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡಲು ಆಯ್ಕೆ ಮಾಡಿಕೊಂಡ ಹೊರತು, ಆ ಉಪಪ್ರಕರಣದ ಅಡಿಯಲ್ಲಿನ ಯೋಜನೆಗೆ ಆ ನೋಂದಾಯಿತ ವ್ಯಕ್ತಿಯು ಅರ್ಹನಿರತಕ್ಕದ್ದಲ್ಲ.

(3) ಒಬ್ಬ ನೋಂದಾಯಿತ ವ್ಯಕ್ತಿಯಿಂದ ಉಪಪ್ರಕರಣ (1)ರ ಅಡಿಯಲ್ಲಿ ಮಾಡಿದ ಆಯ್ಕೆಯು, ಒಂದು ಹಣಕಾಸಿನ ವರ್ಷದ ಅವಧಿಯಲ್ಲಿ ಆತನ ಸಮಗ್ರ ವಹಿವಾಟು ಉಪಪ್ರಕರಣ (1)ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಮಿತಿಯನ್ನು ಮೀರಿದ ದಿನದಿಂದ ಜಾರಿಗೆ ಬರುವಂತೆ ರದ್ದುಗೊಳ್ಳತಕ್ಕದ್ದು.

(4) ಉಪಪ್ರಕರಣ (1)ರ ಉಪಬಂಧಗಳು ಅನ್ವಯವಾಗುವ ತೆರಿಗೆದಾಯಕ ವ್ಯಕ್ತಿಯು, ಆತನಿಂದ ಮಾಡಲಾದ ಪೂರೈಕೆಗಳ ಮೇಲೆ ಅವುಗಳನ್ನು ಸ್ವೀಕರಿಸುವವನಿಂದ ಯಾವುದೇ ತೆರಿಗೆಯನ್ನು ಸಂಗ್ರಹಿಸತಕ್ಕದ್ದಲ್ಲ ಹಾಗೆಯೇ ಆತನು ಯಾವುದೇ ಹೂಡುವಳಿ ತೆರಿಗೆ ಜಮೆಗೆ ಹಕ್ಕುಳ್ಳವನಾಗಿರತಕ್ಕದ್ದಲ್ಲ.

(5) ಉಪಪ್ರಕರಣ (1)ರ ಅಡಿಯಲ್ಲಿ ತಾನು ಅರ್ಹನಲ್ಲದಿದ್ದರೂ ಸಹ ಒಬ್ಬ ತೆರಿಗೆದಾಯಕ ವ್ಯಕ್ತಿಯು ಅದರಡಿ ತೆರಿಗೆ ಸಂದಾಯ ಮಾಡಿದ್ದಾನೆ ಎಂದು ನಂಬಲು ಒಬ್ಬ ಯುಕ್ತ ಅಧಿಕಾರಿಗೆ ಕಾರಣಗಳಿದ್ದರೆ, ಈ ಅಧಿನಿಯಮದ ಯಾವುದೇ ಇತರ ಉಪಬಂಧಗಳ ಅಡಿಯಲ್ಲಿ ಆತನಿಂದ ಸಂದಾಯ ಮಾಡಬೇಕಾಗಬಹುದಾದ ಯಾವುದೇ ತೆರಿಗೆಯ ಜೊತೆಗೆ ದಂಡಕ್ಕೆ ಅಂತಹ ವ್ಯಕ್ತಿ ಬಾಧ್ಯನಿರತಕ್ಕದ್ದು ಮತ್ತು ತೆರಿಗೆ ಮತ್ತು ದಂಡದ ನಿರ್ಧರಣೆಗೆ ಪ್ರಕರಣ 73 ಅಥವಾ 74ರ ಉಪಬಂಧಗಳು, ಯಥೋಚಿತ ವ್ಯತ್ಯಾಸಗಳೊಂದಿಗೆ, ಅನ್ವಯವಾಗತಕ್ಕದ್ದು.

11. ತೆರಿಗೆಯಿಂದ ವಿನಾಯಿತಿ ನೀಡುವ ಅಧಿಕಾರ.– (1) ಸಾರ್ವಜನಿಕ ಹಿತಾಸಕ್ತಿ ದೃಷ್ಟಿಯಿಂದ ಹಾಗೆ ಮಾಡುವುದು ಅಗತ್ಯವೆಂದು ಮನಗಂಡರೆ, ಸರ್ಕಾರವು, ಪರಿಷತ್ತಿನ ಶಿಫಾರಸ್ಸಿನ ಅನ್ವಯ ಅಧಿಸೂಚನೆಯ ಮೂಲಕ, ಯಾವುದೇ ನಿರ್ದಿಷ್ಟಪಡಿಸಿದ ವಿವರಣೆಯ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡನ್ನು, ಅವುಗಳ ಮೇಲೆ ವಿಧಿಸಬಹುದಾದ ತೆರಿಗೆಯಿಂದ ಪೂರ್ಣವಾಗಿ ಅಥವಾ ಭಾಗಶಃವಾಗಿ, ಸಾಧಾರಣವಾಗಿ ನಿರುಪಾಧಿಕವಾಗಿಯಾಗಲಿ ಅಥವಾ ಅದರಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು, ಅಂಥ ಅಧಿಸೂಚನೆಯನ್ನು ಹೊರಡಿಸಿದ ಅಂಥ ದಿನಾಂಕದಿಂದ ಪರಿಣಾಮಗೊಳ್ಳುವಂತೆ ವಿನಾಯಿತಿಗೊಳಿಸಬಹುದಾಗಿದೆ.

(2) ಸಾರ್ವಜನಿಕ ಹಿತಾಸಕ್ತಿ ದೃಷ್ಟಿಯಿಂದ ಹಾಗೆ ಮಾಡುವುದು ಅಗತ್ಯವೆಂದು ಮನಗಂಡರೆ, ಪರಿಷತ್ತಿನ ಶಿಫಾರಸ್ಸಿನ ಅನ್ವಯ, ಸರ್ಕಾರವು, ಪ್ರತ್ಯೇಕ ಸಂದರ್ಭಗಳಲ್ಲಿ ವಿಶೇಷ ಆದೇಶದ ಮೂಲಕ, ಅಂಥ ಆದೇಶದಲ್ಲಿ ನಿರೂಪಿಸಲಾಗುವ ಅಸಾಧಾರಣ ಸನ್ನಿವೇಶಗಳಲ್ಲಿ, ತೆರಿಗೆಯನ್ನು ವಿಧಿಸಬಹುದಾದ ಯಾವುದೇ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಮೇಲೆ ಸಂದಾಯ ಮಾಡಬೇಕಾದ ತೆರಿಗೆಯಿಂದ ವಿನಾಯಿತಿಗೊಳಿಸಬಹುದು.

(3) ಉಪಪ್ರಕರಣ (1) ರ ಅಡಿಯಲ್ಲಿ ಹೊರಡಿಸಲಾದ ಯಾವುದೇ ಅಧಿಸೂಚನೆಯ ಅಥವಾ ಉಪಪ್ರಕರಣ (2)ರ ಅಡಿಯಲ್ಲಿ ಹೊರಡಿಸಲಾದ ಆದೇಶದ, ವ್ಯಾಪ್ತಿ ಅಥವಾ ಅನ್ವಯಿಸುವಿಕೆಯನ್ನು ಸ್ಪಷ್ಟೀಕರಿಸುವ ಉದ್ದೇಶಕ್ಕಾಗಿ ಹಾಗೆ ಮಾಡುವುದು ಅವಶ್ಯಕವಾದದು ಅಥವಾ ಸಮಯೋಚಿತವಾದುದು ಎಂದು ಸರ್ಕಾರವು ಪರಿಗಣಿಸಿದರೆ, ಉಪಪ್ರಕರಣ (1)ರ ಅಡಿಯಲ್ಲಿನ ಅಧಿಸೂಚನೆಯನ್ನು ಅಥವಾ ಉಪಪ್ರಕರಣ (2)ರ ಅಡಿಯಲ್ಲಿನ ಆದೇಶವನ್ನು ಹೊರಡಿಸಿದ ಒಂದು ವರ್ಷದ ಒಳಗಿನ ಯಾವುದೇ ಸಮಯದಲ್ಲಿ, ಅಂಥ ಅಧಿಸೂಚನೆ ಅಥವಾ ಸಂದರ್ಭಾನುಸಾರವಾಗಿ ಅಂಥ ಆದೇಶದಲ್ಲಿ ಒಂದು ವಿವರಣೆಯನ್ನು, ಅಧಿಸೂಚನೆಯ ಮೂಲಕ ಸೇರಿಸಬಹುದು ಮತ್ತು ಅಂಥ ಪ್ರತಿಯೊಂದು ವಿವರಣೆಯು, ಅಂಥ ಮೊದಲಿನ ಅಧಿಸೂಚನೆಯ ಅಥವಾ ಸಂದರ್ಭಾನುಸಾರವಾಗಿ ಆದೇಶದ ಭಾಗವಾಗಿ ಯಾವಾಗಲೂ ಇದ್ದ ಹಾಗೆಯೇ ಪರಿಣಾಮವನ್ನು ಹೊಂದಿರತಕ್ಕದ್ದು.

(4) ಪರಿಷತ್ತಿನ ಶಿಫಾರಸ್ಸಿನ ಅನ್ವಯ, ಕೇಂದ್ರ ಸರಕು ಮತ್ತು ಸೇವೆಗಳ ಅಧಿನಿಯಮದ ಪ್ರಕರಣ 11ರ ಉಪಪ್ರಕರಣ (1)ರ ಅಡಿಯಲ್ಲಿ ಕೇಂದ್ರ ಸರ್ಕಾರವು ಹೊರಡಿಸಿದ ಯಾವುದೇ ಅಧಿಸೂಚನೆಯನ್ನು, ಅಥವಾ ಕೇಂದ್ರ ಸರಕು ಮತ್ತು ಸೇವೆಗಳ ಅಧಿನಿಯಮದ ಸದರಿ ಪ್ರಕರಣದ ಉಪಪ್ರಕರಣ (2)ರ ಅಡಿಯಲ್ಲಿ ಹೊರಡಿಸಿದ ಆದೇಶವನ್ನು, ಈ ಅಧಿನಿಯಮದ ಅಡಿಯಲ್ಲಿ ಹೊರಡಿಸಿದ ಒಂದು ಅಧಿಸೂಚನೆ ಅಥವಾ ಸಂದರ್ಭಾನುಸಾರವಾಗಿ ಒಂದು ಆದೇಶ ಎಂದು ಪರಿಭಾವಿಸತಕ್ಕದ್ದು.

ವಿವರಣೆ.– ಈ ಪ್ರಕರಣದ ಉದ್ದೇಶಗಳಿಗಾಗಿ, ಯಾವುದೇ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡಕ್ಕೆ ಸಂಬಂಧಿಸಿದಂತೆ, ಅವುಗಳ ಮೇಲೆ ವಿಧಿಸಬಹುದಾದ ತೆರಿಗೆಯ ವಿನಾಯಿತಿಯನ್ನು, ನಿರುಪಾಧಿಕವಾಗಿ, ಸಂಪೂರ್ಣವಾಗಿ ಅಥವಾ ಭಾಗಶಃವಾಗಿ ನೀಡಿದ್ದರೆ, ಅಂಥ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡನ್ನು ಪೂರೈಕೆಮಾಡುತ್ತಿರುವ ನೋಂದಾಯಿತ ವ್ಯಕ್ತಿಯು ಅಂಥ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಮೇಲೆ, ಪರಿಣಾಮಕಾರಿ ದರಕ್ಕಿಂತಲೂ ಅಧಿಕವಾಗಿ, ತೆರಿಗೆಯನ್ನು ಸಂಗ್ರಹಿಸತಕ್ಕದ್ದಲ್ಲ.

ಅಧ್ಯಾಯ –IV
ಪೂರೈಕೆಯ ಸಮಯ ಮತ್ತು ಮೌಲ್ಯ

12. ಸರಕುಗಳ ಪೂರೈಕೆಯ ಸಮಯ.– (1) ಸರಕುಗಳ ಮೇಲೆ ತೆರಿಗೆಯನ್ನು ಸಂದಾಯ ಮಾಡುವ ಬಾಧ್ಯತೆಯು ಈ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ನಿರ್ಧರಿಸಿದಂತಹ ಪೂರೈಕೆಯ ಸಮಯದಲ್ಲಿ ಉದ್ಭವಿಸತಕ್ಕದ್ದು.

(2) ಸರಕುಗಳ ಪೂರೈಕೆಯ ಸಮಯವು ಈ ಕೆಳಕಂಡ ದಿನಾಂಕಗಳಲ್ಲಿ ಮುಂಚಿನದಾಗಿರತಕ್ಕದ್ದು, ಎಂದರೆ:–

(ಎ) ಪೂರೈಕೆದಾರನಿಂದ ನೀಡಲ್ಪಟ್ಟ ಬೆಲೆಪಟ್ಟಿಯ ದಿನಾಂಕ ಅಥವಾ ಪೂರೈಕೆಗೆ ಸಂಬಂಧಿಸಿದಂತೆ ಪ್ರಕರಣ 31ರ ಉಪಪ್ರಕರಣ (1)ರ ಅಡಿಯಲ್ಲಿ ಬೆಲೆಪಟ್ಟಿಯನ್ನು ಅವನು ನೀಡಲು ಅಗತ್ಯವಿರುವ ಕೊನೆಯ ದಿನಾಂಕ; ಅಥವಾ

(ಬಿ) ಪೂರೈಕೆಗೆ ಸಂಬಂಧಿಸಿದಂತೆ ಸಂದಾಯವನ್ನು ಪೂರೈಕೆದಾರನು ಸ್ವೀಕರಿಸುವ ದಿನಾಂಕ:

ಪರಂತು, ತೆರಿಗೆದಾಯಕ ಸರಕುಗಳ ಪೂರೈಕೆದಾರನು ತೆರಿಗೆ ಬೆಲೆಪಟ್ಟಿಯಲ್ಲಿ ಸೂಚಿಸಲಾಗಿರುವ ಮೊತ್ತಕ್ಕಿಂತ ಒಂದು ಸಾವಿರ ರೂಪಾಯಿವರೆಗಿನ ಮೊತ್ತವನ್ನು ಅಧಿಕವಾಗಿ ಸ್ವೀಕರಿಸಿದ್ದಲ್ಲಿ, ಅಂಥ ಅಧಿಕ ಮೊತ್ತದ ಮಟ್ಟಿಗೆ, ಪೂರೈಕೆಯ ಕಾಲವು, ಸದರಿ ಪೂರೈಕೆದಾರನ ಆಯ್ಕೆಗೆ ಅನುಗುಣವಾಗಿ ಆ ಅಧಿಕ ಮೊತ್ತಕ್ಕೆ ಸಂಬಂಧಿಸಿದ ಬೆಲೆಪಟ್ಟಿಯನ್ನು ನೀಡುವ ದಿನಾಂಕವಾಗಿರತಕ್ಕದ್ದು.

ವಿವರಣೆ 1:– ಖಂಡ (ಎ) ಮತ್ತು ಖಂಡ (ಬಿ)ಗಳ ಉದ್ದೇಶಗಳಿಗಾಗಿ, ಬೆಲೆಪಟ್ಟಿ ಅಥವಾ ಸಂದರ್ಭಾನುಸಾರವಾಗಿ ಸಂದಾಯವು ಒಳಗೊಳ್ಳುವಷ್ಟರ ಮಟ್ಟಿಗೆ ಪೂರೈಕೆಯನ್ನು ಮಾಡಲಾಗಿದೆ ಎಂದು ಪರಿಭಾವಿಸತಕ್ಕದ್ದು.

ವಿವರಣೆ 2:– ಖಂಡ (ಬಿ)ಯ ಉದ್ದೇಶಗಳಿಗಾಗಿ, **"**ಪೂರೈಕೆದಾರನು ಸಂದಾಯವನ್ನು ಸ್ವೀಕರಿಸುವ ದಿನಾಂಕ**"** ಎನ್ನುವುದು ಆತನ ಲೆಕ್ಕಪುಸ್ತಕಗಳಲ್ಲಿ ಸಂದಾಯವು ನಮೂದಾದ ದಿನಾಂಕ ಅಥವಾ ಆತನ ಬ್ಯಾಂಕಿನ ಖಾತೆಯಲ್ಲಿ ಸಂದಾಯವು ಜಮೆಯಾದ ದಿನಾಂಕ, ಇವುಗಳಲ್ಲಿ ಯಾವುದು ಮೊದಲೋ ಅದು ಆಗಿರತಕ್ಕದ್ದು.

(3) ಹಿಮ್ಮುಖ ವಿಧಿಸುವಿಕೆಯ ಆಧಾರದಲ್ಲಿ ಸಂದಾಯ ಮಾಡಿದ ಅಥವಾ ಮಾಡಲು ಬಾಧ್ಯವಿರುವ ತೆರಿಗೆಗೆ ಸಂಬಂಧಿಸಿದ ಪೂರೈಕೆಗಳ ಸಂದರ್ಭದಲ್ಲಿ, ಪೂರೈಕೆಯ ಸಮಯವು ಕೆಳಕಂಡ ದಿನಾಂಕಗಳಲ್ಲಿ ಮೊದಲಿನದಾಗಿರತಕ್ಕದ್ದು, ಎಂದರೆ:–

(ಎ) ಸರಕುಗಳನ್ನು ಸ್ವೀಕರಿಸಿದ ದಿನಾಂಕ; ಅಥವಾ

(ಬಿ) ಸ್ವೀಕರಿಸುವವನ ಲೆಕ್ಕಪುಸ್ತಕಗಳಲ್ಲಿ ನಮೂದಾದಂಥ ಸಂದಾಯದ ದಿನಾಂಕ ಅಥವಾ ಆತನ ಬ್ಯಾಂಕಿನ ಖಾತೆಯಲ್ಲಿ ಸಂದಾಯವನ್ನು ಖರ್ಚು ಹಾಕಿದ ದಿನಾಂಕ, ಇವುಗಳಲ್ಲಿ ಯಾವುದು ಮೊದಲೋ ಅದು; ಅಥವಾ

(ಸಿ) ಪೂರೈಕೆದಾರನಿಂದ ಬೆಲೆಪಟ್ಟಿ ಅಥವಾ ಅದಕ್ಕೆ ಬದಲಾಗಿ ಯಾವುದಾದರೂ ಹೆಸರಿನಿಂದ ಕರೆಯಲಾಗುವ ಯಾವುದೇ ಇತರ ದಸ್ತಾವೇಜನ್ನು ನೀಡುವ ದಿನಾಂಕದಿಂದ ಮೂವತ್ತು ದಿನಗಳ ನಿಕಟ ತರುವಾಯವಾಗಿ ಬರುವ ದಿನಾಂಕ:

ಪರಂತು, ಪೂರೈಕೆಯ ಸಮಯವನ್ನು ಖಂಡ (ಎ) ಅಥವಾ ಖಂಡ (ಬಿ) ಅಥವಾ ಖಂಡ (ಸಿ) ಗಳ ಅಡಿಯಲ್ಲಿ ನಿರ್ಧರಿಸಲು ಸಾಧ್ಯವಾಗದಿದ್ದಲ್ಲಿ, ಪೂರೈಕೆಯ ಸಮಯವು ಪೂರೈಕೆಯನ್ನು ಸ್ವೀಕರಿಸುವವನ ಲೆಕ್ಕಪುಸ್ತಕಗಳಲ್ಲಿ ನಮೂದಾದ ದಿನಾಂಕವಾಗಿರತಕ್ಕದ್ದು;

(4) ಒಬ್ಬ ಪೂರೈಕೆದಾರನು ಮಾಡುವ ವೋಚರ್‌ಗಳ ಪೂರೈಕೆಯ ಸಂದರ್ಭದಲ್ಲಿ, ಪೂರೈಕೆಯ ಸಮಯವು,–

(ಎ) ಪೂರೈಕೆಯನ್ನು ಆ ಸಮಯದಲ್ಲಿಯೇ ಗುರುತಿಸಬಹುದಾದರೆ, ವೋಚರ್‌ನ್ನು ನೀಡಿದ ದಿನಾಂಕವಾಗಿರತಕ್ಕದ್ದು; ಅಥವಾ

(ಬಿ) ಎಲ್ಲಾ ಇತರ ಸಂದರ್ಭಗಳಲ್ಲಿ, ವೋಚರ್‌ನ್ನು ನಗದುಗೊಳಿಸುವ ದಿನಾಂಕವಾಗಿರತಕ್ಕದ್ದು.

(5) ಉಪ–ಪ್ರಕರಣ (2) ಅಥವಾ ಉಪ–ಪ್ರಕರಣ (3) ಅಥವಾ ಉಪಪ್ರಕರಣ (4)ರ ಉಪಬಂಧಗಳ ಅಡಿಯಲ್ಲಿ ಪೂರೈಕೆಯ ಸಮಯವನ್ನು ನಿರ್ಧರಿಸಲು ಸಾಧ್ಯವಾಗದಿದ್ದ ಸಂದರ್ಭದಲ್ಲಿ, ಪೂರೈಕೆಯ ಸಮಯವು,–

(ಎ) ನಿಯತಕಾಲಿಕ ರಿಟರ್ನ್‌ಅನ್ನು ಸಲ್ಲಿಸಬೇಕಿರುವ ಸಂದರ್ಭದಲ್ಲಿ ಅಂಥ ರಿಟರ್ನ್‌ಅನ್ನು ಸಲ್ಲಿಸಬೇಕಾಗಿರುವ ದಿನಾಂಕವಾಗಿರತಕ್ಕದ್ದು; ಅಥವಾ

(ಬಿ) ಯಾವುದೇ ಇತರ ಸಂದರ್ಭದಲ್ಲಿ, ತೆರಿಗೆಯನ್ನು ಸಂದಾಯ ಮಾಡಿದ ದಿನಾಂಕವಾಗಿರತಕ್ಕದ್ದು.

(6) ಯಾವುದೇ ಪ್ರತಿಫಲದ ವಿಳಂಬ ಸಂದಾಯಕ್ಕಾಗಿ ಬಡ್ಡಿ, ವಿಳಂಬ ಶುಲ್ಕ ಅಥವಾ ದಂಡದ ರೂಪದಲ್ಲಿ ಪೂರೈಕೆಯ ಮೌಲ್ಯದಲ್ಲಾಗುವ ಹೆಚ್ಚಳಕ್ಕೆ ಸಂಬಂಧಿಸಿರುವಷ್ಟರ ಮಟ್ಟಿಗೆ, ಪೂರೈಕೆಯ ಸಮಯವು, ಪೂರೈಕೆದಾರನು ಮೌಲ್ಯದ ಅಂಥ ಹೆಚ್ಚಳವನ್ನು ಸ್ವೀಕರಿಸುವ ದಿನಾಂಕವಾಗಿರತಕ್ಕದ್ದು.

13. ಸೇವೆಗಳ ಪೂರೈಕೆಯ ಸಮಯ.– (1) ಸೇವೆಗಳ ಮೇಲೆ ತೆರಿಗೆಯನ್ನು ಸಂದಾಯ ಮಾಡುವ ಬಾಧ್ಯತೆಯು ಈ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ನಿರ್ಧರಿಸಿದಂಥ ಪೂರೈಕೆಯ ಸಮಯದಲ್ಲಿ ಉದ್ಭವಿಸತಕ್ಕದ್ದು.

(2) ಸೇವೆಗಳ ಪೂರೈಕೆಯ ಸಮಯವು ಈ ಕೆಳಕಂಡ ದಿನಾಂಕಗಳಲ್ಲಿ ಮುಂಚಿನದಾಗಿರತಕ್ಕದ್ದು, ಎಂದರೆ:–

(ಎ) ಪ್ರಕರಣ 31ರ ಉಪಪ್ರಕರಣ (2)ರ ಅಡಿಯಲ್ಲಿ ನಿಯಮಿಸಲಾದ ಅವಧಿಯೊಳಗಾಗಿ ಬೆಲೆಪಟ್ಟಿಯನ್ನು ನೀಡಲಾಗಿದ್ದರೆ, ಪೂರೈಕೆದಾರನಿಂದ ನೀಡಲ್ಪಟ್ಟ ಬೆಲೆಪಟ್ಟಿಯ ದಿನಾಂಕ ಅಥವಾ ಸಂದಾಯವನ್ನು ಸ್ವೀಕರಿಸಿದ ದಿನಾಂಕ, ಇವುಗಳಲ್ಲಿ ಯಾವುದು ಮೊದಲೋ ಅದು; ಅಥವಾ

(ಬಿ) ಪ್ರಕರಣ 31ರ ಉಪಪ್ರಕರಣ (2)ರ ಅಡಿಯಲ್ಲಿ ನಿಯಮಿಸಲಾದ ಅವಧಿಯೊಳಗಾಗಿ ಬೆಲೆಪಟ್ಟಿಯನ್ನು ನೀಡಿಲ್ಲದಿದ್ದರೆ, ಸೇವೆಯನ್ನು ಒದಗಿಸಿದ ದಿನಾಂಕ ಅಥವಾ ಸಂದಾಯವನ್ನು ಸ್ವೀಕರಿಸಿದ ದಿನಾಂಕ, ಇವುಗಳಲ್ಲಿ ಯಾವುದು ಮೊದಲೋ ಅದು; ಅಥವಾ

(ಸಿ) ಖಂಡ (ಎ) ಅಥವಾ ಖಂಡ (ಬಿ)ಯ ಉಪಬಂಧಗಳು ಅನ್ವಯವಾಗದ ಸಂದರ್ಭದಲ್ಲಿ, ಸ್ವೀಕರಿಸುವವನು, ತನ್ನ ಲೆಕ್ಕಪುಸ್ತಕಗಳಲ್ಲಿ ಸೇವೆಯ ಸ್ವೀಕೃತಿಯನ್ನು ತೋರಿಸಿರುವ ದಿನಾಂಕ:

ಪರಂತು, ತೆರಿಗೆದಾಯಕ ಸೇವೆಗಳ ಪೂರೈಕೆದಾರನು ತೆರಿಗೆ ಬೆಲೆಪಟ್ಟಿಯಲ್ಲಿ ಸೂಚಿಸಲಾಗಿರುವ ಮೊತ್ತಕ್ಕಿಂತ ಒಂದು ಸಾವಿರ ರೂಪಾಯಿವರೆಗಿನ ಮೊತ್ತವನ್ನು ಅಧಿಕವಾಗಿ ಸ್ವೀಕರಿಸಿದ್ದಲ್ಲಿ, ಅಂಥ ಅಧಿಕ ಮೊತ್ತದ ಮಟ್ಟಿಗೆ, ಪೂರೈಕೆಯ ಸಮಯವು, ಸದರಿ ಪೂರೈಕೆದಾರನ ಆಯ್ಕೆಗೆ ಅನುಗುಣವಾಗಿ ಆ ಅಧಿಕ ಮೊತ್ತಕ್ಕೆ ಸಂಬಂಧಿಸಿದ ಬೆಲೆಪಟ್ಟಿಯನ್ನು ನೀಡುವ ದಿನಾಂಕವಾಗಿರತಕ್ಕದ್ದು.

ವಿವರಣೆ.– ಖಂಡ (ಎ) ಮತ್ತು ಖಂಡ (ಬಿ)ಗಳ ಉದ್ದೇಶಗಳಿಗಾಗಿ,–

(i) ಬೆಲೆಪಟ್ಟಿ ಅಥವಾ ಸಂದರ್ಭಾನುಸಾರವಾಗಿ ಸಂದಾಯವು ಒಳಗೊಳ್ಳುವಷ್ಟರ ಮಟ್ಟಿಗೆ ಪೂರೈಕೆಯನ್ನು ಮಾಡಲಾಗಿದೆ ಎಂದು ಪರಿಭಾವಿಸತಕ್ಕದ್ದು.

(ii) **"**ಸಂದಾಯವನ್ನು ಸ್ವೀಕರಿಸುವ ದಿನಾಂಕ**"** ಎನ್ನುವುದು ಪೂರೈಕೆದಾರನ ಲೆಕ್ಕಪುಸ್ತಕಗಳಲ್ಲಿ ಸಂದಾಯವು ನಮೂದಾದ ದಿನಾಂಕ ಅಥವಾ ಆತನ ಬ್ಯಾಂಕಿನ ಖಾತೆಯಲ್ಲಿ ಸಂದಾಯವು ಜಮೆಯಾದ ದಿನಾಂಕ, ಇವುಗಳಲ್ಲಿ ಯಾವುದು ಮೊದಲೋ ಅದು ಆಗಿರತಕ್ಕದ್ದು.

(3) ಹಿಮ್ಮುಖ ವಿಧಿಸುವಿಕೆಯ ಆಧಾರದಲ್ಲಿ ಸಂದಾಯ ಮಾಡಿದ ಅಥವಾ ಮಾಡಲು ಬಾಧ್ಯವಿರುವ ತೆರಿಗೆಗೆ ಸಂಬಂಧಿಸಿದ ಪೂರೈಕೆಗಳ ಸಂದರ್ಭದಲ್ಲಿ, ಪೂರೈಕೆಯ ಸಮಯವು ಕೆಳಕಂಡ ದಿನಾಂಕಗಳಲ್ಲಿ ಮೊದಲಿನದಾಗಿರತಕ್ಕದ್ದು, ಎಂದರೆ:–

(ಎ) ಸ್ವೀಕರಿಸುವವನ ಲೆಕ್ಕಪುಸ್ತಕಗಳಲ್ಲಿ ನಮೂದಾದಂಥ ಸಂದಾಯದ ದಿನಾಂಕ ಅಥವಾ ಆತನ ಬ್ಯಾಂಕಿನ ಖಾತೆಯಲ್ಲಿ ಸಂದಾಯವನ್ನು ಖರ್ಚು ಹಾಕಿದ ದಿನಾಂಕ, ಇವುಗಳಲ್ಲಿ ಯಾವುದು ಮೊದಲೋ ಅದು; ಅಥವಾ

(ಬಿ) ಪೂರೈಕೆದಾರನಿಂದ ಬೆಲೆಪಟ್ಟಿ ಅಥವಾ ಅದಕ್ಕೆ ಬದಲಾಗಿ ಯಾವುದಾದರೂ ಹೆಸರಿನಿಂದ ಕರೆಯಲಾಗುವ ಯಾವುದೇ ಇತರ ದಸ್ತಾವೇಜನ್ನು ನೀಡುವ ದಿನಾಂಕದಿಂದ ಅರವತ್ತು ದಿನಗಳ ನಿಕಟ ತರುವಾಯವಾಗಿ ಬರುವ ದಿನಾಂಕ:

ಪರಂತು, ಪೂರೈಕೆಯ ಸಮಯವನ್ನು ಖಂಡ (ಎ) ಅಥವಾ ಖಂಡ (ಬಿ) ಗಳ ಅಡಿಯಲ್ಲಿ ನಿರ್ಧರಿಸಲು ಸಾಧ್ಯವಾಗದಿದ್ದಲ್ಲಿ, ಪೂರೈಕೆಯ ಸಮಯವು ಪೂರೈಕೆಯನ್ನು ಸ್ವೀಕರಿಸುವವನ ಲೆಕ್ಕಪುಸ್ತಕಗಳಲ್ಲಿ ನಮೂದಾದ ದಿನಾಂಕವಾಗಿರತಕ್ಕದ್ದು:

ಮತ್ತು ಪರಂತು, ಸಹವರ್ತಿ ಉದ್ಯಮದಿಂದಾಗುವ ಪೂರೈಕೆಯ ಸಂದರ್ಭದಲ್ಲಿ ಸೇವೆಗಳ ಪೂರೈಕೆದಾರನ ಸ್ಥಾನ ಭಾರತದ ಹೊರಗಿದ್ದಾಗ, ಪೂರೈಕೆಯ ಸಮಯವು, ಪೂರೈಕೆಯನ್ನು ಸ್ವೀಕರಿಸುವವನ ಲೆಕ್ಕಪುಸ್ತಕಗಳಲ್ಲಿ ನಮೂದಿಸಿದ ದಿನಾಂಕ ಅಥವಾ ಸಂದಾಯದ ದಿನಾಂಕ, ಇವುಗಳಲ್ಲಿ ಯಾವುದು ಮೊದಲೋ ಅದು ಆಗಿರತಕ್ಕದ್ದು.

(4) ಒಬ್ಬ ಪೂರೈಕೆದಾರನು ಮಾಡುವ ವೋಚರ್‌ಗಳ ಪೂರೈಕೆಯ ಸಂದರ್ಭದಲ್ಲಿ, ಪೂರೈಕೆಯ ಸಮಯವು,–

(ಎ) ಪೂರೈಕೆಯನ್ನು ಆ ಸಮಯದಲ್ಲಿಯೇ ಗುರುತಿಸಬಹುದಾದರೆ, ವೋಚರ್‌ನ್ನು ನೀಡಿದ ದಿನಾಂಕವಾಗಿರತಕ್ಕದ್ದು; ಅಥವಾ

(ಬಿ) ಎಲ್ಲಾ ಇತರ ಸಂದರ್ಭಗಳಲ್ಲಿ, ವೋಚರ್‌ನ್ನು ನಗದುಗೊಳಿಸುವ ದಿನಾಂಕವಾಗಿರತಕ್ಕದ್ದು.

(5) ಉಪ–ಪ್ರಕರಣ (2) ಅಥವಾ ಉಪ–ಪ್ರಕರಣ (3) ಅಥವಾ ಉಪಪ್ರಕರಣ (4) ರ ಉಪಬಂಧಗಳ ಅಡಿಯಲ್ಲಿ ಪೂರೈಕೆಯ ಸಮಯವನ್ನು ನಿರ್ಧರಿಸಲು ಸಾಧ್ಯವಾಗದಿದ್ದ ಸಂದರ್ಭದಲ್ಲಿ, ಪೂರೈಕೆಯ ಸಮಯವು,–

(ಎ) ನಿಯತಕಾಲಿಕ ರಿಟರ್ನ್‌ಅನ್ನು ಸಲ್ಲಿಸಬೇಕಿರುವ ಸಂದರ್ಭದಲ್ಲಿ ಅಂಥ ರಿಟರ್ನ್‌ಅನ್ನು ಸಲ್ಲಿಸಬೇಕಾಗಿರುವ ದಿನಾಂಕವಾಗಿರತಕ್ಕದ್ದು; ಅಥವಾ

(ಬಿ) ಯಾವುದೇ ಇತರ ಸಂದರ್ಭದಲ್ಲಿ, ತೆರಿಗೆಯನ್ನು ಸಂದಾಯ ಮಾಡಿದ ದಿನಾಂಕವಾಗಿರತಕ್ಕದ್ದು.

(6) ಯಾವುದೇ ಪ್ರತಿಫಲದ ವಿಳಂಬ ಸಂದಾಯಕ್ಕಾಗಿ ಬಡ್ಡಿ, ವಿಳಂಬ ಶುಲ್ಕ ಅಥವಾ ದಂಡದ ರೂಪದಲ್ಲಿ ಪೂರೈಕೆಯ ಮೌಲ್ಯದಲ್ಲಾಗುವ ಹೆಚ್ಚಳಕ್ಕೆ ಸಂಬಂಧಿಸಿರುವಷ್ಟರ ಮಟ್ಟಿಗೆ, ಪೂರೈಕೆಯ ಸಮಯವು, ಪೂರೈಕೆದಾರನು ಮೌಲ್ಯದ ಅಂಥ ಹೆಚ್ಚಳವನ್ನು ಸ್ವೀಕರಿಸುವ ದಿನಾಂಕವಾಗಿರತಕ್ಕದ್ದು.

14. ಸರಕು ಮತ್ತು ಸೇವೆಗಳ ಪೂರೈಕೆಗೆ ಸಂಬಂಧಿಸಿದಂತೆ ತೆರಿಗೆ ದರದಲ್ಲಿನ ಬದಲಾವಣೆ.– ಪ್ರಕರಣ 12 ಅಥವಾ ಪ್ರಕರಣ 13 ರಲ್ಲಿ ಏನೇ ಒಳಗೊಂಡಿದ್ದರೂ, ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡಕ್ಕೆ ಸಂಬಂಧಿಸಿದಂತೆ ತೆರಿಗೆಯ ದರದಲ್ಲಿ ಬದಲಾವಣೆಯಾದಾಗ, ಪೂರೈಕೆಯ ಸಮಯವನ್ನು ಈ ಕೆಳಕಂಡ ವಿಧಾನದಲ್ಲಿ ನಿರ್ಧರಿಸತಕ್ಕದ್ದು, ಎಂದರೆ:–

(ಎ) ತೆರಿಗೆ ದರದಲ್ಲಿ ಬದಲಾವಣೆಯಾಗುವ ಮುನ್ನವೇ, ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡನ್ನು ಪೂರೈಕೆ ಮಾಡಲಾಗಿರುವ ಸಂದರ್ಭದಲ್ಲಿ,–

(i) ಸದರಿ ಪೂರೈಕೆಗೆ, ತೆರಿಗೆ ದರ ಬದಲಾವಣೆಯಾದ ನಂತರ ಬೆಲೆಪಟ್ಟಿಯನ್ನು ನೀಡಲಾಗಿದ್ದಲ್ಲಿ ಮತ್ತು ಸಂದಾಯವನ್ನೂ ಸಹ ಸ್ವೀಕರಿಸಿದ್ದಲ್ಲಿ, ಪೂರೈಕೆಯ ಸಮಯವು ಸಂದಾಯದ ಸ್ವೀಕೃತಿಯ ದಿನಾಂಕ ಅಥವಾ ಬೆಲೆಪಟ್ಟಿಯನ್ನು ನೀಡಿದ ದಿನಾಂಕ, ಇವುಗಳಲ್ಲಿ ಯಾವುದು ಮೊದಲೋ ಅದು ಆಗಿರತಕ್ಕದ್ದು; ಅಥವಾ

(ii) ತೆರಿಗೆ ದರದಲ್ಲಿ ಬದಲಾವಣೆಯಾಗುವುದಕ್ಕಿಂತ ಮೊದಲು ಬೆಲೆಪಟ್ಟಿಯನ್ನು ನೀಡಲಾಗಿದ್ದು, ಆದರೆ ತೆರಿಗೆ ದರ ಬದಲಾವಣೆಯಾದ ನಂತರ ಸಂದಾಯವನ್ನು ಸ್ವೀಕರಿಸಿದ್ದಲ್ಲಿ, ಪೂರೈಕೆಯ ಸಮಯವು ಬೆಲೆಪಟ್ಟಿಯನ್ನು ನೀಡಿದ ದಿನಾಂಕವಾಗಿರತಕ್ಕದ್ದು; ಅಥವಾ

(iii) ತೆರಿಗೆ ದರದಲ್ಲಿ ಬದಲಾವಣೆಯಾಗುವುದಕ್ಕಿಂತ ಮೊದಲು ಸಂದಾಯವನ್ನು ಸ್ವೀಕರಿಸಲಾಗಿದ್ದು, ಆದರೆ ತೆರಿಗೆಯ ದರದಲ್ಲಿ ಬದಲಾವಣೆಯಾದ ನಂತರ ಅದಕ್ಕಾಗಿ ಬೆಲೆಪಟ್ಟಿಯನ್ನು ನೀಡಿದ್ದಲ್ಲಿ, ಪೂರೈಕೆಯ ಸಮಯವು ಸಂದಾಯದ ಸ್ವೀಕೃತಿಯ ದಿನಾಂಕವಾಗಿರತಕ್ಕದ್ದು.

(ಬಿ) ತೆರಿಗೆ ದರದಲ್ಲಿ ಬದಲಾವಣೆಯಾದ ನಂತರ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡನ್ನು ಪೂರೈಕೆ ಮಾಡಲಾಗಿರುವ ಸಂದರ್ಭದಲ್ಲಿ:–

(i) ತೆರಿಗೆ ದರದಲ್ಲಿ ಬದಲಾವಣೆಯಾದ ನಂತರ ಸಂದಾಯವನ್ನು ಸ್ವೀಕರಿಸಿದ್ದು, ಆದರೆ ಬೆಲೆಪಟ್ಟಿಯನ್ನು ತೆರಿಗೆ ದರದಲ್ಲಿ ಬದಲಾವಣೆಯಾಗುವುದಕ್ಕಿಂತ ಮೊದಲೇ ನೀಡಲಾಗಿದ್ದಲ್ಲಿ, ಪೂರೈಕೆಯ ಸಮಯವು ಸಂದಾಯದ ಸ್ವೀಕೃತಿಯ ದಿನಾಂಕವಾಗಿರತಕ್ಕದ್ದು; ಅಥವಾ

(ii) ತೆರಿಗೆ ದರದಲ್ಲಿ ಬದಲಾವಣೆಯಾಗುವ ಮೊದಲು ಬೆಲೆಪಟ್ಟಿಯನ್ನು ನೀಡಲಾಗಿದ್ದು ಮತ್ತು ಸಂದಾಯವನ್ನು ಸ್ವೀಕರಿಸಿದ್ದಲ್ಲಿ, ಪೂರೈಕೆಯ ಸಮಯವು ಸಂದಾಯದ ಸ್ವೀಕೃತಿಯ ದಿನಾಂಕ ಅಥವಾ ಬೆಲೆಪಟ್ಟಿಯನ್ನು ನೀಡಿದ ದಿನಾಂಕ, ಇವುಗಳಲ್ಲಿ ಯಾವುದು ಮೊದಲೋ ಅದು ಆಗಿರತಕ್ಕದ್ದು; ಅಥವಾ

(iii) ತೆರಿಗೆ ದರದಲ್ಲಿ ಬದಲಾವಣೆಯಾದ ನಂತರ ಬೆಲೆಪಟ್ಟಿಯನ್ನು ನೀಡಲಾಗಿದ್ದು, ಆದರೆ ತೆರಿಗೆ ದರದಲ್ಲಿ ಬದಲಾವಣೆಯಾಗುವುದಕ್ಕಿಂತ ಮೊದಲು ಸಂದಾಯವನ್ನು ಸ್ವೀಕರಿಸಿದ್ದಲ್ಲಿ, ಪೂರೈಕೆಯ ಸಮಯವು ಬೆಲೆಪಟ್ಟಿಯನ್ನು ನೀಡಿದ ದಿನಾಂಕವಾಗಿರತಕ್ಕದ್ದು:

ಪರಂತು, ತೆರಿಗೆ ದರದಲ್ಲಿ ಬದಲಾವಣೆಯಾದ ದಿನಾಂಕದಿಂದ ನಾಲ್ಕು ಕಾರ್ಯನಿರತ ದಿನಗಳ ನಂತರ ಸಂದಾಯದ ಸ್ವೀಕೃತಿಯು ಬ್ಯಾಂಕಿನ ಖಾತೆಯಲ್ಲಿ ಜಮೆಯಾಗಿದ್ದರೆ, ಸಂದಾಯದ ಸ್ವೀಕೃತಿಯ ದಿನಾಂಕವು ಬ್ಯಾಂಕಿನ ಖಾತೆಯಲ್ಲಿ ಜಮೆಯಾದ ದಿನಾಂಕವಾಗಿರತಕ್ಕದ್ದು.

ವಿವರಣೆ:– ಈ ಪ್ರಕರಣದ ಉದ್ದೇಶಗಳಿಗಾಗಿ, **'ಸಂದಾಯದ ಸ್ವೀಕೃತಿಯ ದಿನಾಂಕ'** ಎನ್ನುವುದು ಪೂರೈಕೆದಾರನ ಲೆಕ್ಕಪುಸ್ತಕಗಳಲ್ಲಿ ಸಂದಾಯವು ನಮೂದಾದ ದಿನಾಂಕ ಅಥವಾ ಆತನ ಬ್ಯಾಂಕಿನ ಖಾತೆಯಲ್ಲಿ ಸಂದಾಯವು ಜಮೆಯಾದ ದಿನಾಂಕ, ಇವುಗಳಲ್ಲಿ ಯಾವುದು ಮೊದಲೋ ಅದು ಆಗಿರತಕ್ಕದ್ದು.

15. ತೆರಿಗೆದಾಯಕ ಪೂರೈಕೆಯ ಮೌಲ್ಯ.– (1) ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಯ ಮೌಲ್ಯವು ವ್ಯವಹಾರದ ಮೌಲ್ಯವಾಗಿರತಕ್ಕದ್ದು ಮತ್ತು ಅದು ಸದರಿ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಗಾಗಿ, ಪೂರೈಕೆದಾರ ಮತ್ತು ಸ್ವೀಕರಿಸುವವನು ಸಂಬಂಧಿತರಾಗಿಲ್ಲದಿದ್ದಾಗ ಮತ್ತು ಪೂರೈಕೆಗೆ ಬೆಲೆಯು ಏಕಮಾತ್ರ ಪ್ರತಿಫಲವಾಗಿದ್ದಾಗ, ವಾಸ್ತವಿಕವಾಗಿ ಸಂದಾಯಮಾಡಿದ ಅಥವಾ ಮಾಡಬೇಕಾದ ಬೆಲೆಯಾಗಿರುತ್ತದೆ.

(2) ಪೂರೈಕೆಯ ಮೌಲ್ಯವು ಈ ಕೆಳಗಿನವುಗಳನ್ನು ಒಳಗೊಂಡಿರತಕ್ಕದ್ದು,–

(ಎ) ಈ ಅಧಿನಿಯಮ, ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, ಮತ್ತು ಸರಕು ಮತ್ತು ಸೇವೆಗಳ ತೆರಿಗೆ (ರಾಜ್ಯಗಳಿಗೆ ಪರಿಹಾರ) ಅಧಿನಿಯಮ ಅವುಗಳನ್ನು ಹೊರತುಪಡಿಸಿದ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ವಿಧಿಸಲಾದ ಮತ್ತು ಪೂರೈಕೆದಾರನಿಂದ ಪ್ರತ್ಯೇಕವಾಗಿ ವಿಧಿಸಲಾದ ಯಾವುದೇ ತೆರಿಗೆಗಳು, ಸುಂಕಗಳು, ಉಪಕರಗಳು, ಶುಲ್ಕಗಳು ಮತ್ತು ಚಾರ್ಜುಗಳು;

(ಬಿ) ಪೂರೈಕೆಯನ್ನು ಸ್ವೀಕರಿಸುವವನಿಂದ ಭರಿಸಲಾದ ಆದರೆ ಅಂಥ ಪೂರೈಕೆಗೆ ಸಂಬಂಧಿಸಿದಂತೆ ಪೂರೈಕೆದಾರನು ಸಂದಾಯ ಮಾಡುವುದಕ್ಕೆ ಬಾಧ್ಯನಾಗಿರುವ, ಮತ್ತು ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡಕ್ಕೆ ವಾಸ್ತವಿಕವಾಗಿ ಸಂದಾಯಮಾಡಿದ ಅಥವಾ ಮಾಡಬೇಕಾದ ಬೆಲೆಯಲ್ಲಿ ಒಳಗೊಂಡಿರದ ಯಾವುದೇ ಮೊತ್ತ;

(ಸಿ) ಪೂರೈಕೆದಾರನು ಸ್ವೀಕರಿಸುವವನ ಮೇಲೆ ವಿಧಿಸಿದ ಕಮಿಷನ್ ಮತ್ತು ಪ್ಯಾಕಿಂಗ್ ಒಳಗೊಂಡ ಪ್ರಾಸಂಗಿಕ ವೆಚ್ಚಗಳು, ಮತ್ತು ಸರಕುಗಳ ಬಟವಾಡೆಯ ಅಥವಾ ಸೇವೆಗಳ ಪೂರೈಕೆಯ ಸಮಯದಲ್ಲಿ ಅಥವಾ ಅದಕ್ಕೆ ಪೂರ್ವದಲ್ಲಿ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಗೆ ಸಂಬಂಧಿಸಿದಂತೆ ಪೂರೈಕೆದಾರನು ಏನನ್ನಾದರೂ ಮಾಡಿದ್ದಕ್ಕಾಗಿ ವಿಧಿಸಿದ ಯಾವುದೇ ಮೊತ್ತ;

(ಡಿ) ಯಾವುದೇ ಪೂರೈಕೆಯ ಯಾವುದೇ ಪ್ರತಿಫಲದ ವಿಳಂಬ ಸಂದಾಯಕ್ಕೆ ಹಾಕಿದ ಬಡ್ಡಿ ಅಥವಾ ವಿಳಂಬ ಶುಲ್ಕ ಅಥವಾ ದಂಡ; ಮತ್ತು

(ಇ) ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ನೀಡಿದ ಸಹಾಯಧನಗಳನ್ನು ಹೊರತುಪಡಿಸಿ, ಬೆಲೆಗೆ ನೇರವಾಗಿ ಸಂಬಂಧಿಸಿದ ಸಹಾಯಧನಗಳು.

ವಿವರಣೆ:– ಈ ಉಪಪ್ರಕರಣದ ಉದ್ದೇಶಗಳಿಗಾಗಿ ಸಹಾಯಧನದ ಮೊತ್ತವು, ಸಹಾಯಧನವನ್ನು ಸ್ವೀಕರಿಸುವಂತಹ ಪೂರೈಕೆದಾರನ ಪೂರೈಕೆಯ ಮೌಲ್ಯದಲ್ಲಿ ಒಳಗೊಳ್ಳತಕ್ಕದ್ದು.

(3) ಪೂರೈಕೆಯ ಮೌಲ್ಯವು ಈ ಕೆಳಕಂಡ ಯಾವುದೇ ಸೋಡಿಗಳನ್ನು ಒಳಗೊಳ್ಳುವುದಿಲ್ಲ,–

(ಎ) ಪೂರೈಕೆಯ ಸಮಯದಲ್ಲಿ ಅಥವಾ ಅದಕ್ಕಿಂತ ಮೊದಲು ನೀಡಿದ ಸೋಡಿಯನ್ನು ಅಂಥ ಪೂರೈಕೆಗೆ ಸಂಬಂಧಿಸಿದಂತೆ ನೀಡಲಾದ ಬೆಲೆಪಟ್ಟಿಯಲ್ಲಿ ಯುಕ್ತವಾಗಿ ದಾಖಲಿಸಿದ್ದರೆ ಅಂಥ ಸೋಡಿ; ಮತ್ತು

(ಬಿ) ಪೂರೈಕೆಯನ್ನು ಮಾಡಿದ ನಂತರ ನೀಡಿದ ಸೋಡಿ, ಆದರೆ,–

(i) ಅಂಥ ಸೋಡಿಯು ಅಂಥ ಪೂರೈಕೆಯ ಸಮಯದಲ್ಲಿ ಅಥವಾ ಅದಕ್ಕಿಂತ ಮುನ್ನವೇ ಮಾಡಿಕೊಂಡ ಒಪ್ಪಂದದ ಪ್ರಕಾರ ಸ್ಥಾಪಿತವಾದ ಮತ್ತು ಸಂಬಂಧಪಟ್ಟ ಬೆಲೆಪಟ್ಟಿಗಳಿಗೆ ನಿರ್ದಿಷ್ಟವಾಗಿ ಸಂಬಂಧಿಸಿರಬೇಕು; ಮತ್ತು

(ii) ಅಂಥ ಸೋಡಿಗೆ ಸಂಬಂಧಪಟ್ಟ ಹೂಡುವಳಿ ತೆರಿಗೆಯ ಜಮೆಯನ್ನು, ಆ ಪೂರೈಕೆಯನ್ನು ಸ್ವೀಕರಿಸುವವನು ಪೂರೈಕೆದಾರನು ನೀಡಿದ ದಸ್ತಾವೇಜಿನ ಆಧಾರದ ಮೇಲೆ ಹಿಂದಿರುಗಿಸಿರಬೇಕು.

(4) ಉಪಪ್ರಕರಣ (1)ರ ಅಡಿಯಲ್ಲಿ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಮೌಲ್ಯವನ್ನು ನಿರ್ಧರಿಸಲು ಆಗದಿದ್ದಲ್ಲಿ, ಅದನ್ನು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ನಿರ್ಧರಿಸತಕ್ಕದ್ದು.

(5) ಉಪಪ್ರಕರಣ (1) ಅಥವಾ ಉಪಪ್ರಕರಣ (4)ರ ಅಡಿಯಲ್ಲಿ ಏನೇ ಒಳಗೊಂಡಿದ್ದರೂ, ಪರಿಷತ್ತಿನ ಶಿಫಾರಸ್ಸಿನ ಅನ್ವಯ ಸರ್ಕಾರ ಅಧಿಸೂಚಿಸಬಹುದಾದ ಅಂಥ ಪೂರೈಕೆಗಳ ಮೌಲ್ಯವನ್ನು, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ನಿರ್ಧರಿಸತಕ್ಕದ್ದು.

ವಿವರಣೆ.– ಈ ಅಧಿನಿಯಮದ ಉದ್ದೇಶಗಳಿಗಾಗಿ.–

(ಎ) ಈ ಕೆಳಗಿನ ವ್ಯಕ್ತಿಗಳನ್ನು **"ಸಂಬಂಧಿತ ವ್ಯಕ್ತಿ"**ಗಳು ಎಂದು ಪರಿಭಾವಿಸತಕ್ಕದ್ದು:–

(i) ಅಂಥ ವ್ಯಕ್ತಿಗಳು ಒಬ್ಬರು ಮತ್ತೊಬ್ಬರ ವ್ಯವಹಾರಗಳ ಅಧಿಕಾರಿಗಳು ಅಥವಾ ನಿರ್ದೇಶಕರುಗಳಾಗಿದ್ದರೆ;

(ii) ಅಂಥ ವ್ಯಕ್ತಿಗಳು ವ್ಯವಹಾರದಲ್ಲಿ ಕಾನೂನುರೀತ್ಯ ಗುರುತಿಸಲ್ಪಟ್ಟ ಪಾಲುದಾರರಾಗಿದ್ದರೆ;

(iii) ಅಂಥ ವ್ಯಕ್ತಿಗಳು ಉದ್ಯೋಗದಾತ ಮತ್ತು ಉದ್ಯೋಗಿಯಾಗಿದ್ದರೆ;

(iv) ಯಾವುದೇ ವ್ಯಕ್ತಿ, ಎರಡು ವ್ಯಕ್ತಿಗಳ ಮತದಾನದ ಹಕ್ಕುಳ್ಳ ಸ್ಟಾಕುಗಳು ಅಥವಾ ಷೇರುಗಳನ್ನು ಶೇಕಡ ಇಪ್ಪತ್ತೈದು ಅಥವಾ ಅದಕ್ಕಿಂತ ಹೆಚ್ಚಿಗೆ ಹೊಂದಿದ್ದರೆ ಅಥವಾ, ನೇರವಾಗಿಯಾಗಲೀ ಅಥವಾ ಪರೋಕ್ಷವಾಗಿಯಾಗಲೀ, ಅವುಗಳ ಮಾಲೀಕತ್ವ ಅಥವಾ ನಿಯಂತ್ರಣ ಹೊಂದಿದ್ದರೆ;

(v) ಅಂತಹ ವ್ಯಕ್ತಿಗಳಲ್ಲಿ, ಒಬ್ಬರು ಮತ್ತೊಬ್ಬರನ್ನು ನೇರವಾಗಿಯಾಗಲೀ ಅಥವಾ ಪರೋಕ್ಷವಾಗಿಯಾಗಲೀ, ನಿಯಂತ್ರಿಸುತ್ತಿದ್ದರೆ;

(vi) ಮೂರನೇ ವ್ಯಕ್ತಿಯಿಂದ ಅವರಿಬ್ಬರೂ, ನೇರವಾಗಿಯಾಗಲೀ ಅಥವಾ ಪರೋಕ್ಷವಾಗಿಯಾಗಲೀ, ನಿಯಂತ್ರಿತರಾಗಿದ್ದರೆ;

(vii) ಅವರಿಬ್ಬರೂ ಜೊತೆಯಾಗಿ ಮೂರನೇ ವ್ಯಕ್ತಿಯನ್ನು ನೇರವಾಗಿಯಾಗಲೀ ಅಥವಾ ಪರೋಕ್ಷವಾಗಿಯಾಗಲೀ, ನಿಯಂತ್ರಿಸುತ್ತಿದ್ದರೆ;

(viii) ಅವರು ಒಂದೇ ಕುಟುಂಬದ ಸದಸ್ಯರಾಗಿದ್ದರೆ.

(ಬಿ) **"ವ್ಯಕ್ತಿ"** ಎಂಬ ಪದವು ಕಾನೂನಾತ್ಮಕ ವ್ಯಕ್ತಿಗಳನ್ನೂ ಸಹ ಒಳಗೊಳ್ಳುತ್ತದೆ;

(ಸಿ) ಒಬ್ಬರು ಮತ್ತೊಬ್ಬರ ವ್ಯವಹಾರದಲ್ಲಿ ಸಹವರ್ತಿಯಾಗಿದ್ದರೆ ಅಂದರೆ ಅವರಲ್ಲಿ ಒಬ್ಬರು ಮತ್ತೊಬ್ಬರ ಏಕೈಕ ಏಜೆಂಟ್ ಅಥವಾ ಏಕೈಕ ಹಂಚಿಕೆದಾರ ಅಥವಾ ಏಕೈಕ ರಿಯಾಯಿತಿದಾರ ಅಥವಾ ಇನ್ನಾವುದೇ ಹೆಸರಿನಲ್ಲಿ ಕರೆಯಬಹುದಾದ ವ್ಯಕ್ತಿಗಳನ್ನು ಸಂಬಂಧಿತರು ಎಂದು ಪರಿಭಾವಿಸತಕ್ಕದ್ದು;

ಅಧ್ಯಾಯ–V
ಹೂಡುವಳಿ ತೆರಿಗೆಯ ಜಮೆ

16. ಹೂಡುವಳಿ ತೆರಿಗೆಯ ಜಮೆಯನ್ನು ತೆಗೆದುಕೊಳ್ಳಲು ಅರ್ಹತೆ ಮತ್ತು ಷರತ್ತುಗಳು.– (1) ಪ್ರತಿಯೊಬ್ಬ ತೆರಿಗೆದಾಯಕ ವ್ಯಕ್ತಿಯು, ನಿಯಮಿಸಬಹುದಾದ ಅಂಥ ಷರತ್ತುಗಳು ಮತ್ತು ನಿರ್ಬಂಧಗಳಿಗೆ ಒಳಪಟ್ಟು ಹಾಗೂ ಪ್ರಕರಣ 49ರಲ್ಲಿ ನಿರ್ದಿಷ್ಟಪಡಿಸಿದ ವಿಧಾನದಲ್ಲಿ, ಆತನ ವ್ಯವಹಾರದ ಪಥದಲ್ಲಿ ಅಥವಾ ಮುಂದುವರಿಕೆಯಲ್ಲಿ ಬಳಸಿದ ಅಥವಾ ಬಳಸಲು ಉದ್ದೇಶಿಸಿರುವ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಯ ಮೇಲೆ ವಿಧಿಸಿದ ಹೂಡುವಳಿ ತೆರಿಗೆಯ ಜಮೆಯನ್ನು ತೆಗೆದುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು ಮತ್ತು ಸದರಿ ಮೊತ್ತವನ್ನು ಅಂಥ ವ್ಯಕ್ತಿಯ ವಿದ್ಯುನ್ಮಾನ ಜಮೆ ಖಾತೆಗೆ ಜಮೆಮಾಡತಕ್ಕದ್ದು.

(2) ಈ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ನೋಂದಾಯಿತ ವ್ಯಕ್ತಿಯು ಈ ಕೆಳಗಿನವುಗಳ ಹೊರತಾಗಿ ಆತನಿಗೆ ಮಾಡಲಾದ ಸರಕುಗಳು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಗೆ ಸಂಬಂಧಿಸಿದಂತೆ ಯಾವುದೇ ಹೂಡುವಳಿ ತೆರಿಗೆ ಜಮೆಗೆ ಹಕ್ಕುಳ್ಳವನಾಗಿರತಕ್ಕದ್ದಲ್ಲ,–

(ಎ) ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತನಾದ ಪೂರೈಕೆದಾರನು ನೀಡಿದ ಒಂದು ಬೆಲೆಪಟ್ಟಿ ಅಥವಾ ಖರ್ಚು ಚೀಟಿ, ಅಥವಾ ನಿಯಮಿಸಬಹುದಾದ ಅಂಥ ಇತರ ತೆರಿಗೆ ಸಂದಾಯ ಮಾಡುವ ದಸ್ತಾವೇಜುಗಳ ಸ್ವಾಧೀನತೆ ಹೊಂದಿರಬೇಕು;

(ಬಿ) ಅವನು ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡನ್ನು ಸ್ವೀಕರಿಸಿರಬೇಕು.

ವಿವರಣೆ:– ಈ ಖಂಡದ ಉದ್ದೇಶಗಳಿಗಾಗಿ, ಪೂರೈಕೆದಾರನಿಂದ ಸ್ವೀಕರಿಸುವವನಿಗೆ ಅಥವಾ ಅಂತಹ ತೆರಿಗೆದಾಯಕ ವ್ಯಕ್ತಿಯ ನಿರ್ದೇಶನದ ಮೇಲೆ, ಏಜೆಂಟ್ ಆಗಿಯಾದರೂ ಅಥವಾ ಅನ್ಯಥಾ ಆಗಿಯಾದರೂ ಕಾರ್ಯನಿರ್ವಹಿಸುವ ಯಾವುದೇ ವ್ಯಕ್ತಿಗೆ, ಸರಕುಗಳ ಸಾಗಾಣಿಕೆಯ ಮುನ್ನ ಅಥವಾ ಸಮಯದಲ್ಲಿ, ಸರಕುಗಳ ಸ್ವಾಮ್ಯದ ದಸ್ತಾವೇಜುಗಳ ವರ್ಗಾವಣೆಯ ಮೂಲಕವಾಗಲಿ ಅಥವಾ ಅನ್ಯಥಾ ಆಗಲಿ, ಸರಕುಗಳನ್ನು ಬಟವಾಡೆ ಮಾಡಿದ್ದಾಗ, ತೆರಿಗೆದಾಯಕ ವ್ಯಕ್ತಿಯು ಸರಕುಗಳನ್ನು ಸ್ವೀಕರಿಸಿದ್ದಾನೆ ಎಂದು ಪರಿಭಾವಿತವಾಗತಕ್ಕದ್ದು.

(ಸಿ) ಪ್ರಕರಣ 41ರ ಉಪಬಂಧಗಳಿಗೆ ಒಳಪಟ್ಟು, ಅಂಥ ಪೂರೈಕೆಗೆ ಸಂಬಂಧಿಸಿದಂತೆ ವಿಧಿಸಲಾದ ತೆರಿಗೆಯನ್ನು ಸರ್ಕಾರದ ಖಾತೆಗೆ, ನಗದು ರೂಪದಲ್ಲಿಯಾಗಲಿ ಅಥವಾ ಸದರಿ ಪೂರೈಕೆಗೆ ಸಂಬಂಧಿಸಿದಂತೆ ಒಪ್ಪಿಕೊಳ್ಳಬಹುದಾದ ಹೂಡುವಳಿ ತೆರಿಗೆ ಜಮೆಯನ್ನು ಬಳಸಿಕೊಳ್ಳುವುದರ ಮೂಲಕವಾಗಲಿ, ವಾಸ್ತವಿಕವಾಗಿ ಸಂದಾಯಮಾಡಿರಬೇಕು;

(ಡಿ) ಅವನು ಪ್ರಕರಣ 39ರ ಅಡಿಯಲ್ಲಿ ರಿಟರ್ನ್ ಸಲ್ಲಿಸಿರಬೇಕು:

ಪರಂತು, ಒಂದು ಬೆಲೆಪಟ್ಟಿಗೆ ಸಂಬಂದಿಸಿದ ಸರಕುಗಳನ್ನು ಲಾಟ್‌ಗಳಲ್ಲಿ ಅಥವಾ ಕಂತುಗಳಲ್ಲಿ ಸ್ವೀಕರಿಸಿದ್ದಲ್ಲಿ, ನೋಂದಾಯಿತ ವ್ಯಕ್ತಿಯು ಕೊನೆಯ ಲಾಟ್ ಅಥವಾ ಕಂತನ್ನು ಸ್ವೀಕರಿಸಿದ ಮೇಲೆ ಜಮೆಗೆ ಹಕ್ಕುಳ್ಳವನಾಗಿರತಕ್ಕದ್ದು:

ಮತ್ತು ಪರಂತು, ಹಿಮ್ಮುಖ ವಿಧಿಸುವಿಕೆಯ ಆಧಾರದಲ್ಲಿ ತೆರಿಗೆ ಸಂದಾಯ ಮಾಡಬೇಕಾದ ಪೂರೈಕೆಗಳನ್ನು ಹೊರತುಪಡಿಸಿದಂತೆ, ಸ್ವೀಕರಿಸುವವನು ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆದಾರನಿಗೆ ಪೂರೈಕೆಯ ಮೌಲ್ಯವಾಗಿ, ಅದರ ಮೇಲಿನ ತೆರಿಗೆಯೊಂದಿಗೆ, ಸಂದಾಯ ಮಾಡಬೇಕಾದ ಮೊತ್ತವನ್ನು, ಪೂರೈಕೆದಾರನು ಬೆಲೆಪಟ್ಟಿ ನೀಡಿದ ದಿನಾಂಕದಿಂದ ಒಂದು ನೂರ ಎಂಬತ್ತು ದಿನಗಳ ಅವಧಿಯ ಒಳಗಾಗಿ, ಸಂದಾಯ ಮಾಡಲು ವಿಫಲನಾದಲ್ಲಿ, ಸ್ವೀಕರಿಸುವವನಿಂದ

ಉಪಯೋಗಿಸಲ್ಪಟ್ಟ ಹೂಡುವಳಿ ತೆರಿಗೆ ಜಮೆಗೆ ಸಮಾನವಾದ ಮೊತ್ತವನ್ನು ಅದರ ಮೇಲಿನ ಬಡ್ಡಿಯೊಂದಿಗೆ, ನಿಯಮಿಸಬಹುದಾದ ಅಂಥ ವಿಧಾನದಲ್ಲಿ, ಸ್ವೀಕರಿಸುವವನ ಹುಟ್ಟುವಳಿ ತೆರಿಗೆ ಬಾಧ್ಯತೆಗೆ ಸೇರಿಸತಕ್ಕದ್ದು:

ಅಲ್ಲದೆ ಪರಂತು, ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಮೌಲ್ಯವನ್ನು ಅದರ ಮೇಲಿನ ತೆರಿಗೆಯೊಂದಿಗೆ, ಆತನು ಸಂದಾಯ ಮಾಡಿದ ಮೊತ್ತದ ಮೇಲೆ, ಸ್ವೀಕರಿಸುವವನು ಹೂಡುವಳಿ ತೆರಿಗೆ ಜಮೆಯನ್ನು ಉಪಯೋಗಿಸಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು.

(3) ನೋಂದಾಯಿತ ವ್ಯಕ್ತಿಯು ಆದಾಯ ತೆರಿಗೆ ಅಧಿನಿಯಮ, 1961ರ (1961ರ ಕೇಂದ್ರ ಅಧಿನಿಯಮ 43) ಉಪಬಂಧಗಳ ಅಡಿಯಲ್ಲಿ, ಬಂಡವಾಳ ಸರಕುಗಳ ಹಾಗೂ ಸ್ಥಾವರ ಮತ್ತು ಯಂತ್ರೋಪಕರಣಗಳ ಬೆಲೆಯ ಭಾಗವಾದ ತೆರಿಗೆಯ ಮೊತ್ತದ ಮೇಲೆ ಸವಕಳಿಯನ್ನು ಕ್ಲೇಮು ಮಾಡಿದ್ದಲ್ಲಿ, ಸದರಿ ತೆರಿಗೆ ಮೊತ್ತಕ್ಕೆ ಹೂಡುವಳಿ ತೆರಿಗೆಯ ಜಮೆಯನ್ನು ನೀಡತಕ್ಕದ್ದಲ್ಲ.

(4) ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಯಾವುದೇ ಬೆಲೆಪಟ್ಟಿ ಅಥವಾ ಖರ್ಚು ಪಟ್ಟಿಗೆ ಸಂಬಂಧಿಸಿದಂತೆ, ಅಂಥ ಬೆಲೆಪಟ್ಟಿ ಅಥವಾ ಬೆಲೆಪಟ್ಟಿಗೆ ಸಂಬಂಧಿಸಿದ ಅಂಥ ಖರ್ಚು ಪಟ್ಟಿಯನ್ನು ಒಳಗೊಳ್ಳುವ ಹಣಕಾಸಿನ ವರ್ಷ ಕೊನೆಗೊಂಡ ತರುವಾಯದ ಸೆಪ್ಟಂಬರ್ ತಿಂಗಳಿಗೆ, ಪ್ರಕರಣ 39ರ ಅಡಿಯಲ್ಲಿ ರಿಟರ್ನ್ ಸಲ್ಲಿಸಲು ಇರುವ ಕೊನೆಯ ದಿನಾಂಕ ಅಥವಾ ಸಂಬಂಧಿಸಿದ ವಾರ್ಷಿಕ ರಿಟರ್ನ್ ಸಲ್ಲಿಕೆಯ ದಿನಾಂಕ, ಇವುಗಳಲ್ಲಿ ಯಾವುದು ಮೊದಲೋ ಅದರ ನಂತರ, ಹೂಡುವಳಿ ತೆರಿಗೆ ಜಮೆಯನ್ನು ತೆಗೆದುಕೊಳ್ಳಲು ಒಬ್ಬ ನೋಂದಾಯಿತ ವ್ಯಕ್ತಿಯು ಹಕ್ಕುಳ್ಳವನಾಗಿರತಕ್ಕದ್ದಲ್ಲ.

17. ಜಮೆಯ ಹಂಚಿಕೆ ಮತ್ತು ತಡೆ ಹಿಡಿದ ಜಮೆಗಳು.– (1) ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರನ್ನು, ನೋಂದಾಯಿತ ವ್ಯಕ್ತಿಯು, ಭಾಗಶಃ ಯಾವುದೇ ವ್ಯವಹಾರದ ಉದ್ದೇಶಗಳಿಗಾಗಿ ಮತ್ತು ಭಾಗಶಃ ಇತರ ಉದ್ದೇಶಗಳಿಗಾಗಿ ಉಪಯೋಗಿಸಿದ್ದಲ್ಲಿ, ಜಮೆಯ ಮೊತ್ತವನ್ನು ಆತನ ವ್ಯವಹಾರದ ಉದ್ದೇಶಗಳಿಗಾಗಿ ಮಾಡಿದುದು ಎಂದು ಹೇಳಬಹುದಾದ ಹೂಡುವಳಿ ತೆರಿಗೆಯಷ್ಟಕ್ಕೆ ನಿರ್ಬಂಧಿಸತಕ್ಕದ್ದು.

(2) ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರನ್ನು, ನೋಂದಾಯಿತ ವ್ಯಕ್ತಿಯು, ಭಾಗಶಃ ಈ ಅಧಿನಿಯಮ ಅಥವಾ ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮಗಳ ಅಡಿಯಲ್ಲಿನ, ಶೂನ್ಯ–ದರದ ಪೂರೈಕೆಗಳನ್ನು ಒಳಗೊಂಡಂತಹ ತೆರಿಗೆದಾಯಕ ಪೂರೈಕೆಗಳಿಗಾಗಿ ಮತ್ತು ಭಾಗಶಃ ಸದರಿ ಅಧಿನಿಯಮಗಳ ಅಡಿಯಲ್ಲಿ ವಿನಾಯಿತಿ ಪೂರೈಕೆಗಳನ್ನು ಮಾಡುವುದಕ್ಕಾಗಿ ಉಪಯೋಗಿಸಿದಾಗ, ಜಮೆಯ ಮೊತ್ತವನ್ನು, ಶೂನ್ಯ–ದರದ ಪೂರೈಕೆಗಳನ್ನು ಒಳಗೊಂಡಂತಹ ತೆರಿಗೆದಾಯಕ ಪೂರೈಕೆಗಳಿಗೆ ಸಂಬಂಧಿಸಿದುದು ಎಂದು ಹೇಳಬಹುದಾದ ಹೂಡುವಳಿ ತೆರಿಗೆಯಷ್ಟಕ್ಕೆ ನಿರ್ಬಂಧಿಸತಕ್ಕದ್ದು.

(3) ಉಪಪ್ರಕರಣ (2)ರ ಅಡಿಯಲ್ಲಿನ ವಿನಾಯಿತಿ ಪೂರೈಕೆಯ ಮೌಲ್ಯವು, ನಿಯಮಿಸಬಹುದಾದಂಥದಾಗಿರತಕ್ಕದ್ದು, ಮತ್ತು ಹಿಮ್ಮುಖ ವಿಧಿಸುವಿಕೆಯ ಆಧಾರದಲ್ಲಿ ತೆರಿಗೆಯನ್ನು ಸಂದಾಯ ಮಾಡುವುದಕ್ಕೆ ಸ್ವೀಕರಿಸುವವನು ಬಾಧ್ಯನಿರುವಂತಹ ಪೂರೈಕೆಗಳನ್ನು, ಭದ್ರತಾಪತ್ರಗಳ ವಹಿವಾಟುಗಳನ್ನು, ಭೂಮಿಯ ಮಾರಾಟವನ್ನು ಹಾಗೂ ಅನುಸೂಚಿ II ರ ಕಂಡಿಕೆ 5ರ ಖಂಡ (ಬಿ)ಗೆ ಒಳಪಟ್ಟು, ಕಟ್ಟಡದ ಮಾರಾಟವನ್ನು ಒಳಗೊಳ್ಳತಕ್ಕದ್ದು.

(4) ಠೇವಣಿಗಳನ್ನು ಸ್ವೀಕರಿಸುವ, ಸಾಲಗಳು ಅಥವಾ ಮುಂಗಡಗಳನ್ನು ನೀಡುವ ಮೂಲಕ ಸೇವೆಗಳ ಪೂರೈಕೆಯಲ್ಲಿ ತೊಡಗಿಕೊಂಡಿರುವ ಒಂದು ಬ್ಯಾಂಕಿಂಗ್ ಕಂಪನಿ ಅಥವಾ ಒಂದು ಬ್ಯಾಂಕೇತರ ಹಣಕಾಸು ಕಂಪನಿಯನ್ನು ಒಳಗೊಂಡಂತೆ ಒಂದು ಹಣಕಾಸು ಸಂಸ್ಥೆಯು, ಉಪಪ್ರಕರಣ (2)ರ ಉಪಬಂಧಗಳನ್ನು ಪಾಲಿಸುವುದು ಅಥವಾ ಪ್ರತಿ ತಿಂಗಳಲ್ಲಿನ ಹೂಡುವಳಿಗಳು, ಬಂಡವಾಳ ಸರಕುಗಳು ಮತ್ತು ಹೂಡುವಳಿ ಸೇವೆಗಳ ಮೇಲಿನ ಅರ್ಹ ಹೂಡುವಳಿ ತೆರಿಗೆ ಜಮೆಯ ಶೇಕಡ ಐವತ್ತರಷ್ಟಕ್ಕೆ ಸಮನಾದ ಒಂದು ಮೊತ್ತವನ್ನು ಆ ತಿಂಗಳಲ್ಲಿ ಉಪಯೋಗಿಸಿಕೊಳ್ಳುವುದು ಮತ್ತು ಅದರ ನಂತರ ಮಿಕ್ಕಿದ ಜಮೆಯು ರದ್ದುಗೊಳ್ಳತಕ್ಕದ್ದು, ಇವುಗಳರೆಡರಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು:

ಪರಂತು, ಒಮ್ಮೆ ಆಯ್ಕೆಯನ್ನು ಮಾಡಿಕೊಂಡ ಮೇಲೆ ಆ ಹಣಕಾಸು ವರ್ಷದ ಉಳಿದ ಭಾಗದಲ್ಲಿ ಅದನ್ನು ಹಿಂತೆಗೆದುಕೊಳ್ಳತಕ್ಕದ್ದಲ್ಲ:

ಮತ್ತು ಪರಂತು, ಒಬ್ಬ ನೋಂದಾಯಿತ ವ್ಯಕ್ತಿಯು ಅದೇ ಶಾಶ್ವತ ಖಾತೆ ಸಂಖ್ಯೆಯನ್ನು ಹೊಂದಿರುವ ಮತ್ತೊಬ್ಬ ನೋಂದಾಯಿತ ವ್ಯಕ್ತಿಗೆ ಮಾಡಿದ ಪೂರೈಕೆಗಳ ಮೇಲೆ ಸಂದಾಯ ಮಾಡಿದ ತೆರಿಗೆಗೆ ಶೇಕಡ ಐವತ್ತರ ನಿರ್ಬಂಧವು ಅನ್ವಯವಾಗತಕ್ಕದ್ದಲ್ಲ.

(5) ಪ್ರಕರಣ 16ರ ಉಪಪ್ರಕರಣ (1) ಮತ್ತು ಪ್ರಕರಣ 18ರ ಉಪಪ್ರಕರಣ (1) ರಲ್ಲಿ ಏನೇ ಒಳಗೊಂಡಿದ್ದರೂ ಈ ಕೆಳಕಂಡವುಗಳಿಗೆ ಸಂಬಂಧಿಸಿದಂತೆ ಹೂಡುವಳಿ ತೆರಿಗೆ ಜಮೆಯು ಲಭ್ಯವಿರತಕ್ಕದ್ದಲ್ಲ, ಎಂದರೆ:–

(ಎ) ಮೋಟಾರು ವಾಹನಗಳು ಮತ್ತು ಇತರ ಸಾಗಣೆಗಳು ಈ ಕೆಳಗಿನವುಗಳಿಗಾಗಿ ಬಳಕೆಯಾದಾಗ ಹೊರತುಪಡಿಸಿದಂತೆ:–

(i) ಕೆಳಕಂಡ ತೆರಿಗೆದಾಯಕ ಪೂರೈಕೆಗಳನ್ನು ಮಾಡಲು, ಎಂದರೆ:–

(ಎ) ಅಂಥ ಮೋಟಾರು ವಾಹನಗಳ ಮತ್ತು ಸಾಗಣೆಗಳ ಮುಂದುವರೆದ ಪೂರೈಕೆ; ಅಥವಾ
(ಬಿ) ಪ್ರಯಾಣಿಕರ ಸಾಗಾಣಿಕೆ; ಅಥವಾ

(ಸಿ) ಅಂಥ ಮೋಟಾರು ವಾಹನಗಳು ಮತ್ತು ಸಾಗಣೆಗಳ ಚಾಲನೆ, ಹಾರಾಟ, ಯಾನದ ಕೌಶಲ್ಯಗಳ ತರಬೇತಿಯನ್ನು ನೀಡುವುದು.

(ii) ಸರಕು ಸಾಗಾಣಿಕೆಗಾಗಿ;

(ಬಿ) ಈ ಕೆಳಕಂಡ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆ:–

(i) ಒಬ್ಬ ನೋಂದಾಯಿತ ವ್ಯಕ್ತಿಯಿಂದ ಒಂದು ನಿರ್ದಿಷ್ಟ ವರ್ಗದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಒಂದು ಒಳಮುಖ ಪೂರೈಕೆಯನ್ನು, ಅದೇ ವರ್ಗದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಹೊರಮುಖ ತೆರಿಗೆದಾಯಕ ಪೂರೈಕೆಯನ್ನು ಮಾಡಲು ಅಥವಾ ತೆರಿಗೆದಾಯಕ ಸಂಯುಕ್ತ ಅಥವಾ ಮಿಶ್ರ ಪೂರೈಕೆಯ ಭಾಗವಾಗಿ ಬಳಸಿದಲ್ಲಿ ಅದನ್ನು ಹೊರತುಪಡಿಸಿದ ಆಹಾರ ಮತ್ತು ಪಾನೀಯಗಳು, ಹೊರಾಂಗಣ ಆಹಾರ ಸರಬರಾಜು, ಸೌಂದರ್ಯಚಿಕಿತ್ಸೆ, ಆರೋಗ್ಯ ಸೇವೆಗಳು, ಸೌಂದರ್ಯವರ್ಧಕ ಮತ್ತು ಸುರೂಪಿಕಾ ಶಸ್ತ್ರಚಿಕಿತ್ಸೆ (plastic surgery);

(ii) ಒಂದು ಕ್ಲಬ್, ಆರೋಗ್ಯ ಹಾಗೂ ಫಿಟ್ನೆಸ್ ಕೇಂದ್ರದ ಸದಸ್ಯತ್ವ;

(iii) ಬಾಡಿಗೆಗಾಗಿ ಕ್ಯಾಬ್, ಜೀವವಿಮೆ, ಆರೋಗ್ಯವಿಮೆ, ಆದರೆ ಈ ಕೆಳಕಂಡವುಗಳನ್ನು ಹೊರತುಪಡಿಸಿ–

(ಎ) ಸರ್ಕಾರವು ಅಧಿಸೂಚಿಸಿದ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಉದ್ಯೋಗದಾತನು ತನ್ನ ಉದ್ಯೋಗಿಗಳಿಗೆ ಒದಗಿಸಲು ಬಾಧ್ಯವಿರುವ ಸೇವೆಗಳು; ಅಥವಾ

(ಬಿ) ಒಬ್ಬ ನೋಂದಾಯಿತ ತೆರಿಗೆದಾಯಕ ವ್ಯಕ್ತಿಯಿಂದ ಒಂದು ನಿರ್ದಿಷ್ಟ ವರ್ಗದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಅಂಥ ಒಳಮುಖ ಪೂರೈಕೆಯನ್ನು, ಅದೇ ವರ್ಗದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಹೊರಮುಖ ತೆರಿಗೆದಾಯಕ ಪೂರೈಕೆಯನ್ನು ಮಾಡಲು ಅಥವಾ ತೆರಿಗೆದಾಯಕ ಸಂಯುಕ್ತ ಅಥವಾ ಮಿಶ್ರ ಪೂರೈಕೆಯ ಭಾಗವಾಗಿ ಬಳಸಿರುವುದು; ಮತ್ತು

(iv) ರಜೆಯಲ್ಲಿರುವ ಉದ್ಯೋಗಿಗಳಿಗೆ ನೀಡಲಾದ ರಜೆ ಪ್ರಯಾಣದ ರಿಯಾಯಿತಿ ಅಥವಾ ಸ್ವಂತ ಊರಿಗೆ ಪ್ರಯಾಣದ ರಿಯಾಯಿತಿಯಂತಹ ಪ್ರಯಾಣದ ಅನುಕೂಲತೆಗಳು.

(ಸಿ) ಗುತ್ತಿಗೆ ಕಾಮಗಾರಿಯ ಮುಂದುವರೆದ ಪೂರೈಕೆಗಾಗಿ ಹೂಡುವಳಿ ಸೇವೆಯಾಗಿರುವುದನ್ನು ಹೊರತುಪಡಿಸಿದಂತೆ ಸ್ಥಿರಸ್ವತ್ತಿನ ನಿರ್ಮಾಣಕ್ಕಾಗಿ (ಸ್ಥಾವರ ಮತ್ತು ಯಂತ್ರೋಪಕರಣಗಳನ್ನು ಹೊರತುಪಡಿಸಿದಂತೆ) ಮಾಡಿದ ಗುತ್ತಿಗೆ ಕಾಮಗಾರಿ ಸೇವೆಗಳ ಪೂರೈಕೆ,

(ಡಿ) ಒಬ್ಬ ತೆರಿಗೆದಾಯಕ ವ್ಯಕ್ತಿಯು ತನ್ನ ಸ್ವಂತ ಖಾತೆಯ ಮೇಲೆ ಒಂದು ಸ್ಥಿರ ಸ್ವತ್ತಿನ (ಸ್ಥಾವರ ಅಥವಾ ಯಂತ್ರೋಪಕರಣಗಳನ್ನು ಹೊರತುಪಡಿಸಿದಂತೆ) ನಿರ್ಮಾಣಕ್ಕಾಗಿ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡನ್ನು, ಅಂಥ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡನ್ನು ವ್ಯವಹಾರದ ಪಥದಲ್ಲಿ ಅಥವಾ ಮುಂದುವರಿಕೆಯಲ್ಲಿ ಬಳಕೆಮಾಡಿರುವುದನ್ನೂ ಒಳಗೊಂಡಂತೆ, ಸ್ವೀಕರಿಸಿರುವುದು;

ವಿವರಣೆ :– ಖಂಡ (ಸಿ) ಮತ್ತು ಖಂಡ (ಡಿ)ಗಳ ಉದ್ದೇಶಗಳಿಗಾಗಿ, 'ನಿರ್ಮಾಣ' ಎಂಬ ಪದವು ಬಂಡವಾಳೀಕೃತಗೊಂಡಿರುವ ಅಷ್ಟರ ಮಟ್ಟಿಗೆ, ಸದರಿ ಸ್ಥಿರಸ್ವತ್ತಿಗೆ ಮಾಡಿರುವ ಪುನರ್–ನಿರ್ಮಾಣ, ನವೀಕರಣ, ಸೇರ್ಪಡೆಗಳು ಅಥವಾ ಮಾರ್ಪಾಟುಗಳು ಅಥವಾ ದುರಸ್ತಿಗಳನ್ನು ಒಳಗೊಳ್ಳುತ್ತದೆ.

(ಇ) ಪ್ರಕರಣ 10ರ ಅಡಿಯಲ್ಲಿ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಮೇಲೆ ಸಂದಾಯ ಮಾಡಲಾದ ತೆರಿಗೆ;

(ಎಫ್), ಒಬ್ಬ ಅನಿವಾಸಿ ತೆರಿಗೆದಾಯಕ ವ್ಯಕ್ತಿಯಿಂದ, ಆತನಿಂದ ಆಮದಾಗಿರುವ ಸರಕನ್ನು ಹೊರತುಪಡಿಸಿದಂತೆ, ಸ್ವೀಕರಿಸಲ್ಪಟ್ಟ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡು;

(ಜಿ) ವೈಯಕ್ತಿಕ ಅನುಭೋಗಕ್ಕಾಗಿ ಉಪಯೋಗಿಸಿದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡು;

(ಹೆಚ್) ಕಳೆದುಹೋದ, ಕಳ್ಳತನವಾದ, ನಾಶಗೊಂಡ, ಲೆಕ್ಕದಿಂದ ತೆಗೆದುಹಾಕಿದ ಅಥವಾ ಉಡುಗೊರೆಯಾಗಿ ಅಥವಾ ಉಚಿತ ಮಾದರಿಗಳಾಗಿ ವಿಲೇ ಮಾಡಲಾದ ಸರಕುಗಳು; ಮತ್ತು

(ಐ) ಪ್ರಕರಣ 74, 129 ಮತ್ತು 130ರ ಉಪಬಂಧಗಳಿಗೆ ಅನುಸಾರವಾಗಿ ಸಂದಾಯ ಮಾಡಲಾದ ಯಾವುದೇ ತೆರಿಗೆ.

(6) ಸರ್ಕಾರವು ಉಪಪ್ರಕರಣ (1) ಮತ್ತು (2)ರಲ್ಲಿ ಉಲ್ಲೇಖಿಸಿದಂತಹ ಜಮೆಯನ್ನು ನಿರ್ಧಿಷ್ಟಪಡಿಸುವ ವಿಧಾನವನ್ನು ನಿಯಮಿಸಬಹುದು.

ವಿವರಣೆ:– ಈ ಅಧ್ಯಾಯ ಮತ್ತು ಅಧ್ಯಾಯ VI ರ ಉದ್ದೇಶಗಳಿಗಾಗಿ 'ಸ್ಥಾವರ ಮತ್ತು ಯಂತ್ರೋಪಕರಣ' ಎಂದರೆ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಹೊರಮುಖ ಪೂರೈಕೆ ಮಾಡುವುದಕ್ಕಾಗಿ ಬಳಕೆಯಾದ, ಅಡಿಪಾಯ ಅಥವಾ

ರಚನಾಧಾರದ ಮೂಲಕ ಭೂಮಿಗೆ ನೆಲೆಗೊಳಿಸಿದ ಸಲಕರಣೆಗಳು, ಸಾಧನ ಸಾಮಗ್ರಿಗಳು ಮತ್ತು ಯಂತ್ರೋಪಕರಣಗಳು ಹಾಗೂ ಅಂಥ ಅಡಿಪಾಯ ಮತ್ತು ರಚನಾಧಾರಗಳನ್ನು ಒಳಗೊಂಡಿರುತ್ತವೆ, ಆದರೆ ಈ ಕೆಳಗಿನವುಗಳನ್ನು ಒಳಗೊಳ್ಳುವುದಿಲ್ಲ,–

(i) ಭೂಮಿ, ಕಟ್ಟಡ ಅಥವಾ ಇತರ ಯಾವುದೇ ಸಿವಿಲ್ ರಚನೆಗಳು;

(ii) ದೂರ ಸಂಪರ್ಕ ಗೋಪುರಗಳು; ಮತ್ತು

(iii) ಕಾರ್ಖಾನೆಯ ಆವರಣದ ಹೊರಗೆ ಹಾಕಲಾಗಿರುವ ಪೈಪ್‌ಲೈನ್‌ಗಳು.

18. ವಿಶೇಷ ಸಂದರ್ಭಗಳಲ್ಲಿ ಜಮೆಯ ಲಭ್ಯತೆ.– (1) ನಿಯಮಿಸಬಹುದಾದ ಅಂಥ ಷರತ್ತುಗಳು ಹಾಗೂ ನಿರ್ಬಂಧಗಳಿಗೆ ಒಳಪಟ್ಟು–

(ಎ) ಒಬ್ಬ ವ್ಯಕ್ತಿ ನೋಂದಣಿಗೆ ಬಾಧ್ಯನಾಗುವ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸಿದ್ದಲ್ಲಿ ಮತ್ತು ಅಂಥ ನೋಂದಣಿಯನ್ನು ಮಂಜೂರು ಮಾಡಲಾಗಿದ್ದಲ್ಲಿ, ಈ ಅಧಿನಿಯಮದ ಅಡಿಯಲ್ಲಿ ಅವನು ತೆರಿಗೆಯನ್ನು ಸಂದಾಯ ಮಾಡುವುದಕ್ಕೆ ಬಾಧ್ಯನಾಗುವ ದಿನಾಂಕದ ನಿಕಟಪೂರ್ವ ದಿನದಂದು ದಾಸ್ತಾನಿನಲ್ಲಿರುವ ಹೂಡುವಳಿಗಳು ಮತ್ತು ದಾಸ್ತಾನಿನಲ್ಲಿರುವ ಅರೆ–ಸಿದ್ದರೂಪದ ಅಥವಾ ಸಿದ್ದರೂಪದ ಸರಕುಗಳಲ್ಲಿ ಒಳಗೊಂಡಿರುವ ಹೂಡುವಳಿಗಳಿಗೆ ಸಂಬಂಧಿಸಿದಂತೆ ಹೂಡುವಳಿ ತೆರಿಗೆಯ ಜಮೆಯನ್ನು ತೆಗೆದುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು;

(ಬಿ) ಪ್ರಕರಣ 25ರ ಉಪಪ್ರಕರಣ (3)ರ ಅಡಿಯಲ್ಲಿ ನೋಂದಣಿಯನ್ನು ತೆಗೆದುಕೊಳ್ಳುವ ಒಬ್ಬ ವ್ಯಕ್ತಿಯು, ನೋಂದಣಿ ಮಂಜೂರಾದ ದಿನಾಂಕದ ನಿಕಟಪೂರ್ವ ದಿನದಂದು ದಾಸ್ತಾನಿನಲ್ಲಿರುವ ಹೂಡುವಳಿಗಳು ಮತ್ತು ದಾಸ್ತಾನಿನಲ್ಲಿರುವ ಅರೆ–ಸಿದ್ದರೂಪದ ಅಥವಾ ಸಿದ್ದರೂಪದ ಸರಕುಗಳಲ್ಲಿ ಒಳಗೊಂಡಿರುವ ಹೂಡುವಳಿಗಳಿಗೆ ಸಂಬಂಧಿಸಿದಂತೆ ಹೂಡುವಳಿ ತೆರಿಗೆಯ ಜಮೆಯನ್ನು ತೆಗೆದುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು.

(ಸಿ) ಯಾವುದೇ ನೋಂದಾಯಿತ ವ್ಯಕ್ತಿಯು ಪ್ರಕರಣದ 10ರ ಅಡಿಯಲ್ಲಿ ತೆರಿಗೆ ಸಂದಾಯ ಮಾಡುವುದನ್ನು ಸಮಾಪ್ತಿಗೊಳಿಸಿದಾಗ ಅವನು, ಪ್ರಕರಣ 9ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡುವುದಕ್ಕೆ ಬಾಧ್ಯನಾಗುವ ದಿನಾಂಕದ ನಿಕಟಪೂರ್ವ ದಿನದಂದು ದಾಸ್ತಾನಿನಲ್ಲಿರುವ ಹೂಡುವಳಿಗಳು ಮತ್ತು ದಾಸ್ತಾನಿನಲ್ಲಿರುವ ಅರೆ–ಸಿದ್ದರೂಪದ ಅಥವಾ ಸಿದ್ದರೂಪದ ಸರಕುಗಳಲ್ಲಿ ಮತ್ತು ಬಂಡವಾಳ ಸರಕುಗಳಲ್ಲಿ ಒಳಗೊಂಡಿರುವ ಹೂಡುವಳಿಗಳಿಗೆ ಸಂಬಂಧಿಸಿದಂತೆ ಹೂಡುವಳಿ ತೆರಿಗೆಯ ಜಮೆಯನ್ನು ತೆಗೆದುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು:

ಪರಂತು, ಬಂಡವಾಳ ಸರಕುಗಳ ಮೇಲಿನ ಜಮೆಯನ್ನು ನಿಯಮಿಸಬಹುದಾದ ಅಂಥ ಶೇಕಡವಾರು ಅಂಶಗಳಷ್ಟು ಕಡಿಮೆ ಮಾಡತಕ್ಕದ್ದು.

(ಡಿ) ಒಬ್ಬ ನೋಂದಾಯಿತ ವ್ಯಕ್ತಿಯಿಂದ ಮಾಡಲಾದ, ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಒಂದು ವಿನಾಯಿತಿ ಪೂರೈಕೆಯು, ತೆರಿಗೆದಾಯಕ ಪೂರೈಕೆಯಾದಾಗ, ಅಂಥ ವಿನಾಯಿತಿ ಪೂರೈಕೆಯು ತೆರಿಗೆದಾಯಕವಾಗುವ ದಿನಾಂಕದ ನಿಕಟಪೂರ್ವ ದಿನದಂದು ದಾಸ್ತಾನಿನಲ್ಲಿರುವ ಹೂಡುವಳಿಗಳಿಗೆ ಮತ್ತು ಅಂಥ ವಿನಾಯಿತಿ ಪೂರೈಕೆಗೆ ಸಂಬಂಧಿಸಿದ ದಾಸ್ತಾನಿನಲ್ಲಿರುವ ಅರೆ–ಸಿದ್ದರೂಪದ ಅಥವಾ ಸಿದ್ದರೂಪದ ಸರಕುಗಳಲ್ಲಿ ಒಳಗೊಂಡಿರುವ ಹೂಡುವಳಿಗಳಿಗೆ, ಹಾಗೂ ಅಂಥ ವಿನಾಯಿತಿ ಪೂರೈಕೆಗೆಗಾಗಿ ಪ್ರತ್ಯೇಕವಾಗಿ ಉಪಯೋಗಿಸಿದ ಬಂಡವಾಳ ಸರಕುಗಳಿಗೆ ಸಂಬಂಧಿಸಿದ ಹೂಡುವಳಿ ತೆರಿಗೆಯ ಜಮೆಯನ್ನು ತೆಗೆದುಕೊಳ್ಳಲು ಅಂಥ ವ್ಯಕ್ತಿಯು ಹಕ್ಕುಳ್ಳವನಾಗಿರತಕ್ಕದ್ದು:

ಪರಂತು, ಬಂಡವಾಳ ಸರಕುಗಳ ಮೇಲಿನ ಜಮೆಯನ್ನು ನಿಯಮಿಸಬಹುದಾದ ಅಂಥ ಶೇಕಡವಾರು ಅಂಶಗಳಷ್ಟು ಕಡಿಮೆ ಮಾಡತಕ್ಕದ್ದು.

(2) ಒಬ್ಬ ನೋಂದಾಯಿತ ವ್ಯಕ್ತಿಯು, ಆತನಿಗೆ ಮಾಡಲಾದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಯಾವುದೇ ಪೂರೈಕೆಗೆ ಸಂಬಂಧಿಸಿದಂತೆ, ಅಂಥ ಪೂರೈಕೆಗೆ ಸಂಬಂಧಿಸಿದಂತೆ ನೀಡಲಾದ ಬೆಲೆಪಟ್ಟಿಯ ದಿನಾಂಕದಿಂದ ಒಂದು ವರ್ಷ ಮುಕ್ತಾಯಗೊಂಡ ನಂತರ ಉಪಪ್ರಕರಣ (1)ರ ಅಡಿಯಲ್ಲಿ ಹೂಡುವಳಿ ತೆರಿಗೆ ಜಮೆಯನ್ನು ತೆಗೆದುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

(3) ಬಾಧ್ಯತೆಗಳ ವರ್ಗಾವಣೆಗಾಗಿ ಇರುವ ನಿರ್ದಿಷ್ಟ ನಿಬಂಧನೆಗಳೊಂದಿಗೆ, ವ್ಯವಹಾರದ ಮಾರಾಟ, ವಿಲೀನ, ಬೇರ್ಪಡೆ, ಸಮ್ಮಿಲನಗೊಳ್ಳುವಿಕೆ, ಭೋಗ್ಯ ಅಥವಾ ವರ್ಗಾವಣೆ ಇವುಗಳಿಂದಾಗಿ ನೋಂದಾಯಿತ ವ್ಯಕ್ತಿಯ ಸಂರಚನೆಯಲ್ಲಿ ಬದಲಾವಣೆಯಾದಾಗ, ಆತನ ವಿದ್ಯುನ್ಮಾನ ಜಮಾ ಖಾತೆಯಲ್ಲಿ ಬಳಕೆಯಾಗದೆ ಉಳಿದಿರುವ ಹೂಡುವಳಿ ತೆರಿಗೆ ಜಮೆಯನ್ನು, ನಿಯಮಿಸಬಹುದಾದ ಅಂಥ ವಿಧಾನದಲ್ಲಿ, ಅಂತಹ ಮಾರಾಟಗೊಂಡ, ವಿಲೀನಗೊಂಡ, ಬೇರ್ಪಡೆಗೊಂಡ, ಸಮ್ಮಿಲನಗೊಂಡ, ಭೋಗ್ಯಕ್ಕೆ ನೀಡಲಾದ ಅಥವಾ ವರ್ಗಾವಣೆಗೊಂಡ ವ್ಯವಹಾರಕ್ಕೆ ವರ್ಗಾಯಿಸಲು ಸದರಿ ತೆರಿಗೆದಾಯಕ ವ್ಯಕ್ತಿಗೆ ಅವಕಾಶವಿರತಕ್ಕದ್ದು.

(4) ಹೂಡುವಳಿ ತೆರಿಗೆಯ ಜಮೆಯನ್ನು ಉಪಯೋಗಿಸಿರುವ ಯಾವುದೇ ನೋಂದಾಯಿತ ವ್ಯಕ್ತಿಯು ಪ್ರಕರಣ 10ರ ಅಡಿಯಲ್ಲಿ ತೆರಿಗೆ ಸಂದಾಯ ಮಾಡುವ ಆಯ್ಕೆಯನ್ನು ಮಾಡಿಕೊಂಡಾಗ ಅಥವಾ ಆತನಿಂದ ಪೂರೈಕೆಯಾಗುವ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡು ಸಂಪೂರ್ಣವಾಗಿ ವಿನಾಯಿತಿ ಆದಾಗ, ಸಂದರ್ಭಾನುಸಾರವಾಗಿ ಅಂಥ ಬದಲಾವಣೆಗೊಂಡ ದಿನಾಂಕದ ಅಥವಾ ಅಂಥ ವಿನಾಯಿತಿಗೊಂಡ ದಿನಾಂಕದ ನಿಕಟ ಪೂರ್ವ ದಿನದಂದು ದಾಸ್ತಾನಿನಲ್ಲಿರುವ ಹೂಡುವಳಿಗಳಿಗೆ ಮತ್ತು ದಾಸ್ತಾನಿನಲ್ಲಿರುವ ಅರೆ–ಸಿದ್ಧರೂಪದ ಅಥವಾ ಸಿದ್ಧರೂಪದ ಸರಕುಗಳಲ್ಲಿ ಒಳಗೊಂಡಿರುವ ಹೂಡುವಳಿಗಳಿಗೆ ಅಥವಾ ಬಂಡವಾಳ ಸರಕುಗಳಿಗೆ ಸಂಬಂಧಿಸಿದಂತೆ ನಿಯಮಿಸಬಹುದಾದ ಅಂಥ ಶೇಕಡವಾರು ಅಂಶಗಳಷ್ಟು ಕಡಿಮೆ ಮಾಡಿದ, ಸಂಬಂಧಿಸಿದ ಹೂಡುವಳಿ ತೆರಿಗೆ ಜಮೆಗೆ ಸಮನಾದ ಮೊತ್ತವನ್ನು ಆತನು ವಿದ್ಯುನ್ಮಾನ ಜಮಾ ಖಾತೆಗೆ ಅಥವಾ ವಿದ್ಯುನ್ಮಾನ ನಗದು ಖಾತೆಗೆ ಖರ್ಚು ಹಾಕುವ ಮುಖಾಂತರ ಸಂದಾಯ ಮಾಡತಕ್ಕದ್ದು:

ಪರಂತು, ಅಂತಹ ಮೊತ್ತವನ್ನು ಸಂದಾಯ ಮಾಡಿದ ನಂತರ ಆತನ ವಿದ್ಯುನ್ಮಾನ ಜಮೆ ಖಾತೆಯಲ್ಲಿ ಬಾಕಿಯಿರುವ ಯಾವುದೇ ಹೂಡುವಳಿ ತೆರಿಗೆಯ ಜಮೆಯು ರದ್ದಾಗತಕ್ಕದ್ದು.

(5) ಉಪಪ್ರಕರಣ (1)ರ ಅಡಿಯಲ್ಲಿನ ಜಮೆಯ ಮೊತ್ತವನ್ನು ಮತ್ತು ಉಪಪ್ರಕರಣ (4)ರ ಅಡಿಯಲ್ಲಿ ಸಂದಾಯ ಮಾಡಬೇಕಾದ ಮೊತ್ತವನ್ನು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಲೆಕ್ಕ ಹಾಕತಕ್ಕದ್ದು.

(6) ಹೂಡುವಳಿ ತೆರಿಗೆ ಜಮೆಯನ್ನು ತೆಗೆದುಕೊಂಡಿರುವ ಬಂಡವಾಳ ಸರಕುಗಳ ಅಥವಾ ಸ್ಥಾವರ ಮತ್ತು ಯಂತ್ರೋಪಕರಣಗಳ ಪೂರೈಕೆಯ ಸಂದರ್ಭದಲ್ಲಿ ನೋಂದಾಯಿತ ವ್ಯಕ್ತಿಯು, ಸದರಿ ಬಂಡವಾಳ ಸರಕುಗಳು ಅಥವಾ ಸ್ಥಾವರ ಮತ್ತು ಯಂತ್ರೋಪಕರಣಗಳ ಮೇಲೆ ತೆಗೆದುಕೊಂಡ, ನಿಯಮಿಸಬಹುದಾದ ಅಂಥ ಶೇಕಡವಾರು ಅಂಶಗಳಷ್ಟನ್ನು ಕಡಿಮೆ ಮಾಡಿದ, ಹೂಡುವಳಿ ತೆರಿಗೆ ಜಮೆಗೆ ಸಮನಾದ ಮೊತ್ತ ಅಥವಾ ಅಂಥ ಬಂಡವಾಳ ಸರಕುಗಳ ಅಥವಾ ಸ್ಥಾವರ ಮತ್ತು ಯಂತ್ರೋಪಕರಣಗಳ, ಪ್ರಕರಣ 15ರ ಅಡಿಯಲ್ಲಿ ನಿರ್ಧರಿಸಲಾದ, ವಹಿವಾಟಿನ ಮೌಲ್ಯದ ಮೇಲೆ ತೆರಿಗೆ, ಇವುಗಳಲ್ಲಿ ಯಾವುದು ಅಧಿಕವೋ ಅದನ್ನು ಸಂದಾಯ ಮಾಡತಕ್ಕದ್ದು:

ಪರಂತು, ರಿಫ್ರ್ಯಾಕ್ಟರಿ ಇಟ್ಟಿಗೆಗಳು, ಎರಕಗಳು ಮತ್ತು ಅಚ್ಚುಗಳು, ಜಿಗ್ಸ್ ಮತ್ತು ಜೋಡಣೆಗಳು ರದ್ದಿಯಾಗಿ (scrap) ಪೂರೈಕೆಯಾಗಿದ್ದಲ್ಲಿ, ತೆರಿಗೆದಾಯಕ ವ್ಯಕ್ತಿಯು ಅಂಥ ಸರಕುಗಳ, ಪ್ರಕರಣ 15ರ ಅಡಿಯಲ್ಲಿ ನಿರ್ಧರಿಸಲಾದ, ವಹಿವಾಟಿನ ಮೌಲ್ಯದ ಮೇಲೆ ತೆರಿಗೆಯನ್ನು ಸಂದಾಯ ಮಾಡಬಹುದು.

19. ಮಜೂರಿ ಕೆಲಸಕ್ಕೆ ಕಳುಹಿಸಿದ ಹೂಡುವಳಿಗಳು ಮತ್ತು ಬಂಡವಾಳ ಸರಕುಗಳಿಗೆ ಸಂಬಂಧಿಸಿದಂತೆ ಹೂಡುವಳಿ ತೆರಿಗೆ ಜಮೆಯನ್ನು ತೆಗೆದುಕೊಳ್ಳುವುದು.– (1) ಮಜೂರಿ ಕೆಲಸಗಾರನಿಗೆ ಮಜೂರಿ ಕೆಲಸಕ್ಕಾಗಿ ಕಳುಹಿಸಿದ ಹೂಡುವಳಿಗಳ ಮೇಲೆ, ನಿಯಮಿಸಬಹುದಾದ ಅಂಥ ಷರತ್ತುಗಳು ಹಾಗೂ ನಿರ್ಬಂಧಗಳಿಗೆ ಒಳಪಟ್ಟು, ಹೂಡುವಳಿ ತೆರಿಗೆ ಜಮೆಗೆ ಪ್ರಧಾನಕರ್ತನಿಗೆ ಅವಕಾಶ ನೀಡತಕ್ಕದ್ದು.

(2) ಪ್ರಕರಣ 16ರ ಉಪಪ್ರಕರಣ (2)ರ ಖಂಡ (ಬಿ)ಯಲ್ಲಿ ಏನೇ ಒಳಗೊಂಡಿದ್ದರೂ, ಪ್ರಧಾನಕರ್ತನು ಹೂಡುವಳಿಗಳನ್ನು ಆತನ ವ್ಯವಹಾರದ ಸ್ಥಳಕ್ಕೆ ಮೊದಲು ತರದೆ, ಮಜೂರಿ ಕೆಲಸಕ್ಕಾಗಿ ಮಜೂರಿ ಕೆಲಸಗಾರನಿಗೆ ನೇರವಾಗಿ ಕಳುಹಿಸಿದ್ದರೂ ಸಹ, ಹೂಡುವಳಿಗಳ ಮೇಲೆ ಹೂಡುವಳಿ ತೆರಿಗೆ ಜಮೆಯನ್ನು ತೆಗೆದುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು.

(3) ಪ್ರಧಾನಕರ್ತನು ಮಜೂರಿ ಕೆಲಸಕ್ಕಾಗಿ ಕಳುಹಿಸಿರುವ ಹೂಡುವಳಿಗಳನ್ನು, ಮಜೂರಿ ಕೆಲಸ ಪೂರ್ಣಗೊಂಡ ನಂತರ ಅಥವಾ ಬೇರೆ ಯಾವುದಕ್ಕಾದರೂ, ಮರಳಿ ಸ್ವೀಕರಿಸದಿದ್ದಲ್ಲಿ ಅಥವಾ ಪ್ರಕರಣ 143ರ ಉಪಪ್ರಕರಣ (1)ರ ಖಂಡ (ಎ) ಅಥವಾ ಖಂಡ (ಬಿ)ಗೆ ಅನುಸಾರವಾಗಿ ಅವುಗಳನ್ನು ಹೊರಕ್ಕೆ ಕಳುಹಿಸಲಾದ ಒಂದು ವರ್ಷದೊಳಗಾಗಿ ಮಜೂರಿ ಕೆಲಸಗಾರನ ವ್ಯವಹಾರ ಸ್ಥಳದಿಂದ ಪೂರೈಕೆ ಮಾಡದಿದ್ದಲ್ಲಿ, ಪ್ರಧಾನ ಕರ್ತನಿಂದ ಮಜೂರಿ ಕೆಲಸಗಾರನಿಗೆ ಸದರಿ ಹೂಡುವಳಿಗಳನ್ನು ಹೊರ ಕಳುಹಿಸಲಾದ ದಿನದಂದೇ, ಅಂಥ ಹೂಡುವಳಿಗಳನ್ನು ಪೂರೈಕೆ ಮಾಡಲಾಗಿದೆ ಎಂದು ಪರಿಭಾವಿಸತಕ್ಕದ್ದು:

ಪರಂತು, ಮಜೂರಿ ಕೆಲಸಗಾರನಿಗೆ ಹೂಡುವಳಿಗಳನ್ನು ನೇರವಾಗಿ ಕಳುಹಿಸಿದ್ದಲ್ಲಿ, ಒಂದು ವರ್ಷದ ಅವಧಿಯನ್ನು ಮಜೂರಿ ಕೆಲಸಗಾರನು ಹೂಡುವಳಿಗಳನ್ನು ಸ್ವೀಕರಿಸಿದ ದಿನಾಂಕದಿಂದ ಲೆಕ್ಕಹಾಕತಕ್ಕದ್ದು.

(4) ಮಜೂರಿ ಕೆಲಸಗಾರನಿಗೆ ಮಜೂರಿ ಕೆಲಸಕ್ಕಾಗಿ ಕಳುಹಿಸಿದ ಬಂಡವಾಳ ಸರಕುಗಳ ಮೇಲೆ, ನಿಯಮಿಸಬಹುದಾದ ಅಂಥ ಷರತ್ತುಗಳು ಹಾಗೂ ನಿರ್ಬಂಧಗಳಿಗೆ ಒಳಪಟ್ಟು, ಪ್ರಧಾನಕರ್ತನಿಗೆ ಹೂಡುವಳಿ ತೆರಿಗೆ ಜಮೆಗೆ ಅವಕಾಶ ನೀಡತಕ್ಕದ್ದು.

(5) ಪ್ರಕರಣ 16ರ ಉಪಪ್ರಕರಣ (2)ರ ಖಂಡ (ಬಿ)ಯಲ್ಲಿ ಏನೇ ಒಳಗೊಂಡಿದ್ದರೂ, ಪ್ರಧಾನಕರ್ತನು ಬಂಡವಾಳ ಸರಕುಗಳನ್ನು ಆತನ ವ್ಯವಹಾರದ ಸ್ಥಳಕ್ಕೆ ಮೊದಲು ತರದೆ, ಮಜೂರಿ ಕೆಲಸಕ್ಕಾಗಿ ಮಜೂರಿ ಕೆಲಸಗಾರನಿಗೆ ನೇರವಾಗಿ ಕಳುಹಿಸಿದ್ದರೂ ಸಹ, ಬಂಡವಾಳ ಸರಕುಗಳ ಮೇಲೆ ಹೂಡುವಳಿ ತೆರಿಗೆ ಜಮೆಯನ್ನು ತೆಗೆದುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು.

(6) ಮಜೂರಿ ಕೆಲಸಕ್ಕಾಗಿ ಕಳುಹಿಸಲಾಗಿರುವ ಬಂಡವಾಳ ಸರಕುಗಳನ್ನು ಪ್ರಧಾನಕರ್ತನು, ಅವುಗಳನ್ನು ಹೊರಕ್ಕೆ ಕಳುಹಿಸಿದ ಮೂರು ವರ್ಷದೊಳಗಾಗಿ ಮರಳಿ ಸ್ವೀಕರಿಸದಿದ್ದಲ್ಲಿ, ಸದರಿ ಬಂಡವಾಳ ಸರಕುಗಳನ್ನು ಯಾವ ದಿನದಂದು ಹೊರ ಕಳುಹಿಸಲಾಗಿದೆಯೋ ಆ ದಿನದಂದೇ ಅಂಥ ಬಂಡವಾಳ ಸರಕುಗಳನ್ನು ಪ್ರಧಾನ ಕರ್ತನಿಂದ ಮಜೂರಿ ಕೆಲಸಗಾರನಿಗೆ ಪೂರೈಕೆ ಮಾಡಲಾಗಿದೆ ಎಂದು ಪರಿಭಾವಿಸತಕ್ಕದ್ದು:

ಪರಂತು, ಮಜೂರಿ ಕೆಲಸಗಾರನಿಗೆ ಬಂಡವಾಳ ಸರಕುಗಳನ್ನು ನೇರವಾಗಿ ಕಳುಹಿಸಿದ್ದಲ್ಲಿ, ಮೂರು ವರ್ಷದ ಅವಧಿಯನ್ನು ಮಜೂರಿ ಕೆಲಸಗಾರನು ಬಂಡವಾಳ ಸರಕುಗಳನ್ನು ಸ್ವೀಕರಿಸಿದ ದಿನಾಂಕದಿಂದ ಲೆಕ್ಕಹಾಕತಕ್ಕದ್ದು.

(7) ಮಜೂರಿ ಕೆಲಸಗಾರನಿಗೆ ಮಜೂರಿ ಕೆಲಸಕ್ಕಾಗಿ ಕಳುಹಿಸಿದ ಎರಕಗಳು ಮತ್ತು ಅಚ್ಚುಗಳು, ಜಿಗ್ಸ್ ಮತ್ತು ಜೋಡಣೆಗಳು ಅಥವಾ ಉಪಕರಣಗಳಿಗೆ, ಉಪಪ್ರಕರಣ (3) ಅಥವಾ ಉಪಪ್ರಕರಣ (6) ರಲ್ಲಿ ಒಳಗೊಂಡಿರುವ ಯಾವುದೂ ಅನ್ವಯಿಸತಕ್ಕದ್ದಲ್ಲ.

ವಿವರಣೆ:– ಈ ಪ್ರಕರಣದ ಉದ್ದೇಶಕ್ಕಾಗಿ, **"ಪ್ರಧಾನಕರ್ತ"** ಎಂದರೆ, ಪ್ರಕರಣ 143ರಲ್ಲಿ ಉಲ್ಲೇಖಿಸಿರುವ ವ್ಯಕ್ತಿ.

20. ಹೂಡುವಳಿ ಸೇವೆ ಹಂಚಿಕೆದಾರನಿಂದ ಜಮೆಯ ಹಂಚಿಕೆಯ ವಿಧಾನ.– (1) ಹೂಡುವಳಿ ಸೇವೆ ಹಂಚಿಕೆದಾರನು ಹಂಚಬೇಕಾದ ಹೂಡುವಳಿ ತೆರಿಗೆ ಜಮೆಯ ಮೊತ್ತವನ್ನು ಒಳಗೊಂಡಿರುವ ದಸ್ತಾವೇಜನ್ನು ನೀಡುವುದರ ಮೂಲಕ ರಾಜ್ಯ ತೆರಿಗೆ ಜಮೆಯನ್ನು ರಾಜ್ಯ ತೆರಿಗೆ ಅಥವಾ ಏಕೀಕೃತ ತೆರಿಗೆಯಂತೆ, ಮತ್ತು ಏಕೀಕೃತ ತೆರಿಗೆ ಜಮೆಯನ್ನು ಏಕೀಕೃತ ತೆರಿಗೆ ಅಥವಾ ರಾಜ್ಯ ತೆರಿಗೆಯಂತೆ ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಹಂಚಿಕೆ ಮಾಡತಕ್ಕದ್ದು.

(2) ಹೂಡುವಳಿ ಸೇವೆ ಹಂಚಿಕೆದಾರನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಜಮೆಯನ್ನು ಹಂಚಿಕೆ ಮಾಡಬಹುದು, ಎಂದರೆ:–

(ಎ) ನಿಯಮಿಸಬಹುದಾದ ಅಂಥ ವಿವರಗಳನ್ನು ಒಳಗೊಂಡಿರುವ ದಸ್ತಾವೇಜಿನ ಆಧಾರದ ಮೇಲೆ ಜಮೆಯನ್ನು ಸ್ವೀಕರಿಸುವವರಿಗೆ ಜಮೆಯನ್ನು ಹಂಚಿಕೆ ಮಾಡಬಹುದು;

(ಬಿ) ಹಂಚಿಕೆ ಮಾಡಿದ ಜಮೆಯ ಮೊತ್ತವು ಹಂಚಿಕೆಗೆ ಲಭ್ಯವಿರುವ ಜಮೆಯ ಮೊತ್ತವನ್ನು ಮೀರತಕ್ಕದ್ದಲ್ಲ;

(ಸಿ) ಜಮೆಯನ್ನು ಸ್ವೀಕರಿಸುವವನಿಗೇ ಸಂಬಂಧಿಸಿದುದು ಎನ್ನಬಹುದಾದ ಹೂಡುವಳಿ ಸೇವೆಗಳ ಮೇಲೆ ಸಂದಾಯ ಮಾಡಿದ ತೆರಿಗೆಯ ಜಮೆಯನ್ನು ಅಂತಹ ಸ್ವೀಕರಿಸುವವನಿಗೆ ಮಾತ್ರ ಹಂಚಿಕೆ ಮಾಡತಕ್ಕದ್ದು;

(ಡಿ) ಒಬ್ಬನಿಗಿಂತ ಹೆಚ್ಚಿಗೆ ಸ್ವೀಕರಿಸುವವರಿಗೆ ಸಂಬಂಧಿಸಿದುದು ಎನ್ನಬಹುದಾದ ಹೂಡುವಳಿ ಸೇವೆಗಳ ಮೇಲೆ ಸಂದಾಯ ಮಾಡಲಾದ ತೆರಿಗೆಯ ಜಮೆಯನ್ನು, ಹೂಡುವಳಿ ಸೇವೆಗಳು ಯಾರಿಗೆ ಸಂಬಂಧಿಸಿದುದು ಎನ್ನಬಹುದೋ ಅಂಥ ಸ್ವೀಕರಿಸುವವರ ಮಧ್ಯೆ ಮಾತ್ರ ಹಂಚಿಕೆ ಮಾಡತಕ್ಕದ್ದು ಮತ್ತು ಅಂಥ ಹಂಚಿಕೆಯು ಹೂಡುವಳಿ ಸೇವೆಗಳು ಯಾರಿಗೆ ಸಂಬಂಧಿಸಿದುದು ಎನ್ನಬಹುದೋ ಮತ್ತು ಚಾಲ್ತಿ ವರ್ಷದಲ್ಲಿನ ಸದರಿ ಸಂಬಂಧಿಸಿದ ಅವಧಿಯಲ್ಲಿ ಕಾರ್ಯಾಚರಣೆಯಲ್ಲಿರುವ ಅಂಥ ಎಲ್ಲಾ ಸ್ವೀಕರಿಸುವವರ ವಹಿವಾಟಿನ ಒಟ್ಟಾರೆಯ ಪ್ರಮಾಣದಲ್ಲಿನ ಸಂಬಂಧಿಸಿದ ಅವಧಿಯಲ್ಲಿನ ಅಂಥ ಸ್ವೀಕರಿಸುವವನ ಒಂದು ರಾಜ್ಯದಲ್ಲಿನ ವಹಿವಾಟಿನ ಅಥವಾ ಒಂದು ಕೇಂದ್ರಾಡಳಿತ ಪ್ರದೇಶದಲ್ಲಿನ ವಹಿವಾಟಿನ ಭಾಗದ ಅನುಪಾತದ ಆಧಾರದಲ್ಲಿರತಕ್ಕದ್ದು;

(ಇ) ಸ್ವೀಕರಿಸುವವರೆಲ್ಲರಿಗೆ ಸಂಬಂಧಿಸಿದುದು ಎನ್ನಬಹುದಾದ ಹೂಡುವಳಿ ಸೇವೆಗಳ ಮೇಲೆ ಸಂದಾಯ ಮಾಡಿದ ತೆರಿಗೆಯ ಜಮೆಯನ್ನು ಅಂಥ ಸ್ವೀಕರಿಸುವವರ ಮಧ್ಯೆ ಮಾತ್ರ ಹಂಚಿಕೆ ಮಾಡತಕ್ಕದ್ದು ಮತ್ತು ಅಂಥ ಹಂಚಿಕೆಯು ಚಾಲ್ತಿ ವರ್ಷದಲ್ಲಿನ ಸದರಿ ಸಂಬಂಧಿಸಿದ ಅವಧಿಯಲ್ಲಿ ಕಾರ್ಯಾಚರಣೆಯಲ್ಲಿರುವ ಎಲ್ಲಾ ಸ್ವೀಕರಿಸುವವರ ವಹಿವಾಟಿನ ಒಟ್ಟಾರೆಯ ಪ್ರಮಾಣದಲ್ಲಿನ ಸಂಬಂಧಿಸಿದ ಅವಧಿಯ ಅಂಥ ಸ್ವೀಕರಿಸುವವನ ಒಂದು ರಾಜ್ಯದಲ್ಲಿನ ವಹಿವಾಟಿನ ಅಥವಾ ಒಂದು ಕೇಂದ್ರಾಡಳಿತ ಪ್ರದೇಶದಲ್ಲಿನ ವಹಿವಾಟಿನ ಭಾಗದ ಅನುಪಾತದ ಆಧಾರದಲ್ಲಿರತಕ್ಕದ್ದು;

ವಿವರಣೆ :– ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) 'ಸಂಬಂಧಿಸಿದ ಅವಧಿ' ಯು,–

(i) ಜಮೆಯನ್ನು ಹಂಚಿಕೆ ಮಾಡಬೇಕಿರುವ ವರ್ಷದ ಹಿಂದಿನ ಹಣಕಾಸು ವರ್ಷದಲ್ಲಿ ಜಮೆಯನ್ನು ಸ್ವೀಕರಿಸುವವರು ಅವರ ರಾಜ್ಯಗಳಲ್ಲಿ ಅಥವಾ ಕೇಂದ್ರಾಡಳಿತ ಪ್ರದೇಶಗಳಲ್ಲಿ ವಹಿವಾಟನ್ನು ಹೊಂದಿದ್ದರೆ, ಸದರಿ ಹಣಕಾಸು ವರ್ಷವಾಗಿರತಕ್ಕದ್ದು; ಅಥವಾ

(ii) ಜಮೆಯನ್ನು ಸ್ವೀಕರಿಸುವ ಕೆಲವರು ಅಥವಾ ಎಲ್ಲರೂ, ಜಮೆಯನ್ನು ಹಂಚಿಕೆ ಮಾಡಬೇಕಿರುವ ವರ್ಷದ ಹಿಂದಿನ ಹಣಕಾಸು ವರ್ಷದಲ್ಲಿ ಅವರ ರಾಜ್ಯಗಳಲ್ಲಿ ಅಥವಾ ಕೇಂದ್ರಾಡಳಿತ ಪ್ರದೇಶಗಳಲ್ಲಿ ಯಾವುದೇ ವಹಿವಾಟನ್ನು ಹೊಂದಿಲ್ಲದಿದ್ದರೆ, ಜಮೆಯನ್ನು ಹಂಚಿಕೆ ಮಾಡಬೇಕಿರುವ ತಿಂಗಳ ಹಿಂದಿನ, ಸ್ವೀಕರಿಸುವವರೆಲ್ಲರ ಅಂಥ ವಹಿವಾಟಿನ ವಿವರಗಳು ಲಭ್ಯವಿರುವ ಕೊನೆಯ ತ್ರೈಮಾಸಿಕವಾಗಿರತಕ್ಕದ್ದು.

(ಬಿ) 'ಜಮೆಯನ್ನು ಸ್ವೀಕರಿಸುವವನು' ಎಂದರೆ, ಹೂಡುವಳಿ ಸೇವೆ ಹಂಚಿಕೆದಾರನು ಹೊಂದಿರುವ ಶಾಶ್ವತ ಖಾತೆ ಸಂಖ್ಯೆಯನ್ನೇ ಹೊಂದಿರುವ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆದಾರ.

(ಸಿ) ಈ ಅಧಿನಿಯಮದ ಅಡಿಯಲ್ಲಿ ತೆರಿಗೆದಾಯಕ ಸರಕುಗಳ ಪೂರೈಕೆಯಲ್ಲಿಯೂ ಹಾಗೂ ತೆರಿಗೆ ವಿಧಿಸಲಾಗದ ಸರಕುಗಳ ಪೂರೈಕೆಯಲ್ಲಿಯೂ ತೊಡಗಿರುವ ಯಾವುದೇ ನೋಂದಾಯಿತ ವ್ಯಕ್ತಿಗೆ ಸಂಬಂಧಿಸಿದಂತೆ, 'ವಹಿವಾಟು' ಎಂದರೆ, ಸಂವಿಧಾನದ ಏಳನೇ ಅನುಸೂಚಿಯ ಪಟ್ಟಿ I ರ 84ನೇ ನಮೂದು ಮತ್ತು ಸದರಿ ಅನುಸೂಚಿಯ ಪಟ್ಟಿ IIರ 51 ಮತ್ತು 54ನೇ ನಮೂದಿನ ಅಡಿಯಲ್ಲಿ ವಿಧಿಸಲಾದ ಯಾವುದೇ ಸುಂಕ ಅಥವಾ ತೆರಿಗೆಯ ಮೊತ್ತದಷ್ಟನ್ನು ಕಡಿಮೆ ಮಾಡಿದ ವಹಿವಾಟಿನ ಮೌಲ್ಯ;

21. ಅಧಿಕವಾಗಿ ಹಂಚಿಕೆ ಮಾಡಿದ ಜಮೆಯ ವಸೂಲಿಯ ವಿಧಾನ.– ಪ್ರಕರಣ 20ರಲ್ಲಿ ಒಳಗೊಂಡಿರುವ ಉಪಬಂಧಗಳನ್ನು ಉಲ್ಲಂಘಿಸಿ ಹೂಡುವಳಿ ಸೇವೆ ಹಂಚಿಕೆದಾರನು, ಜಮೆಯನ್ನು ಹಂಚಿಕೆ ಮಾಡಿದುದರ ಪರಿಣಾಮವಾಗಿ ಒಬ್ಬ ಅಥವಾ ಅದಕ್ಕಿಂತ ಹೆಚ್ಚಿನ ಸ್ವೀಕರಿಸುವವರಿಗೆ ಜಮೆಯು ಅಧಿಕವಾಗಿ ಹಂಚಿಕೆಯಾಗಿದ್ದಲ್ಲಿ, ಹಾಗೆ ಹಂಚಿಕೆ ಮಾಡಿದ ಅಧಿಕ ಜಮೆಯನ್ನು ಬಡ್ಡಿಯೊಂದಿಗೆ ಅಂತಹ ಸ್ವೀಕರಿಸುವವರಿಂದ ವಸೂಲಿ ಮಾಡತಕ್ಕದ್ದು ಮತ್ತು ಪ್ರಕರಣ 73 ಅಥವಾ ಸಂದರ್ಭಾನುಸಾರವಾಗಿ ಪ್ರಕರಣ 74ರ ಉಪಬಂಧಗಳು *ಯಥೋಚಿತ ವ್ಯತ್ಯಾಸಗಳೊಂದಿಗೆ* ವಸೂಲು ಮಾಡಬೇಕಾದ ಮೊತ್ತವನ್ನು ನಿರ್ಧರಿಸುವುದಕ್ಕಾಗಿ ಅನ್ವಯವಾಗತಕ್ಕದ್ದು.

ಅಧ್ಯಾಯ-VI
ನೋಂದಣಿ

22. ನೋಂದಣಿಗೆ ಬಾಧ್ಯರಾದ ವ್ಯಕ್ತಿಗಳು.– (1) ರಾಜ್ಯದಲ್ಲಿ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ತೆರಿಗೆದಾಯಕ ಪೂರೈಕೆ ಮಾಡುತ್ತಿರುವ ಪ್ರತಿಯೊಬ್ಬ ಪೂರೈಕೆದಾರನು, ಆತನ ಸಮಗ್ರ ವಹಿವಾಟು ಒಂದು ಹಣಕಾಸು ವರ್ಷದಲ್ಲಿ ಇಪ್ಪತ್ತು ಲಕ್ಷ ರೂಪಾಯಿಗಳನ್ನು ಮೀರಿದರೆ, ಈ ಅಧಿನಿಯಮದ ಅಡಿಯಲ್ಲಿ ನೋಂದಣಿಗೆ ಬಾಧ್ಯನಾಗತಕ್ಕದ್ದು:

ಪರಂತು, ಅಂಥ ವ್ಯಕ್ತಿಯು, ಯಾವುದೇ ವಿಶೇಷ ಪ್ರವರ್ಗದ ರಾಜ್ಯಗಳಲ್ಲಿ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ತೆರಿಗೆದಾಯಕ ಪೂರೈಕೆ ಮಾಡಿದ್ದಲ್ಲಿ, ಆತನ ಸಮಗ್ರ ವಹಿವಾಟು ಒಂದು ಹಣಕಾಸು ವರ್ಷದಲ್ಲಿ ಹತ್ತು ಲಕ್ಷ ರೂಪಾಯಿಗಳನ್ನು ಮೀರಿದರೆ, ಆತನು ನೋಂದಣಿಗೆ ಬಾಧ್ಯನಾಗತಕ್ಕದ್ದು:

(2) ನಿಗದಿಪಡಿಸಲಾದ ದಿನದ ನಿಕಟ ಪೂರ್ವ ದಿನದಂದು, ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ನೋಂದಣಿಯಾಗಿರುವ ಅಥವಾ ಪರವಾನಗಿಯನ್ನು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯು, ನಿಗದಿಪಡಿಸಲಾದ ದಿನದಿಂದ ಜಾರಿಗೆ ಬರುವಂತೆ, ಈ ಅಧಿನಿಯಮದ ಅಡಿಯಲ್ಲಿ ನೋಂದಣಿಗೆ ಬಾಧ್ಯನಾಗತಕ್ಕದ್ದು:

(3) ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತನಾದ ಒಬ್ಬ ತೆರಿಗೆದಾಯಕ ವ್ಯಕ್ತಿಯಿಂದ ನಡೆಸಲಾಗುತ್ತಿದ್ದ ಒಂದು ವ್ಯವಹಾರವು, ಉತ್ತರಾಧಿಕಾರದ ಅಥವಾ ಅನ್ಯಥಾ ಕಾರಣದಿಂದಾಗಲಿ, ಮತ್ತೊಬ್ಬ ವ್ಯಕ್ತಿಗೆ ಚಾಲ್ತಿಯಲ್ಲಿರುವ ಸ್ಥಿತಿಯಲ್ಲಿಯೇ ವರ್ಗಾವಣೆಯಾಗಿದ್ದಲ್ಲಿ, ವರ್ಗಾಯಿತನು ಅಥವಾ ಸಂದರ್ಭಾನುಸಾರ ಉತ್ತರಾಧಿಕಾರಿಯು, ಅಂಥ ವರ್ಗಾವಣೆಯ ಅಥವಾ ಉತ್ತರಾಧಿಕಾರದ ದಿನಾಂಕದಿಂದ ಜಾರಿಗೆ ಬರುವಂತೆ ನೋಂದಣಿಗೆ ಬಾಧ್ಯನಿರತಕ್ಕದ್ದು.

(4) ಉಪ–ಪ್ರಕರಣ (1) ಮತ್ತು (3)ರಲ್ಲಿ ಏನೇ ಒಳಗೊಂಡಿದ್ದರೂ, ಒಂದು ಉಚ್ಚನ್ಯಾಯಾಲಯದ, ಅಥವಾ ನ್ಯಾಯಾಧಿಕರಣದ ಅಥವಾ ಅನ್ಯಥಾ ಒಂದು ಆದೇಶದ ಅನುಸರಣೆಗಾಗಿ ಸಂದರ್ಭಾನುಸಾರವಾಗಿ ಒಂದು ಯೋಜನೆಯ ಮಂಜೂರಾತಿ ಅಥವಾ ಸಮ್ಮಿಲನದ ಏರ್ಪಾಡಿಗಾಗಿ ಅಥವಾ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಕಂಪನಿಗಳ ಬೇರ್ಪಡಿಕೆಯಿಂದಾಗಿ ಆದ ವರ್ಗಾವಣೆಯ ಸಂದರ್ಭದಲ್ಲಿ, ಉಚ್ಚನ್ಯಾಯಾಲಯದ ಅಥವಾ ನ್ಯಾಯಾಧಿಕರಣದ ಅಂಥ ಆದೇಶವನ್ನು ಜಾರಿಗೊಳಿಸುವುದಕ್ಕಾಗಿ ಕಂಪನಿಗಳ ರಿಜಿಸ್ಟ್ರಾರ್‌ನು ನಿಗಮದ ಪ್ರಮಾಣಪತ್ರ ನೀಡುವ ದಿನಾಂಕದಿಂದ ಜಾರಿಗೆ ಬರುವಂತೆ ನೋಂದಣಿಗೆ ವರ್ಗಾಯಿತನು ಬಾಧ್ಯನಾಗತಕ್ಕದ್ದು:

ವಿವರಣೆ:– ಈ ಪ್ರಕರಣದ ಉದ್ದೇಶಗಳಿಗಾಗಿ,–

(i) **"ಸಮಗ್ರ ವಹಿವಾಟು"** ಎಂಬ ಪದಾವಳಿಯು, ತೆರಿಗೆದಾಯಕ ವ್ಯಕ್ತಿಯಿಂದ, ತನ್ನ ಸ್ವಂತ ಖಾತೆಯ ಮೇಲೆ ಮಾಡಿದ ಅಥವಾ ಆತನ ಎಲ್ಲಾ ಪ್ರಧಾನಕರ್ತರುಗಳ ಪರವಾಗಿ ಮಾಡಿದ ಎಲ್ಲಾ ಪೂರೈಕೆಗಳನ್ನು ಒಳಗೊಳ್ಳತಕ್ಕದ್ದು;

(ii) ಒಬ್ಬ ನೋಂದಾಯಿತ ಮಜೂರಿ ಕೆಲಸಗಾರನಿಂದ ಮಜೂರಿ ಕೆಲಸ ಪೂರ್ಣಗೊಂಡ ನಂತರ ಮಾಡಿದ ಸರಕುಗಳ ಪೂರೈಕೆಯನ್ನು, ಪ್ರಕರಣ 143ರಲ್ಲಿ ಉಲ್ಲೇಖಿಸಲಾದ ಪ್ರಧಾನಕರ್ತನಿಂದಾದ ಸರಕುಗಳ ಪೂರೈಕೆ ಎಂದು ಪರಿಗಣಿಸತಕ್ಕದ್ದು, ಮತ್ತು ಅಂಥ ಸರಕುಗಳ ಮೌಲ್ಯವು ನೋಂದಾಯಿತ ಮಜೂರಿ ಕೆಲಸಗಾರನ ಸಮಗ್ರ ವಹಿವಾಟನಲ್ಲಿ ಒಳಗೊಳ್ಳತಕ್ಕದ್ದಲ್ಲ;

(iii) **"ವಿಶೇಷ ಪ್ರವರ್ಗದ ರಾಜ್ಯಗಳು"** ಎನ್ನುವ ಪದಾವಳಿಯು, ಸಂವಿಧಾನದ 279ಎ ಅನುಚ್ಛೇದದ (4)ನೇ ಖಂಡದ (ಜಿ) ಉಪ–ಖಂಡದ ಅಡಿಯಲ್ಲಿ ನಿರ್ದಿಷ್ಟಪಡಿಸಿರುವ ರಾಜ್ಯಗಳು ಎಂದು ಅರ್ಥೈಸತಕ್ಕದ್ದು.

23. ನೋಂದಣಿಗೆ ಬಾಧ್ಯರಲ್ಲದ ವ್ಯಕ್ತಿಗಳು. (1) ಈ ಕೆಳಕಂಡ ವ್ಯಕ್ತಿಗಳು ನೋಂದಣಿಗೆ ಬಾಧ್ಯರಿರತಕ್ಕದ್ದಲ್ಲ, ಎಂದರೆ:–

(ಎ) ಈ ಅಧಿನಿಯಮದ ಅಡಿಯಲ್ಲಿ ಅಥವಾ ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿ ತೆರಿಗೆಗೆ ಬಾಧ್ಯವಾಗದ ಅಥವಾ ತೆರಿಗೆಯಿಂದ ಸಂಪೂರ್ಣವಾಗಿ ವಿನಾಯತಿಗೊಂಡಿರುವ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಯ ವ್ಯವಹಾರದಲ್ಲಿ ಏಕೈಕವಾಗಿ ತೊಡಗಿಕೊಂಡಿರುವ ಯಾವುದೇ ವ್ಯಕ್ತಿ;

(ಬಿ) ಭೂಮಿಯ ಸಾಗುವಳಿಯಿಂದ ಬಂದ ಉತ್ಪನ್ನದ ಪೂರೈಕೆಯಷ್ಟರ ಮಟ್ಟಿಗೆ, ಒಬ್ಬ ಕೃಷಿಕ.

(2) ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಸರ್ಕಾರವು ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಅಡಿಯಲ್ಲಿ ನೋಂದಣಿ ಪಡೆಯುವುದರಿಂದ ವಿನಾಯತಿಗೊಳಿಸಬಹುದಾದ ವ್ಯಕ್ತಿಗಳ ಪ್ರವರ್ಗವನ್ನು ನಿರ್ದಿಷ್ಟಪಡಿಸಬಹುದು.

24. ಕೆಲವೊಂದು ಪ್ರಕರಣಗಳಲ್ಲಿ ಕಡ್ಡಾಯ ನೋಂದಣಿ.– ಪ್ರಕರಣ 22ರ ಉಪ–ಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಈ ಕೆಳಕಂಡ ಪ್ರವರ್ಗಗಳ ವ್ಯಕ್ತಿಗಳು ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿಸಿಕೊಳ್ಳವುದು ಅಗತ್ಯವಾಗಿರತಕ್ಕದ್ದು:–

(i) ಯಾವುದೇ ಅಂತರ–ರಾಜ್ಯ ತೆರಿಗೆದಾಯಕ ಪೂರೈಕೆ ಮಾಡುತ್ತಿರುವ ವ್ಯಕ್ತಿಗಳು;

(ii) ತೆರಿಗೆದಾಯಕ ಪೂರೈಕೆ ಮಾಡುತ್ತಿರುವ ಸಾಂದರ್ಭಿಕ ತೆರಿಗೆದಾಯಕ ವ್ಯಕ್ತಿಗಳು;

(iii) ಹಿಮ್ಮುಖ ವಿಧಿಸುವಿಕೆಯ ಆಧಾರದ ಮೇಲೆ ತೆರಿಗೆಯನ್ನು ಸಂದಾಯ ಮಾಡುವುದು ಅಗತ್ಯವಿರುವಂತಹ ವ್ಯಕ್ತಿಗಳು;

(iv) ಪ್ರಕರಣ 9ರ ಉಪಪ್ರಕರಣ (5)ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡುವುದು ಅಗತ್ಯವಿರುವಂತಹ ವ್ಯಕ್ತಿಗಳು;

(v) ತೆರಿಗೆದಾಯಕ ಪೂರೈಕೆ ಮಾಡುತ್ತಿರುವ ಅನಿವಾಸಿ ತೆರಿಗೆದಾಯಕ ವ್ಯಕ್ತಿಗಳು;

(vi) ಈ ಅಧಿನಿಯಮದ ಅಡಿಯಲ್ಲಿ ಪ್ರತ್ಯೇಕವಾಗಿ ನೋಂದಣಿಯಾಗಿರಲಿ ಅಥವಾ ಇಲ್ಲದಿರಲಿ, ಪ್ರಕರಣ 51ರ ಅಡಿಯಲ್ಲಿ ತೆರಿಗೆಯನ್ನು ಮುರುಗಡೆ ಮಾಡುವುದು ಅಗತ್ಯವಿರುವ ವ್ಯಕ್ತಿಗಳು;

(vii) ಏಜೆಂಟನಾಗಿಯಾಗಲೀ ಅಥವಾ ಅನ್ಯಥಾ, ಇತರ ತೆರಿಗೆದಾಯಕ ವ್ಯಕ್ತಿಗಳ ಪರವಾಗಿ ತೆರಿಗೆದಾಯಕ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆ ಮಾಡುವ ವ್ಯಕ್ತಿಗಳು;

(viii) ಈ ಅಧಿನಿಯಮದ ಅಡಿಯಲ್ಲಿ ಪ್ರತ್ಯೇಕವಾಗಿ ನೋಂದಣಿಯಾಗಿರಲಿ ಅಥವಾ ಇಲ್ಲದಿರಲಿ, ಹೂಡುವಳಿ ಸೇವೆ ಹಂಚಿಕೆದಾರ;

(ix) ಪ್ರಕರಣ 9ರ ಉಪ–ಪ್ರಕರಣ (5)ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಪೂರೈಕೆಗಳನ್ನು ಹೊರತುಪಡಿಸಿ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಯನ್ನು, ಪ್ರಕರಣ 52ರ ಅಡಿಯಲ್ಲಿ ಮೂಲದಲ್ಲಿ ತೆರಿಗೆಯನ್ನು ಸಂಗ್ರಹಿಸುವುದು ಅಗತ್ಯವಿರುವ ಅಂಥ ವಿದ್ಯುನ್ಮಾನ ವಾಣಿಜ್ಯ ನಿರ್ವಾಹಕನ ಮೂಲಕ ಮಾಡುವ ವ್ಯಕ್ತಿಗಳು;

(x) ಪ್ರತಿಯೊಬ್ಬ ವಿದ್ಯುನ್ಮಾನ ವಾಣಿಜ್ಯ ನಿರ್ವಾಹಕ;

(xi) ಭಾರತದ ಹೊರಗಡೆಯಿರುವ ಒಂದು ಸ್ಥಳದಿಂದ, ನೋಂದಾಯಿತ ವ್ಯಕ್ತಿಯನ್ನು ಹೊರತುಪಡಿಸಿದ ಭಾರತದಲ್ಲಿನ ಒಬ್ಬ ವ್ಯಕ್ತಿಗೆ, ಆನ್‌ಲೈನ್ ಮಾಹಿತಿ ಮತ್ತು ದತ್ತಾಂಶ ಸಂಗ್ರಹದ ಪ್ರವೇಶಾವಕಾಶ ಅಥವಾ ಮರುಪ್ರಾಪ್ತಿ ಸೇವೆಗಳ ಪೂರೈಕೆಯನ್ನು ಮಾಡುತ್ತಿರುವ ಪ್ರತಿಯೊಬ್ಬ ವ್ಯಕ್ತಿ; ಮತ್ತು

(xii) ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಸರ್ಕಾರದಿಂದ ಅಧಿಸೂಚಿಸಬಹುದಾದ ಅಂಥ ಇತರೆ ವ್ಯಕ್ತಿ ಅಥವಾ ವ್ಯಕ್ತಿಗಳ ವರ್ಗ.

25. ನೋಂದಣಿಯ ಕಾರ್ಯವಿಧಾನ.– (1) ಪ್ರಕರಣ 22 ಅಥವಾ ಪ್ರಕರಣ 24ರ ಅಡಿಯಲ್ಲಿ ನೋಂದಾಯಿತನಾಗಲು ಬಾಧ್ಯನಾಗುವ ಪ್ರತಿಯೊಬ್ಬ ವ್ಯಕ್ತಿಯು, ನೋಂದಣಿಗೆ ಅವನು ಬಾಧ್ಯನಾಗುವಂತಹ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು:

ಪರಂತು, ಒಬ್ಬ ಸಾಂದರ್ಭಿಕ ತೆರಿಗೆದಾಯಕ ವ್ಯಕ್ತಿ ಅಥವಾ ಒಬ್ಬ ಅನಿವಾಸಿ ತೆರಿಗೆದಾಯಕ ವ್ಯಕ್ತಿಯು, ವ್ಯವಹಾರವನ್ನು ಪ್ರಾರಂಭಿಸುವುದಕ್ಕಿಂತ ಕನಿಷ್ಠ ಪಕ್ಷ ಐದು ದಿನಗಳ ಮುಂಚಿತವಾಗಿ ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

ವಿವರಣೆ:– ಭಾರತದ ರಾಜ್ಯಕ್ಷೇತ್ರೀಯ ಜಲಕ್ಷೇತ್ರದಿಂದ ಒಂದು ಪೂರೈಕೆಯನ್ನು ಮಾಡುವಂತಹ ಪ್ರತಿಯೊಬ್ಬ ವ್ಯಕ್ತಿಯು, ಸೂಕ್ತ ಆಧಾರ ರೇಖೆಯ ಅತ್ಯಂತ ಹತ್ತಿರದ ಬಿಂದುವು ಯಾವ ರಾಜ್ಯದಲ್ಲಿ ನೆಲೆಯಾಗಿದೆಯೋ ಆ ರಾಜ್ಯದಲ್ಲಿ ನೋಂದಣಿಯನ್ನು ಪಡೆಯತಕ್ಕದ್ದು.

(2) ಈ ಅಧಿನಿಯಮದ ಅಡಿಯಲ್ಲಿ ನೋಂದಣಿಯನ್ನು ಕೋರುವ ಒಬ್ಬ ವ್ಯಕ್ತಿಗೆ, ಒಂದೇ ನೋಂದಣಿಯನ್ನು ನೀಡತಕ್ಕದ್ದು:

ಪರಂತು, ರಾಜ್ಯದಲ್ಲಿ ಬಹು ವ್ಯವಹಾರ ಶ್ರೇಣಿಗಳನ್ನು ಹೊಂದಿರುವ ಒಬ್ಬ ವ್ಯಕ್ತಿಯ ಪ್ರತಿಯೊಂದು ವ್ಯವಹಾರ ಶ್ರೇಣಿಗೆ ಒಂದು ಪ್ರತ್ಯೇಕವಾದ ನೋಂದಣಿಯನ್ನು, ನಿಯಮಿಸಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು, ನೀಡಬಹುದು.

(3) ಪ್ರಕರಣ 22 ಅಥವಾ ಪ್ರಕರಣ 24ರ ಅಡಿಯಲ್ಲಿ ನೋಂದಾಯಿತನಾಗಲು ಬಾಧ್ಯನಲ್ಲದಿದ್ದರೂ, ಒಬ್ಬ ವ್ಯಕ್ತಿಯು ತಾನೇ ಸ್ವಇಚ್ಛೆಯಿಂದ ನೋಂದಾಯಿತನಾಗಬಹುದು, ಮತ್ತು ಒಬ್ಬ ನೋಂದಾಯಿತ ವ್ಯಕ್ತಿಗೆ ಅನ್ವಯವಾಗುವ ಈ ಅಧಿನಿಯಮದ ಎಲ್ಲಾ ಉಪಬಂಧಗಳು, ಅಂಥ ವ್ಯಕ್ತಿಗೆ ಅನ್ವಯವಾಗತಕ್ಕದ್ದು.

(4) ಒಂದು ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿಯಾಗಲೀ ಅಥವಾ ಒಂದಕ್ಕಿಂತ ಹೆಚ್ಚಿನ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿಯಾಗಲೀ, ಒಂದಕ್ಕಿಂತ ಹೆಚ್ಚಿನ ನೋಂದಣಿಯನ್ನು ಪಡೆದಿರುವ ಅಥವಾ ಪಡೆಯುವುದು ಅಗತ್ಯವಿರುವ ಒಬ್ಬ ವ್ಯಕ್ತಿಯನ್ನು, ಅಂಥ ಪ್ರತಿಯೊಂದು ನೋಂದಣಿಗೆ ಸಂಬಂಧಿಸಿದಂತೆ, ಈ ಅಧಿನಿಯಮದ ಉದ್ದೇಶಗಳಿಗಾಗಿ ವಿಭಿನ್ನ ವ್ಯಕ್ತಿಗಳೆಂದು ಪರಿಗಣಿಸತಕ್ಕದ್ದು.

(5) ಒಂದು ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿ, ಒಂದು ಕಾರ್ಯಸ್ಥಳಕ್ಕೆ ಸಂಬಂಧಿಸಿದಂತೆ ನೋಂದಣಿಯನ್ನು ಪಡೆದಿರುವ ಅಥವಾ ಪಡೆಯುವುದು ಅಗತ್ಯವಿರುವ ಒಬ್ಬ ವ್ಯಕ್ತಿಯು, ಮತ್ತೊಂದು ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿ ಒಂದು ಕಾರ್ಯಸ್ಥಳವನ್ನು ಹೊಂದಿದ್ದಲ್ಲಿ, ಆಗ ಅಂಥ ಕಾರ್ಯಸ್ಥಳಗಳನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ ವಿಭಿನ್ನ ವ್ಯಕ್ತಿಗಳ ಕಾರ್ಯಸ್ಥಳಗಳೆಂದು ಪರಿಗಣಿಸತಕ್ಕದ್ದು.

(6) ಪ್ರತಿಯೊಬ್ಬ ವ್ಯಕ್ತಿಯು ನೋಂದಣಿ ನೀಡಿಕೆಗೆ ಅರ್ಹನಾಗುವುದಕ್ಕಾಗಿ, ಆದಾಯ ತೆರಿಗೆ ಅಧಿನಿಯಮ, 1961ರ (1961ರ ಕೇಂದ್ರ ಅಧಿನಿಯಮ 43) ಅಡಿಯಲ್ಲಿ ನೀಡಿದ ಶಾಶ್ವತ ಖಾತೆ ಸಂಖ್ಯೆಯನ್ನು ಹೊಂದಿರತಕ್ಕದ್ದು:

ಪರಂತು, ಪ್ರಕರಣ 51ರ ಅಡಿಯಲ್ಲಿ ತೆರಿಗೆ ಮುರುಗಡೆ ಮಾಡುವುದು ಅಗತ್ಯವಿರುವ ಒಬ್ಬ ವ್ಯಕ್ತಿಯು, ನೋಂದಣಿ ನೀಡಿಕೆಗೆ ಅರ್ಹನಾಗುವುದಕ್ಕಾಗಿ, ಶಾಶ್ವತ ಖಾತೆ ಸಂಖ್ಯೆಯ ಬದಲಾಗಿ ಸದರಿ ಅಧಿನಿಯಮದ ಅಡಿಯಲ್ಲಿ ನೀಡಿದ ಒಂದು ತೆರಿಗೆ ಮುರುಗಡೆ ಮತ್ತು ಸಂಗ್ರಹಣೆ ಖಾತೆ ಸಂಖ್ಯೆಯನ್ನು ಹೊಂದಿರಬಹುದು.

(7) ಉಪಪ್ರಕರಣ (6)ರಲ್ಲಿ ಏನೇ ಒಳಗೊಂಡಿದ್ದರೂ, ಉಪಪ್ರಕರಣ (1)ರ ಅಡಿಯಲ್ಲಿ ಒಬ್ಬ ಅನಿವಾಸಿ ತೆರಿಗೆದಾಯಕ ವ್ಯಕ್ತಿಗೆ ನಿಯಮಿಸಬಹುದಾದ ಯಾವುದೇ ಅಂಥ ಇತರ ದಸ್ತಾವೇಜುಗಳ ಆಧಾರದ ಮೇಲೆ ನೋಂದಣಿಯನ್ನು ನೀಡಬಹುದು.

(8) ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತನಾಗಲು ಬಾಧ್ಯನಿರುವ ಒಬ್ಬ ವ್ಯಕ್ತಿಯು ನೋಂದಣಿಯನ್ನು ಪಡೆಯಲು ವಿಫಲನಾದಲ್ಲಿ, ಈ ಅಧಿನಿಯಮದ ಅಡಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಅಡಿಯಲ್ಲಿ ತೆಗೆದುಕೊಳ್ಳಬಹುದಾದ ಯಾವುದೇ ಕ್ರಮಕ್ಕೆ ಬಾಧಕವಾಗದಂತೆ, ಯುಕ್ತ ಅಧಿಕಾರಿಯು ಅಂಥ ವ್ಯಕ್ತಿಯನ್ನು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ನೋಂದಾಯಿಸಲು ಮುಂದಾಗಬಹುದು.

(9) ಉಪಪ್ರಕರಣ (1) ರಲ್ಲಿ ಏನೇ ಒಳಗೊಂಡಿದ್ದರೂ,–

(ಎ) ಸಂಯುಕ್ತ ರಾಷ್ಟ್ರ ಸಂಘದ ಯಾವುದೇ ವಿಶೇಷ ಏಜೆನ್ಸಿ ಅಥವಾ ಸಂಯುಕ್ತ ರಾಷ್ಟ್ರ (ವಿಶೇಷ ಸ್ಥಾನಮಾನ ಮತ್ತು ಉನ್ಮುಕ್ತಿಗಳು) ಅಧಿನಿಯಮ, 1947ರ (1947ರ ಕೇಂದ್ರ ಅಧಿನಿಯಮ 46) ಅಡಿಯಲ್ಲಿ ಅಧಿಸೂಚಿಸಲಾದ ಯಾವುದೇ ಬಹುಪಕ್ಷೀಯ ಹಣಕಾಸು ಸಂಸ್ಥೆ ಮತ್ತು ಸಂಘಟನೆ, ವಿದೇಶಗಳ ಕಾನ್ಸುಲೇಟ್ ಅಥವಾ ರಾಯಭಾರ ಕಛೇರಿಗಳಿಗೆ; ಮತ್ತು

(ಬಿ) ಆಯುಕ್ತರಿಂದ ಅಧಿಸೂಚಿಸಬಹುದಾದ ಯಾವುದೇ ಇತರ ವ್ಯಕ್ತಿ ಅಥವಾ ವ್ಯಕ್ತಿಗಳ ವರ್ಗಕ್ಕೆ,

– ಅವರಿಂದ ಸ್ವೀಕರಿಸಲ್ಪಡುವ ಅಧಿಸೂಚಿತ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಗಳ ಮೇಲಿನ ತೆರಿಗೆಗಳ ಮರುಪಾವತಿಯನ್ನು ಒಳಗೊಂಡಂತೆ, ನಿಯಮಿಸಬಹುದಾದ ಅಂಥ ಉದ್ದೇಶಗಳಿಗಾಗಿ ಮತ್ತು ಅಂಥ ವಿಧಾನದಲ್ಲಿ ವಿಶಿಷ್ಟ ಗುರುತಿನ ಸಂಖ್ಯೆಯನ್ನು ನೀಡತಕ್ಕದ್ದು.

(10) ಸೂಕ್ತ ಪರಿಶೀಲನೆಯ ನಂತರ ನೋಂದಣಿಯನ್ನು ಅಥವಾ ವಿಶಿಷ್ಟ ಗುರುತಿನ ಸಂಖ್ಯೆಯನ್ನು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಅಂಥ ಅವಧಿಯ ಒಳಗಾಗಿ ನೀಡತಕ್ಕದ್ದು ಅಥವಾ ತಿರಸ್ಕರಿಸತಕ್ಕದ್ದು.

(11) ನೋಂದಣಿಯ ಪ್ರಮಾಣ ಪತ್ರವನ್ನು ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ಮತ್ತು ಜಾರಿಗೆ ಬರುವ ಅಂಥ ದಿನಾಂಕದೊಂದಿಗೆ ನೀಡತಕ್ಕದ್ದು.

(12) ಉಪಪ್ರಕರಣ (10)ರ ಅಡಿಯಲ್ಲಿ ನಿಯಮಿಸಲಾದ ಅವಧಿಯು ಕೊನೆಗೊಂಡ ನಂತರ, ಆ ಅವಧಿಯೊಳಗೆ ಯಾವುದೇ ನ್ಯೂನತೆಯನ್ನು ಅರ್ಜಿದಾರನಿಗೆ ತಿಳಿಸಿಲ್ಲದಿದ್ದರೆ, ಒಂದು ನೋಂದಣಿ ಅಥವಾ ಒಂದು ವಿಶಿಷ್ಟ ಗುರುತಿನ ಸಂಖ್ಯೆಯನ್ನು ಮಂಜೂರು ಮಾಡಲಾಗಿದೆ ಎಂದು ಪರಿಭಾವಿಸತಕ್ಕದ್ದು.

26. ಪರಿಭಾವಿತ ನೋಂದಣಿ.– (1) ಪ್ರಕರಣ 25ರ ಉಪಪ್ರಕರಣ (10)ರಲ್ಲಿ ನಿರ್ದಿಷ್ಟಪಡಿಸಿದ ಸಮಯದ ಒಳಗಾಗಿ ಈ ಅಧಿನಿಯಮದ ಅಡಿಯಲ್ಲಿ ನೋಂದಣಿ ಅಥವಾ ವಿಶಿಷ್ಟ ಗುರುತಿನ ಸಂಖ್ಯೆಗೋಸ್ಕರವಾದ ಅರ್ಜಿಯು ತಿರಸ್ಕೃತಗೊಂಡಿರಬಾರದು ಎನ್ನುವ ಷರತ್ತಿಗೆ ಒಳಪಟ್ಟು, ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿನ ನೋಂದಣಿ ಅಥವಾ ವಿಶಿಷ್ಟ ಗುರುತಿನ ಸಂಖ್ಯೆ ಮಂಜೂರಾತಿಯನ್ನು, ಈ ಅಧಿನಿಯಮದ ಅಡಿಯಲ್ಲಿನ ನೋಂದಣಿ ಅಥವಾ ವಿಶಿಷ್ಟ ಗುರುತಿನ ಸಂಖ್ಯೆ ಮಂಜೂರಾತಿ ಎಂದು ಪರಿಭಾವಿಸತಕ್ಕದ್ದು:

(2) ಪ್ರಕರಣ 25ರ ಉಪಪ್ರಕರಣ (10)ರಲ್ಲಿ ಏನೇ ಒಳಗೊಂಡಿದ್ದರೂ, ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿನ ನೋಂದಣಿ ಅಥವಾ ವಿಶಿಷ್ಟ ಗುರುತಿನ ಸಂಖ್ಯೆಯ ಅರ್ಜಿಯ ಯಾವುದೇ ತಿರಸ್ಕರಣೆಯನ್ನು, ಈ ಅಧಿನಿಯಮದ ಅಡಿಯಲ್ಲಿನ ನೋಂದಣಿ ಅರ್ಜಿಯ ತಿರಸ್ಕರಣೆ ಎಂದು ಪರಿಭಾವಿಸತಕ್ಕದ್ದು.

27. ಸಾಂದರ್ಭಿಕ ತೆರಿಗೆದಾಯಕ ವ್ಯಕ್ತಿ ಮತ್ತು ಅನಿವಾಸಿ ತೆರಿಗೆದಾಯಕ ವ್ಯಕ್ತಿಗೆ ಸಂಬಂಧಿಸಿದ ವಿಶೇಷ ಉಪಬಂಧಗಳು.– (1) ನೋಂದಣಿಯ ಅರ್ಜಿಯಲ್ಲಿ ನಿರ್ದಿಷ್ಟಪಡಿಸಿರುವ ಅವಧಿ ಅಥವಾ ನೋಂದಣಿಯು ಜಾರಿಗೆ ಬಂದ ದಿನಾಂಕದಿಂದ ತೊಂಭತ್ತು ದಿನಗಳು, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ, ಸಾಂದರ್ಭಿಕ ತೆರಿಗೆದಾಯಕ ವ್ಯಕ್ತಿ ಅಥವಾ ಅನಿವಾಸಿ ತೆರಿಗೆದಾಯಕ ವ್ಯಕ್ತಿಗೆ ನೀಡಿದ ನೋಂದಣಿ ಪ್ರಮಾಣ ಪತ್ರವು ಸಿಂಧುವಾಗಿರತಕ್ಕದ್ದು ಮತ್ತು ನೋಂದಣಿ ಪ್ರಮಾಣ ಪತ್ರದ ನೀಡಿಕೆಯ ನಂತರವೇ ಅಂಥ ವ್ಯಕ್ತಿಯು ತೆರಿಗೆದಾಯಕ ಪೂರೈಕೆಯನ್ನು ಮಾಡತಕ್ಕದ್ದು:

ಪರಂತು, ಯುಕ್ತ ಅಧಿಕಾರಿಯು, ಸದರಿ ತೆರಿಗೆದಾಯಕ ವ್ಯಕ್ತಿಯಿಂದ ತೋರಿಸಲಾದ ಸಾಕಷ್ಟು ಕಾರಣದ ಮೇಲೆ, ಸದರಿ ತೊಂಭತ್ತು ದಿನಗಳ ಅವಧಿಯನ್ನು ಮುಂದುವರಿದ ತೊಂಭತ್ತು ದಿನಗಳನ್ನು ಮೀರದ ಹೆಚ್ಚಿನ ಅವಧಿಗೆ ವಿಸ್ತರಿಸಬಹುದು.

(2) ಒಬ್ಬ ಸಾಂದರ್ಭಿಕ ತೆರಿಗೆದಾಯಕ ವ್ಯಕ್ತಿ ಅಥವಾ ಅನಿವಾಸಿ ತೆರಿಗೆದಾಯಕ ವ್ಯಕ್ತಿಯು, ಪ್ರಕರಣ 25ರ ಉಪಪ್ರಕರಣ (1)ರ ಅಡಿಯಲ್ಲಿ ನೊಂದಣಿಗಾಗಿ ಅರ್ಜಿ ಸಲ್ಲಿಸುವ ಸಮಯದಲ್ಲಿ, ನೋಂದಣಿಯನ್ನು ಕೋರಿರುವ ಅವಧಿಗೆ ಅಂದಾಜಿಸಿದ ಅಂಥ ವ್ಯಕ್ತಿಯ ತೆರಿಗೆ ಬಾಧ್ಯತೆಗೆ ಸಮನಾದ ಮೊತ್ತದ ತೆರಿಗೆಯ ಮುಂಗಡ ಠೇವಣಿಯನ್ನು ಇಡತಕ್ಕದ್ದು:

ಪರಂತು, ಉಪಪ್ರಕರಣ (1)ರ ಅಡಿಯಲ್ಲಿ ಯಾವುದೇ ಸಮಯದ ವಿಸ್ತರಣೆಯನ್ನು ಕೋರಿದ್ದಲ್ಲಿ, ಅಂಥ ತೆರಿಗೆದಾಯಕ ವ್ಯಕ್ತಿಯು, ವಿಸ್ತರಣೆಯನ್ನು ಕೋರಿರುವ ಅವಧಿಗೆ ಅಂದಾಜಿಸಿದ ತೆರಿಗೆ ಬಾಧ್ಯತೆಗೆ ಸಮನಾದ ಹೆಚ್ಚುವರಿ ತೆರಿಗೆಯ ಮೊತ್ತವನ್ನು ಠೇವಣಿ ಇಡತಕ್ಕದ್ದು.

(3) ಉಪಪ್ರಕರಣ (2)ರ ಅಡಿಯಲ್ಲಿ ಠೇವಣಿ ಇಡಲಾದ ಮೊತ್ತವು ಅಂಥ ವ್ಯಕ್ತಿಯ ವಿದ್ಯುನ್ಮಾನ ನಗದು ಖಾತೆಗೆ ಜಮೆ ಮಾಡತಕ್ಕದ್ದು ಮತ್ತು ಪ್ರಕರಣ 49ರ ಅಡಿಯಲ್ಲಿ ಉಪಬಂಧಿಸಿದ ರೀತಿಯಲ್ಲಿ ಬಳಸತಕ್ಕದ್ದು.

28. ನೋಂದಣಿಯ ತಿದ್ದುಪಡಿ.– (1) ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು ಮತ್ತು ವಿಶಿಷ್ಟ ಗುರುತಿನ ಸಂಖ್ಯೆಯನ್ನು ನೀಡಲಾಗಿರುವ ಒಬ್ಬ ವ್ಯಕ್ತಿಯು, ನೋಂದಣಿಯ ಸಮಯದಲ್ಲಿ ಅಥವಾ ಅದರ ತರುವಾಯ ಒದಗಿಸಿದ್ದ ಮಾಹಿತಿಯಲ್ಲಿನ ಯಾವುದೇ ಬದಲಾವಣೆಗಳನ್ನು, ನಿಯಮಿಸಬಹುದಾದ ಅಂಥ ನಮೂನೆ ಮತ್ತು ವಿಧಾನದಲ್ಲಿ ಹಾಗೂ ಅಂಥ ಅವಧಿಯ ಒಳಗಾಗಿ, ಯುಕ್ತ ಅಧಿಕಾರಿಗೆ ತಿಳಿಸತಕ್ಕದ್ದು.

(2) ಯುಕ್ತ ಅಧಿಕಾರಿಯು, ಉಪಪ್ರಕರಣ (1)ರ ಅಡಿಯಲ್ಲಿ ಒದಗಿಸಿದ ಮಾಹಿತಿಯ ಆಧಾರದ ಮೇಲೆ ಅಥವಾ ಆತನಿಂದ ಖಚಿತಪಡಿಸಿಕೊಂಡಂತೆ, ನೋಂದಣಿಯ ವಿವರಗಳಲ್ಲಿನ ತಿದ್ದುಪಡಿಗಳನ್ನು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಅಂಥ ಅವಧಿಯ ಒಳಗಾಗಿ ಅನುಮೋದಿಸಬಹುದು ಅಥವಾ ತಿರಸ್ಕರಿಸಬಹುದು:

ಪರಂತು, ನಿಯಮಿಸಬಹುದಾದ ಅಂಥ ವಿವರಗಳ ತಿದ್ದುಪಡಿಗೆ ಸಂಬಂಧಿಸಿದಂತೆ ಯುಕ್ತ ಅಧಿಕಾರಿಯ ಅನುಮೋದನೆಯು ಅಗತ್ಯವಿರತಕ್ಕದ್ದಲ್ಲ:

ಮತ್ತು ಪರಂತು, ಯುಕ್ತ ಅಧಿಕಾರಿಯು ನೋಂದಣಿಯ ವಿವರಗಳಲ್ಲಿನ ತಿದ್ದುಪಡಿಯ ಕೋರಿಕೆಯ ಅರ್ಜಿಯನ್ನು, ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡದೇ ತಿರಸ್ಕರಿಸತಕ್ಕದ್ದಲ್ಲ.

(3) ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿನ ತಿದ್ದುಪಡಿಗಳ ಯಾವುದೇ ತಿರಸ್ಕರಣೆ ಅಥವಾ ಅನುಮೋದನೆಯನ್ನು, ಈ ಅಧಿನಿಯಮದ ಅಡಿಯಲ್ಲಿ ತಿರಸ್ಕರಣೆ ಅಥವಾ ಅನುಮೋದನೆ ಎಂದು ಪರಿಭಾವಿಸತಕ್ಕದ್ದು.

29. ನೋಂದಣಿಯ ರದ್ದುಪಡಿಸುವಿಕೆ.– (1) ಯುಕ್ತ ಅಧಿಕಾರಿಯು, ಸ್ವಪ್ರೇರಣೆಯಿಂದಾಗಲಿ ಅಥವಾ ನೋಂದಾಯಿತ ವ್ಯಕ್ತಿಯಿಂದ ಅಥವಾ ಅಂಥ ವ್ಯಕ್ತಿ ಮರಣ ಹೊಂದಿದ ಸಂದರ್ಭದಲ್ಲಿ ಆತನ ಕಾನೂನು ಸಮ್ಮತ ವಾರಸುದಾರರಿಂದ ಸಲ್ಲಿಸಿದ ಅರ್ಜಿಯ ಮೇಲಾಗಲಿ, ಕೆಳಗಿನ ಸಂದರ್ಭಗಳನ್ನು ಗಮನದಲ್ಲಿಟ್ಟುಕೊಂಡು, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಅಂಥ ಅವಧಿಯ ಒಳಗಾಗಿ, ನೋಂದಣಿಯನ್ನು ರದ್ದುಗೊಳಿಸಬಹುದು,–

(ಎ) ಮಾಲೀಕನ ಮರಣವನ್ನು, ಇತರ ಕಾನೂನು ಸಮ್ಮತ ಅಸ್ತಿತ್ವದೊಂದಿಗೆ ಸಮ್ಮಿಲನವನ್ನು, ಬೇರ್ಪಟ್ಟಿರುವುದು ಅಥವಾ ಅನ್ಯಥಾ ವಿಲೇ ಮಾಡಿರುವುದನ್ನು ಒಳಗೊಂಡಿರುವಂತಹ ಯಾವುದೇ ಕಾರಣಗಳಿಗಾಗಿ, ವ್ಯವಹಾರವು ಸ್ಥಗಿತಗೊಂಡಿರುವುದು, ಸಂಪೂರ್ಣವಾಗಿ ವರ್ಗಾವಣೆಯಾಗಿರುವುದು; ಅಥವಾ

(ಬಿ) ವ್ಯವಹಾರದ ಸಂರಚನೆಯಲ್ಲಿ ಯಾವುದೇ ಬದಲಾವಣೆಯಾಗಿರುವುದು; ಅಥವಾ

(ಸಿ) ಪ್ರಕರಣ 25ರ ಉಪಪ್ರಕರಣ (3)ರ ಅಡಿಯಲ್ಲಿ ನೊಂದಾಯಿತನಾದ ವ್ಯಕ್ತಿಯನ್ನು ಹೊರತುಪಡಿಸಿದಂತೆ, ತೆರಿಗೆದಾಯಕ ವ್ಯಕ್ತಿಯು ಪ್ರಕರಣ 22 ಅಥವಾ ಪ್ರಕರಣ 24ರ ಅಡಿಯಲ್ಲಿ, ನೋಂದಾಯಿತನಾಗಲು ಇನ್ನು ಮುಂದೆ ಬಾಧ್ಯನಲ್ಲದಿರುವುದು.

(2) ಯುಕ್ತ ಅಧಿಕಾರಿಯು ತಾನು ಸೂಕ್ತವೆಂದು ಭಾವಿಸಬಹುದಾದ ಯಾವುದೇ ಪೂರ್ವಾನ್ವಯ ದಿನಾಂಕವನ್ನು ಒಳಗೊಂಡಂತಹ ಅಂಥ ದಿನಾಂಕದಿಂದ ತೆರಿಗೆದಾಯಕ ವ್ಯಕ್ತಿಯ ನೋಂದಣಿಯನ್ನು ಕೆಳಗಿನವುಗಳಿಗಾಗಿ ರದ್ದುಗೊಳಿಸಬಹುದು,–

(ಎ) ಒಬ್ಬ ನೋಂದಾಯಿತ ವ್ಯಕ್ತಿಯು, ನಿಯಮಿಸಬಹುದಾದ ಈ ಅಧಿನಿಯಮದ ಅಂಥ ಉಪಬಂಧಗಳನ್ನು ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳನ್ನು ಉಲ್ಲಂಘಿಸಿರುವುದು; ಅಥವಾ

(ಬಿ) ಪ್ರಕರಣ 10ರ ಅಡಿಯಲ್ಲಿ ತೆರಿಗೆ ಸಂದಾಯ ಮಾಡುವ ಒಬ್ಬ ವ್ಯಕ್ತಿ ಮೂರು ಕ್ರಮಾನುಗತವಾದ ತೆರಿಗೆ ಅವಧಿಗಳಿಗೆ ರಿಟರ್ನ್ ಅನ್ನು ಒದಗಿಸಿಲ್ಲದಿರುವುದು; ಅಥವಾ

(ಸಿ) ಖಂಡ (ಬಿ)ಯಲ್ಲಿ ನಿರ್ದಿಷ್ಟಪಡಿಸಿದ ವ್ಯಕ್ತಿಯನ್ನು ಹೊರತುಪಡಿಸಿದಂತೆ, ಯಾವುದೇ ನೋಂದಾಯಿತ ವ್ಯಕ್ತಿಯು ನಿರಂತರವಾಗಿ ಆರು ತಿಂಗಳವರೆಗೆ ರಿಟರ್ನ್‌ಗಳನ್ನು ಒದಗಿಸಿಲ್ಲದಿರುವುದು; ಅಥವಾ

(ಡಿ) ಪ್ರಕರಣ 25ರ ಉಪಪ್ರಕರಣ (3)ರ ಅಡಿಯಲ್ಲಿ ಸ್ವಇಚ್ಛೆಯಿಂದ ನೋಂದಣಿ ಪಡೆದುಕೊಂಡಿರುವ ಯಾವೊಬ್ಬ ವ್ಯಕ್ತಿಯು ನೋಂದಣಿಯ ದಿನಾಂಕದಿಂದ ಆರು ತಿಂಗಳೊಳಗಾಗಿ ವ್ಯವಹಾರವನ್ನು ಪ್ರಾರಂಭಿಸದಿರುವುದು; ಅಥವಾ

(ಇ) ಮೋಸ, ಉದ್ದೇಶಪೂರ್ವಕ ತಪ್ಪುಹೇಳಿಕೆ ಅಥವಾ ಸಂಗತಿಗಳ ಮರೆಮಾಚುವಿಕೆಗಳ ಮೂಲಕ ನೋಂದಣಿಯನ್ನು ಪಡೆಯಲಾಗಿರುವುದು:

ಪರಂತು, ಯುಕ್ತ ಅಧಿಕಾರಿಯು, ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡದೇ ನೋಂದಣಿಯನ್ನು ರದ್ದುಗೊಳಿಸತಕ್ಕದ್ದಲ್ಲ.

(3) ಈ ಪ್ರಕರಣದ ಅಡಿಯಲ್ಲಿನ ನೋಂದಣಿಯ ರದ್ದತಿಯು, ರದ್ದತಿ ದಿನಾಂಕದ ಹಿಂದಿನ ಯಾವುದೇ ಅವಧಿಗೆ, ಅಂಥ ತೆರಿಗೆ ಮತ್ತು ಇತರ ಬಾಕಿಗಳು ರದ್ಧತಿಯ ದಿನಾಂಕಕ್ಕಿಂತ ಮುಂಚಿತವಾಗಿ ಅಥವಾ ನಂತರ ನಿರ್ಧರಿಸಿರಲಿ ಅಥವಾ ಇಲ್ಲದಿರಲಿ, ಈ ಅಧಿನಿಯಮದ ಅಡಿಯಲ್ಲಿ ತೆರಿಗೆ ಮತ್ತು ಇತರ ಬಾಕಿಗಳನ್ನು ಸಂದಾಯ ಮಾಡಬೇಕಾದ ವ್ಯಕ್ತಿಯ ಬಾಧ್ಯತೆಗೆ ಅಥವಾ ಈ ಅಧಿನಿಯಮದ ಅಥವಾ ಅದರಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿನ ಯಾವುದೇ ಹೊಣೆಗಾರಿಕೆಯ ನಿರ್ವಹಣೆಯ ಮೇಲೆ ಬಾಧಕವಾಗತಕ್ಕದ್ದಲ್ಲ.

(4) ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿನ ನೋಂದಣಿಯ ರದ್ದತಿಯು ಈ ಅಧಿನಿಯಮದ ಅಡಿಯಲ್ಲಿನ ನೋಂದಣಿಯ ರದ್ದತಿ ಎಂದು ಪರಿಭಾವಿಸತಕ್ಕದ್ದು.

(5) ನೋಂದಣಿಯು ರದ್ದುಗೊಂಡಿರುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ರದ್ಧತಿ ದಿನಾಂಕದ ನಿಕಟ ಪೂರ್ವ ದಿನದಂದು, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಲೆಕ್ಕಹಾಕಿದ, ದಾಸ್ತಾನಿನಲ್ಲಿರುವ ಹೂಡುವಳಿಗಳು ಮತ್ತು ದಾಸ್ತಾನಿನಲ್ಲಿರುವ ಅರೆ–ಸಿದ್ಧರೂಪದ ಅಥವಾ ಸಿದ್ಧರೂಪದ ಸರಕುಗಳಲ್ಲಿ ಒಳಗೊಂಡಿರುವ ಅಥವಾ ಬಂಡವಾಳ ಸರಕುಗಳು ಅಥವಾ ಸ್ಥಾವರ ಮತ್ತು ಯಂತ್ರೋಪಕರಣಗಳ ಮೇಲಿನ ಹೂಡುವಳಿಗಳಿಗೆ ಸಂಬಂಧಿಸಿದಂತಹ ಹೂಡುವಳಿ ತೆರಿಗೆ ಜಮೆಗೆ ಸಮನಾದ ಮೊತ್ತ ಅಥವಾ ಅಂಥ ಸರಕುಗಳ ಮೇಲೆ ಸಂದಾಯ ಮಾಡಬೇಕಾದ ಹುಟ್ಟುವಳಿ ತೆರಿಗೆ ಇವುಗಳಲ್ಲಿ ಯಾವುದು ಅಧಿಕವೋ ಅದನ್ನು ವಿದ್ಯುನ್ಮಾನ ಜಮೆ ಅಥವಾ ನಗದುಖಾತೆಯಲ್ಲಿ ಖರ್ಚಿನ ಮುಖಾಂತರ ಸಂದಾಯ ಮಾಡತಕ್ಕದ್ದು:

ಪರಂತು, ಬಂಡವಾಳ ಸರಕುಗಳು ಅಥವಾ ಸ್ಥಾವರ ಮತ್ತು ಯಂತ್ರೋಪಕರಣಗಳ ಸಂದರ್ಭದಲ್ಲಿ, ತೆರಿಗೆದಾಯಕ ವ್ಯಕ್ತಿಯು, ನಿಯಮಿಸಬಹುದಾದ ಅಂಥ ಶೇಕಡವಾರು ಅಂಶಗಳಷ್ಟು ಕಡಿಮೆ ಮಾಡಿದ, ಸದರಿ ಬಂಡವಾಳ ಸರಕುಗಳು ಅಥವಾ ಸ್ಥಾವರ ಮತ್ತು ಯಂತ್ರೋಪಕರಣಗಳ ಮೇಲೆ ತೆಗೆದುಕೊಂಡ ಹೂಡುವಳಿ ತೆರಿಗೆ ಜಮೆಗೆ ಸಮನಾದ ಮೊತ್ತ ಅಥವಾ ಅಂಥ ಬಂಡವಾಳ ಸರಕುಗಳ ಪ್ರಕರಣ 15ರ ಅಡಿಯಲ್ಲಿನ ವ್ಯವಹಾರ ಮೌಲ್ಯದ ಮೇಲಿನ ತೆರಿಗೆ, ಇವುಗಳಲ್ಲಿ ಯಾವುದು ಅಧಿಕವೋ ಅದನ್ನು ಸಂದಾಯ ಮಾಡತಕ್ಕದ್ದು.

(6) ಉಪಪ್ರಕರಣ (5)ರ ಅಡಿಯಲ್ಲಿ ಸಂದಾಯ ಮಾಡಬೇಕಾದ ಮೊತ್ತವನ್ನು, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಲೆಕ್ಕ ಹಾಕತಕ್ಕದ್ದು.

30. ನೋಂದಣಿಯ ರದ್ದತಿಯನ್ನು ಹಿಂಪಡೆಯುವುದು.– (1) ನಿಯಮಿಸಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು, ಯಾರ ನೋಂದಣಿಯನ್ನು ಸ್ವಪ್ರೇರಣೆಯಿಂದ ಯುಕ್ತ ಅಧಿಕಾರಿಯು ರದ್ದುಗೊಳಿಸುವನೋ ಆ ಯಾವೊಬ್ಬ ನೋಂದಾಯಿತ ವ್ಯಕ್ತಿಯು, ಅಂಥ ಅಧಿಕಾರಿಗೆ, ನೋಂದಣಿ ರದ್ಧತಿಯ ಹಿಂಪಡೆಯುವಿಕೆಗಾಗಿ, ರದ್ದತಿ ಆದೇಶವನ್ನು ಜಾರಿ ಮಾಡಿದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ನಿಯಮಿಸಲಾದ ವಿಧಾನದಲ್ಲಿ ಅರ್ಜಿಯನ್ನು ಸಲ್ಲಿಸಬಹುದು.

(2) ಯುಕ್ತ ಅಧಿಕಾರಿಯು, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಅಂಥ ಅವಧಿಯೊಳಗೆ ಆದೇಶದ ಮೂಲಕ, ನೋಂದಣಿಯ ರದ್ದತಿಯನ್ನು ಹಿಂಪಡೆಯಬಹುದು ಅಥವಾ ಅರ್ಜಿಯನ್ನು ತಿರಸ್ಕರಿಸಬಹುದು:

ಪರಂತು, ಯುಕ್ತ ಅಧಿಕಾರಿಯು, ನೋಂದಣಿ ರದ್ದತಿಯ ಹಿಂಪಡೆಯುವಿಕೆಯ ಅರ್ಜಿಯನ್ನು ಅರ್ಜಿದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡಿದ ಹೊರತು ತಿರಸ್ಕರಿಸತಕ್ಕದ್ದಲ್ಲ.

(3) ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿನ ನೋಂದಣಿ ರದ್ದತಿಯ ಹಿಂಪಡೆಯುವಿಕೆಯು ಈ ಅಧಿನಿಯಮದ ಅಡಿಯಲ್ಲಿನ ನೋಂದಣಿ ರದ್ದತಿಯ ಹಿಂಪಡೆಯುವಿಕೆ ಎಂದು ಪರಿಭಾವಿಸತಕ್ಕದು.

ಅಧ್ಯಾಯ – VII
ತೆರಿಗೆ ಬೆಲೆಪಟ್ಟಿ, ಜಮೆ ಮತ್ತು ಖರ್ಚು ಚೀಟಿಗಳು

31. ತೆರಿಗೆ ಬೆಲೆಪಟ್ಟಿ.– (1) ತೆರಿಗೆದಾಯಕ ಸರಕುಗಳನ್ನು ಪೂರೈಕೆ ಮಾಡುವ ಒಬ್ಬ ನೋಂದಾಯಿತ ವ್ಯಕ್ತಿಯು,–

(ಎ) ಆ ಪೂರೈಕೆಯು ಸರಕುಗಳ ಚಲನೆಯನ್ನು ಒಳಗೊಂಡಿದ್ದಲ್ಲಿ, ಸ್ವೀಕರಿಸುವವನಿಗೆ ಪೂರೈಕೆಗಾಗಿ ಸರಕುಗಳನ್ನು ತೆಗೆಯುವ ಮೊದಲು ಅಥವಾ ಆ ಸಮಯದಲ್ಲಿ; ಅಥವಾ

(ಬಿ) ಇತರ ಯಾವುದೇ ಸಂದರ್ಭದಲ್ಲಿ, ಸ್ವೀಕರಿಸುವವನಿಗೆ ಸರಕುಗಳನ್ನು ಬಟವಾಡೆ ಮಾಡುವ ಅಥವಾ ಅವುಗಳು ಲಭ್ಯವಾಗುವಂತೆ ಮಾಡುವ ಮೊದಲು ಅಥವಾ ಆ ಸಮಯದಲ್ಲಿ,

– ಸರಕುಗಳ ವಿವರಣೆ, ಪ್ರಮಾಣ ಮತ್ತು ಮೌಲ್ಯ, ಅವುಗಳ ಮೇಲೆ ವಿಧಿಸಿದ ತೆರಿಗೆ ಮತ್ತು ನಿಯಮಿಸಬಹುದಾದ ಅಂಥ ಇತರ ವಿವರಗಳನ್ನು ತೋರಿಸುವಂತಹ ಒಂದು ತೆರಿಗೆ ಬೆಲೆಪಟ್ಟಿಯನ್ನು ನೀಡತಕ್ಕದ್ದು:

ಪರಂತು, ಸರ್ಕಾರವು ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಅಧಿಸೂಚನೆಯ ಮೂಲಕ, ಸರಕು ಅಥವಾ ಪೂರೈಕೆಗಳ ವರ್ಗಗಳನ್ನು, ಅವುಗಳಿಗೆ ಸಂಬಂಧಿಸಿದಂತೆ ನಿಯಮಿಸಬಹುದಾದ ಅಂಥ ಸಮಯದೊಳಗೆ ಮತ್ತು ಅಂಥ ವಿಧಾನದಲ್ಲಿ, ಒಂದು ಬೆಲೆಪಟ್ಟಿಯನ್ನು ನೀಡುವಂತೆ ನಿರ್ದಿಷ್ಟಪಡಿಸಬಹುದು.

(2) ತೆರಿಗೆದಾಯಕ ಸೇವೆಗಳನ್ನು ಪೂರೈಕೆ ಮಾಡುವ ಒಬ್ಬ ನೋಂದಾಯಿತ ವ್ಯಕ್ತಿಯು, ಸೇವೆಗಳನ್ನು ಒದಗಿಸುವ ಮೊದಲು ಅಥವಾ ನಂತರ, ಆದರೆ ನಿಯಮಿಸಲಾದ ಅವಧಿಯ ಒಳಗಾಗಿ, ಅವುಗಳ ವಿವರಣೆಯನ್ನು, ಮೌಲ್ಯವನ್ನು, ಅದರ ಮೇಲೆ ವಿಧಿಸಿದ ತೆರಿಗೆಯನ್ನು ಮತ್ತು ನಿಯಮಿಸಬಹುದಾದ ಅಂಥ ಇತರ ವಿವರಗಳನ್ನು ತೋರಿಸುವ ಒಂದು ತೆರಿಗೆ ಬೆಲೆಪಟ್ಟಿಯನ್ನು ನೀಡತಕ್ಕದ್ದು:

ಪರಂತು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಸರ್ಕಾರವು, ಅಧಿಸೂಚನೆಯ ಮೂಲಕ ಮತ್ತು ಅದರಲ್ಲಿ ನಮೂದಿಸಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು, ಈ ಕೆಳಗಿನವುಗಳಿಗೆ ಸಂಬಂಧಿಸಿದಂತೆ ಸೇವೆಗಳ ವರ್ಗಗಳನ್ನು ನಿರ್ದಿಷ್ಟಪಡಿಸಬಹುದು,–

(ಎ) ಪೂರೈಕೆಗೆ ಸಂಬಂಧಪಟ್ಟಂತೆ ನೀಡಿದ ಯಾವುದೇ ಇತರ ದಾಸ್ತಾವೇಜನ್ನು ಒಂದು ತೆರಿಗೆ ಬೆಲೆಪಟ್ಟಿ ಎಂದು ಪರಿಭಾವಿಸುವುದು; ಅಥವಾ

(ಬಿ) ತೆರಿಗೆ ಬೆಲೆಪಟ್ಟಿಯನ್ನು ನೀಡದೇ ಇರಬಹುದು.

(3) ಉಪಪ್ರಕರಣ (1) ಮತ್ತು (2)ರಲ್ಲಿ ಏನೇ ಒಳಗೊಂಡಿದ್ದರೂ,–

(ಎ) ಒಬ್ಬ ನೋಂದಾಯಿತ ವ್ಯಕ್ತಿಯು, ನೋಂದಣಿಯು ಜಾರಿಗೆ ಬರುವ ದಿನಾಂಕದಿಂದ ಪ್ರಾರಂಭವಾಗಿ ಆತನಿಗೆ ನೋಂದಣಿ ಪ್ರಮಾಣಪತ್ರ ನೀಡುವಿಕೆಯ ದಿನಾಂಕದ ವರೆಗಿನ ಅವಧಿಯಲ್ಲಿ ಈಗಾಗಲೇ ನೀಡಿರುವ ಬೆಲೆಪಟ್ಟಿಗೆ ಪ್ರತಿಯಾಗಿ ಪರಿಷ್ಕೃತ ಬೆಲೆಪಟ್ಟಿಯನ್ನು, ನೋಂದಣಿ ಪ್ರಮಾಣಪತ್ರ ನೀಡುವಿಕೆಯ ದಿನಾಂಕದ ಒಂದು ತಿಂಗಳ ಒಳಗಾಗಿ ಮತ್ತು ನಿಯಮಿಸಬಹುದಾದ ಅಂಥ ವಿಧಾನದಲ್ಲಿ, ನೀಡಬಹುದು;

(ಬಿ) ಒಬ್ಬ ನೋಂದಾಯಿತ ವ್ಯಕ್ತಿಯು, ಪೂರೈಕೆಮಾಡಿದ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಮೌಲ್ಯವು ಎರಡು ನೂರು ರೂಪಾಯಿಗಳಿಗಿಂತ ಕಡಿಮೆಯಿದ್ದರೆ, ನಿಯಮಿಸಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು ಮತ್ತು ಅಂಥ ವಿಧಾನದಲ್ಲಿ ಒಂದು ತೆರಿಗೆ ಬೆಲೆಪಟ್ಟಿಯನ್ನು ನೀಡದಿರಬಹುದು;

(ಸಿ) ವಿನಾಯಿತಿ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡನ್ನು ಪೂರೈಕೆ ಮಾಡುವ ಅಥವಾ ಪ್ರಕರಣ 10ರ ಉಪಬಂಧಗಳ ಅಡಿಯಲ್ಲಿ ತೆರಿಗೆ ಸಂದಾಯ ಮಾಡುವ ಒಬ್ಬ ನೋಂದಾಯಿತ ವ್ಯಕ್ತಿಯು, ಒಂದು ಬೆಲೆಪಟ್ಟಿಗೆ ಬದಲಾಗಿ, ನಿಯಮಿಸಬಹುದಾದ ಅಂಥ ವಿವರಗಳನ್ನು ಒಳಗೊಂಡಿರುವ ಮತ್ತು ಅಂಥ ವಿಧಾನದಲ್ಲಿ ಒಂದು ಪೂರೈಕೆಯ ಬಿಲ್ಲನ್ನು ನೀಡತಕ್ಕದ್ದು:

ಪರಂತು, ನೋಂದಾಯಿತ ವ್ಯಕ್ತಿಯು, ಪೂರೈಕೆಮಾಡಿದ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಮೌಲ್ಯವು ಎರಡು ನೂರು ರೂಪಾಯಿಗಳಿಗಿಂತ ಕಡಿಮೆಯಿದ್ದರೆ, ನಿಯಮಿಸಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು ಮತ್ತು ಅಂಥ ವಿಧಾನದಲ್ಲಿ ಒಂದು ಪೂರೈಕೆಯ ಬಿಲ್ಲನ್ನು ನೀಡದಿರಬಹುದು.

(ಡಿ) ಒಬ್ಬ ನೋಂದಾಯಿತ ವ್ಯಕ್ತಿಯು, ಯಾವುದೇ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಗೆ ಸಂಬಂಧಿಸಿದಂತೆ ಮುಂಗಡ ಸಂದಾಯವನ್ನು ಸ್ವೀಕರಿಸಿದಾಗ, ಅಂಥ ಸಂದಾಯದ ಸ್ವೀಕೃತಿಯನ್ನು ಸಾಕ್ಷೀಕರಿಸುವ, ನಿಯಮಿಸಬಹುದಾದ ಅಂಥ ವಿವರಗಳನ್ನು ಒಳಗೊಂಡಿರುವ, ಸ್ವೀಕೃತಿಯ ರಸೀದಿ ಅಥವಾ ಯಾವುದೇ ಇತರ ದಸ್ತಾವೇಜನ್ನು ನೀಡತಕ್ಕದ್ದು;

(ಇ) ಒಬ್ಬ ನೋಂದಾಯಿತ ವ್ಯಕ್ತಿಯು ಯಾವುದೇ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಗೆ ಸಂಬಂಧಿಸಿದಂತೆ ಮುಂಗಡ ಸಂದಾಯವನ್ನು ಸ್ವೀಕರಿಸಿ, ಸ್ವೀಕೃತಿಯ ರಸೀದಿಯನ್ನು ನೀಡಿದ್ದು, ಆದರೆ ತರುವಾಯವಾಗಿ

ಪೂರೈಕೆಯನ್ನು ಮಾಡಿರದಿದ್ದಲ್ಲಿ ಅಥವಾ ಅದಕ್ಕನುಗುಣವಾಗಿ ತೆರಿಗೆ ಬೆಲೆಪಟ್ಟಿಯನ್ನು ನೀಡಿರದಿದ್ದಲ್ಲಿ, ಸದರಿ ನೋಂದಾಯಿತ ವ್ಯಕ್ತಿಯು, ಸಂದಾಯವನ್ನು ಮಾಡಿದ್ದ ವ್ಯಕ್ತಿಗೆ ಅಂಥ ಸಂದಾಯಕ್ಕೆ ಪ್ರತಿಯಾಗಿ ಒಂದು ಮರುಪಾವತಿ ರಸೀದಿಯನ್ನು ನೀಡಬಹುದು;

(ಎಫ್) ಪ್ರಕರಣ 9ರ ಉಪ–ಪ್ರಕರಣ (3) ಅಥವಾ ಉಪ–ಪ್ರಕರಣ (4)ರ ಅಡಿಯಲ್ಲಿ ತೆರಿಗೆ ಸಂದಾಯ ಮಾಡಲು ಬಾಧ್ಯನಿರುವ ಒಬ್ಬ ನೋಂದಾಯಿತ ವ್ಯಕ್ತಿಯು, ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಸ್ವೀಕೃತಿಯ ದಿನಾಂಕದಂದು ನೋಂದಾಯಿತನಾಗಿರದಂತಹ ಪೂರೈಕೆದಾರನಿಂದ ಸ್ವೀಕರಿಸಿದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡಕ್ಕೆ ಸಂಬಂಧಿಸಿದಂತೆ, ಒಂದು ಬೆಲೆಪಟ್ಟಿಯನ್ನು ನೀಡತಕ್ಕದ್ದು.

(ಜಿ) ಪ್ರಕರಣ 9ರ ಉಪ–ಪ್ರಕರಣ (3) ಅಥವಾ ಉಪ–ಪ್ರಕರಣ (4)ರ ಅಡಿಯಲ್ಲಿ ತೆರಿಗೆ ಸಂದಾಯ ಮಾಡಲು ಬಾಧ್ಯನಿರುವ ಒಬ್ಬ ನೋಂದಾಯಿತ ವ್ಯಕ್ತಿಯು, ಪೂರೈಕೆದಾರನಿಗೆ ಸಂದಾಯ ಮಾಡುವ ಸಮಯದಲ್ಲಿ ಒಂದು ಸಂದಾಯದ ರಸೀದಿಯನ್ನು ನೀಡತಕ್ಕದ್ದು.

(4) ಅನುಕ್ರಮವಾದ ಲೆಕ್ಕಗಳ ವಿವರಪತ್ರಗಳನ್ನು ಅಥವಾ ಅನುಕ್ರಮವಾದ ಸಂದಾಯಗಳನ್ನು ಒಳಗೊಂಡಿರುವ ಸರಕುಗಳ ನಿರಂತರ ಪೂರೈಕೆಯ ಸಂದರ್ಭದಲ್ಲಿ, ಅಂಥ ಪ್ರತಿಯೊಂದು ವಿವರಪತ್ರವನ್ನು ನೀಡಿದ ಅಥವಾ ಪ್ರತಿಯೊಂದು ಅಂಥ ಸಂದಾಯವನ್ನು ಸ್ವೀಕರಿಸುವ ಮೊದಲು ಅಥವಾ ಸಂದರ್ಭಾನುಸಾರವಾಗಿ ಆ ಸಮಯದಲ್ಲಿ ಬೆಲೆಪಟ್ಟಿಯನ್ನು ನೀಡತಕ್ಕದ್ದು.

(5) ಉಪಪ್ರಕರಣ (3)ರ ಖಂಡ (ಡಿ) ಉಪಬಂಧಗಳಿಗೆ ಒಳಪಟ್ಟು, ಸೇವೆಗಳ ನಿರಂತರ ಪೂರೈಕೆಯ ಸಂದರ್ಭದಲ್ಲಿ,–

(ಎ) ಸಂದಾಯದ ಗಡುವಿನ ದಿನಾಂಕವನ್ನು ಕರಾರಿನಿಂದ ಖಚಿತಪಡಿಸಿಕೊಳ್ಳಬಹುದಾದಲ್ಲಿ, ಸಂದಾಯದ ಗಡುವಿನ ದಿನಾಂಕದಂದು ಅಥವಾ ಅದಕ್ಕಿಂತ ಮೊದಲು, ಬೆಲೆಪಟ್ಟಿಯನ್ನು ನೀಡತಕ್ಕದ್ದು.

(ಬಿ) ಸಂದಾಯದ ಗಡುವಿನ ದಿನಾಂಕವನ್ನು ಕರಾರಿನಿಂದ ಖಚಿತಪಡಿಸಿಕೊಳ್ಳಲು ಆಗದಿದ್ದಲ್ಲಿ, ಸೇವೆಗಳ ಪೂರೈಕೆದಾರನು ಸಂದಾಯವನ್ನು ಸ್ವೀಕರಿಸುವ ಸಮಯದಲ್ಲಿ ಅಥವಾ ಅದಕ್ಕಿಂತ ಮೊದಲು, ಬೆಲೆಪಟ್ಟಿಯನ್ನು ನೀಡತಕ್ಕದ್ದು.

(ಸಿ) ಸಂದಾಯವು ಒಂದು ಘಟನೆಯ ಪೂರ್ಣಗೊಳಿಸುವಿಕೆಗೆ ಸಂಬಂಧ ಹೊಂದಿದ್ದಲ್ಲಿ, ಆ ಘಟನೆಯು ಪೂರ್ಣಗೊಳ್ಳುವ ದಿನಾಂಕ ಅಥವಾ ಅದಕ್ಕಿಂತ ಮೊದಲು, ಬೆಲೆಪಟ್ಟಿಯನ್ನು ನೀಡತಕ್ಕದ್ದು.

(6) ಒಂದು ಕರಾರಿನ ಅಡಿಯಲ್ಲಿನ ಪೂರೈಕೆ ಪೂರ್ಣಗೊಳ್ಳುವ ಮೊದಲೇ ಸೇವೆಗಳ ಪೂರೈಕೆಯು ಸ್ಥಗಿತಗೊಂಡ ಒಂದು ಸಂದರ್ಭದಲ್ಲಿ, ಪೂರೈಕೆ ಸ್ಥಗಿತಗೊಂಡ ಸಮಯದಲ್ಲಿ ಬೆಲೆಪಟ್ಟಿಯನ್ನು ನೀಡತಕ್ಕದ್ದು ಮತ್ತು ಅಂಥ ಬೆಲೆಪಟ್ಟಿಯನ್ನು ಅಂಥ ಸ್ಥಗಿತಗೊಳ್ಳುವಿಕೆಗೆ ಮೊದಲು ಮಾಡಿದ ಪೂರೈಕೆಯಷ್ಟರ ಮಟ್ಟಿಗೆ ನೀಡತಕ್ಕದ್ದು.

(7) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಮಾರಾಟದ ಅನುಮೋದನೆ ಅಥವಾ ವಾಪಸಾತಿಯ ಮೇರೆಗೆ ಕಳುಹಿಸಿರುವ ಅಥವಾ ತೆಗೆದುಕೊಂಡಿರುವ ಸರಕುಗಳನ್ನು ಪೂರೈಕೆ ಘಟಿಸುವ ಮೊದಲೇ ತೆಗೆದಿದ್ದಲ್ಲಿ, ಬೆಲೆಪಟ್ಟಿಯನ್ನು ಪೂರೈಕೆಯ ಸಮಯದಲ್ಲಿ ಅಥವಾ ಅದಕ್ಕಿಂತ ಮೊದಲು ಅಥವಾ ತೆಗೆಯಲಾದ ದಿನಾಂಕದಿಂದ ಆರು ತಿಂಗಳು, ಇವುಗಳಲ್ಲಿ ಯಾವುದು ಮೊದಲೋ ಆಗ ನೀಡತಕ್ಕದ್ದು.

ವಿವರಣೆ:– ಈ ಪ್ರಕರಣದ ಉದ್ದೇಶಗಳಿಗಾಗಿ **"ತೆರಿಗೆ ಬೆಲೆಪಟ್ಟಿ"** ಎಂಬ ಪದಾವಳಿಯು ಪೂರೈಕೆದಾರನು, ಈ ಹಿಂದೆ ಮಾಡಿದ ಪೂರೈಕೆಗೆ ಸಂಬಂಧಿಸಿದಂತೆ, ನೀಡಿದ ಯಾವುದೇ ಪರಿಷ್ಕೃತ ಬೆಲೆಪಟ್ಟಿಯನ್ನು ಸಹ ಒಳಗೊಳ್ಳತಕ್ಕದ್ದು.

32. ತೆರಿಗೆಯ ಅನಧಿಕೃತ ಸಂಗ್ರಹಣೆಯ ನಿಷೇಧ.– (1) ನೋಂದಾಯಿತನಲ್ಲದ ವ್ಯಕ್ತಿಯಾಗಿರುವಂತಹ ಒಬ್ಬ ವ್ಯಕ್ತಿಯು, ಯಾವುದೇ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಗೆ ಸಂಬಂಧಿಸಿದಂತೆ ಈ ಅಧಿನಿಯಮದ ಅಡಿಯಲ್ಲಿ ತೆರಿಗೆಯ ರೂಪದಲ್ಲಿ ಯಾವುದೇ ಮೊತ್ತವನ್ನು ಸಂಗ್ರಹಿಸತಕ್ಕದ್ದಲ್ಲ.

(2) ತೆರಿಗೆದಾಯಕ ವ್ಯಕ್ತಿಯು, ಈ ಅಧಿನಿಯಮದ ಉಪಬಂಧಗಳು ಮತ್ತು ಅದರ ಅಡಿಯಲ್ಲಿ ಮಾಡಲಾದ ನಿಯಮಗಳಿಗೆ ಅನುಸಾರವಾಗಿಯಲ್ಲದೆ ಯಾವುದೇ ತೆರಿಗೆಯನ್ನು ಸಂಗ್ರಹಣೆ ಮಾಡತಕ್ಕದ್ದಲ್ಲ.

33. ತೆರಿಗೆ ಬೆಲೆಪಟ್ಟಿ ಮತ್ತು ಇತರ ದಸ್ತಾವೇಜುಗಳಲ್ಲಿ ಸೂಚಿಸಬೇಕಾದ ತೆರಿಗೆಯ ಮೊತ್ತ.– ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಯಾವುದೇ ಪೂರೈಕೆಯನ್ನು ಪ್ರತಿಫಲಕ್ಕಾಗಿ ಮಾಡಿದ್ದಲ್ಲಿ, ಅಂಥ ಪೂರೈಕೆಗಾಗಿ ತೆರಿಗೆಯನ್ನು ಸಂದಾಯ ಮಾಡಲು ಬಾಧ್ಯನಿರುವ ಪ್ರತಿಯೊಬ್ಬ ವ್ಯಕ್ತಿಯು, ಮಾಡಲಾದ ಅಂಥ ಪೂರೈಕೆಯ ಬೆಲೆಯ ಭಾಗವಾಗಿರುವ ತೆರಿಗೆಯ ಮೊತ್ತವನ್ನು, ಕರನಿರ್ಧರಣೆಗೆ ಸಂಬಂಧಿಸಿದ ಎಲ್ಲಾ ದಸ್ತಾವೇಜುಗಳು, ತೆರಿಗೆ ಬೆಲೆಪಟ್ಟಿ ಮತ್ತು ಇತರ ಅಂತಹ ದಸ್ತಾವೇಜುಗಳಲ್ಲಿ, ಪ್ರಮುಖವಾಗಿ ಸೂಚಿಸತಕ್ಕದ್ದು.

34. ಜಮೆ ಮತ್ತು ಖರ್ಚು ಚೀಟಿಗಳು.– (1) ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಗಾಗಿ ಒಂದು ತೆರಿಗೆ ಬೆಲೆಪಟ್ಟಿಯನ್ನು ನೀಡಲಾಗಿದ್ದಲ್ಲಿ ಮತ್ತು ಆ ತೆರಿಗೆ ಬೆಲೆಪಟ್ಟಿಯಲ್ಲಿ ತೆರಿಗೆದಾಯಕ ಮೌಲ್ಯವು ಅಥವಾ ವಿಧಿಸಲಾಗಿರುವ

ತೆರಿಗೆಯು, ಅಂಥ ಪೂರೈಕೆಗೆ ಸಂಬಂಧಿಸಿದ ತೆರಿಗೆದಾಯಕ ಮೌಲ್ಯವನ್ನು ಅಥವಾ ಸಂದಾಯ ಮಾಡಬೇಕಾದ ತೆರಿಗೆಯನ್ನು ಮೀರಿರುವಂತೆ ಕಂಡುಬಂದಾಗ, ಅಥವಾ ಪೂರೈಕೆ ಮಾಡಿದ ಸರಕುಗಳು ಸ್ವೀಕರಿಸುವವನಿಂದ ಹಿಂದಿರುಗಿಸಲ್ಪಟ್ಟಿದ್ದಲ್ಲಿ ಅಥವಾ ಮಾಡಿರುವ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಯಲ್ಲಿ ಕೊರತೆ ಕಂಡುಬಂದಲ್ಲಿ ಅಂಥ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆ ಮಾಡಿರುವ ನೋಂದಾಯಿತ ವ್ಯಕ್ತಿಯು ಸ್ವೀಕರಿಸುವವನಿಗೆ ನಿಯಮಿಸಬಹುದಾದ ಅಂಥ ವಿವರಗಳನ್ನು ಒಳಗೊಂಡಿರುವ ಒಂದು ಜಮೆ ಚೀಟಿಯನ್ನು ನೀಡತಕ್ಕದ್ದು.

(2) ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಗೆ ಸಂಬಂಧಿಸಿದಂತೆ ಒಂದು ಜಮೆ ಚೀಟಿಯನ್ನು ನೀಡುವಂತಹ ಯಾವುದೇ ನೋಂದಾಯಿತ ವ್ಯಕ್ತಿಯು ಅಂಥ ಜಮೆ ಚೀಟಿಯನ್ನು ನೀಡಲಾಗಿರುವ ಆ ತಿಂಗಳಿನ, ಆದರೆ ಅಂತಹ ಪೂರೈಕೆ ಮಾಡಿದ ಹಣಕಾಸು ವರ್ಷ ಕೊನೆಗೊಂಡ ತರುವಾಯದ ಸೆಪ್ಟೆಂಬರ್ ಅಥವಾ ಸಂಬಂಧಿಸಿದ ವಾರ್ಷಿಕ ರಿಟರ್ನ್ ಒದಗಿಸಿದ ದಿನಾಂಕ, ಇವುಗಳಲ್ಲಿ ಯಾವುದು ಮೊದಲೋ ಆ ತಿಂಗಳ ನಂತರದಲ್ಲದ, ರಿಟರ್ನ್‌ನಲ್ಲಿ ಅಂಥ ಜಮೆ ಚೀಟಿಯ ವಿವರಗಳನ್ನು ಘೋಷಿಸತಕ್ಕದ್ದು ಮತ್ತು ತೆರಿಗೆ ಬಾಧ್ಯತೆಯನ್ನು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಹೊಂದಾಣಿಕೆ ಮಾಡತಕ್ಕದ್ದು:

ಪರಂತು, ಅಂಥ ಪೂರೈಕೆಯ ತೆರಿಗೆ ಮತ್ತು ಬಡ್ಡಿಯ ಹೊರೆಯು ಆತನಿಂದ ಯಾವುದೇ ಇತರ ವ್ಯಕ್ತಿಗೆ ವರ್ಗಾಯಿಸಲಾಗಿದ್ದರೆ, ಪೂರೈಕೆದಾರನ ಹುಟ್ಟುವಳಿ ತೆರಿಗೆ ಬಾಧ್ಯತೆಯಲ್ಲಿನ ಇಳಿಕೆಯನ್ನು ಅನುಮತಿಸತಕ್ಕದ್ದಲ್ಲ.

(3) ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಗಾಗಿ ಒಂದು ತೆರಿಗೆ ಬೆಲೆಪಟ್ಟಿಯನ್ನು ನೀಡಲಾಗಿದ್ದಲ್ಲಿ ಮತ್ತು ಆ ತೆರಿಗೆ ಬೆಲೆಪಟ್ಟಿಯಲ್ಲಿ ತೆರಿಗೆದಾಯಕ ಮೌಲ್ಯವು ಅಥವಾ ವಿಧಿಸಲಾಗಿರುವ ತೆರಿಗೆಯು, ಅಂಥ ಪೂರೈಕೆಗೆ ಸಂಬಂಧಿಸಿದ ತೆರಿಗೆದಾಯಕ ಮೌಲ್ಯಕ್ಕಿಂತ ಅಥವಾ ಸಂದಾಯ ಮಾಡಬೇಕಾದ ತೆರಿಗೆಗಿಂತ ಕಡಿಮೆಯಿರುವುದು ಕಂಡುಬಂದಾಗ, ಅಂಥ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆ ಮಾಡಿರುವ ನೋಂದಾಯಿತ ವ್ಯಕ್ತಿಯು ಸ್ವೀಕರಿಸುವವನಿಗೆ, ನಿಯಮಿಸಬಹುದಾದ ಅಂಥ ವಿವರಗಳನ್ನು ಒಳಗೊಂಡಿರುವ, ಒಂದು ಖರ್ಚು ಚೀಟಿಯನ್ನು ನೀಡತಕ್ಕದ್ದು.

(4) ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಗೆ ಸಂಬಂಧಿಸಿದಂತೆ ಒಂದು ಖರ್ಚು ಚೀಟಿಯನ್ನು ನೀಡುವಂತಹ ಯಾವೊಬ್ಬ ನೋಂದಾಯಿತ ವ್ಯಕ್ತಿಯು ಅಂಥ ಖರ್ಚು ಚೀಟಿಯನ್ನು ನೀಡಲಾದ ಅವಧಿಯ ತಿಂಗಳಿನ ರಿಟರ್ನ್‌ನಲ್ಲಿ ಅಂಥ ಖರ್ಚು ಚೀಟಿಗಳ ವಿವರಗಳನ್ನು ಘೋಷಿಸತಕ್ಕದ್ದು, ಮತ್ತು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ತೆರಿಗೆ ಬಾಧ್ಯತೆಯನ್ನು ಹೊಂದಾಣಿಕೆ ಮಾಡತಕ್ಕದ್ದು.

ವಿವರಣೆ:– ಈ ಅಧಿನಿಯಮದ ಉದ್ದೇಶಗಳಿಗಾಗಿ 'ಖರ್ಚು ಚೀಟಿ'ಯು ಒಂದು ಪೂರಕ ಬೆಲೆಪಟ್ಟಿಯನ್ನು ಒಳಗೊಂಡಿರತಕ್ಕದ್ದು.

ಅಧ್ಯಾಯ – VIII
ಲೆಕ್ಕಪತ್ರಗಳು ಮತ್ತು ದಾಖಲೆಗಳು

35. ಲೆಕ್ಕಪತ್ರಗಳು ಮತ್ತು ಇತರ ದಾಖಲೆಗಳು.– (1) ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ನೋಂದಣಿ ಪ್ರಮಾಣ ಪತ್ರದಲ್ಲಿ ನಮೂದಿಸಲಾದ ತನ್ನ ಪ್ರಧಾನ ವ್ಯವಹಾರದ ಸ್ಥಳದಲ್ಲಿ, ಕೆಳಕಂಡುವುಗಳ ನಿಜವಾದ ಮತ್ತು ಸರಿಯಾದ ಲೆಕ್ಕವನ್ನು ಇಡತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು:–

(ಎ) ಸರಕುಗಳ ಉತ್ಪಾದನೆ ಅಥವಾ ತಯಾರಿಕೆ;

(ಬಿ) ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಒಳಮುಖ ಮತ್ತು ಹೊರಮುಖ ಪೂರೈಕೆ;

(ಸಿ) ಸರಕುಗಳ ದಾಸ್ತಾನು;

(ಡಿ) ಉಪಯೋಗಿಸಿದ ಹೂಡುವಳಿ ತೆರಿಗೆ ಜಮೆ;

(ಇ) ಸಂದಾಯ ಮಾಡಬೇಕಾದ ಮತ್ತು ಮಾಡಿದ ಹುಟ್ಟುವಳಿ ತೆರಿಗೆ; ಮತ್ತು

(ಎಫ್) ನಿಯಮಿಸಬಹುದಾದ ಅಂಥ ಇತರ ವಿವರಗಳು:

ಪರಂತು, ನೋಂದಣಿ ಪ್ರಮಾಣ ಪತ್ರದಲ್ಲಿ ಒಂದಕ್ಕಿಂತ ಹೆಚ್ಚಿನ ವ್ಯವಹಾರದ ಸ್ಥಳವನ್ನು ನಿರ್ದಿಷ್ಟಪಡಿಸಿದ್ದಲ್ಲಿ, ಪ್ರತಿಯೊಂದು ವ್ಯವಹಾರದ ಸ್ಥಳಕ್ಕೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ಅಂಥ ವ್ಯವಹಾರದ ಸ್ಥಳಗಳಲ್ಲಿ ಇಡತಕ್ಕದ್ದು:

ಮತ್ತು ಪರಂತು, ನೋಂದಾಯಿತ ವ್ಯಕ್ತಿಯು ಅಂಥ ಲೆಕ್ಕಪತ್ರಗಳನ್ನು ಮತ್ತು ಇತರ ವಿವರಗಳನ್ನು ನಿಯಮಿಸಬಹುದಾದ ವಿಧಾನದಲ್ಲಿ ವಿದ್ಯುನ್ಮಾನ ರೂಪದಲ್ಲಿ ಇಡತಕ್ಕದ್ದು ಮತ್ತು ನಿರ್ವಹಿಸಬಹುದು.

(2) ಉಗ್ರಾಣ ಅಥವಾ ಗೋದಾಮು ಅಥವಾ ಸರಕುಗಳನ್ನು ಸಂಗ್ರಹಿಸುವುದಕ್ಕಾಗಿ ಉಪಯೋಗಿಸುವ ಯಾವುದೇ ಇತರ ಸ್ಥಳದ ಪ್ರತಿಯೊಬ್ಬ ಮಾಲೀಕನು ಅಥವಾ ನಿರ್ವಾಹಕನು ಮತ್ತು ಪ್ರತಿಯೊಬ್ಬ ಸಾಗಾಣಿಕೆದಾರನು, ಆತನು ನೋಂದಾಯಿತ

ವ್ಯಕ್ತಿಯಾಗಿರಲಿ ಅಥವಾ ಇಲ್ಲದಿರಲಿ, ಸರಕುಗಳ ರವಾನೆದಾರರ, ಸ್ವೀಕರಿಸುವವರ ಮತ್ತು ಸಂಬಂಧಿಸಿದ ಇತರ ವಿವರಗಳ ದಾಖಲೆಗಳನ್ನು, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ನಿರ್ವಹಿಸತಕ್ಕದ್ದು.

(3) ಆಯುಕ್ತರು, ನಿರ್ದಿಷ್ಟಪಡಿಸಬಹುದಾದ ಅಂಥ ಉದ್ದೇಶಕ್ಕಾಗಿ, ಹೆಚ್ಚುವರಿ ಲೆಕ್ಕಪತ್ರಗಳು ಅಥವಾ ದಸ್ತಾವೇಜುಗಳನ್ನು ನಿರ್ವಹಿಸುವುದಕ್ಕಾಗಿ ತೆರಿಗೆದಾಯಕ ವ್ಯಕ್ತಿಗಳ ಒಂದು ವರ್ಗವನ್ನು ಅಧಿಸೂಚಿಸಬಹುದು.

(4) ಆಯುಕ್ತರು, ಯಾವುದೇ ತೆರಿಗೆದಾಯಕ ವ್ಯಕ್ತಿಗಳ ವರ್ಗವು ಈ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಲೆಕ್ಕಪತ್ರಗಳನ್ನು ಇಡುವ ಮತ್ತು ನಿರ್ವಹಿಸುವ ಸ್ಥಿತಿಯಲ್ಲಿ ಇಲ್ಲವೆಂದು ಪರಿಗಣಿಸಿದಲ್ಲಿ, ಅವರು ಲಿಖಿತವಾಗಿ ದಾಖಲಿಸಬೇಕಾದ ಕಾರಣಗಳಿಗಾಗಿ, ಅಂಥ ತೆರಿಗೆದಾಯಕ ವ್ಯಕ್ತಿಗಳ ವರ್ಗವನ್ನು, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಲೆಕ್ಕಪತ್ರಗಳನ್ನು ನಿರ್ವಹಿಸಲು, ಅನುಮತಿಸಬಹುದು.

(5) ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಆತನ ವಹಿವಾಟು ಒಂದು ಹಣಕಾಸು ವರ್ಷದಲ್ಲಿ ನಿಯಮಿಸಲಾದ ಮಿತಿಯನ್ನು ಮೀರಿದಾಗ, ತನ್ನ ಲೆಕ್ಕಪತ್ರಗಳನ್ನು ಒಬ್ಬ ಚಾರ್ಟರ್ಡ್ ಅಕೌಂಟೆಂಟ್ ಅಥವಾ ಒಬ್ಬ ಕಾಸ್ಟ್ ಅಕೌಂಟೆಂಟ್‌ನಿಂದ ಲೆಕ್ಕಪರಿಶೋಧನೆ ಮಾಡಿಸಿಕೊಳ್ಳತಕ್ಕದ್ದು ಮತ್ತು ಪ್ರಕರಣ 44ರ ಉಪಪ್ರಕರಣ (2)ರ ಅಡಿಯಲ್ಲಿ ಲೆಕ್ಕಪರಿಶೋಧನೆಯ ವಾರ್ಷಿಕ ಲೆಕ್ಕಪತ್ರಗಳು, ಸರಿಹೊಂದಿಕೆಯ ವಿವರಪತ್ರದ ಒಂದು ಪ್ರತಿಯನ್ನು ಮತ್ತು ಅಂಥ ಇತರ ದಸ್ತಾವೇಜುಗಳನ್ನು ನಿಯಮಿಸಬಹುದಾದ ಅಂಥ ನಮೂನೆ ಮತ್ತು ವಿಧಾನದಲ್ಲಿ ಸಲ್ಲಿಸತಕ್ಕದ್ದು.

(6) ಪ್ರಕರಣ 17ರ ಉಪಪ್ರಕರಣ (5)ರ ಖಂಡ (ಹೆಚ್)ನ ಉಪಬಂಧಗಳಿಗೆ ಒಳಪಟ್ಟು, ನೋಂದಾಯಿತ ವ್ಯಕ್ತಿಯು, ಉಪಪ್ರಕರಣ (1)ರ ಉಪಬಂಧಗಳಿಗೆ ಅನುಸಾರವಾಗಿ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಲೆಕ್ಕ ಇಡಲು ವಿಫಲನಾದಲ್ಲಿ, ಲೆಕ್ಕ ಇಡಲಾಗದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಮೇಲೆ ಸಂದಾಯ ಮಾಡಬೇಕಾದ ತೆರಿಗೆಯ ಮೊತ್ತವನ್ನು, ಯುಕ್ತ ಅಧಿಕಾರಿಯು, ಅಂಥ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡು ಅಂಥ ವ್ಯಕ್ತಿಯಿಂದ ಪೂರೈಕೆಯಾಗಿವೆ ಎನ್ನುವ ಹಾಗೆಯೇ ನಿರ್ಧರಿಸತಕ್ಕದ್ದು ಮತ್ತು ಪ್ರಕರಣ 73ರ ಅಥವಾ ಸಂದರ್ಭಾನುಸಾರವಾಗಿ ಪ್ರಕರಣ 74ರ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಡನೆ, ಅಂಥ ತೆರಿಗೆಯನ್ನು ನಿರ್ಧರಿಸುವುದಕ್ಕಾಗಿ ಅನ್ವಯವಾಗತಕ್ಕದ್ದು.

36. ಲೆಕ್ಕಪತ್ರಗಳ ಉಳಿಸಿಕೊಳ್ಳುವಿಕೆ ಅವಧಿ.– ಪ್ರಕರಣ 35ರ ಉಪಪ್ರಕರಣ (1)ರ ಉಪಬಂಧಗಳಿಗೆ ಅನುಸಾರವಾಗಿ ಲೆಕ್ಕಪುಸ್ತಕಗಳು ಅಥವಾ ಇತರ ದಾಖಲೆಗಳನ್ನು ಇಡುವುದು ಮತ್ತು ನಿರ್ವಹಿಸುವುದು ಅಗತ್ಯವಿರುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಅಂಥ ಲೆಕ್ಕಪತ್ರಗಳು ಮತ್ತು ದಾಖಲೆಗಳು ಸಂಬಂಧಿಸಿರುವ ವರ್ಷಕ್ಕೆ ವಾರ್ಷಿಕ ರಿಟರ್ನ್ ಅನ್ನು ಒದಗಿಸಲು ಇರುವ ಗಡುವು ದಿನಾಂಕದಿಂದ ಎಪ್ಪತ್ತೆರಡು ತಿಂಗಳು ಕೊನೆಗೊಳ್ಳುವವರೆಗೂ ಅವುಗಳನ್ನು ಉಳಿಸಿಕೊಳ್ಳತಕ್ಕದ್ದು:

ಪರಂತು, ಯಾವುದೇ ಅಪೀಲು ಪ್ರಾಧಿಕಾರ ಅಥವಾ ಪುನರೀಕ್ಷಣಾ ಪ್ರಾಧಿಕಾರ ಅಥವಾ ಅಪೀಲು ನ್ಯಾಯಾಧಿಕರಣ ಅಥವಾ ನ್ಯಾಯಾಲಯದ ಮುಂದಿರುವ ಆತನಿಂದಾಗಲಿ ಅಥವಾ ಆಯುಕ್ತರಿಂದಾಗಲಿ ಸಲ್ಲಿಸಿದ ಒಂದು ಅಪೀಲು ಅಥವಾ ಪುನರೀಕ್ಷಣೆ ಅಥವಾ ಯಾವುದೇ ಇತರ ನಡಾವಳಿಗಳಿಗೆ ಪಕ್ಷಕಾರನಾಗಿರುವ ಅಥವಾ ಅಧ್ಯಾಯ XIX ರ ಅಡಿಯಲ್ಲಿನ ಒಂದು ಅಪರಾಧಕ್ಕಾಗಿ ತನಿಖೆಯ ಅಡಿಯಲ್ಲಿರುವ ಒಬ್ಬ ತೆರಿಗೆದಾಯಕ ವ್ಯಕ್ತಿಯು, ಲೆಕ್ಕಪುಸ್ತಕಗಳನ್ನು ಮತ್ತು ಅಂಥ ಅಪೀಲು ಅಥವಾ ಪುನರೀಕ್ಷಣೆ ಅಥವಾ ನಡಾವಳಿಗಳಿಗಳ ಅಥವಾ ತನಿಖೆಯ ವಸ್ತು ವಿಷಯವಾಗಿರುವ ಇತರ ದಾಖಲೆಗಳನ್ನು, ಅಂಥ ಅಪೀಲು ಅಥವಾ ಪುನರೀಕ್ಷಣೆ ಅಥವಾ ನಡಾವಳಿಗಳಿಗಳು ಅಥವಾ ತನಿಖೆಯು ಅಂತಿಮವಾಗಿ ವಿಲೇವಾರಿಯಾದ ನಂತರದ ಒಂದು ವರ್ಷದ ಅವಧಿ ಅಥವಾ ಮೇಲೆ ನಿರ್ದಿಷ್ಟಪಡಿಸಿದ ಅವಧಿ, ಇವುಗಳಲ್ಲಿ ಯಾವುದು ನಂತರದ್ದೋ, ಅಲ್ಲಿಯವರೆಗೆ ಉಳಿಸಿಕೊಳ್ಳತಕ್ಕದ್ದು.

ಅಧ್ಯಾಯ –IX
ರಿಟರ್ನ್‌ಗಳು

37. ಹೊರಮುಖ ಪೂರೈಕೆಗಳ ವಿವರಗಳನ್ನು ಒದಗಿಸುವುದು.– (1) ಒಬ್ಬ ಹೂಡುವಳಿ ಸೇವೆ ಹಂಚಿಕೆದಾರ, ಒಬ್ಬ ಅನಿವಾಸಿ ತೆರಿಗೆದಾಯಕ ವ್ಯಕ್ತಿ ಮತ್ತು ಪ್ರಕರಣ 10 ಅಥವಾ ಪ್ರಕರಣ 51 ಅಥವಾ ಪ್ರಕರಣ 52ರ ಉಪಬಂಧಗಳ ಅಡಿಯಲ್ಲಿ ತೆರಿಗೆ ಸಂದಾಯ ಮಾಡುವ ಒಬ್ಬ ವ್ಯಕ್ತಿಯನ್ನು ಹೊರತುಪಡಿಸಿದಂತೆ, ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಒಂದು ತೆರಿಗೆ ಅವಧಿಯಲ್ಲಿ ಮಾಡಲಾದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಹೊರಮುಖ ಪೂರೈಕೆಗಳ ವಿವರಗಳನ್ನು ಸದರಿ ತೆರಿಗೆ ಅವಧಿಯ ತದನಂತರ ಬರುವ ತಿಂಗಳಿನ ಹತ್ತನೇ ದಿನದಂದು ಅಥವಾ ಅದಕ್ಕಿಂತ ಮೊದಲು ನಿಯಮಿಸಬಹುದಾದ ಅಂಥ ನಮೂನೆ ಮತ್ತು ವಿಧಾನದಲ್ಲಿ, ವಿದ್ಯುನ್ಮಾನ ರೂಪದಲ್ಲಿ ಒದಗಿಸತಕ್ಕದ್ದು ಮತ್ತು ಅಂಥ ವಿವರಗಳನ್ನು ಸದರಿ ಪೂರೈಕೆಗಳನ್ನು ಸ್ವೀಕರಿಸುವವನಿಗೆ, ನಿಯಮಿಸಬಹುದಾದ ಅಂಥ ಸಮಯದೊಳಗೆ ಮತ್ತು ಅಂಥ ವಿಧಾನದಲ್ಲಿ, ತಿಳಿಸತಕ್ಕದ್ದು:

ಪರಂತು, ತೆರಿಗೆ ಅವಧಿಯ ತದನಂತರ ಬರುವ ತಿಂಗಳಿನ ಹನ್ನೊಂದನೇ ದಿನದಿಂದ ಹದಿನೈದನೇ ದಿನದ ವರೆಗಿನ ಅವಧಿಯಲ್ಲಿ ಹೊರಮುಖ ಪೂರೈಕೆಗಳ ವಿವರಗಳನ್ನು ಒದಗಿಸಲು ನೋಂದಾಯಿತ ವ್ಯಕ್ತಿಗೆ ಅವಕಾಶ ನೀಡತಕ್ಕದ್ದಲ್ಲ:

ಮತ್ತು ಪರಂತು, ಆಯುಕ್ತರು, ಲಿಖಿತವಾಗಿ ದಾಖಲಿಸಬೇಕಾದ ಕಾರಣಗಳಿಗಾಗಿ, ಅಧಿಸೂಚನೆಯ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ತೆರಿಗೆದಾಯಕ ವ್ಯಕ್ತಿಗಳ ವರ್ಗಕ್ಕೆ, ಅಂಥ ವಿವರಗಳನ್ನು ಒದಗಿಸುವುದರ ಕಾಲಮಿತಿಯನ್ನು ವಿಸ್ತರಿಸಬಹುದು:

ಅಲ್ಲದೆ ಪರಂತು, ಕೇಂದ್ರ ತೆರಿಗೆ ಆಯುಕ್ತರಿಂದ ಅಧಿಸೂಚಿಸಿದ ಕಾಲಮಿತಿಯ ಯಾವುದೇ ವಿಸ್ತರಣೆಯು, ಆಯುಕ್ತರಿಂದ ಅಧಿಸೂಚಿತಗೊಂಡಿದೆ ಎಂದು ಪರಿಭಾವಿಸತಕ್ಕದ್ದು.

(2) ಪ್ರಕರಣ 38ರ ಉಪಪ್ರಕರಣ (3)ರ ಅಡಿಯಲ್ಲಿನ ವಿವರಗಳನ್ನು ಅಥವಾ ಪ್ರಕರಣ 38ರ ಉಪಪ್ರಕರಣ (4)ರ ಅಡಿಯಲ್ಲಿನ ಹೂಡುವಳಿ ಸೇವಾ ಹಂಚಿಕೆದಾರನ ಒಳಮುಖ ಪೂರೈಕೆಗೆ ಸಂಬಂಧಿಸಿದ ವಿವರಗಳನ್ನು, ಯಾರಿಗೆ ತಿಳಿಸಲಾಗಿದೆಯೋ ಅಂತಹ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಹಾಗೇ ತಿಳಿಸಲಾದ ವಿವರಗಳನ್ನು, ತೆರಿಗೆ ಅವಧಿಯ ತದನಂತರ ಬರುವ ತಿಂಗಳಿನ ಹದಿನೇಳನೇ ದಿನದಂದು ಅಥವಾ ಅದಕ್ಕಿಂತ ಮೊದಲು, ಆದರೆ ಹದಿನೈದನೇ ದಿನಕ್ಕಿಂತ ಮುಂಚಿತವಾಗಲ್ಲದೇ, ಒಪ್ಪತಕ್ಕದ್ದು ಅಥವಾ ತಿರಸ್ಕರಿಸತಕ್ಕದ್ದು ಮತ್ತು ಆತನಿಂದ ಉಪಪ್ರಕರಣ (1)ರ ಅಡಿಯಲ್ಲಿ ಒದಗಿಸಿದ ವಿವರಗಳು ಅದಕ್ಕನುಗುಣವಾಗಿ ತಿದ್ದುಪಡಿಯಾಗತಕ್ಕದ್ದು.

(3) ಯಾವುದೇ ನೋಂದಾಯಿತ ವ್ಯಕ್ತಿಯು, ಯಾವುದೇ ತೆರಿಗೆ ಅವಧಿಗೆ ಉಪಪ್ರಕರಣ (1)ರ ಅಡಿಯಲ್ಲಿ ವಿವರಗಳನ್ನು ಒದಗಿಸಿ ಮತ್ತು ಪ್ರಕರಣ 42ರ ಅಥವಾ ಪ್ರಕರಣ 43ರ ಅಡಿಯಲ್ಲಿ ಅವು ಹೊಂದಾಣಿಕೆಯಾಗದೆ ಉಳಿದುಕೊಂಡಿರುವಾಗ, ಅವುಗಳಲ್ಲಿ ಯಾವುದೇ ತಪ್ಪು ಅಥವಾ ಲೋಪ ಪತ್ತೆಯಾದಲ್ಲಿ, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಅಂಥ ತಪ್ಪು ಅಥವಾ ಲೋಪವನ್ನು ಸರಿಪಡಿಸಿಕೊಳ್ಳುವುದು ಮತ್ತು ಅಂಥ ತಪ್ಪು ಅಥವಾ ಲೋಪದ ಕಾರಣದಿಂದಾಗಿ ತೆರಿಗೆಯು ಕಡಿಮೆ ಸಂದಾಯವಾದ ಸಂದರ್ಭದಲ್ಲಿ, ತೆರಿಗೆ ಮತ್ತು ಬಡ್ಡಿ, ಯಾವುದಾದರು ಇದ್ದರೆ, ಅಂಥ ತೆರಿಗೆ ಅವಧಿಗೆ ಒದಗಿಸಬೇಕಾಗಿರುವ ರಿಟರ್ನ್‌ನಲ್ಲಿ ಅದನ್ನು ಸಂದಾಯ ಮಾಡತಕ್ಕದ್ದು:

ಪರಂತು, ಉಪಪ್ರಕರಣ (1)ರ ಅಡಿಯಲ್ಲಿ ಸಲ್ಲಿಸಲಾದ ವಿವರಗಳಿಗೆ ಸಂಬಂಧಿಸಿದ ತಪ್ಪು ಅಥವಾ ಲೋಪದ ಸರಿಪಡಿಸುವಿಕೆಗೆ, ಅಂಥ ವಿವರಗಳು ಸಂಬಂಧಿಸಿರುವ ಹಣಕಾಸು ವರ್ಷ ಕೊನೆಗೊಂಡ ತರುವಾಯದ ಸೆಪ್ಟೆಂಬರ್ ತಿಂಗಳಿಗೆ ಪ್ರಕರಣ 39ರ ಅಡಿಯಲ್ಲಿ ರಿಟರ್ನ್ ಒದಗಿಸುವಿಕೆ ಅಥವಾ ಸಂಬಂಧಿಸಿದ ವಾರ್ಷಿಕ ರಿಟರ್ನ್ ಸಲ್ಲಿಸುವಿಕೆ, ಇವುಗಳಲ್ಲಿ ಯಾವುದು ಮೊದಲೋ ಅದರ ನಂತರ, ಅವಕಾಶ ನೀಡತಕ್ಕದ್ದಲ್ಲ.

ವಿವರಣೆ:– ಈ ಅಧ್ಯಾಯದ ಉದ್ದೇಶಗಳಿಗಾಗಿ, **"ಹೊರಮುಖ ಪೂರೈಕೆಗಳ ವಿವರಗಳು"** ಎಂಬ ಪದಾವಳಿಯು ಯಾವುದೇ ತೆರಿಗೆ ಅವಧಿಯಲ್ಲಿ ಮಾಡಿದ ಹೊರಮುಖ ಪೂರೈಕೆಗಳಿಗೆ ಸಂಬಂಧಿಸಿದಂತೆ ನೀಡಿದ ಬೆಲೆಪಟ್ಟಿಗಳು, ಖರ್ಚು ಚೀಟಿಗಳು, ಜಮೆ ಚೀಟಿಗಳು ಮತ್ತು ಪರಿಷ್ಕೃತ ಬೆಲೆಪಟ್ಟಿಗಳನ್ನು ಒಳಗೊಳ್ಳತಕ್ಕದ್ದು.

38. ಒಳಮುಖ ಪೂರೈಕೆಗಳ ವಿವರಗಳನ್ನು ಒದಗಿಸುವುದು.– (1) ಒಬ್ಬ ಹೂಡುವಳಿ ಸೇವೆ ಹಂಚಿಕೆದಾರ, ಒಬ್ಬ ಅನಿವಾಸಿ ತೆರಿಗೆದಾಯಕ ವ್ಯಕ್ತಿ ಅಥವಾ ಪ್ರಕರಣ 10 ಅಥವಾ ಪ್ರಕರಣ 51 ಅಥವಾ ಪ್ರಕರಣ 52ರ ಉಪಬಂಧಗಳ ಅಡಿಯಲ್ಲಿ ತೆರಿಗೆ ಸಂದಾಯ ಮಾಡುವ ಒಬ್ಬ ವ್ಯಕ್ತಿಯನ್ನು ಹೊರತುಪಡಿಸಿದಂತೆ, ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಆತನ ಒಳಮುಖ ಪೂರೈಕೆಗಳು ಮತ್ತು ಜಮೆ ಅಥವಾ ಖರ್ಚು ಚೀಟಿಗಳ ವಿವರಗಳನ್ನು ಸಿದ್ದಪಡಿಸುವುದಕ್ಕಾಗಿ, ಪ್ರಕರಣ 37ರ ಉಪಪ್ರಕರಣ (1)ರ ಅಡಿಯಲ್ಲಿ ತಿಳಿಯಪಡಿಸಿದ ಹೊರಮುಖ ಪೂರೈಕೆಗಳು ಮತ್ತು ಜಮೆ, ಅಥವಾ ಖರ್ಚು ಚೀಟಿಗಳಿಗೆ ಸಂಬಂಧಿಸಿದ ವಿವರಗಳನ್ನು ಪರಿಶೀಲಿಸತಕ್ಕದ್ದು, ಸಿಂಧುಗೊಳಿಸತಕ್ಕದ್ದು, ಅಗತ್ಯವಿದ್ದರೆ ಮಾರ್ಪಡಿಸತಕ್ಕದ್ದು ಅಥವಾ ತೆಗೆದುಹಾಕತಕ್ಕದ್ದು ಮತ್ತು ಪೂರೈಕೆದಾರನಿಂದ ಪ್ರಕರಣ 37ರ ಉಪಪ್ರಕರಣ (1)ರ ಅಡಿಯಲ್ಲಿ ಘೋಷಿತವಾಗದೇ ಇರುವ ಅಂಥ ಪೂರೈಕೆಗಳಿಗೆ ಸಂಬಂಧಿಸಿದಂತೆ ಆತನು ಸ್ವೀಕರಿಸಿದ ಒಳಮುಖ ಪೂರೈಕೆಗಳು ಮತ್ತು ಜಮೆ ಅಥವಾ ಖರ್ಚು ಚೀಟಿಯ ವಿವರಗಳನ್ನು ಅದರಲ್ಲಿ ಸೇರಿಸಬಹುದು.

(2) ಒಬ್ಬ ಹೂಡುವಳಿ ಸೇವೆ ಹಂಚಿಕೆದಾರ, ಒಬ್ಬ ಅನಿವಾಸಿ ತೆರಿಗೆದಾಯಕ ವ್ಯಕ್ತಿ ಮತ್ತು ಪ್ರಕರಣ 10 ಅಥವಾ ಪ್ರಕರಣ 51 ಅಥವಾ ಪ್ರಕರಣ 52ರ ಉಪಬಂಧಗಳ ಅಡಿಯಲ್ಲಿ ತೆರಿಗೆ ಸಂದಾಯ ಮಾಡುವ ಒಬ್ಬ ವ್ಯಕ್ತಿಯನ್ನು ಹೊರತುಪಡಿಸಿದಂತೆ, ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಒಂದು ತೆರಿಗೆ ಅವಧಿಯಲ್ಲಿ ಈ ಅಧಿನಿಯಮದ ಅಡಿಯಲ್ಲಿ ಹಿಮ್ಮುಖ ವಿಧಿಸುವಿಕೆಯ ಆಧಾರದ ಮೇಲೆ ತೆರಿಗೆ ಸಂದಾಯ ಮಾಡಬೇಕಿರುವ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಒಳಮುಖ ಪೂರೈಕೆಗಳು ಮತ್ತು ವಿಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿ ತೆರಿಗೆದಾಯಕವಾದ ಅಥವಾ ಸೀಮಾಸುಂಕ ಟ್ಯಾರಿಫ್ ಅಧಿನಿಯಮ, 1975ರ (1975ರ ಕೇಂದ್ರ ಅಧಿನಿಯಮ 51) ಪ್ರಕರಣ 3ರ ಅಡಿಯಲ್ಲಿ ಅವುಗಳ ಮೇಲೆ ವಿಕೀಕೃತ ಸರಕು ಮತ್ತು ಸೇವಾ ತೆರಿಗೆಯನ್ನು ಸಂದಾಯ ಮಾಡಬೇಕಾದ, ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಒಳಮುಖ ಪೂರೈಕೆಗಳು ಮತ್ತು ಅಂಥ ಪೂರೈಕೆಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಿದ ಜಮೆ ಅಥವಾ ಖರ್ಚು ಚೀಟಿಗಳನ್ನು ಒಳಗೊಂಡಂತೆ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಒಳಮುಖ ಪೂರೈಕೆಗಳ ವಿವರಗಳನ್ನು ಸದರಿ ತೆರಿಗೆ ಅವಧಿಯ ತದನಂತರ ಬರುವ ತಿಂಗಳಿನ ಹತ್ತನೇ ದಿನದ ನಂತರ ಆದರೆ ಹದಿನೈದನೇ ದಿನದಂದು ಅಥವಾ ಅದರ ಮೊದಲು, ನಿಯಮಿಸಬಹುದಾದ ಅಂಥ ನಮೂನೆ ಮತ್ತು ವಿಧಾನದಲ್ಲಿ, ವಿದ್ಯುನ್ಮಾನ ರೂಪದಲ್ಲಿ ಒದಗಿಸತಕ್ಕದ್ದು:

ಪರಂತು, ಆಯುಕ್ತರು, ಲಿಖಿತವಾಗಿ ದಾಖಲಿಸಬೇಕಾದ ಕಾರಣಗಳಿಗಾಗಿ, ಅಧಿಸೂಚನೆಯ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ತೆರಿಗೆದಾಯಕ ವ್ಯಕ್ತಿಗಳ ವರ್ಗಕ್ಕೆ, ಅಂಥ ವಿವರಗಳನ್ನು ಒದಗಿಸುವುದರ ಕಾಲಮಿತಿಯನ್ನು ವಿಸ್ತರಿಸಬಹುದು:

ಮತ್ತು ಪರಂತು, ಕೇಂದ್ರ ತೆರಿಗೆ ಆಯುಕ್ತರಿಂದ ಅಧಿಸೂಚಿಸಿದ ಕಾಲಮಿತಿಯ ಯಾವುದೇ ವಿಸ್ತರಣೆಯು, ಆಯುಕ್ತರಿಂದ ಅಧಿಸೂಚಿತಗೊಂಡಿದೆ ಎಂದು ಪರಿಭಾವಿಸತಕ್ಕದ್ದು.

(3) ಸ್ವೀಕರಿಸುವವನಿಂದ, ಮಾರ್ಪಾಟಾದ, ತೆಗೆದುಹಾಕಲಾದ ಅಥವಾ ಸೇರಿಸಲಾದ ಮತ್ತು ಉಪಪ್ರಕರಣ (2)ರ ಅಡಿಯಲ್ಲಿ ಒದಗಿಸಿದ, ಪೂರೈಕೆಗಳ ವಿವರಗಳನ್ನು, ಸಂಬಂಧಿಸಿದ ಪೂರೈಕೆದಾರನಿಗೆ ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಸಮಯದೊಳಗೆ ತಿಳಿಸತಕ್ಕದ್ದು.

(4) ಪ್ರಕರಣ 39ರ ಉಪಪ್ರಕರಣ (2) ಅಥವಾ ಉಪಪ್ರಕರಣ (4)ರ ಅಡಿಯಲ್ಲಿ ಒದಗಿಸಿದ ರಿಟರ್ನ್‌ನಲ್ಲಿ ಸ್ವೀಕರಿಸುವವನಿಂದ ಮಾರ್ಪಾಟಾದ, ತೆಗೆದುಹಾಕಲಾದ ಅಥವಾ ಸೇರಿಸಲಾದ ಪೂರೈಕೆಗಳ ವಿವರಗಳನ್ನು ಸಂಬಂಧಿಸಿದ ಪೂರೈಕೆದಾರನಿಗೆ ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಅಂಥ ಸಮಯದೊಳಗೆ ತಿಳಿಸತಕ್ಕದ್ದು.

(5) ಯಾವುದೇ ನೋಂದಾಯಿತ ವ್ಯಕ್ತಿಯು, ಯಾವುದೇ ತೆರಿಗೆ ಅವಧಿಗೆ ಉಪಪ್ರಕರಣ (2)ರ ಅಡಿಯಲ್ಲಿ ವಿವರಗಳನ್ನು ಒದಗಿಸಿ ಮತ್ತು ಪ್ರಕರಣ 42ರ ಅಥವಾ ಪ್ರಕರಣ 43ರ ಅಡಿಯಲ್ಲಿ ಅವು ಹೊಂದಾಣಿಕೆಯಾಗದೆ ಉಳಿದುಕೊಂಡಿರುವಾಗ, ಅವುಗಳಲ್ಲಿ ಯಾವುದೇ ತಪ್ಪು ಅಥವಾ ಲೋಪ ಪತ್ತೆಯಾದಲ್ಲಿ, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಅಂಥ ತಪ್ಪು ಅಥವಾ ಲೋಪವನ್ನು ಸರಿಪಡಿಸಿಕೊಳ್ಳುವುದು ಮತ್ತು ಅಂಥ ತಪ್ಪು ಅಥವಾ ಲೋಪದ ಕಾರಣದಿಂದಾಗಿ ತೆರಿಗೆಯು ಕಡಿಮೆ ಸಂದಾಯವಾದ ಸಂದರ್ಭದಲ್ಲಿ, ತೆರಿಗೆ ಮತ್ತು ಬಡ್ಡಿ, ಯಾವುದಾದರು ಇದ್ದರೆ, ಅಂಥ ತೆರಿಗೆ ಅವಧಿಗೆ ಒದಗಿಸಬೇಕಾಗಿರುವ ರಿಟರ್ನ್‌ನಲ್ಲಿ ಅದನ್ನು ಸಂದಾಯ ಮಾಡತಕ್ಕದ್ದು:

ಪರಂತು, ಉಪಪ್ರಕರಣ (2)ರ ಅಡಿಯಲ್ಲಿ ಸಲ್ಲಿಸಲಾದ ವಿವರಗಳಿಗೆ ಸಂಬಂಧಿಸಿದ ತಪ್ಪು ಅಥವಾ ಲೋಪದ ಸರಿಪಡಿಸುವಿಕೆಗೆ, ಅಂಥ ವಿವರಗಳು ಸಂಬಂಧಿಸಿರುವ ಹಣಕಾಸು ವರ್ಷ ಕೊನೆಗೊಂಡ ತರುವಾಯದ ಸೆಪ್ಟೆಂಬರ್ ತಿಂಗಳಿಗೆ ಪ್ರಕರಣ 39ರ ಅಡಿಯಲ್ಲಿ ರಿಟರ್ನ್ ಒದಗಿಸುವಿಕೆ ಅಥವಾ ಸಂಬಂಧಿಸಿದ ವಾರ್ಷಿಕ ರಿಟರ್ನ್ ಸಲ್ಲಿಸುವಿಕೆ, ಇವುಗಳಲ್ಲಿ ಯಾವುದು ಮೊದಲೋ ಅದರ ನಂತರ, ಅವಕಾಶ ನೀಡತಕ್ಕದ್ದಲ್ಲ.

39. ರಿಟರ್ನ್‌ಗಳನ್ನು ಒದಗಿಸುವುದು.– (1) ಒಬ್ಬ ಹೂಡುವಳಿ ಸೇವೆ ಹಂಚಿಕೆದಾರ ಅಥವಾ ಒಬ್ಬ ಅನಿವಾಸಿ ತೆರಿಗೆದಾಯಕ ವ್ಯಕ್ತಿ ಅಥವಾ ಪ್ರಕರಣ 10 ಅಥವಾ ಪ್ರಕರಣ 51 ಅಥವಾ ಪ್ರಕರಣ 52ರ ಉಪಬಂಧಗಳ ಅಡಿಯಲ್ಲಿ ತೆರಿಗೆ ಸಂದಾಯ ಮಾಡುವ ಒಬ್ಬ ವ್ಯಕ್ತಿಯನ್ನು ಹೊರತುಪಡಿಸಿದಂತೆ, ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಪ್ರತಿಯೊಂದು ಕ್ಯಾಲೆಂಡರ್ ತಿಂಗಳು ಅಥವಾ ಅದರ ಭಾಗಕ್ಕೆ, ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಒಳಮುಖ ಮತ್ತು ಹೊರಮುಖ ಪೂರೈಕೆಗಳು, ಉಪಯೋಗಿಸಿದ ಹೂಡುವಳಿ ತೆರಿಗೆ ಜಮೆ, ಸಂದಾಯ ಮಾಡಬೇಕಾದ ತೆರಿಗೆ, ಸಂದಾಯ ಮಾಡಿದ ತೆರಿಗೆ ಮತ್ತು ನಿಯಮಿಸಬಹುದಾದ ಅಂಥ ಇತರ ವಿವರಗಳ ಒಂದು ರಿಟರ್ನ್ ಅನ್ನು, ಅಂಥ ಪ್ರತಿಯೊಂದು ಕ್ಯಾಲೆಂಡರ್ ತಿಂಗಳು ಅಥವಾ ಅದರ ಭಾಗದ ತದನಂತರ ಬರುವ ತಿಂಗಳಿನ ಇಪ್ಪತ್ತನೇ ದಿನದಂದು ಅಥವಾ ಅದಕ್ಕಿಂತ ಮೊದಲು, ನಿಯಮಿಸಬಹುದಾದ ಅಂಥ ನಮೂನೆ ಮತ್ತು ವಿಧಾನದಲ್ಲಿ, ವಿದ್ಯುನ್ಮಾನ ರೀತಿಯಲ್ಲಿ, ಒದಗಿಸತಕ್ಕದ್ದು.

(2) ಪ್ರಕರಣ 10ರ ಉಪಬಂಧಗಳ ಅಡಿಯಲ್ಲಿ ತೆರಿಗೆ ಸಂದಾಯ ಮಾಡುವ ಒಬ್ಬ ನೋಂದಾಯಿತ ವ್ಯಕ್ತಿಯು ಪ್ರತಿಯೊಂದು ತ್ರೈಮಾಸಿಕ ಅಥವಾ ಅದರ ಭಾಗಕ್ಕೆ, ರಾಜ್ಯದಲ್ಲಿನ ವಹಿವಾಟು, ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಒಳಮುಖ ಪೂರೈಕೆಗಳು, ಸಂದಾಯ ಮಾಡಬೇಕಾದ ತೆರಿಗೆ ಮತ್ತು ಸಂದಾಯ ಮಾಡಿದ ತೆರಿಗೆಯ ಒಂದು ರಿಟರ್ನ್ ಅನ್ನು ವಿದ್ಯುನ್ಮಾನ ರೀತಿಯಲ್ಲಿ, ನಿಯಮಿಸಬಹುದಾದ ಅಂಥ ನಮೂನೆ ಮತ್ತು ವಿಧಾನದಲ್ಲಿ, ಅಂಥ ತ್ರೈಮಾಸಿಕ ಕೊನೆಗೊಂಡ ನಂತರದ ಹದಿನೆಂಟು ದಿನಗಳ ಒಳಗಾಗಿ ಒದಗಿಸತಕ್ಕದ್ದು.

(3) ಪ್ರಕರಣ 51ರ ಉಪಬಂಧಗಳ ಅಡಿಯಲ್ಲಿ, ಮೂಲದಲ್ಲಿ ತೆರಿಗೆಯನ್ನು ಮುರುಗಡೆ ಮಾಡುವುದು ಅಗತ್ಯವಿರುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಅಂಥ ಮುರುಗಡೆಗಳನ್ನು ಮಾಡಲಾಗಿರುವ ತಿಂಗಳಿಗೆ ಒಂದು ರಿಟರ್ನ್ ಅನ್ನು ವಿದ್ಯುನ್ಮಾನ ರೀತಿಯಲ್ಲಿ, ನಿಯಮಿಸಬಹುದಾದ ಅಂಥ ನಮೂನೆ ಮತ್ತು ವಿಧಾನದಲ್ಲಿ, ಅಂಥ ತಿಂಗಳು ಕೊನೆಗೊಂಡ ಹತ್ತು ದಿನಗಳ ಒಳಗಾಗಿ ಒದಗಿಸತಕ್ಕದ್ದು.

(4) ಹೂಡುವಳಿ ಸೇವೆ ಹಂಚಿಕೆದಾರನಾಗಿ ನೋಂದಾಯಿತನಾಗಿರುವ ಪ್ರತಿಯೊಬ್ಬ ವ್ಯಕ್ತಿಯು, ಪ್ರತಿಯೊಂದು ಕ್ಯಾಲೆಂಡರ್ ತಿಂಗಳು ಅಥವಾ ಅದರ ಭಾಗಕ್ಕೆ, ಒಂದು ರಿಟರ್ನ್ ಅನ್ನು ವಿದ್ಯುನ್ಮಾನ ರೀತಿಯಲ್ಲಿ, ನಿಯಮಿಸಬಹುದಾದ ಅಂಥ ನಮೂನೆ ಮತ್ತು ವಿಧಾನದಲ್ಲಿ, ಅಂಥ ತಿಂಗಳು ಕೊನೆಗೊಂಡ ಹದಿಮೂರು ದಿನಗಳ ಒಳಗಾಗಿ ಒದಗಿಸತಕ್ಕದ್ದು.

(5) ಪ್ರತಿಯೊಬ್ಬ ನೋಂದಾಯಿತ ಅನಿವಾಸಿ ತೆರಿಗೆದಾಯಕ ವ್ಯಕ್ತಿಯು, ಪ್ರತಿಯೊಂದು ಕ್ಯಾಲೆಂಡರ್ ತಿಂಗಳು ಅಥವಾ ಅದರ ಭಾಗಕ್ಕೆ, ನಿಯಮಿಸಬಹುದಾದ ಅಂಥ ನಮೂನೆ ಮತ್ತು ವಿಧಾನದಲ್ಲಿ, ಒಂದು ರಿಟರ್ನ್ ಅನ್ನು ವಿದ್ಯುನ್ಮಾನ ರೀತಿಯಲ್ಲಿ, ಒಂದು ಕ್ಯಾಲೆಂಡರ್ ತಿಂಗಳು ಕೊನೆಗೊಂಡ ತರುವಾಯದ ಇಪ್ಪತ್ತು ದಿನಗಳ ಒಳಗೆ ಅಥವಾ ಪ್ರಕರಣ 27ರ ಉಪ–ಪ್ರಕರಣ (1)ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ನೋಂದಣಿ ಅವಧಿಯ ಕೊನೆಯ ದಿನದ ತರುವಾಯದ ಏಳು ದಿನಗಳ ಒಳಗೆ, ಇವೆರಡರಲ್ಲಿ ಯಾವುದು ಮೊದಲೋ ಅದರ ಒಳಗಾಗಿ, ಒದಗಿಸತಕ್ಕದ್ದು.

(6) ಆಯುಕ್ತರು, ಲಿಖಿತವಾಗಿ ದಾಖಲಿಸಬೇಕಾದ ಕಾರಣಗಳಿಗಾಗಿ, ಅಧಿಸೂಚನೆಯ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ತೆರಿಗೆದಾಯಕ ವ್ಯಕ್ತಿಗಳ ವರ್ಗಕ್ಕೆ, ಈ ಪ್ರಕರಣದ ಅಡಿಯಲ್ಲಿ ರಿಟರ್ನ್‌ಗಳನ್ನು ಒದಗಿಸುವುದರ ಕಾಲಮಿತಿಯನ್ನು ವಿಸ್ತರಿಸಬಹುದು:

ಪರಂತು, ಕೇಂದ್ರ ತೆರಿಗೆ ಆಯುಕ್ತರಿಂದ ಅಧಿಸೂಚಿಸಿದ ಕಾಲಮಿತಿಯ ಯಾವುದೇ ವಿಸ್ತರಣೆಯು, ಆಯುಕ್ತರಿಂದ ಅಧಿಸೂಚಿತಗೊಂಡಿದೆ ಎಂದು ಪರಿಭಾವಿಸತಕ್ಕದ್ದು.

(7) ಉಪಪ್ರಕರಣ (1) ಅಥವಾ ಉಪಪ್ರಕರಣ (2) ಅಥವಾ ಉಪಪ್ರಕರಣ (3) ಅಥವಾ ಉಪಪ್ರಕರಣ (5)ರ ಅಡಿಯಲ್ಲಿ ರಿಟರ್ನ್ ಅನ್ನು ಸಲ್ಲಿಸುವುದು ಅಗತ್ಯವಿರುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಅವನು ಅಂತಹ ರಿಟರ್ನ್ ಅನ್ನು ಸಲ್ಲಿಸುವುದು

ಅಗತ್ಯವಿರುವ ಕೊನೆಯ ದಿನಾಂಕವನ್ನು ಮೀರದಂತೆ, ಅಂಥ ರಿಟರ್ನ್‌ನ ಪ್ರಕಾರ ಬಾಕಿಯಿರುವ ತೆರಿಗೆಯನ್ನು ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು.

(8) ಉಪಪ್ರಕರಣ (1) ಅಥವಾ ಉಪಪ್ರಕರಣ (2)ರ ಅಡಿಯಲ್ಲಿ ರಿಟರ್ನ್ ಅನ್ನು ಸಲ್ಲಿಸುವುದು ಅಗತ್ಯವಿರುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಅಂಥ ತೆರಿಗೆ ಅವಧಿಯಲ್ಲಿ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಯನ್ನು ಮಾಡಿರಲಿ ಅಥವಾ ಇಲ್ಲದಿರಲಿ, ಪ್ರತಿಯೊಂದು ತೆರಿಗೆ ಅವಧಿಗೆ ಒಂದು ರಿಟರ್ನ್ ಅನ್ನು ಸಲ್ಲಿಸತಕ್ಕದ್ದು.

(9) ಪ್ರಕರಣ 37 ಮತ್ತು 38ರ ಉಪಬಂಧಗಳಿಗೆ ಒಳಪಟ್ಟು, ಯಾವುದೇ ನೋಂದಾಯಿತ ವ್ಯಕ್ತಿಯು, ಉಪ–ಪ್ರಕರಣ (1) ಅಥವಾ ಉಪಪ್ರಕರಣ (2) ಅಥವಾ ಉಪಪ್ರಕರಣ (3) ಅಥವಾ ಉಪಪ್ರಕರಣ (4) ಅಥವಾ ಉಪಪ್ರಕರಣ (5)ರ ಅಡಿಯಲ್ಲಿ ರಿಟರ್ನ್ ಅನ್ನು ಒದಗಿಸಿದ ನಂತರ, ಅದರಲ್ಲಿ ತೆರಿಗೆ ಪ್ರಾಧಿಕಾರದಿಂದ ಸೂಕ್ಷ್ಮಪರಿಶೀಲನೆ (scrutiny), ಲೆಕ್ಕಪರಿಶೋಧನೆ, ತಪಾಸಣೆ ಅಥವಾ ಜಾರಿ ಚಟುವಟಿಕೆಗಳ ಪರಿಣಾಮದಿಂದಾದುವುಗಳನ್ನು ಹೊರತುಪಡಿಸಿದಂತೆ, ಯಾವುದೇ ಲೋಪ ಅಥವಾ ತಪ್ಪು ವಿವರಗಳು ಪತ್ತೆಯಾದಲ್ಲಿ, ಅವನು, ಅಂಥ ಲೋಪ ಅಥವಾ ತಪ್ಪು ವಿವರಗಳನ್ನು ಗಮನಿಸಿದ ಅವಧಿಯಲ್ಲಿನ ತಿಂಗಳಿಗೆ ಅಥವಾ ತ್ರೈಮಾಸಿಕಕ್ಕೆ ಒದಗಿಸಬೇಕಾಗಿರುವ ರಿಟರ್ನ್‌ನಲ್ಲಿ ಅಂಥ ಲೋಪ ಅಥವಾ ತಪ್ಪು ವಿವರಗಳನ್ನು, ಈ ಅಧಿನಿಯಮದ ಅಡಿಯಲ್ಲಿನ ಬಡ್ಡಿಯ ಸಂದಾಯದ ನಿಬಂಧನೆಗೆ ಒಳಪಟ್ಟು, ಸರಿಪಡಿಸತಕ್ಕದ್ದು:

ಪರಂತು, ಹಣಕಾಸು ವರ್ಷ ಕೊನೆಗೊಂಡ ತರುವಾಯದ ಸೆಪ್ಟಂಬರ್ ತಿಂಗಳು ಅಥವಾ ದ್ವಿತೀಯ ತ್ರೈಮಾಸಿಕಕ್ಕೆ ರಿಟರ್ನ್ ಅನ್ನು ಸಲ್ಲಿಸುವುದಕ್ಕಾಗಿ ಇರುವ ಗಡುವು ದಿನಾಂಕ ಅಥವಾ ಸಂಬಂಧಿಸಿದ ವಾರ್ಷಿಕ ರಿಟರ್ನ್ ಅನ್ನು ಸಲ್ಲಿಸಿದ ವಾಸ್ತವಿಕ ದಿನಾಂಕ, ಇವುಗಳಲ್ಲಿ ಯಾವುದು ಮೊದಲೋ ಅದರ ನಂತರ, ಯಾವುದೇ ಲೋಪ ಅಥವಾ ತಪ್ಪು ವಿವರಗಳ ಅಂಥ ಸರಿಪಡಿಸುವಿಕೆಗೆ ಅವಕಾಶವನ್ನು ನೀಡತಕ್ಕದ್ದಲ್ಲ.

(10) ಹಿಂದಿನ ತೆರಿಗೆ ಅವಧಿಗಳಲ್ಲಿನ ಯಾವುದಾದರೂ ಅವಧಿಗೆ ರಿಟರ್ನ್ ಅನ್ನು ಒದಗಿಸಿಲ್ಲದಿದ್ದರೆ, ಒಬ್ಬ ನೋಂದಾಯಿತ ವ್ಯಕ್ತಿಗೆ ಒಂದು ತೆರಿಗೆ ಅವಧಿಗೆ ರಿಟರ್ನ್ ಅನ್ನು ಒದಗಿಸಲು ಅವಕಾಶವನ್ನು ನೀಡತಕ್ಕದ್ದಲ್ಲ.

40. ಪ್ರಥಮ ರಿಟರ್ನ್.– ನೋಂದಣಿಗೆ ಬಾಧ್ಯನಾಗುವ ದಿನಾಂಕದಿಂದ ನೋಂದಣಿ ಮಂಜೂರಾದ ದಿನಾಂಕದವರೆಗಿನ ನಡುವಿನ ಅವಧಿಯಲ್ಲಿ ಹೊರಮುಖ ಪೂರೈಕೆಗಳನ್ನು ಮಾಡಿರುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ನೋಂದಣಿ ಮಂಜೂರಾತಿಯ ನಂತರ ಆತನು ಒದಗಿಸುವ ಪ್ರಥಮ ರಿಟರ್ನ್‌ನಲ್ಲಿ ಅವುಗಳನ್ನು ಘೋಷಿಸತಕ್ಕದ್ದು.

41. ಹೂಡುವಳಿ ತೆರಿಗೆ ಜಮೆಯ ಕ್ಲೇಮು ಮತ್ತು ಅದರ ತಾತ್ಕಾಲಿಕ ಅಂಗೀಕಾರ.– (1) ನಿಯಮಿಸಬಹುದಾದ ಅಂಥ ಷರತ್ತುಗಳು ಹಾಗೂ ನಿರ್ಬಂಧಗಳಿಗೆ ಒಳಪಟ್ಟು, ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಆತನ ರಿಟರ್ನ್‌ನಲ್ಲಿ ಸ್ವಯಂ–ನಿರ್ಧರಿಸಿದಂತೆ ಅರ್ಹ ಹೂಡುವಳಿ ತೆರಿಗೆಯ ಜಮೆಯನ್ನು ತೆಗೆದುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು ಮತ್ತು ಅಂಥ ಮೊತ್ತವು ಆತನ ವಿದ್ಯುನ್ಮಾನ ಜಮೆ ಖಾತೆಗೆ ತಾತ್ಕಾಲಿಕ ಆಧಾರದಲ್ಲಿ ಜಮೆಗೊಳ್ಳತಕ್ಕದ್ದು.

(2) ಉಪಪ್ರಕರಣ (1) ರಲ್ಲಿ ಉಲ್ಲೇಖಿಸಿದ ಜಮೆಯನ್ನು, ಸದರಿ ಉಪಪ್ರಕರಣದಲ್ಲಿ ಉಲ್ಲೇಖಿಸಿದ ರಿಟರ್ನ್‌ನ ಪ್ರಕಾರ ಸ್ವಯಂ–ನಿರ್ಧರಿಸಿದ ಹುಟ್ಟುವಳಿ ತೆರಿಗೆ ಸಂದಾಯಕ್ಕೆ ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದು.

42. ಹೂಡುವಳಿ ತೆರಿಗೆ ಜಮೆಯ ಹೊಂದಿಸುವಿಕೆ, ಹಿಂಪಡೆಯುವಿಕೆ ಹಾಗೂ ಪುನರ್– ಕ್ಲೇಮು– (1) ಒಬ್ಬ ನೋಂದಾಯಿತ ವ್ಯಕ್ತಿಯಿಂದ (ಈ ಪ್ರಕರಣದಲ್ಲಿ ಇನ್ನು ಮುಂದೆ "ಸ್ವೀಕರಿಸುವವನು" ಎಂದು ಉಲ್ಲೇಖಿಸಲಾಗಿದೆ) ಒಂದು ತೆರಿಗೆ ಅವಧಿಗಾಗಿ ಒದಗಿಸಿದ ಪ್ರತಿಯೊಂದು ಒಳಮುಖ ಪೂರೈಕೆಯ ವಿವರಗಳನ್ನು ನಿಯಮಿಸಲಾದ ಅಂಥ ವಿಧಾನದಲ್ಲಿ ಮತ್ತು ಅಂಥ ಸಮಯದೊಳಗೆ,–

(ಎ) ಸಂವಾದಿ ತೆರಿಗೆದಾಯಕ ವ್ಯಕ್ತಿಯು (ಈ ಪ್ರಕರಣದಲ್ಲಿ ಇನ್ನು ಮುಂದೆ 'ಪೂರೈಕೆದಾರ' ಎಂದು ಉಲ್ಲೇಖಿಸಲಾಗಿದೆ) ಅದೇ ತೆರಿಗೆ ಅವಧಿಗೆ ಅಥವಾ ಹಿಂದಿನ ಯಾವುದೇ ತೆರಿಗೆ ಅವಧಿಗೆ ತನ್ನ ಸಿಂಧುವಾದ ರಿಟರ್ನ್‌ನಲ್ಲಿ ಒದಗಿಸಿದ ಸಂವಾದಿ ಹೊರಮುಖ ಪೂರೈಕೆಯ ವಿವರಗಳೊಂದಿಗೆ;

(ಬಿ) ಆತನು ಆಮದು ಮಾಡಿದ ಸರಕುಗಳಿಗೆ ಸಂಬಂಧಿಸಿದಂತೆ ಸೀಮಾ ಸುಂಕ ಟ್ಯಾರಿಫ್ ಅಧಿನಿಯಮ, 1975ರ (1975ರ ಕೇಂದ್ರ ಅಧಿನಿಯಮ 51) ಪ್ರಕರಣ 3ರ ಅಡಿಯಲ್ಲಿ ಸಂದಾಯ ಮಾಡಲಾದ ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆಯೊಂದಿಗೆ; ಮತ್ತು

(ಸಿ) ಹೂಡುವಳಿ ತೆರಿಗೆ ಜಮೆಯ ಕ್ಲೇಮುಗಳ ದ್ವಿಗುಣೀಕರಣಗಳಿಗಾಗಿ,

– ಹೊಂದಾಣಿಕೆ ಮಾಡತಕ್ಕದ್ದು.

(2) ಸಂವಾದಿ ಹೊರಮುಖ ಪೂರೈಕೆ ವಿವರಗಳ ಅಥವಾ ಆಮದು ಮಾಡಿದ ಸರಕುಗಳಿಗೆ ಸಂಬಂಧಿಸಿದಂತೆ ಸೀಮಾಸುಂಕ ಟ್ಯಾರಿಫ್ ಅಧಿನಿಯಮ, 1975ರ (1975ರ ಕೇಂದ್ರ ಅಧಿನಿಯಮ 51) ಪ್ರಕರಣ 3ರ ಅಡಿಯಲ್ಲಿ ಸಂದಾಯ ಮಾಡಿದ ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆಯ ಜೊತೆಗೆ ಹೊಂದಾಣಿಕೆಯಾದ ಒಳಮುಖ ಪೂರೈಕೆಗೆ ಸಂಬಂಧಿಸಿದ ಬೆಲೆಪಟ್ಟಿ ಅಥವಾ ಖರ್ಚು ಚೀಟಿಗಳಿಗೆ ಸಂಬಂಧಿಸಿದಂತೆ ಹೂಡುವಳಿ ತೆರಿಗೆ ಜಮೆಯ ಕ್ಲೇಮನ್ನು ಅಂತಿಮವಾಗಿ ಒಪ್ಪಿಕೊಳ್ಳತಕ್ಕದ್ದು ಮತ್ತು ಅಂಥ ಒಪ್ಪಿಗೆಯನ್ನು, ನಿಯಮಿಸಬಹುದಾದ ಅಂಥ ವಿಧಾನದಲ್ಲಿ, ಸ್ವೀಕರಿಸುವವನಿಗೆ ತಿಳಿಸತಕ್ಕದ್ದು.

(3) ಒಂದು ಒಳಮುಖ ಪೂರೈಕೆಗೆ ಸಂಬಂಧಿಸಿದಂತೆ ಸ್ವೀಕರಿಸುವವನು ಕ್ಲೇಮು ಮಾಡಿದ ಹೂಡುವಳಿ ತೆರಿಗೆ ಜಮೆಯು, ಪೂರೈಕೆದಾರನಿಂದ ಅದೇ ಪೂರೈಕೆಗಾಗಿ ಘೋಷಿಸಿದ ತೆರಿಗೆಗಿಂತ ಅಧಿಕವಾಗಿದ್ದಲ್ಲಿ ಅಥವಾ ಪೂರೈಕೆದಾರ ತನ್ನ ಸಿಂಧುವಾದ ವಿವರಪಟ್ಟಿಯಲ್ಲಿ ಹೊರಮುಖ ಪೂರೈಕೆಯನ್ನು ಘೋಷಿಸಿರದಿದ್ದಲ್ಲಿ, ಆ ವ್ಯತ್ಯಾಸವನ್ನು ಅಂಥ ಇಬ್ಬರೂ ವ್ಯಕ್ತಿಗಳಿಗೆ, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ತಿಳಿಸತಕ್ಕದ್ದು.

(4) ಹೂಡುವಳಿ ತೆರಿಗೆ ಜಮೆಯ ಕ್ಲೇಮುಗಳ ದ್ವಿಗುಣೀಕರಣವನ್ನು, ನಿಯಮಿಸಬಹುದಾದ ಅಂಥ ವಿಧಾನದಲ್ಲಿ, ಸ್ವೀಕರಿಸುವವನಿಗೆ ತಿಳಿಸತಕ್ಕದ್ದು.

(5) ಉಪಪ್ರಕರಣ (3)ರ ಅಡಿಯಲ್ಲಿ ತಿಳಿಸಿದ ಯಾವುದೇ ವ್ಯತ್ಯಾಸಕ್ಕೆ ಸಂಬಂಧಿಸಿದಂತಹ ಮೊತ್ತ ಮತ್ತು ಹಾಗೆ ವ್ಯತ್ಯಾಸವನ್ನು ತಿಳಿಸಿದ ತಿಂಗಳಿನ ತನ್ನ ಸಿಂಧುವಾದ ರಿಟರ್ನ್‌ನಲ್ಲಿ ಪೂರೈಕೆದಾರನು ಅದನ್ನು ಸರಿಪಡಿಸದೇ ಇದ್ದಾಗ, ವ್ಯತ್ಯಾಸವನ್ನು ತಿಳಿಸಿದ ತಿಂಗಳಿನ ತದನಂತರದ ತಿಂಗಳಿನ ಸ್ವೀಕರಿಸುವವನ ರಿಟರ್ನ್‌ನಲ್ಲಿ, ನಿಯಮಿಸಲಾದ ಅಂಥ ವಿಧಾನದಲ್ಲಿ, ಆತನ ಹುಟ್ಟುವಳಿ ತೆರಿಗೆ ಬಾಧ್ಯತೆಗೆ ಸೇರಿಸತಕ್ಕದ್ದು.

(6) ಕ್ಲೇಮುಗಳ ದ್ವಿಗುಣೀಕರಣದ ಪ್ರಯುಕ್ತ ಅಧಿಕವಿರುವುದು ಕಂಡುಬಂದಂತಹ ಹೂಡುವಳಿ ತೆರಿಗೆ ಜಮೆಯಾಗಿ ಕ್ಲೇಮು ಮಾಡಿದ ಮೊತ್ತವನ್ನು, ದ್ವಿಗುಣೀಕರಣವನ್ನು ತಿಳಿಸಿದ ತಿಂಗಳಿನ ಸ್ವೀಕರಿಸುವವನ ರಿಟರ್ನ್‌ನಲ್ಲಿ ಆತನ ಹುಟ್ಟುವಳಿ ತೆರಿಗೆ ಬಾಧ್ಯತೆಗೆ ಸೇರಿಸತಕ್ಕದ್ದು.

(7) ಪೂರೈಕೆದಾರನು ತನ್ನ ಸಿಂಧುವಾದ ರಿಟರ್ನ್‌ನಲ್ಲಿ ಬೆಲೆಪಟ್ಟಿ ಅಥವಾ ಖರ್ಚು ಚೀಟಿಯ ವಿವರಗಳನ್ನು ಪ್ರಕರಣ 39ರ ಉಪಪ್ರಕರಣ (9) ರಲ್ಲಿ ನಿಗದಿಗೊಳಿಸಿದ ಸಮಯದೊಳಗೆ ಘೋಷಿಸಿದರೆ, ಸ್ವೀಕರಿಸುವವನು ಉಪಪ್ರಕರಣ (5)ರ ಅಡಿಯಲ್ಲಿ ಸೇರಿಸಿದ ಮೊತ್ತವನ್ನು ತನ್ನ ಹುಟ್ಟುವಳಿ ತೆರಿಗೆ ಬಾಧ್ಯತೆಯಿಂದ ಕಡಿಮೆ ಮಾಡಿಕೊಳ್ಳಲು ಅರ್ಹನಿರತಕ್ಕದ್ದು.

(8) ಉಪಪ್ರಕರಣ (5) ಅಥವಾ ಉಪಪ್ರಕರಣ (6)ರ ಅಡಿಯಲ್ಲಿ ಹುಟ್ಟುವಳಿ ತೆರಿಗೆ ಬಾಧ್ಯತೆಗೆ ಯಾವುದೇ ಮೊತ್ತವನ್ನು ಸೇರಿಸಲಾಗಿರುವ ಒಬ್ಬ ಸ್ವೀಕರಿಸುವವನು ಹಾಗೆ ಸೇರಿಸಿದ ಮೊತ್ತದ ಮೇಲೆ, ಜಮೆಯನ್ನು ಉಪಯೋಗಿಸಿದ ದಿನಾಂಕದಿಂದ ಸದರಿ ಉಪಪ್ರಕರಣಗಳ ಅಡಿಯಲ್ಲಿ ಮಾಡಿದ ಸಂವಾದಿ ಸೇರ್ಪಡೆಗಳವರಗೆ, ಪ್ರಕರಣ 50ರ ಉಪಪ್ರಕರಣ (1)ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ದರದಲ್ಲಿ ಬಡ್ಡಿಯನ್ನು ಸಂದಾಯ ಮಾಡಲು ಬಾಧ್ಯನಾಗಿರತಕ್ಕದ್ದು.

(9) ಉಪಪ್ರಕರಣ (7)ರ ಅಡಿಯಲ್ಲಿ ಹುಟ್ಟುವಳಿ ತೆರಿಗೆಯ ಯಾವುದೇ ಇಳಿಕೆಯನ್ನು ಅಂಗೀಕರಿಸಿದ್ದಲ್ಲಿ, ಉಪಪ್ರಕರಣ (8)ರ ಅಡಿಯಲ್ಲಿ ಸಂದಾಯ ಮಾಡಿದ ಬಡ್ಡಿಯ ಮೊತ್ತವನ್ನು, ನಿಯಮಿಸಬಹುದಾದ ಅಂಥ ವಿಧಾನದಲ್ಲಿ, ಆತನ ವಿದ್ಯುನ್ಮಾನ ನಗದು ಖಾತೆಯ ಸಂವಾದಿ ಶೀರ್ಷಿಕೆಗೆ ಜಮೆ ಮಾಡುವ ಮೂಲಕ ಸ್ವೀಕರಿಸುವವನಿಗೆ ಮರುಪಾವತಿ ಮಾಡತಕ್ಕದ್ದು:

ಪರಂತು, ಜಮೆಗೊಳ್ಳಬೇಕಾದ ಬಡ್ಡಿಯ ಮೊತ್ತವು ಪೂರೈಕೆದಾರನಿಂದ ಸಂದಾಯ ಮಾಡಿದ ಬಡ್ಡಿಯ ಮೊತ್ತವನ್ನು ಯಾವುದೇ ಸಂದರ್ಭದಲ್ಲಿಯೂ ಮೀರತಕ್ಕದ್ದಲ್ಲ.

(10) ಉಪಪ್ರಕರಣ (7)ರ ಉಪಬಂಧಗಳನ್ನು ಉಲ್ಲಂಘಿಸಿ ಹುಟ್ಟುವಳಿ ತೆರಿಗೆ ಬಾಧ್ಯತೆಯಿಂದ ಇಳಿಕೆ ಮಾಡಿದ ಮೊತ್ತವನ್ನು, ಅಂಥ ಉಲ್ಲಂಘನೆ ಸಂಭವಿಸಿದ ತಿಂಗಳಿನ ಸ್ವೀಕರಿಸುವವನ ರಿಟರ್ನ್‌ನಲ್ಲಿ ಆತನ ಹುಟ್ಟುವಳಿ ತೆರಿಗೆ ಬಾಧ್ಯತೆಗೆ ಸೇರಿಸತಕ್ಕದ್ದು ಮತ್ತು ಹಾಗೆ ಸೇರಿಸಿದ ಮೊತ್ತದ ಮೇಲೆ ಪ್ರಕರಣ 50ರ ಉಪಪ್ರಕರಣ (3)ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ದರದಲ್ಲಿ ಬಡ್ಡಿಯನ್ನು ಸಂದಾಯ ಮಾಡಲು ಅಂಥ ಸ್ವೀಕರಿಸುವವನು ಬಾಧ್ಯನಾಗಿರತಕ್ಕದ್ದು.

43. ಹುಟ್ಟುವಳಿ ತೆರಿಗೆ ಬಾಧ್ಯತೆಯಲ್ಲಿನ ಇಳಿಕೆಯ ಹೊಂದಿಸುವಿಕೆ, ಹಿಂಪಡೆಯುವಿಕೆ ಮತ್ತು ಪುನರ್–ಕ್ಲೇಮು.– (1) ಒಬ್ಬ ನೋಂದಾಯಿತ ವ್ಯಕ್ತಿಯಿಂದ (ಈ ಪ್ರಕರಣದಲ್ಲಿ ಇನ್ನು ಮುಂದೆ **'ಪೂರೈಕೆದಾರ'** ಎಂದು ಉಲ್ಲೇಖಿಸಲಾಗಿದೆ) ಒಂದು ತೆರಿಗೆ ಅವಧಿಗಾಗಿ ಒದಗಿಸಿದ ಹೊರಮುಖ ಪೂರೈಕೆಗೆ ಸಂಬಂದಿಸಿದ ಪ್ರತಿಯೊಂದು ಜಮೆ ಚೀಟಿಯ ವಿವರಗಳನ್ನು, ನಿಯಮಿಸಲಾದ ಅಂಥ ವಿಧಾನದಲ್ಲಿ ಮತ್ತು ಅಂಥ ಸಮಯದೊಳಗೆ,–

(ಎ) ಸಂವಾದಿ ತೆರಿಗೆದಾಯಕ ವ್ಯಕ್ತಿಯು (ಈ ಪ್ರಕರಣದಲ್ಲಿ ಇನ್ನು ಮುಂದೆ "ಸ್ವೀಕರಿಸುವವನು" ಎಂದು ಉಲ್ಲೇಖಿಸಲಾಗಿದೆ) ಅದೇ ತೆರಿಗೆ ಅವಧಿಗೆ ಅಥವಾ ತರುವಾಯದ ಯಾವುದೇ ತೆರಿಗೆ ಅವಧಿಗೆ ತನ್ನ ಸಿಂಧುವಾದ ರಿಟರ್ನ್‌ನಲ್ಲಿ ಕ್ಲೇಮು ಮಾಡಿದ ಹೂಡುವಳಿ ತೆರಿಗೆಯಲ್ಲಿನ ಸಂವಾದಿ ಇಳಿಕೆಯೊಂದಿಗೆ, ಮತ್ತು

(ಬಿ) ಹುಟ್ಟುವಳಿ ತೆರಿಗೆ ಬಾಧ್ಯತೆಯ ಇಳಿಕೆಯ ಕ್ಲೇಮುಗಳ ದ್ವಿಗುಣೀಕರಣಗಳಿಗಾಗಿ,

– ಹೊಂದಾಣಿಕೆ ಮಾಡತಕ್ಕದ್ದು.

(2) ಪೂರೈಕೆದಾರನಿಂದ ಹುಟ್ಟುವಳಿ ತೆರಿಗೆ ಬಾಧ್ಯತೆಯಲ್ಲಿನ ಇಳಿಕೆಗಾಗಿ ಮಾಡಿದ ಕ್ಲೇಮು, ಅದು ಸ್ವೀಕರಿಸುವವನಿಂದ ಹೂಡುವಳಿ ತೆರಿಗೆ ಜಮೆಗಾಗಿ ಮಾಡಿದ ಕ್ಲೇಮಿನಲ್ಲಾದ ಸಂವಾದಿ ಇಳಿಕೆಯ ಜೊತೆಗೆ ಹೊಂದಾಣಿಕೆಯಾದಾಗ, ಅಂತಿಮವಾಗಿ ಒಪ್ಪಿಕೊಳ್ಳತಕ್ಕದ್ದು ಮತ್ತು ಅದನ್ನು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಪೂರೈಕೆದಾರನಿಗೆ ತಿಳಿಸತಕ್ಕದ್ದು.

(3) ಹೊರಮುಖ ಪೂರೈಕೆಗಳಿಗೆ ಸಂಬಂಧಿಸಿದಂತೆ ಹುಟ್ಟುವಳಿ ತೆರಿಗೆ ಬಾಧ್ಯತೆಯಲ್ಲಿನ ಇಳಿಕೆಯು, ಹೂಡುವಳಿ ತೆರಿಗೆ ಜಮೆಗಾಗಿ ಮಾಡಿದ ಕ್ಲೇಮಿನಲ್ಲಾದ ಅದರ ಸಂವಾದಿ ಇಳಿಕೆಗಿಂತ ಅಧಿಕವಾಗಿದ್ದಲ್ಲಿ ಅಥವಾ ಸ್ವೀಕರಿಸುವವನು ತನ್ನ ಸಿಂಧುವಾದ

ರಿಟರ್ನ್‌ನಲ್ಲಿ ಅದರ ಸಂವಾದಿ ಜಮೆ ಚೀಟಿಯನ್ನು ಘೋಷಿಸಿರದಿದ್ದಲ್ಲಿ, ಆ ವ್ಯತ್ಯಾಸವನ್ನು ಅಂಥ ಇಬ್ಬರೂ ವ್ಯಕ್ತಿಗಳಿಗೆ, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ತಿಳಿಸತಕ್ಕದ್ದು.

(4) ಹುಟ್ಟುವಳಿ ತೆರಿಗೆ ಬಾಧ್ಯತೆಯಲ್ಲಿನ ಇಳಿಕೆಯ ಕ್ಲೇಮುಗಳ ದ್ವಿಗುಣೀಕರಣವನ್ನು, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಪೂರೈಕೆದಾರನಿಗೆ ತಿಳಿಸತಕ್ಕದ್ದು.

(5) ಉಪಪ್ರಕರಣ (3)ರ ಅಡಿಯಲ್ಲಿ ತಿಳಿಸಿದ ಯಾವುದೇ ವ್ಯತ್ಯಾಸಕ್ಕೆ ಸಂಬಂಧಿಸಿದಂತಹ ಮೊತ್ತ ಮತ್ತು ಹಾಗೆ ವ್ಯತ್ಯಾಸವನ್ನು ತಿಳಿಸಿದ ತಿಂಗಳಿನ ತನ್ನ ಸಿಂಧುವಾದ ರಿಟರ್ನ್‌ನಲ್ಲಿ ಸ್ವೀಕರಿಸುವವನು ಅದನ್ನು ಸರಿಪಡಿಸದೇ ಇದ್ದಾಗ, ವ್ಯತ್ಯಾಸವನ್ನು ತಿಳಿಸಿದ ತಿಂಗಳಿನ ತದನಂತರದ ತಿಂಗಳಿನ ಪೂರೈಕೆದಾರನ ರಿಟರ್ನ್‌ನಲ್ಲಿ, ನಿಯಮಿಸಲಾದ ಅಂಥ ವಿಧಾನದಲ್ಲಿ, ಆತನ ಹುಟ್ಟುವಳಿ ತೆರಿಗೆ ಬಾಧ್ಯತೆಗೆ ಸೇರಿಸತಕ್ಕದ್ದು.

(6) ಕ್ಲೇಮುಗಳ ದ್ವಿಗುಣೀಕರಣದ ಪ್ರಯುಕ್ತ, ಕಂಡುಬಂದಂತಹ ಹುಟ್ಟುವಳಿ ತೆರಿಗೆ ಬಾಧ್ಯತೆಯಲ್ಲಿನ ಯಾವುದೇ ಇಳಿಕೆಗೆ ಸಂಬಂಧಿಸಿದ ಮೊತ್ತವನ್ನು, ಅಂಥ ದ್ವಿಗುಣೀಕರಣವನ್ನು ತಿಳಿಸಿದ ತಿಂಗಳಿನ ಪೂರೈಕೆದಾರನ ರಿಟರ್ನ್‌ನಲ್ಲಿ ಆತನ ಹುಟ್ಟುವಳಿ ತೆರಿಗೆ ಬಾಧ್ಯತೆಗೆ ಸೇರಿಸತಕ್ಕದ್ದು.

(7) ಸ್ವೀಕರಿಸುವವನು ತನ್ನ ಸಿಂಧುವಾದ ರಿಟರ್ನ್‌ನಲ್ಲಿ ಜಮೆ ಚೀಟಿಯ ವಿವರಗಳನ್ನು ಪ್ರಕರಣ 39ರ ಉಪಪ್ರಕರಣ (9)ರಲ್ಲಿ ನಿರ್ದಿಷ್ಟಪಡಿಸಿದ ಸಮಯದೊಳಗೆ ಘೋಷಿಸಿದರೆ, ಪೂರೈಕೆದಾರನು ಉಪಪ್ರಕರಣ (5)ರ ಅಡಿಯಲ್ಲಿ ಸೇರಿಸಿದ ಮೊತ್ತವನ್ನು ತನ್ನ ಹುಟ್ಟುವಳಿ ತೆರಿಗೆ ಬಾದ್ಯತೆಯಿಂದ ಕಡಿಮೆ ಮಾಡಿಕೊಳ್ಳಲು ಅರ್ಹನಿರತಕ್ಕದ್ದು.

(8) ಉಪಪ್ರಕರಣ (5) ಅಥವಾ ಉಪಪ್ರಕರಣ (6)ರ ಅಡಿಯಲ್ಲಿ ಹುಟ್ಟುವಳಿ ತೆರಿಗೆ ಬಾಧ್ಯತೆಗೆ ಯಾವುದೇ ಮೊತ್ತವನ್ನು ಸೇರಿಸಲಾಗಿರುವ ಒಬ್ಬ ಪೂರೈಕೆದಾರನು, ಹಾಗೆ ಸೇರಿಸಿದ ಮೊತ್ತಕ್ಕೆ ಸಂಬಂಧಿಸಿದಂತೆ, ಹುಟ್ಟುವಳಿ ತೆರಿಗೆ ಬಾಧ್ಯತೆಯಲ್ಲಿನ ಇಳಿಕೆಗಾಗಿ ಮಾಡಿದ ಅಂಥ ಕ್ಲೇಮಿನ ದಿನಾಂಕದಿಂದ ಸದರಿ ಉಪ–ಪ್ರಕರಣಗಳ ಅಡಿಯಲ್ಲಿ ಅದರ ಸಂವಾದಿ ಸೇರ್ಪಡೆಗಳನ್ನು ಮಾಡುವವರಗೆ, ಪ್ರಕರಣ 50ರ ಉಪಪ್ರಕರಣ (1)ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ದರದಲ್ಲಿ ಬಡ್ಡಿಯನ್ನು ಸಂದಾಯ ಮಾಡಲು ಬಾಧ್ಯನಿರತಕ್ಕದ್ದು.

(9) ಉಪಪ್ರಕರಣ (7)ರ ಅಡಿಯಲ್ಲಿ ಹುಟ್ಟುವಳಿ ತೆರಿಗೆಯ ಯಾವುದೇ ಇಳಿಕೆಯನ್ನು ಅಂಗೀಕರಿಸಿದ್ದಲ್ಲಿ, ಉಪಪ್ರಕರಣ (8)ರ ಅಡಿಯಲ್ಲಿ ಸಂದಾಯ ಮಾಡಿದ ಬಡ್ಡಿಯ ಮೊತ್ತವನ್ನು, ನಿಯಮಿಸಬಹುದಾದ ಅಂಥ ವಿಧಾನದಲ್ಲಿ, ಆತನ ವಿದ್ಯುನ್ಮಾನ ನಗದು ಖಾತೆಯ ಸಂವಾದಿ ಶೀರ್ಷಿಕೆಗೆ ಜಮೆ ಮಾಡುವ ಮೂಲಕ ಪೂರೈಕೆದಾರನಿಗೆ ಮರುಪಾವತಿ ಮಾಡತಕ್ಕದ್ದು:

ಪರಂತು, ಜಮೆಗೊಳ್ಳಬೇಕಾದ ಬಡ್ಡಿಯ ಮೊತ್ತವು ಸ್ವೀಕರಿಸುವವನಿಂದ ಸಂದಾಯ ಮಾಡಿದ ಬಡ್ಡಿಯ ಮೊತ್ತವನ್ನು ಯಾವುದೇ ಸಂದರ್ಭದಲ್ಲಿಯೂ ಮೀರತಕ್ಕದ್ದಲ್ಲ.

(10) ಉಪಪ್ರಕರಣ (7)ರ ಉಪಬಂಧಗಳನ್ನು ಉಲ್ಲಂಘಿಸಿ ಹುಟ್ಟುವಳಿ ತೆರಿಗೆ ಬಾಧ್ಯತೆಯಿಂದ ಇಳಿಕೆ ಮಾಡಿದ ಮೊತ್ತವನ್ನು, ಅಂಥ ಉಲ್ಲಂಘನೆ ಸಂಭವಿಸಿದ ತಿಂಗಳಿನ ಪೂರೈಕೆದಾರನ ರಿಟರ್ನ್‌ನಲ್ಲಿ ಆತನ ಹುಟ್ಟುವಳಿ ತೆರಿಗೆ ಬಾಧ್ಯತೆಗೆ ಸೇರಿಸತಕ್ಕದ್ದು ಮತ್ತು ಹಾಗೆ ಸೇರಿಸಿದ ಮೊತ್ತದ ಮೇಲೆ ಪ್ರಕರಣ 50ರ ಉಪಪ್ರಕರಣ (3)ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ದರದಲ್ಲಿ ಬಡ್ಡಿಯನ್ನು ಸಂದಾಯ ಮಾಡಲು ಅಂಥ ಪೂರೈಕೆದಾರನು ಬಾಧ್ಯನಾಗಿರತಕ್ಕದ್ದು.

44. ವಾರ್ಷಿಕ ರಿಟರ್ನ್.– (1) ಒಬ್ಬ ಹೂಡುವಳಿ ಸೇವೆ ಹಂಚಿಕೆದಾರ, ಪ್ರಕರಣ 51 ಅಥವಾ ಪ್ರಕರಣ 52ರ ಅಡಿಯಲ್ಲಿ ತೆರಿಗೆ ಸಂದಾಯ ಮಾಡುವ ಒಬ್ಬ ವ್ಯಕ್ತಿ, ಒಬ್ಬ ಸಾಂದರ್ಭಿಕ ತೆರಿಗೆದಾಯಕ ವ್ಯಕ್ತಿ ಮತ್ತು ಒಬ್ಬ ಅನಿವಾಸಿ–ತೆರಿಗೆದಾಯಕ ವ್ಯಕ್ತಿಯನ್ನು ಹೊರತುಪಡಿಸಿದಂತೆ, ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಪ್ರತಿಯೊಂದು ಹಣಕಾಸು ವರ್ಷಕ್ಕೂ ಒಂದು ವಾರ್ಷಿಕ ರಿಟರ್ನ್‌ನನ್ನು ಅಂಥ ಹಣಕಾಸು ವರ್ಷ ಕೊನೆಗೊಂಡ ತರುವಾಯದ ಡಿಸೆಂಬರ್ ತಿಂಗಳಿನ ಮೂವತ್ತೊಂದನೇ ದಿನದಂದು ಅಥವಾ ಅದಕ್ಕಿಂತ ಮೊದಲು ನಿಯಮಿಸಬಹುದಾದ ಅಂಥ ನಮೂನೆ ಮತ್ತು ವಿಧಾನದಲ್ಲಿ ವಿದ್ಯುನ್ಮಾನ ರೀತಿಯಲ್ಲಿ ಒದಗಿಸತಕ್ಕದ್ದು.

(2) ಪ್ರಕರಣ 35ರ ಉಪಪ್ರಕರಣ (5)ರ ಉಪಬಂಧಗಳಿಗೆ ಅನುಸಾರವಾಗಿ ತನ್ನ ಲೆಕ್ಕಪತ್ರಗಳನ್ನು ಲೆಕ್ಕ ಪರಿಶೋಧಿಸಿಕೊಳ್ಳವುದು ಅಗತ್ಯವಿರುವಂತಹ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಲೆಕ್ಕ ಪರಿಶೋಧಿತ ವಾರ್ಷಿಕ ಲೆಕ್ಕಪತ್ರಗಳ ಒಂದು ಪ್ರತಿ ಮತ್ತು ಲೆಕ್ಕ ಪರಿಶೋಧಿತ ವಾರ್ಷಿಕ ಹಣಕಾಸು ವಿವರ ಪತ್ರದ ಜೊತೆಯಲ್ಲಿ ಆ ವರ್ಷಕ್ಕೆ ಒದಗಿಸಿದ ರಿಟರ್ನ್‌ನಲ್ಲಿ ಘೋಷಿಸಿದ ಪೂರೈಕೆಗಳ ಮೌಲ್ಯವನ್ನು ಸಮನ್ವಯೀಕರಿಸಿದ ಒಂದು ಸಮನ್ವಯ ವಿವರಪತ್ರ ಹಾಗೂ ನಿಯಮಿಸಬಹುದಾದ ಅಂಥ ಇತರ ವಿವರಗಳ ಜೊತೆಗೆ ಉಪಪ್ರಕರಣ (1)ರ ಅಡಿಯಲ್ಲಿ ವಾರ್ಷಿಕ ವಿವರಪಟ್ಟಿಯನ್ನು ವಿದ್ಯುನ್ಮಾನ ರೀತಿಯಲ್ಲಿ ಒದಗಿಸತಕ್ಕದ್ದು.

45. ಅಂತಿಮ ರಿಟರ್ನ್.– ಪ್ರಕರಣ 39ರ ಉಪಪ್ರಕರಣ (1)ರ ಅಡಿಯಲ್ಲಿ ರಿಟರ್ನ್‌ನನ್ನು ಒದಗಿಸುವುದು ಅಗತ್ಯವಿರುವ ಮತ್ತು ಆತನ ನೋಂದಣಿಯನ್ನು ರದ್ದುಗೊಳಿಸಲಾದ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ರದ್ದತಿಯ ದಿನಾಂಕ ಅಥವಾ ರದ್ದತಿ ಆದೇಶದ ದಿನಾಂಕ ಇವುಗಳಲ್ಲಿ ಯಾವುದು ತರುವಾಯವೋ ಅದರ ಮೂರು ತಿಂಗಳ ಒಳಗಾಗಿ, ನಿಯಮಿಸಬಹುದಾದ ಅಂಥ ನಮೂನೆ ಮತ್ತು ವಿಧಾನದಲ್ಲಿ ಒಂದು ಅಂತಿಮ ರಿಟರ್ನ್‌ನನ್ನು ಒದಗಿಸತಕ್ಕದ್ದು.

46. ರಿಟರ್ನ್ ಒದಗಿಸಲು ತಪ್ಪಿದವರಿಗೆ ಸೂಚನಾ ಪತ್ರ.– ಒಬ್ಬ ನೋಂದಾಯಿತ ವ್ಯಕ್ತಿಯು ಪ್ರಕರಣ 39 ಅಥವಾ ಪ್ರಕರಣ 44 ಅಥವಾ ಪ್ರಕರಣ 45ರ ಅಡಿಯಲ್ಲಿ ಒಂದು ರಿಟರ್ನ್‌ನನ್ನು ಒದಗಿಸಲು ವಿಫಲನಾದಲ್ಲಿ, ಅಂಥ ರಿಟರ್ನ್‌ನನ್ನು ಹದಿನೈದು ದಿನಗಳ ಒಳಗಾಗಿ ನಿಯಮಿಸಬಹುದಾದ ಅಂಥ ನಮೂನೆ ಮತ್ತು ವಿಧಾನದಲ್ಲಿ ಒದಗಿಸಲು ಆತನಿಗೆ ಅಗತ್ಯಪಡಿಸಿ ಒಂದು ಸೂಚನಾ ಪತ್ರವನ್ನು ನೀಡತಕ್ಕದ್ದು.

47. ವಿಳಂಬ ಶುಲ್ಕ ವಿಧಿಸುವಿಕೆ.– (1) ಪ್ರಕರಣ 37 ಅಥವಾ ಪ್ರಕರಣ 38ರ ಅಡಿಯಲ್ಲಿ ಅಗತ್ಯವಿರುವ ಹೊರಮುಖ ಅಥವಾ ಒಳಮುಖ ಪೂರೈಕೆಗಳ ವಿವರಗಳನ್ನು ಅಥವಾ ಪ್ರಕರಣ 39 ಅಥವಾ ಪ್ರಕರಣ 45ರ ಅಡಿಯಲ್ಲಿ ಅಗತ್ಯವಿರುವ ರಿಟರ್ನ್‌ನನ್ನು, ಗಡುವು ದಿನಾಂಕದೊಳಗೆ ಒದಗಿಸಲು ವಿಫಲನಾದ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಗರಿಷ್ಠ ಐದು ಸಾವಿರ ರೂಪಾಯಿಗೆ ಒಳಪಟ್ಟು ಅಂಥ ವಿಫಲತೆಯು ಮುಂದುವರೆಯುವ ಅವಧಿಯಲ್ಲಿನ ಪ್ರತಿಯೊಂದು ದಿನಕ್ಕೆ ನೂರು ರೂಪಾಯಿಯ ವಿಳಂಬ ಶುಲ್ಕವನ್ನು ಸಂದಾಯ ಮಾಡತಕ್ಕದ್ದು.

(2) ಪ್ರಕರಣ 44ರ ಅಡಿಯಲ್ಲಿ ಅಗತ್ಯವಿರುವ ರಿಟರ್ನ್‌ನನ್ನು ಗಡುವು ದಿನಾಂಕದೊಳಗೆ ಒದಗಿಸಲು ವಿಫಲನಾದ ಯಾವುದೇ ನೋಂದಾಯಿತ ವ್ಯಕ್ತಿಯು, ರಾಜ್ಯದಲ್ಲಿನ ಆತನ ವಹಿವಾಟಿನ ಶೇಕಡ ಕಾಲು ಭಾಗದಷ್ಟು ಲೆಕ್ಕ ಹಾಕಿದ ಒಂದು ಗರಿಷ್ಠ ಮೊತ್ತಕ್ಕೆ ಒಳಪಟ್ಟು ಅಂಥ ವಿಫಲತೆಯು ಮುಂದುವರೆಯುವ ಅವಧಿಯಲ್ಲಿನ ಪ್ರತಿಯೊಂದು ದಿನಕ್ಕೆ ನೂರು ರೂಪಾಯಿಯ ವಿಳಂಬ ಶುಲ್ಕವನ್ನು ಸಂದಾಯ ಮಾಡಲು ಬಾಧ್ಯನಾಗಿರತಕ್ಕದ್ದು.

48. ಸರಕು ಮತ್ತು ಸೇವೆಗಳ ತೆರಿಗೆ ವೃತ್ತಿದಾರರು.– (1) ಸರಕು ಮತ್ತು ಸೇವೆಗಳ ತೆರಿಗೆ ವೃತ್ತಿದಾರರನ್ನು ಅನುಮೋದಿಸುವ ವಿಧಾನ, ಅವರ ಅರ್ಹತೆಯ ಷರತ್ತುಗಳು, ಕರ್ತವ್ಯಗಳು ಮತ್ತು ಬಾಧ್ಯತೆಗಳು, ತೆಗೆದುಹಾಕುವ ವಿಧಾನ ಮತ್ತು ಅವರ ಕಾರ್ಯನಿರ್ವಹಣೆಗೆ ಸಂಬಂಧಿತ ಇತರ ಷರತ್ತುಗಳು, ನಿಯಮಿಸಬಹುದಾದ ಅಂಥದ್ದಾಗಿರತಕ್ಕದ್ದು.

(2) ಒಬ್ಬ ನೋಂದಾಯಿತ ವ್ಯಕ್ತಿಯು, ಪ್ರಕರಣ 37ರ ಅಡಿಯಲ್ಲಿ ಹೊರಮುಖ ಪೂರೈಕೆಗಳ ವಿವರಗಳನ್ನು, ಪ್ರಕರಣ 38ರ ಅಡಿಯಲ್ಲಿ ಒಳಮುಖ ಪೂರೈಕೆಗಳ ವಿವರಗಳನ್ನು ಮತ್ತು ಪ್ರಕರಣ 39 ಅಥವಾ ಪ್ರಕರಣ 44 ಅಥವಾ ಪ್ರಕರಣ 45ರ ಅಡಿಯಲ್ಲಿ ರಿಟರ್ನ್‌ನನ್ನು ಒದಗಿಸುವುದಕ್ಕಾಗಿ ಅನುಮೋದಿತ ಸರಕು ಮತ್ತು ಸೇವೆಗಳ ತೆರಿಗೆ ವೃತ್ತಿದಾರರನ್ನು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಪ್ರಾಧಿಕೃತಗೊಳಿಸಬಹುದು.

(3) ಉಪಪ್ರಕರಣ (2)ರಲ್ಲಿ ಏನೇ ಒಳಗೊಂಡಿದ್ದರೂ, ಸರಕು ಮತ್ತು ಸೇವೆಗಳ ತೆರಿಗೆ ವೃತ್ತಿದಾರರಿಂದ ರಿಟರ್ನ್‌ನಲ್ಲಿ ಒದಗಿಸಿದ ಯಾವುದೇ ತಪಶೀಲುಗಳ ಅಥವಾ ಸಲ್ಲಿಸಿದ ಇತರ ವಿವರಗಳ ಸರಿತನದ ಜವಾಬ್ದಾರಿಯು, ಯಾರ ಪರವಾಗಿ ಅಂಥ ರಿಟರ್ನ್ ಮತ್ತು ವಿವರಗಳನ್ನು ಸಲ್ಲಿಸಲಾಗಿದೆಯೋ ಆ ನೋಂದಾಯಿತ ವ್ಯಕ್ತಿಗೆ ಸೇರಿರುವುದು ಮುಂದುವರೆಯತಕ್ಕದ್ದು.

ಅಧ್ಯಾಯ –X
ತೆರಿಗೆಯ ಸಂದಾಯ

49. ತೆರಿಗೆ, ಬಡ್ಡಿ, ದಂಡ ಮತ್ತು ಇತರ ಮೊತ್ತಗಳ ಸಂದಾಯ.– (1) ಒಬ್ಬ ವ್ಯಕ್ತಿಯಿಂದ, ಅಂತರ್ಜಾಲ ಬ್ಯಾಂಕಿಂಗ್ ಅಥವಾ ಕ್ರೆಡಿಟ್ ಅಥವಾ ಡೆಬಿಟ್ ಕಾರ್ಡುಗಳ ಉಪಯೋಗಿಸುವಿಕೆಯ ಮೂಲಕ ಅಥವಾ ರಾಷ್ಟ್ರೀಯ ವಿದ್ಯುನ್ಮಾನ ನಿಧಿ ವರ್ಗಾವಣೆ (ನ್ಯಾಷನಲ್ ಎಲೆಕ್ಟ್ರಾನಿಕ್ ಫಂಡ್ ಟ್ರಾನ್ಸ್‌ಫರ್) ಅಥವಾ ನೈಜ ಸಮಯದಲ್ಲಿ ಒಟ್ಟು ಇತ್ಯರ್ಥ (ರಿಯಲ್ ಟೈಮ್ ಗ್ರಾಸ್ ಸೆಟ್ಲ್‌ಮೆಂಟ್) ಅಥವಾ ಅಂಥ ಇತರ ವಿಧಾನಗಳ ಮೂಲಕ ಮತ್ತು ನಿಯಮಿಸಬಹುದಾದ ಅಂಥ ಷರತ್ತುಗಳು ಮತ್ತು ನಿರ್ಬಂಧಗಳಿಗೆ ಒಳಪಟ್ಟು, ತೆರಿಗೆ, ಬಡ್ಡಿ, ದಂಡ, ಶುಲ್ಕ ಅಥವಾ ಯಾವುದೇ ಇತರ ಮೊತ್ತಕ್ಕಾಗಿ ಮಾಡಿದ ಪ್ರತಿಯೊಂದು ಠೇವಣಿಯನ್ನು, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ನಿರ್ವಹಿಸಬೇಕಾದ ಅಂಥ ವ್ಯಕ್ತಿಯ ವಿದ್ಯುನ್ಮಾನ ನಗದು ಖಾತೆಗೆ ಜಮೆಗೊಳಿಸತಕ್ಕದ್ದು.

(2) ನೋಂದಾಯಿತ ವ್ಯಕ್ತಿಯ ರಿಟರ್ನ್‌ನಲ್ಲಿ ಸ್ವಯಂ–ನಿರ್ಧರಿಸಿದಂತಹ ಹೂಡುವಳಿ ತೆರಿಗೆ ಜಮೆಯನ್ನು, ನಿಯಮಿಸಬಹುದಾದ ವಿಧಾನದಲ್ಲಿ ನಿರ್ವಹಿಸಬೇಕಾದ ಆತನ ವಿದ್ಯುನ್ಮಾನ ಜಮಾ ಖಾತೆಗೆ, ಪ್ರಕರಣ 41ರ ಅನುಸಾರವಾಗಿ, ಜಮೆಗೊಳಿಸತಕ್ಕದ್ದು.

(3) ವಿದ್ಯುನ್ಮಾನ ನಗದು ಖಾತೆಯಲ್ಲಿ ಲಭ್ಯವಿರುವ ಮೊತ್ತವನ್ನು, ಈ ಅಧಿನಿಯಮದ ಉಪಬಂಧಗಳ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆ, ಬಡ್ಡಿ, ದಂಡ, ಶುಲ್ಕ ಅಥವಾ ಯಾವುದೇ ಇತರ ಮೊತ್ತಗಳ ಸಂದಾಯಕ್ಕಾಗಿ, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ಹಾಗೂ ಅಂಥ ಸಮಯದೊಳಗಾಗಿ ಉಪಯೋಗಿಸಿಕೊಳ್ಳಬಹುದು.

(4) ವಿದ್ಯುನ್ಮಾನ ಜಮಾ ಖಾತೆಯಲ್ಲಿ ಲಭ್ಯವಿರುವ ಮೊತ್ತವನ್ನು, ಈ ಅಧಿನಿಯಮ ಅಥವಾ ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾದ ಹುಟ್ಟುವಳಿ ತೆರಿಗೆಯ ಸಂದಾಯಕ್ಕಾಗಿ, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ಹಾಗೂ ಅಂಥ ಸಮಯದೊಳಗಾಗಿ ಉಪಯೋಗಿಸಿಕೊಳ್ಳಬಹುದು.

(5) ಒಬ್ಬ ನೋಂದಾಯಿತ ವ್ಯಕ್ತಿಯ ವಿದ್ಯುನ್ಮಾನ ಜಮಾ ಖಾತೆಯಲ್ಲಿ ಲಭ್ಯವಿರುವ–

(ಎ) ಏಕೀಕೃತ ತೆರಿಗೆಗೆ ಸಂಬಂಧಿಸಿದ ಹೂಡುವಳಿ ತೆರಿಗೆ ಜಮೆಯ ಮೊತ್ತವನ್ನು ಮೊದಲು ಏಕೀಕೃತ ತೆರಿಗೆಯ ಸಂದಾಯಕ್ಕಾಗಿ ಬಳಸತಕ್ಕದ್ದು ಮತ್ತು ಬಾಕಿ ಉಳಿದಂತಹ ಮೊತ್ತ ಏನಾದರು ಇದ್ದರೆ, ಅದನ್ನು ಸಂದರ್ಭಾನುಸಾರವಾಗಿ, ಕೇಂದ್ರ ತೆರಿಗೆ ಮತ್ತು ರಾಜ್ಯ ತೆರಿಗೆ ಅಥವಾ ಕೇಂದ್ರಾಡಳಿತ ಪ್ರದೇಶ ತೆರಿಗೆಯ ಸಂದಾಯಕ್ಕಾಗಿ ಅದೇ ಕ್ರಮದಲ್ಲಿ ಬಳಸಿಕೊಳ್ಳಬಹುದು;

(ಬಿ) ಕೇಂದ್ರ ತೆರಿಗೆಗೆ ಸಂಬಂಧಿಸಿದ ಹೂಡುವಳಿ ತೆರಿಗೆ ಜಮೆಯ ಮೊತ್ತವನ್ನು ಮೊದಲು ಕೇಂದ್ರ ತೆರಿಗೆಯ ಸಂದಾಯಕ್ಕಾಗಿ ಬಳಸತಕ್ಕದ್ದು ಮತ್ತು ಬಾಕಿ ಉಳಿದಂತಹ ಮೊತ್ತ ಏನಾದರು ಇದ್ದರೆ, ಅದನ್ನು ಏಕೀಕೃತ ತೆರಿಗೆಯ ಸಂದಾಯಕ್ಕಾಗಿ ಬಳಸಿಕೊಳ್ಳಬಹುದು;

(ಸಿ) ರಾಜ್ಯ ತೆರಿಗೆಗೆ ಸಂಬಂಧಿಸಿದ ಹೂಡುವಳಿ ತೆರಿಗೆ ಜಮೆಯ ಮೊತ್ತವನ್ನು ಮೊದಲು ರಾಜ್ಯ ತೆರಿಗೆಯ ಸಂದಾಯಕ್ಕಾಗಿ ಬಳಸತಕ್ಕದ್ದು ಮತ್ತು ಬಾಕಿ ಉಳಿದಂತಹ ಮೊತ್ತ ಏನಾದರು ಇದ್ದರೆ, ಅದನ್ನು ಏಕೀಕೃತ ತೆರಿಗೆಯ ಸಂದಾಯಕ್ಕಾಗಿ ಬಳಸಿಕೊಳ್ಳಬಹುದು;

(ಡಿ) ಕೇಂದ್ರಾಡಳಿತ ಪ್ರದೇಶದ ತೆರಿಗೆಗೆ ಸಂಬಂಧಿಸಿದ ಹೂಡುವಳಿ ತೆರಿಗೆ ಜಮೆಯ ಮೊತ್ತವನ್ನು ಮೊದಲು ಕೇಂದ್ರಾಡಳಿತ ಪ್ರದೇಶ ತೆರಿಗೆಯ ಸಂದಾಯಕ್ಕಾಗಿ ಬಳಸತಕ್ಕದ್ದು ಮತ್ತು ಬಾಕಿ ಉಳಿದಂತಹ ಮೊತ್ತ ಏನಾದರು ಇದ್ದರೆ, ಅದನ್ನು ಏಕೀಕೃತ ತೆರಿಗೆಯ ಸಂದಾಯಕ್ಕಾಗಿ ಬಳಸಿಕೊಳ್ಳಬಹುದು;

(ಇ) ಕೇಂದ್ರ ತೆರಿಗೆಗೆ ಸಂಬಂಧಿಸಿದ ಹೂಡುವಳಿ ತೆರಿಗೆ ಜಮೆಯನ್ನು ರಾಜ್ಯ ತೆರಿಗೆ ಅಥವಾ ಕೇಂದ್ರಾಡಳಿತ ಪ್ರದೇಶದ ತೆರಿಗೆಯ ಸಂದಾಯಕ್ಕಾಗಿ ಉಪಯೋಗಿಸಿಕೊಳ್ಳತಕ್ಕದ್ದಲ್ಲ; ಮತ್ತು

(ಎಫ್) ರಾಜ್ಯ ತೆರಿಗೆ ಅಥವಾ ಕೇಂದ್ರಾಡಳಿತ ಪ್ರದೇಶದ ತೆರಿಗೆಗೆ ಸಂಬಂಧಿಸಿದ ಹೂಡುವಳಿ ತೆರಿಗೆ ಜಮೆಯನ್ನು ಕೇಂದ್ರ ತೆರಿಗೆಯ ಸಂದಾಯಕ್ಕಾಗಿ ಉಪಯೋಗಿಸಿಕೊಳ್ಳತಕ್ಕದ್ದಲ್ಲ.

(6) ಈ ಅಧಿನಿಯಮದ ಉಪಬಂಧಗಳ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆ, ಬಡ್ಡಿ, ದಂಡ, ಶುಲ್ಕ ಅಥವಾ ಯಾವುದೇ ಇತರ ಮೊತ್ತಗಳನ್ನು ಸಂದಾಯ ಮಾಡಿದ ನಂತರ, ವಿದ್ಯುನ್ಮಾನ ನಗದು ಖಾತೆ ಅಥವಾ ವಿದ್ಯುನ್ಮಾನ ಜಮಾ ಖಾತೆಯಲ್ಲಿನ ಉಳಿಕೆಯನ್ನು, ಪ್ರಕರಣ 54ರ ಉಪಬಂಧಗಳಿಗೆ ಅನುಸಾರವಾಗಿ ಮರುಪಾವತಿ ಮಾಡಬಹುದು.

(7) ಈ ಅಧಿನಿಯಮದ ಅಡಿಯಲ್ಲಿ ತೆರಿಗೆದಾಯಕ ವ್ಯಕ್ತಿಯ ಎಲ್ಲಾ ಬಾಧ್ಯತೆಗಳನ್ನು ನಿಯಮಿಸಬಹುದಾದ ಅಂಥ ವಿಧಾನದಲ್ಲಿ, ಒಂದು ವಿದ್ಯುನ್ಮಾನ ಬಾಧ್ಯತಾ ರಿಜಿಸ್ಟ್ರರ್‌ನಲ್ಲಿ ದಾಖಲಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(8) ಪ್ರತಿಯೊಬ್ಬ ತೆರಿಗೆದಾಯಕ ವ್ಯಕ್ತಿಯು, ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿ ಆತನ ತೆರಿಗೆ ಮತ್ತು ಇತರ ಬಾಕಿಗಳನ್ನು ಕೆಳಕಂಡ ಕ್ರಮದಲ್ಲಿ ತೀರಿಸತಕ್ಕದ್ದು, ಎಂದರೆ:–

(ಎ) ಹಿಂದಿನ ತೆರಿಗೆ ಅವಧಿಗಳಿಗೆ ಸಂಬಂಧಿಸಿದ ಸ್ವಯಂ–ನಿರ್ಧರಿತ ತೆರಿಗೆ ಮತ್ತು ಇತರ ಬಾಕಿಗಳು;

(ಬಿ) ಪ್ರಚಲಿತ ತೆರಿಗೆ ಅವಧಿಗಳಿಗೆ ಸಂಬಂಧಿಸಿದ ಸ್ವಯಂ–ನಿರ್ಧರಿತ ತೆರಿಗೆ ಮತ್ತು ಇತರ ಬಾಕಿಗಳು;

(ಸಿ) ಪ್ರಕರಣ 73 ಅಥವಾ ಪ್ರಕರಣ 74ರ ಅಡಿಯಲ್ಲಿ ನಿರ್ಧರಿಸಿದ ತಗಾದೆಯನ್ನು ಒಳಗೊಂಡಂತೆ ಈ ಅಧಿನಿಯಮದ ಉಪಬಂಧಗಳ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿ, ಸಂದಾಯ ಮಾಡಬೇಕಾದ ಯಾವುದೇ ಇತರ ಮೊತ್ತ.

(9) ಈ ಅಧಿನಿಯಮದ ಅಡಿಯಲ್ಲಿ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಮೇಲೆ ತೆರಿಗೆಯನ್ನು ಸಂದಾಯ ಮಾಡಿರುವ ಪ್ರತಿಯೊಬ್ಬ ತೆರಿಗೆದಾಯಕ ವ್ಯಕ್ತಿಯು, ವಿರುದ್ಧವಾಗಿರುವುದನ್ನು ಆತನು ರುಜುವಾತುಪಡಿಸಿದ ಹೊರತು, ಅಂಥ ತೆರಿಗೆಯ ಪೂರ್ಣ ಹೊರೆಯನ್ನು ಅಂಥ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಸ್ವೀಕರಿಸುವವನಿಗೆ ವರ್ಗಾಯಿಸಿದ್ದಾನೆ ಎಂದು ಪರಿಭಾವಿಸತಕ್ಕದ್ದು.

ವಿವರಣೆ:– ಈ ಪ್ರಕರಣದ ಉದ್ದೇಶಗಳಿಗಾಗಿ,

(ಎ) ಪ್ರಾಧಿಕೃತ ಬ್ಯಾಂಕಿನಲ್ಲಿನ ಸರ್ಕಾರದ ಖಾತೆಗೆ ಜಮೆಯಾಗುವ ದಿನಾಂಕವನ್ನು, ವಿದ್ಯುನ್ಮಾನ ನಗದು ಖಾತೆಯಲ್ಲಿನ ಠೇವಣಿ ದಿನಾಂಕ ಎಂದು ಪರಿಭಾವಿಸತಕ್ಕದ್ದು.

(ಬಿ) ಪದಾವಳಿಯಾದ,–

(i) **"ತೆರಿಗೆ ಬಾಕಿಗಳು"** ಎಂದರೆ, ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆಯಾಗಿರುತ್ತದೆ ಮತ್ತು ಇದು ಬಡ್ಡಿ, ಶುಲ್ಕ ಅಥವಾ ದಂಡವನ್ನು ಒಳಗೊಳ್ಳುವುದಿಲ್ಲ; ಮತ್ತು

(ii) **"ಇತರ ಬಾಕಿಗಳು"** ಎಂದರೆ, ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿ ಸಂದಾಯ ಮಾಡಬೇಕಾದ ಬಡ್ಡಿ, ದಂಡ, ಶುಲ್ಕ ಅಥವಾ ಯಾವುದೇ ಇತರ ಮೊತ್ತವಾಗಿರುತ್ತದೆ.

50. ತೆರಿಗೆಯ ವಿಳಂಬ ಸಂದಾಯದ ಮೇಲೆ ಬಡ್ಡಿ.– (1) ಈ ಅಧಿನಿಯಮದ ಉಪಬಂಧಗಳಿಗೆ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳಿಗೆ ಅನುಸಾರವಾಗಿ ತೆರಿಗೆಯನ್ನು ಸಂದಾಯ ಮಾಡಲು ಬಾಧ್ಯನಾಗಿರುವ ಆದರೆ ತೆರಿಗೆಯನ್ನು ಅಥವಾ ಅದರ ಯಾವುದೇ ಭಾಗವನ್ನು ನಿಯಮಿಸಲಾದ ಅವಧಿಯೊಳಗೆ ಸರ್ಕಾರಕ್ಕೆ ಸಂದಾಯ ಮಾಡಲು ವಿಫಲನಾದ ಪ್ರತಿಯೊಬ್ಬ ವ್ಯಕ್ತಿಯು, ತೆರಿಗೆ ಅಥವಾ ಅದರ ಯಾವುದೇ ಭಾಗವು ಸಂದಾಯವಾಗದೆ ಉಳಿದ ಅವಧಿಗೆ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ

ಸರ್ಕಾರದಿಂದ ಅಧಿಸೂಚಿಸಬಹುದಾದ, ಶೇಕಡಾ ಹದಿನೆಂಟರಷ್ಟನ್ನು ಮೀರದ, ಅಂಥ ದರದಲ್ಲಿ ಬಡ್ಡಿಯನ್ನು, ತಾನಾಗಿಯೇ, ಸಂದಾಯ ಮಾಡತಕ್ಕದ್ದು.

(2) ಉಪಪ್ರಕರಣ (1)ರ ಅಡಿಯಲ್ಲಿ ಬಡ್ಡಿಯನ್ನು, ಅಂಥ ತೆರಿಗೆಯು ಸಂದಾಯಕ್ಕೆ ಬಾಕಿಯಾಗುವ ದಿನದ ತದನಂತರ ಬರುವ ದಿನದಿಂದ, ನಿಯಮಿಸಬಹುದಾದ ಅಂಥ ವಿಧಾನದಲ್ಲಿ, ಲೆಕ್ಕ ಹಾಕತಕ್ಕದ್ದು.

(3) ಪ್ರಕರಣ 42ರ ಉಪಪ್ರಕರಣ (10)ರ ಅಡಿಯಲ್ಲಿ ಹೂಡುವಳಿ ತೆರಿಗೆ ಜಮೆಯನ್ನು ಅನುಚಿತವಾಗಿ ಅಥವಾ ಅಧಿಕವಾಗಿ ಕ್ಲೇಮು ಮಾಡಿರುವ ಅಥವಾ ಪ್ರಕರಣ 43ರ ಉಪಪ್ರಕರಣ (10)ರ ಅಡಿಯಲ್ಲಿ ಹುಟ್ಟುವಳಿ ತೆರಿಗೆ ಬಾಧ್ಯತೆಯಲ್ಲಿನ ಇಳಿಕೆಯನ್ನು ಅನುಚಿತವಾಗಿ ಅಥವಾ ಅಧಿಕವಾಗಿ ಮಾಡಿರುವ ಒಬ್ಬ ತೆರಿಗೆದಾಯಕ ವ್ಯಕ್ತಿಯು, ಅಂಥ ಅನುಚಿತವಾದ ಅಥವಾ ಅಧಿಕವಾದ ಕ್ಲೇಮಿನ, ಅಥವಾ ಅಂಥ ಅನುಚಿತವಾದ ಅಥವಾ ಸಂದರ್ಭಾನುಸಾರವಾಗಿ ಅಧಿಕವಾದ ಇಳಿಕೆಯ ಮೇಲೆ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಸರ್ಕಾರದಿಂದ ಅಧಿಸೂಚಿಸಬಹುದಾದ, ಶೇಕಡಾ ಇಪ್ಪತ್ತನಾಲ್ಕರಷ್ಟನ್ನು ಮೀರದ, ಅಂಥ ದರದಲ್ಲಿ ಬಡ್ಡಿಯನ್ನು, ತಾನಾಗಿಯೇ, ಸಂದಾಯ ಮಾಡತಕ್ಕದ್ದು.

51. ಮೂಲದಲ್ಲಿ ತೆರಿಗೆ ಮುರುಗಡೆ.– (1) ಈ ಅಧಿನಿಯಮದಲ್ಲಿ ಇದಕ್ಕೆ ವಿರುದ್ಧವಾಗಿ ಏನೇ ಒಳಗೊಂಡಿದ್ದರೂ ಸಹ, ಸರ್ಕಾರವು,–

(ಎ) ಕೇಂದ್ರ ಅಥವಾ ರಾಜ್ಯ ಸರ್ಕಾರದ ಒಂದು ಇಲಾಖೆ ಅಥವಾ ಕಾರ್ಯಸಂಸ್ಥೆ; ಅಥವಾ

(ಬಿ) ಸ್ಥಳೀಯ ಪ್ರಾಧಿಕಾರ; ಅಥವಾ

(ಸಿ) ಸರ್ಕಾರಿ ಏಜೆನ್ಸಿಗಳು; ಅಥವಾ

(ಡಿ) ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಸರ್ಕಾರವು ಅಧಿಸೂಚಿಸಬಹುದಾದ ಅಂಥ ವ್ಯಕ್ತಿಗಳು ಅಥವಾ ಅಂಥ ವ್ಯಕ್ತಿಗಳ ವರ್ಗವನ್ನು,

–(ಈ ಪ್ರಕರಣದಲ್ಲಿ ಇನ್ನು ಮುಂದೆ **"ಮುರುಗಡೆದಾರ"** ಎಂದು ಉಲ್ಲೇಖಿಸಲಾಗಿದೆ) ಒಂದು ಕರಾರಿನ ಅಡಿಯಲ್ಲಿನ ಅಂಥ ಪೂರೈಕೆಯ ಮೌಲ್ಯ ಎರಡು ಲಕ್ಷದ ಐವತ್ತು ಸಾವಿರ ರೂಪಾಯಿಗಳನ್ನು ಮೀರಿದ್ದಲ್ಲಿ, ತೆರಿಗೆದಾಯಕ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆದಾರನಿಗೆ, (ಈ ಪ್ರಕರಣದಲ್ಲಿ ಇನ್ನು ಮುಂದೆ **"ಮುರುಗಡೆಗೊಳಗಾದವನು"**ಎಂದು ಉಲ್ಲೇಖಿಸಲಾಗಿದೆ) ಮಾಡಿದ ಅಥವಾ ಜಮೆಗೊಳಿಸಿದ ಸಂದಾಯದಿಂದ ಶೇಕಡ ಒಂದರ ದರದಲ್ಲಿ ತೆರಿಗೆಯನ್ನು ಮುರುಗಡೆ ಮಾಡಲು ಆಜ್ಞಾಪಿಸಬಹುದು.

ಪರಂತು, ಪೂರೈಕೆದಾರನ ಸ್ಥಾನ ಮತ್ತು ಪೂರೈಕೆಯ ಸ್ಥಳವು, ಒಂದು ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿದ್ದು, ಅದು ಸ್ವೀಕರಿಸುವವನ ನೋಂದಣಿಯ ರಾಜ್ಯ ಅಥವಾ ಸಂದರ್ಭಾನುಸಾರವಾಗಿ ಕೇಂದ್ರಾಡಳಿತ ಪ್ರದೇಶದಿಂದ ಭಿನ್ನವಾಗಿದ್ದರೆ, ಮುರುಗಡೆಯನ್ನು ಮಾಡತಕ್ಕದ್ದಲ್ಲ.

ವಿವರಣೆ:– ಮೇಲೆ ನಿರ್ದಿಷ್ಟಪಡಿಸಿದ ತೆರಿಗೆ ಮುರುಗಡೆಯ ಉದ್ದೇಶಕ್ಕಾಗಿ, ಬೆಲೆಪಟ್ಟಿಯಲ್ಲಿ ಸೂಚಿಸಿದ ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಏಕೀಕೃತ ತೆರಿಗೆ, ಮತ್ತು ಉಪಕರವನ್ನು ಹೊರತುಪಡಿಸಿದ ಮೊತ್ತವನ್ನು ಪೂರೈಕೆಯ ಮೌಲ್ಯ, ಎಂಬುದಾಗಿ ತೆಗೆದುಕೊಳ್ಳತಕ್ಕದ್ದು.

(2) ಈ ಪ್ರಕರಣದ ಅಡಿಯಲ್ಲಿ ತೆರಿಗೆಯೆಂದು ಮುರುಗಡೆ ಮಾಡಿದ ಮೊತ್ತವು, ಅಂಥ ಮುರುಗಡೆ ಮಾಡಿದ ತಿಂಗಳು ಕೊನೆಗೊಂಡ ನಂತರದ ಹತ್ತು ದಿನಗಳ ಒಳಗಾಗಿ, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಮುರುಗಡೆದಾರನಿಂದ ಸರ್ಕಾರಕ್ಕೆ ಸಂದಾಯವಾಗತಕ್ಕದ್ದು.

(3) ಮುರುಗಡೆದಾರನು ನಿಯಮಿಸಬಹುದಾದ ಅಂಥ ವಿಧಾನದಲ್ಲಿ, ಕರಾರಿನ ಮೌಲ್ಯ, ಮುರುಗಡೆಯ ದರ, ಮುರುಗಡೆಗೊಳಿಸಿದ ಮೊತ್ತ, ಸರ್ಕಾರಕ್ಕೆ ಸಂದಾಯ ಮಾಡಿದ ಮೊತ್ತ ಮತ್ತು ಅಂಥ ಇತರ ವಿವರಗಳನ್ನು, ಅದರಲ್ಲಿ ನಮೂದಿಸಿರುವ ಒಂದು ಪ್ರಮಾಣ ಪತ್ರವನ್ನು, ಮುರುಗಡೆಗೊಳಗಾದವನಿಗೆ ಒದಗಿಸತಕ್ಕದ್ದು.

(4) ಯಾವುದೇ ಮುರುಗಡೆದಾರನು, ಮೂಲದಲ್ಲಿ ತೆರಿಗೆಯನ್ನು ಮುರುಗಡೆಗೊಳಿಸಿದ ನಂತರ, ಹಾಗೆ ಮುರುಗಡೆಗೊಳಿಸಿದ ಮೊತ್ತವನ್ನು ಸರ್ಕಾರಕ್ಕೆ ಜಮೆಗೊಳಿಸಿದ ಐದು ದಿನಗಳ ಒಳಗಾಗಿ, ಮುರಗಡೆಗೊಳಗಾದವನಿಗೆ ಪ್ರಮಾಣಪತ್ರವನ್ನು ಒದಗಿಸುವಲ್ಲಿ ವಿಫಲನಾದರೆ, ಅಂಥ ಐದು ದಿನಗಳ ಅವಧಿಯು ಕೊನೆಗೊಂಡ ನಂತರದ ದಿನದಿಂದ ವಿಫಲತೆಯನ್ನು ಸರಿಪಡಿಸುವವರೆಗೆ, ಪ್ರತಿ ದಿನಕ್ಕೆ ನೂರು ರೂಪಾಯಿಯ ಮೊತ್ತವನ್ನು, ಗರಿಷ್ಠ ಐದು ಸಾವಿರ ರೂಪಾಯಿಗಳ ಮೊತ್ತಕ್ಕೆ ಒಳಪಟ್ಟು, ವಿಳಂಬ ಶುಲ್ಕದ ರೂಪದಲ್ಲಿ ಸಂದಾಯ ಮಾಡತಕ್ಕದ್ದು.

(5) ಮುರುಗಡೆಗೊಳಗಾದವನು, ಮುರುಗಡೆಗೊಳಿಸಿದ ಮತ್ತು ಪ್ರಕರಣ 39ರ ಉಪಪ್ರಕರಣ (3)ರ ಅಡಿಯಲ್ಲಿ ಒದಗಿಸಿದ ಮುರುಗಡೆದಾರನ ರಿಟರ್ನ್‌ನಲ್ಲಿ ಪ್ರತಿಬಿಂಬಿಸಿದ ತೆರಿಗೆಯ ಜಮೆಯನ್ನು, ನಿಯಮಿಸಬಹುದಾದ ಅಂಥ ವಿಧಾನದಲ್ಲಿ, ತನ್ನ ವಿದ್ಯುನ್ಮಾನ ನಗದು ಖಾತೆಯಲ್ಲಿ ಕ್ಲೇಮು ಮಾಡತಕ್ಕದ್ದು.

(6) ಯಾವುದೇ ಮುರುಗಡೆದಾರನು ಉಪಪ್ರಕರಣ (1)ರ ಅಡಿಯಲ್ಲಿ ತೆರಿಗೆಯೆಂದು ಮುರುಗಡೆಗೊಳಿಸಿದ ಮೊತ್ತವನ್ನು ಸರ್ಕಾರಕ್ಕೆ ಸಂದಾಯ ಮಾಡುವಲ್ಲಿ ವಿಫಲನಾದರೆ, ಮುರುಗಡೆಗೊಳಿಸಿದ ತೆರಿಗೆ ಮೊತ್ತಕ್ಕೆ ಹೆಚ್ಚುವರಿಯಾಗಿ, ಪ್ರಕರಣ 50ರ ಉಪಪ್ರಕರಣ (1)ರ ಉಪಬಂಧಗಳಿಗೆ ಅನುಸಾರವಾಗಿ, ಬಡ್ಡಿಯನ್ನು ಸಂದಾಯ ಮಾಡತಕ್ಕದ್ದು.

(7) ಈ ಪ್ರಕರಣದ ಅಡಿಯಲ್ಲಿ ಬಾಕಿಯಿರುವ ಮೊತ್ತದ ನಿರ್ಧರಣೆಯನ್ನು ಪ್ರಕರಣ 73 ಅಥವಾ ಪ್ರಕರಣ 74ರಲ್ಲಿ ನಿರ್ದಿಷ್ಟಪಡಿಸಿದ ವಿಧಾನದಲ್ಲಿ ಮಾಡತಕ್ಕದ್ದು.

(8) ಮುರುಗಡೆದಾರನಿಗೆ ಅಥವಾ ಮುರುಗಡೆಗೊಳಗಾದವನಿಗೆ, ಅಧಿಕವಾದ ಅಥವಾ ತಪ್ಪಾದ ಮುರುಗಡೆಯ ಪ್ರಯುಕ್ತ ಉದ್ಭವಿಸಿರುವ ಮರುಪಾವತಿಯನ್ನು ಪ್ರಕರಣ 54ರ ಉಪಬಂಧಗಳಿಗೆ ಅನುಸಾರವಾಗಿ ವ್ಯವಹರಿಸತಕ್ಕದ್ದು:

ಪರಂತು, ಮುರುಗಡೆಗೊಳಿಸಿದ ಮೊತ್ತವು, ಮುರುಗಡೆಗೊಳಗಾದವನ ವಿದ್ಯುನ್ಮಾನ ನಗದು ಖಾತೆಗೆ ಜಮೆಗೊಳಿಸಲಾಗಿದ್ದರೆ, ಮುರುಗಡೆದಾರನಿಗೆ ಮರುಪಾವತಿ ನೀಡತಕ್ಕದ್ದಲ್ಲ.

52. ಮೂಲದಲ್ಲಿ ತೆರಿಗೆಯನ್ನು ಸಂಗ್ರಹಿಸುವುದು.– (1) ಈ ಅಧಿನಿಯಮದಲ್ಲಿ ಇದಕ್ಕೆ ವಿರುದ್ಧವಾಗಿ ಏನೇ ಒಳಗೊಂಡಿದ್ದರೂ, ಏಜೆಂಟನಾಗಿರದ ಪ್ರತಿಯೊಬ್ಬ ವಿದ್ಯುನ್ಮಾನ ವಾಣಿಜ್ಯ ನಿರ್ವಾಹಕನು (ಈ ಪ್ರಕರಣದಲ್ಲಿ ಇನ್ನು ಮುಂದೆ **"ನಿರ್ವಾಹಕ"** ಎಂದು ಉಲ್ಲೇಖಿಸಲಾಗಿದೆ), ಇತರ ಪೂರೈಕೆದಾರರಿಂದ ತನ್ನ ಮೂಲಕ ಮಾಡಿದ ತೆರಿಗೆದಾಯಕ ಪೂರೈಕೆಗಳ ನಿವ್ವಳ ಮೌಲ್ಯದ ಶೇಕಡ ಒಂದರಷ್ಟನ್ನು ಮೀರದ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಸರ್ಕಾರದಿಂದ ಅಧಿಸೂಚಿಸಬಹುದಾದ ಅಂಥ ದರದಲ್ಲಿ ಲೆಕ್ಕಹಾಕಲಾದ ಒಂದು ಮೊತ್ತವನ್ನು, ಅಂಥ ಪೂರೈಕೆಗಳಿಗೆ ಸಂಬಂಧಿಸಿದಂತೆ ಪ್ರತಿಫಲವನ್ನು ನಿರ್ವಾಹಕನು ಸಂಗ್ರಹಿಸಿಬೇಕಿದ್ದಲ್ಲಿ, ಸಂಗ್ರಹಿಸತಕ್ಕದ್ದು.

ವಿವರಣೆ:– ಈ ಉಪಪ್ರಕರಣದ ಉದ್ದೇಶಗಳಿಗಾಗಿ, ಪದಾವಳಿಯಾದ "ತೆರಿಗೆದಾಯಕ ಪೂರೈಕೆಗಳ ನಿವ್ವಳ ಮೌಲ್ಯ" ಎಂದರೆ, ನಿರ್ವಾಹಕನ ಮೂಲಕ ಎಲ್ಲಾ ನೋಂದಾಯಿತ ವ್ಯಕ್ತಿಗಳಿಂದ ಯಾವುದೇ ತಿಂಗಳಿನಲ್ಲಿ ಮಾಡಿದ, ಸದರಿ ತಿಂಗಳಿನ ಅವಧಿಯಲ್ಲಿ ಪೂರೈಕೆದಾರರಿಗೆ ವಾಪಾಸ್ಸು ಮಾಡಿದ ತೆರಿಗೆದಾಯಕ ಪೂರೈಕೆಗಳ ಸಮಗ್ರ ಮೌಲ್ಯದಷ್ಟು ಇಳಿಕೆ ಮಾಡಿದ, ಪ್ರಕರಣ 9ರ ಉಪಪ್ರಕರಣ (5)ರ ಅಡಿಯಲ್ಲಿ ಅಧಿಸೂಚಿಸಿದ ಸೇವೆಗಳನ್ನು ಹೊರತುಪಡಿಸಿದ, ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ತೆರಿಗೆದಾಯಕ ಪೂರೈಕೆಗಳ ಸಮಗ್ರ ಮೌಲ್ಯ.

(2) ಉಪಪ್ರಕರಣ (1)ರಲ್ಲಿ ನಿರ್ದಿಷ್ಟಪಡಿಸಿದ ಮೊತ್ತವನ್ನು ಸಂಗ್ರಹಿಸುವ ಅಧಿಕಾರವು, ನಿರ್ವಾಹಕನಿಂದ ಯಾವುದೇ ಇತರ ವಸೂಲಾತಿಯ ವಿಧಾನಗಳಿಗೆ ಬಾಧಕವಾಗದಂತೆ ಇರತಕ್ಕದ್ದು.

(3) ಉಪಪ್ರಕರಣ (1)ರ ಅಡಿಯಲ್ಲಿ ಸಂಗ್ರಹಿಸಿದ ಮೊತ್ತವು, ಅಂಥ ಸಂಗ್ರಹಣೆ ಮಾಡಿದ ತಿಂಗಳು ಕೊನೆಗೊಂಡ ನಂತರದ ಹತ್ತು ದಿನಗಳ ಒಳಗಾಗಿ, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ನಿರ್ವಾಹಕನಿಂದ, ಸರ್ಕಾರಕ್ಕೆ ಸಂದಾಯವಾಗತಕ್ಕದ್ದು.

(4) ಉಪಪ್ರಕರಣ (1)ರಲ್ಲಿ ನಿರ್ದಿಷ್ಟಪಡಿಸಿದ ಮೊತ್ತವನ್ನು ಸಂಗ್ರಹಿಸುವ ಪ್ರತಿಯೊಬ್ಬ ನಿರ್ವಾಹಕನು, ಒಂದು ತಿಂಗಳಿನಲ್ಲಿ ತನ್ನ ಮೂಲಕ ವಾಪಸ್ಸು ಮಾಡಿದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡನ್ನು, ಮತ್ತು ಉಪಪ್ರಕರಣ (1)ರ ಅಡಿಯಲ್ಲಿ ಸಂಗ್ರಹಿಸಿದ ಮೊತ್ತವನ್ನು ಒಳಗೊಂಡಂತೆ, ತನ್ನ ಮೂಲಕ ಮಾಡಿದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಹೊರಮುಖ ಪೂರೈಕೆ ವಿವರಗಳನ್ನು ಒಳಗೊಂಡ ಒಂದು ವಿವರಪತ್ರವನ್ನು, ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ಮತ್ತು ವಿಧಾನದಲ್ಲಿ, ವಿದ್ಯುನ್ಮಾನ ರೀತಿಯಲ್ಲಿ ಅಂಥ ತಿಂಗಳು ಮುಗಿದ ಹತ್ತು ದಿನಗಳ ಒಳಗಾಗಿ ಒದಗಿಸತಕ್ಕದ್ದು.

(5) ಉಪಪ್ರಕರಣ (1)ರಲ್ಲಿ ನಿರ್ದಿಷ್ಟಪಡಿಸಿದ ಮೊತ್ತವನ್ನು ಸಂಗ್ರಹಿಸುವ ಪ್ರತಿಯೊಬ್ಬ ನಿರ್ವಾಹಕನು, ಹಣಕಾಸು ವರ್ಷದ ಅವಧಿಯಲ್ಲಿ ತನ್ನ ಮೂಲಕ ವಾಪಸ್ಸು ಮಾಡಿದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡನ್ನು, ಮತ್ತು ಸದರಿ ಉಪಪ್ರಕರಣದ ಅಡಿಯಲ್ಲಿ ಸಂಗ್ರಹಿಸಿದ ಮೊತ್ತವನ್ನು ಒಳಗೊಂಡಂತೆ, ತನ್ನ ಮೂಲಕ ಮಾಡಿದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಹೊರಮುಖ ಪೂರೈಕೆ ವಿವರಗಳನ್ನು ಒಳಗೊಂಡ ಒಂದು ವಾರ್ಷಿಕ ವಿವರಪತ್ರವನ್ನು, ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ಮತ್ತು ವಿಧಾನದಲ್ಲಿ, ಅಂಥ ಹಣಕಾಸು ವರ್ಷ ಕೊನೆಗೊಂಡ ತರುವಾಯದ ಡಿಸೆಂಬರ್‌ನ ಮೂವತ್ತೊಂದನೇ ದಿನಕ್ಕಿಂತ ಮುಂಚಿತವಾಗಿ ವಿದ್ಯುನ್ಮಾನರೀತಿಯಲ್ಲಿ ಒದಗಿಸತಕ್ಕದ್ದು.

(6) ಯಾವುದೇ ನಿರ್ವಾಹಕನು, ಉಪಪ್ರಕರಣ (4)ರ ಅಡಿಯಲ್ಲಿ ವಿವರಪತ್ರವನ್ನು ಒದಗಿಸಿದ ನಂತರ, ಅದರಲ್ಲಿ, ತೆರಿಗೆ ಪ್ರಾಧಿಕಾರಗಳಿಂದ ಸೂಕ್ಷ್ಮಪರಿಶೀಲನೆ, ಲೆಕ್ಕಪರಿಶೋಧನೆ, ತಪಾಸಣೆ ಅಥವಾ ಜಾರಿ ಚಟುವಟಿಕೆಗಳ ಪರಿಣಾಮದಿಂದ ಉಂಟಾದವುಗಳನ್ನು ಹೊರತುಪಡಿಸಿದಂತೆ ಇತರೆ ಯಾವುದೇ ಲೋಪ ಅಥವಾ ತಪ್ಪು ವಿವರಗಳನ್ನು ಪತ್ತೆ ಹಚ್ಚಿದರೆ, ಅವನು, ಅಂಥ ಲೋಪ ಅಥವಾ ತಪ್ಪು ವಿವರಗಳನ್ನು ಗಮನಿಸಿದ ಅವಧಿಯಲ್ಲಿನ ತಿಂಗಳಿಗೆ ಒದಗಿಸಬೇಕಾಗಿರುವ ವಿವರಪತ್ರದಲ್ಲಿ, ಪ್ರಕರಣ 50ರ ಉಪಪ್ರಕರಣ (1)ರಲ್ಲಿ ನಿರ್ದಿಷ್ಟ ಪಡಿಸಿದಂತೆ ಬಡ್ಡಿಯನ್ನು ಸಂದಾಯ ಮಾಡುವುದಕ್ಕೆ ಒಳಪಟ್ಟು, ಅಂಥ ಲೋಪ ಅಥವಾ ತಪ್ಪು ವಿವರಗಳನ್ನು ಸರಿಪಡಿಸತಕ್ಕದ್ದು:

ಪರಂತು, ಹಣಕಾಸು ವರ್ಷ ಕೊನೆಗೊಂಡ ತರುವಾಯದ ಸೆಪ್ಟಂಬರ್ ತಿಂಗಳಿಗೆ ವಿವರಪತ್ರವನ್ನು ಒದಗಿಸುವುದಕ್ಕಾಗಿ ಇರುವ ಗಡುವು ದಿನಾಂಕ ಅಥವಾ ಸಂಬಂಧಿಸಿದ ವಾರ್ಷಿಕ ವಿವರಪತ್ರವನ್ನು ಒದಗಿಸಿದ ವಾಸ್ತವಿಕ ದಿನಾಂಕ ಇವುಗಳಲ್ಲಿ ಯಾವುದು ಮೊದಲೋ ಅದರ ನಂತರ, ಯಾವುದೇ ಲೋಪ ಅಥವಾ ತಪ್ಪು ವಿವರಗಳ ಅಂಥ ಸರಿಪಡಿಸುವಿಕೆಗೆ ಅವಕಾಶ ನೀಡತಕ್ಕದ್ದಲ್ಲ.

(7) ನಿರ್ವಾಹಕನ ಮೂಲಕ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆ ಮಾಡಿರುವ ಪೂರೈಕೆದಾರನು, ಸಂಗ್ರಹಣೆಯಾದ ಮತ್ತು ನಿರ್ವಾಹಕನು ಉಪಪ್ರಕರಣ (4)ರ ಅಡಿಯಲ್ಲಿ ಒದಗಿಸಿರುವ ವಿವರಪತ್ರದಲ್ಲಿ ಪ್ರತಿಬಿಂಬಿತವಾದ ಮೊತ್ತದ ಜಮೆಯನ್ನು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ತನ್ನ ವಿದ್ಯುನ್ಮಾನ ನಗದು ಖಾತೆಯಲ್ಲಿ ಕ್ಲೇಮು ಮಾಡತಕ್ಕದ್ದು.

(8) ಪ್ರತಿಯೊಬ್ಬ ನಿರ್ವಾಹಕನಿಂದ ಉಪಪ್ರಕರಣ (4)ರ ಅಡಿಯಲ್ಲಿ ಒದಗಿಸಿದ ವಿವರಗಳು, ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತನಾದ ಸಂಬಂಧಪಟ್ಟ ಪೂರೈಕೆದಾರನಿಂದ ಒದಗಿಸಿದ ಅವುಗಳ ಸಂವಾದಿಯಾದ ಹೊರಮುಖ ಪೂರೈಕೆಯ ವಿವರಗಳೊಂದಿಗೆ, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಅಂಥ ಅವಧಿಯೊಳಗೆ ಹೊಂದಾಣಿಕೆಯಾಗತಕ್ಕದ್ದು.

(9) ನಿರ್ವಾಹಕನಿಂದ ಉಪಪ್ರಕರಣ (4)ರ ಅಡಿಯಲ್ಲಿ ಒದಗಿಸಿದ ಹೊರಮುಖ ಪೂರೈಕೆಯ ವಿವರಗಳು, ಪ್ರಕರಣ 37ರ ಅಡಿಯಲ್ಲಿ ಪೂರೈಕೆದಾರನು ಒದಗಿಸಿದ ಅವುಗಳ ಸಂವಾದಿ ವಿವರಗಳೊಂದಿಗೆ ಹೊಂದಿಕೆಯಾಗದಿದ್ದರೆ, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಅಂಥ ಅವಧಿಯೊಳಗೆ, ಉಭಯ ವ್ಯಕ್ತಿಗಳಿಗೂ ವ್ಯತ್ಯಾಸವನ್ನು ತಿಳಿಸತಕ್ಕದ್ದು.

(10) ಉಪಪ್ರಕರಣ (9)ರ ಅಡಿಯಲ್ಲಿ ಯಾವುದೇ ವ್ಯತ್ಯಾಸವನ್ನು ತಿಳಿಸಿದ್ದು ಮತ್ತು ಪೂರೈಕೆದಾರನು ಆ ವ್ಯತ್ಯಾಸವನ್ನು ತಿಳಿಸಿದ ತಿಂಗಳಿನ ತನ್ನ ಸಿಂಧುವಾದ ರಿಟರ್ನನಲ್ಲಿ ಅಥವಾ ನಿರ್ವಾಹಕನು ತನ್ನ ವಿವರಪತ್ರದಲ್ಲಿ ಸರಿಪಡಿಸಿಕೊಳ್ಳದಿದ್ದಲ್ಲಿ, ನಿರ್ವಾಹಕನು ಒದಗಿಸಿದ ಹೊರಮುಖ ಪೂರೈಕೆಗಳ ಮೌಲ್ಯವು ಪೂರೈಕೆದಾರನಿಂದ ಒದಗಿಸಿದ ಹೊರಮುಖ ಪೂರೈಕೆಗಳ ಮೌಲ್ಯಕ್ಕಿಂತ ಹೆಚ್ಚಿದ್ದಲ್ಲಿ, ಸಂಬಂಧಿತ ಮೊತ್ತವನ್ನು ಸದರಿ ಪೂರೈಕೆದಾರನ ಹುಟ್ಟುವಳಿ ತೆರಿಗೆ ಬಾಧ್ಯತೆಗೆ ಅಂಥ ವ್ಯತ್ಯಾಸವನ್ನು ತಿಳಿಸಿದ ತಿಂಗಳಿನ ತದನಂತರದ ತಿಂಗಳಿನ ಅವನ ರಿಟರ್ನನಲ್ಲಿ ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಸೇರಿಸತಕ್ಕದ್ದು.

(11) ಉಪಪ್ರಕರಣ (10)ರ ಅಡಿಯಲ್ಲಿ ಯಾರ ಹುಟ್ಟುವಳಿ ತೆರಿಗೆ ಬಾಧ್ಯತೆಗೆ ಯಾವುದೇ ಮೊತ್ತವನ್ನು ಸೇರಿಸಲಾಗಿದೆಯೋ ಸಂಬಂಧಿತ ಆ ಪೂರೈಕೆದಾರನು, ಅಂಥ ಪೂರೈಕೆಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ತೆರಿಗೆಯನ್ನು, ಅಂಥ ತೆರಿಗೆಯು ಬಾಕಿಯಾದ ದಿನಾಂಕದಿಂದ ಅದರ ಸಂದಾಯದವರೆಗೆ, ಪ್ರಕರಣ 50ರ ಉಪಪ್ರಕರಣ (1)ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ದರದಲ್ಲಿ, ಹಾಗೆ ಸೇರಿಸಿದ ಮೊತ್ತದ ಮೇಲಿನ ಬಡ್ಡಿಯೊಂದಿಗೆ ಸಂದಾಯ ಮಾಡತಕ್ಕದ್ದು.

(12) ಉಪ ಆಯುಕ್ತರ ಶ್ರೇಣಿಗಿಂತ ಕಡಿಮೆಯಿಲ್ಲದ ಯಾವುದೇ ಪ್ರಾಧಿಕಾರವು, ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ನಡಾವಳಿಗಳ ಕ್ರಮದಲ್ಲಿಯಾಗಲಿ ಅಥವಾ ಅದಕ್ಕೂ ಮೊದಲಾಗಲಿ, ಕೆಳಗಿನವುಗಳಿಗೆ ಸಂಬಂಧಿಸಿದಂತೆ ಸೂಚನಾ ಪತ್ರದಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ವಿವರಗಳನ್ನು ಒದಗಿಸುವಂತೆ ನಿರ್ವಾಹಕನನ್ನು ಅಗತ್ಯಪಡಿಸುವ ಒಂದು ಸೂಚನಾಪತ್ರವನ್ನು ನೀಡಬಹುದು,–

(ಎ) ಯಾವುದೇ ಅವಧಿಯ ಸಮಯದಲ್ಲಿ ಅಂಥ ನಿರ್ವಾಹಕನು ಮಾಡಿದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಗಳು; ಅಥವಾ

(ಬಿ) ಅಂಥ ನಿರ್ವಾಹಕನು ನಿರ್ವಹಿಸುವ ಗೋದಾಮುಗಳು ಅಥವಾ ಉಗ್ರಾಣಗಳು, ಇನ್ಯಾವುದೇ ಹೆಸರಿನಿಂದ ಕರೆಯಲ್ಪಡಲಿ, ಮತ್ತು ಅವುಗಳು ಅಂಥ ಪೂರೈಕೆದಾರರುಗಳಿಂದ ಹೆಚ್ಚುವರಿ ವ್ಯವಹಾರ ಸ್ಥಳ ಎಂದು ಘೋಷಿಸಿರುವ ಸ್ಥಳಗಳಲ್ಲಿ ಅಂಥ ನಿರ್ವಾಹಕನ ಮೂಲಕ ಪೂರೈಕೆಗಳನ್ನು ಮಾಡುತ್ತಿರುವ ಪೂರೈಕೆದಾರರುಗಳಿಂದ ಹೊಂದಿದ ಸರಕುಗಳ ದಾಸ್ತಾನು.

(13) ಉಪಪ್ರಕರಣದ (12)ರ ಅಡಿಯಲ್ಲಿ ಒಂದು ಸೂಚನಾ ಪತ್ರವನ್ನು ಯಾರಿಗೆ ನೀಡಲಾಗಿದೆಯೋ ಆ ಪ್ರತಿಯೊಬ್ಬ ನಿರ್ವಾಹಕನು, ಅಂಥ ಸೂಚನಾ ಪತ್ರವನ್ನು ನೀಡಿದ ದಿನಾಂಕದಿಂದ ಹದಿನೈದು ಕೆಲಸದ ದಿನಗಳ ಒಳಗಾಗಿ ಅಗತ್ಯಪಡಿಸಿದ ಮಾಹಿತಿಯನ್ನು ಒದಗಿಸತಕ್ಕದ್ದು.

(14) ಉಪಪ್ರಕರಣದ (12)ರ ಅಡಿಯಲ್ಲಿ ನೀಡಲಾದ ಒಂದು ಸೂಚನಾ ಪತ್ರದಿಂದ ಅಗತ್ಯಪಡಿಸಿದ ಮಾಹಿತಿಯನ್ನು ಒದಗಿಸುವಲ್ಲಿ ವಿಫಲನಾಗುವ ಯಾವೊಬ್ಬ ವ್ಯಕ್ತಿಯು, ಪ್ರಕರಣ 122ರ ಅಡಿಯಲ್ಲಿ ತೆಗೆದುಕೊಳ್ಳಬಹುದಾದ ಯಾವುದೇ ಕ್ರಮಗಳಿಗೆ ಬಾಧಕವಾಗದಂತೆ, ಇಪ್ಪತ್ತೈದು ಸಾವಿರ ರೂಪಾಯಿಗಳ ವರೆಗೆ ವಿಸ್ತರಿಬಹುದಾದ ದಂಡಕ್ಕೆ ಬಾಧ್ಯನಾಗಿರತಕ್ಕದ್ದು.

ವಿವರಣೆ:– ಈ ಪ್ರಕರಣದ ಉದ್ದೇಶಗಳಿಗಾಗಿ, ಪದಾವಳಿಯಾದ **"ಸಂಬಂಧಿತ ಪೂರೈಕೆದಾರ"** ಎಂದರೆ, ನಿರ್ವಾಹಕನ ಮೂಲಕ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಗಳನ್ನು ಮಾಡುವ ಪೂರೈಕೆದಾರ.

53. ಹೂಡುವಳಿ ತೆರಿಗೆ ಜಮೆಯ ವರ್ಗಾವಣೆ.– ಈ ಅಧಿನಿಯಮದ ಅಡಿಯಲ್ಲಿ ಉಪಯೋಗಿಸಲಾದ ಹೂಡುವಳಿ ತೆರಿಗೆ ಜಮೆಯನ್ನು ಪ್ರಕರಣ 39ರ ಉಪ–ಪ್ರಕರಣ (1)ರ ಅಡಿಯಲ್ಲಿ ಒದಗಿಸಿದ ಸಿಂಧುವಾದ ರಿಟರ್ನನಲ್ಲಿ ಪ್ರತಿಬಿಂಬಿಸಿದಂತೆ ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿನ ತೆರಿಗೆ ಬಾಕಿಯನ್ನು ಪ್ರಕರಣ 49ರ ಉಪ–ಪ್ರಕರಣ (5)ಕ್ಕೆ ಅನುಸಾರವಾಗಿ ಸಂದಾಯ ಮಾಡಲು ಬಳಸಿಕೊಂಡಾಗ, ರಾಜ್ಯ ತೆರಿಗೆಯಾಗಿ ಸಂಗ್ರಹಿಸಿದ ಮೊತ್ತವು, ಹಾಗೆ ಬಳಸಿದ ಅಂಥ ಜಮೆಗೆ ಸಮನಾದ ಮೊತ್ತದಲ್ಲಿ ಇಳಿಕೆಯಾಗತಕ್ಕದ್ದು ಹಾಗೂ ರಾಜ್ಯ ಸರ್ಕಾರವು ರಾಜ್ಯ ತೆರಿಗೆ ಖಾತೆಯಿಂದ ಹಾಗೆ ಇಳಿಕೆ ಮಾಡಿದ ಮೊತ್ತಕ್ಕೆ ಸಮನಾದ ಮೊತ್ತವನ್ನು ಏಕೀಕೃತ ತೆರಿಗೆ ಖಾತೆಗೆ ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಅಂಥ ಸಮಯದ ಒಳಗಾಗಿ ವರ್ಗಾಯಿಸತಕ್ಕದ್ದು.

ಅಧ್ಯಾಯ – XI
ಮರುಪಾವತಿಗಳು

54. ತೆರಿಗೆಯ ಮರುಪಾವತಿ.– (1) ಯಾವುದೇ ತೆರಿಗೆಯ ಮತ್ತು ಅಂಥ ತೆರಿಗೆ ಅಥವಾ ಆತನಿಂದ ಸಂದಾಯವಾದ ಯಾವುದೇ ಇತರ ಮೊತ್ತಗಳ ಮೇಲೆ ಸಂದಾಯ ಮಾಡಿದ ಬಡ್ಡಿ, ಯಾವುದಾದರೂ ಇದ್ದರೆ, ಅವುಗಳ ಮರುಪಾವತಿಯನ್ನು ಕ್ಲೇಮು ಮಾಡುವ ಯಾವೊಬ್ಬ ವ್ಯಕ್ತಿಯು, ಸಂಬಂಧಿಸಿದ ದಿನಾಂಕದಿಂದ ಎರಡು ವರ್ಷಗಳ ಮುಕ್ತಾಯದ ಮೊದಲು ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ಮತ್ತು ಅಂಥ ವಿಧಾನದಲ್ಲಿ ಒಂದು ಅರ್ಜಿಯನ್ನು ಹಾಕಬಹುದು:

ಪರಂತು, ಪ್ರಕರಣ 49ರ ಉಪಪ್ರಕರಣ (6)ರ ಉಪಬಂಧಗಳಿಗೆ ಅನುಸಾರವಾಗಿ ವಿದ್ಯುನ್ಮಾನ ನಗದು ಖಾತೆಯಲ್ಲಿನ ಯಾವುದೇ ಉಳಿಕೆಯ ಮರುಪಾವತಿಯನ್ನು ಕ್ಲೇಮು ಮಾಡುವ ಒಬ್ಬ ನೋಂದಾಯಿತ ವ್ಯಕ್ತಿಯು, ಪ್ರಕರಣ 39ರ ಅಡಿಯಲ್ಲಿ ಒದಗಿಸಿದ ರಿಟರ್ನನಲ್ಲಿ ನಿಯಮಿಸಬಹುದಾದ ಅಂಥ ವಿಧಾನಲ್ಲಿ ಅಂಥ ಮರುಪಾವತಿಯನ್ನು ಕ್ಲೇಮು ಮಾಡಬಹುದು.

(2) ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಒಳಮುಖ ಪೂರೈಕೆಗಳ ಮೇಲೆ ಸಂದಾಯ ಮಾಡಿದ ರಾಜ್ಯ ತೆರಿಗೆಯ ಮರುಪಾವತಿಗೆ ಹಕ್ಕುಳ್ಳ ಸಂಯುಕ್ತ ರಾಷ್ಟ್ರ ಸಂಘದ ಯಾವುದೇ ವಿಶೇಷ ಏಜೆನ್ಸಿ ಅಥವಾ ಸಂಯುಕ್ತ ರಾಷ್ಟ್ರ (ವಿಶೇಷ ಸ್ಥಾನಮಾನ ಮತ್ತು ಉನ್ಮುಕ್ತಿಗಳು) ಅಧಿನಿಯಮ, 1947ರ (1947ರ ಕೇಂದ್ರ ಅಧಿನಿಯಮ 46) ಅಡಿಯಲ್ಲಿ ಅಧಿಸೂಚಿಸಿದ ಯಾವುದೇ ಬಹುಪಕ್ಷೀಯ ಹಣಕಾಸಿನ ಸಂಸ್ಥೆ ಮತ್ತು ಸಂಘಟನೆ, ವಿದೇಶಗಳ ಕಾನ್ಸುಲೇಟ್ ಅಥವಾ ರಾಯಭಾರಿ ಕಛೇರಿ ಅಥವಾ ಪ್ರಕರಣ 55ರ ಅಡಿಯಲ್ಲಿ ಅಧಿಸೂಚಿಸಿದ ಯಾವುದೇ ಇತರ ವ್ಯಕ್ತಿ ಅಥವಾ ವ್ಯಕ್ತಿಗಳ ವರ್ಗ, ಅಂಥ ಪೂರೈಕೆಯನ್ನು ಸ್ವೀಕರಿಸಿದ ತ್ರೈಮಾಸಿಕದ ಕೊನೆಯ ದಿನದಿಂದ ಆರು ತಿಂಗಳುಗಳು ಮುಗಿಯುವ ಮೊದಲು, ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ಮತ್ತು ಅಂಥ ವಿಧಾನದಲ್ಲಿ ಅಂಥ ಮರುಪಾವತಿಗಾಗಿ ಅರ್ಜಿಯನ್ನು ಹಾಕಬಹುದು.

(3) ಉಪಪ್ರಕರಣ (10)ರ ಉಪಬಂಧಗಳಿಗೆ ಒಳಪಟ್ಟು, ಒಬ್ಬ ನೋಂದಾಯಿತ ವ್ಯಕ್ತಿಯು, ಯಾವುದೇ ತೆರಿಗೆ ಅವಧಿಯ ಕೊನೆಯಲ್ಲಿ ಬಳಕೆಯಾಗದ ಯಾವುದೇ ಹೂಡುವಳಿ ತೆರಿಗೆ ಜಮೆಯ ಮರುಪಾವತಿಯನ್ನು ಕ್ಲೇಮು ಮಾಡಬಹುದು:

ಪರಂತು, ಬಳಕೆಯಾಗದ ಯಾವುದೇ ಹೂಡುವಳಿ ತೆರಿಗೆ ಜಮೆಯ ಮರುಪಾವತಿಗೆ ಈ ಕೆಳಕಂಡ ಸಂದರ್ಭಗಳನ್ನು ಹೊರತುಪಡಿಸಿದಂತೆ ಅವಕಾಶ ನೀಡತಕ್ಕದ್ದಲ್ಲ–

(i) ತೆರಿಗೆ ಸಂದಾಯವಿಲ್ಲದೆ ಮಾಡಿದ ಶೂನ್ಯ ದರದ ಪೂರೈಕೆಗಳು;

(ii) ಪರಿಷತ್ತಿನ ಶಿಫಾರಸ್ಸಿನ ಅನ್ವಯ ಸರ್ಕಾರ ಅಧಿಸೂಚಿಸಬಹುದಾದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಗಳನ್ನು ಹೊರತುಪಡಿಸಿದಂತೆ ಹುಟ್ಟುವಳಿ ಪೂರೈಕೆಗಳ ಮೇಲಿನ ತೆರಿಗೆ ದರಕ್ಕಿಂತ ಹೂಡುವಳಿಗಳ ಮೇಲಿನ ತೆರಿಗೆ ದರ ಹೆಚ್ಚಿರುವ (ದರವಿಲ್ಲದ ಅಥವಾ ಸಂಪೂರ್ಣ ವಿನಾಯಿತಿ ಪೂರೈಕೆಗಳನ್ನು ಹೊರತುಪಡಿಸಿದಂತೆ) ಕಾರಣಕ್ಕಾಗಿ ಜಮೆಯು ಸಂಚಿತಗೊಂಡಿರುವುದು:

ಮತ್ತು ಪರಂತು, ಭಾರತದಿಂದ ಹೊರಗಡೆಗೆ ರಫ್ತಾದ ಸರಕುಗಳು ರಫ್ತು ಸುಂಕಕ್ಕೆ ಒಳಪಟ್ಟಿರುವ ಸಂದರ್ಭಗಳಲ್ಲಿ ಬಳಕೆಯಾಗದ ಯಾವುದೇ ಹೂಡುವಳಿ ತೆರಿಗೆ ಜಮೆಯ ಮರುಪಾವತಿಗೆ ಅವಕಾಶ ನೀಡತಕ್ಕದ್ದಲ್ಲ:

ಅಲ್ಲದೇ ಪರಂತು, ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆದಾರನು ಅಂಥ ಪೂರೈಕೆಗಳ ಮೇಲೆ ಸಂದಾಯ ಮಾಡಿದ ಏಕೀಕೃತ ತೆರಿಗೆಯ ಮರುಪಾವತಿಯನ್ನು ಕ್ಲೇಮು ಮಾಡಿದ್ದರೆ, ಹೂಡುವಳಿ ತೆರಿಗೆ ಜಮೆಯ ಮರುಪಾವತಿಗೆ ಅವಕಾಶ ನೀಡತಕ್ಕದ್ದಲ್ಲ.

(4) ಅರ್ಜಿಯು ಕೆಳಕಂಡವುಗಳಿಂದ ಜೊತೆಗೂಡಿರತಕ್ಕದ್ದು;–

(ಎ) ಅರ್ಜಿದಾರನಿಗೆ ಮರುಪಾವತಿಯು ಬಾಕಿ ಇದೆ ಎನ್ನುವುದನ್ನು ಸ್ಥಾಪಿಸುವುದಕ್ಕಾಗಿ ನಿಯಮಿಸಬಹುದಾದ ಅಂಥ ದಸ್ತಾವೇಜು ಪುರಾವೆಗಳು; ಮತ್ತು

(ಬಿ) ಅಂಥ ಕ್ಲೇಮು ಮಾಡಿದ ಮರುಪಾವತಿಗೆ ಸಂಬಂಧಿಸಿದಂತೆ, ಆತನಿಂದ ಸಂಗ್ರಹ ಮಾಡಿದ ಅಥವಾ ಆತನು ಸಂದಾಯ ಮಾಡಿದ ತೆರಿಗೆಯ ಮೊತ್ತ ಅಥವಾ ಅಂಥ ತೆರಿಗೆ ಅಥವಾ ಯಾವುದೇ ಇತರ ಮೊತ್ತಗಳ ಮೇಲೆ ಸಂದಾಯ ಮಾಡಿದ ಬಡ್ಡಿ, ಯಾವುದಾದರೂ ಇದ್ದರೆ, ಅಂಥ ತೆರಿಗೆ ಹಾಗೂ ಬಡ್ಡಿಯ ಹೊರೆಯನ್ನು ಯಾವುದೇ ಇತರ ವ್ಯಕ್ತಿಗೆ ವರ್ಗಾಯಿಸಿಲ್ಲ ಎನ್ನುವುದನ್ನು ಸ್ಥಾಪಿಸುವುದಕ್ಕಾಗಿ ಅರ್ಜಿದಾರನು ಒದಗಿಸಬಹುದಾದ ಅಂಥ ದಸ್ತಾವೇಜುಗಳು ಮತ್ತು ಇತರ ಪುರಾವೆಗಳು (ಪ್ರಕರಣ 33ರಲ್ಲಿ ಉಲ್ಲೇಖಿಸಲಾದ ದಸ್ತಾವೇಜುಗಳನ್ನು ಒಳಗೊಂಡಂತೆ):

ಪರಂತು, ಮರುಪಾವತಿ ಎಂದು ಕ್ಲೇಮು ಮಾಡಿರುವ ಮೊತ್ತವು ಎರಡು ಲಕ್ಷ ರೂಪಾಯಿಗಳಿಗಿಂತ ಕಡಿಮೆಯಿದ್ದಲ್ಲಿ, ಅರ್ಜಿದಾರನು ಯಾವುದೇ ದಸ್ತಾವೇಜುಗಳು ಮತ್ತು ಇತರ ಪುರಾವೆಗಳನ್ನು ಒದಗಿಸುವುದು ಅವಶ್ಯಕವಿರತಕ್ಕದ್ದಲ್ಲ, ಆದರೆ ಅದಕ್ಕೆ ಬದಲಾಗಿ ಅವನ ಬಳಿ ಲಭ್ಯವಿರುವ ದಸ್ತಾವೇಜುಗಳು ಮತ್ತು ಇತರ ಪುರಾವೆಗಳ ಆಧಾರದ ಮೇಲೆ, ಅಂಥ ತೆರಿಗೆ ಹಾಗೂ ಬಡ್ಡಿಯ ಹೊರೆಯನ್ನು ಯಾವೊಬ್ಬ ಇತರ ವ್ಯಕ್ತಿಗೆ ವರ್ಗಾಯಿಸಿಲ್ಲ ಎಂದು ಪ್ರಮಾಣೀಕರಿಸುವ ಒಂದು ಘೋಷಣೆಯನ್ನು ಅವನು ಸಲ್ಲಿಸಬಹುದು.

(5) ಅಂಥ ಯಾವುದೇ ಅರ್ಜಿಯನ್ನು ಸ್ವೀಕರಿಸಿದಾಗ, ಮರುಪಾವತಿಯನ್ನಾಗಿ ಕ್ಲೇಮು ಮಾಡಿರುವ ಮೊತ್ತದ ಪೂರ್ಣ ಅಥವಾ ಭಾಗವನ್ನು ಮರುಪಾವತಿ ಮಾಡಬಹುದು ಎಂದು ಯುಕ್ತ ಅಧಿಕಾರಿಯು ಮನದಟ್ಟು ಮಾಡಿಕೊಂಡರೆ, ಆತನು ಅದಕ್ಕನುಸಾರವಾಗಿ ಆದೇಶ ಮಾಡಬಹುದು ಮತ್ತು ಹಾಗೆ ನಿರ್ಧರಿಸಿದ ಮೊತ್ತವು ಪ್ರಕರಣ 57ರಲ್ಲಿ ಉಲ್ಲೇಖಿಸಿದ ನಿಧಿಗೆ ಜಮೆಗೊಳ್ಳತಕ್ಕದ್ದು.

(6) ಉಪಪ್ರಕರಣ (5)ರಲ್ಲಿ ಏನೇ ಒಳಗೊಂಡಿದ್ದರೂ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಸರ್ಕಾರವು ಅಧಿಸೂಚಿಸಬಹುದಾದ ಅಂಥ ನೋಂದಾಯಿತ ವ್ಯಕ್ತಿಗಳ ವರ್ಗವನ್ನು ಹೊರತುಪಡಿಸಿದ ನೋಂದಾಯಿತ ವ್ಯಕ್ತಿಗಳಿಂದ, ಮಾಡಿದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಶೂನ್ಯ–ದರ ಪೂರೈಕೆಯ ಪ್ರಯುಕ್ತ ಮರುಪಾವತಿಗಾಗಿ ಮಾಡಿರುವ ಯಾವುದೇ ಕ್ಲೇಮಿನ ಸಂದರ್ಭದಲ್ಲಿ, ಯುಕ್ತ ಅಧಿಕಾರಿಯು, ತಾತ್ಕಾಲಿಕವಾಗಿ ಅಂಗೀಕರಿಸಿದ ಹೂಡುವಳಿ ತೆರಿಗೆ ಜಮೆಯ ಮೊತ್ತವನ್ನು ಹೊರತುಪಡಿಸಿದಂತೆ, ಹಾಗೆ ಕ್ಲೇಮು ಮಾಡಿದ ಒಟ್ಟು ಮೊತ್ತದ ಶೇಕಡಾ ತೊಂಬತ್ತರಷ್ಟನ್ನು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಅಂಥ ಷರತ್ತುಗಳು, ಮಿತಿಗಳು ಮತ್ತು ರಕ್ಷಣೋಪಾಯಗಳಿಗೆ ಒಳಪಟ್ಟು ತಾತ್ಕಾಲಿಕವಾಗಿ ಮರುಪಾವತಿ ಮಾಡಬಹುದು ಮತ್ತು

ತದನಂತರ ಅರ್ಜಿದಾರನಿಂದ ಒದಗಿಸಿದ ದಸ್ತಾವೇಜುಗಳ ಯುಕ್ತ ಪರಿಶೀಲನೆಯ ನಂತರ ಮರುಪಾವತಿ ಕ್ಲೇಮಿನ ಅಂತಿಮ ಇತ್ಯರ್ಥಕ್ಕಾಗಿ ಉಪಪ್ರಕರಣ (5)ರ ಅಡಿಯಲ್ಲಿ ಆದೇಶ ಮಾಡುಬಹುದು.

(7) ಎಲ್ಲಾ ವಿಧದಲ್ಲಿಯೂ ಪೂರ್ಣವಾದ ಅರ್ಜಿ ಸ್ವೀಕೃತಿ ದಿನಾಂಕದಿಂದ ಅರವತ್ತು ದಿನಗಳ ಒಳಗಾಗಿ ಯುಕ್ತ ಅಧಿಕಾರಿಯು ಉಪಪ್ರಕರಣ (5)ರ ಅಡಿಯಲ್ಲಿ ಆದೇಶವನ್ನು ಹೊರಡಿಸತಕ್ಕದ್ದು.

(8) ಉಪಪ್ರಕರಣ (5)ರಲ್ಲಿ ಏನೇ ಒಳಗೊಂಡಿದ್ದರೂ, ಮರುಪಾವತಿ ಮಾಡಬಹುದಾದ ಮೊತ್ತವು ಈ ಕೆಳಗಿನವುಗಳಿಗೆ ಸಂಬಂಧಿಸಿದ್ದರೆ, ಅಂಥ ಮೊತ್ತವನ್ನು ನಿಧಿಗೆ ಜಮೆಗೊಳಿಸುವುದಕ್ಕೆ ಬದಲಾಗಿ, ಅರ್ಜಿದಾರನಿಗೆ ಸಂದಾಯ ಮಾಡತಕ್ಕದ್ದು,–

(ಎ) ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಶೂನ್ಯ–ದರದ ಪೂರೈಕೆಗಳ ಮೇಲೆ ಸಂದಾಯ ಮಾಡಿದ ತೆರಿಗೆ ಅಥವಾ ಅಂಥ ಶೂನ್ಯ–ದರದ ಪೂರೈಕೆಗಳನ್ನು ಮಾಡುವಲ್ಲಿ ಬಳಕೆಯಾದ ಹೂಡುವಳಿಗಳು ಹಾಗೂ ಹೂಡುವಳಿ ಸೇವೆಗಳ ಮೇಲಿನ ತೆರಿಗೆಯ ಮರುಪಾವತಿ;

(ಬಿ) ಉಪಪ್ರಕರಣ (3)ರ ಅಡಿಯಲ್ಲಿ ಬಳಕೆಯಾಗದ ಹೂಡುವಳಿ ತೆರಿಗೆ ಜಮೆಯ ಮರುಪಾವತಿ;

(ಸಿ) ಪೂರ್ಣವಾಗಿಯಾಗಲಿ ಅಥವಾ ಭಾಗಶಃವಾಗಿಯಾದರೂ ಒದಗಿಸದೇ ಇರುವಂತಹ ಮತ್ತು ಅದಕ್ಕಾಗಿ ಬೆಲೆಪಟ್ಟಿಯನ್ನು ನೀಡಿಲ್ಲದಿರುವ ಅಥವಾ ಮರುಪಾವತಿಯ ವೌಚರನ್ನು ನೀಡಲಾಗಿರುವ ಪೂರೈಕೆಯ ಮೇಲೆ ಸಂದಾಯ ಮಾಡಿದ ತೆರಿಗೆಯ ಮರುಪಾವತಿ;

(ಡಿ) ಪ್ರಕರಣ 77ರ ಅನುಸಾರವಾದ ತೆರಿಗೆಯ ಮರುಪಾವತಿ;

(ಇ) ಅಂಥ ತೆರಿಗೆ ಮತ್ತು ಬಡ್ಡಿಯ ಹೊರೆಯನ್ನು ಅವನು ಯಾವುದೇ ಇತರ ವ್ಯಕ್ತಿಗೆ ವರ್ಗಾಯಿಸಿರದಿದ್ದರೆ, ಅರ್ಜಿದಾರನಿಂದ ಸಂದಾಯ ಮಾಡಿದ ತೆರಿಗೆ ಮತ್ತು ಬಡ್ಡಿ, ಯಾವುದಾದರೂ ಇದ್ದರೆ, ಅಥವಾ ಇತರ ಯಾವುದೇ ಮೊತ್ತ; ಅಥವಾ

(ಎಫ್) ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದ ಅಂಥ ಯಾವುದೇ ಇತರ ಅರ್ಜಿದಾರರ ವರ್ಗದಿಂದ ಹೊತ್ತುಕೊಂಡ ತೆರಿಗೆ ಅಥವಾ ಬಡ್ಡಿ.

(9) ಅಪೀಲು ನ್ಯಾಯಾಧಿಕರಣ ಅಥವಾ ಯಾವುದೇ ನ್ಯಾಯಾಲಯದ ಯಾವುದೇ ತೀರ್ಪು, ಡಿಕ್ರಿ, ಆದೇಶ ಅಥವಾ ನಿರ್ದೇಶನದಲ್ಲಿ ಅಥವಾ ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಯಾವುದೇ ಇತರ ಉಪಬಂಧಗಳಲ್ಲಿ, ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಇದಕ್ಕೆ ವಿರುದ್ಧವಾಗಿ ಏನೇ ಒಳಗೊಂಡಿದ್ದರೂ ಸಹ, ಉಪಪ್ರಕರಣ (8)ರ ಉಪಬಂಧಗಳಿಗೆ ಅನುಸಾರವಾಗಿರುವುದರ ಹೊರತಾಗಿ ಮರುಪಾವತಿ ಮಾಡತಕ್ಕದ್ದಲ್ಲ.

(10) ಯಾವುದಾದರೂ ರಿಟರ್ನನ್ನು ಒದಗಿಸಲು ತಪ್ಪಿರುವ ಅಥವಾ ನಿರ್ದಿಷ್ಟಪಡಿಸಿದ ದಿನಾಂಕದೊಳಗೆ ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಅಪೀಲು ಪ್ರಾಧಿಕಾರದಿಂದ ತಡೆ ಇರದಂತಹ ಯಾವುದೇ ತೆರಿಗೆ, ಬಡ್ಡಿ ಅಥವಾ ದಂಡವನ್ನು ಸಂದಾಯ ಮಾಡುವುದು ಅಗತ್ಯವಿರುವಂತಹ ನೋಂದಾಯಿತ ವ್ಯಕ್ತಿಗೆ, ಉಪಪ್ರಕರಣ (3)ರ ಅಡಿಯಲ್ಲಿ ಯಾವುದೇ ಮರುಪಾವತಿಯು ಬಾಕಿಯಿದ್ದಲ್ಲಿ, ಯುಕ್ತ ಅಧಿಕಾರಿಯು,–

(ಎ) ಸದರಿ ವ್ಯಕ್ತಿಯು ರಿಟರ್ನನ್ನು ಒದಗಿಸುವವರೆಗೆ ಅಥವಾ ತೆರಿಗೆ, ಬಡ್ಡಿ ಅಥವಾ ಸಂದರ್ಭಾನುಸಾರವಾಗಿ ದಂಡವನ್ನು ಸಂದಾಯ ಮಾಡುವವರೆಗೆ ಬಾಕಿಯಿರುವ ಮರುಪಾವತಿಯ ಸಂದಾಯವನ್ನು ತಡೆಹಿಡಿಯಬಹುದು;

(ಬಿ) ತೆರಿಗೆದಾಯಕ ವ್ಯಕ್ತಿಯು, ಈ ಅಧಿನಿಯಮದ ಅಡಿಯಲ್ಲಿ ಅಥವಾ ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಸಂದಾಯ ಮಾಡುವುದಕ್ಕೆ ಬಾಧ್ಯನಾಗಿರುವ ಆದರೆ ಸಂದಾಯವಾಗದೆ ಬಾಕಿ ಉಳಿದಿರುವ ಯಾವುದೇ ತೆರಿಗೆ, ಬಡ್ಡಿ, ದಂಡ, ಶುಲ್ಕ ಅಥವಾ ಯಾವುದೇ ಇತರ ಮೊತ್ತವನ್ನು, ಬಾಕಿಯಿರುವ ಮರುಪಾವತಿಯಿಂದ ಕಡಿತಗೊಳಿಸಬಹುದು.

ವಿವರಣೆ:– ಈ ಉಪಪ್ರಕರಣದ ಉದ್ದೇಶಗಳಿಗಾಗಿ, ಪದಾವಳಿಯಾದ 'ನಿರ್ದಿಷ್ಟಪಡಿಸಿದ ದಿನಾಂಕ'ವನ್ನು ಈ ಅಧಿನಿಯಮದ ಅಡಿಯಲ್ಲಿ ಅಪೀಲು ಸಲ್ಲಿಸಲು ಇರುವ ಕೊನೆಯ ದಿನಾಂಕ ಎಂದು ಅರ್ಥೈಸತಕ್ಕದ್ದು;

(11) ಮರುಪಾವತಿಗೆ ಎಡೆ ಮಾಡಿಕೊಡುವ ಒಂದು ಆದೇಶವು, ಒಂದು ಅಪೀಲು ಅಥವಾ ಮುಂದುವರೆದ ನಡಾವಳಿಗಳ ಅಥವಾ ಈ ಅಧಿನಿಯಮದ ಅಡಿಯಲ್ಲಿ ಇತ್ಯರ್ಥದಲ್ಲಿರುವ ಯಾವುದೇ ಇತರ ನಡಾವಳಿಗಳ ವಸ್ತುವಿಷಯವಾಗಿದ್ದಲ್ಲಿ ಮತ್ತು ದುಷ್ಕೃತ್ಯ ಅಥವಾ ಮೋಸ ಮಾಡಿದುದರ ಕಾರಣದಿಂದಾದ ಅಂಥ ಮರುಪಾವತಿಯ ನೀಡುವಿಕೆಯು ಸದರಿ ಅಪೀಲು ಅಥವಾ ಇತರ ನಡಾವಳಿಗಳಲ್ಲಿ ರಾಜಸ್ವಕ್ಕೆ ಪ್ರತಿಕೂಲ ಪರಿಣಾಮ ಬೀರುವ ಸಂಭವವಿದೆ ಎಂದು ಆಯುಕ್ತರು ಅಭಿಪ್ರಾಯವನ್ನು ಹೊಂದಿದ್ದಲ್ಲಿ, ಅವರು, ತೆರಿಗೆದಾಯಕ ವ್ಯಕ್ತಿಗೆ ಅಹವಾಲುಗಳನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ನಂತರ, ಅವರು ನಿರ್ಧರಿಸಬಹುದಾದ ಅಂಥ ಸಮಯದವರೆಗೆ ಮರುಪಾವತಿಯನ್ನು ತಡೆಹಿಡಿಯಬಹದು.

(12) ಉಪಪ್ರಕರಣ (11)ರ ಅಡಿಯಲ್ಲಿ ಮರುಪಾವತಿಯನ್ನು ತಡೆಹಿಡಿದಿದ್ದಲ್ಲಿ, ಅಪೀಲು ಅಥವಾ ಮುಂದುವರೆದ ನಡಾವಳಿಗಳ ಪರಿಣಾಮವಾಗಿ ತೆರಿಗೆದಾಯಕ ವ್ಯಕ್ತಿಯು ಮರುಪಾವತಿಗೆ ಹಕ್ಕುಳ್ಳವನಾದರೆ, ಪ್ರಕರಣ 56ರಲ್ಲಿ ಏನೇ ಒಳಗೊಂಡಿದ್ದರೂ ಸಹ, ಶೇಕಡಾ ಆರರಷ್ಟನ್ನು ಮೀರದಂತೆ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಅಧಿಸೂಚಿಸಬಹುದಾದ ಅಂಥ ದರದಲ್ಲಿ ಬಡ್ಡಿಗೆ ಹಕ್ಕುಳ್ಳವನಾಗಿರತಕ್ಕದ್ದು.

(13) ಈ ಪ್ರಕರಣದಲ್ಲಿ ಇದಕ್ಕೆ ವಿರುದ್ಧವಾಗಿ ಏನೇ ಒಳಗೊಂಡಿದ್ದರೂ, ಒಬ್ಬ ಸಾಂದರ್ಭಿಕ ತೆರಿಗೆದಾಯಕ ವ್ಯಕ್ತಿ ಅಥವಾ ಒಬ್ಬ ಅನಿವಾಸಿ ತೆರಿಗೆದಾಯಕ ವ್ಯಕ್ತಿಯು, ಪ್ರಕರಣ 27ರ ಉಪಪ್ರಕರಣ (2)ರ ಅಡಿಯಲ್ಲಿ ಠೇವಣಿ ಮಾಡಿದ ಮುಂಗಡ ತೆರಿಗೆಯ ಮೊತ್ತವನ್ನು, ಆತನಿಗೆ ಮಂಜೂರು ಮಾಡಿದ್ದ ನೋಂದಣಿ ಪ್ರಮಾಣ ಪತ್ರವು ಜಾರಿಯಲ್ಲಿ ಉಳಿದಿರುವ ಸಂಪೂರ್ಣ ಅವಧಿಗೆ

ಸಂಬಂಧಿಸಿದಂತೆ, ಪ್ರಕರಣ 39ರ ಅಡಿಯಲ್ಲಿ ಅಗತ್ಯವಿರುವ ಎಲ್ಲಾ ರಿಟರ್ನಗಳನ್ನು ಅಂಥ ವ್ಯಕ್ತಿಯು ಸಲ್ಲಿಸಿದ ಹೊರತು ಮರುಪಾವತಿ ಮಾಡತಕ್ಕದ್ದಲ್ಲ.

(14) ಈ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಒಂದು ಸಾವಿರ ರೂಪಾಯಿಗಳಿಗಿಂತ ಕಡಿಮೆ ಮೊತ್ತವಿದ್ದರೆ, ಉಪಪ್ರಕರಣ (5) ಅಥವಾ ಉಪಪ್ರಕರಣ (6)ರ ಅಡಿಯಲ್ಲಿ ಮರುಪಾವತಿಯನ್ನು, ಅರ್ಜಿದಾರನಿಗೆ ಸಂದಾಯ ಮಾಡತಕ್ಕದ್ದಲ್ಲ.

ವಿವರಣೆ:– ಈ ಪ್ರಕರಣದ ಉದ್ದೇಶಗಳಿಗಾಗಿ,–

(1) **"ಮರುಪಾವತಿ"**ಯು, ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಶೂನ್ಯ–ದರದ ಪೂರೈಕೆಗಳ ಮೇಲೆ ಅಥವಾ ಅಂಥ ಶೂನ್ಯ–ದರದ ಪೂರೈಕೆಗಳನ್ನು ಮಾಡಲು ಉಪಯೋಗಿಸಿದ ಹೂಡುವಳಿಗಳು ಮತ್ತು ಹೂಡುವಳಿ ಸೇವೆಗಳ ಮೇಲಿನ ತೆರಿಗೆಯ ಮರುಪಾವತಿಯನ್ನು ಅಥವಾ ಪರಿಭಾವಿತ ರಫ್ತುಗಳು ಎಂದು ಪರಿಗಣನೆಗೆ ತೆಗೆದುಕೊಂಡ ಸರಕುಗಳ ಪೂರೈಕೆ ಮೇಲಿನ ತೆರಿಗೆಯ ಮರುಪಾವತಿಯನ್ನು, ಅಥವಾ ಉಪಪ್ರಕರಣ (3)ರ ಅಡಿಯಲ್ಲಿ ಉಪಬಂಧಿಸಿದಂತೆ ಬಳಕೆಯಾಗದ ಹೂಡುವಳಿ ತೆರಿಗೆ ಜಮೆಯ ಮರುಪಾವತಿಯನ್ನು ಒಳಗೊಳ್ಳುತ್ತದೆ.

(2) **"ಸಂಬಂಧಿಸಿದ ದಿನಾಂಕ"** ಎಚಿದರೆ:–

(ಎ) ಸರಕುಗಳು ಭಾರತದ ಹೊರಗಡೆಗೆ ರಫ್ತಾದ ಸಂದರ್ಭದಲ್ಲಿ, ಅದೇ ಸರಕುಗಳಿಗೆ ಅಥವಾ, ಅಂಥ ಸರಕುಗಳಲ್ಲಿ ಉಪಯೋಗಿಸಿದ ಹೂಡುವಳಿಗಳು ಅಥವಾ ಸಂದರ್ಭಾನುಸಾರವಾಗಿ ಹೂಡುವಳಿ ಸೇವೆಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡಿದ ತೆರಿಗೆಯ ಮರುಪಾವತಿಯು ಲಭ್ಯವಿದ್ದಲ್ಲಿ,–

(i) ಸರಕುಗಳು ಸಮುದ್ರ ಅಥವಾ ವಾಯು ಮಾರ್ಗದ ಮೂಲಕ ರಫ್ತಾಗಿದ್ದರೆ, ಅಂಥ ಸರಕುಗಳನ್ನು ತುಂಬಿರುವ ಹಡಗು ಅಥವಾ ವಿಮಾನವು, ಭಾರತವನ್ನು ಬಿಟ್ಟ ದಿನಾಂಕ; ಅಥವಾ

(ii) ಸರಕುಗಳು ಭೂ ಮಾರ್ಗದ ಮೂಲಕ ರಫ್ತಾಗಿದ್ದರೆ, ಅಂಥ ಸರಕುಗಳು ಗಡಿಯನ್ನು ದಾಟಿದ ದಿನಾಂಕ; ಅಥವಾ

(iii) ಸರಕುಗಳು ಅಂಚೆಯ ಮೂಲಕ ರಫ್ತಾಗಿದ್ದರೆ, ಸಂಬಂಧಿಸಿದ ಅಂಚೆ ಕಛೇರಿಯಿಂದ ಭಾರತದ ಹೊರಗಿನ ಸ್ಥಳಕ್ಕೆ ಸರಕುಗಳ ರವಾನೆ ದಿನಾಂಕ.

(ಬಿ) ಪರಿಭಾವಿತ ರಫ್ತುಗಳು ಎಂದು ಪರಿಗಣನೆಗೆ ತೆಗೆದುಕೊಂಡ ಸರಕುಗಳ ಪೂರೈಕೆಯ ಸಂದರ್ಭದಲ್ಲಿ, ಸರಕುಗಳಿಗೆ ಸಂಬಂದಿಸಿದಂತೆ ತೆರಿಗೆ ಸಂದಾಯದ ಮರುಪಾವತಿಯು ಲಭ್ಯವಿದ್ದಲ್ಲಿ, ಅಂಥ ಪರಿಭಾವಿತ ರಫ್ತುಗಳಿಗೆ ಸಂಬಂಧಿಸಿದ ರಿಟರ್ನನ್ನು ಒದಗಿಸಿದ ದಿನಾಂಕ;

(ಸಿ) ಭಾರತದ ಹೊರಗಡೆಗೆ ರಫ್ತಾದ ಸೇವೆಗಳ ಸಂದರ್ಭದಲ್ಲಿ, ಅದೇ ಸೇವೆಗಳಿಗೆ ಅಥವಾ ಅಂಥ ಸೇವೆಗಳಲ್ಲಿ ಉಪಯೋಗಿಸಿದ ಹೂಡುವಳಿಗಳು ಅಥವಾ ಸಂದರ್ಭಾನುಸಾರವಾಗಿ, ಹೂಡುವಳಿ ಸೇವೆಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡಿದ ತೆರಿಗೆಯ ಮರುಪಾವತಿಯು ಲಭ್ಯವಿದ್ದಲ್ಲಿ,–

(i) ಅಂಥ ಸಂದಾಯವನ್ನು ಸ್ವೀಕರಿಸುವುದಕ್ಕಿಂದ ಮುಂಚಿತವಾಗಿಯೇ ಸೇವೆಗಳ ಪೂರೈಕೆಯು ಪೂರ್ಣಗೊಂಡಿದ್ದಲ್ಲಿ, ಪರಿವರ್ತನೀಯ ವಿದೇಶಿ ವಿನಿಮಯದಲ್ಲಿ ಸಂದಾಯದ ಸ್ವೀಕೃತಿಯ ದಿನಾಂಕ; ಅಥವಾ

(ii) ಸೇವೆಗಳಿಗಾಗಿ, ಬೆಲೆಪಟ್ಟಿ ನೀಡಿಕೆಯ ದಿನಾಂಕಕ್ಕಿಂತ ಮುಂಚಿತವಾಗಿ, ಸಂದಾಯವನ್ನು ಮುಂಗಡವಾಗಿ ಸ್ವೀಕರಿಸಲಾಗಿದ್ದಲ್ಲಿ, ಬೆಲೆಪಟ್ಟಿ ನೀಡಿಕೆಯ ದಿನಾಂಕ;

(ಡಿ) ಅಪೀಲು ಪ್ರಾಧಿಕಾರ, ಅಪೀಲು ನ್ಯಾಯಾಧಿಕರಣ ಅಥವಾ ಯಾವುದೇ ನ್ಯಾಯಾಲಯದ ತೀರ್ಪು, ಡಿಕ್ರಿ, ಆದೇಶ ಅಥವಾ ನಿರ್ದೇಶನದ ಪರಿಣಾಮದಿಂದಾಗಿ, ತೆರಿಗೆಯು ಮರುಪಾವತಿದಾಯಕವಾದ ಸಂದರ್ಭದಲ್ಲಿ, ಅಂಥ ತೀರ್ಪು, ಡಿಕ್ರಿ, ಆದೇಶ ಅಥವಾ ನಿರ್ದೇಶನವನ್ನು ತಿಳಿಸಿದ ದಿನಾಂಕ;

(ಇ) ಉಪಪ್ರಕರಣ (3)ರ ಅಡಿಯಲ್ಲಿ ಬಳಕೆಯಾಗದ ಹೂಡುವಳಿ ತೆರಿಗೆ ಜಮೆಯ ಮರುಪಾವತಿಯ ಸಂದರ್ಭದಲ್ಲಿ, ಅಂಥ ಮರುಪಾವತಿಗಾಗಿ ಕ್ಲೇಮು ಉದ್ಭವಿಸುವಂತಹ ಹಣಕಾಸು ವರ್ಷದ ಮುಕ್ತಾಯ;

(ಎಫ್) ಈ ಅಧಿನಿಯಮ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿ ತಾತ್ಕಾಲಿಕವಾಗಿ ತೆರಿಗೆಯನ್ನು ಸಂದಾಯ ಮಾಡಿದ ಸಂದರ್ಭದಲ್ಲಿ, ಅದರ ಅಂತಿಮ ಕರನಿರ್ಧರಣೆಯ ನಂತರದಲ್ಲಿ ಮಾಡಿದ ತೆರಿಗೆಯ ಹೊಂದಾಣಿಕೆಯ ದಿನಾಂಕ;

(ಜಿ) ಪೂರೈಕೆದಾರನನ್ನು ಹೊರತುಪಡಿಸಿದ, ಒಬ್ಬ ವ್ಯಕ್ತಿಯ ಸಂದರ್ಭದಲ್ಲಿ, ಅಂಥ ವ್ಯಕ್ತಿಯಿಂದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡೂ ಸ್ವೀಕೃತಿಯಾದ ದಿನಾಂಕ;

(ಹೆಚ್) ಯಾವುದೇ ಇತರ ಸಂದರ್ಭದಲ್ಲಿ, ತೆರಿಗೆಯನ್ನು ಸಂದಾಯ ಮಾಡಿದ ದಿನಾಂಕ.

55. ಕೆಲವೊಂದು ಪ್ರಕರಣಗಳಲ್ಲಿ ಮರುಪಾವತಿ.– ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಸರ್ಕಾರವು, ಅಧಿಸೂಚನೆಯ ಮೂಲಕ, ಸಂಯುಕ್ತ ರಾಷ್ಟ್ರ ಸಂಘದ ಯಾವುದೇ ವಿಶೇಷ ಏಜೆನ್ಸಿ ಅಥವಾ ಸಂಯುಕ್ತ ರಾಷ್ಟ್ರ (ವಿಶೇಷ ಸ್ಥಾನಮಾನ ಮತ್ತು ಉನ್ಮುಕ್ತಿಗಳು) ಅಧಿನಿಯಮ, 1947ರ (1947ರ ಕೇಂದ್ರ ಅಧಿನಿಯಮ 46) ಅಡಿಯಲ್ಲಿ ಅಧಿಸೂಚಿಸಲಾದ ಯಾವುದೇ ಬಹುಪಕ್ಷೀಯ ಹಣಕಾಸಿನ ಸಂಸ್ಥೆ ಮತ್ತು ಸಂಘಟನೆ, ವಿದೇಶಗಳ ಕಾನ್ಸುಲೇಟ್ ಅಥವಾ ರಾಯಭಾರಿ ಕಛೇರಿ, ಅಥವಾ ಈ ಸಂಬಂಧದಲ್ಲಿ

ನಿಗದಿಗೊಳಿಸಬಹುದಾದ ಯಾವುದೇ ಇತರ ವ್ಯಕ್ತಿ ಅಥವಾ ವ್ಯಕ್ತಿಗಳ ವರ್ಗವನ್ನು, ನಿಯಮಿಸಬಹುದಾದ ಅಂಥ ನಿಬಂಧನೆಗಳು ಮತ್ತು ನಿರ್ಬಂಧಗಳಿಗೆ ಒಳಪಟ್ಟು, ಅವರಿಂದ ಸ್ವೀಕರಿಸಿದ ಅಧಿಸೂಚಿತ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಗಳ ಮೇಲೆ ಸಂದಾಯ ಮಾಡಿದ ತೆರಿಗೆಯ ಮರುಪಾವತಿಯನ್ನು ಕ್ಲೇಮು ಮಾಡಲು ಹಕ್ಕುಳ್ಳವರಾಗಿರತಕ್ಕವರು ಎಂದು ನಿರ್ದಿಷ್ಟಪಡಿಸಬಹುದು.

56. ವಿಳಂಬ ಮರುಪಾವತಿಗಳ ಮೇಲಿನ ಬಡ್ಡಿ.– ಪ್ರಕರಣ 54ರ ಉಪ–ಪ್ರಕರಣ (5)ರ ಅಡಿಯಲ್ಲಿ ಯಾವುದೇ ಅರ್ಜಿದಾರನಿಗೆ ಮರುಪಾವತಿ ಮಾಡಲು ಆದೇಶಿಸಿದ ಯಾವುದೇ ತೆರಿಗೆಯನ್ನು, ಆ ಪ್ರಕರಣದ ಉಪಪ್ರಕರಣ (1)ರ ಅಡಿಯಲ್ಲಿ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಅರವತ್ತು ದಿನಗಳ ಒಳಗಾಗಿ ಮರುಪಾವತಿ ಮಾಡಿರದಿದ್ದರೆ, ಸದರಿ ಉಪಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಅರವತ್ತು ದಿನಗಳು ಕೊನೆಗೊಂಡ ನಂತರದ ನಿಕಟ ದಿನಾಂಕದಿಂದ ಅಂಥ ತೆರಿಗೆಯ ಮರುಪಾವತಿಯಾಗುವವರೆಗೂ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಸರ್ಕಾರವು ಹೊರಡಿಸಿದ ಅಧಿಸೂಚನೆಯಲ್ಲಿ ನಿಗದಿಗೊಳಿಸಬಹುದಾದ ಶೇಕಡ ಆರರಷ್ಟನ್ನು ಮೀರದ, ಅಂಥ ದರದಲ್ಲಿನ ಬಡ್ಡಿಯು ಅಂಥ ಮರುಪಾವತಿಗೆ ಸಂಬಂಧಿಸಿದಂತೆ ಸಂದಾಯವಾಗಬೇಕಿರತಕ್ಕದ್ದು:

ಪರಂತು, ಒಂದು ನ್ಯಾಯನಿರ್ಣಯ ಪ್ರಾಧಿಕಾರ ಅಥವಾ ಅಪೀಲು ಪ್ರಾಧಿಕಾರ ಅಥವಾ ಅಪೀಲು ನ್ಯಾಯಾಧಿಕರಣ ಅಥವಾ ನ್ಯಾಯಾಲಯದಿಂದ ಹೊರಡಿಸಿದ ಆದೇಶವು, ನಿರ್ಣಾಯಕತೆಯನ್ನು ಪಡೆದು ಅದರಿಂದ ಮರುಪಾವತಿಯ ಯಾವುದೇ ಕ್ಲೇಮು ಉದ್ಭವಿಸಿದ್ದು ಮತ್ತು ಅಂಥ ಆದೇಶದ ಪರಿಣಾಮವಾಗಿ ಸಲ್ಲಿಸಿದ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಅರವತ್ತು ದಿನಗಳ ಒಳಗಾಗಿ ಅದನ್ನು ಮರುಪಾವತಿ ಮಾಡಿರದಿದ್ದರೆ, ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಅರವತ್ತು ದಿನಗಳು ಕೊನೆಗೊಂಡ ನಂತರದ ನಿಕಟ ದಿನಾಂಕದಿಂದ ಅಂಥ ತೆರಿಗೆಯ ಮರುಪಾವತಿಯ ದಿನಾಂಕದವರೆಗೆ ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಸರ್ಕಾರದಿಂದ ಹೊರಡಿಸಿದ ಅಧಿಸೂಚನೆಯಲ್ಲಿ ನಿಗದಿಗೊಳಿಸಬಹುದಾದ ಶೇಕಡ ಒಂಬತ್ತರಷ್ಟನ್ನು ಮೀರದ, ಅಂಥ ದರದಲ್ಲಿನ ಬಡ್ಡಿಯು ಅಂಥ ಮರುಪಾವತಿಗೆ ಸಂಬಂಧಿಸಿದಂತೆ ಸಂದಾಯವಾಗಬೇಕಿರತಕ್ಕದ್ದು.

ವಿವರಣೆ:– ಈ ಪ್ರಕರಣದ ಉದ್ದೇಶಗಳಿಗಾಗಿ, ಪ್ರಕರಣ 54ರ ಉಪಪ್ರಕರಣ (5)ರ ಅಡಿಯಲ್ಲಿನ ಯುಕ್ತ ಅಧಿಕಾರಿಯ ಆದೇಶದ ವಿರುದ್ಧ, ಒಂದು ಅಪೀಲು ಪ್ರಾಧಿಕಾರ, ಅಪೀಲು ನ್ಯಾಯಾಧಿಕರಣ ಅಥವಾ ಯಾವುದೇ ನ್ಯಾಯಾಲಯದಿಂದ ಮರುಪಾವತಿಯ ಆದೇಶವನ್ನು ಮಾಡಿದ್ದಲ್ಲಿ, ಒಂದು ಅಪೀಲು ಪ್ರಾಧಿಕಾರ, ಅಪೀಲು ನ್ಯಾಯಾಧಿಕರಣ ಅಥವಾ ಯಾವುದೇ ನ್ಯಾಯಾಲಯದಿಂದ ಹೊರಡಿಸಿದ ಆದೇಶವು, ಈ ಪ್ರಕರಣದ ಉದ್ದೇಶಕ್ಕಾಗಿ ಸದರಿ ಉಪಪ್ರಕರಣ (5)ರ ಅಡಿಯಲ್ಲಿ ಹೊರಡಿಸಿದ ಆದೇಶ ಎಂದು ಪರಿಭಾವಿಸತಕ್ಕದ್ದು.

57. ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿ.– (1) ಸರ್ಕಾರವು ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿ ಎಂದು ಕರೆಯಲಾಗುವ ಒಂದು ನಿಧಿಯನ್ನು ಸ್ಥಾಪಿಸತಕ್ಕದ್ದು ಮತ್ತು,–

(ಎ) ಪ್ರಕರಣ 54ರ ಉಪಪ್ರಕರಣ (5)ರಲ್ಲಿ ಉಲ್ಲೇಖಿಸಲಾದ ತೆರಿಗೆಯ ಮೊತ್ತವನ್ನು;

(ಬಿ) ನಿಧಿಗೆ ಜಮೆಗೊಳಿಸಿದ ಮೊತ್ತದ ಹೂಡಿಕೆಯಿಂದ ಗಳಿಸಿದ ಯಾವುದೇ ಆದಾಯ; ಮತ್ತು

(ಸಿ) ಇದರಿಂದ ಸ್ವೀಕರಿಸಿದ ಯಾವುದೇ ಇತರ ಹಣಗಳನ್ನು,

– ನಿಯಮಿಸಬಹುದಾದ ಅಂಥ ವಿಧಾನದಲ್ಲಿ ನಿಧಿಗೆ ಜಮೆ ಮಾಡತಕ್ಕದ್ದು.

58. ನಿಧಿಯ ಬಳಕೆ.– (1) ಈ ನಿಧಿಗೆ ಜಮೆಗೊಳ್ಳುವ ಯಾವುದೇ ಮೊತ್ತಗಳನ್ನು, ಸರ್ಕಾರವು ಗ್ರಾಹಕರ ಕ್ಷೇಮಾಭಿವೃದ್ಧಿಗಾಗಿ, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಬಳಸತಕ್ಕದ್ದು.

(2) ಭಾರತದ ಕಂಟ್ರೋಲರ್ ಮತ್ತು ಆಡಿಟರ್–ಜನರಲ್‌ರವರೊಡನೆ ಸಮಾಲೋಚನೆಯನ್ನು ನಡೆಸಿ ನಿಯಮಿಸಿಬಹುದಾದ ಅಂಥ ನಮೂನೆಯಲ್ಲಿ ನಿಧಿಗೆ ಸಂಬಂಧಿಸಿದ ಸೂಕ್ತ ಮತ್ತು ಪ್ರತ್ಯೇಕ ಲೆಕ್ಕಪತ್ರ ಮತ್ತು ಸಂಬಂಧಿಸಿದ ಇತರ ದಾಖಲೆಗಳನ್ನು ಸರ್ಕಾರ ಅಥವಾ ಅದರಿಂದ ನಿರ್ದಿಷ್ಟಪಡಿಸಿದ ಪ್ರಾಧಿಕಾರವು ನಿರ್ವಹಿಸತಕ್ಕದ್ದು.

ಅಧ್ಯಾಯ–XII
ಕರನಿರ್ಧರಣೆ

59. ಸ್ವಯಂ–ಕರನಿರ್ಧರಣೆ.– ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆಗಳನ್ನು ಸ್ವಯಂ–ನಿರ್ಧರಣೆ ಮಾಡತಕ್ಕದ್ದು ಮತ್ತು ಪ್ರತಿಯೊಂದು ತೆರಿಗೆ ಅವಧಿಗೆ ಪ್ರಕರಣ 39ರ ಅಡಿಯಲ್ಲಿ ನಿರ್ದಿಷ್ಟಪಡಿಸಿದಂತೆ ಒಂದು ರಿಟರ್ನನ್ನು ಒದಗಿಸತಕ್ಕದ್ದು.

60. ತಾತ್ಕಾಲಿಕ ಕರನಿರ್ಧರಣೆ.– (1) ಉಪಪ್ರಕರಣ (2)ರ ಉಪಬಂಧಗಳಿಗೆ ಒಳಪಟ್ಟು, ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಮೌಲ್ಯವನ್ನು ನಿರ್ಧರಿಸುವುದಕ್ಕೆ ಅಥವಾ ಅವುಗಳಿಗೆ ಅನ್ವಯವಾಗುವ ತೆರಿಗೆ ದರವನ್ನು ನಿರ್ಧರಿಸುವುದಕ್ಕೆ ತೆರಿಗೆದಾಯಕ ವ್ಯಕ್ತಿಗೆ ಸಾಧ್ಯವಾಗದಿದ್ದಲ್ಲಿ, ಅವನು ಕಾರಣಗಳನ್ನು ಲಿಖಿತ ರೂಪದಲ್ಲಿ ನೀಡಿ ತಾತ್ಕಾಲಿಕ ಆಧಾರದ ಮೇಲೆ ತೆರಿಗೆಯನ್ನು

ಸಂದಾಯ ಮಾಡುವುದಕ್ಕಾಗಿ ಯುಕ್ತ ಅಧಿಕಾರಿಯನ್ನು ಕೋರಬಹುದು ಮತ್ತು ಯುಕ್ತ ಅಧಿಕಾರಿಯು, ಅಂಥ ಕೋರಿಕೆಯನ್ನು ಸ್ವೀಕರಿಸಿದ ದಿನಾಂಕದಿಂದ ತೊಂಬತ್ತು ದಿನಗಳನ್ನು ಮೀರದ ಅವಧಿಯೊಳಗಾಗಿ ಆತನು ನಿರ್ದಿಷ್ಟಪಡಿಸಬಹುದಾದ ಅಂಥ ದರದಲ್ಲಿ ಅಥವಾ ಅಂಥ ಮೌಲ್ಯದ ಮೇಲೆ ತಾತ್ಕಾಲಿಕ ಆಧಾರದ ಮೇಲೆ ತೆರಿಗೆ ಸಂದಾಯವನ್ನು ಅನುಮತಿಸುವ ಒಂದು ಆದೇಶವನ್ನು ಹೊರಡಿಸತಕ್ಕದ್ದು.

(2) ಯುಕ್ತ ಅಧಿಕಾರಿಯು ಸೂಕ್ತವೆಂದು ಭಾವಿಸಬಹುದಾದ ಅಂಥ ಜಾಮೀನು ಅಥವಾ ಭದ್ರತೆಯೊಂದಿಗೆ, ತೆರಿಗೆದಾಯಕ ವ್ಯಕ್ತಿಯು, ಈ ಸಂಬಂಧದಲ್ಲಿ ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ಬಾಂಡ್‌ಅನ್ನು ಬರೆದುಕೊಟ್ಟರೆ, ಅಂತಿಮವಾಗಿ ನಿರ್ಧರಿಸಬಹುದಾದ ತೆರಿಗೆಯ ಮೊತ್ತ ಹಾಗೂ ತಾತ್ಕಾಲಿಕವಾಗಿ ನಿರ್ಧರಿಸಿದ ತೆರಿಗೆಯ ಮೊತ್ತದ ನಡುವಿನ ವ್ಯತ್ಯಾಸವನ್ನು ಸಂದಾಯ ಮಾಡುವುದಕ್ಕಾಗಿ ತೆರಿಗೆದಾಯಕ ವ್ಯಕ್ತಿಯನ್ನು ಬದ್ಧಗೊಳಿಸಿ ತಾತ್ಕಾಲಿಕ ಆಧಾರದ ಮೇಲೆ ತೆರಿಗೆ ಸಂದಾಯವನ್ನು ಮಾಡಲು ಅವಕಾಶ ನೀಡಬಹುದು.

(3) ಯುಕ್ತ ಅಧಿಕಾರಿಯು, ಉಪಪ್ರಕರಣ (1)ರ ಅಡಿಯಲ್ಲಿ ಹೊರಡಿಸಿದ ಆದೇಶವನ್ನು ತಿಳಿಸಿದ ದಿನಾಂಕದಿಂದ ಆರು ತಿಂಗಳನ್ನು ಮೀರದ ಅವಧಿಯ ಒಳಗಾಗಿ, ಕರನಿರ್ಧರಣೆಯನ್ನು ಅಂತಿಮಗೊಳಿಸುವುದಕ್ಕಾಗಿ ಅಗತ್ಯವಿರಬಹುದಾದ ಅಂಥ ಮಾಹಿತಿಯನ್ನು ಗಣನೆಗೆ ತೆಗೆದುಕೊಂಡ ನಂತರ ಅಂತಿಮ ಆದೇಶವನ್ನು ಹೊರಡಿಸತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯನ್ನು, ತೋರಿಸಲಾದ ಸಾಕಷ್ಟು ಕಾರಣದ ಮೇಲೆ ಮತ್ತು ಲಿಖಿತವಾಗಿ ದಾಖಲಿಸಬಹುದಾದ ಕಾರಣಗಳಿಗಾಗಿ, ಜಂಟಿ ಆಯುಕ್ತ ಅಥವಾ ಅಪರ ಆಯುಕ್ತರು ಆರು ತಿಂಗಳು ಮೀರದಂತೆ ಮುಂದಿನ ಅವಧಿಗೆ ಮತ್ತು ಆಯುಕ್ತರು ನಾಲ್ಕು ವರ್ಷಗಳನ್ನು ಮೀರದ ಅಂಥ ಮುಂದಿನ ಅವಧಿಗೆ ವಿಸ್ತರಿಸಬಹುದು.

(4) ನೋಂದಾಯಿತ ವ್ಯಕ್ತಿಯು ತಾತ್ಕಾಲಿಕ ಕರನಿರ್ಧರಣೆಯ ಅಡಿಯಲ್ಲಿ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಯ ಮೇಲೆ ಸಂದಾಯ ಮಾಡಬೇಕಾದ, ಆದರೆ ಪ್ರಕರಣ 39ರ ಉಪಪ್ರಕರಣ (7)ರ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಕೊನೆಯ ದಿನಾಂಕದ ಒಳಗಾಗಿ ಸಂದಾಯ ಮಾಡದಿರುವ ಯಾವುದೇ ತೆರಿಗೆಯ ಮೇಲೆ, ಸದರಿ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಗೆ ಸಂಬಂಧಿಸಿದಂತೆ ತೆರಿಗೆಯನ್ನು ಸಂದಾಯ ಮಾಡಬೇಕಾದ ಗಡುವು ದಿನಾಂಕದ ನಂತರದ ಮೊದಲ ದಿನದಿಂದ ಅಂಥ ಸಂದಾಯದ ವಾಸ್ತವಿಕ ದಿನಾಂಕದವರೆಗೆ, ಪ್ರಕರಣ 50ರ ಉಪಪ್ರಕರಣ (1)ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ದರದಲ್ಲಿ ಬಡ್ಡಿಯನ್ನು, ಸಂದಾಯ ಮಾಡುವುದಕ್ಕೆ ಬಾಧ್ಯನಿರತಕ್ಕದ್ದು, ಅಂಥ ಮೊತ್ತವು ಅಂತಿಮ ಕರನಿರ್ಧರಣೆಯ ಆದೇಶವನ್ನು ನೀಡುವ ಮೊದಲು ಅಥವಾ ನಂತರ ಸಂದಾಯವಾಗಿರಬಹದು.

(5) ಉಪಪ್ರಕರಣ (3)ರ ಅಡಿಯಲ್ಲಿನ ಅಂತಿಮ ಕರನಿರ್ಧರಣೆಯ ಆದೇಶದ ಪರಿಣಾಮವಾಗಿ ತೆರಿಗೆದಾಯಕ ವ್ಯಕ್ತಿಯು ಮರುಪಾವತಿಗೆ ಹಕ್ಕುಳ್ಳವನಾಗಿದ್ದಲ್ಲಿ, ಪ್ರಕರಣ 54ರ ಉಪಪ್ರಕರಣ (8)ರ ಉಪಬಂಧಗಳಿಗೆ ಒಳಪಟ್ಟು, ಅಂಥ ಮರುಪಾವತಿಯ ಮೇಲೆ ಬಡ್ಡಿಯನ್ನು, ಪ್ರಕರಣ 56ರಲ್ಲಿ ಉಪಬಂಧಿಸಿದಂತೆ, ಸಂದಾಯ ಮಾಡತಕ್ಕದ್ದು.

61. ರಿಟರ್ನಗಳ ಸೂಕ್ಷ್ಮ ಪರಿಶೀಲನೆ.– (1) ಯುಕ್ತ ಅಧಿಕಾರಿಯು ರಿಟರ್ನಿನ ಸರಿತನವನ್ನು ಪರಿಶೀಲಿಸುವುದಕ್ಕಾಗಿ, ನೋಂದಾಯಿತ ವ್ಯಕ್ತಿಯಿಂದ ಒದಗಿಸಿದ ರಿಟರ್ನನ್ನು ಮತ್ತು ಸಂಬಂಧಿಸಿದ ವಿವರಗಳನ್ನು ಸೂಕ್ಷ್ಮ ಪರಿಶೀಲನೆ ಮಾಡಬಹುದು ಮತ್ತು ಗಮನಿಸಿದ ನ್ಯೂನತೆಗಳು ಯಾವುದಾದರೂ ಇದ್ದಲ್ಲಿ, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಆತನಿಗೆ ತಿಳಿಸಬಹುದು ಮತ್ತು ಅದಕ್ಕೆ ಸಂಬಂಧಿಸಿದಂತೆ ಅವನ ವಿವರಣೆಯನ್ನು ಕೇಳಬಹುದು.

(2) ವಿವರಣೆಯು ಅಂಗೀಕಾರಾರ್ಹ ಎಂದು ಕಂಡುಬಂದ ಸಂದರ್ಭದಲ್ಲಿ, ಅದಕ್ಕನುಸಾರವಾಗಿ ನೋಂದಾಯಿತ ವ್ಯಕ್ತಿಗೆ ತಿಳಿಸತಕ್ಕದ್ದು ಮತ್ತು ಇದಕ್ಕೆ ಸಂಬಂಧಿಸಿದಂತೆ ಮುಂದಿನ ಕ್ರಮವನ್ನು ತೆಗೆದುಕೊಳ್ಳತಕ್ಕದ್ದಲ್ಲ.

(3) ಯುಕ್ತ ಅಧಿಕಾರಿಯಿಂದ ತಿಳಿಸಲಾದ ಮೂವತ್ತು ದಿನಗಳ ಅವಧಿಯ ಅಥವಾ ಆತನಿಂದ ಅನುಮತಿಸಬಹುದಾದ ಅಂಥ ಹೆಚ್ಚಿನ ಅವಧಿಯ ಒಳಗಾಗಿ ತೃಪ್ತಿದಾಯಕವಾದ ವಿವರಣೆಯನ್ನು ಒದಗಿಸಿಲ್ಲದ ಸಂದರ್ಭದಲ್ಲಿ ಅಥವಾ ನೋಂದಾಯಿತ ವ್ಯಕ್ತಿಯು ನ್ಯೂನತೆಗಳನ್ನು ಒಪ್ಪಿಕೊಂಡ ನಂತರ, ಆ ನ್ಯೂನತೆಯನ್ನು ಒಪ್ಪಿಕೊಂಡ ತಿಂಗಳಿನ ರಿಟರ್ನಿನಲ್ಲಿ ಸರಿಪಡಿಕೆಯ ಕ್ರಮವನ್ನು ತೆಗೆದುಕೊಳ್ಳಲು ವಿಫಲನಾದಲ್ಲಿ, ಯುಕ್ತ ಅಧಿಕಾರಿಯು ಪ್ರಕರಣ 65 ಅಥವಾ ಪ್ರಕರಣ 66 ಅಥವಾ ಪ್ರಕರಣ 67ರ ಅಡಿಯಲ್ಲಿರುವುಗಳನ್ನು ಒಳಗೊಂಡಂತೆ ಸೂಕ್ತ ಕ್ರಮಗಳನ್ನು ಪ್ರಾರಂಭಿಸಬಹುದು, ಅಥವಾ ಪ್ರಕರಣ 73 ಅಥವಾ ಪ್ರಕರಣ 74ರ ಅಡಿಯಲ್ಲಿ ತೆರಿಗೆ ಮತ್ತು ಇತರ ಬಾಕಿಗಳನ್ನು ನಿರ್ಧರಿಸಲು ಕ್ರಮ ಜರುಗಿಸಬಹುದು.

62. ರಿಟರ್ನಗಳನ್ನು ಸಲ್ಲಿಸದಿರುವವರ ಕರನಿರ್ಧರಣೆ.– (1) ಪ್ರಕರಣ 73 ಅಥವಾ ಪ್ರಕರಣ 74ರಲ್ಲಿ ಇದಕ್ಕೆ ವಿರುದ್ಧವಾಗಿ ಏನೇ ಒಳಗೊಂಡಿದ್ದರೂ, ಪ್ರಕರಣ 46 ಅಡಿಯಲ್ಲಿ ಒಂದು ಸೂಚನಾ ಪತ್ರವನ್ನು ನೀಡಿದ ನಂತರವೂ, ಒಬ್ಬ ನೋಂದಾಯಿತ ವ್ಯಕ್ತಿಯು, ಪ್ರಕರಣ 39 ಅಥವಾ ಪ್ರಕರಣ 45ರ ಅಡಿಯಲ್ಲಿ ರಿಟರ್ನನ್ನು ಒದಗಿಸಲು ವಿಫಲನಾದಲ್ಲಿ, ಯುಕ್ತ ಅಧಿಕಾರಿಯು, ಲಭ್ಯವಿರುವ ಹಾಗೂ ಆತನು ಕಲೆಹಾಕಿದ ಎಲ್ಲಾ ಸಂಬಂಧಿತ ಮಾಹಿತಿಗಳನ್ನು ಗಣನೆಗೆ ತೆಗೆದುಕೊಂಡು, ಅವನ ಅತ್ಯುತ್ತಮ ವಿವೇಚನಾ ನಿರ್ಣಯದ ಮೇರೆಗೆ ಸದರಿ ವ್ಯಕ್ತಿಯ ತೆರಿಗೆ ಬಾಧ್ಯತೆಯನ್ನು ನಿರ್ಧರಿಸಲು ಕ್ರಮ ಜರುಗಿಸಬಹುದು ಮತ್ತು ಸಂದಾಯ ಮಾಡದಿರುವ ತೆರಿಗೆಯು ಸಂಬಂಧಿಸಿರುವ ಹಣಕಾಸು ವರ್ಷಕ್ಕಾಗಿ ವಾರ್ಷಿಕ ವಿವರ ಪಟ್ಟಿಯನ್ನು ಒದಗಿಸುವುದಕ್ಕೆ ಪ್ರಕರಣ 44ರಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಐದು ವರ್ಷಗಳ ಅವಧಿಯೊಳಗಾಗಿ ಒಂದು ಕರನಿರ್ಧರಣಾ ಆದೇಶವನ್ನು ನೀಡುವುದು.

(2) ಉಪಪ್ರಕರಣ (1)ರ ಅಡಿಯಲ್ಲಿ ಕರನಿರ್ಧರಣಾ ಆದೇಶವನ್ನು ನೀಡಿದ ಮೂವತ್ತು ದಿನಗಳ ಒಳಗಾಗಿ ನೋಂದಾಯಿತ ವ್ಯಕ್ತಿಯು ಒಂದು ಸಿಂಧುವಾದ ರಿಟರ್ನನ್ನು ಒದಗಿಸಿದಲ್ಲಿ, ಸದರಿ ಕರನಿರ್ಧರಣಾ ಆದೇಶವನ್ನು ಹಿಂಪಡೆಯಲಾಗಿದೆ ಎಂದು ಪರಿಭಾವಿಸತಕ್ಕದ್ದು ಆದರೆ ಪ್ರಕರಣ 50ರ ಉಪ ಪ್ರಕರಣ (1)ರ ಅಡಿಯಲ್ಲಿ ಬಡ್ಡಿ ಸಂದಾಯದ ಅಥವಾ ಪ್ರಕರಣ 47ರ ಅಡಿಯಲ್ಲಿ ವಿಳಂಬ ಶುಲ್ಕ ಸಂದಾಯದ ಬಾಧ್ಯತೆಯು ಮುಂದುವರಿಯತಕ್ಕದ್ದು.

63. ಅನೋಂದಾಯಿತ ವ್ಯಕ್ತಿಗಳ ಕರನಿರ್ಧರಣೆ.– ಪ್ರಕರಣ 73 ಅಥವಾ ಪ್ರಕರಣ 74ರಲ್ಲಿ ಇದಕ್ಕೆ ವಿರುದ್ಧವಾಗಿ ಏನೇ ಒಳಗೊಂಡಿದ್ದರೂ ಸಹ, ಒಬ್ಬ ತೆರಿಗೆದಾಯಕ ವ್ಯಕ್ತಿಯು, ನೋಂದಣಿಯನ್ನು ಪಡೆಯಲು ಬಾಧ್ಯನಾಗಿದ್ದರೂ ಸಹ ಹಾಗೆ ಮಾಡಲು ವಿಫಲನಾಗಿದ್ದಲ್ಲಿ, ಅಥವಾ ಆತನ ನೋಂದಣಿಯು ಪ್ರಕರಣ 29ರ ಉಪಪ್ರಕರಣ (2)ರ ಅಡಿಯಲ್ಲಿ ರದ್ದುಗೊಂಡಿದ್ದು ಆದರೆ ತೆರಿಗೆ ಸಂದಾಯ ಮಾಡುವುದಕ್ಕೆ ಬಾಧ್ಯನಿದ್ದಲ್ಲಿ, ಯುಕ್ತ ಅಧಿಕಾರಿಯು, ಅವನ ಅತ್ಯುತ್ತಮ ವಿವೇಚನಾ ನಿರ್ಣಯದ ಮೇರೆಗೆ, ಅಂಥ ವ್ಯಕ್ತಿಯ ತೆರಿಗೆ ಬಾಧ್ಯತೆಯನ್ನು ಸಂಬಂಧಿಸಿದ ತೆರಿಗೆ ಅವಧಿಗಳಿಗೆ ನಿರ್ಧರಿಸಲು ಕ್ರಮ ಜರುಗಿಸಬಹುದು ಮತ್ತು ಸಂದಾಯ ಮಾಡದಿರುವ ತೆರಿಗೆಯು ಸಂಬಂಧಿಸಿರುವ ಹಣಕಾಸು ವರ್ಷಕ್ಕೆ ವಾರ್ಷಿಕ ವಿವರ ಪಟ್ಟಿಯನ್ನು ಒದಗಿಸುವುದಕ್ಕಾಗಿ ಪ್ರಕರಣ 44ರಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಐದು ವರ್ಷಗಳ ಅವಧಿಯೊಳಗಾಗಿ ಒಂದು ಕರನಿರ್ಧರಣಾ ಆದೇಶವನ್ನು ನೀಡುವುದು:

ಪರಂತು, ಆ ವ್ಯಕ್ತಿಗೆ ತನ್ನ ಅಹವಾಲುಗಳನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡಿದ ಹೊರತು ಅಂಥ ಕರನಿರ್ಧರಣಾ ಆದೇಶವನ್ನು ಹೊರಡಿಸತಕ್ಕದ್ದಲ್ಲ.

64. ಕೆಲವೊಂದು ವಿಶೇಷ ಪ್ರಕರಣಗಳಲ್ಲಿ ಕ್ಷಿಪ್ರ ಕರನಿರ್ಧರಣೆ.– (1) ಯುಕ್ತ ಅಧಿಕಾರಿಯು, ಆತನ ಗಮನಕ್ಕೆ ಬರಲಾಗಿರುವ ಒಬ್ಬ ತೆರಿಗೆದಾಯಕ ವ್ಯಕ್ತಿಯ ತೆರಿಗೆ ಬಾಧ್ಯತೆಯನ್ನು ತೋರಿಸುವ ಯಾವುದೇ ಪುರಾವೆಯ ಮೇಲೆ, ಅಪರ ಆಯುಕ್ತ ಅಥವಾ ಜಂಟಿ ಆಯುಕ್ತರ ಪೂರ್ವಾನುಮತಿಯೊಂದಿಗೆ, ಹಾಗೆ ಮಾಡುವುದರಲ್ಲಿನ ಯಾವುದೇ ವಿಳಂಬವು ರಾಜಸ್ವದ ಹಿತಾಸಕ್ತಿಯ ಮೇಲೆ ಪ್ರತಿಕೂಲ ಪರಿಣಾಮ ಬೀರಬಹುದು ಎನ್ನುವುದನ್ನು ನಂಬಲು ಅವನು ಸಾಕಷ್ಟು ಆಧಾರಗಳನ್ನು ಹೊಂದಿದ್ದರೆ, ರಾಜಸ್ವದ ಹಿತಾಸಕ್ತಿಯ ರಕ್ಷಣೆಗಾಗಿ ಅಂಥ ವ್ಯಕ್ತಿಯ ತೆರಿಗೆ ಬಾಧ್ಯತೆಯನ್ನು ನಿರ್ಧರಿಸಲು ಕ್ರಮ ಜರುಗಿಸಬಹುದು ಮತ್ತು ಒಂದು ಕರನಿರ್ಧರಣಾ ಆದೇಶವನ್ನು ನೀಡಬಹುದು:

ಪರಂತು, ಯಾರಿಗೆ ಬಾಧ್ಯತೆಯು ಸಂಬಂಧಪಟ್ಟಿರುವುದೋ ಆ ತೆರಿಗೆದಾಯಕ ವ್ಯಕ್ತಿಯನ್ನು ಖಚಿತ ಪಡಿಸಕೊಳ್ಳಲು ಆಗದಿದ್ದಲ್ಲಿ ಮತ್ತು ಅಂಥ ಬಾಧ್ಯತೆಯು ಸರಕುಗಳ ಪೂರೈಕೆಗೆ ಸಂಬಂಧಪಟ್ಟಲ್ಲಿ, ಅಂಥ ಸರಕುಗಳ ಉಸ್ತುವಾರಿಯನ್ನು ಹೊಂದಿದ ವ್ಯಕ್ತಿಯು, ಕರನಿರ್ಧರಣೆಗೆ ಬಾಧ್ಯನಾಗುವ ಮತ್ತು ಈ ಅಧಿನಿಯಮದ ಅಡಿಯಲ್ಲಿ ಬಾಕಿಯಿರುವ ತೆರಿಗೆ ಮತ್ತು ಇತರೆ ಮೊತ್ತವನ್ನು ಸಂದಾಯ ಮಾಡುವುದಕ್ಕೆ ಬಾಧ್ಯನಾಗಿರುವ ತೆರಿಗೆದಾಯಕ ವ್ಯಕ್ತಿ ಎಂದು ಪರಿಭಾವಿಸತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ಹೊರಡಿಸಿದ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ, ತೆರಿಗೆದಾಯಕ ವ್ಯಕ್ತಿಯು ಸಲ್ಲಿಸಿದ ಒಂದು ಅರ್ಜಿಯ ಮೇಲೆ, ಅಥವಾ ಅವರ ಸ್ವಪ್ರೇರಣೆಯಿಂದ ಅಪರ ಆಯುಕ್ತ ಅಥವಾ ಜಂಟಿ ಆಯುಕ್ತರು ಅಂಥ ಆದೇಶವು ತಪ್ಪಾದುದು ಎಂದು ಪರಿಗಣಿಸಿದಲ್ಲಿ, ಅವರು ಅಂಥ ಆದೇಶವನ್ನು ಹಿಂತೆಗೆದುಕೊಳ್ಳಬಹುದು ಮತ್ತು ಪ್ರಕರಣ 73 ಅಥವಾ ಪ್ರಕರಣ 74ರಲ್ಲಿ ಹೇಳಲಾದ ಕಾರ್ಯವಿಧಾನವನ್ನು ಅನುಸರಿಸುವುದು.

ಅಧ್ಯಾಯ–XIII
ಲೆಕ್ಕಪರಿಶೋಧನೆ

65. ತೆರಿಗೆ ಪ್ರಾಧಿಕಾರಗಳಿಂದ ಲೆಕ್ಕಪರಿಶೋಧನೆ.– (1) ಆಯುಕ್ತರು ಅಥವಾ ಅವರಿಂದ, ಸಾಮಾನ್ಯ ಅಥವಾ ಒಂದು ನಿರ್ದಿಷ್ಟ ಆದೇಶದ ಮೂಲಕ ಪ್ರಾಧಿಕೃತಗೊಂಡ ಯಾವೊಬ್ಬ ಅಧಿಕಾರಿಯು, ಯಾವೊಬ್ಬ ನೋಂದಾಯಿತ ವ್ಯಕ್ತಿಯ ಲೆಕ್ಕಪರಿಶೋಧನೆಯನ್ನು ನಿಯಮಿಸಬಹುದಾದ ಅಂಥ ಅವಧಿಗೆ, ಅಂಥ ಆವರ್ತನೆಯಲ್ಲಿ ಮತ್ತು ಅಂಥ ವಿಧಾನದಲ್ಲಿ ಕೈಗೊಳ್ಳಬಹುದು.

(2) ಉಪಪ್ರಕರಣ (1)ರಲ್ಲಿ ಉಲ್ಲೇಖಿಸಲಾದ ಅಧಿಕಾರಿಗಳು ತೆರಿಗೆದಾಯಕ ವ್ಯಕ್ತಿಯ ವ್ಯವಹಾರ ಸ್ಥಳದಲ್ಲಿ ಅಥವಾ ಅವರ ಕಛೇರಿಯಲ್ಲಿ ಲೆಕ್ಕಪರಿಶೋಧನೆಯನ್ನು ನಡೆಸಬಹುದು.

(3) ಲೆಕ್ಕಪರಿಶೋಧನೆಯನ್ನು ನಡೆಸುವುದಕ್ಕಿಂತ, ಹದಿನೈದು ಕೆಲಸದ ದಿನಗಳಿಗೆ ಕಡಿಮೆಯಿರದಂತೆ ಮುಂಚಿತವಾಗಿ, ಸೂಚನಾ ಪತ್ರದ ಮೂಲಕ, ನಿಯಮಿಸಲಾದ ವಿಧಾನದಲ್ಲಿ ನೋಂದಾಯಿತ ವ್ಯಕ್ತಿಗೆ ತಿಳಿಸತಕ್ಕದ್ದು.

(4) ಉಪಪ್ರಕರಣ (1)ರ ಅಡಿಯಲ್ಲಿ ಲೆಕ್ಕಪರಿಶೋಧನೆಯು, ಲೆಕ್ಕಪರಿಶೋಧನೆ ಪ್ರಾರಂಭಗೊಂಡ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಪೂರ್ಣಗೊಳ್ಳತಕ್ಕದ್ದು:

ಪರಂತು, ಆಯುಕ್ತರು ಅಂಥ ನೋಂದಾಯಿತ ವ್ಯಕ್ತಿಗೆ ಸಂಬಂಧಿಸಿದ ಲೆಕ್ಕಪರಿಶೋಧನೆಯು, ಲೆಕ್ಕಪರಿಶೋಧನೆ ಪ್ರಾರಂಭಗೊಂಡ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಪೂರ್ಣಗೊಳ್ಳುವುದಿಲ್ಲ ಎಂದು ಮನದಟ್ಟು ಮಾಡಿಕೊಂಡರೆ ಅವರು ಲಿಖಿತ ರೂಪದಲ್ಲಿ ದಾಖಲಿಸಬಹುದಾದ ಕಾರಣಗಳಿಗಾಗಿ, ಆ ಅವಧಿಯನ್ನು ಆರು ತಿಂಗಳುಗಳನ್ನು ಮೀರದ ಮುಂದಿನ ಅವಧಿಗೆ ವಿಸ್ತರಿಸಬಹುದು.

ವಿವರಣೆ:– ಈ ಉಪಪ್ರಕರಣದ ಉದ್ದೇಶಗಳಿಗಾಗಿ, "ಲೆಕ್ಕಪರಿಶೋಧನೆ ಪ್ರಾರಂಭ"ವನ್ನು, ತೆರಿಗೆ ಪ್ರಾಧಿಕಾರದಿಂದ ಕರೆ ಮಾಡಿದ ದಾಖಲೆಗಳು ಮತ್ತು ಇತರ ದಸ್ತಾವೇಜುಗಳನ್ನು ತೆರಿಗೆದಾಯಕ ವ್ಯಕ್ತಿಯು ಹಾಜರುಪಡಿಸಿದ ಅಥವಾ ವ್ಯವಹಾರದ ಸ್ಥಳದಲ್ಲಿ ಲೆಕ್ಕಪರಿಶೋಧನೆಯನ್ನು ವಾಸ್ತವಿಕವಾಗಿ ಏರ್ಪಡಿಸಿದ ದಿನಾಂಕ ಇವುಗಳಲ್ಲಿ ಯಾವುದು ತರುವಾಯವೋ ಅದು ಎಂದು ಅರ್ಥೈಸತಕ್ಕದ್ದು.

(5) ಲೆಕ್ಕಪರಿಶೋಧನೆಯ ಕ್ರಮದಲ್ಲಿ, ಪ್ರಾಧಿಕೃತಗೊಂಡ ಅಧಿಕಾರಿಯು,–

(i) ಅವನಿಗೆ ಲೆಕ್ಕಪುಸ್ತಕಗಳನ್ನು ಅಥವಾ ಇತರ ದಸ್ತಾವೇಜುಗಳನ್ನು ಪರಿಶೀಲಿಸುವುದಕ್ಕಾಗಿ ಅವಶ್ಯಕವಾದ ಸೌಲಭ್ಯಗಳನ್ನು ಆತನಿಗೆ ಒದಗಿಸುವಂತೆ;

(ii) ಆತನಿಗೆ ಅಗತ್ಯವಿರಬಹುದಾದ ಅಂಥ ಮಾಹಿತಿಯನ್ನು ಒದಗಿಸುವಂತೆ ಮತ್ತು ಲೆಕ್ಕಪರಿಶೋಧನೆಯನ್ನು ಸಕಾಲದಲ್ಲಿ ಪೂರ್ಣಗೊಳಿಸುವಿಕೆಗಾಗಿ ನೆರವು ನೀಡುವಂತೆ,

–ನೋಂದಾಯಿತ ವ್ಯಕ್ತಿಯನ್ನು ಅಗತ್ಯಪಡಿಸಬಹುದು.

(6) ಲೆಕ್ಕಪರಿಶೋಧನೆಯು ಮುಗಿದ ಮೇಲೆ, ಯುಕ್ತ ಅಧಿಕಾರಿಯು, ಮೂವತ್ತು ದಿನಗಳ ಒಳಗಾಗಿ, ಯಾರ ದಾಖಲೆಗಳನ್ನು ಲೆಕ್ಕಪರಿಶೋಧಿಸಲಾಗಿದೆಯೋ ಆ ನೋಂದಾಯಿತ ವ್ಯಕ್ತಿಗೆ, ತೀರ್ಮಾನಗಳ, ಆತನ ಹಕ್ಕುಗಳು ಮತ್ತು ಹೊಣೆಗಾರಿಕೆಗಳ ಹಾಗೂ ಅಂಥ ತೀರ್ಮಾನಗಳ ಕಾರಣಗಳ ಬಗ್ಗೆ ತಿಳಿಸತಕ್ಕದ್ದು.

(7) ಉಪಪ್ರಕರಣ (1)ರಲ್ಲಿ ನಡೆಸಿದ ಲೆಕ್ಕಪರಿಶೋಧನೆಯು, ಸಂದಾಯ ಮಾಡದಿರುವ ಅಥವಾ ಕಡಿಮೆ ಸಂದಾಯ ಮಾಡಿದ ತೆರಿಗೆ ಅಥವಾ ತಪ್ಪಿನಿಂದ ಮಾಡಿದ ಮರುಪಾವತಿ, ಅಥವಾ ತಪ್ಪಾಗಿ ಉಪಯೋಗಿಸಿದ ಅಥವಾ ಬಳಸಿದ ಹೂಡುವಳಿ ತೆರಿಗೆಯ ಜಮೆಯನ್ನು ಪತ್ತೆ ಮಾಡುವುದರೊಂದಿಗೆ ಪರಿಣಮಿಸಿದಲ್ಲಿ, ಯುಕ್ತ ಅಧಿಕಾರಿಯು ಪ್ರಕರಣ 73 ಅಥವಾ ಪ್ರಕರಣ 74ರ ಅಡಿಯಲ್ಲಿ ಕ್ರಮವನ್ನು ಪ್ರಾರಂಭಿಸಬಹುದು.

66. ವಿಶೇಷ ಲೆಕ್ಕಪರಿಶೋಧನೆ.– (1) ಆತನ ಮುಂದಿರುವ ಸೂಕ್ಷ್ಮ ಪರಿಶೀಲನೆ, ವಿಚಾರಣೆ, ತನಿಖೆ ಅಥವಾ ಯಾವುದೇ ಇತರ ನಡಾವಳಿಗಳ ಯಾವುದೇ ಹಂತದಲ್ಲಿ, ಸಹಾಯಕ ಆಯುಕ್ತರ ಶ್ರೇಣಿಗಿಂತ ಕಡಿಮೆ ಇಲ್ಲದ ಯಾವುದೇ ಅಧಿಕಾರಿಯು, ಪ್ರಕರಣದ ಸ್ವರೂಪ ಮತ್ತು ಸಂಕೀರ್ಣತೆಯನ್ನು ಹಾಗೂ ರಾಜಸ್ವದ ಹಿತಾಸಕ್ತಿಯನ್ನು ಗಮನದಲ್ಲಿ ಇಟ್ಟುಕೊಂಡು, ಮೌಲ್ಯವನ್ನು ಸರಿಯಾಗಿ ಘೋಷಿಸಿಸಲಾಗಿಲ್ಲ ಅಥವಾ ಉಪಯೋಗಿಸಿದ ಜಮೆಯು ಸಹಜ ಮಿತಿಗಳ ಒಳಗಿಲ್ಲ ಎನ್ನುವ ಅಭಿಪ್ರಾಯವನ್ನು ಹೊಂದಿದ್ದರೆ, ಆತನು, ಆಯುಕ್ತರ ಪೂರ್ವಾನುಮೋದನೆಯೊಂದಿಗೆ, ಅಂಥ ನೋಂದಾಯಿತ ವ್ಯಕ್ತಿಯನ್ನು, ಲೆಕ್ಕಪುಸ್ತಕಗಳನ್ನು ಒಳಗೊಂಡಂತೆ ಆತನ ದಾಖಲೆಗಳನ್ನು ಆಯುಕ್ತರಿಂದ ನಾಮ ನಿರ್ದೇಶಿತಗೊಳ್ಳಬಹುದಾದ ಒಬ್ಬ ಚಾರ್ಟರ್ಡ್ ಅಕೌಂಟೆಂಟ್ ಅಥವಾ ಒಬ್ಬ ಕಾಸ್ಟ್ ಅಕೌಂಟೆಂಟ್‌ನಿಂದ ಪರೀಕ್ಷಿಸಿಕೊಳ್ಳುವಂತೆ ಮತ್ತು ಲೆಕ್ಕಪರಿಶೋಧನೆ ಮಾಡಿಸಿಕೊಳ್ಳುವಂತೆ ಲಿಖಿತವಾಗಿ ತಿಳಿಸುವುದರ ಮೂಲಕ ನಿರ್ದೇಶಿಸಬಹುದು.

(2) ಹಾಗೆ ನಾಮ ನಿರ್ದೇಶಿತಗೊಂಡ ಒಬ್ಬ ಚಾರ್ಟರ್ಡ್ ಅಕೌಂಟೆಂಟ್ ಅಥವಾ ಕಾಸ್ಟ್ ಅಕೌಂಟೆಂಟ್, ತೊಂಬತ್ತು ದಿನಗಳ ಅವಧಿಯ ಒಳಗಾಗಿ, ಆತನಿಂದ ಯುಕ್ತವಾಗಿ ಸಹಿಮಾಡಿದ ಮತ್ತು ಪ್ರಮಾಣೀಕರಿಸಿದ ಅಂಥ ಲೆಕ್ಕಪರಿಶೋಧನೆಯ ಒಂದು ವರದಿಯನ್ನು, ನಿರ್ದಿಷ್ಟಪಡಿಸಬಹುದಾದ ಅಂಥ ಇತರ ವಿವರಗಳನ್ನು ಅದರಲ್ಲಿ ನಮೂದಿಸಿ ಸದರಿ ಸಹಾಯಕ ಆಯುಕ್ತನಿಗೆ ಸಲ್ಲಿಸತಕ್ಕದ್ದು:

ಪರಂತು, ಸಹಾಯಕ ಆಯುಕ್ತನು, ಆತನಿಗೆ ಈ ಸಂಬಂಧದಲ್ಲಿ ತೆರಿಗೆದಾಯಕ ವ್ಯಕ್ತಿಯಿಂದ ಅಥವಾ ಚಾರ್ಟರ್ಡ್ ಅಕೌಂಟೆಂಟ್ ಅಥವಾ ಕಾಸ್ಟ್ ಅಕೌಂಟೆಂಟ್‌ನ ಮೂಲಕ ಸಲ್ಲಿಸಲಾದ ಅರ್ಜಿಯ ಮೇರೆಗೆ ಅಥವಾ ಯಾವುದೇ ಪ್ರಮುಖ ಮತ್ತು ಸಾಕಷ್ಟು ಕಾರಣಗಳಿಗಾಗಿ, ಸದರಿ ಅವಧಿಯನ್ನು ಮುಂದಿನ ತೊಂಭತ್ತು ದಿನಗಳವರೆಗೆ ವಿಸ್ತರಿಸಬಹುದು.

(3) ನೋಂದಾಯಿತ ವ್ಯಕ್ತಿಯ ಲೆಕ್ಕಪುಸ್ತಕಗಳು, ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ಇತರ ಉಪಬಂಧಗಳ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಅಡಿಯಲ್ಲಿ ಲೆಕ್ಕಪರಿಶೋಧನೆಗೊಂಡಿದ್ದರೂ ಸಹ, ಉಪಪ್ರಕರಣ (1)ರ ಉಪಬಂಧಗಳು ಪರಿಣಾಮವನ್ನು ಹೊಂದಿರತಕ್ಕದ್ದು.

(4) ಉಪಪ್ರಕರಣ (1)ರ ಅಡಿಯಲ್ಲಿನ ವಿಶೇಷ ಲೆಕ್ಕಪರಿಶೋಧನೆಯ ಆಧಾರದಲ್ಲಿ ಕಲೆಹಾಕಲಾದ ಯಾವುದೇ ಮಾಹಿತಿಯನ್ನು, ಈ ಅಧಿನಿಯಮದ ಹಾಗೂ ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿನ ಆತನ ವಿರುದ್ಧವಾದ ಯಾವುದೇ ನಡಾವಳಿಗಳಲ್ಲಿ ಬಳಸುವುದಕ್ಕೆ ಮಾಡಿರುವ ಪ್ರಸ್ತಾವನೆಗೆ ಸಂಬಂಧಿಸಿದಂತೆ ನೋಂದಾಯಿತ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡತಕ್ಕದ್ದು.

(5) ಅಂಥ ಚಾರ್ಟರ್ಡ್ ಅಕೌಂಟೆಂಟ್ ಅಥವಾ ಕಾಸ್ಟ್ ಅಕೌಂಟೆಂಟ್‌ನ ಪರಿಶ್ರಮಧನವನ್ನು ಒಳಗೊಂಡಂತೆ, ಉಪಪ್ರಕರಣ (1)ರ ಅಡಿಯಲ್ಲಿನ ದಾಖಲೆಗಳ ಪರೀಕ್ಷೆ ಮತ್ತು ಲೆಕ್ಕಪರಿಶೋಧನೆಯ ವೆಚ್ಚಗಳು ಆಯುಕ್ತರಿಂದ ನಿರ್ಧರಣೆಯಾಗತಕ್ಕದ್ದು ಮತ್ತು ಸಂದಾಯವಾಗತಕ್ಕದ್ದು ಹಾಗೂ ಅಂಥ ನಿರ್ಧರಣೆಯು ಅಂತಿಮವಾಗಿರತಕ್ಕದ್ದು.

(6) ಉಪಪ್ರಕರಣ (1)ರ ಅಡಿಯಲ್ಲಿ ನಡೆಸಿದ ವಿಶೇಷ ಲೆಕ್ಕಪರಿಶೋಧನೆಯು, ಸಂದಾಯ ಮಾಡಿಲ್ಲದ ಅಥವಾ ಕಡಿಮೆ ಸಂದಾಯ ಮಾಡಿದ ತೆರಿಗೆ ಅಥವಾ ತಪ್ಪಿನಿಂದ ಮಾಡಿದ ಮರುಪಾವತಿ, ಅಥವಾ ತಪ್ಪಾಗಿ ಉಪಯೋಗಿಸಿದ ಅಥವಾ ಬಳಸಿದ ಹೂಡುವಳಿ ತೆರಿಗೆ ಜಮೆಯನ್ನು ಪತ್ತೆ ಮಾಡುವುದರೊಂದಿಗೆ ಪರಿಣಮಿಸಿದಲ್ಲಿ, ಯುಕ್ತ ಅಧಿಕಾರಿಯು ಪ್ರಕರಣ 73 ಅಥವಾ ಪ್ರಕರಣ 74ರ ಅಡಿಯಲ್ಲಿ ಕ್ರಮವನ್ನು ಪ್ರಾರಂಭಿಸಬಹುದು.

ಅಧ್ಯಾಯ–XIV
ತಪಾಸಣೆ, ಶೋಧನೆ, ವಶಕ್ಕೆ ತೆಗೆದುಕೊಳ್ಳುವುದು ಮತ್ತು ಬಂಧನ

67. ತಪಾಸಣೆ, ಶೋಧನೆ ಮತ್ತು ವಶಕ್ಕೆ ತೆಗೆದುಕೊಳ್ಳುವುದರ ಅಧಿಕಾರ.– (1) ಜಂಟಿ ಆಯುಕ್ತರ ಶ್ರೇಣಿಗಿಂತ ಕಡಿಮೆಯಿಲ್ಲದ ಯುಕ್ತ ಅಧಿಕಾರಿಯು,–

(ಎ) ಒಬ್ಬ ತೆರಿಗೆದಾಯಕ ವ್ಯಕ್ತಿಯು, ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಗೆ ಸಂಬಂಧಿಸಿದ ಯಾವುದೇ ವಹಿವಾಟನ್ನು ಅಥವಾ ವಶದಲ್ಲಿರುವ ಸರಕುಗಳ ದಾಸ್ತಾನನ್ನು ಬಚ್ಚಿಟ್ಟಿದ್ದಾನೆ ಅಥವಾ ಈ ಅಧಿನಿಯಮದ ಅಡಿಯಲ್ಲಿ ತನ್ನ ಹಕ್ಕಿನಲ್ಲಿ ಹೊಂದಿರುವುದಕ್ಕಿಂತ ಅಧಿಕವಾಗಿ ಹೂಡುವಳಿ ತೆರಿಗೆ ಜಮೆಯನ್ನು ಕ್ಲೇಮು ಮಾಡಿದ್ದಾನೆ ಅಥವಾ ಈ ಅಧಿನಿಯಮದ ಅಡಿಯಲ್ಲಿನ ತೆರಿಗೆಯನ್ನು ತಪ್ಪಿಸುವುದಕ್ಕಾಗಿ ಈ ಅಧಿನಿಯಮದ ಯಾವುದೇ ಉಪಬಂಧಗಳ ಅಥವಾ ಇದರ ಅಡಿಯಲ್ಲಿ ಮಾಡಲಾದ ನಿಯಮಗಳ ಉಲ್ಲಂಘನೆಯಲ್ಲಿ ತೊಡಗಿದ್ದಾನೆ; ಅಥವಾ

(ಬಿ) ಸರಕುಗಳ ಸಾಗಾಣಿಕೆಯ ವ್ಯವಹಾರದಲ್ಲಿ ತೊಡಗಿರುವ ಯಾವುದೇ ವ್ಯಕ್ತಿ ಅಥವಾ ಒಂದು ಉಗ್ರಾಣ ಅಥವಾ ಒಂದು ಗೋದಾಮು ಅಥವಾ ಯಾವುದೇ ಇತರ ಸ್ಥಳದ ಒಬ್ಬ ಮಾಲೀಕ ಅಥವಾ ನಿರ್ವಾಹಕ, ತೆರಿಗೆಯಿಂದ ತಪ್ಪಿಸಿಕೊಂಡಿರುವ ಸರಕುಗಳನ್ನು ಇಟ್ಟುಕೊಂಡಿದ್ದಾನೆ ಅಥವಾ ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆಯ ಸಂಭವನೀಯ ತಪ್ಪಿಸುವಿಕೆಗೆ ಕಾರಣವಾಗುವ ಅಂಥ ವಿಧಾನದಲ್ಲಿ ಆತನ ಲೆಕ್ಕಪುಸ್ತಕಗಳನ್ನು ಅಥವಾ ಸರಕುಗಳನ್ನು ಇಟ್ಟಿದ್ದಾನೆ,

–ಎಂದು ನಂಬಲು ಕಾರಣಗಳನ್ನು ಹೊಂದಿದ್ದಲ್ಲಿ, ಅವನು, ತೆರಿಗೆದಾಯಕ ವ್ಯಕ್ತಿಯ ಅಥವಾ ಸರಕುಗಳ ಸಾಗಾಣಿಕೆಯ ವ್ಯವಹಾರದಲ್ಲಿ ತೊಡಗಿರುವ ವ್ಯಕ್ತಿಯ ಅಥವಾ ಉಗ್ರಾಣ ಅಥವಾ ಒಂದು ಗೋದಾಮು ಅಥವಾ ಯಾವುದೇ ಇತರ ಸ್ಥಳದ ಒಬ್ಬ ಮಾಲೀಕ ಅಥವಾ ನಿರ್ವಾಹಕನ ಯಾವುದೇ ವ್ಯವಹಾರ ಸ್ಥಳಗಳನ್ನು ತಪಾಸಣೆ ಮಾಡಲು, ಇತರ ಯಾವುದೇ ರಾಜ್ಯ ತೆರಿಗೆ ಅಧಿಕಾರಿಯನ್ನು ಲಿಖಿತವಾಗಿ ಪ್ರಾಧಿಕೃತಗೊಳಿಸಬಹುದು.

(2) ಜಂಟಿ ಆಯುಕ್ತನ ಶ್ರೇಣಿಗಿಂತ ಕಡಿಮೆಯಿಲ್ಲದ ಯುಕ್ತ ಅಧಿಕಾರಿಯು, ಉಪಪ್ರಕರಣ (1)ರ ಅಡಿಯಲ್ಲಿ ನಡೆಸಿದ ಒಂದು ತಪಾಸಣೆಗೆ ಅನುಸಾರವಾಗಿಯಾಗಲಿ ಅಥವಾ ಅನ್ಯಥಾ, ಯಾವುದೇ ಸರಕುಗಳು ಮುಟ್ಟುಗೋಲಿಗೆ ಬಾಧ್ಯವಾಗಬಹುದು ಎಂದು ನಂಬಲು ಕಾರಣಗಳನ್ನು ಹೊಂದಿದ್ದಲ್ಲಿ ಅಥವಾ ಆತನ ಅಭಿಪ್ರಾಯದಲ್ಲಿ ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ನಡಾವಳಿಗಳಿಗೆ ಉಪಯೋಗವಾಗತಕ್ಕ ಅಥವಾ ಸುಸಂಬದ್ಧವಾಗಿರತಕ್ಕ ಯಾವುದೇ ದಸ್ತಾವೇಜುಗಳನ್ನು ಅಥವಾ ಪುಸ್ತಕಗಳನ್ನು ಅಥವಾ ವಸ್ತುಗಳನ್ನು, ಯಾವುದೇ ಸ್ಥಳದಲ್ಲಿ ರಹಸ್ಯವಾಗಿಟ್ಟಿದ್ದಾಗ, ಅವುಗಳನ್ನು ಶೋಧಿಸಲು ಅಥವಾ ವಶಕ್ಕೆ ತೆಗೆದುಕೊಳ್ಳಲು ಇತರ ಯಾವುದೇ ರಾಜ್ಯ ತೆರಿಗೆ ಅಧಿಕಾರಿಯನ್ನು ಲಿಖಿತವಾಗಿ ಪ್ರಾಧಿಕೃತಗೊಳಿಸಬಹುದು ಅಥವಾ ಸ್ವತಃ ತಾನೇ ಅಂಥ ಸರಕುಗಳು, ದಸ್ತಾವೇಜುಗಳು, ಪುಸ್ತಕಗಳು ಅಥವಾ ವಸ್ತುಗಳನ್ನು ಶೋಧಿಸಬಹುದು ಅಥವಾ ವಶಕ್ಕೆ ತೆಗೆದುಕೊಳ್ಳಬಹುದು:

ಪರಂತು, ಯಾವುದೇ ಅಂಥ ಸರಕುಗಳನ್ನು ವಶಕ್ಕೆ ತೆಗೆದುಕೊಳ್ಳಲು ಕಾರ್ಯಸಾಧ್ಯವಾಗದಿದ್ದಲ್ಲಿ, ಯುಕ್ತ ಅಧಿಕಾರಿಯು ಸರಕುಗಳ ಮಾಲೀಕನಿಗೆ ಅಥವಾ ಅಭಿರಕ್ಷಕನಿಗೆ, ಅಂಥ ಅಧಿಕಾರಿಯ ಪೂರ್ವಾನುಮತಿಯ ಹೊರತಾಗಿ ಅವನು ಆ ಸರಕುಗಳನ್ನು ತೆಗೆಯತಕ್ಕದ್ದಲ್ಲ, ಬಿಟ್ಟುಕೊಡತಕ್ಕದ್ದಲ್ಲ ಅಥವಾ ಅನ್ಯಥಾ ವ್ಯವಹರಿಸತಕ್ಕದ್ದಲ್ಲ ಎನ್ನುವ ಆದೇಶವನ್ನು ಜಾರಿಗೊಳಿಸಬಹುದು:

ಮತ್ತು ಪರಂತು, ಹಾಗೆ ವಶಕ್ಕೆ ತೆಗೆದುಕೊಂಡ ಸರಕುಗಳು, ದಸ್ತಾವೇಜುಗಳು, ಪುಸ್ತಕಗಳು ಅಥವಾ ವಸ್ತುಗಳನ್ನು, ಅವುಗಳ ಪರೀಕ್ಷೆಗಾಗಿ ಅಥವಾ ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ವಿಚಾರಣೆ ಅಥವಾ ನಡಾವಳಿಗಳಿಗೆ ಅಗತ್ಯವಿರುವಷ್ಟರವರೆಗೆ ಮಾತ್ರ ಅಂಥ ಅಧಿಕಾರಿಯು ಉಳಿಸಿಕೊಳ್ಳತಕ್ಕದ್ದು.

(3) ಉಪಪ್ರಕರಣ (2)ರಲ್ಲಿ ಉಲ್ಲೇಖಿಸಲಾದ ದಸ್ತಾವೇಜುಗಳು, ಪುಸ್ತಕಗಳು ಅಥವಾ ವಸ್ತುಗಳು ಅಥವಾ ಒಬ್ಬ ತೆರಿಗೆದಾಯಕ ವ್ಯಕ್ತಿ ಅಥವಾ ಯಾವೊಬ್ಬ ಇತರೇ ವ್ಯಕ್ತಿಯಿಂದ ಹಾಜರುಪಡಿಸಿದ ಯಾವುದೇ ಇತರ ದಸ್ತಾವೇಜುಗಳು, ಪುಸ್ತಕಗಳು ಅಥವಾ ವಸ್ತುಗಳನ್ನು, ಅವುಗಳು ಈ ಅಧಿನಿಯಮದ ಅಥವಾ ಇದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿ ನೀಡುವ ಸೂಚನಾಪತ್ರಕ್ಕಾಗಿ ಅವಲಂಬಿಸಿರದಿದ್ದಾಗ, ಅಂಥ ವ್ಯಕ್ತಿಗೆ ಸದರಿ ಸೂಚನಾಪತ್ರ ನೀಡಿದ ಮೂವತ್ತು ದಿನಗಳನ್ನು ಮೀರದ ಅವಧಿಯೊಳಗಾಗಿ ಹಿಂದಿರುಗಿಸತಕ್ಕದ್ದು.

(4) ಉಪಪ್ರಕರಣ (2)ರ ಅಡಿಯಲ್ಲಿ ಪ್ರಾಧಿಕೃತಗೊಂಡ ಅಧಿಕಾರಿಯು, ಯಾವುದೇ ಆವರಣಗಳ ಬಾಗಿಲನ್ನು ಮೊಹರು ಮಾಡುವ ಅಥವಾ ಒಡೆದು ತೆಗೆಯುವ ಅಥವಾ ಯಾವುದೇ *ಅಲ್ಮೆರಾ,* ವಿದ್ಯುನ್ಮಾನ ಉಪಕರಣಗಳು, ಪೆಟ್ಟಿಗೆ, ಕೋಶ, ಇವುಗಳಲ್ಲಿ ವ್ಯಕ್ತಿಯ ಯಾವುದೇ ಸರಕುಗಳನ್ನು, ಲೆಕ್ಕಪತ್ರಗಳನ್ನು, ರಿಜಿಸ್ಟರಗಳನ್ನು ಅಥವಾ ದಸ್ತಾವೇಜುಗಳನ್ನು ಬಚ್ಚಿಡಲಾಗಿದೆ ಎಂದು ಸಂಶಯಿಸಿದ್ದಾಗ, ಅಂಥ ಆವರಣಗಳು, *ಅಲ್ಮೆರಾ,* ವಿದ್ಯುನ್ಮಾನ ಉಪಕರಣಗಳು, ಪೆಟ್ಟಿಗೆ ಅಥವಾ ಕೋಶಕ್ಕೆ ಸಂಪರ್ಕಾವಕಾಶವನ್ನು ನಿರಾಕರಿಸಿದರೆ ಅವುಗಳನ್ನು ಒಡೆದು ತೆಗೆಯುವ ಅಧಿಕಾರವನ್ನು ಹೊಂದಿರತಕ್ಕದ್ದು.

(5) ಯುಕ್ತ ಅಧಿಕಾರಿಯ ಅಭಿಪ್ರಾಯದಲ್ಲಿ ಅಂಥ ಪ್ರತಿಗಳನ್ನು ಮಾಡುವುದು ಅಥವಾ ಅಂಥ ಉದ್ಧೃತ ಭಾಗಗಳನ್ನು ತೆಗೆದುಕೊಳ್ಳುವುದು, ತನಿಖೆಯ ಮೇಲೆ ಪ್ರತಿಕೂಲ ಪರಿಣಾಮವನ್ನುಂಟು ಮಾಡುತ್ತದೆ ಎನ್ನುವುದನ್ನು ಹೊರತುಪಡಿಸಿದಂತೆ, ಅಂಥ ಅಧಿಕಾರಿಯು ಈ ಸಂಬಂಧದಲ್ಲಿ ಸೂಚಿಸಬಹುದಾದ ಅಂಥ ಸ್ಥಳ ಮತ್ತು ಸಮಯದಲ್ಲಿ, ಯಾವುದೇ ದಾಖಲೆಗಳನ್ನು ಉಪಪ್ರಕರಣ (2)ರ ಅಡಿಯಲ್ಲಿ ಯಾರ ಅಭಿರಕ್ಷೆಯಿಂದ ವಶಕ್ಕೆ ತೆಗೆದುಕೊಳ್ಳಲಾಗಿದೆಯೋ ಆ ವ್ಯಕ್ತಿಯು ಅವುಗಳನ್ನು ಒಬ್ಬ ಪ್ರಾಧಿಕೃತನಾದ ಅಧಿಕಾರಿಯ ಸಮಕ್ಷಮದಲ್ಲಿ ಪ್ರತಿ ಮಾಡಲು ಅಥವಾ ಅವುಗಳಿಂದ ಉದ್ಧೃತ ಭಾಗಗಳನ್ನು ತೆಗೆದುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು.

(6) ಉಪಪ್ರಕರಣ (2)ರ ಅಡಿಯಲ್ಲಿ ಹಾಗೆ ವಶಕ್ಕೆ ತೆಗೆದುಕೊಂಡ ಸರಕುಗಳನ್ನು, ಅನುಕ್ರಮವಾಗಿ ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಅಂಥ ಪ್ರಮಾಣದಲ್ಲಿ, ಬಾಂಡ್‌ಅನ್ನು ಬರೆದುಕೊಟ್ಟ ಮೇಲೆ ಮತ್ತು ಭದ್ರತೆಯನ್ನು ಒದಗಿಸಿದ ಮೇಲೆ ಅಥವಾ ಸಂದಾಯ ಮಾಡಬೇಕಾದ ಅನ್ವಯವಾಗುವ ತೆರಿಗೆ, ಬಡ್ಡಿ ಮತ್ತು ಸಂದರ್ಭಾನುಸಾರವಾಗಿ ದಂಡವನ್ನು ಸಂದಾಯ ಮಾಡಿದ ಮೇಲೆ, ತಾತ್ಕಾಲಿಕವಾಗಿ ಬಿಡುಗಡೆಗೊಳಿಸತಕ್ಕದ್ದು.

(7) ಉಪಪ್ರಕರಣ (2)ರ ಅಡಿಯಲ್ಲಿ ಯಾವುದೇ ಸರಕುಗಳನ್ನು ವಶಕ್ಕೆ ತೆಗೆದುಕೊಂಡಿದ್ದು ಮತ್ತು ಅದಕ್ಕೆ ಸಂಬಂಧಿಸಿದಂತೆ ಸರಕುಗಳನ್ನು ವಶಕ್ಕೆ ತೆಗೆದುಕೊಂಡ ಆರು ತಿಂಗಳುಗಳ ಒಳಗಾಗಿ ಯಾವುದೇ ಸೂಚನಾಪತ್ರವನ್ನು ನೀಡಿರದಿದ್ದಲ್ಲಿ, ಆ ಸರಕುಗಳನ್ನು ಯಾರ ಸ್ವಾಧೀನದಿಂದ ವಶಕ್ಕೆ ತೆಗೆದುಕೊಳ್ಳಲಾಗಿದೆಯೋ ಆ ವ್ಯಕ್ತಿಗೆ ಹಿಂದಿರುಗಿಸತಕ್ಕದ್ದು:

ಪರಂತು, ಯುಕ್ತ ಅಧಿಕಾರಿಯು ಆರು ತಿಂಗಳುಗಳ ಅವಧಿಯನ್ನು, ತೋರಿಸಲಾದ ಸಾಕಷ್ಟು ಕಾರಣದ ಮೇಲೆ, ಆರು ತಿಂಗಳುಗಳನ್ನು ಮೀರದ ಮುಂದಿನ ಅವಧಿಗೆ ವಿಸ್ತರಿಸಬಹುದು.

(8) ಸರ್ಕಾರವು, ಯಾವುದೇ ಸರಕುಗಳ ಕೆಟ್ಟು ಹೋಗುವ ಅಥವಾ ಅಪಾಯಕಾರಿ ಸ್ವರೂಪವನ್ನು, ಕಾಲಾಂತರದಲ್ಲಿ ಸರಕುಗಳ ಮೌಲ್ಯ ಸವಕಳಿಯಾಗುವುದನ್ನು, ಸರಕುಗಳ ದಾಸ್ತಾನಿಗಾಗಿ ಸ್ಥಳದ ನಿರ್ಬಂಧಗಳನ್ನು ಅಥವಾ ಸಂಬಂಧಪಟ್ಟ ಯಾವುದೇ ಇತರ ವಿಚಾರಗಳನ್ನು ಗಮನದಲ್ಲಿಟ್ಟಿಕೊಂಡು, ಉಪ–ಪ್ರಕರಣ (2)ರ ಅಡಿಯಲ್ಲಿ ಅವುಗಳನ್ನು ವಶಕ್ಕೆ ತೆಗೆದುಕೊಂಡ ನಂತರ ಆದಷ್ಟು

ಬೇಗನೆ, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಯುಕ್ತ ಅಧಿಕಾರಿಯಿಂದ ವಿಲೇವಾರಿ ಮಾಡತಕ್ಕ ಸರಕುಗಳು ಅಥವಾ ಸರಕುಗಳ ವರ್ಗವನ್ನು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದು.

(9) ಉಪಪ್ರಕರಣ (8)ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಸರಕುಗಳಾಗಿರುವ, ಯಾವುದೇ ಸರಕುಗಳು, ಯುಕ್ತ ಅಧಿಕಾರಿಯಿಂದ ಉಪಪ್ರಕರಣ (2)ರ ಅಡಿಯಲ್ಲಿ ವಶಕ್ಕೆ ತೆಗೆದುಕೊಂಡಿದ್ದಲ್ಲಿ, ಅವನು ಈ ಬಗ್ಗೆ ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಅಂಥ ಸರಕುಗಳ ತಪಶೀಲು ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು.

(10) ಶೋಧನೆ ಮತ್ತು ವಶಕ್ಕೆ ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿದ ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ ಕೇಂದ್ರ ಅಧಿನಿಯಮ 2) ಉಪಬಂಧಗಳು, **"ಮ್ಯಾಜಿಸ್ಟ್ರೇಟ್"** ಪದ ಎಲ್ಲೆಲ್ಲಿ ಬರುತ್ತದೆಯೋ ಅಲ್ಲಿ **"ಆಯುಕ್ತ"** ಪದವನ್ನು ಪ್ರತಿಯೋಜಿಸಲಾಗಿದೆ ಎನ್ನುವ ಹಾಗೆ ಸದರಿ ಸಂಹಿತೆಯ ಪ್ರಕರಣ 165ರ ಉಪಪ್ರಕರಣ (5)ಕ್ಕೆ ಪರಿಣಾಮಕಾರಿಯಾಗಿರತಕ್ಕ ಮಾರ್ಪಾಡಿಗೆ ಒಳಪಟ್ಟು ಆಗಬಹುದಾದಷ್ಟು ಮಟ್ಟಿಗೆ, ಈ ಪ್ರಕರಣದ ಅಡಿಯಲ್ಲಿನ ಶೋಧನೆ ಮತ್ತು ವಶಕ್ಕೆ ತೆಗೆದುಕೊಳ್ಳುವುದಕ್ಕೆ, ಅನ್ವಯವಾಗತಕ್ಕದ್ದು.

(11) ಯುಕ್ತ ಅಧಿಕಾರಿಯು, ಯಾವೊಬ್ಬ ವ್ಯಕ್ತಿಯು ಯಾವುದೇ ತೆರಿಗೆಯನ್ನು ಸಂದಾಯ ಮಾಡಲು ತಪ್ಪಿದ್ದಾನೆ ಅಥವಾ ತಪ್ಪಿಸಲು ಪ್ರಯತ್ನಿಸಿದ್ದಾನೆ ಎಂದು ನಂಬಲು ಕಾರಣಗಳನ್ನು ಹೊಂದಿದ್ದಲ್ಲಿ, ಅವನು ಲಿಖಿತವಾಗಿ ದಾಖಲಿಸಬಹುದಾದ ಕಾರಣಗಳಿಗಾಗಿ, ಆತನ ಮುಂದೆ ಹಾಜರುಪಡಿಸಿದ ಅಂಥ ವ್ಯಕ್ತಿಯ ಲೆಕ್ಕಪತ್ರಗಳನ್ನು, ರಿಜಿಸ್ಟರುಗಳನ್ನು ಅಥವಾ ದಸ್ತಾವೇಜುಗಳನ್ನು ವಶಕ್ಕೆ ತೆಗೆದುಕೊಳ್ಳಬಹುದು ಮತ್ತು ಅದಕ್ಕಾಗಿ ಒಂದು ಸ್ವೀಕೃತಿಯನ್ನು ನೀಡತಕ್ಕದ್ದು, ಮತ್ತು ಅವುಗಳನ್ನು ಈ ಅಧಿನಿಯಮ ಅಥವಾ ಇದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿನ ಯಾವುದೇ ನಡಾವಳಿಗಳ ಸಂಬಂಧದಲ್ಲಿ ಅಭಿಯೋಜನೆಗಾಗಿ ಅವಶ್ಯಕವಿರುವವರೆಗೆ ಉಳಿಸಿಕೊಳ್ಳತಕ್ಕದ್ದು.

(12) ಆಯುಕ್ತರು ಅಥವಾ ಅವರಿಂದ ಪ್ರಾಧಿಕೃತನಾದ ಒಬ್ಬ ಅಧಿಕಾರಿಯು, ತನ್ನಿಂದ ಪ್ರಾಧಿಕೃತನಾದ ಯಾವುದೇ ವ್ಯಕ್ತಿಯ ಮೂಲಕ, ಯಾವುದೇ ತೆರಿಗೆದಾಯಕ ವ್ಯಕ್ತಿಯ ವ್ಯವಹಾರ ಸ್ಥಳದಿಂದ, ಅಂಥ ತೆರಿಗೆದಾಯಕ ವ್ಯಕ್ತಿಯಿಂದ ತೆರಿಗೆ ಬೆಲೆಪಟ್ಟಿಗಳು ಅಥವಾ ಪೂರೈಕೆಯ ಬಿಲ್ಲುಗಳ ನೀಡುವಿಕೆಯನ್ನು ಪರೀಕ್ಷಿಸಲು, ಯಾವುದೇ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಖರೀದಿಯನ್ನು ಮಾಡಿಸಬಹುದು, ಮತ್ತು ಅಂಥ ಅಧಿಕಾರಿಯಿಂದ ಹಾಗೆ ಖರೀದಿ ಮಾಡಿದ ಸರಕುಗಳನ್ನು ಹಿಂದಿರುಗಿಸಿದ ಮೇಲೆ, ಅಂಥ ತೆರಿಗೆದಾಯಕ ವ್ಯಕ್ತಿ ಅಥವಾ ವ್ಯವಹಾರ ಸ್ಥಳದ ಪ್ರಭಾರದಲ್ಲಿರುವ ಯಾವುದೇ ವ್ಯಕ್ತಿ, ಸರಕುಗಳ ಖರೀದಿಗಾಗಿ ಹಾಗೆ ಸಂದಾಯ ಮಾಡಿದ ಮೊತ್ತವನ್ನು, ಈ ಹಿಂದೆ ನೀಡಿದ್ದ ಪೂರೈಕೆಯ ಯಾವುದೇ ತೆರಿಗೆ ಬೆಲೆಪಟ್ಟಿಗಳು ಅಥವಾ ಪೂರೈಕೆಯ ಬಿಲ್ಲುಗಳನ್ನು ರದ್ದುಗೊಳಿಸಿದ ನಂತರ ಮರುಪಾವತಿ ಮಾಡತಕ್ಕದ್ದು.

68. ಸಾಗಾಣಿಕೆಯಲ್ಲಿರುವ ಸರಕುಗಳ ಪರಿಶೀಲನೆ.– (1) ಸರ್ಕಾರವು, ನಿರ್ದಿಷ್ಟಪಡಿಸಬಹುದಾದ ಅಂಥ ಮೊತ್ತವನ್ನು ಮೀರಿದ ಮೌಲ್ಯದ, ಯಾವುದೇ ರವಾನೆಯಲ್ಲಿರುವ ಸರಕುಗಳನ್ನು ಸಾಗಿಸುತ್ತಿರುವ ಸಾಗಾಣಿಕೆ ವಾಹನದ ಪ್ರಭಾರ ವ್ಯಕ್ತಿಯನ್ನು, ನಿಯಮಿಸಬಹುದಾದ ಅಂಥ ದಸ್ತಾವೇಜುಗಳನ್ನು ಮತ್ತು ಅಂಥ ಸಾಧನಗಳನ್ನು ಅವನ ಜೊತೆಯಲ್ಲಿ ಒಯ್ಯುವಂತೆ ಅಗತ್ಯಪಡಿಸಬಹುದು.

(2) ಉಪಪ್ರಕರಣ (1)ರ ಅಡಿಯಲ್ಲಿ ಒಯ್ಯುವುದು ಅಗತ್ಯವಿರುವ ದಸ್ತಾವೇಜುಗಳಲ್ಲಿನ ವಿವರಗಳನ್ನು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಸಿಂಧುಗೊಳಿಸತಕ್ಕದ್ದು.

(3) ಯುಕ್ತ ಅಧಿಕಾರಿಯು ಉಪಪ್ರಕರಣ (1)ರಲ್ಲಿ ಉಲ್ಲೇಖಿಸಲಾದ ಯಾವುದೇ ಸಾಗಾಣಿಕೆ ವಾಹನವನ್ನು, ಯಾವುದೇ ಸ್ಥಳದಲ್ಲಿ ತಡೆದಲ್ಲಿ, ಸದರಿ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ದಸ್ತಾವೇಜುಗಳು ಮತ್ತು ಸಾಧನಗಳನ್ನು ಪರಿಶೀಲನೆಗಾಗಿ ಹಾಜರುಪಡಿಸುವಂತೆ ಸದರಿ ಸಾಗಾಣಿಕೆ ವಾಹನದ ಪ್ರಭಾರ ವ್ಯಕ್ತಿಯನ್ನು ಅಗತ್ಯಪಡಿಸಬಹುದು ಹಾಗೂ ಸದರಿ ವ್ಯಕ್ತಿಯು ದಸ್ತಾವೇಜುಗಳು ಮತ್ತು ಸಾಧನಗಳನ್ನು ಹಾಜರುಪಡಿಸಲು ಬಾಧ್ಯನಿರತಕ್ಕದ್ದು ಮತ್ತು ಸರಕುಗಳ ತಪಾಸಣೆಗೂ ಸಹ ಅವಕಾಶ ನೀಡತಕ್ಕದ್ದು.

69. ಬಂಧನದ ಅಧಿಕಾರ.– (1) ಪ್ರಕರಣ 132ರ ಉಪಪ್ರಕರಣ (1)ರ ಖಂಡ (ಎ) ಅಥವಾ ಖಂಡ (ಬಿ) ಅಥವಾ ಖಂಡ (ಸಿ) ಅಥವಾ ಖಂಡ (ಡಿ)ಯಲ್ಲಿ ನಿರ್ದಿಷ್ಟಪಡಿಸಿದ ಅಪರಾಧವನ್ನು ಒಬ್ಬ ವ್ಯಕ್ತಿ ಎಸಗಿದ್ದು, ಅದು ಸದರಿ ಪ್ರಕರಣದ ಉಪಪ್ರಕರಣ (1)ರ ಖಂಡ (i) ಅಥವಾ (ii)ರ, ಅಥವಾ ಉಪ–ಪ್ರಕರಣ (2)ರ ಅಡಿಯಲ್ಲಿ ಶಿಕ್ಷಾರ್ಹವಾದುದು ಎಂದು ನಂಬಲು ಆಯುಕ್ತರು ಕಾರಣಗಳನ್ನು ಹೊಂದಿದ್ದರೆ, ಅವರು, ಒಂದು ಆದೇಶದ ಮೂಲಕ, ಅಂಥ ವ್ಯಕ್ತಿಯನ್ನು ಬಂಧಿಸಲು ರಾಜ್ಯ ತೆರಿಗೆಯ ಯಾವೊಬ್ಬ ಅಧಿಕಾರಿಯನ್ನು ಪ್ರಾಧಿಕೃತಗೊಳಿಸಬಹುದು.

(2) ಪ್ರಕರಣ 132ರ ಉಪಪ್ರಕರಣ (5)ರಲ್ಲಿ ನಿರ್ದಿಷ್ಟಪಡಿಸಿದ ಅಪರಾಧಕ್ಕಾಗಿ ಒಬ್ಬ ವ್ಯಕ್ತಿಯನ್ನು ಉಪಪ್ರಕರಣ (1)ರ ಅಡಿಯಲ್ಲಿ ಬಂಧಿಸಿದ್ದಲ್ಲಿ, ಆ ವ್ಯಕ್ತಿಯನ್ನು ಬಂಧಿಸಲು ಪ್ರಾಧಿಕೃತನಾದ ಅಧಿಕಾರಿಯು ಅಂಥ ವ್ಯಕ್ತಿಗೆ ಬಂಧನದ ಕಾರಣಾಧಾರಗಳನ್ನು ತಿಳಿಸತಕ್ಕದ್ದು ಮತ್ತು ಇಪ್ಪತ್ನಾಲ್ಕು ಗಂಟೆಯ ಒಳಗಾಗಿ ಅವನನ್ನು ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸತಕ್ಕದ್ದು.

(3) ದಂಡ ಪ್ರಕ್ರಿಯಾ ಸಂಹಿತೆ, 1973 (1974ರ ಕೇಂದ್ರ ಅಧಿನಿಯಮ 2)ರ ಉಪಬಂಧಗಳಿಗೆ ಒಳಪಟ್ಟು,–

(ಎ) ಪ್ರಕರಣ 132ರ ಉಪ–ಪ್ರಕರಣ (4)ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಅಪರಾಧಕ್ಕಾಗಿ ಒಬ್ಬ ವ್ಯಕ್ತಿಯನ್ನು ಉಪ–ಪ್ರಕರಣ (1)ರ ಅಡಿಯಲ್ಲಿ ಬಂಧಿಸಿದ್ದಲ್ಲಿ, ಅವನನ್ನು ಜಾಮೀನಿನ ಮೇಲೆ ಬಿಡತಕ್ಕದ್ದು ಅಥವಾ ಜಾಮೀನನ್ನು ನೀಡಲು ತಪ್ಪಿದಲ್ಲಿ, ಮ್ಯಾಜಿಸ್ಟ್ರೇಟ್‌ರ ಅಭಿರಕ್ಷೆಗೆ ಕಳುಹಿಸತಕ್ಕದ್ದು.

(ಬಿ) ಅಸಂಜ್ಞೇಯ ಅಥವಾ ಜಾಮೀನು ನೀಡಬಹುದಾದ ಅಪರಾಧದ ಸಂದರ್ಭದಲ್ಲಿ, ಉಪ ಆಯುಕ್ತ ಅಥವಾ ಸಹಾಯಕ ಆಯುಕ್ತರು, ಬಂಧಿಸಿದ ವ್ಯಕ್ತಿಯನ್ನು ಜಾಮೀನಿನ ಮೇಲೆ ಅಥವಾ ಅನ್ಯಥಾ ಬಿಡುಗಡೆಗೊಳಿಸುವ ಉದ್ದೇಶಕ್ಕಾಗಿ, ಒಂದು ಪೋಲೀಸ್ ಠಾಣೆಯ ಪ್ರಭಾರದಲ್ಲಿರುವ ಒಬ್ಬ ಅಧಿಕಾರಿಯು ಹೊಂದಿರುವ ಅವೇ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಅವೇ ಉಪಬಂಧಗಳಿಗೆ ಒಳಪಡತಕ್ಕದ್ದು.

70. ಪುರಾವೆಯನ್ನು ನೀಡುವುದಕ್ಕಾಗಿ ಮತ್ತು ದಸ್ತಾವೇಜುಗಳನ್ನು ಹಾಜರುಪಡಿಸುವುದಕ್ಕಾಗಿ ವ್ಯಕ್ತಿಗಳನ್ನು ಸಮನ್ ಮಾಡುವ ಅಧಿಕಾರ.– (1) ಈ ಅಧಿನಿಯಮದ ಅಡಿಯಲ್ಲಿನ ಯುಕ್ತ ಅಧಿಕಾರಿಯು, ಯಾವುದೇ ವಿಚಾರಣೆಯಲ್ಲಿ ಪುರಾವೆಯನ್ನು ನೀಡುವುದಕ್ಕಾಗಲಿ ಅಥವಾ ಒಂದು ದಸ್ತಾವೇಜು ಅಥವಾ ಇನ್ನೇನಾದರನ್ನೂ ಹಾಜರುಪಡಿಸುವುದಕ್ಕಾಗಲಿ ಯಾವೊಬ್ಬ ವ್ಯಕ್ತಿಯ ಹಾಜರಾತಿ ಅವಶ್ಯಕ ಎಂದು ಅವನು ಪರಿಗಣಿಸಿದಾಗ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (1908ರ ಕೇಂದ್ರ ಅಧಿನಿಯಮ 5) ಅಡಿಯಲ್ಲಿ ಒಂದು ಸಿವಿಲ್ ನ್ಯಾಯಾಲಯದ ಪ್ರಕರಣದಲ್ಲಿ ಉಪಬಂಧಿಸಿದ ಅದೇ ವಿಧಾನದಲ್ಲಿ ಆತನನ್ನು ಸಮನ್ ಮಾಡುವ ಅಧಿಕಾರವನ್ನು ಹೊಂದಿರತಕ್ಕದ್ದು.

(2) ಉಪ–ಪ್ರಕರಣ (1)ರ ಅಡಿಯಲ್ಲಿ ಉಲ್ಲೇಖಿಸಲಾದ ಪ್ರತಿಯೊಂದು ಅಂಥ ವಿಚಾರಣೆಯು, ಭಾರತೀಯ ದಂಡ ಸಂಹಿತೆ, 1860ರ (1860ರ ಕೇಂದ್ರ ಅಧಿನಿಯಮ 45) ಪ್ರಕರಣ 193 ಮತ್ತು ಪ್ರಕರಣ 228ರ ಅರ್ಥವ್ಯಾಪ್ತಿಯಲ್ಲಿನ "ನ್ಯಾಯಿಕ ನಡಾವಳಿಗಳು" ಎಂದು ಪರಿಭಾವಿಸತಕ್ಕದ್ದು.

71. ವ್ಯವಹಾರ ಸ್ಥಳಗಳಿಗೆ ಪ್ರವೇಶಾವಕಾಶ.– (1) ಜಂಟಿ ಆಯುಕ್ತರ ಶ್ರೇಣಿಗಿಂತ ಕಡಿಮೆಯಲ್ಲದ ಯುಕ್ತ ಅಧಿಕಾರಿಯಿಂದ ಪ್ರಾಧಿಕೃತನಾದ ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ಅಧಿಕಾರಿಯು, ರಾಜಸ್ವದ ಹಿತಾಸಕ್ತಿಯ ಸಂರಕ್ಷಣೆಗಾಗಿ ಅಗತ್ಯವಾಗಬಹುದಾದ ಯಾವುದೇ ಲೆಕ್ಕಪರಿಶೋಧನೆ, ಸೂಕ್ಷ್ಮ ಪರಿಶೀಲನೆ, ಪರಿಶೀಲನೆ ಮತ್ತು ಸರಿನೋಡುವಿಕೆಗಳಿಗಾಗಿ ಅವನು ಅಗತ್ಯಪಡಿಸಬಹುದಾದ ಮತ್ತು ಅಂಥ ಸ್ಥಳದಲ್ಲಿ ಲಭ್ಯವಿರಬಹುದಾದ ಲೆಕ್ಕಪುಸ್ತಕಗಳು, ದಸ್ತಾವೇಜುಗಳು, ಗಣಕಯಂತ್ರಗಳು, ಗಣಕಯಂತ್ರ ಕ್ರಮವಿಧಿಗಳು (computer programmes), ಗಣಕಯಂತ್ರದಲ್ಲಿ ಅನುಸ್ಥಾಪಿಸಿರಲಿ ಅಥವಾ ಅನ್ಯಥಾ ಆಗಿರಲಿ ಗಣಕಯಂತ್ರದ ತಂತ್ರಾಂಶ ಮತ್ತು ಅಂಥ ಇತರ ವಸ್ತುಗಳನ್ನು ಪರಿಶೀಲಿಸುವುದಕ್ಕಾಗಿ ಒಬ್ಬ ನೋಂದಾಯಿತ ವ್ಯಕ್ತಿಯ ಯಾವುದೇ ವ್ಯವಹಾರ ಸ್ಥಳಕ್ಕೆ ಪ್ರವೇಶಾವಕಾಶವನ್ನು ಹೊಂದಿರತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ಉಲ್ಲೇಖಿಸಲಾದ ಸ್ಥಳದ ಪ್ರಭಾರದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯು, ಉಪ–ಪ್ರಕರಣ (1)ರ ಅಡಿಯಲ್ಲಿ ಪ್ರಾಧಿಕೃತನಾದ ಅಧಿಕಾರಿಗೆ ಅಥವಾ ಯುಕ್ತ ಅಧಿಕಾರಿಯಿಂದ ನಿಯೋಜನೆಗೊಂಡ ಲೆಕ್ಕ ಪರಿಶೋಧನಾ ತಂಡಕ್ಕೆ ಅಥವಾ ಪ್ರಕರಣ 66ರ ಅಡಿಯಲ್ಲಿ ನಾಮನಿರ್ದೇಶನಗೊಂಡ ಒಬ್ಬ ಕಾಸ್ಟ್ ಅಕೌಂಟೆಂಟ್ ಅಥವಾ ಚಾರ್ಟರ್ಡ್ ಅಕೌಂಟೆಂಟ್‌ಗೆ, ಅವನು ಕೇಳಿದ ಕೂಡಲೇ,–

(i) ನೋಂದಾಯಿತ ವ್ಯಕ್ತಿಯಿಂದ ಸಿದ್ಧಪಡಿಸಲಾದ ಅಥವಾ ನಿರ್ವಹಿಸಲಾದ ಮತ್ತು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಯುಕ್ತ ಅಧಿಕಾರಿಗೆ ಘೋಷಿಸಿರುವ ಅಂಥ ದಾಖಲೆಗಳನ್ನು;

(ii) ಪರೀಕ್ಷಾರ್ಥ ಆಯ–ವ್ಯಯ ಅಥವಾ ಅದಕ್ಕೆ ಸರಿಸಮನಾದುದನ್ನು;

(iii) ಎಲ್ಲೆಲ್ಲಿ ಅಗತ್ಯವಿದೆಯೋ ಅಲ್ಲಿ, ಯುಕ್ತವಾಗಿ ಲೆಕ್ಕಪರಿಶೋಧಿತ ವಾರ್ಷಿಕ ಹಣಕಾಸಿನ ಲೆಕ್ಕಗಳ ವಿವರಪತ್ರಗಳನ್ನು;

(iv) ಕಂಪನಿಗಳ ಅಧಿನಿಯಮ, 2013ರ (2013ರ ಕೇಂದ್ರ ಅಧಿನಿಯಮ 18) ಪ್ರಕರಣ 148ರ ಅಡಿಯಲ್ಲಿನ ಕಾಸ್ಟ್ ಲೆಕ್ಕಪರಿಶೋಧನಾ ವರದಿ ಏನಾದರೂ ಇದ್ದರೆ ಅದನ್ನು;

(v) ಆದಾಯ–ತೆರಿಗೆ ಅಧಿನಿಯಮ, 1961ರ (1961ರ ಕೇಂದ್ರ ಅಧಿನಿಯಮ 43) ಪ್ರಕರಣ 44 ಎಬಿ ಅಡಿಯಲ್ಲಿನ ಆದಾಯ–ತೆರಿಗೆ ಲೆಕ್ಕಪರಿಶೋಧನಾ ವರದಿ ಏನಾದರೂ ಇದ್ದರೆ ಅದನ್ನು; ಮತ್ತು

(vi) ಸಂಬಂಧಪಟ್ಟ ಯಾವುದೇ ಇತರೇ ದಾಖಲೆಗಳನ್ನು,

–ಅಧಿಕಾರಿಯ ಅಥವಾ ಲೆಕ್ಕ ಪರಿಶೋಧನಾ ತಂಡದ ಅಥವಾ ಕಾಸ್ಟ್ ಅಕೌಂಟೆಂಟ್ ಅಥವಾ ಚಾರ್ಟರ್ಡ್ ಅಕೌಂಟೆಂಟ್‌ನಿಂದ ಸೂಕ್ಷ್ಮ ಪರಿಶೀಲನೆಗಾಗಿ, ಅಂಥ ಕೇಳಿಕೆ ಮಾಡಲಾದ ಹದಿನೈದು ಕೆಲಸದ ದಿನಗಳನ್ನು ಮೀರದ ಅವಧಿಯ ಒಳಗಾಗಿ ಅಥವಾ ಸದರಿ ಅಧಿಕಾರಿ ಅಥವಾ ಲೆಕ್ಕ ಪರಿಶೋಧನಾ ತಂಡ ಅಥವಾ ಕಾಸ್ಟ್ ಅಕೌಂಟೆಂಟ್ ಅಥವಾ ಚಾರ್ಟರ್ಡ್ ಅಕೌಂಟೆಂಟ್ ಅನುಮತಿಸಬಹುದಾದ ಅಂಥ ಮುಂದುವರೆದ ಅವಧಿಯ ಒಳಗಾಗಿ ಲಭ್ಯಗೊಳಿಸತಕ್ಕದ್ದು.

72. ಯುಕ್ತ ಅಧಿಕಾರಿಗಳಿಗೆ ನೆರವು ನೀಡಬೇಕಾದ ಅಧಿಕಾರಿಗಳು.– (1) ಪೋಲೀಸು, ರೈಲ್ವೆ, ಸೀಮಾಸುಂಕದ ಎಲ್ಲಾ ಅಧಿಕಾರಿಗಳು ಮತ್ತು ಗ್ರಾಮಾಧಿಕಾರಿಗಳನ್ನು ಒಳಗೊಂಡಂತೆ ಭೂ ಕಂದಾಯದ ಸಂಗ್ರಹಣೆಯಲ್ಲಿ ತೊಡಗಿರುವ ಅಂತಹ ಅಧಿಕಾರಿಗಳು, ಕೇಂದ್ರ ತೆರಿಗೆ ಅಧಿಕಾರಿಗಳು ಮತ್ತು ಕೇಂದ್ರಾಡಳಿತ ಪ್ರದೇಶ ತೆರಿಗೆ ಅಧಿಕಾರಿಗಳು, ಈ ಅಧಿನಿಯಮದ ಅನುಷ್ಠಾನದಲ್ಲಿ ಯುಕ್ತ ಅಧಿಕಾರಿಗಳಿಗೆ ನೆರವು ನೀಡತಕ್ಕದ್ದು.

(2) ಈ ಅಧಿನಿಯಮದ ಅನುಷ್ಠಾನದಲ್ಲಿ, ಆಯುಕ್ತರಿಂದ ಹಾಗೆ ಮಾಡಲು ಕೇಳಿದಾಗ ಯುಕ್ತ ಅಧಿಕಾರಿಗಳಿಗೆ ನೆರವು ನೀಡುವುದಕ್ಕಾಗಿ ಯಾವುದೇ ಇತರ ಅಧಿಕಾರಿಗಳ ವರ್ಗಕ್ಕೆ ಸರ್ಕಾರವು, ಅಧಿಸೂಚನೆಯ ಮೂಲಕ ಅಧಿಕಾರವನ್ನು ನೀಡಬಹುದು ಮತ್ತು ಅಗತ್ಯಪಡಿಸಬಹುದು.

ಅಧ್ಯಾಯ – XV
ತಗಾದೆಗಳು ಮತ್ತು ವಸೂಲಿ

73. ಮೋಸ ಅಥವಾ ಉದ್ದೇಶಪೂರ್ವಕವಾಗಿ ಯಾವುದೇ ಸಂಗತಿಗಳನ್ನು ತಪ್ಪಾಗಿ ಹೇಳುವುದು ಅಥವಾ ಬಚ್ಚಿಡುವುದನ್ನು ಹೊರತುಪಡಿಸಿ ಇತರ ಯಾವುದೇ ಕಾರಣಕ್ಕಾಗಿ ತೆರಿಗೆ ಸಂದಾಯ ಮಾಡದಿರುವ ಅಥವಾ ಕಡಿಮೆ ಸಂದಾಯ ಮಾಡಿದ ಅಥವಾ ತಪ್ಪಿನಿಂದ ಮಾಡಿದ ಮರುಪಾವತಿಯ ಅಥವಾ ತಪ್ಪಾಗಿ ತೆಗೆದುಕೊಂಡ ಅಥವಾ ಬಳಸಿದ ಹೂಡುವಳಿ ತೆರಿಗೆ ಜಮೆಯ ನಿರ್ಧರಣೆ.– (1) ತೆರಿಗೆಯನ್ನು ತಪ್ಪಿಸುವುದಕ್ಕಾಗಿ ಮೋಸ ಅಥವಾ ಉದ್ದೇಶಪೂರ್ವಕವಾಗಿ ಯಾವುದೇ ಸಂಗತಿಗಳನ್ನು ತಪ್ಪಾಗಿ ಹೇಳುವುದು ಅಥವಾ ಬಚ್ಚಿಡುವುದನ್ನು ಹೊರತುಪಡಿಸಿ ಇತರ ಯಾವುದೇ ಕಾರಣಗಳಿಗಾಗಿ, ಯಾವುದೇ ತೆರಿಗೆಯನ್ನು ಸಂದಾಯ ಮಾಡದಿರುವುದು ಅಥವಾ ಕಡಿಮೆ ಸಂದಾಯ ಮಾಡಿರುವುದು ಅಥವಾ ತಪ್ಪಿನಿಂದ ಮರುಪಾವತಿ ಮಾಡಿರುವುದು ಅಥವಾ ಹೂಡುವಳಿ ತೆರಿಗೆ ಜಮೆಯನ್ನು ತಪ್ಪಾಗಿ ತೆಗೆದುಕೊಂಡಿರುವುದು ಅಥವಾ ಬಳಸಿರುವುದು ಯುಕ್ತ ಅಧಿಕಾರಿಗೆ ಕಂಡುಬಂದಲ್ಲಿ, ಆತನು, ಹಾಗೆ ಸಂದಾಯ ಮಾಡದೇ ಇರುವ ಅಥವಾ ಹಾಗೆ ಕಡಿಮೆ ಸಂದಾಯ ಮಾಡಿರುವ ತೆರಿಗೆಯ ಹೊಣೆಯನ್ನು ಹೊರಿಸಬಹುದಾದ ವ್ಯಕ್ತಿಗೆ, ಅಥವಾ ಯಾರಿಗೆ ತಪ್ಪಿನಿಂದ ಮರುಪಾವತಿ ಮಾಡಲಾಗಿದೆಯೊ ಅಥವಾ ಯಾರು ಹೂಡುವಳಿ ತೆರಿಗೆ ಜಮೆಯನ್ನು ತಪ್ಪಾಗಿ ತೆಗೆದುಕೊಂಡಿರುವನೋ ಅಥವಾ ಬಳಸಿರುವನೋ ಅವನು, ಸೂಚನಾಪತ್ರದಲ್ಲಿ ನಿರ್ದಿಷ್ಟಪಡಿಸಿರುವ ಮೊತ್ತವನ್ನು ಅದರ ಮೇಲೆ ಪ್ರಕರಣ 50ರ ಅಡಿಯಲ್ಲಿ ಸಂದಾಯ ಮಾಡಬೇಕಾದ ಬಡ್ಡಿ ಮತ್ತು ಈ ಅಧಿನಿಯಮದ ಉಪಬಂಧಗಳು ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿ ವಿಧಿಸಬಹುದಾದ ದಂಡದ ಜೊತೆಗೆ, ಏಕೆ ಸಂದಾಯ ಮಾಡಬಾರದು ಎನ್ನುವುದಕ್ಕೆ ಕಾರಣಗಳನ್ನು ತೋರಿಸುವಂತೆ ಅವನನ್ನು ಅಗತ್ಯಪಡಿಸಿ ಸೂಚನಾಪತ್ರವನ್ನು ನೀಡತಕ್ಕದ್ದು.

(2) ಯುಕ್ತ ಅಧಿಕಾರಿಯು, ಆದೇಶ ಹೊರಡಿಸುವಿಕೆಗಾಗಿ ಉಪ–ಪ್ರಕರಣ (10)ರ ಅಡಿಯಲ್ಲಿ ನಿರ್ದಿಷ್ಟಪಡಿಸಿರುವ ಕಾಲಮಿತಿಗಿಂತ ಕೊನೆಯ ಪಕ್ಷ ಮೂರು ತಿಂಗಳು ಮುಂಚಿತವಾಗಿ ಉಪ–ಪ್ರಕರಣ (1)ರ ಅಡಿಯಲ್ಲಿ ಸೂಚನಾಪತ್ರವನ್ನು ನೀಡತಕ್ಕದ್ದು.

(3) ಉಪ–ಪ್ರಕರಣ (1)ರ ಅಡಿಯಲ್ಲಿ ಯಾವುದೇ ಅವಧಿಗಾಗಿ ಸೂಚನಾ ಪತ್ರವನ್ನು ನೀಡಲಾಗಿದ್ದಲ್ಲಿ, ಉಪ–ಪ್ರಕರಣ (1)ರ ಅಡಿಯಲ್ಲಿ ವ್ಯಾಪ್ತವಾಗಿರುವ ಅವಧಿಗಳನ್ನು ಹೊರತುಪಡಿಸಿದ ಇತರ ಅಂಥ ಅವಧಿಗಳಿಗೆ, ಸಂದಾಯ ಮಾಡದಿರುವ ಅಥವಾ ಕಡಿಮೆ ಸಂದಾಯ ಮಾಡಿದ ತೆರಿಗೆಯ ಅಥವಾ ತಪ್ಪಿನಿಂದ ಮಾಡಿದ ಮರುಪಾವತಿಯ ಅಥವಾ ತಪ್ಪಾಗಿ ತೆಗೆದುಕೊಂಡ ಅಥವಾ ಬಳಸಿದ ಹೂಡುವಳಿ ತೆರಿಗೆ ಜಮೆಯ ವಿವರಗಳನ್ನು ಒಳಗೊಂಡ ಒಂದು ವಿವರಪತ್ರವನ್ನು, ಯುಕ್ತ ಅಧಿಕಾರಿಯು ತೆರಿಗೆಯ ಹೊಣೆಯನ್ನು ಹೊರಿಸಬಹುದಾದ ವ್ಯಕ್ತಿಗೆ ಜಾರಿ ಮಾಡಬಹುದು.

(4) ಅಂಥ ತೆರಿಗೆ ಅವಧಿಗಳಿಗಾಗಿ ಉಪಪ್ರಕರಣ (1)ರ ಅಡಿಯಲ್ಲಿ ವ್ಯಾಪ್ತವಾಗಿರುವುದನ್ನು ಹೊರತುಪಡಿಸಿದ ಅಂಥ ತೆರಿಗೆ ಅವಧಿಗಳಿಗೆ ಆಧರಿಸಿರುವ ಕಾರಣಾಧಾರಗಳು, ಮುಂಚಿನ ಸೂಚನಾಪತ್ರದಲ್ಲಿ ನಮೂದಿಸಲಾಗಿರುವವೇ ಆಗಿವೆ ಎನ್ನುವ ಷರತ್ತಿಗೆ ಒಳಪಟ್ಟು ಅಂಥ ವಿವರಪತ್ರದ ಜಾರಿ ಮಾಡುವಿಕೆಯನ್ನು ಉಪ–ಪ್ರಕರಣ (1)ರ ಅಡಿಯಲ್ಲಿ ಅಂಥ ವ್ಯಕ್ತಿಗೆ ಜಾರಿ ಮಾಡಿದ ಸೂಚನಾ ಪತ್ರ ಎಂದು ಪರಿಭಾವಿಸತಕ್ಕದ್ದು.

(5) ತೆರಿಗೆಯ ಹೊಣೆಯನ್ನು ಹೊರಿಸಬಹುದಾದ ವ್ಯಕ್ತಿಯು, ಉಪ–ಪ್ರಕರಣ (1)ರ ಅಡಿಯಲ್ಲಿನ ಸೂಚನಾ ಪತ್ರ ಅಥವಾ ಸಂದರ್ಭಾನುಸಾರವಾಗಿ ಉಪಪ್ರಕರಣ (3)ರ ಅಡಿಯಲ್ಲಿನ ವಿವರಪತ್ರವನ್ನು ಜಾರಿ ಮಾಡುವುದಕ್ಕೆ ಮೊದಲೇ, ಸ್ವ–ನಿಶ್ಚಿತಪಡಿಸಿಕೊಂಡಿರುವುದರ ಆಧಾರದ ಮೇಲಿನ ಅಂಥ ತೆರಿಗೆಯ ಮೊತ್ತವನ್ನು ಅಥವಾ ಯುಕ್ತ ಅಧಿಕಾರಿಯಿಂದ ನಿಶ್ಚಿತಪಡಿಸಿದ ತೆರಿಗೆಯ ಮೊತ್ತವನ್ನು, ಅದರ ಮೇಲೆ ಪ್ರಕರಣ 50ರ ಅಡಿಯಲ್ಲಿ ಸಂದಾಯ ಮಾಡಬೇಕಾದ ಬಡ್ಡಿಯ ಜೊತೆಗೆ, ಸಂದಾಯ ಮಾಡುವುದು ಮತ್ತು ಅಂಥ ಸಂದಾಯದ ಮಾಹಿತಿಯನ್ನು ಯುಕ್ತ ಅಧಿಕಾರಿಗೆ ಲಿಖಿತವಾಗಿ ತಿಳಿಸುವುದು.

(6) ಅಂಥ ಮಾಹಿತಿಯ ಸ್ವೀಕೃತಿಯ ಮೇರೆಗೆ, ಯುಕ್ತ ಅಧಿಕಾರಿಯು, ಹಾಗೆ ಸಂದಾಯ ಮಾಡಲಾದ ತೆರಿಗೆ ಅಥವಾ ಈ ಅಧಿನಿಯಮದ ಅಡಿಯಲ್ಲಿ ಅಥವಾ ಇದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿ ಸಂದಾಯ ಮಾಡಬೇಕಾದ ದಂಡಕ್ಕೆ ಸಂಬಂಧಿಸಿದಂತೆ, ಉಪ–ಪ್ರಕರಣ (1)ರ ಅಡಿಯಲ್ಲಿ ಸೂಚನಾ ಪತ್ರ ಅಥವಾ ಸಂದರ್ಭಾನುಸಾರವಾಗಿ, ಉಪ–ಪ್ರಕರಣ (3)ರ ಅಡಿಯಲ್ಲಿ ವಿವರಪತ್ರವನ್ನು ಜಾರಿ ಮಾಡತಕ್ಕದ್ದಲ್ಲ.

(7) ಉಪ–ಪ್ರಕರಣ (5)ರ ಅಡಿಯಲ್ಲಿ ಸಂದಾಯ ಮಾಡಲಾದ ಮೊತ್ತವು, ವಾಸ್ತವಿಕವಾಗಿ ಸಂದಾಯ ಮಾಡಬೇಕಾದ ಮೊತ್ತಕ್ಕಿಂತ ಕಡಿಮೆಯಿದೆ ಎಂದು ಯುಕ್ತ ಅಧಿಕಾರಿಯು ಅಭಿಪ್ರಾಯವನ್ನು ಹೊಂದಿದ್ದಲ್ಲಿ, ಅವನು ವಾಸ್ತವಿಕವಾಗಿ ಸಂದಾಯ ಮಾಡಬೇಕಾದ ಮೊತ್ತಕ್ಕಿಂತ ಕಡಿಮೆಯಿರುವ ಅಂಥ ಮೊತ್ತಕ್ಕೆ ಸಂಬಂಧಿಸಿದಂತೆ ಉಪಪ್ರಕರಣ (1)ರಲ್ಲಿ ಉಪಬಂಧಿಸಿದಂತೆ ಸೂಚನಾ ಪತ್ರವನ್ನು ನೀಡಲು ಮುಂದುವರೆಯತಕ್ಕದ್ದು.

(8) ಉಪ–ಪ್ರಕರಣ (1)ರ ಅಡಿಯಲ್ಲಿ ಅಥವಾ ಉಪ–ಪ್ರಕರಣ (3)ರ ಅಡಿಯಲ್ಲಿ ತೆರಿಗೆಯ ಹೊಣೆಯನ್ನು ಹೊರಿಸಬಹುದಾದ ವ್ಯಕ್ತಿಯು, ಸದರಿ ತೆರಿಗೆಯನ್ನು ಪ್ರಕರಣ 50ರ ಅಡಿಯಲ್ಲಿ ಸಂದಾಯ ಮಾಡಬೇಕಾದ ಬಡ್ಡಿಯ ಜೊತೆಗೆ, ಕಾರಣ ಕೇಳುವ ಸೂಚನಾಪತ್ರವನ್ನು ನೀಡಿದ ಮೂವತ್ತು ದಿನಗಳ ಒಳಗಾಗಿ ಸಂದಾಯ ಮಾಡಿದರೆ, ದಂಡವನ್ನು ಸಂದಾಯ ಮಾಡತಕ್ಕದ್ದಲ್ಲ ಮತ್ತು ಸದರಿ ಸೂಚನಾ ಪತ್ರಕ್ಕೆ ಸಂಬಂಧಿಸಿದ ಎಲ್ಲಾ ನಡಾವಳಿಗಳು ಮುಕ್ತಾಯವಾಗಿವೆ ಎಂದು ಪರಿಭಾವಿಸತಕ್ಕದ್ದು.

(9) ತೆರಿಗೆಯ ಹೊಣೆಯನ್ನು ಹೊರಿಸಬಹುದಾದ ವ್ಯಕ್ತಿಯು ಮಾಡಿದ ವಿಜ್ಞಾಪನೆ ಯಾವುದಾದರು ಇದ್ದರೆ ಅದನ್ನು ಪರಿಗಣಿಸಿದ ನಂತರ, ಯುಕ್ತ ಅಧಿಕಾರಿಯು, ಅಂಥ ವ್ಯಕ್ತಿಯಿಂದ ಬಾಕಿಯಿರುವ ತೆರಿಗೆ, ಬಡ್ಡಿ ಮತ್ತು ತೆರಿಗೆಯ ಶೇಕಡಾ ಹತ್ತರಷ್ಟು ಅಥವಾ ಹತ್ತು ಸಾವಿರ ರೂಪಾಯಿಗಳು, ಇವುಗಳಲ್ಲಿ ಯಾವುದು ಹೆಚ್ಚೋ ಅದಕ್ಕೆ ಸಮನಾದ ದಂಡದ ಮೊತ್ತವನ್ನು ನಿರ್ಧರಿಸತಕ್ಕದ್ದು ಮತ್ತು ಒಂದು ಆದೇಶವನ್ನು ನೀಡತಕ್ಕದ್ದು.

(10) ತೆರಿಗೆಯನ್ನು ಸಂದಾಯ ಮಾಡದಿರುವುದು ಅಥವಾ ಕಡಿಮೆ ಸಂದಾಯ ಮಾಡಿರುವುದು ಅಥವಾ ಹೂಡುವಳಿ ತೆರಿಗೆ ಜಮೆಯನ್ನು ತಪ್ಪಾಗಿ ತೆಗೆದುಕೊಂಡಿರುವುದು ಅಥವಾ ಬಳಸಿರುವುದು ಇವುಗಳಿಗೆ ಸಂಬಂಧಿಸಿರುವ ವರ್ಷಕ್ಕೆ ವಾರ್ಷಿಕ ರಿಟರ್ನನ್ನು ಒದಗಿಸುವುದಕ್ಕೆ ಇರುವ ಗಡುವಿನ ದಿನಾಂಕದಿಂದ ಮೂರು ವರ್ಷದ ಒಳಗಾಗಿ, ಅಥವಾ ತಪ್ಪಿನಿಂದಾದ ಮರುಪಾವತಿಯ ದಿನಾಂಕದಿಂದ ಮೂರು ವರ್ಷದ ಒಳಗಾಗಿ ಯುಕ್ತ ಅಧಿಕಾರಿಯು ಉಪ–ಪ್ರಕರಣ (9)ರ ಅಡಿಯಲ್ಲಿ ಆದೇಶವನ್ನು ನೀಡತಕ್ಕದ್ದು.

(11) ಉಪಪ್ರಕರಣ (6) ಅಥವಾ ಉಪಪ್ರಕರಣ (8)ರಲ್ಲಿ ಏನೇ ಒಳಗೊಂಡಿದ್ದರೂ, ಸ್ವಯಂ–ನಿರ್ಧರಿತ ತೆರಿಗೆಯ ಯಾವುದೇ ಮೊತ್ತವನ್ನು ಅಥವಾ ತೆರಿಗೆಯಾಗಿ ಸಂಗ್ರಹಿಸಲಾಗಿರುವ ಯಾವುದೇ ಮೊತ್ತವನ್ನು ಅಂಥ ತೆರಿಗೆ ಸಂದಾಯದ ಗಡುವು ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ಸಂದಾಯ ಮಾಡದಿದ್ದಲ್ಲಿ, ಉಪಪ್ರಕರಣ (9)ರ ಅಡಿಯಲ್ಲಿ ದಂಡವನ್ನು ಸಂದಾಯ ಮಾಡತಕ್ಕದ್ದು.

74. ಮೋಸ ಅಥವಾ ಉದ್ದೇಶಪೂರ್ವಕವಾಗಿ ಸಂಗತಿಗಳನ್ನು ತಪ್ಪಾಗಿ ಹೇಳುವುದು ಅಥವಾ ಬಚ್ಚಿಡುವ ಯಾವುದೇ ಕಾರಣಗಳಿಗಾಗಿ ತೆರಿಗೆ ಸಂದಾಯ ಮಾಡದಿರುವ ಅಥವಾ ಕಡಿಮೆ ಸಂದಾಯ ಮಾಡಿದ ಅಥವಾ ತಪ್ಪಿನಿಂದ ಮಾಡಿದ ಮರುಪಾವತಿಯ ಅಥವಾ ತಪ್ಪಾಗಿ ತೆಗೆದುಕೊಂಡ ಅಥವಾ ಬಳಸಿದ ಹೂಡುವಳಿ ತೆರಿಗೆ ಜಮೆಯ ನಿರ್ಧರಣೆ.– (1) ತೆರಿಗೆಯನ್ನು ತಪ್ಪಿಸುವುದಕ್ಕಾಗಿ, ಮೋಸ ಅಥವಾ ಉದ್ದೇಶಪೂರ್ವಕವಾಗಿ ಯಾವುದೇ ಸಂಗತಿಗಳನ್ನು ತಪ್ಪಾಗಿ ಹೇಳುವುದು ಅಥವಾ ಬಚ್ಚಿಡುವುದರ ಕಾರಣಗಳಿಗಾಗಿ, ಯಾವುದೇ ತೆರಿಗೆಯನ್ನು ಸಂದಾಯ ಮಾಡದಿರುವುದು ಅಥವಾ ಕಡಿಮೆ ಸಂದಾಯ ಮಾಡಿರುವುದು ಅಥವಾ ತಪ್ಪಿನಿಂದ ಮರುಪಾವತಿ ಮಾಡಿರುವುದು ಅಥವಾ ಹೂಡುವಳಿ ತೆರಿಗೆ ಜಮೆಯನ್ನು ತಪ್ಪಾಗಿ ತೆಗೆದುಕೊಂಡಿರುವುದು ಅಥವಾ ಬಳಸಿರುವುದು ಯುಕ್ತ ಅಧಿಕಾರಿಗೆ ಕಂಡುಬಂದಲ್ಲಿ, ಆತನು, ಹಾಗೆ ಸಂದಾಯ ಮಾಡದೇ ಇರುವ ಅಥವಾ ಹಾಗೆ ಕಡಿಮೆ ಸಂದಾಯ ಮಾಡಿರುವ ತೆರಿಗೆಯ ಹೊಣೆಯನ್ನು ಹೊರಿಸಬಹುದಾದ ವ್ಯಕ್ತಿಗೆ, ಅಥವಾ ಯಾರಿಗೆ ತಪ್ಪಿನಿಂದ ಮರುಪಾವತಿ ಮಾಡಲಾಗಿದೆಯೊ ಅಥವಾ ಯಾರು ಹೂಡುವಳಿ ತೆರಿಗೆ ಜಮೆಯನ್ನು ತಪ್ಪಾಗಿ ತೆಗೆದುಕೊಂಡಿರುವನೋ ಅಥವಾ ಬಳಸಿರುವನೋ ಅವನು, ಸೂಚನಾಪತ್ರದಲ್ಲಿ ನಿರ್ದಿಷ್ಟಪಡಿಸಿರುವ ಮೊತ್ತವನ್ನು ಅದರ ಮೇಲೆ ಪ್ರಕರಣ 50ರ ಅಡಿಯಲ್ಲಿ ಸಂದಾಯ ಮಾಡಬೇಕಾದ ಬಡ್ಡಿ ಮತ್ತು ಸೂಚನಾ ಪತ್ರದಲ್ಲಿ ನಿರ್ದಿಷ್ಟಪಡಿಸಿದ ತೆರಿಗೆ ಮೊತಕ್ಕೆ ಸಮನಾದ ದಂಡದ ಜೊತೆಗೆ, ಏಕೆ ಸಂದಾಯ ಮಾಡಬಾರದು ಎನ್ನುವುದಕ್ಕೆ ಕಾರಣಗಳನ್ನು ತೋರಿಸುವಂತೆ ಅವನನ್ನು ಅಗತ್ಯಪಡಿಸಿ ಸೂಚನಾಪತ್ರವನ್ನು ನೀಡತಕ್ಕದ್ದು.

(2) ಯುಕ್ತ ಅಧಿಕಾರಿಯು, ಆದೇಶವನ್ನು ಹೊರಡಿಸುವುದಕ್ಕಾಗಿ ಉಪಪ್ರಕರಣ (10)ರ ಅಡಿಯಲ್ಲಿ ನಿರ್ದಿಷ್ಟಪಡಿಸಿರುವ ಕಾಲಮಿತಿಗಿಂತ ಕೊನೆಯ ಪಕ್ಷ ಆರು ತಿಂಗಳು ಮುಂಚಿತವಾಗಿ ಉಪ–ಪ್ರಕರಣ (1)ರ ಅಡಿಯಲ್ಲಿ ಸೂಚನಾಪತ್ರವನ್ನು ನೀಡತಕ್ಕದ್ದು.

(3) ಉಪಪ್ರಕರಣ (1)ರ ಅಡಿಯಲ್ಲಿ ಯಾವುದೇ ಅವಧಿಗಾಗಿ ಸೂಚನಾ ಪತ್ರವನ್ನು ನೀಡಲಾಗಿದ್ದಲ್ಲಿ, ಉಪಪ್ರಕರಣ (1)ರ ಅಡಿಯಲ್ಲಿ ವ್ಯಾಪ್ತವಾಗಿರುವ ಅವಧಿಗಳನ್ನು ಹೊರತುಪಡಿಸಿದ ಇತರ ಅಂಥ ಅವಧಿಗಳಿಗೆ, ಸಂದಾಯ ಮಾಡದಿರುವ ಅಥವಾ ಕಡಿಮೆ ಸಂದಾಯ ಮಾಡಿದ ತೆರಿಗೆಯ ಅಥವಾ ತಪ್ಪಿನಿಂದ ಮಾಡಿದ ಮರುಪಾವತಿಯ ಅಥವಾ ತಪ್ಪಾಗಿ ತೆಗೆದುಕೊಂಡ ಅಥವಾ ಬಳಸಿದ ಹೂಡುವಳಿ ತೆರಿಗೆ ಜಮೆಯ ವಿವರಗಳನ್ನು ಒಳಗೊಂಡ ಒಂದು ವಿವರಪತ್ರವನ್ನು, ಯುಕ್ತ ಅಧಿಕಾರಿಯು ತೆರಿಗೆಯ ಹೊಣೆಯನ್ನು ಹೊರಿಸಬಹುದಾದ ವ್ಯಕ್ತಿಗೆ ಜಾರಿ ಮಾಡಬಹುದು.

(4) ಉಪಪ್ರಕರಣ (1)ರ ಅಡಿಯಲ್ಲಿ ವ್ಯಾಪ್ತವಾಗಿರುವುದನ್ನು ಹೊರತುಪಡಿಸಿ, ತೆರಿಗೆಯನ್ನು ತಪ್ಪಿಸುವುದಕ್ಕಾಗಿ, ಮೋಸ ಅಥವಾ ಉದ್ದೇಶಪೂರ್ವಕವಾಗಿ ಯಾವುದೇ ಸಂಗತಿಗಳನ್ನು ತಪ್ಪಾಗಿ ಹೇಳುವುದು ಅಥವಾ ಬಚ್ಚಿಡುವ ಆಧಾರಾಂಶಗಳಲ್ಲದೇ, ಸದರಿ ವಿವರಪತ್ರದಲ್ಲಿ ಅಂಥ ತೆರಿಗೆ ಅವಧಿಗಳಿಗಾಗಿ ಆಧರಿಸಿರುವ ಕಾರಣಾಧಾರಗಳು, ಮುಂಚಿನ ಸೂಚನಾಪತ್ರದಲ್ಲಿ ನಮೂದಿಸಲಾಗಿರುವವೇ ಆಗಿವೆ ಎನ್ನುವ ಷರತ್ತಿಗೆ ಒಳಪಟ್ಟು, ಉಪ–ಪ್ರಕರಣ (3)ರ ಅಡಿಯಲ್ಲಿ ವಿವರಪತ್ರದ ಜಾರಿ ಮಾಡುವಿಕೆಯನ್ನು, ಪ್ರಕರಣ 73ರ ಉಪಪ್ರಕರಣ (1)ರ ಅಡಿಯಲ್ಲಿ ಅಂಥ ವ್ಯಕ್ತಿಗೆ ಜಾರಿ ಮಾಡಿದ ಸೂಚನಾ ಪತ್ರ ಎಂದು ಪರಿಭಾವಿಸತಕ್ಕದ್ದು.

(5) ತೆರಿಗೆಯ ಹೊಣೆಯನ್ನು ಹೊರಿಸಬಹುದಾದ ವ್ಯಕ್ತಿಯು, ಉಪ–ಪ್ರಕರಣ (1)ರ ಅಡಿಯಲ್ಲಿನ ಸೂಚನಾ ಪತ್ರವನ್ನು ಜಾರಿ ಮಾಡುವುದಕ್ಕೆ ಮೊದಲೇ, ಸ್ವ–ನಿಶ್ಚಿತಪಡಿಸಿಕೊಂಡಿರುವುದರ ಆಧಾರದ ಮೇಲಿನ ಅಂಥ ತೆರಿಗೆಯ ಮೊತ್ತವನ್ನು ಅಥವಾ ಯುಕ್ತ ಅಧಿಕಾರಿಯಿಂದ ನಿಶ್ಚಿತಪಡಿಸಿದ ತೆರಿಗೆಯ ಮೊತ್ತವನ್ನು, ಅದರ ಮೇಲೆ ಪ್ರಕರಣ 50ರ ಅಡಿಯಲ್ಲಿ ಸಂದಾಯ ಮಾಡಬೇಕಾದ ಬಡ್ಡಿ ಮತ್ತು ಅಂಥ ತೆರಿಗೆಯ ಶೇಕಡ ಹದಿನೈದಕ್ಕೆ ಸಮನಾದ ದಂಡದೊಂದಿಗೆ ಸಂದಾಯ ಮಾಡುವುದು ಮತ್ತು ಅಂಥ ಸಂದಾಯದ ಮಾಹಿತಿಯನ್ನು ಯುಕ್ತ ಅಧಿಕಾರಿಗೆ ಲಿಖಿತವಾಗಿ ತಿಳಿಸುವುದು.

(6) ಅಂಥ ಮಾಹಿತಿಯ ಸ್ವೀಕೃತಿಯ ಮೇರೆಗೆ, ಯುಕ್ತ ಅಧಿಕಾರಿಯು, ಹಾಗೆ ಸಂದಾಯ ಮಾಡಲಾದ ತೆರಿಗೆ ಅಥವಾ ಈ ಅಧಿನಿಯಮದ ಅಡಿಯಲ್ಲಿ ಅಥವಾ ಇದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿ ಸಂದಾಯ ಮಾಡಬೇಕಾದ ದಂಡಕ್ಕೆ ಸಂಬಂಧಿಸಿದಂತೆ, ಉಪಪ್ರಕರಣ (1)ರ ಅಡಿಯಲ್ಲಿ ಸೂಚನಾ ಪತ್ರವನ್ನು ಜಾರಿ ಮಾಡತಕ್ಕದ್ದಲ್ಲ.

(7) ಉಪಪ್ರಕರಣ (5)ರ ಅಡಿಯಲ್ಲಿ ಸಂದಾಯ ಮಾಡಲಾದ ಮೊತ್ತವು, ವಾಸ್ತವಿಕವಾಗಿ ಸಂದಾಯ ಮಾಡಬೇಕಾದ ಮೊತ್ತಕ್ಕಿಂತ ಕಡಿಮೆಯಿದೆ ಎಂದು ಯುಕ್ತ ಅಧಿಕಾರಿಯು ಅಭಿಪ್ರಾಯವನ್ನು ಹೊಂದಿದ್ದಲ್ಲಿ, ಅವನು ವಾಸ್ತವಿಕವಾಗಿ ಸಂದಾಯ ಮಾಡಬೇಕಾದ ಮೊತ್ತಕ್ಕಿಂತ ಕಡಿಮೆಯಿರುವ ಅಂಥ ಮೊತ್ತಕ್ಕೆ ಸಂಬಂಧಿಸಿದಂತೆ ಉಪಪ್ರಕರಣ (1)ರಲ್ಲಿ ಉಪಬಂಧಿಸಿದಂತೆ ಸೂಚನಾ ಪತ್ರವನ್ನು ನೀಡಲು ಮುಂದುವರೆಯತಕ್ಕದ್ದು.

(8) ಉಪಪ್ರಕರಣ (1)ರ ಅಡಿಯಲ್ಲಿ ತೆರಿಗೆಯ ಹೊಣೆಯನ್ನು ಹೊರಿಸಬಹುದಾದ ವ್ಯಕ್ತಿಯು, ಸದರಿ ತೆರಿಗೆಯನ್ನು ಪ್ರಕರಣ 50ರ ಅಡಿಯಲ್ಲಿ ಸಂದಾಯ ಮಾಡಬೇಕಾದ ಬಡ್ಡಿಯ ಮತ್ತು ಅಂಥ ತೆರಿಗೆಯ ಶೇಕಡಾ ಇಪ್ಪತ್ತೈದಕ್ಕೆ ಸಮನಾದ ದಂಡದೊಂದಿಗೆ, ಕಾರಣ ಕೇಳುವ ಸೂಚನಾಪತ್ರವನ್ನು ನೀಡಿದ ಮೂವತ್ತು ದಿನಗಳ ಒಳಗಾಗಿ ಸಂದಾಯ ಮಾಡಿದರೆ, ಸದರಿ ಸೂಚನಾ ಪತ್ರಕ್ಕೆ ಸಂಬಂಧಿಸಿದ ಎಲ್ಲಾ ನಡಾವಳಿಗಳು ಮುಕ್ತಾಯವಾಗಿವೆ ಎಂದು ಪರಿಭಾವಿಸತಕ್ಕದ್ದು.

(9) ತೆರಿಗೆಯ ಹೊಣೆಯನ್ನು ಹೊರಿಸಬಹುದಾದ ವ್ಯಕ್ತಿಯು ಮಾಡಿದ ವಿಜ್ಞಾಪನೆ ಯಾವುದಾದರೂ ಇದ್ದರೆ ಅದನ್ನು ಪರಿಗಣಿಸಿದ ನಂತರ, ಯುಕ್ತ ಅಧಿಕಾರಿಯು, ಅಂಥ ವ್ಯಕ್ತಿಯಿಂದ ಬಾಕಿಯಿರುವ ತೆರಿಗೆ, ಬಡ್ಡಿ ಮತ್ತು ದಂಡದ ಮೊತ್ತವನ್ನು ನಿರ್ಧರಿಸತಕ್ಕದ್ದು ಮತ್ತು ಒಂದು ಆದೇಶವನ್ನು ನೀಡತಕ್ಕದ್ದು.

(10) ತೆರಿಗೆಯನ್ನು ಸಂದಾಯ ಮಾಡದಿರುವುದು ಅಥವಾ ಕಡಿಮೆ ಸಂದಾಯ ಮಾಡಿರುವುದು ಅಥವಾ ಹೂಡುವಳಿ ತೆರಿಗೆ ಜಮೆಯನ್ನು ತಪ್ಪಾಗಿ ತೆಗೆದುಕೊಂಡಿರುವುದು ಅಥವಾ ಬಳಸಿರುವುದು ಇವುಗಳಿಗೆ ಸಂಬಂಧಿಸಿರುವ ವರ್ಷಕ್ಕೆ ವಾರ್ಷಿಕ ರಿಟರ್ನನ್ನು ಒದಗಿಸುವುದಕ್ಕೆ ಇರುವ ಗಡುವಿನ ದಿನಾಂಕದಿಂದ ಐದು ವರ್ಷದ ಒಳಗಾಗಿ, ಅಥವಾ ತಪ್ಪಿನಿಂದಾದ ಮರುಪಾವತಿಯ ದಿನಾಂಕದಿಂದ ಐದು ವರ್ಷದ ಒಳಗಾಗಿ ಯುಕ್ತ ಅಧಿಕಾರಿಯು ಉಪಪ್ರಕರಣ (9)ರ ಅಡಿಯಲ್ಲಿ ಆದೇಶವನ್ನು ನೀಡತಕ್ಕದ್ದು.

(11) ಉಪಪ್ರಕರಣ (9)ರ ಅಡಿಯಲ್ಲಿ ಹೊರಡಿಸಿದ ಒಂದು ಆದೇಶವನ್ನು ಜಾರಿಗೊಳಿಸಲಾದ ಯಾವೊಬ್ಬ ವ್ಯಕ್ತಿಯು, ಆದೇಶವನ್ನು ತಿಳಿಸಿದ ಮೂವತ್ತು ದಿನಗಳ ಒಳಗಾಗಿ, ತೆರಿಗೆಯನ್ನು ಅದರಮೇಲೆ ಪ್ರಕರಣ 50ರ ಅಡಿಯಲ್ಲಿ ಸಂದಾಯ ಮಾಡಬೇಕಾದ ಬಡ್ಡಿ ಮತ್ತು ಅಂಥ ತೆರಿಗೆಯ ಶೇಕಡಾ ಐವತ್ತಕ್ಕೆ ಸಮನಾದ ದಂಡದೊಂದಿಗೆ ಸಂದಾಯ ಮಾಡಿದ್ದಲ್ಲಿ, ಸದರಿ ತೆರಿಗೆಗೆ ಸಂಬಂಧಿಸಿದ ಎಲ್ಲಾ ನಡಾವಳಿಗಳು ಮುಕ್ತಾಯವಾಗಿವೆ ಎಂದು ಪರಿಭಾವಿಸತಕ್ಕದ್ದು.

ವಿವರಣೆ 1:– ಪ್ರಕರಣ 73 ಮತ್ತು ಈ ಪ್ರಕರಣದ ಉದ್ದೇಶಗಳಿಗಾಗಿ,–

(i) ಪದಾವಳಿಯಾದ **"**ಸದರಿ ಸೂಚನಾಪತ್ರಕ್ಕೆ ಸಂಬಂಧಿಸಿದ ಎಲ್ಲಾ ನಡಾವಳಿಗಳು**"** ಎನ್ನುವುದು ಪ್ರಕರಣ 132ರ ಅಡಿಯಲ್ಲಿನ ನಡಾವಳಿಗಳನ್ನು ಒಳಗೊಳ್ಳತಕ್ಕದ್ದಲ್ಲ;

(ii) ತೆರಿಗೆ ಸಂದಾಯ ಮಾಡಲು ಬಾಧ್ಯನಿರುವ ಮುಖ್ಯ ವ್ಯಕ್ತಿಗೆ ಮತ್ತು ಕೆಲವು ಇತರ ವ್ಯಕ್ತಿಗಳಿಗೆ ಅದೇ ನಡಾವಳಿಗಳ ಅಡಿಯಲ್ಲಿ ಸೂಚನಾ ಪತ್ರವನ್ನು ನೀಡಿದ್ದು, ಮತ್ತು ಮುಖ್ಯ ವ್ಯಕ್ತಿಗೆ ಪ್ರತಿಯಾದ ಅಂಥ ನಡಾವಳಿಗಳು, ಪ್ರಕರಣ 73 ಅಥವಾ ಪ್ರಕರಣ 74ರ ಅಡಿಯಲ್ಲಿ ಮುಕ್ತಾಯಗೊಳಿಸಲಾಗಿದ್ದಲ್ಲಿ, ಪ್ರಕರಣ 122, 125, 129 ಮತ್ತು 130ಗಳ ಅಡಿಯಲ್ಲಿ ದಂಡವನ್ನು ಸಂದಾಯ ಮಾಡುವುದಕ್ಕೆ ಬಾಧ್ಯರಿರುವ ಎಲ್ಲಾ ವ್ಯಕ್ತಿಗಳ ವಿರುದ್ಧವಾದ ನಡಾವಳಿಗಳು ಮುಕ್ತಾಯವಾಗಿವೆ ಎಂದು ಪರಿಭಾವಿಸತಕ್ಕದ್ದು.

ವಿವರಣೆ 2:– ಈ ಅಧಿನಿಯಮದ ಉದ್ದೇಶಗಳಿಗಾಗಿ **"**ಬಚ್ಚಿಡುವುದು**"**ಎಂಬ ಪದಾವಳಿಯನ್ನು, ಒಬ್ಬ ತೆರಿಗೆದಾಯಕ ವ್ಯಕ್ತಿಯು ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿ ಒದಗಿಸಬೇಕಾದ ರಿಟರ್ನ್, ವಿವರಪತ್ರ, ಅಥವಾ ಯಾವುದೇ ಇತರ ದಸ್ತಾವೇಜುಗಳಲ್ಲಿ ಘೋಷಿಸುವುದಕ್ಕೆ ಅಗತ್ಯವಿರುವಂತಹ, ಸಂಗತಿಗಳನ್ನು ಅಥವಾ ಮಾಹಿತಿಯನ್ನು ಘೋಷಿಸದಿರುವುದು ಅಥವಾ ಯುಕ್ತ ಅಧಿಕಾರಿಯಿಂದ ಲಿಖಿತರೂಪದಲ್ಲಿ ಕೇಳಲಾದ ಯಾವುದೇ ಮಾಹಿತಿಯನ್ನು ಒದಗಿಸಲು ವಿಫಲವಾಗುವುದು ಎಂದು ಅರ್ಥೈಸತಕ್ಕದ್ದು.

75. ತೆರಿಗೆ ನಿರ್ಧರಣೆಗೆ ಸಂಬಂಧಿಸಿದ ಸಾಮಾನ್ಯ ಉಪಬಂಧಗಳು.– (1) ಸೂಚನಾ ಪತ್ರದ ಜಾರಿಗೊಳಿಸುವಿಕೆ ಅಥವಾ ಆದೇಶದ ನೀಡುವಿಕೆಯು, ನ್ಯಾಯಾಲಯದ ಅಥವಾ ಅಪೀಲು ನ್ಯಾಯಾಧಿಕರಣದ ಒಂದು ಆದೇಶದಿಂದ ತಡೆಹಿಡಿಯಲ್ಪಟ್ಟಿದ್ದಲ್ಲಿ, ಪ್ರಕರಣ 73ರ ಉಪಪ್ರಕರಣಗಳಾದ (2) ಮತ್ತು (10) ರಲ್ಲಿ ಅಥವಾ ಸಂದರ್ಭಾನುಸಾರವಾಗಿ ಪ್ರಕರಣ 74ರ ಉಪಪ್ರಕರಣಗಳಾದ (2) ಮತ್ತು (10) ರಲ್ಲಿ ನಿರ್ದಿಷ್ಟಪಡಿಸಿದ ಅವಧಿಯನ್ನು ಲೆಕ್ಕಹಾಕುವಾಗ ಅಂಥ ತಡೆಹಿಡಿಯಲ್ಪಟ್ಟ ಅವಧಿಯನ್ನು ಬಿಡತಕ್ಕದ್ದು.

(2) ಪ್ರಕರಣ 74ರ ಉಪಪ್ರಕರಣ (1)ರ ಅಡಿಯಲ್ಲಿ ನೀಡಲಾದ ಸೂಚನಾ ಪತ್ರವು, ತೆರಿಗೆಯನ್ನು ತಪ್ಪಿಸುವುದಕ್ಕಾಗಿ, ಮೋಸ ಅಥವಾ ಉದ್ದೇಶಪೂರ್ವಕವಾಗಿ ಯಾವುದೇ ಸಂಗತಿಗಳನ್ನು ತಪ್ಪಾಗಿ ಹೇಳುವುದು ಅಥವಾ ಬಚ್ಚಿಡಲಾಗಿದೆ ಎನ್ನುವ ಆರೋಪವನ್ನು ಯಾರಿಗೆ ಸೂಚನಾಪತ್ರವನ್ನು ನೀಡಲಾಗಿದೆಯೋ ಅವನ ವಿರುದ್ಧ ಸಾಬೀತುಪಡಿಸಲಾಗದ ಕಾರಣಗಳಿಂದ ಸಮರ್ಥನೀಯವಲ್ಲ ಎಂದು ಯಾವುದೇ ಅಪೀಲು ಪ್ರಾಧಿಕಾರ ಅಥವಾ ಅಪೀಲು ನ್ಯಾಯಾಧಿಕರಣ ಅಥವಾ ನ್ಯಾಯಾಲಯವು ತೀರ್ಮಾನಿಸಿದ್ದಲ್ಲಿ, ಯುಕ್ತ ಅಧಿಕಾರಿಯು ಅಂಥ ವ್ಯಕ್ತಿಯಿಂದ ಸಂದಾಯ ಮಾಡಬೇಕಾದ ತೆರಿಗೆಯನ್ನು, ಪ್ರಕರಣ 73ರ ಉಪಪ್ರಕರಣ (1)ರ ಅಡಿಯಲ್ಲಿ ಸೂಚನಾಪತ್ರವನ್ನು ನೀಡಲಾಗಿದೆ ಎಂದು ಪರಿಭಾವಿಸಿ ನಿರ್ಧರಿಸತಕ್ಕದ್ದು.

(3) ಅಪೀಲು ಪ್ರಾಧಿಕಾರ ಅಥವಾ ಅಪೀಲು ನ್ಯಾಯಾಧಿಕರಣ ಅಥವಾ ನ್ಯಾಯಾಲಯದ ನಿರ್ದೇಶನಕ್ಕೆ ಅನುಗುಣವಾಗಿ ಯಾವುದೇ ಆದೇಶವನ್ನು ನೀಡುವುದು ಅಗತ್ಯವಾಗಿದ್ದಲ್ಲಿ, ಅಂಥ ಆದೇಶವನ್ನು ಸದರಿ ನಿರ್ದೇಶನವನ್ನು ತಿಳಿಯಪಡಿಸಿದ ದಿನಾಂಕದಿಂದ ಎರಡು ವರ್ಷಗಳ ಒಳಗಾಗಿ ನೀಡತಕ್ಕದ್ದು.

(4) ತೆರಿಗೆ ಅಥವಾ ದಂಡದ ಹೊಣೆಯನ್ನು ಹೊರಿಸಬಹುದಾದ ವ್ಯಕ್ತಿಯಿಂದ ಲಿಖಿತವಾಗಿ ಒಂದು ಕೋರಿಕೆಯನ್ನು ಸ್ವೀಕರಿಸಿದ್ದಲ್ಲಿ, ಅಥವಾ ಅಂಥ ವ್ಯಕ್ತಿಯ ವಿರುದ್ಧವಾಗಿ ಯಾವುದೇ ವ್ಯತಿರಿಕ್ತವಾದ ನಿರ್ಣಯವನ್ನು ಉದ್ದೇಶಿಸಿದಲ್ಲಿ, ಅಹವಾಲನ್ನು ಹೇಳಿಕೊಳ್ಳುವ ಒಂದು ಅವಕಾಶವನ್ನು ನೀಡತಕ್ಕದ್ದು.

(5) ಯುಕ್ತ ಅಧಿಕಾರಿಯು, ತೆರಿಗೆಯ ಹೊಣೆಯನ್ನು ಹೊರಿಸಬಹುದಾದ ವ್ಯಕ್ತಿಯು ಸಾಕಷ್ಟು ಕಾರಣಗಳನ್ನು ತೋರಿಸಿದ್ದರೆ, ಸದರಿ ವ್ಯಕ್ತಿಗೆ ಕಾಲಾವಕಾಶವನ್ನು ನೀಡತಕ್ಕದ್ದು ಮತ್ತು ಲಿಖಿತವಾಗಿ ದಾಖಲಿಸಬಹುದಾದ ಕಾರಣಗಳಿಗಾಗಿ ಅಹವಾಲು ಕೇಳಿಕೆಯನ್ನು ಮುಂದೂಡತಕ್ಕದ್ದು:

ಪರಂತು, ನಡವಾಳಿಗಳ ಸಮಯದಲ್ಲಿ ಒಬ್ಬ ವ್ಯಕ್ತಿಗೆ ಮೂರು ಬಾರಿಗಿಂತ ಹೆಚ್ಚಿನ ಅಂಥ ಮುಂದೂಡಿಕೆಯನ್ನು ನೀಡತಕ್ಕದ್ದಲ್ಲ.

(6) ಯುಕ್ತ ಅಧಿಕಾರಿಯು, ತನ್ನ ಆದೇಶದಲ್ಲಿ, ಸಂಬಂಧಿತ ಸಂಗತಿಗಳನ್ನು ಮತ್ತು ತನ್ನ ನಿರ್ಣಯಕ್ಕೆ ಆಧಾರವಾದ ಅಂಶಗಳನ್ನು ನಿರೂಪಿಸತಕ್ಕದ್ದು.

(7) ಆದೇಶದಲ್ಲಿ ತಗಾದೆ ಮಾಡಲಾದ ತೆರಿಗೆ, ಬಡ್ಡಿ, ಮತ್ತು ದಂಡದ ಮೊತ್ತವು ಸೂಚನಾಪತ್ರದಲ್ಲಿ ನಿರ್ದಿಷ್ಟಪಡಿಸಿದ ಮೊತ್ತಕ್ಕಿಂತ ಅಧಿಕವಾಗಿರತಕ್ಕದ್ದಲ್ಲ ಮತ್ತು ಸೂಚನಾ ಪತ್ರದಲ್ಲಿ ನಿರ್ದಿಷ್ಟಪಡಿಸಿದ ಕಾರಣಾಧಾರಗಳನ್ನು ಹೊರತುಪಡಿಸಿದಂತಹ ಇತರ ಕಾರಣಾಧಾರಗಳ ಮೇಲೆ ತಗಾದೆಯನ್ನು ಸ್ಥಿರೀಕರಿಸುವಂತಿಲ್ಲ.

(8) ಯುಕ್ತ ಅಧಿಕಾರಿಯಿಂದ ನಿರ್ಧರಿಸಲ್ಪಟ್ಟ ತೆರಿಗೆಯ ಮೊತ್ತವನ್ನು ಅಪೀಲು ಪ್ರಾಧಿಕಾರ ಅಥವಾ ಅಪೀಲು ನ್ಯಾಯಾಧಿಕರಣ ಅಥವಾ ನ್ಯಾಯಾಲಯವು ಮಾರ್ಪಡಿಸಿದಲ್ಲಿ, ಹಾಗೆ ಮಾರ್ಪಡಿಸಿದ ತೆರಿಗೆಯ ಮೊತ್ತವನ್ನು ಪರಿಗಣನೆಗೆ ತೆಗೆದುಕೊಂಡು, ಅದಕ್ಕನುಸಾರವಾಗಿ ಬಡ್ಡಿ ಮತ್ತು ದಂಡದ ಮೊತ್ತವು ಮಾರ್ಪಾಡಾಗತಕ್ಕದ್ದು.

(9) ಕಡಿಮೆ ಸಂದಾಯ ಮಾಡಿದ ಅಥವಾ ಸಂದಾಯ ಮಾಡದೇ ಇರುವ ತೆರಿಗೆಯ ಮೇಲಿನ ಬಡ್ಡಿಯನ್ನು, ತೆರಿಗೆ ಬಾಧ್ಯತೆಯನ್ನು ನಿರ್ಧರಿಸುವ ಆದೇಶದಲ್ಲಿ ನಿರ್ದಿಷ್ಟಪಡಿಸಿರಲಿ ಅಥವಾ ಇಲ್ಲದಿರಲಿ ಸಂದಾಯ ಮಾಡತಕ್ಕದ್ದು.

(10) ಪ್ರಕರಣ 73ರ ಉಪಪ್ರಕರಣ (10) ರಲ್ಲಿ ಉಪಬಂಧಿಸಿದಂತೆ ಮೂರು ವರ್ಷದ ಒಳಗಾಗಿ ಅಥವಾ ಪ್ರಕರಣ 74ರ ಉಪಪ್ರಕರಣ (10) ರಲ್ಲಿ ಉಪಬಂಧಿಸಿದಂತೆ ಐದು ವರ್ಷದ ಒಳಗಾಗಿ ಆದೇಶವನ್ನು ಹೊರಡಿಸದಿದ್ದಲ್ಲಿ, ನ್ಯಾಯನಿರ್ಣಯ ನಡಾವಳಿಗಳು ಮುಕ್ತಾಯವಾಗಿವೆ ಎಂದು ಪರಿಭಾವಿಸತಕ್ಕದ್ದು.

(11) ಅಪೀಲು ಪ್ರಾಧಿಕಾರ ಅಥವಾ ಅಪೀಲು ನ್ಯಾಯಾಧಿಕರಣ ಅಥವಾ ಉಚ್ಚ ನ್ಯಾಯಾಲಯವು ಒಂದು ವಿಷಯದ ಮೇಲೆ ತನ್ನ ನಿರ್ಣಯವನ್ನು ನೀಡಿದ್ದು, ಅದು ಕೆಲವು ಇತರ ನಡಾವಳಿಗಳಲ್ಲಿ ರಾಜಸ್ವದ ಹಿತಾಸಕ್ತಿಗೆ ಬಾಧಕವಾಗಿದ್ದಾಗ ಮತ್ತು ಅಪೀಲು ಪ್ರಾಧಿಕಾರ ಅಥವಾ ಅಪೀಲು ನ್ಯಾಯಾಧಿಕರಣ ಅಥವಾ ಉಚ್ಚ ನ್ಯಾಯಾಲಯದ ಅಂಥ ನಿರ್ಣಯದ ವಿರುದ್ಧ ಅಪೀಲು ನ್ಯಾಯಾಧಿಕರಣ ಅಥವಾ ಉಚ್ಚ ನ್ಯಾಯಾಲಯ ಅಥವಾ ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಿರುವ ಅಪೀಲು ಇತ್ಯರ್ಥದಲ್ಲಿರುವಾಗ, ಅಪೀಲು ಪ್ರಾಧಿಕಾರದ ನಿರ್ಣಯದ ದಿನಾಂಕದಿಂದ ಅಪೀಲು ನ್ಯಾಯಾಧಿಕರಣದ ನಿರ್ಣಯದ ದಿನಾಂಕದವರೆಗೆ, ಅಥವಾ ಅಪೀಲು ನ್ಯಾಯಾಧಿಕರಣದ ನಿರ್ಣಯದ ದಿನಾಂಕದಿಂದ ಉಚ್ಚ ನ್ಯಾಯಾಲಯದ ನಿರ್ಣಯದ ದಿನಾಂಕದವರೆಗೆ, ಅಥವಾ ಉಚ್ಚ ನ್ಯಾಯಾಲಯದ ನಿರ್ಣಯದ ದಿನಾಂಕದಿಂದ ಸರ್ವೋಚ್ಚ ನ್ಯಾಯಾಲಯದ ನಿರ್ಣಯದ ದಿನಾಂಕದ ನಡುವೆ ಕಳೆದ ಅವಧಿಯನ್ನು, ಸದರಿ ಪ್ರಕರಣಗಳ ಅಡಿಯಲ್ಲಿ ಕಾರಣ ಕೇಳುವ ಸೂಚನಾಪತ್ರವನ್ನು ನೀಡುವುದರ ಮೂಲಕ ನಡಾವಳಿಗಳನ್ನು ಪ್ರಾರಂಭಿಸಿದ್ದಲ್ಲಿ, ಪ್ರಕರಣ 73ರ ಉಪಪ್ರಕರಣ (10) ಅಥವಾ ಪ್ರಕರಣ 74ರ ಉಪಪ್ರಕರಣ(10) ರಲ್ಲಿ ಉಲ್ಲೇಖಿಸಲಾದ ಅವಧಿಯನ್ನು ಲೆಕ್ಕಹಾಕುವಾಗ ಬಿಡತಕ್ಕದ್ದು.

(12) ಪ್ರಕರಣ 73 ಅಥವಾ ಪ್ರಕರಣ 74ರಲ್ಲಿ ಏನೇ ಒಳಗೊಂಡಿದ್ದರೂ, ಪ್ರಕರಣ 39ರ ಅಡಿಯಲ್ಲಿ ಒದಗಿಸಿದ ಒಂದು ರಿಟರ್ನಗೆ ಅನುಸಾರವಾಗಿ ಸ್ವಯಂ–ನಿರ್ಧರಿತ ತೆರಿಗೆಯ ಯಾವುದೇ ಮೊತ್ತವು ಪೂರ್ಣವಾಗಿ ಅಥವಾ ಭಾಗಶಃ ಸಂದಾಯವಾಗದೆ ಉಳಿದಿದ್ದಲ್ಲಿ, ಅಥವಾ ಅಂಥ ತೆರಿಗೆಯ ಮೇಲೆ ಸಂದಾಯ ಮಾಡಬೇಕಾದ ಬಡ್ಡಿಯ ಯಾವುದೇ ಮೊತ್ತವು ಸಂದಾಯವಾಗದೆ ಉಳಿದಿದ್ದಲ್ಲಿ, ಅದನ್ನು ಪ್ರಕರಣ 79ರ ಉಪಬಂಧಗಳ ಅನುಸಾರವಾಗಿ ವಸೂಲಿ ಮಾಡತಕ್ಕದ್ದು.

(13) ಪ್ರಕರಣ 73 ಅಥವಾ ಪ್ರಕರಣ 74ರ ಅಡಿಯಲ್ಲಿ ಯಾವುದಾದರೂ ದಂಡ ವಿಧಿಸಿದ್ದಲ್ಲಿ, ಈ ಅಧಿನಿಯಮದ ಯಾವುದೇ ಇತರೆ ಉಪಬಂಧಗಳ ಅಡಿಯಲ್ಲಿ ಅದೇ ವ್ಯಕ್ತಿಯ ಮೇಲೆ, ಅದೇ ಕೃತ್ಯ ಅಥವಾ ಲೋಪಕ್ಕಾಗಿ ದಂಡ ವಿಧಿಸತಕ್ಕದ್ದಲ್ಲ.

76. ತೆರಿಗೆಯನ್ನು ಸಂಗ್ರಹಿಸಿರುವುದು ಆದರೆ ಸರ್ಕಾರಕ್ಕೆ ಸಂದಾಯ ಮಾಡದಿರುವುದು.– (1) ಯಾವುದೇ ಅಪೀಲು ಪ್ರಾಧಿಕಾರ ಅಥವಾ ಅಪೀಲು ನ್ಯಾಯಾಧಿಕರಣ ಅಥವಾ ನ್ಯಾಯಾಲಯದ ಯಾವುದೇ ಆದೇಶ ಅಥವಾ ನಿರ್ದೇಶನ ಅಥವಾ ಈ ಅಧಿನಿಯಮದ ಯಾವುದೇ ಇತರ ಉಪಬಂಧಗಳು ಅಥವಾ ಇದರ ಅಡಿಯಲ್ಲಿ ಮಾಡಲಾದ ನಿಯಮಗಳು ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಇದಕ್ಕೆ ವಿರುದ್ಧವಾಗಿ ಏನೇ ಒಳಗೊಂಡಿದ್ದರೂ ಸಹ, ಯಾವುದೇ ಇತರ ವ್ಯಕ್ತಿಯಿಂದ ಈ ಅಧಿನಿಯಮದ ಅಡಿಯಲ್ಲಿ ತೆರಿಗೆಯನ್ನು ಪ್ರತಿನಿಧಿಸುವ ಯಾವುದೇ ಮೊತ್ತವನ್ನು ಸಂಗ್ರಹಿಸಿದ್ದು ಮತ್ತು ಸದರಿ ಮೊತ್ತವನ್ನು ಸರ್ಕಾರಕ್ಕೆ ಸಂದಾಯ ಮಾಡದಿರುವ ಪ್ರತಿಯೊಬ್ಬ ವ್ಯಕ್ತಿಯು, ಸಂಗ್ರಹಿಸಿದ ಅಂಥ ಮೊತ್ತಕ್ಕೆ ಸಂಬಂಧಿಸಿದ ಪೂರೈಕೆಗಳು ತೆರಿಗೆದಾಯಕವಾಗಿರಲಿ ಅಥವಾ ಇಲ್ಲದಿರಲಿ ಸದರಿ ಮೊತ್ತವನ್ನು ಸರ್ಕಾರಕ್ಕೆ ತತ್ಕ್ಷಣವೇ ಸಂದಾಯ ಮಾಡತಕ್ಕದ್ದು.

(2) ಉಪಪ್ರಕರಣ (1)ರ ಅಡಿಯಲ್ಲಿ ಸರ್ಕಾರಕ್ಕೆ ಯಾವುದೇ ಮೊತ್ತವನ್ನು ಸಂದಾಯ ಮಾಡುವುದು ಅಗತ್ಯವಿದ್ದಲ್ಲಿ, ಮತ್ತು ಅದನ್ನು ಸಂದಾಯ ಮಾಡಿರದಿದ್ದಲ್ಲಿ, ಯುಕ್ತ ಅಧಿಕಾರಿಯು, ಅಂಥ ಮೊತ್ತವನ್ನು ಸಂದಾಯ ಮಾಡಲು ಬಾಧ್ಯನಿರುವ ವ್ಯಕ್ತಿಗೆ ಸೂಚನಾಪತ್ರದಲ್ಲಿ ನಿರ್ದಿಷ್ಟಪಡಿಸಿದ ಸದರಿ ಮೊತ್ತವನ್ನು ಆತನು ಸರ್ಕಾರಕ್ಕೆ ಏಕೆ ಸಂದಾಯ ಮಾಡಬಾರದು ಎನ್ನುವುದಕ್ಕೆ ಕಾರಣಗಳನ್ನು ತೋರಿಸುವಂತೆ ಮತ್ತು ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಅವನ ಮೇಲೆ ಸೂಚನಾಪತ್ರದಲ್ಲಿ ನಿರ್ದಿಷ್ಟಪಡಿಸಿದ ಸದರಿ ಮೊತ್ತಕ್ಕೆ ಸಮನಾದ ದಂಡವನ್ನು ಏಕೆ ವಿಧಿಸಬಾರದು ಎಂದು ಅವನನ್ನು ಅಗತ್ಯಪಡಿಸಿ ಸೂಚನಾಪತ್ರವನ್ನು ನೀಡತಕ್ಕದ್ದು.

(3) ಉಪಪ್ರಕರಣ (2)ರ ಅಡಿಯಲ್ಲಿ ಯಾರ ಮೇಲೆ ಸೂಚನಾ ಪತ್ರವನ್ನು ಜಾರಿಗೊಳಿಸಲಾಗಿದಯೋ ಆ ವ್ಯಕ್ತಿಯಿಂದ ಮಾಡಲಾದ ವಿಜ್ಞಾಪನೆ ಯಾವುದಾದರು ಇದ್ದರೆ ಅದನ್ನು ಪರಿಗಣಿಸಿದ ನಂತರ, ಯುಕ್ತ ಅಧಿಕಾರಿಯು, ಅಂಥ ವ್ಯಕ್ತಿಯಿಂದ ಬಾಕಿಯಿರುವ ಮೊತ್ತವನ್ನು ನಿರ್ಧರಿಸತಕ್ಕದ್ದು ಮತ್ತು ಅದಾದ ಕೂಡಲೇ ಅಂಥ ವ್ಯಕ್ತಿಯು ಹಾಗೆ ನಿರ್ಧರಿಸಿದ ಮೊತ್ತವನ್ನು ಸಂದಾಯ ಮಾಡತಕ್ಕದ್ದು.

(4) ಉಪಪ್ರಕರಣ (1)ರಲ್ಲಿ ಉಲ್ಲೇಖಿಸಿದ ವ್ಯಕ್ತಿಯು, ಉಪಪ್ರಕರಣ (1) ಅಥವಾ ಉಪ–ಪ್ರಕರಣ (3)ರಲ್ಲಿ ಉಲ್ಲೇಖಿಸಿದ ಮೊತ್ತವನ್ನು ಸಂದಾಯ ಮಾಡುವುದಕ್ಕೆ ಹೆಚ್ಚುವರಿಯಾಗಿ, ಅಂಥ ಮೊತ್ತವು ಆತನಿಂದ ಸಂಗ್ರಹಣೆಯಾದ ದಿನಾಂಕದಿಂದ ಆತನು ಸರ್ಕಾರಕ್ಕೆ ಸಂದಾಯ ಮಾಡಿದ ದಿನಾಂಕದವರೆಗೆ, ಅದರ ಮೇಲೆ ಪ್ರಕರಣ 50ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ದರದಲ್ಲಿ ಬಡ್ಡಿಯನ್ನು ಸಹ ಸಂದಾಯ ಮಾಡುವುದಕ್ಕೆ ಬಾಧ್ಯನಿರತಕ್ಕದ್ದು.

(5) ಕಾರಣ ಕೇಳುವ ಸೂಚನಾಪತ್ರವನ್ನು ಯಾರಿಗೆ ನೀಡಲಾಗಿದೆಯೋ ಅಂಥ ವ್ಯಕ್ತಿಯಿಂದ ಒಂದು ಕೋರಿಕೆಯನ್ನು ಲಿಖಿತವಾಗಿ ಸ್ವೀಕರಿಸಿದ್ದಲ್ಲಿ, ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡತಕ್ಕದ್ದು.

(6) ಯುಕ್ತ ಅಧಿಕಾರಿಯು ಸೂಚನಾ ಪತ್ರ ಜಾರಿಗೊಳಿಸಿದ ದಿನಾಂಕದಿಂದ ಒಂದು ವರ್ಷದ ಒಳಗಾಗಿ ಒಂದು ಆದೇಶವನ್ನು ನೀಡತಕ್ಕದ್ದು.

(7) ಆದೇಶದ ನೀಡುವಿಕೆಯು, ನ್ಯಾಯಾಲಯದ ಅಥವಾ ಅಪೀಲು ನ್ಯಾಯಾಧಿಕರಣದ ಒಂದು ಆದೇಶದಿಂದ ತಡೆಹಿಡಿಯಲ್ಪಟ್ಟಿದ್ದಲ್ಲಿ, ಒಂದು ವರ್ಷದ ಅವಧಿಯನ್ನು ಲೆಕ್ಕಹಾಕುವಾಗ ಅಂಥ ತಡೆಹಿಡಿಯಲ್ಪಟ್ಟ ಅವಧಿಯನ್ನು ಬಿಡತಕ್ಕದ್ದು.

(8) ಯುಕ್ತ ಅಧಿಕಾರಿಯು, ತನ್ನ ಆದೇಶದಲ್ಲಿ, ಸಂಬಂಧಿತ ಸಂಗತಿಗಳನ್ನು ಮತ್ತು ತನ್ನ ನಿರ್ಣಯಕ್ಕೆ ಆಧಾರವಾದ ಅಂಶಗಳನ್ನು ನಿರೂಪಿಸತಕ್ಕದ್ದು.

(9) ಉಪಪ್ರಕರಣ (1) ಅಥವಾ ಉಪ–ಪ್ರಕರಣ (3)ರ ಅಡಿಯಲ್ಲಿ ಸರ್ಕಾರಕ್ಕೆ ಸಂದಾಯ ಮಾಡಿದ ಮೊತ್ತವನ್ನು, ಉಪ–ಪ್ರಕರಣ (1)ರಲ್ಲಿ ಉಲ್ಲೇಖಿಸಿದ ಪೂರೈಕೆಗಳಿಗೆ ಸಂಬಂಧಿಸಿದಂತೆ ಆ ವ್ಯಕ್ತಿಯಿಂದ ಯಾವುದಾದರೂ ತೆರಿಗೆ ಸಂದಾಯವಾಗಬೇಕಿದ್ದಲ್ಲಿ ಅದಕ್ಕೆ ಪ್ರತಿಯಾಗಿ ಹೊಂದಿಸತಕ್ಕದ್ದು.

(10) ಉಪಪ್ರಕರಣ (9)ರ ಅಡಿಯಲ್ಲಿ ಹೊಂದಾಣಿಕೆ ಮಾಡಿದ ನಂತರ ಯಾವುದೇ ಹೆಚ್ಚುವರಿ ಉಳಿದಲ್ಲಿ, ಅಂಥ ಹೆಚ್ಚುವರಿಯ ಮೊತ್ತವನ್ನು ನಿಧಿಗೆ ಜಮೆಗೊಳಿಸತಕ್ಕದ್ದು ಅಥವಾ ಅಂಥ ಮೊತ್ತದ ಹೊರೆಯನ್ನು ಹೊರುವ ವ್ಯಕ್ತಿಗೆ ಮರುಪಾವತಿಯನ್ನಾದರೂ ಮಾಡತಕ್ಕದ್ದು.

(11) ಮೊತ್ತದ ಹೊರೆಯನ್ನು ಹೊತ್ತುಕೊಂಡ ವ್ಯಕ್ತಿಯು, ಪ್ರಕರಣ 54ರ ಉಪಬಂಧಗಳಿಗೆ ಅನುಸಾರವಾಗಿ ಅದರ ಮರುಪಾವತಿಗಾಗಿ ಅರ್ಜಿಯನ್ನು ಸಲ್ಲಿಸಬಹುದು.

77. ತೆರಿಗೆಯನ್ನು ತಪ್ಪಾಗಿ ಸಂಗ್ರಹಿಸುವುದು ಮತ್ತು ಕೇಂದ್ರ ಸರ್ಕಾರಕ್ಕೆ ಅಥವಾ ರಾಜ್ಯ ಸರ್ಕಾರಕ್ಕೆ ಅದನ್ನು ಸಂದಾಯ ಮಾಡುವುದು.– (1) ಒಬ್ಬ ನೋಂದಾಯಿತ ವ್ಯಕ್ತಿಯು, ರಾಜ್ಯದೊಳಗಿನ ಪೂರೈಕೆ ಎಂದು ಆತನಿಂದ ಪರಿಗಣಿತವಾಗಿ, ಒಂದು ವ್ಯವಹಾರದ ಮೇಲೆ ಆತನು ರಾಜ್ಯ ತೆರಿಗೆ ಮತ್ತು ಕೇಂದ್ರ ತೆರಿಗೆಯನ್ನು ಸಂದಾಯ ಮಾಡಿದ್ದು, ಆದರೆ ತರುವಾಯದಲ್ಲಿ ಅದು ಅಂತರ–ರಾಜ್ಯ ಪೂರೈಕೆ ಎಂದಾದಲ್ಲಿ, ಹಾಗೆ ಸಂದಾಯ ಮಾಡಿದ ತೆರಿಗೆಯನ್ನು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ಮರುಪಾವತಿ ಮಾಡತಕ್ಕದ್ದು.

(2) ಒಬ್ಬ ನೋಂದಾಯಿತ ವ್ಯಕ್ತಿಯು, ಅಂತರ–ರಾಜ್ಯ ಪೂರೈಕೆ ಎಂದು ಆತನಿಂದ ಪರಿಗಣಿತವಾಗಿ, ಒಂದು ವ್ಯವಹಾರದ ಮೇಲೆ ಆತನು ಏಕೀಕೃತ ತೆರಿಗೆಯನ್ನು ಸಂದಾಯ ಮಾಡಿದ್ದು, ಆದರೆ ತರುವಾಯದಲ್ಲಿ ಅದು ರಾಜ್ಯದೊಳಗಿನ ಪೂರೈಕೆ ಎಂದಾದಲ್ಲಿ, ಸಂದಾಯ ಮಾಡಬೇಕಾದ ರಾಜ್ಯ ತೆರಿಗೆಯ ಮೊತ್ತದ ಮೇಲೆ ಯಾವುದೇ ಬಡ್ಡಿಯನ್ನು ಸಂದಾಯ ಮಾಡುವುದು ಅಗತ್ಯವಿರತಕ್ಕದ್ದಲ್ಲ.

78. ವಸೂಲಿ ನಡಾವಳಿಗಳ ಪ್ರಾರಂಭಿಸುವಿಕೆ.– ಈ ಅಧಿನಿಯಮದ ಅಡಿಯಲ್ಲಿ ಹೊರಡಿಸಲಾದ ಒಂದು ಆದೇಶಕ್ಕೆ ಅನುಗುಣವಾಗಿ ತೆರಿಗೆದಾಯಕ ವ್ಯಕ್ತಿಯು ಸಂದಾಯ ಮಾಡಬೇಕಾದ ಯಾವುದೇ ಮೊತ್ತವು ಅಂಥ ವ್ಯಕ್ತಿಯಿಂದ ಅಂಥ ಆದೇಶ ಜಾರಿಗೊಳಿಸಿದ ದಿನಾಂಕದಿಂದ ಮೂರು ತಿಂಗಳ ಅವಧಿಯ ಒಳಗಾಗಿ ಸಂದಾಯ ಮಾಡತಕ್ಕದ್ದು, ಹಾಗೆ ಮಾಡಲು ವಿಫಲವಾದಲ್ಲಿ ವಸೂಲಿ ನಡಾವಳಿಗಳನ್ನು ಪ್ರಾರಂಭಿಸತಕ್ಕದ್ದು:

ಪರಂತು, ಯುಕ್ತ ಅಧಿಕಾರಿಯು ರಾಜಸ್ವದ ಹಿತಾಸಕ್ತಿಯ ದೃಷ್ಟಿಯಿಂದ ಸಮಯೋಚಿತವಾದುದು ಎಂದು ಪರಿಗಣಿಸಿದ್ದಲ್ಲಿ, ಅವನು ಲಿಖಿತವಾಗಿ ದಾಖಲಿಸಬಹುದಾದ ಕಾರಣಗಳಿಗಾಗಿ ಆತನು ನಿರ್ದಿಷ್ಟಪಡಿಸಬಹುದಾದ ಮೂರು ತಿಂಗಳುಗಳ ಅವಧಿಗಿಂತ ಕಡಿಮೆಯಾದ ಅಂಥ ಅವಧಿಯೊಳಗಾಗಿ ಅಂಥ ಮೊತ್ತವನ್ನು ಸಂದಾಯ ಮಾಡುವಂತೆ ಸದರಿ ತೆರಿಗೆದಾಯಕ ವ್ಯಕ್ತಿಯನ್ನು ಅಗತ್ಯಪಡಿಸಬಹುದು.

79. ತೆರಿಗೆಯ ವಸೂಲಿ.– (1) ಈ ಅಧಿನಿಯಮದ ಯಾವುದೇ ಉಪಬಂಧಗಳ ಅಥವಾ ಇದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿ ಒಬ್ಬ ವ್ಯಕ್ತಿಯು ಸರ್ಕಾರಕ್ಕೆ ಸಂದಾಯ ಮಾಡಬೇಕಾದ ಯಾವುದೇ ಮೊತ್ತವನ್ನು ಸಂದಾಯ ಮಾಡದಿದ್ದಲ್ಲಿ, ಯುಕ್ತ ಅಧಿಕಾರಿಯು ಈ ಕೆಳಗಿನ ಒಂದು ಅಥವಾ ಹೆಚ್ಚಿನ ವಿಧಾನಗಳಲ್ಲಿ ವಸೂಲಿ ಮಾಡಲು ಮುಂದುವರಿಯತಕ್ಕದ್ದು, ಎಂದರೆ:–

(ಎ) ಯುಕ್ತ ಅಧಿಕಾರಿಯ ಅಥವಾ ಯಾವುದೇ ಇತರ ನಿರ್ದಿಷ್ಟಪಡಿಸಿದ ಅಧಿಕಾರಿಯ ನಿಯಂತ್ರಣದಲ್ಲಿರುವ, ಅಂಥ ವ್ಯಕ್ತಿಗೆ ಕೊಡತಕ್ಕ ಯಾವುದೇ ಹಣದಲ್ಲಿ, ಹಾಗೆ ಸಂದಾಯ ಮಾಡಬೇಕಾದ ಮೊತ್ತವನ್ನು, ಆ ಯುಕ್ತ ಅಧಿಕಾರಿಯು ಕಡಿತಗೊಳಿಸಬಹುದು ಅಥವಾ ಅಂಥ ಇತರೆ ನಿರ್ದಿಷ್ಟಪಡಿಸಿದ ಅಧಿಕಾರಿಯಿಂದ ಕಡಿತಗೊಳಿಸುವಂತೆ ಅಗತ್ಯಪಡಿಸಬಹುದು;

(ಬಿ) ಯುಕ್ತ ಅಧಿಕಾರಿಯ ಅಥವಾ ಯಾವುದೇ ಇತರ ನಿರ್ದಿಷ್ಟಪಡಿಸಿದ ಅಧಿಕಾರಿಯ ನಿಯಂತ್ರಣದಲ್ಲಿರುವ, ಅಂಥ ವ್ಯಕ್ತಿಗೆ ಸೇರಿದ, ಯಾವುದೇ ಸರಕುಗಳನ್ನು, ಸ್ಥಾನಬದ್ಧಗೊಳಿಸುವುದರ ಮತ್ತು ಮಾರಾಟ ಮಾಡುವುದರ ಮೂಲಕ ಹಾಗೆ ಸಂದಾಯ ಮಾಡಬೇಕಾದ ಮೊತ್ತವನ್ನು ಆ ಯುಕ್ತ ಅಧಿಕಾರಿಯು ವಸೂಲಿ ಮಾಡಬಹುದು ಅಥವಾ ಅಂಥ ಇತರೆ ನಿರ್ದಿಷ್ಟಪಡಿಸಿದ ಅಧಿಕಾರಿಯು ವಸೂಲಿ ಮಾಡುವಂತೆ ಅಗತ್ಯಪಡಿಸಬಹುದು;

(ಸಿ) (i) ಅಂಥ ವ್ಯಕ್ತಿಗೆ ಹಣದ ಬಾಕಿಯನ್ನು ನೀಡಬೇಕಿರುವ ಅಥವಾ ಮುಂದೆ ಬಾಕಿ ನೀಡಬೇಕಾಗಬಹುದಾದ ಅಥವಾ ಅಂಥ ವ್ಯಕ್ತಿಗಾಗಿ ಅಥವಾ ಆತನ ಪರವಾಗಿ, ಹಣವನ್ನು ಹೊಂದಿರುವ ಅಥವಾ ತರುವಾಯವಾಗಿ ಹೊಂದಬಹುದಾದ ಯಾವುದೇ ಇತರೆ ವ್ಯಕ್ತಿಯನ್ನು, ಹಣವು ಬಾಕಿಯಾದ ಅಥವಾ ಹೊಂದಿದ ತಕ್ಷಣವಾಗಲಿ ಅಥವಾ ಆ ಹಣವು ಬಾಕಿಯಾಗದ ಅಥವಾ ಹೊಂದುವುದಕ್ಕಿಂತ ಮುಂಚಿತವಾಗಿ ಅಲ್ಲದಂತೆ, ಸೂಚನಾ ಪತ್ರದಲ್ಲಿ ನಿರ್ದಿಷ್ಟಪಡಿಸಿದ ಸಮಯದ ಒಳಗಾಗಿಯಾಗಲಿ, ಅಂಥ ವ್ಯಕ್ತಿಯಿಂದ ಬಾಕಿಯಿರುವ

ಮೊತ್ತವನ್ನು ಸಂದಾಯ ಮಾಡಲು ಸಾಕಾಗುವಷ್ಟು ಪ್ರಮಾಣದ ಹಣವನ್ನು ಅಥವಾ ಅದು ಆ ಮೊತ್ತಕ್ಕೆ ಸಮಾನವಾಗಿದ್ದಾಗ ಅಥವಾ ಅದಕ್ಕಿಂತ ಕಡಿಮೆಯಿದ್ದಾಗ, ಸಂಪೂರ್ಣ ಹಣವನ್ನು ಸರ್ಕಾರಕ್ಕೆ ಸಂದಾಯ ಮಾಡುವಂತೆ ಯುಕ್ತ ಅಧಿಕಾರಿಯು ಒಂದು ಲಿಖಿತ ಸೂಚನಾಪತ್ರದ ಮೂಲಕ ಅಗತ್ಯಪಡಿಸಬಹುದು.

(ii) ಉಪ–ಖಂಡ (i)ರ ಅಡಿಯಲ್ಲಿ ಸೂಚನಾ ಪತ್ರ ನೀಡಲಾಗಿರುವ ಪ್ರತಿಯೊಬ್ಬ ವ್ಯಕ್ತಿಯು, ಅಂಥ ಸೂಚನಾಪತ್ರವನ್ನು ಪಾಲಿಸಲು ಬದ್ಧನಾಗಿರತಕ್ಕದ್ದು, ಮತ್ತು ನಿರ್ದಿಷ್ಟವಾಗಿ, ಅಂಥ ಸೂಚನಾಪತ್ರವನ್ನು ಒಂದು ಅಂಚೆ ಕಛೇರಿಗೆ, ಬ್ಯಾಂಕಿಂಗ್ ಕಂಪನಿಗೆ ಅಥವಾ ಒಬ್ಬ ವಿಮಾದಾರನಿಗೆ ನೀಡಿದ್ದಲ್ಲಿ, ಯಾವುದೇ ನಿಯಮ, ಆಚರಣೆ ಅಥವಾ ಅಗತ್ಯತೆಗಳಲ್ಲಿ ಇದಕ್ಕೆ ವಿರುದ್ಧವಾಗಿ ಏನೇ ಇದ್ದರೂ, ಮೊತ್ತವನ್ನು ಸಂದಾಯ ಮಾಡುವುದಕ್ಕಿಂತ ಮುಂಚಿತವಾಗಿ ಯಾವುದೇ ನಮೂದುಗಳ, ಹಿಂಬರಹದ ಅಥವಾ ಅಂಥದೇ ಉದ್ದೇಶಕ್ಕಾಗಿ, ಯಾವುದೇ ಪಾಸು ಬುಕ್ಕನ್ನು, ಠೇವಣಿ ರಶೀದಿಯನ್ನು, ಪಾಲಿಸಿಯನ್ನು ಅಥವಾ ಯಾವುದೇ ಇತರೇ ದಸ್ತಾವೇಜುಗಳನ್ನು ಹಾಜರುಪಡಿಸುವ ಅಗತ್ಯವಿರತಕ್ಕದ್ದಲ್ಲ.

(iii) ಉಪ–ಖಂಡ (i)ರ ಅಡಿಯಲ್ಲಿ ಯಾರಿಗೆ ಸೂಚನಾ ಪತ್ರ ನೀಡಲಾಗಿದೆಯೋ ಆ ವ್ಯಕ್ತಿಯು, ಅದಕ್ಕನುಗುಣವಾಗಿ ಸರ್ಕಾರಕ್ಕೆ ಸಂದಾಯ ಮಾಡಲು ವಿಫಲನಾದ ಸಂದರ್ಭದಲ್ಲಿ, ಸೂಚನಾಪತ್ರದಲ್ಲಿ ನಿರ್ದಿಷ್ಟಪಡಿಸಲಾಗಿರುವ ಮೊತ್ತಕ್ಕೆ ಸಂಬಂಧಿಸಿದಂತೆ ಅವನನ್ನು ಬಾಕಿದಾರ ಎಂದು ಪರಿಭಾವಿಸತಕ್ಕದ್ದು ಮತ್ತು ಈ ಅಧಿನಿಯಮ ಅಥವಾ ಇದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿನ ಎಲ್ಲಾ ಪರಿಣಾಮಗಳು ಅನುಸರಿಸತಕ್ಕದ್ದು.

(iv) ಉಪ–ಖಂಡ (i)ರ ಅಡಿಯಲ್ಲಿ ಒಂದು ಸೂಚನಾ ಪತ್ರವನ್ನು ನೀಡುವ ಅಧಿಕಾರಿಯು, ಯಾವುದೇ ಸಮಯದಲ್ಲಿ ಅಂಥ ಸೂಚನಾಪತ್ರವನ್ನು ತಿದ್ದುಪಡಿ ಮಾಡಬಹುದು ಅಥವಾ ಹಿಂಪಡೆಯಬಹುದು ಅಥವಾ ಸೂಚನಾಪತ್ರಕ್ಕೆ ಅನುಗುಣವಾಗಿ ಯಾವುದೇ ಸಂದಾಯವನ್ನು ಮಾಡಲು ಕಾಲಾವಕಾಶವನ್ನು ವಿಸ್ತರಿಸಬಹುದು;

(v) ಉಪ–ಖಂಡ (i)ರ ಅಡಿಯಲ್ಲಿ ನೀಡಲಾದ ಒಂದು ಸೂಚನಾ ಪತ್ರದ ಅನುಸರಣೆಯಲ್ಲಿ ಯಾವುದೇ ಸಂದಾಯವನ್ನು ಮಾಡುವ ಯಾವೊಬ್ಬ ವ್ಯಕ್ತಿಯು, ಬಾಕಿದಾರನಾಗಿರುವ ವ್ಯಕ್ತಿಯ ಪ್ರಾಧಿಕಾರದ ಅಡಿಯಲ್ಲಿ ಸಂದಾಯ ಮಾಡಿದ್ದಾನೆ ಎಂದು ಪರಿಭಾವಿಸತಕ್ಕದ್ದು ಮತ್ತು ಸರ್ಕಾರಕ್ಕೆ ಜಮೆಗೊಂಡ ಅಂಥ ಸಂದಾಯವು, ಬಾಕಿದಾರನಾಗಿರುವ ವ್ಯಕ್ತಿಗೆ, ರಶೀದಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಮೊತ್ತದಷ್ಟರಮಟ್ಟಿಗೆ, ಅಂಥ ವ್ಯಕ್ತಿಯ ಬಾಧ್ಯತೆಯು ವಿಮೋಚನೆಯು ಸರಿಯಾಗಿದೆ ಮತ್ತು ಸಾಕಷ್ಟಾಗಿದೆ ಎಂದು ಪರಿಭಾವಿಸತಕ್ಕದ್ದು;

(vi) ಉಪ–ಖಂಡ (i)ರ ಅಡಿಯಲ್ಲಿ ಆತನಿಗೆ ಒಂದು ಸೂಚನಾ ಪತ್ರ ಜಾರಿಮಾಡಿದ ನಂತರ, ಬಾಕಿದಾರನಾಗಿರುವ ವ್ಯಕ್ತಿಗೆ ಯಾವುದೇ ಬಾಧ್ಯತೆಯನ್ನು ವಿಮೋಚನೆ ಮಾಡುವ ಯಾವುದೇ ವ್ಯಕ್ತಿಯು, ಬಾಧ್ಯತೆಯನ್ನು ವಿಮೋಚನೆ ಮಾಡಿದಷ್ಟು ಅಥವಾ ಬಾಕಿದಾರನಾಗಿರುವ ವ್ಯಕ್ತಿಯ ತೆರಿಗೆ, ಬಡ್ಡಿ, ಮತ್ತು ದಂಡದಷ್ಟು, ಇವುಗಳಲ್ಲಿ ಯಾವುದು ಕಡಿಯಮೆಯೋ ಅಷ್ಟರ ಮಟ್ಟಿಗೆ ಸರ್ಕಾರಕ್ಕೆ ವೈಯಕ್ತಿಕವಾಗಿ ಬಾಧ್ಯನಿರತಕ್ಕದ್ದು;

(vii) ಉಪ–ಖಂಡ (i)ರ ಅಡಿಯಲ್ಲಿ ಯಾರಿಗೆ ಸೂಚನಾಪತ್ರ ಜಾರಿಮಾಡಲಾಗಿದೆಯೋ ಆ ವ್ಯಕ್ತಿಯು, ಸೂಚನಾಪತ್ರವನ್ನು ನೀಡುವ ಅಧಿಕಾರಿಗೆ ಮನದಟ್ಟಾಗುವ ಹಾಗೆ, ಸೂಚನಾಪತ್ರವನ್ನು ಆತನಿಗೆ ನೀಡಿದ ಸಮಯದಲ್ಲಿ ತಗಾದೆ ಮಾಡಲಾದ ಹಣ ಅಥವಾ ಅದರ ಯಾವುದೇ ಭಾಗ, ಬಾಕಿದಾರನಾದ ವ್ಯಕ್ತಿಗೆ ಬಾಕಿಯಾಗಿಲ್ಲವೆಂದೋ ಅಥವಾ ಬಾಕಿದಾರನಾದ ವ್ಯಕ್ತಿಗಾಗಿ ಅಥವಾ ಆತನ ಪರವಾಗಿ ಯಾವುದೇ ಹಣವನ್ನು ಅವನು ಹೊಂದಿಲ್ಲವೆಂದೋ, ತಗಾದೆ ಮಾಡಲಾದ ಹಣ ಅಥವಾ ಅದರ ಯಾವುದೇ ಭಾಗ ಸದರಿ ವ್ಯಕ್ತಿಗೆ ಬಾಕಿಯಾಗುವ ಅಥವಾ ಅಂಥ ವ್ಯಕ್ತಿಯ ಪರವಾಗಿ ಹೊಂದುವ ಸಂಭವವಿಲ್ಲವೆಂದೋ ಎಂದು ಸಾಬೀತು ಪಡಿಸಿದಲ್ಲಿ, ಯಾವುದೇ ಅಂಥ ಹಣ ಅಥವಾ ಅದರ ಯಾವುದೇ ಭಾಗವನ್ನು ಸರ್ಕಾರಕ್ಕೆ ಸಂದಾಯ ಮಾಡುವಂತೆ ಈ

ಪ್ರಕರಣದಲ್ಲಿ ಒಳಗೊಂಡಿರುವುದಾವುದು ಸೂಚನಾಪತ್ರವನ್ನು ಯಾರಿಗೆ ನೀಡಲಾಗಿದೆಯೋ ಆ ವ್ಯಕ್ತಿಯನ್ನು ಅಗತ್ಯಪಡಿಸಲಾಗಿದೆ ಎಂದು ಪರಿಭಾವಿಸತಕ್ಕದ್ದಲ್ಲ;

(ಡಿ) ಯುಕ್ತ ಅಧಿಕಾರಿಯು, ಈ ಸಂಬಂಧದಲ್ಲಿ ಮಾಡಲಾದ ನಿಯಮಗಳಿಗೆ ಅನುಸಾರವಾಗಿ, ಅಂಥ ವ್ಯಕ್ತಿಗೆ ಸೇರಿದ ಅಥವಾ ನಿಯಂತ್ರಣದಲ್ಲಿರುವ ಯಾವುದೇ ಚರ ಅಥವಾ ಸ್ಥಿರ ಸ್ವತ್ತನ್ನು ಜಪ್ತಿ ಮಾಡಬಹುದು ಮತ್ತು ಅದನ್ನು ಸಂದಾಯ ಮಾಡಬೇಕಾದ ಮೊತ್ತ ಸಂದಾಯವಾಗುವವರೆವಿಗೂ ತಡೆಹಿಡಿಯಬಹುದು; ಮತ್ತು ಸಂದಾಯ ಮಾಡಬೇಕಾದ ಸದರಿ ಮೊತ್ತದ ಅಥವಾ ಜಪ್ತಿಯ ಅಥವಾ ಸ್ವತ್ತನ್ನು ಇಟ್ಟುಕೊಳ್ಳುವುದರ ವೆಚ್ಚದ ಯಾವುದೇ ಭಾಗ ಅಂಥ ಜಪ್ತಿಯಾದ ಮೂವತ್ತು ದಿನಗಳ ಅವಧಿಯವರೆಗೆ ಸಂದಾಯವಾಗದೆ ಉಳಿದಂತಹ ಸಂದರ್ಭದಲ್ಲಿ, ಸದರಿ ಸ್ವತ್ತನ್ನು ಮಾರಾಟ ಮಾಡಿಸಬಹುದು ಹಾಗೂ ಸಂದಾಯವಾಗಬೇಕಾದ ಮೊತ್ತವನ್ನು ಮತ್ತು ಮಾರಾಟದ ವೆಚ್ಚವನ್ನು ಒಳಗೊಂಡಂತೆ ಸಂದಾಯವಾಗದ ವೆಚ್ಚಗಳನ್ನು ಅಂಥ ಮಾರಾಟದ ಉತ್ಪತ್ತಿಯಿಂದ ತೀರಿಸಬಹುದು ಮತ್ತು ಹೆಚ್ಚುವರಿ ಮೊತ್ತ ಏನಾದರೂ ಇದ್ದಲ್ಲಿ, ಅಂಥ ವ್ಯಕ್ತಿಗೆ ಒಪ್ಪಿಸತಕ್ಕದ್ದು.

(ಇ) ಯುಕ್ತ ಅಧಿಕಾರಿಯು ಅಂಥ ವ್ಯಕ್ತಿಯಿಂದ ಬಾಕಿ ಇರುವ ಮೊತ್ತವನ್ನು ನಿರ್ದಿಷ್ಟಪಡಿಸಿರುವ, ಆತನಿಂದ ಸಹಿ ಮಾಡಿರುವ, ಒಂದು ಪ್ರಮಾಣಪತ್ರವನ್ನು ಸಿದ್ಧಪಡಿಸಬಹುದು ಮತ್ತು ಅಂಥ ವ್ಯಕ್ತಿಯು, ಯಾವುದೇ ಸ್ವತ್ತನ್ನು ಹೊಂದಿರುವ ಅಥವಾ ವಾಸಿಸುವ ಅಥವಾ ಆತನು ವ್ಯವಹಾರವನ್ನು ನಡೆಸುತ್ತಿರುವ ಜಿಲ್ಲೆಯ ಕಲೆಕ್ಟರನಿಗೆ ಅಥವಾ ಸರ್ಕಾರವು ಪ್ರಾಧಿಕೃತಗೊಳಿಸಿದ ಯಾವುದೇ ಅಧಿಕಾರಿಗೆ ಕಳುಹಿಸುವುದು ಮತ್ತು ಸದರಿ ಕಲೆಕ್ಟರನು ಅಥವಾ ಸದರಿ ಅಧಿಕಾರಿಯು, ಅಂಥ ಪ್ರಮಾಣಪತ್ರವನ್ನು ಸ್ವೀಕರಿಸಿದ ಮೇಲೆ, ಅದರಲ್ಲಿ ನಿರ್ದಿಷ್ಟಪಡಿಸಿರುವ ಮೊತ್ತವನ್ನು ಭೂಕಂದಾಯದ ಹಿಂಬಾಕಿ ಎನ್ನುವ ಹಾಗೆಯೆ ಅಂಥ ವ್ಯಕ್ತಿಯಿಂದ ವಸೂಲಿ ಮಾಡಲು ಮುಂದುವರಿಯತಕ್ಕದ್ದು.

(ಎಫ್) ದಂಡ ಪ್ರಕ್ರಿಯಾ ಸಂಹಿತೆ, 1973ರಲ್ಲಿ (1974ರ ಕೇಂದ್ರ ಅಧಿನಿಯಮ 2) ಏನೇ ಒಳಗೊಂಡಿದ್ದರೂ, ಯುಕ್ತ ಅಧಿಕಾರಿಯು ಸೂಕ್ತ ಮ್ಯಾಜಿಸ್ಟ್ರೇಟ್‌ಗೆ ಅರ್ಜಿಯನ್ನು ಸಲ್ಲಿಸುವುದು ಮತ್ತು ಅದರಲ್ಲಿ ನಿರ್ದಿಷ್ಟಪಡಿಸಿರುವ ಮೊತ್ತವನ್ನು ಸದರಿ ಮ್ಯಾಜಿಸ್ಟ್ರೇಟ್ ತಮ್ಮಿಂದಲೇ ವಿಧಿಸಲಾದ ಜುಲ್ಮಾನೆ ಎನ್ನುವ ಹಾಗೆಯೆ ಅಂಥ ವ್ಯಕ್ತಿಯಿಂದ ವಸೂಲಿ ಮಾಡಲು ಮುಂದುವರಿಯತಕ್ಕದ್ದು.

(2) ಈ ಅಧಿನಿಯಮದ ಅಥವಾ ಇದರ ಅಡಿಯಲ್ಲಿ ಮಾಡಲಾದ ಯಾವುದೇ ನಿಯಮಗಳು ಅಥವಾ ವಿನಿಯಮಗಳ ಅಡಿಯಲ್ಲಿ ಕಾರ್ಯಗತಗೊಳಿಸಿದ ಯಾವುದೇ ಬಾಂಡ್‌ನ ಅಥವಾ ಇತರೆ ಲಿಖಿತ ಪತ್ರದ ನಿಬಂಧನೆಗಳ ಅಡಿಯಲ್ಲಿ, ಅಂಥ ಲಿಖಿತ ಪತ್ರದ ಅಡಿಯಲ್ಲಿ ಬಾಕಿಯಿರುವ ಯಾವುದೇ ಮೊತ್ತವನ್ನು ಉಪಪ್ರಕರಣ (1)ರಲ್ಲಿ ಹೇಳಲಾದ ವಿಧಾನದಲ್ಲಿ ವಸೂಲಿ ಮಾಡಬಹುದು ಎಂದು ಉಪಬಂಧಿಸಿದ್ದರೆ, ಆ ಮೊತ್ತವನ್ನು, ಯಾವುದೇ ಇತರ ವಸೂಲಿಯ ವಿಧಾನಗಳಿಗೆ ಬಾಧಕವಾಗದಂತೆ, ಆ ಉಪ–ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ವಸೂಲಿ ಮಾಡಬಹುದು.

(3) ಈ ಅಧಿನಿಯಮದ ಯಾವುದೇ ಉಪಬಂಧಗಳ ಅಥವಾ ಇದರ ಅಡಿಯಲ್ಲಿ ಮಾಡಲಾದ ಯಾವುದೇ ನಿಯಮಗಳ ಅಡಿಯಲ್ಲಿ ಸರ್ಕಾರಕ್ಕೆ ಒಬ್ಬ ವ್ಯಕ್ತಿಯಿಂದ ಸಂದಾಯವಾಗಬೇಕಾದ ಯಾವುದೇ ತೆರಿಗೆ, ಬಡ್ಡಿ ಅಥವಾ ದಂಡದ ಯಾವುದೇ ಮೊತ್ತವಿದ್ದು ಮತ್ತು ಅದು ಸಂದಾಯವಾಗದೆ ಹಾಗೆಯೇ ಉಳಿದಿದ್ದಲ್ಲಿ, ಕೇಂದ್ರ ತೆರಿಗೆಯ ಯುಕ್ತ ಅಧಿಕಾರಿಯು ಸದರಿ ತೆರಿಗೆಯ ಹಿಂಬಾಕಿಯ ವಸೂಲಾತಿಯ ಕ್ರಮದಲ್ಲಿ, ಸದರಿ ವ್ಯಕ್ತಿಯಿಂದ ಆ ಮೊತ್ತವನ್ನು ಕೇಂದ್ರ ತೆರಿಗೆಯ ಹಿಂಬಾಕಿ ಎನ್ನುವ ಹಾಗೆಯೇ ವಸೂಲಿ ಮಾಡಬಹುದು ಮತ್ತು ಹಾಗೆ ವಸೂಲಿ ಮಾಡಿದ ಮೊತ್ತವನ್ನು ಸರ್ಕಾರಕ್ಕೆ ಜಮೆಗೊಳಿಸಬಹುದು.

(4) ಉಪಪ್ರಕರಣ (3)ರ ಅಡಿಯಲ್ಲಿ ವಸೂಲಿ ಮಾಡಿದ ಮೊತ್ತವು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳಿಗೆ ಬಾಕಿಯಿರುವ ಮೊತ್ತಕ್ಕಿಂತ ಕಡಿಮೆಯಿದ್ದಲ್ಲಿ, ಸಂಬಂಧಿಸಿದ ಸರ್ಕಾರಗಳ ಖಾತೆಗೆ ಜಮೆಗೊಳಿಸಬೇಕಾದ ಮೊತ್ತವು, ಪ್ರತಿಯೊಂದು ಅಂಥ ಸರ್ಕಾರಕ್ಕೆ ಬಾಕಿಯಿರುವ ಮೊತ್ತಗಳ ಅನುಪಾತಕ್ಕೆ ಅನುಗುಣವಾಗಿರತಕ್ಕದ್ದು.

80. ತೆರಿಗೆ ಮತ್ತು ಇತರೇ ಮೊತ್ತಗಳನ್ನು ಕಂತುಗಳಲ್ಲಿ ಸಂದಾಯ ಮಾಡುವುದು.– ಒಬ್ಬ ತೆರಿಗೆದಾಯಕ ವ್ಯಕ್ತಿಯಿಂದ ಸಲ್ಲಿಸಲಾದ ಒಂದು ಅರ್ಜಿಯ ಮೇಲೆ, ಆಯುಕ್ತರು, ಲಿಖಿತವಾಗಿ ದಾಖಲಿಸಬೇಕಾದ ಕಾರಣಗಳಿಗಾಗಿ, ಯಾವುದೇ ರಿಟರ್ನನಲ್ಲಿ ಸ್ವಯಂ–ನಿರ್ಧರಿತ ಬಾಧ್ಯತೆಯ ಪ್ರಕಾರ ಬಾಕಿಯಿರುವ ಮೊತ್ತವನ್ನು ಹೊರತುಪಡಿಸಿದಂತೆ, ಅಂಥ ವ್ಯಕ್ತಿಯಿಂದ ಈ ಅಧಿನಿಯಮದ ಅಡಿಯಲ್ಲಿ ಬಾಕಿಯಿರುವ ಯಾವುದೇ ಮೊತ್ತವನ್ನು ಸಂದಾಯ ಮಾಡಲು ಸಮಯವನ್ನು ವಿಸ್ತರಿಸಬಹುದು ಅಥವಾ ನಿಯಮಿಸಬಹುದಾದ ಅಂಥ ಷರತ್ತುಗಳು ಮತ್ತು ಮಿತಿಗಳಿಗೆ ಒಳಪಟ್ಟು ಮತ್ತು ಪ್ರಕರಣ 50ರ ಅಡಿಯಲ್ಲಿ ಬಡ್ಡಿ ಸಂದಾಯದ ನಿಬಂಧನೆಗೆ ಒಳಪಟ್ಟು, ಇಪ್ಪತ್ನಾಲ್ಕಕ್ಕೆ ಮೀರದ ಮಾಸಿಕ ಕಂತುಗಳಲ್ಲಿ ಸಂದಾಯ ಮಾಡಲು ಅವಕಾಶ ನೀಡಬಹುದು:

ಪರಂತು, ಯಾವುದೇ ಒಂದು ಕಂತು ಅದರ ಗಡುವು ದಿನಾಂಕದಲ್ಲಿ ಸಂದಾಯವಾಗದೆ ಬಾಕಿಯಾದಲ್ಲಿ, ಅಂಥ ದಿನಾಂಕದಂದು ಸಂದಾಯ ಮಾಡಬೇಕಿರುವ ಉಳಿದ ಸಂಪೂರ್ಣ ಮೊತ್ತವು ಬಾಕಿಯಾಗತಕ್ಕದ್ದು ಮತ್ತು ತತ್‌ಕ್ಷಣವಾಗಿ ಸಂದಾಯ ಮಾಡತಕ್ಕದ್ದು ಮತ್ತು ಮುಂದೆ ಯಾವುದೇ ಸೂಚನಾಪತ್ರವನ್ನು ನೀಡದೇ ಆ ವ್ಯಕ್ತಿಯು ವಸೂಲಿಗೆ ಬಾಧ್ಯವಿರತಕ್ಕದ್ದು.

81. ಕೆಲವೊಂದು ಪ್ರಕರಣಗಳಲ್ಲಿ ಸ್ವತ್ತಿನ ವರ್ಗಾವಣೆ ಶೂನ್ಯಗೊಳ್ಳುವುದು.– ಒಬ್ಬ ವ್ಯಕ್ತಿಯು, ಯಾವುದೇ ಮೊತ್ತವು ಅವನಿಂದ ಬಾಕಿಯಾದ ನಂತರ, ಸರ್ಕಾರದ ರಾಜಸ್ವಕ್ಕೆ ಮೋಸ ಮಾಡುವ ಉದ್ದೇಶದಿಂದ ಅವನಿಗೆ ಸೇರಿದ ಅಥವಾ ಆತನ ಸ್ವಾಧೀನದಲ್ಲಿರುವ, ಒಂದು ಸ್ವತ್ತಿನ ಮೇಲೆ ಋಣಭಾರವನ್ನು ಸೃಷ್ಟಿಸಿದ್ದಲ್ಲಿ ಅಥವಾ ಆತನ ಯಾವುದಾದರು ಆಸ್ತಿಗಳನ್ನು ಯಾವುದೇ ಇತರ ವ್ಯಕ್ತಿಯ ಪರವಾಗಿ ಮಾರಾಟ, ಅಡಮಾನ, ವಿನಿಮಯ, ಅಥವಾ ಯಾವುದೇ ಇತರೆ ಯಾವುದೇ ವರ್ಗಾವಣೆಯ ಪ್ರಕಾರಗಳ ಮೂಲಕ ವರ್ಗಾಯಿಸಿದ್ದಲ್ಲಿ, ಅಂಥ ಋಣಭಾರ ಅಥವಾ ವರ್ಗಾವಣೆಯು ಸದರಿ ವ್ಯಕ್ತಿಯಿಂದ ಸಂದಾಯ ಮಾಡಬೇಕಾದ ಯಾವುದೇ ತೆರಿಗೆ ಅಥವಾ ಯಾವುದೇ ಇತರೇ ಮೊತ್ತಕ್ಕೆ ಸಂಬಂಧಿಸಿದ ಕ್ಲೇಮಿಗೆ ಪ್ರತಿಯಾಗಿ ಶೂನ್ಯಗೊಳ್ಳತಕ್ಕದ್ದು:

ಪರಂತು, ಅಂಥ ಋಣಭಾರ ಅಥವಾ ವರ್ಗಾವಣೆಯನ್ನು ಸಾಕಷ್ಟು ಪ್ರಮಾಣದ ಪ್ರತಿಫಲಕ್ಕಾಗಿ, ಸದ್ಭಾವನೆಯಿಂದ ಮತ್ತು ಈ ಅಧಿನಿಯಮದ ಅಡಿಯಲ್ಲಿ ಇತ್ಯರ್ಥದಲ್ಲಿರುವ ಅಂಥ ನಡಾವಳಿಗಳ ತಿಳಿವಳಿಕೆಯಿಲ್ಲದೆ ಅಥವಾ ಸದರಿ ವ್ಯಕ್ತಿಯಿಂದ ಸಂದಾಯವಾಗಬೇಕಾದ ಅಂಥ ತೆರಿಗೆ ಅಥವಾ ಇತರೇ ಮೊತ್ತದ ಸೂಚನೆಯಿಲ್ಲದೆ, ಅಥವಾ ಯುಕ್ತ ಅಧಿಕಾರಿಯ ಪೂರ್ವಾನುಮತಿಯೊಂದಿಗೆ ಮಾಡಲಾಗಿದ್ದರೆ ಶೂನ್ಯಗೊಳ್ಳತಕ್ಕದ್ದಲ್ಲ.

82. ತೆರಿಗೆಯು ಸ್ವತ್ತಿನ ಮೇಲೆ ಮೊದಲನೇ ಋಣಭಾರವಾಗಿರುವುದು.– ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಇದಕ್ಕೆ ವಿರುದ್ಧವಾಗಿ ಏನೇ ಒಳಗೊಂಡಿದ್ದರೂ, ದಿವಾಳಿ ಮತ್ತು ಸಾಲ ತೀರಿಕೆಯ ಅಸಮರ್ಥತೆಯ ಸಂಹಿತೆ, 2016ರಲ್ಲಿ (2016ರ ಕೇಂದ್ರ ಅಧಿನಿಯಮ 31) ಉಪಬಂಧಿಸಿದುದನ್ನುಳಿದು, ಸರ್ಕಾರಕ್ಕೆ ಅವನು ಸಂದಾಯ ಮಾಡಲು ಬಾಧ್ಯನಿರುವ, ತೆರಿಗೆ, ಬಡ್ಡಿ, ಅಥವಾ ದಂಡದ ಕಾರಣದಿಂದಾಗಿ ಒಬ್ಬ ತೆರಿಗೆದಾಯಕ ವ್ಯಕ್ತಿಯಿಂದ ಅಥವಾ ಯಾವುದೇ ಇತರೇ ವ್ಯಕ್ತಿಯಿಂದ ಸಂದಾಯ ಮಾಡಬೇಕಿರುವ ಯಾವುದೇ ಮೊತ್ತವು ಅಂಥ ತೆರಿಗೆದಾಯಕ ವ್ಯಕ್ತಿಯ ಅಥವಾ ಅಂಥ ವ್ಯಕ್ತಿಯ ಸ್ವತ್ತಿನ ಮೇಲೆ ಮೊದಲನೇ ಋಣಭಾರವಾಗಿರತಕ್ಕದ್ದು.

83. ರಾಜಸ್ವದ ರಕ್ಷಣೆಗಾಗಿ ಕೆಲವೊಂದು ಪ್ರಕರಣಗಳಲ್ಲಿ ತಾತ್ಕಾಲಿಕ ಜಪ್ತಿ.– (1) ಪ್ರಕರಣ 62 ಅಥವಾ ಪ್ರಕರಣ 63 ಅಥವಾ ಪ್ರಕರಣ 64 ಅಥವಾ ಪ್ರಕರಣ 67 ಅಥವಾ ಪ್ರಕರಣ 73 ಅಥವಾ ಪ್ರಕರಣ 74ರ ಅಡಿಯಲ್ಲಿ ಯಾವುದೇ ನಡಾವಳಿಗಳು ಇತ್ಯರ್ಥದಲ್ಲಿರುವ ಸಮಯದಲ್ಲಿ, ಆಯುಕ್ತರು, ಸರ್ಕಾರದ ರಾಜಸ್ವದ ಹಿತಾಸಕ್ತಿಯ ರಕ್ಷಣೆಯ ಉದ್ದೇಶಕ್ಕಾಗಿ ಹಾಗೆ ಮಾಡುವುದು ಅಗತ್ಯ ಎನ್ನುವ ಅಭಿಪ್ರಾಯ ಹೊಂದಿದ್ದಲ್ಲಿ, ಅವರು ಲಿಖಿತ ಆದೇಶದ ಮೂಲಕ ತೆರಿಗೆದಾಯಕ ವ್ಯಕ್ತಿಗೆ ಸೇರಿದ ಬ್ಯಾಂಕ್ ಖಾತೆಯನ್ನು ಒಳಗೊಂಡಂತೆ ಯಾವುದೇ ಸ್ವತ್ತನ್ನು, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ತಾತ್ಕಾಲಿಕವಾಗಿ ಜಪ್ತಿ ಮಾಡಬಹುದು.

(2) ಉಪಪ್ರಕರಣ (1)ರ ಅಡಿಯಲ್ಲಿ ಮಾಡಿದ ಆದೇಶದ ದಿನಾಂಕದಿಂದ ಒಂದು ವರ್ಷದ ಅವಧಿ ಮುಗಿದ ನಂತರ ಪ್ರತಿಯೊಂದು ಅಂಥ ತಾತ್ಕಾಲಿಕ ಜಪ್ತಿಯ ಪರಿಣಾಮವು ಸ್ಥಗಿತಗೊಳ್ಳತಕ್ಕದ್ದು.

84. ಕೆಲವೊಂದು ವಸೂಲಿ ನಡಾವಳಿಗಳ ಮುಂದುವರಿಕೆ ಮತ್ತು ಸಿಂಧುಗೊಳಿಸುವಿಕೆ.– (1) ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾದ ಯಾವುದೇ ತೆರಿಗೆ, ದಂಡ, ಬಡ್ಡಿ ಅಥವಾ ಯಾವುದೇ ಇತರ ಮೊತ್ತಕ್ಕೆ (ಈ ಪ್ರಕರಣದಲ್ಲಿ ಇನ್ನು ಮುಂದೆ **"ಸರ್ಕಾರಿ ಬಾಕಿಗಳು"** ಎಂದು ಉಲ್ಲೇಖಿಸಲಾಗಿದೆ) ಸಂಬಂಧಿಸಿದಂತೆ ತಗಾದೆ ಸೂಚನಾಪತ್ರವನ್ನು ಯಾವುದೇ ತೆರಿಗೆದಾಯಕ ವ್ಯಕ್ತಿಯ ಅಥವಾ ಯಾವುದೇ ಇತರ ವ್ಯಕ್ತಿಯ ಮೇಲೆ ಜಾರಿಗೊಳಿಸಿದ್ದಲ್ಲಿ ಮತ್ತು ಅಂಥ ಸರ್ಕಾರಿ ಬಾಕಿಗಳಿಗೆ ಸಂಬಂಧಿಸಿದಂತೆ ಯಾವುದೇ ಅಪೀಲು ಅಥವಾ ಪುನರೀಕ್ಷಣೆ ಅರ್ಜಿ ಸಲ್ಲಿಕೆಯಾಗಿದ್ದಲ್ಲಿ ಅಥವಾ ಇತರ ನಡಾವಳಿಗಳಿಗಳು ಪ್ರಾರಂಭಗೊಂಡಿದ್ದಲ್ಲಿ, ಆಗ,–

(ಎ) ಅಂಥ ಅಪೀಲು, ಪುನರೀಕ್ಷಣೆ ಅಥವಾ ಇತರ ನಡಾವಳಿಗಳಲ್ಲಿ ಅಂಥ ಸರ್ಕಾರಿ ಬಾಕಿಗಳು ಹೆಚ್ಚಳವಾದಲ್ಲಿ, ಆಯುಕ್ತರು ಯಾವೊಬ್ಬ ತೆರಿಗೆದಾಯಕ ವ್ಯಕ್ತಿಯ ಅಥವಾ ಯಾವೊಬ್ಬ ಇತರ ವ್ಯಕ್ತಿಯ ಮೇಲೆ, ಅಂಥ ಸರ್ಕಾರಿ ಬಾಕಿಗಳು ಹೆಚ್ಚಳಗೊಂಡ ಮೊತ್ತಕ್ಕೆ ಸಂಬಂಧಿಸಿದಂತೆ ಮಾತ್ರ ಮತ್ತೊಂದು ತಗಾದೆ ಸೂಚನಾ ಪತ್ರವನ್ನು ಜಾರಿಗೊಳಿಸತಕ್ಕದ್ದು ಮತ್ತು ಅಂಥ ಅಪೀಲು, ಪುನರೀಕ್ಷಣೆ ಅಥವಾ ಇತರ ನಡಾವಳಿಗಳು ವಿಲೇವಾರಿಯಾಗುವುದಕ್ಕಿಂತ ಮೊದಲು ಅವನಿಗೆ ಜಾರಿಗೊಳಿಸಲಾಗಿರುವ ತಗಾದೆ ಸೂಚನಾಪತ್ರದಲ್ಲಿ ಇರುವ ಅಂಥ ಸರ್ಕಾರಿ ಬಾಕಿಗಳಿಗೆ ಸಂಬಂಧಿಸಿದ ಯಾವುದೇ ವಸೂಲಾತಿ ನಡಾವಳಿಗಳು, ಯಾವುದೇ ಹೊಸದಾದ ತಗಾದೆ ಸೂಚನಾಪತ್ರವನ್ನು ಜಾರಿಗೊಳಿಸದೆ, ಅಂಥ ವಿಲೇವಾರಿಗಿಂತ ನಿಕಟಪೂರ್ವದಲ್ಲಿ ಅಂಥ ನಡಾವಳಿಗಳು ಇರುವ ಹಂತದಿಂದ ಮುಂದುವರಿಯಬಹುದು.

(ಬಿ) ಅಂಥ ಅಪೀಲು, ಪುನರೀಕ್ಷಣೆ ಅಥವಾ ಇತರ ನಡಾವಳಿಗಳಿಗಳಲ್ಲಿ ಅಂಥ ಸರ್ಕಾರಿ ಬಾಕಿಗಳು ಇಳಿಕೆಯಾದಲ್ಲಿ,–

(i) ಆಯುಕ್ತರಿಗೆ, ತೆರಿಗೆದಾಯಕ ವ್ಯಕ್ತಿಯ ಮೇಲೆ ಹೊಸದಾದ ತಗಾದೆ ಸೂಚನಾಪತ್ರವನ್ನು ಜಾರಿಗೊಳಿಸುವುದು ಅಗತ್ಯವಿರತಕ್ಕದ್ದಲ್ಲ;

(ii) ಆಯುಕ್ತರು, ಅಂಥ ಇಳಿಕೆಯ ತಿಳುವಳಿಕೆಯನ್ನು ಅವನಿಗೆ ಮತ್ತು ವಸೂಲಾತಿ ನಡಾವಳಿಗಳು ಇತ್ಯರ್ಥದಲ್ಲಿರುವ ಸೂಕ್ತ ಪ್ರಾಧಿಕಾರಕ್ಕೆ ನೀಡತಕ್ಕದ್ದು;

(iii) ಅಂಥ ಅಪೀಲು, ಪುನರೀಕ್ಷಣೆ ಅಥವಾ ಇತರ ನಡಾವಳಿಗಳು ವಿಲೇವಾರಿಯಾಗುವುದಕ್ಕಿಂತ ಮೊದಲು ಅವನಿಗೆ ಜಾರಿಗೊಳಿಸಲಾಗಿರುವ ತಗಾದೆಯ ಆಧಾರದ ಮೇಲೆ ಪ್ರಾರಂಭಿಸಿದ್ದ ಯಾವುದೇ ವಸೂಲಾತಿ ನಡಾವಳಿಗಳು, ಅಂಥ ವಿಲೇವಾರಿಗಿಂತ ನಿಕಟಪೂರ್ವದಲ್ಲಿ ಅಂಥ ನಡಾವಳಿಗಳು ಇರುವ ಹಂತದಿಂದಲೇ ಹಾಗೆ ಇಳಿಕೆ ಮಾಡಲಾದ ಮೊತ್ತಕ್ಕೆ ಸಂಬಂಧಿಸಿದಂತೆ ಮುಂದುವರಿಯಬಹುದು.

ಅಧ್ಯಾಯ – XVI
ಕೆಲವೊಂದು ಪ್ರಕರಣಗಳಲ್ಲಿ ಸಂದಾಯ ಮಾಡುವ ಹೊಣೆಗಾರಿಕೆ

85. ವ್ಯವಹಾರದ ವರ್ಗಾವಣೆಯ ಸಂದರ್ಭದಲ್ಲಿ ಹೊಣೆಗಾರಿಕೆ.– (1) ಈ ಅಧಿನಿಯಮದ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡುವುದಕ್ಕೆ ಬಾಧ್ಯನಿರುವ ಯಾವೊಬ್ಬ ತೆರಿಗೆದಾಯಕ ವ್ಯಕ್ತಿಯು, ತನ್ನ ವ್ಯವಹಾರವನ್ನು, ಪೂರ್ಣವಾಗಿ ಅಥವಾ ಭಾಗಶಃ, ಮಾರಾಟ, ಉಡುಗೊರೆ, ಭೋಗ್ಯ, ಬಿಟ್ಟು ಕೊಡುವುದು ಮತ್ತು ಪರವಾನಗಿ ನೀಡುವುದು, ಬಾಡಿಗೆ ಅಥವಾ ಇತರೇ ಯಾವುದೇ ವಿಧಾನದ ಮೂಲಕ ಇತರೆ ವ್ಯಕ್ತಿಗೆ ವರ್ಗಾಯಿಸಿದ್ದಲ್ಲಿ, ತೆರಿಗೆದಾಯಕ ವ್ಯಕ್ತಿ ಮತ್ತು ಯಾರಿಗೆ ಹಾಗೆ ವ್ಯವಹಾರ ವರ್ಗಾವಣೆಗೊಂಡಿರುತ್ತದೆಯೋ ಆ ವ್ಯಕ್ತಿ, ಅಂಥ ವರ್ಗಾವಣೆಯ ಸಮಯದವರೆಗೆ ತೆರಿಗೆದಾಯಕ ವ್ಯಕ್ತಿಯಿಂದ ಬಾಕಿಯಿರುವ ತೆರಿಗೆ, ಬಡ್ಡಿ, ಅಥವಾ ಯಾವುದೇ ದಂಡವನ್ನು, ಅಂಥ ತೆರಿಗೆ, ಬಡ್ಡಿ ಅಥವಾ ದಂಡ ಅಂಥ ವರ್ಗಾವಣೆಗೆ ಮೊದಲೇ ನಿರ್ಧರಿಸಲಾಗಿದ್ದು ಆದರೆ ಸಂದಾಯವಾಗದೇ ಉಳಿದಿರಲಿ ಅಥವಾ ವರ್ಗಾವಣೆಯ ತದನಂತರ ನಿರ್ಧರಿಸಿರಲಿ, ಪೂರ್ಣವಾಗಿ ಅಥವಾ ಅಂಥ ವರ್ಗಾವಣೆಯಷ್ಟರ ಮಟ್ಟಿಗೆ ಸಂದಾಯಮಾಡುವುದಕ್ಕೆ, ಜಂಟಿಯಾಗಿ ಮತ್ತು ಬೇರೆ ಬೇರೆಯಾಗಿ ಬಾಧ್ಯರಿರತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ಉಲ್ಲೇಖಿಸಲಾಗಿರುವ ಒಂದು ವ್ಯವಹಾರದ ವರ್ಗಾಯಿತನು, ಅಂಥ ವ್ಯವಹಾರವನ್ನು ಆತನ ಸ್ವಂತ ಹೆಸರಿನಲ್ಲಿಯಾಗಲಿ ಅಥವಾ ಇತರ ಯಾವುದೇ ಹೆಸರಿನಲ್ಲಾಗಲಿ ನಡೆಸುತ್ತಿದ್ದಲ್ಲಿ, ಅವನು, ಅಂಥ ವರ್ಗಾವಣೆಯ ದಿನಾಂಕದಿಂದ ಜಾರಿಗೆ ಬರುವಂತೆ, ಆತನಿಂದ ಮಾಡಲಾದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಯ ಮೇಲೆ ತೆರಿಗೆಯನ್ನು ಸಂದಾಯ ಮಾಡುವುದಕ್ಕೆ ಬಾಧ್ಯನಿರತಕ್ಕದ್ದು ಮತ್ತು ಅವನು ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತ ವ್ಯಕ್ತಿಯಾಗಿದ್ದರೆ, ನೋಂದಣಿ ಪ್ರಮಾಣ ಪತ್ರದ ತಿದ್ದುಪಡಿಗಾಗಿ ನಿಯಮಿಸಲಾದ ಸಮಯದ ಒಳಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

86. ಏಜೆಂಟ್ ಮತ್ತು ಪ್ರಧಾನ ಕರ್ತನ ಹೊಣೆಗಾರಿಕೆ.– ಒಬ್ಬ ಏಜೆಂಟನು ತನ್ನ ಪ್ರಧಾನಕರ್ತನ ಪರವಾಗಿ ಯಾವುದೇ ತೆರಿಗೆದಾಯಕ ಸರಕುಗಳನ್ನು ಪೂರೈಕೆ ಮಾಡಿದಲ್ಲಿ ಅಥವಾ ಸ್ವೀಕರಿಸಿದಲ್ಲಿ, ಅಂಥ ಏಜೆಂಟ್ ಮತ್ತು ಆತನ ಪ್ರಧಾನಕರ್ತ ಇಬ್ಬರೂ, ಈ ಅಧಿನಿಯಮದ ಅಡಿಯಲ್ಲಿ ಅಂಥ ಸರಕುಗಳ ಮೇಲೆ ಸಂದಾಯ ಮಾಡಬೇಕಾದ ತೆರಿಗೆಯನ್ನು ಸಂದಾಯ ಮಾಡುವುದಕ್ಕೆ ಜಂಟಿಯಾಗಿ ಮತ್ತು ಬೇರೆ ಬೇರೆಯಾಗಿ ಬಾಧ್ಯರಿರತಕ್ಕದ್ದು.

87. ಕಂಪನಿಗಳ ಸಮ್ಮಿಲನ ಅಥವಾ ವಿಲೀನಗೊಳಿಸುವಿಕೆಯ ಸಂದರ್ಭದಲ್ಲಿ ಹೊಣೆಗಾರಿಕೆ.– (1) ನ್ಯಾಯಾಲಯದ ಅಥವಾ ನ್ಯಾಯಾಧಿಕರಣದ ಅಥವಾ ಅನ್ಯಥಾ ಒಂದು ಆದೇಶಕ್ಕೆ ಅನುಗುಣವಾಗಿ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಕಂಪನಿಗಳು ಸಮ್ಮಿಲನಗೊಂಡಿದ್ದಾಗ ಅಥವಾ ವಿಲೀನಗೊಂಡಿದ್ದಾಗ ಮತ್ತು ಆದೇಶದ ದಿನಾಂಕಕ್ಕಿಂತ ಮುಂಚಿತವಾಗಿಯೇ ಆ ಆದೇಶವು ಜಾರಿಗೊಳ್ಳಬೇಕಿದ್ದಾಗ ಮತ್ತು ಅಂಥ ಯಾವುದೇ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಕಂಪನಿಗಳು ಪರಸ್ಪರರಿಗೆ ಅಥವಾ ಪರಸ್ಪರರಿಂದ, ಆದೇಶವು ಜಾರಿಯಾಗುವ ದಿನಾಂಕದಿಂದ ಪ್ರಾರಂಭಗೊಂಡು ಆದೇಶದ ದಿನಾಂಕದವರೆಗಿನ ಅವಧಿಯಲ್ಲಿ, ಯಾವುದೇ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡನ್ನು ಪೂರೈಕೆ ಮಾಡಿದ್ದಲ್ಲಿ ಅಥವಾ ಸ್ವೀಕರಿಸಿದ್ದಲ್ಲಿ, ಆಗ ಅಂಥ ಪೂರೈಕೆ ಅಥವಾ ಸ್ವೀಕೃತಿಯ ವ್ಯವಹಾರಗಳನ್ನು ಸಂಬಂಧಪಟ್ಟ ಕಂಪನಿಗಳ ಪೂರೈಕೆ ಅಥವಾ ಸ್ವೀಕೃತಿಯ ವಹಿವಾಟಿಗೆ ಸೇರಿಸತಕ್ಕದ್ದು ಮತ್ತು ಅದಕ್ಕನುಸಾರವಾಗಿ ಅವುಗಳು ತೆರಿಗೆಗೆ ಬಾಧ್ಯರಾಗಿರತಕ್ಕದ್ದು.

(2) ಸದರಿ ಆದೇಶದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಉದ್ದೇಶಗಳಿಗಾಗಿ, ಸದರಿ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಕಂಪನಿಗಳನ್ನು, ಸದರಿ ಆದೇಶದ ದಿನಾಂಕದವರೆಗಿನ ಅವಧಿಗೆ, ವಿಭಿನ್ನ ಕಂಪನಿಗಳು ಎಂದು ಪರಿಗಣಿಸತಕ್ಕದ್ದು ಮತ್ತು ಸದರಿ ಆದೇಶದ ದಿನಾಂಕದಿಂದ ಜಾರಿಗೆ ಬರುವಂತೆ ಸದರಿ ಕಂಪನಿಗಳ ನೋಂದಣಿ ಪ್ರಮಾಣಪತ್ರಗಳನ್ನು ರದ್ದುಗೊಳಿಸತಕ್ಕದ್ದು.

88. ಸಮಾಪನದಲ್ಲಿರುವ ಕಂಪನಿಯ ಹೊಣೆಗಾರಿಕೆ.– (1) ನ್ಯಾಯಾಲಯದ ಅಥವಾ ನ್ಯಾಯಾಧಿಕರಣದ ಅಥವಾ ಅನ್ಯಥಾ ಆದೇಶದಿಂದಾಗಲಿ ಯಾವುದೇ ಕಂಪನಿಯು ಪರಿಸಮಾಪನಗೊಳ್ಳುತ್ತಿರುವಾಗ, ಕಂಪನಿಯ ಯಾವುದೇ ಸ್ವತ್ತುಗಳನ್ನು ಸ್ವೀಕರಿಸುವವನಾಗಿ ನೇಮಕಗೊಂಡಿರುವ ಪ್ರತಿಯೊಬ್ಬ ವ್ಯಕ್ತಿಯು (ಇನ್ನು ಮುಂದೆ **"ಸಮಾಪಕ"** ಎಂದು ಉಲ್ಲೇಖಿಸಲಾಗಿದೆ), ಆತನು ನೇಮಕಗೊಂಡ ಮೂವತ್ತು ದಿನಗಳ ಒಳಗಾಗಿ, ಆಯುಕ್ತರಿಗೆ ತನ್ನ ನೇಮಕಾತಿಯ ಮಾಹಿತಿಯನ್ನು ತಿಳಿಸತಕ್ಕದ್ದು.

(2) ಆಯುಕ್ತರು, ಅಂಥ ವಿಚಾರಣೆಯನ್ನು ಮಾಡಿದ ನಂತರ ಅಥವಾ ಅವರು ಸೂಕ್ತ ಎಂದು ಭಾವಿಸಬಹುದಾದ ಅಂಥ ಮಾಹಿತಿಯನ್ನು ಪಡೆದುಕೊಂಡ ನಂತರ, ಸಮಾಪಕನ ನೇಮಕಾತಿಯ ಮಾಹಿತಿಯನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳ ಒಳಗಾಗಿ ಸಮಾಪಕನನ್ನು ಮತ್ತು ಆಯುಕ್ತರ ಅಭಿಪ್ರಾಯದಲ್ಲಿ, ಆಗ ಅಥವಾ ತದನಂತರದಲ್ಲಿ ಕಂಪನಿಯು ಸಂದಾಯ ಮಾಡಬೇಕಾಗಬಹುದಾದ ಯಾವುದೇ ತೆರಿಗೆ, ಬಡ್ಡಿ, ಅಥವಾ ದಂಡವನ್ನು ಒದಗಿಸುವುದಕ್ಕೆ ಸಾಕಾಗುವಷ್ಟು ಮೊತ್ತವನ್ನು ಅಧಿಸೂಚಿಸತಕ್ಕದ್ದು.

(3) ಯಾವುದೇ ಖಾಸಗಿ ಕಂಪನಿಯು ಪರಿಸಮಾಪನವಾದಾಗ ಮತ್ತು ಅದರ ಸಮಾಪನಕ್ಕಿಂತ ಮುಂಚಿತವಾಗಿ ಅಥವಾ ಅದರ ಕ್ರಮದಲ್ಲಿ ಅಥವಾ ನಂತರದಲ್ಲಿ ಈ ಅಧಿನಿಯಮದ ಅಡಿಯಲ್ಲಿ ಆ ಕಂಪನಿಯ ಮೇಲೆ ಯಾವುದೇ ಅವಧಿಗೆ ನಿರ್ಧರಿಸಿದ ಯಾವುದೇ ತೆರಿಗೆ, ಬಡ್ಡಿ, ಅಥವಾ ದಂಡವನ್ನು, ವಸೂಲಿ ಮಾಡಲಾಗದಿದ್ದಲ್ಲಿ, ಆಗ, ತೆರಿಗೆ ಬಾಕಿಯಿದ್ದ ಅವಧಿಯಲ್ಲಿನ ಯಾವುದೇ ಸಮಯದಲ್ಲಿ, ಅಂಥ ಕಂಪನಿಯ ನಿರ್ದೇಶಕನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯು, ಅಂಥ ವಸೂಲಾಗದಿರುವಿಕೆಯು, ಕಂಪನಿಯ ವ್ಯವಹಾರಗಳಿಗೆ ಸಂಬಂಧಿಸಿದಂತೆ ಆತನಿಂದಾದ ಅತಿಯಾದ ನಿರ್ಲಕ್ಷ್ಯತೆ, ಅಕ್ರಮ ಕಾರ್ಯ ಅಥವಾ ಕರ್ತವ್ಯ ಉಲ್ಲಂಘನೆಯಿ ಕಾರಣದಿಂದಾದದುದಲ್ಲ ಎನ್ನುವುದನ್ನು ಆಯುಕ್ತರಿಗೆ ಮನದಟ್ಟಾಗುವಂತೆ ರುಜುವಾತುಪಡಿಸಿದ ಹೊರತು ಅಂಥ ತೆರಿಗೆ, ಬಡ್ಡಿ, ಅಥವಾ ದಂಡದ ಸಂದಾಯಕ್ಕೆ ಜಂಟಿಯಾಗಿ ಮತ್ತು ಬೇರೆ ಬೇರೆಯಾಗಿ ಬಾಧ್ಯನಿರತಕ್ಕದ್ದು.

89. ಖಾಸಗಿ ಕಂಪನಿಯ ನಿರ್ದೇಶಕರುಗಳ ಹೊಣೆಗಾರಿಕೆ.– (1) ಕಂಪನಿ ಅಧಿನಿಯಮ, 2013ರಲ್ಲಿ (2013ರ ಕೇಂದ್ರ ಅಧಿನಿಯಮ 18) ಏನೇ ಒಳಗೊಂಡಿದ್ದರೂ, ಯಾವುದೇ ಅವಧಿಯ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಯಾವುದೇ ಪೂರೈಕೆಗೆ ಸಂಬಂಧಿಸಿದಂತೆ ಒಂದು ಖಾಸಗಿ ಕಂಪನಿಯಿಂದ ಬಾಕಿಯಿರುವ ಯಾವುದೇ ತೆರಿಗೆ, ಬಡ್ಡಿ, ಅಥವಾ ದಂಡವನ್ನು ವಸೂಲಿ ಮಾಡಲಾಗದಿದ್ದಲ್ಲಿ, ಆಗ, ಅಂಥ ಅವಧಿಯಲ್ಲಿ ಖಾಸಗಿ ಕಂಪನಿಯ ನಿರ್ದೇಶಕನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯು, ಅಂಥ ವಸೂಲಾಗದಿರುವಿಕೆಯು, ಕಂಪನಿಯ ವ್ಯವಹಾರಗಳಿಗೆ ಸಂಬಂಧಿಸಿದಂತೆ ಆತನಿಂದಾದ ಅತಿಯಾದ ನಿರ್ಲಕ್ಷ್ಯತೆ, ಅಕ್ರಮ ಕಾರ್ಯ ಅಥವಾ ಕರ್ತವ್ಯ ಉಲ್ಲಂಘನೆಯಿ ಕಾರಣದಿಂದಾದದುದಲ್ಲ ಎನ್ನುವುದನ್ನು ಅವನು ರುಜುವಾತುಪಡಿಸಿದ ಹೊರತು ಅಂಥ ತೆರಿಗೆ ಬಡ್ಡಿ, ಅಥವಾ ದಂಡದ ಸಂದಾಯಕ್ಕೆ ಜಂಟಿಯಾಗಿ ಮತ್ತು ಬೇರೆ ಬೇರೆಯಾಗಿ ಬಾಧ್ಯನಿರತಕ್ಕದ್ದು.

(2) ಒಂದು ಖಾಸಗಿ ಕಂಪನಿಯು ಸಾರ್ವಜನಿಕ ಕಂಪನಿಯಾಗಿ ಪರಿವರ್ತನೆಗೊಂಡಾಗ, ಅಂಥ ಕಂಪನಿಯು ಖಾಸಗಿ ಕಂಪನಿಯಾಗಿದ್ದಂತಹ ಯಾವುದೇ ಅವಧಿಯಲ್ಲಿನ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಯಾವುದೇ ಪೂರೈಕೆಗೆ ಸಂಬಂಧಿಸಿದಂತೆ ಬಾಕಿಯಿರುವ ಯಾವುದೇ ತೆರಿಗೆ, ಬಡ್ಡಿ ಅಥವಾ ದಂಡವನ್ನು ಪರಿವರ್ತನೆಗಿಂತ ಮುಂಚಿತವಾಗಿ ವಸೂಲಿ ಮಾಡಲು ಸಾಧ್ಯವಾಗದಿದ್ದಲ್ಲಿ, ಆಗ, ಅಂಥ ಖಾಸಗಿ ಕಂಪನಿಯಿಂದ ಮಾಡಲಾದ ಯಾವುದೇ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಯಾವುದೇ ಪೂರೈಕೆಗೆ ಸಂಬಂಧಿಸಿದಂತೆ ಬಾಕಿಯಿರುವ ತೆರಿಗೆ, ಬಡ್ಡಿ, ಅಥವಾ ದಂಡಕ್ಕೆ ಸಂಬಂಧಪಟ್ಟ ಹಾಗೆ ಅಂಥ ಖಾಸಗಿ ಕಂಪನಿಯ ನಿರ್ದೇಶಕನಾಗಿದ್ದ ಯಾವುದೇ ವ್ಯಕ್ತಿಗೆ ಉಪಪ್ರಕರಣ (1)ರಲ್ಲಿ ಒಳಗೊಂಡಿರುವ ಯಾವುದೂ ಅನ್ವಯಿಸತಕ್ಕದ್ದಲ್ಲ:

ಪರಂತು, ಅಂಥ ನಿರ್ದೇಶಕನ ಮೇಲೆ ವೈಯಕ್ತಿಕವಾಗಿ ವಿಧಿಸಿದ ದಂಡಕ್ಕೆ ಈ ಉಪ–ಪ್ರಕರಣದಲ್ಲಿ ಒಳಗೊಂಡಿರುವ ಯಾವುದು ಅನ್ವಯಿಸತಕ್ಕದ್ದಲ್ಲ.

90. ತೆರಿಗೆ ಸಂದಾಯ ಮಾಡುವುದಕ್ಕೆ ಪಾಲುದಾರಿಕಾ ಸಂಸ್ಥೆಯ ಪಾಲುದಾರರ ಹೊಣೆಗಾರಿಕೆ.– ಯಾವುದೇ ಒಪ್ಪಂದದಲ್ಲಿ ವಿರುದ್ಧವಾದದ್ದು ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ಯಾವುದೇ ಪಾಲುದಾರಿಕಾ ಸಂಸ್ಥೆಯು ಈ ಅಧಿನಿಯಮದ ಅಡಿಯಲ್ಲಿ ತೆರಿಗೆ, ಬಡ್ಡಿ, ಅಥವಾ ದಂಡದ ಸಂದಾಯಕ್ಕೆ ಬಾಧ್ಯವಿದ್ದಲ್ಲಿ, ಆ ಪಾಲುದಾರಿಕಾ ಸಂಸ್ಥೆ ಹಾಗೂ ಆ ಪಾಲುದಾರಿಕಾ ಸಂಸ್ಥೆಯ ಪ್ರತಿಯೊಬ್ಬ ಪಾಲುದಾರರು ಅಂಥ ಸಂದಾಯಕ್ಕೆ ಜಂಟಿಯಾಗಿ ಮತ್ತು ಬೇರೆ ಬೇರೆಯಾಗಿ ಬಾಧ್ಯರಿರತಕ್ಕದ್ದು:

ಪರಂತು, ಯಾವುದೇ ಪಾಲುದಾರನು ಪಾಲುದಾರಿಕಾ ಸಂಸ್ಥೆಯಿಂದ ನಿವೃತ್ತಿಹೊಂದಿದ್ದಲ್ಲಿ, ಅವನು ಅಥವಾ ಪಾಲುದಾರಿಕಾ ಸಂಸ್ಥೆಯು ಸದರಿ ಪಾಲುದಾರನ ನಿವೃತ್ತಿಯ ದಿನಾಂಕವನ್ನು ಆ ಬಗೆಗಿನ ಒಂದು ಲಿಖಿತ ಸೂಚನಾಪತ್ರದ ಮೂಲಕ ಆಯುಕ್ತರಿಗೆ ತಿಳಿಸತಕ್ಕದ್ದು ಮತ್ತು ಅಂಥ ಪಾಲುದಾರನು ಆತನ ನಿವೃತ್ತಿಯ ದಿನಾಂಕದವರೆಗೆ, ಆ ದಿನಾಂಕದಂದು ನಿರ್ಧಾರವಾಗಿರಲಿ ಅಥವಾ ಇಲ್ಲದಿರಲಿ, ಬಾಕಿಯಿರುವ ತೆರಿಗೆ, ಬಡ್ಡಿ, ಅಥವಾ ದಂಡದ ಸಂದಾಯಕ್ಕೆ ಬಾಧ್ಯನಿರತಕ್ಕದ್ದು:

ಮತ್ತು ಪರಂತು, ನಿವೃತ್ತಿಯ ದಿನಾಂಕದಿಂದ ಒಂದು ತಿಂಗಳ ಒಳಗಾಗಿ ಅಂಥ ಮಾಹಿತಿಯನ್ನು ನೀಡದಿದ್ದರೆ, ಮೊದಲನೇ ಪರಂತುಕದ ಅಡಿಯಲ್ಲಿನ ಅಂಥ ಪಾಲುದಾರನ ಬಾಧ್ಯತೆಯು ಆಯುಕ್ತರಿಂದ ಅಂಥ ಮಾಹಿತಿಯು ಸ್ವೀಕೃತವಾಗುವ ದಿನಾಂಕದವರೆವಿಗೂ ಮುಂದುವರಿಯತಕ್ಕದ್ದು.

91. ಪೋಷಕರು, ಟ್ರಸ್ಟಿಗಳು ಮುಂತಾದವರ ಹೊಣೆಗಾರಿಕೆ.– ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾದ ಯಾವುದೇ ತೆರಿಗೆ, ಬಡ್ಡಿ ಅಥವಾ ದಂಡಕ್ಕೆ ಸಂಬಂಧಿಸಿದಂತೆ, ಒಬ್ಬ ಅಪ್ರಾಪ್ತ ವಯಸ್ಕ ಅಥವಾ ಇತರ ಅಸಮರ್ಥ ವ್ಯಕ್ತಿಯ ಪರವಾಗಿ ಮತ್ತು ಅಂಥ ಅಪ್ರಾಪ್ತ ವಯಸ್ಕ ಅಥವಾ ಇತರ ಅಸಮರ್ಥ ವ್ಯಕ್ತಿಯ ಅನುಕೂಲಕ್ಕಾಗಿ ಯಾವುದೇ ಪೋಷಕ, ಟ್ರಸ್ಟಿ ಅಥವಾ ಏಜೆಂಟನಿಂದ ವ್ಯವಹಾರವನ್ನು ನಡೆಸಲಾಗಿದ್ದಲ್ಲಿ, ಅಂಥ ಯಾವುದೇ ಅಪ್ರಾಪ್ತ ವಯಸ್ಕ ಅಥವಾ ಇತರ ಅಸಮರ್ಥ ವ್ಯಕ್ತಿಯು, ಪ್ರಾಪ್ತ ವಯಸ್ಕ ಅಥವಾ ಸಮರ್ಥ ವ್ಯಕ್ತಿಯಾಗಿದ್ದಾನೆ ಮತ್ತು ಆತನೇ ವ್ಯವಹಾರವನ್ನು ಸ್ವತಃ ನಡೆಸುತ್ತಿದ್ದಾನೆ ಎನ್ನುವ ಹಾಗೆ ನಿರ್ಧರಿಸಬಹುದಾದ ಮತ್ತು ವಸೂಲಿ ಮಾಡಬಹುದಾದ ರೀತಿಯಲ್ಲಿ ಮತ್ತು ಅಷ್ಟರ ಮಟ್ಟಿಗೆ ತೆರಿಗೆ, ಬಡ್ಡಿ ಅಥವಾ ದಂಡವನ್ನು ಅಂಥ ಪೋಷಕ, ಟ್ರಸ್ಟಿ ಅಥವಾ ಏಜೆಂಟನ ಮೇಲೆ ವಿಧಿಸತಕ್ಕದ್ದು ಮತ್ತು ವಸೂಲಿ ಮಾಡಬಹುದಾಗಿರತಕ್ಕದ್ದು ಮತ್ತು ಈ ಅಧಿನಿಯಮದ ಎಲ್ಲಾ ಉಪಬಂಧಗಳು ಹಾಗೂ ಇದರ ಅಡಿಯಲ್ಲಿ ಮಾಡಲಾದ ನಿಯಮಗಳು ಅದಕ್ಕನುಸಾರವಾಗಿ ಅನ್ವಯವಾಗತಕ್ಕದ್ದು.

92. ಪ್ರತಿಪಾಲಿತರ ನ್ಯಾಯಾಲಯ (Court of Wards) ಮುಂತಾದವರ ಹೊಣೆಗಾರಿಕೆ.– ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾದ ಯಾವುದೇ ತೆರಿಗೆ, ಬಡ್ಡಿ, ಅಥವಾ ದಂಡಕ್ಕೆ ಸಂಬಂಧಿಸಿದ ಒಂದು ವ್ಯವಹಾರದ ಮಾಲಿಕತ್ವವನ್ನು ಹೊಂದಿರುವ ಒಬ್ಬ ತೆರಿಗೆದಾಯಕ ವ್ಯಕ್ತಿಯ ಯಾವುದೇ ಸಂಪದ (estate) ಅಥವಾ ಸಂಪದದ ಯಾವುದೇ ಭಾಗವು, ಒಂದು ನ್ಯಾಯಾಲಯದ ಯಾವುದೇ ಆದೇಶದ ಮೂಲಕ ಅಥವಾ ಅಡಿಯಲ್ಲಿ ನೇಮಕಗೊಂಡಿರುವ ಪ್ರತಿಪಾಲಿತರ ನ್ಯಾಯಾಲಯ, ಅಡ್ಮಿನಿಸ್ಟ್ರೇಟರ್ ಜನರಲ್, ಅಧಿಕೃತ ಟ್ರಸ್ಟಿ ಅಥವಾ ಯಾವೊಬ್ಬ ಸ್ವೀಕರಿಸುವವನು ಅಥವಾ ವ್ಯವಸ್ಥಾಪಕನ (ಆತನ ಪದನಾಮವು ಏನೇ ಆಗಿರಲಿ, ವಾಸ್ತವಿಕವಾಗಿ ವ್ಯವಹಾರವನ್ನು ನಿರ್ವಹಿಸುವ ಯಾವೊಬ್ಬ ವ್ಯಕ್ತಿಯನ್ನು ಒಳಗೊಂಡಂತೆ) ನಿಯಂತ್ರಣದ ಅಡಿಯಲ್ಲಿದ್ದಲ್ಲಿ, ತೆರಿಗೆದಾಯಕ ವ್ಯಕ್ತಿಯು, ಆತನು ಸ್ವತಃ ವ್ಯವಹಾರವನ್ನು ನಡೆಸುತ್ತಿದ್ದಾನೆ ಎನ್ನುವ ಹಾಗೆ ನಿರ್ಧರಿಸಿಬಹುದಾದ ಮತ್ತು ವಸೂಲಿ ಮಾಡಬಹುದಾದ ರೀತಿಯಲ್ಲಿ ಮತ್ತು ಅಷ್ಟರ ಮಟ್ಟಿಗೆ ತೆರಿಗೆ, ಬಡ್ಡಿ, ಅಥವಾ ದಂಡವನ್ನು ಅಂಥ ಪ್ರತಿಪಾಲಿತರ ನ್ಯಾಯಾಲಯ ಅಥವಾ ಅಡ್ಮಿನಿಸ್ಟ್ರೇಟರ್ ಜನರಲ್ ಅಥವಾ ಅಧಿಕೃತ ಟ್ರಸ್ಟಿ ಅಥವಾ ಯಾವುದೇ ಸ್ವೀಕರಿಸುವವನು ಅಥವಾ ವ್ಯವಸ್ಥಾಪಕನ ಮೇಲೆ ವಿಧಿಸತಕ್ಕದ್ದು ಮತ್ತು ವಸೂಲಿ ಮಾಡಬಹುದಾಗಿರತಕ್ಕದ್ದು ಮತ್ತು ಈ ಅಧಿನಿಯಮದ ಎಲ್ಲಾ ಉಪಬಂಧಗಳು ಹಾಗೂ ಇದರ ಅಡಿಯಲ್ಲಿ ಮಾಡಲಾದ ನಿಯಮಗಳು ಆಗಬಹುದಾದಷ್ಟು ಮಟ್ಟಿಗೆ ಅದಕ್ಕನುಸಾರವಾಗಿ ಅನ್ವಯವಾಗತಕ್ಕದ್ದು.

93. ನಿರ್ದಿಷ್ಟ ಪ್ರಕರಣಗಳಲ್ಲಿ ತೆರಿಗೆ, ಬಡ್ಡಿ ಅಥವಾ ದಂಡ ಸಂದಾಯದ ಹೊಣೆಗಾರಿಕೆಗೆ ಸಂಬಂಧಿಸಿದ ವಿಶೇಷ ಉಪಬಂಧಗಳು.– (1) ದಿವಾಳಿ ಮತ್ತು ಸಾಲ ತೀರಿಕೆಯ ಅಸಮರ್ಥತೆಯ ಸಂಹಿತೆ, 2016ರಲ್ಲಿ (2016ರ ಕೇಂದ್ರ ಅಧಿನಿಯಮ 31) ಉಪಬಂಧಿಸಿದುದನ್ನುಳಿದು, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ತೆರಿಗೆ, ಬಡ್ಡಿ, ಅಥವಾ ದಂಡದ ಸಂದಾಯಕ್ಕೆ ಬಾಧ್ಯನಿರುವ

ಒಬ್ಬ ವ್ಯಕ್ತಿ ಮರಣಿಸಿದಾಗ, ಅಂಥ ತೆರಿಗೆ, ಬಡ್ಡಿ, ಅಥವಾ ದಂಡವು, ಆತನ ಮರಣಕ್ಕಿಂತ ಮುಂಚಿತವಾಗಿ ನಿರ್ಧರಿಸಿದ್ದು ಆದರೆ ಸಂದಾಯವಾಗದೇ ಉಳಿದಿರಲಿ ಆಥವಾ ಆತನ ಮರಣದ ನಂತರ ನಿರ್ಧರಿಸಿರಲಿ, –

(ಎ) ಆ ವ್ಯಕ್ತಿಯಿಂದ ನಡೆಸಲಾಗುತ್ತಿದ್ದ ವ್ಯವಹಾರವು, ಆತನ ಮರಣದ ನಂತರ ಆತನ ಕಾನೂನು ಸಮ್ಮತ ಪ್ರತಿನಿಧಿ ಅಥವಾ ಯಾವುದೇ ಇತರೆ ವ್ಯಕ್ತಿಯಿಂದ ಮುಂದುವರಿಕೆಯಾಗಿದ್ದರೆ, ಈ ಅಧಿನಿಯಮದ ಅಡಿಯಲ್ಲಿ ಅಂಥ ವ್ಯಕ್ತಿಯಿಂದ ಬಾಕಿಯಿರುವ ಯಾವುದೇ ತೆರಿಗೆ, ಬಡ್ಡಿ, ಅಥವಾ ದಂಡವನ್ನು ಸಂದಾಯ ಮಾಡುವುದಕ್ಕೆ ಅಂಥ ಕಾನೂನು ಸಮ್ಮತ ಪ್ರತಿನಿಧಿ ಅಥವಾ ಇತರ ವ್ಯಕ್ತಿಯು ಬಾಧ್ಯನಿರತಕ್ಕದ್ದು; ಮತ್ತು

(ಬಿ) ಆ ವ್ಯಕ್ತಿಯಿಂದ ನಡೆಸಲಾಗುತ್ತಿದ್ದ ವ್ಯವಹಾರವು, ಆತನ ಮರಣಕ್ಕಿಂತ ಮುಂಚಿತವಾಗಲಿ ಅಥವಾ ನಂತರವಾಗಲಿ ಮುಂದುವರಿಕೆಯಾಗಿಲ್ಲದಿದ್ದರೆ, ಮೃತ ವ್ಯಕ್ತಿಯ ಸಂಪಂದದಲ್ಲಿ, ಅಂಥ ವ್ಯಕ್ತಿಯಿಂದ ಈ ಅಧಿನಿಯಮದ ಅಡಿಯಲ್ಲಿ ಬಾಕಿಯಿರುವ ತೆರಿಗೆ, ಬಡ್ಡಿ, ಅಥವಾ ದಂಡದ ಖರ್ಚನ್ನು ಭರಿಸಲು ಸಾಕಾಗುವಷ್ಟು ಸಂಪದದ ಮಟ್ಟಿಗೆ ಆತನ ಕಾನೂನು ಸಮ್ಮತ ಪ್ರತಿನಿಧಿಯು ಬಾಧ್ಯನಿರತಕ್ಕದ್ದು.

(2) ದಿವಾಳಿ ಮತ್ತು ಸಾಲ ತೀರಿಕೆಯ ಅಸಮರ್ಥತೆಯ ಸಂಹಿತೆ, 2016 (2016ರ ಕೇಂದ್ರ ಅಧಿನಿಯಮ 31)ರಲ್ಲಿ ಉಪಬಂಧಿಸಿದುದನ್ನುಳಿದು, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ತೆರಿಗೆ, ಬಡ್ಡಿ, ಅಥವಾ ದಂಡದ ಸಂದಾಯಕ್ಕೆ ಬಾಧ್ಯನಿರುವ ಒಬ್ಬ ತೆರಿಗೆದಾಯಕ ವ್ಯಕ್ತಿಯು, ಒಂದು ಹಿಂದೂ ಅವಿಭಾಜ್ಯ ಕುಟುಂಬ ಅಥವಾ ವ್ಯಕ್ತಿಗಳ ಸಂಘವಾಗಿದ್ದು ಮತ್ತು ಆ ಹಿಂದೂ ಅವಿಭಾಜ್ಯ ಕುಟುಂಬ ಅಥವಾ ವ್ಯಕ್ತಿಗಳ ಸಂಘದ ಸ್ವತ್ತು, ಹಲವಾರು ಸದಸ್ಯರ ಅಥವಾ ಸದಸ್ಯರ ಸಮೂಹಗಳ ನಡುವೆ ವಿಭಜಿತವಾಗಿದ್ದಲ್ಲಿ, ಆಗ, ವಿಭಜನೆಯ ಸಮಯದವರೆಗೆ ಈ ಅಧಿನಿಯಮದ ಅಡಿಯಲ್ಲಿ ತೆರಿಗೆದಾಯಕ ವ್ಯಕ್ತಿಯಿಂದ ಬಾಕಿಯಿರುವ ತೆರಿಗೆ, ಬಡ್ಡಿ, ಅಥವಾ ದಂಡವನ್ನು, ಅಂಥ ತೆರಿಗೆ, ಬಡ್ಡಿ, ಅಥವಾ ದಂಡವು ವಿಭಜನೆಯಾಗುವುದಕ್ಕಿಂತ ಮುಂಚಿತವಾಗಿ ನಿರ್ಧರಿಸಿದ್ದು ಆದರೆ ಸಂದಾಯವಾಗದೇ ಉಳಿದಿರಲಿ ಆಥವಾ ವಿಭಜನೆಯಾದ ನಂತರ ನಿರ್ಧರಿಸಿರಲಿ, ಸಂದಾಯ ಮಾಡುವುದಕ್ಕೆ ಪ್ರತಿಯೊಬ್ಬ ಸದಸ್ಯ ಅಥವಾ ಸದಸ್ಯರ ಸಮೂಹ ಜಂಟಿಯಾಗಿ ಮತ್ತು ಬೇರೆ ಬೇರೆಯಾಗಿ ಬಾಧ್ಯರಿರತಕ್ಕದ್ದು.

(3) ದಿವಾಳಿ ಮತ್ತು ಸಾಲ ತೀರಿಕೆಯ ಅಸಮರ್ಥತೆಯ ಸಂಹಿತೆ, 2016ರಲ್ಲಿ (2016ರ ಕೇಂದ್ರ ಅಧಿನಿಯಮ 31) ಉಪಬಂಧಿಸಿದುದನ್ನುಳಿದು, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ತೆರಿಗೆ, ಬಡ್ಡಿ, ಅಥವಾ ದಂಡದ ಸಂದಾಯಕ್ಕೆ ಬಾಧ್ಯನಿರುವ ಒಬ್ಬ ತೆರಿಗೆದಾಯಕ ವ್ಯಕ್ತಿ, ಒಂದು ಪಾಲುದಾರಿಕಾ ಸಂಸ್ಥೆಯಾಗಿದ್ದು, ಮತ್ತು ಆ ಪಾಲುದಾರಿಕಾ ಸಂಸ್ಥೆ ವಿಸರ್ಜನೆಯಾಗಿದ್ದಲ್ಲಿ, ಆಗ, ವಿಸರ್ಜನೆಯಾಗುವ ಸಮಯದವರೆಗೆ ಈ ಅಧಿನಿಯಮದ ಅಡಿಯಲ್ಲಿ ಪಾಲುದಾರಿಕಾ ಸಂಸ್ಥೆಯಿಂದ ಬಾಕಿಯಿರುವ ಯಾವುದೇ ತೆರಿಗೆ, ಬಡ್ಡಿ, ಅಥವಾ ದಂಡವನ್ನು, ಅಂಥ ತೆರಿಗೆ, ಬಡ್ಡಿ, ಅಥವಾ ದಂಡವು ವಿಸರ್ಜನೆಗಿಂತ ಮುಂಚಿತವಾಗಿ ನಿರ್ಧರಿಸಿದ್ದು ಆದರೆ ಸಂದಾಯವಾಗದೇ ಉಳಿದಿರಲಿ ಆಥವಾ ವಿಸರ್ಜನೆಯ ನಂತರ ನಿರ್ಧರಿಸಿರಲಿ, ಸಂದಾಯ ಮಾಡುವುದಕ್ಕೆ ಪಾಲುದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿ ಜಂಟಿಯಾಗಿ ಮತ್ತು ಬೇರೆ ಬೇರೆಯಾಗಿ ಬಾಧ್ಯರಿರತಕ್ಕದ್ದು.

(4) ದಿವಾಳಿ ಮತ್ತು ಸಾಲ ತೀರಿಕೆಯ ಅಸಮರ್ಥತೆಯ ಸಂಹಿತೆ, 2016ರಲ್ಲಿ (2016ರ ಕೇಂದ್ರ ಅಧಿನಿಯಮ 31) ಉಪಬಂಧಿಸಿದುದನ್ನುಳಿದು, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ತೆರಿಗೆ, ಬಡ್ಡಿ, ಅಥವಾ ದಂಡದ ಸಂದಾಯ ಮಾಡುವುದಕ್ಕೆ ಬಾಧ್ಯನಿರುವ ಒಬ್ಬ ತೆರಿಗೆದಾಯಕ ವ್ಯಕ್ತಿಯು,–

(ಎ) ಒಬ್ಬ ಪ್ರತಿಪಾಲಿತನ ಪಾಲಕನಾಗಿದ್ದು, ಆತನ ಪರವಾಗಿ ಪಾಲಕನಿಂದ ವ್ಯವಹಾರವನ್ನು ನಡೆಸಲಾಗುತ್ತಿದ್ದಲ್ಲಿ, ಅಥವಾ

(ಬಿ) ಒಂದು ಟ್ರಸ್ಟಿನ ಅಡಿಯಲ್ಲಿ, ಫಲಾನುಭವಿಗಾಗಿ ವ್ಯವಹಾರವನ್ನು ನಡೆಸುತ್ತಿರುವ ಟ್ರಸ್ಟಿಯಾಗಿದ್ದಲ್ಲಿ,

–ಆಗ, ಪಾಲಕತ್ವ ಅಥವಾ ಟ್ರಸ್ಟು ಅಂತ್ಯಗೊಂಡಿದ್ದಲ್ಲಿ, ಪಾಲಕತ್ವ ಅಥವಾ ಟ್ರಸ್ಟು ಅಂತ್ಯಗೊಳ್ಳುವ ಸಮಯದವರೆಗೆ ಈ ಅಧಿನಿಯಮದ ಅಡಿಯಲ್ಲಿ ತೆರಿಗೆದಾಯಕ ವ್ಯಕ್ತಿಯಿಂದ ಬಾಕಿಯಿರುವ ಯಾವುದೇ ತೆರಿಗೆ, ಬಡ್ಡಿ, ಅಥವಾ ದಂಡವನ್ನು, ಅಂಥ ತೆರಿಗೆ, ಬಡ್ಡಿ, ಅಥವಾ ದಂಡವು ಪಾಲಕತ್ವ ಅಥವಾ ಟ್ರಸ್ಟು ಅಂತ್ಯಗೊಳ್ಳುವುದಕ್ಕಿಂತ ಮುಂಚಿತವಾಗಿ ನಿರ್ಧರಿಸಿದ್ದು ಆದರೆ ಸಂದಾಯವಾಗದೇ ಉಳಿದಿರಲಿ ಆಥವಾ ತದನಂತರ ನಿರ್ಧರಿಸಿರಲಿ, ತೆರಿಗೆಯನ್ನು ಸಂದಾಯ ಮಾಡುವುದಕ್ಕೆ ಪ್ರತಿಪಾಲಿತ ಅಥವಾ ಫಲಾನುಭವಿಯು ಬಾಧ್ಯರಿರತಕ್ಕದ್ದು.

94. ಇತರೆ ಪ್ರಕರಣಗಳಲ್ಲಿ ಹೊಣೆಗಾರಿಕೆ.– (1) ಒಬ್ಬ ತೆರಿಗೆದಾಯಕ ವ್ಯಕ್ತಿಯು, ಒಂದು ಪಾಲುದಾರಿಕಾ ಸಂಸ್ಥೆ ಅಥವಾ ವ್ಯಕ್ತಿಗಳ ಒಂದು ಸಂಘ ಅಥವಾ ಒಂದು ಹಿಂದೂ ಅವಿಭಾಜ್ಯ ಕುಟುಂಬವಾಗಿದ್ದು ಮತ್ತು ಅಂಥ ಪಾಲುದಾರಿಕಾ ಸಂಸ್ಥೆ ಅಥವಾ ವ್ಯಕ್ತಿಗಳ ಸಂಘ ಅಥವಾ ಹಿಂದೂ ಅವಿಭಾಜ್ಯ ಕುಟುಂಬವು ವ್ಯವಹಾರವನ್ನು ಮುಂದುವರಿಸದಿದ್ದಲ್ಲಿ–

(ಎ) ಅಂಥ ಪಾಲುದಾರಿಕಾ ಸಂಸ್ಥೆ ಅಥವಾ ವ್ಯಕ್ತಿಗಳ ಸಂಘ ಅಥವಾ ಕುಟುಂಬದಿಂದ ಅಂಥ ಮುಂದುವರೆಸದಿರುವಿಕೆಯ ದಿನಾಂಕದವರೆಗೆ ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾಗಿರುವ ತೆರಿಗೆಯನ್ನು, ಅಂಥ ಮುಂದುವರೆಸದಿರುವಿಕೆಯು ನಡೆದೇ ಇಲ್ಲ ಎನ್ನುವ ಹಾಗೆ ನಿರ್ಧರಿಸಬಹುದು; ಮತ್ತು

(ಬಿ) ಅಂಥ ಮುಂದುವರೆಸದಿರುವಿಕೆಯ ಸಮಯದಲ್ಲಿ, ಅಂಥ ಪಾಲುದಾರಿಕಾ ಸಂಸ್ಥೆಯ ಒಬ್ಬ ಪಾಲುದಾರ, ಅಥವಾ ಅಂಥ ಸಂಘ ಅಥವಾ ಕುಟುಂಬದ ಒಬ್ಬ ಸದಸ್ಯನಾಗಿದ್ದಂತಹ, ಪ್ರತಿಯೊಬ್ಬ ವ್ಯಕ್ತಿಯು, ಅಂಥ ಮುಂದುವರೆಸದಿರುವಿಕೆ ಏನೇ ಇದ್ದರೂ, ಅಂಥ ಪಾಲುದಾರಿಕಾ ಸಂಸ್ಥೆ ಅಥವಾ ಸಂಘ ಅಥವಾ ಕುಟುಂಬದಿಂದ ಸಂದಾಯ ಮಾಡಬೇಕಾದ ನಿರ್ಧರಿಸಿದ ಅಂಥ ತೆರಿಗೆ ಮತ್ತು ಬಡ್ಡಿ ಹಾಗೂ ವಿಧಿಸಿದ ದಂಡದ, ಅಂಥ ತೆರಿಗೆ ಮತ್ತು ಬಡ್ಡಿಯ ನಿರ್ಧರಿಸುವಿಕೆಯನ್ನು ಅಥವಾ ದಂಡದ ವಿಧಿಸುವಿಕೆಯನ್ನು ಅಂಥ ಮುಂದುವರೆಸದಿರುವಿಕೆಗೆ ಮುಂಚಿತವಾಗಿಯಾಗಲಿ ಅಥವಾ ನಂತರವಾಗಲಿ ಮಾಡಿರಬಹುದು, ಸಂದಾಯಕ್ಕೆ ಜಂಟಿಯಾಗಿ ಮತ್ತು ಬೇರೆ ಬೇರೆಯಾಗಿ ಬಾಧ್ಯರಿರತಕ್ಕದ್ದು, ಮತ್ತು ಮೇಲೆ ಹೇಳಲಾದ ವಿಷಯದಂತೆ, ಈ

ಅಧಿನಿಯಮದ ಉಪಬಂಧಗಳು, ಆಗಬಹುದಾದಷ್ಟು ಮಟ್ಟಿಗೆ, ಪ್ರತಿಯೊಬ್ಬ ಅಂಥ ವ್ಯಕ್ತಿ ಅಥವಾ ಪಾಲುದಾರ ಅಥವಾ ಸದಸ್ಯ ಸ್ವತಃ ತಾನೇ ಒಬ್ಬ ತೆರಿಗೆದಾಯಕ ವ್ಯಕ್ತಿಯೆನ್ನುವ ಹಾಗೆ ಅನ್ವಯವಾಗತಕ್ಕದ್ದು.

(2) ಒಂದು ಪಾಲುದಾರಿಕಾ ಸಂಸ್ಥೆಯ ಅಥವಾ ವ್ಯಕ್ತಿಗಳ ಒಂದು ಸಂಘದ ರಚನೆಯಲ್ಲಿ ಬದಲಾವಣೆ ಸಂಭವಿಸಿದ್ದಲ್ಲಿ, ಆ ಪಾಲುದಾರಿಕಾ ಸಂಸ್ಥೆಯ ಪಾಲುದಾರರು ಅಥವಾ ಸಂಘದ ಸದಸ್ಯರು, ಪುನರ್‌ರಚನೆಗಿಂತ ಮುಂಚಿತವಾಗಿ ಅಸ್ತಿತ್ವದಲ್ಲಿದ್ದಂತೆ ಮತ್ತು ನಂತರ ಅದು ಅಸ್ತಿತ್ವದಲ್ಲಿರುವಂತೆ, ಪ್ರಕರಣ 90ರ ಉಪಬಂಧಗಳಿಗೆ ಬಾಧಕವಾಗದಂತೆ, ಪುನರ್‌ರಚನೆಗಿಂತ ಮುಂಚಿತವಾದ ಯಾವುದೇ ಅವಧಿಗಾಗಿ ಅಂಥ ಪಾಲುದಾರಿಕಾ ಸಂಸ್ಥೆ ಅಥವಾ ಸಂಘದಿಂದ ಬಾಕಿಯಿರುವ ತೆರಿಗೆ, ಬಡ್ಡಿ, ಅಥವಾ ದಂಡವನ್ನು ಸಂದಾಯ ಮಾಡುವುದಕ್ಕೆ ಜಂಟಿಯಾಗಿ ಮತ್ತು ಬೇರೆ ಬೇರೆಯಾಗಿ ಬಾಧ್ಯರಿರತಕ್ಕದ್ದು.

(3) ಒಂದು ಪಾಲುದಾರಿಕಾ ಸಂಸ್ಥೆಯಾಗಿರುವ ಅಥವಾ ವ್ಯಕ್ತಿಗಳ ಸಂಘವಾಗಿರುವ ತೆರಿಗೆದಾಯಕ ವ್ಯಕ್ತಿಯು, ವಿಸರ್ಜನೆಗೊಂಡಲ್ಲಿ ಅಥವಾ ಒಂದು ಹಿಂದೂ ಅವಿಭಜಿತ ಕುಟುಂಬವಾಗಿರುವ ತೆರಿಗೆದಾಯಕ ವ್ಯಕ್ತಿಯು ವಿಭಜನೆಗೊಂಡಲ್ಲಿ, ಅದರಿಂದ ನಡೆಸಲಾದ ವ್ಯವಹಾರಕ್ಕೆ ಸಂಬಂಧಿಸಿದಂತೆ ಉಪಪ್ರಕರಣ (1)ರ ಉಪಬಂಧಗಳು, ಆಗಬಹುದಾದಷ್ಟು ಮಟ್ಟಿಗೆ ಅನ್ವಯವಾಗತಕ್ಕದ್ದು ಮತ್ತು ಅದಕ್ಕನುಸಾರವಾಗಿ ಆ ಉಪಪ್ರಕರಣದಲ್ಲಿ ಮುಂದುವರೆಸದಿರುವಿಕೆಯ ಉಲ್ಲೇಖಗಳನ್ನು, ವಿಸರ್ಜನೆಯ ಅಥವಾ ವಿಭಜನೆಯ ಉಲ್ಲೇಖವನ್ನಾಗಿ ಅರ್ಥೈಸತಕ್ಕದ್ದು.

ವಿವರಣೆ.– ಈ ಅಧ್ಯಾಯದ ಉದ್ದೇಶಗಳಿಗಾಗಿ,–

(i) ನಿಯಮಿತ ಹೊಣೆಗಾರಿಕೆಯ ಪಾಲುದಾರಿಕೆ ಅಧಿನಿಯಮ, 2008ರ (2009ರ ಕೇಂದ್ರ ಅಧಿನಿಯಮ 6) ಉಪಬಂಧಗಳ ಅಡಿಯಲ್ಲಿ ರೂಪಿಸಲಾದ ಮತ್ತು ನೋಂದಾಯಿಸಲಾದ ಒಂದು "ನಿಯಮಿತ ಹೊಣೆಗಾರಿಕೆಯ ಪಾಲುದಾರಿಕೆ"ಯನ್ನು ಒಂದು ಪಾಲುದಾರಿಕಾ ಸಂಸ್ಥೆಯನ್ನಾಗಿ ಪರಿಗಣಿಸತಕ್ಕದ್ದು;

(ii) "ನ್ಯಾಯಾಲಯ" ಎಂದರೆ, ಜಿಲ್ಲಾ ನ್ಯಾಯಾಲಯ, ಉಚ್ಚ ನ್ಯಾಯಾಲಯ ಅಥವಾ ಸರ್ವೋಚ್ಚ ನ್ಯಾಯಾಲಯ.

ಅಧ್ಯಾಯ – XVII
ಪೂರ್ವಭಾವಿ ನಿರ್ಣಯ

95. ಪರಿಭಾಷೆಗಳು.– ಈ ಅಧ್ಯಾಯದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) **"ಪೂರ್ವಭಾವಿ ನಿರ್ಣಯ"** ಎಂದರೆ, ಒಬ್ಬ ಅರ್ಜಿದಾರನಿಂದ ಕೈಗೊಳ್ಳಲಾಗುತ್ತಿರುವ ಅಥವಾ ಕೈಗೊಳ್ಳಲು ಪ್ರಸ್ತಾಪಿಸಲಾಗಿರುವ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಗೆ ಸಂಬಂಧಿಸಿದಂತೆ, ಪ್ರಕರಣ 97ರ ಉಪಪ್ರಕರಣ (2) ಅಥವಾ ಪ್ರಕರಣ 100ರ ಉಪಪ್ರಕರಣ (1)ರಲ್ಲಿ ನಿರ್ದಿಷ್ಟಪಡಿಸಿರುವ ವಿಷಯಗಳ ಮೇಲೆ ಅಥವಾ ಪ್ರಶ್ನೆಗಳ ಮೇಲೆ, ಪ್ರಾಧಿಕಾರ ಅಥವಾ ಅಪೀಲು ಪ್ರಾಧಿಕಾರದಿಂದ ಅರ್ಜಿದಾರನಿಗೆ ಒದಗಿಸಿದ ಒಂದು ನಿರ್ಣಯ.

(ಬಿ)**"ಅಪೀಲು ಪ್ರಾಧಿಕಾರ"** ಎಂದರೆ, ಪೂರ್ವಭಾವಿ ನಿರ್ಣಯಕ್ಕಾಗಿ ಪ್ರಕರಣ 99ರ ಅಡಿಯಲ್ಲಿ ರಚಿಸಿದ ಅಪೀಲು ಪ್ರಾಧಿಕಾರ.

(ಸಿ) **"ಅರ್ಜಿದಾರ"** ಎಂದರೆ, ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತನಾದ ಅಥವಾ ನೋಂದಣಿ ಪಡೆಯಲು ಇಚ್ಛಿಸುವ ಯಾವೊಬ್ಬ ವ್ಯಕ್ತಿ.

(ಡಿ)**"ಅರ್ಜಿ"** ಎಂದರೆ, ಪ್ರಕರಣ 97ರ ಉಪ–ಪ್ರಕರಣ (1)ರ ಅಡಿಯಲ್ಲಿ ಪ್ರಾಧಿಕಾರಕ್ಕೆ ಹಾಕಿರುವ ಒಂದು ಅರ್ಜಿ.

(ಇ)**"ಪ್ರಾಧಿಕಾರ"** ಎಂದರೆ, ಪೂರ್ವಭಾವಿ ನಿರ್ಣಯಕ್ಕಾಗಿ, ಪ್ರಕರಣ 96ರ ಅಡಿಯಲ್ಲಿ, ರಚಿಸಿದ ಪ್ರಾಧಿಕಾರ.

96. ಪೂರ್ವಭಾವಿ ನಿರ್ಣಯಕ್ಕಾಗಿ ಪ್ರಾಧಿಕಾರದ ರಚನೆ.– (1) ಸರ್ಕಾರವು, ಅಧಿಸೂಚನೆಯ ಮೂಲಕ, ಕರ್ನಾಟಕ ಪೂರ್ವಭಾವಿ ನಿರ್ಣಯ ಪ್ರಾಧಿಕಾರ ಎಂದು ಕರೆಯಲಾಗುವ ಒಂದು ಪ್ರಾಧಿಕಾರವನ್ನು ರಚಿಸತಕ್ಕದ್ದು:

ಪರಂತು, ಸರ್ಕಾರವು, ಪರಿಷತ್ತಿನ ಶಿಫಾರಸ್ಸಿನ ಅನ್ವಯ, ಬೇರೆ ಒಂದು ರಾಜ್ಯದಲ್ಲಿ ನೆಲೆಗೊಂಡಿರುವ ಯಾವುದೇ ಪ್ರಾಧಿಕಾರವನ್ನು, ರಾಜ್ಯದ ಪ್ರಾಧಿಕಾರವಾಗಿ ವರ್ತಿಸುವಂತೆ ಅಧಿಸೂಚಿಸಬಹುದು.

(2) ಪ್ರಾಧಿಕಾರವು, ಅನುಕ್ರಮವಾಗಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಿಂದ ನೇಮಿಸಲಾಗುವ

(i) ಕೇಂದ್ರ ತೆರಿಗೆ ಅಧಿಕಾರಿಗಳ ಪೈಕಿಯಿಂದ ಒಬ್ಬ ಸದಸ್ಯ; ಮತ್ತು

(ii) ರಾಜ್ಯ ತೆರಿಗೆ ಅಧಿಕಾರಿಗಳ ಪೈಕಿಯಿಂದ ಒಬ್ಬ ಸದಸ್ಯ,

–ಇವರುಗಳನ್ನು ಒಳಗೊಂಡಿರತಕ್ಕದ್ದು.

(3) ಸದಸ್ಯರುಗಳ ಅರ್ಹತೆಗಳು ಮತ್ತು ನೇಮಕಾತಿಯ ವಿಧಾನ ಹಾಗೂ ಅವರುಗಳ ಸೇವೆಯ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದ ಅಂಥವುಗಳಾಗಿರತಕ್ಕದ್ದು.

97. ಪೂರ್ವಭಾವಿ ನಿರ್ಣಯಕ್ಕಾಗಿ ಅರ್ಜಿ.– (1) ಈ ಅಧ್ಯಾಯದ ಅಡಿಯಲ್ಲಿ ಪೂರ್ವಭಾವಿ ನಿರ್ಣಯವನ್ನು ಪಡೆಯಲು ಇಚ್ಛಿಸುವ ಒಬ್ಬ ಅರ್ಜಿದಾರ, ನಿಯಮಿಸಬಹುದಾದ ಅಂಥ ನಮೂನೆ ಮತ್ತು ಅಂಥ ವಿಧಾನದಲ್ಲಿ ಹಾಗೂ ಅಂಥ ಶುಲ್ಕದ ಜೊತೆಯಲ್ಲಿ ಪೂರ್ವಭಾವಿ ನಿರ್ಣಯವನ್ನು ಕೋರಲಾಗಿರುವ ಪ್ರಶ್ನೆಯನ್ನು ನಿರೂಪಿಸಿದ ಒಂದು ಅರ್ಜಿಯನ್ನು ಹಾಕಬಹುದು.

(2) ಈ ಅಧಿನಿಯಮದ ಅಡಿಯಲ್ಲಿ, ಪೂರ್ವಭಾವಿ ನಿರ್ಣಯವನ್ನು ಕೋರಲಾಗಿರುವ ಪ್ರಶ್ನೆಯು ಈ ಕೆಳಕಂಡವುಗಳಿಗೆ ಸಂಬಂಧಿಸಿರತಕ್ಕದ್ದು,–

(ಎ) ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ವರ್ಗೀಕರಣ;

(ಬಿ) ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಹೊರಡಿಸಿದ ಅಧಿಸೂಚನೆಯ ಅನ್ವಯಿಸುವಿಕೆ;

(ಸಿ) ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಯ ಸಮಯ ಮತ್ತು ಮೌಲ್ಯವನ್ನು ನಿರ್ಧರಿಸುವುದು;

(ಡಿ) ತೆರಿಗೆ ಸಂದಾಯ ಮಾಡಿದ ಅಥವಾ ಸಂದಾಯ ಮಾಡಲಾಗಿದೆ ಎಂದು ಪರಿಭಾವಿಸಿದ ಹೂಡುವಳಿ ತೆರಿಗೆ ಜಮೆಯ ಅಂಗೀಕಾರಾರ್ಹತೆ;

(ಇ) ಯಾವುದೇ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಮೇಲೆ ತೆರಿಗೆ ಸಂದಾಯದ ಬಾಧ್ಯತೆಯನ್ನು ನಿರ್ಧರಿಸುವುದು;

(ಎಫ್) ಅರ್ಜಿದಾರನು ನೋಂದಾಯಿತನಾಗುವುದು ಅಗತ್ಯವೇ ಎನ್ನುವುದು;

(ಜಿ) ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಒಂದು ಪೂರೈಕೆ ಎಂದಾಗುವ ಅಥವಾ ಅದರಲ್ಲಿ ಪರಿಣಮಿಸುವ ಯಾವುದೇ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡಕ್ಕೆ ಸಂಬಂಧಿಸಿದಂತೆ ಅರ್ಜಿದಾರನಿಂದ ಮಾಡಲಾಗಿರುವ ಯಾವುದೇ ನಿರ್ದಿಷ್ಟ ಕಾರ್ಯ, ಆ ಪದದ ಅರ್ಥವ್ಯಾಪ್ತಿಯೊಳಗೆ ಬರುತ್ತದೆಯೇ ಎನ್ನುವುದು.

98. ಅರ್ಜಿ ಸ್ವೀಕೃತಿಯ ಮೇಲಿನ ಕಾರ್ಯವಿಧಾನ.– (1) ಒಂದು ಅರ್ಜಿಯ ಸ್ವೀಕೃತಿಯ ನಂತರ ಪ್ರಾಧಿಕಾರವು, ಅದರ ಪ್ರತಿಯನ್ನು ಸಂಬಂಧಿತ ಅಧಿಕಾರಿಗೆ ಮುಂದಕ್ಕೆ ಕಳುಹಿಸಕೊಡತಕ್ಕದ್ದು ಮತ್ತು, ಅಗತ್ಯವಿದ್ದಲ್ಲಿ, ಸಂಬಂಧಪಟ್ಟ ದಾಖಲೆಗಳನ್ನು ಒದಗಿಸುವಂತೆ ಅವನಿಗೆ ಕರೆನೀಡತಕ್ಕದ್ದು:

ಪರಂತು, ಯಾವುದೇ ಸಂದರ್ಭದಲ್ಲಿ, ಪ್ರಾಧಿಕಾರದಿಂದ ಯಾವುದೇ ದಾಖಲೆಗಳನ್ನು ಕರೆಯಲಾಗಿದ್ದಲ್ಲಿ, ಅಂಥ ದಾಖಲೆಗಳನ್ನು, ಸಾಧ್ಯವಾದಷ್ಟು ಬೇಗನೆ, ಸದರಿ ಸಂಬಂಧಿತ ಅಧಿಕಾರಿಗೆ ಹಿಂದಿರುಗಿಸತಕ್ಕದ್ದು.

(2) ಪ್ರಾಧಿಕಾರವು, ಆ ಅರ್ಜಿಯನ್ನು ಮತ್ತು ಕರೆಯಲಾಗಿರುವ ಆ ದಾಖಲೆಗಳನ್ನು ಪರೀಕ್ಷಿಸಿದ ನಂತರ ಮತ್ತು ಅರ್ಜಿದಾರ ಅಥವಾ ಆತನ ಪ್ರಾಧಿಕೃತ ಪ್ರತಿನಿಧಿಯ ಹಾಗೂ ಸಂಬಂಧಿತ ಅಧಿಕಾರಿ ಅಥವಾ ಆತನ ಪ್ರಾಧಿಕೃತ ಪ್ರತಿನಿಧಿಯ ಅಹವಾಲನ್ನು ಕೇಳಿದ ನಂತರ, ಆದೇಶದ ಮೂಲಕ, ಅರ್ಜಿಯನ್ನು ಅಂಗೀಕರಿಸಬಹುದು ಅಥವಾ ತಿರಸ್ಕರಿಸಬಹುದು:

ಪರಂತು, ಪ್ರಾಧಿಕಾರವು ಅರ್ಜಿಯಲ್ಲಿ ಎತ್ತಲಾಗಿರುವ ಪ್ರಶ್ನೆಯು, ಈ ಅಧಿನಿಯಮದ ಯಾವುದೇ ಉಪಬಂಧಗಳ ಅಡಿಯಲ್ಲಿ, ಒಬ್ಬ ಅರ್ಜಿದಾರನ ಪ್ರಕರಣದ ಯಾವುದೇ ನಡಾವಳಿಗಳಲ್ಲಿ ಈಗಾಗಲೆ ಇತ್ಯರ್ಥದಲ್ಲಿರುವಾಗ, ಅಥವಾ ನಿರ್ಧಾರಗೊಂಡಿರುವಾಗ ಅರ್ಜಿಯನ್ನು ಅಂಗೀಕರಿಸತಕ್ಕದ್ದಲ್ಲ:

ಮತ್ತು ಪರಂತು, ಈ ಪ್ರಕರಣದ ಅಡಿಯಲ್ಲಿನ ಯಾವುದೇ ಅರ್ಜಿಯನ್ನು, ಅರ್ಜಿದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡದ ಹೊರತು ತಿರಸ್ಕರಿಸತಕ್ಕದ್ದಲ್ಲ:

ಅಲ್ಲದೆ ಪರಂತು, ಅರ್ಜಿಯನ್ನು ತಿರಸ್ಕರಿಸಿದ್ದಲ್ಲಿ, ಅಂಥ ತಿರಸ್ಕರಣೆಗೆ ಕಾರಣಗಳನ್ನು ಆದೇಶದಲ್ಲಿ ನಿರ್ದಿಷ್ಟಪಡಿಸತಕ್ಕದ್ದು.

(3) ಉಪಪ್ರಕರಣ (2)ರ ಅಡಿಯಲ್ಲಿ ಮಾಡಿದ ಪ್ರತಿಯೊಂದು ಆದೇಶದ ಪ್ರತಿಯನ್ನು ಅರ್ಜಿದಾರನಿಗೆ ಮತ್ತು ಸಂಬಂಧಿತ ಅಧಿಕಾರಿಗೆ ಕಳುಹಿಸತಕ್ಕದ್ದು.

(4) ಉಪಪ್ರಕರಣ (2)ರ ಅಡಿಯಲ್ಲಿ ಒಂದು ಅರ್ಜಿಯನ್ನು ಅಂಗೀಕರಿಸಿದಲ್ಲಿ, ಪ್ರಾಧಿಕಾರವು, ಅದರ ಮುಂದೆ ಅರ್ಜಿದಾರನಿಂದ ಇಡಬಹುದಾದ ಅಥವಾ ಪ್ರಾಧಿಕಾರದಿಂದ ಪಡೆದ ಅಂಥ ಹೆಚ್ಚಿನ ಮಾಹಿತಿಯನ್ನು ಪರೀಕ್ಷಿಸಿದ ನಂತರ ಮತ್ತು ಅರ್ಜಿದಾರ ಅಥವಾ ಆತನ ಪ್ರಾಧಿಕೃತ ಪ್ರತಿನಿಧಿಯ ಹಾಗೂ ಸಂಬಂಧಿತ ಅಧಿಕಾರಿಯ ಅಥವಾ ಆತನ ಪ್ರಾಧಿಕೃತ ಪ್ರತಿನಿಧಿಗೆ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡಿದ ನಂತರ, ಅರ್ಜಿಯಲ್ಲಿ ನಿರ್ದಿಷ್ಟಪಡಿಸಿರುವ ಪ್ರಶ್ನೆಯ ಮೇಲೆ ತನ್ನ ಪೂರ್ವಭಾವಿ ನಿರ್ಣಯವನ್ನು ಹೇಳತಕ್ಕದ್ದು.

(5) ಪ್ರಾಧಿಕಾರದ ಸದಸ್ಯರು ಪೂರ್ವಭಾವಿ ನಿರ್ಣಯವನ್ನು ಕೇಳಲಾಗಿರುವ ಯಾವುದೇ ಪ್ರಶ್ನೆಯ ಮೇಲೆ ಭಿನ್ನಾಭಿಪ್ರಾಯವನ್ನು ಹೊಂದಿದ್ದರೆ, ಅವರುಗಳು ಭಿನ್ನಾಭಿಪ್ರಾಯವನ್ನು ಹೊಂದಿರುವ ಅಂಶ ಅಥವಾ ಅಂಶಗಳನ್ನು ನಿರೂಪಿಸತಕ್ಕದ್ದು ಮತ್ತು ಅಪೀಲು ಪ್ರಾಧಿಕಾರಕ್ಕೆ ಅಹವಾಲಿಗಾಗಿ ಮತ್ತು ಅಂಥ ಪ್ರಶ್ನೆಯ ಮೇಲೆ ನಿರ್ಣಯಕ್ಕಾಗಿ ಉಲ್ಲೇಖ ಮಾಡತಕ್ಕದ್ದು.

(6) ಪ್ರಾಧಿಕಾರವು, ಅರ್ಜಿಯನ್ನು ಸ್ವೀಕರಿಸಿದ ತೊಂಬತ್ತು ದಿನಗಳ ಒಳಗಾಗಿ ತನ್ನ ಪೂರ್ವಭಾವಿ ನಿರ್ಣಯವನ್ನು ಲಿಖಿತವಾಗಿ ಹೇಳತಕ್ಕದ್ದು.

(7) ಸದಸ್ಯರಿಂದ ಯುಕ್ತವಾಗಿ ಸಹಿ ಮಾಡಿರುವ ಮತ್ತು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಪ್ರಮಾಣೀಕರಿಸಿರುವ, ಪ್ರಾಧಿಕಾರದಿಂದ ಉಚ್ಚರಿತ ಪೂರ್ವಭಾವಿ ನಿರ್ಣಯದ ಒಂದು ಪ್ರತಿಯನ್ನು ಅರ್ಜಿದಾರನಿಗೆ, ಸಂಬಂಧಿತ ಅಧಿಕಾರಿಗೆ ಮತ್ತು ಕ್ಷೇತ್ರವ್ಯಾಪ್ತಿಯ ಅಧಿಕಾರಿಗೆ ಅಂಥ ಉಚ್ಚರಣೆಯ ನಂತರ ಕಳುಹಿಸತಕ್ಕದ್ದು.

99. ಪೂರ್ವಭಾವಿ ನಿರ್ಣಯಕ್ಕಾಗಿ ಅಪೀಲು ಪ್ರಾಧಿಕಾರದ ರಚನೆ.– ಸರ್ಕಾರವು, ಅಧಿಸೂಚನೆಯ ಮೂಲಕ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆಯ ಪೂರ್ವಭಾವಿ ನಿರ್ಣಯಕ್ಕಾಗಿ ಈ ಕೆಳಕಂಡವರುಗಳನ್ನು ಒಳಗೊಂಡ ಕರ್ನಾಟಕ ಅಪೀಲು ಪ್ರಾಧಿಕಾರ ಎಂದು ಕರೆಯಲಾಗುವ ಒಂದು ಪ್ರಾಧಿಕಾರವನ್ನು, ಪೂರ್ವಭಾವಿ ನಿರ್ಣಯ ಪ್ರಾಧಿಕಾರದಿಂದ ಉಚ್ಚರಿಸಲಾದ ಪೂರ್ವಭಾವಿ ನಿರ್ಣಯಗಳ ವಿರುದ್ಧ ಅಪೀಲುಗಳ ಅಹವಾಲಿಗಾಗಿ ರಚಿಸತಕ್ಕದ್ದು:

(i) ಮಂಡಳಿಯಿಂದ ನೇಮಿತವಾದ ಕೇಂದ್ರ ತೆರಿಗೆಯ ಮುಖ್ಯ ಆಯುಕ್ತರು; ಮತ್ತು

(ii) ರಾಜ್ಯ ತೆರಿಗೆ ಆಯುಕ್ತರು:

ಪರಂತು, ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಬೇರೆ ಒಂದು ರಾಜ್ಯದಲ್ಲಿ ಅಥವಾ ಕೇಂದ್ರಾಡಳಿ ಪ್ರದೇಶದಲ್ಲಿ ನೆಲೆಗೊಂಡಿರುವ ಯಾವುದೇ ಅಪೀಲು ಪ್ರಾಧಿಕಾರವನ್ನು, ರಾಜ್ಯದ ಅಪೀಲು ಪ್ರಾಧಿಕಾರವಾಗಿ ವರ್ತಿಸುವಂತೆ ಅಧಿಸೂಚಿಸಬಹುದು.

100. ಅಪೀಲು ಪ್ರಾಧಿಕಾರಕ್ಕೆ ಅಪೀಲು.– (1) ಸಂಬಂಧಿತ ಅಧಿಕಾರಿ, ಕ್ಷೇತ್ರ ವ್ಯಾಪ್ತಿಯ ಅಧಿಕಾರಿ ಅಥವಾ ಪ್ರಕರಣ 98ರ ಉಪಪ್ರಕರಣ (4)ರ ಅಡಿಯಲ್ಲಿ ಉಚ್ಚರಿಸಲಾದ ಯಾವುದೇ ಪೂರ್ವಭಾವಿ ನಿರ್ಣಯದಿಂದ ಬಾಧಿತನಾದ ಒಬ್ಬ ಅರ್ಜಿದಾರ, ಅಪೀಲು ಪ್ರಾಧಿಕಾರಕ್ಕೆ ಅಪೀಲು ಸಲ್ಲಿಸಬಹುದು.

(2) ಹಾಗೆ ಅದರ ವಿರುದ್ದವಾಗಿ ಅಪೀಲು ಕೋರಿರುವ ನಿರ್ಣಯವನ್ನು, ಸಂಬಂಧಿತ ಅಧಿಕಾರಿ, ಕ್ಷೇತ್ರವ್ಯಾಪ್ತಿಯ ಅಧಿಕಾರಿ ಮತ್ತು ಅರ್ಜಿದಾರನಿಗೆ ತಿಳಿಯಪಡಿಸಿದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗೆ ಈ ಪ್ರಕರಣದ ಅಡಿಯಲ್ಲಿನ ಪ್ರತಿಯೊಂದು ಅಪೀಲನ್ನು ಸಲ್ಲಿಸತಕ್ಕದ್ದು:

ಪರಂತು, ಅಪೀಲು ಪ್ರಾಧಿಕಾರವು, ಅರ್ಜಿದಾರನು ಸದರಿ ಮೂವತ್ತು ದಿನಗಳ ಅವಧಿಯ ಒಳಗಾಗಿ ಅಪೀಲನ್ನು ಸಲ್ಲಿಸಲು ಸಾಕಷ್ಟು ಕಾರಣದಿಂದ ಪ್ರತಿಬಂಧಿತನಾಗಿದ್ದ ಎಂಬುದನ್ನು ಅದು ಮನದಟ್ಟು ಮಾಡಿಕೊಂಡರೆ, ಮೂವತ್ತು ದಿನಗಳನ್ನು ಮೀರದ ಹೆಚ್ಚಿನ ಅವಧಿಯ ಒಳಗಾಗಿ ಅದನ್ನು ಸಲ್ಲಿಸಲು ಅವಕಾಶ ನೀಡಬಹುದು.

(3) ಈ ಪ್ರಕರಣದ ಅಡಿಯಲ್ಲಿನ ಪ್ರತಿಯೊಂದು ಅಪೀಲು, ನಿಯಮಿಸಬಹುದಾದ, ಅಂಥ ನಮೂನೆಯಲ್ಲಿರತಕ್ಕದ್ದು, ಅಂಥ ಶುಲ್ಕದಿಂದ ಜೊತೆಗೂಡಿರತಕ್ಕದ್ದು ಮತ್ತು ಅಂಥ ವಿಧಾನದಲ್ಲಿ ಪರಿಶೀಲಿಸಿರತಕ್ಕದ್ದು.

101. ಅಪೀಲು ಪ್ರಾಧಿಕಾರದ ಆದೇಶಗಳು.– (1) ಅಪೀಲು ಪ್ರಾಧಿಕಾರವು, ಅಪೀಲಿನ ಅಥವಾ ಉಲ್ಲೇಖದ ಪಕ್ಷಕಾರರಿಗೆ, ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ನಂತರ, ಅದರ ವಿರುದ್ದವಾಗಿ ಅಪೀಲು ಮಾಡಿರುವ ಅಥವಾ ಉಲ್ಲೇಖ ಮಾಡಿರುವ ನಿರ್ಣಯವನ್ನು ಅದು ಸೂಕ್ತ ಎಂದು ಭಾವಿಸಿದಂತೆ, ಖಾತ್ರಿಗೊಳಿಸಿ, ಅಥವಾ ಮಾರ್ಪಾಡು ಮಾಡಿ ಅಂಥ ಆದೇಶವನ್ನು ಹೊರಡಿಸಬಹದು.

(2) ಪ್ರಕರಣ 100ರ ಅಡಿಯಲ್ಲಿ ಅಪೀಲನ್ನು ಸಲ್ಲಿಸಲಾಗಿರುವ ಅಥವಾ ಪ್ರಕರಣ 98ರ ಉಪಪ್ರಕರಣ (5)ರ ಅಡಿಯಲ್ಲಿನ ಉಲ್ಲೇಖದ ದಿನಾಂಕದಿಂದ ತೊಂಬತ್ತು ದಿನಗಳ ಅವಧಿಯೊಳಗಾಗಿ ಉಪ–ಪ್ರಕರಣ (1)ರಲ್ಲಿ ಉಲ್ಲೇಖಿಸಲಾಗಿರುವ ಆದೇಶವನ್ನು ಹೊರಡಿಸತಕ್ಕದ್ದು.

(3) ಅಪೀಲು ಪ್ರಾಧಿಕಾರದ ಸದಸ್ಯರು, ಅಪೀಲು ಅಥವಾ ಉಲ್ಲೇಖದಲ್ಲಿ ಉಲ್ಲೇಖಿಸಲಾಗಿರುವ ಯಾವುದೇ ಅಂಶ ಅಥವಾ ಅಂಶಗಳ ಮೇಲೆ ಭಿನ್ನಾಭಿಪ್ರಾಯವನ್ನು ಹೊಂದಿದ್ದಲ್ಲಿ, ಅಪೀಲು ಅಥವಾ ಉಲ್ಲೇಖದ ಅಡಿಯಲ್ಲಿನ ಪ್ರಶ್ನೆಗೆ ಸಂಬಂಧಿಸಿದಂತೆ, ಪೂರ್ವಭಾವಿ ನಿರ್ಣಯವನ್ನು ನೀಡಲಾಗದು ಎಂದು ಪರಿಭಾವಿಸತಕ್ಕದ್ದು.

(4) ಸದಸ್ಯರಿಂದ ಯುಕ್ತವಾಗಿ ಸಹಿ ಮಾಡಿರುವ ಮತ್ತು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಪ್ರಮಾಣೀಕರಿಸಿರುವ, ಅಪೀಲು ಪ್ರಾಧಿಕಾರದಿಂದ ಉಚ್ಚರಿತ ಪೂರ್ವಭಾವಿ ನಿರ್ಣಯದ ಒಂದು ಪ್ರತಿಯನ್ನು ಅರ್ಜಿದಾರನಿಗೆ, ಸಂಬಂಧಿತ ಅಧಿಕಾರಿಗೆ, ಕ್ಷೇತ್ರವ್ಯಾಪ್ತಿಯ ಅಧಿಕಾರಿಗೆ ಮತ್ತು ಪ್ರಾಧಿಕಾರಕ್ಕೆ ಅಂಥ ಉಚ್ಚರಣೆಯ ನಂತರ ಕಳುಹಿಸತಕ್ಕದ್ದು.

102. ಪೂರ್ವಭಾವಿ ನಿರ್ಣಯದ ಸರಿಪಡಿಸುವಿಕೆ.– ಪ್ರಾಧಿಕಾರ ಅಥವಾ ಅಪೀಲು ಪ್ರಾಧಿಕಾರವು, ಪ್ರಕರಣ 98 ಅಥವಾ ಪ್ರಕರಣ 101ರ ಅಡಿಯಲ್ಲಿ, ಅದರಿಂದ ಹೊರಡಿಸಿದ ಯಾವುದೇ ಆದೇಶವನ್ನು, ದಾಖಲೆಯಲ್ಲಿ ಮೇಲ್ನೋಟಕ್ಕೆ ಕಾಣುವ ಯಾವುದೇ ತಪ್ಪನ್ನು ಸರಿಪಡಿಸುವುದಕ್ಕಾಗಿ, ಅಂಥ ತಪ್ಪನ್ನು ಆದೇಶದ ದಿನಾಂಕದಿಂದ ಆರು ತಿಂಗಳ ಅವಧಿಯ ಒಳಗಾಗಿ, ಪ್ರಾಧಿಕಾರವಾಗಲಿ ಅಥವಾ ಅಪೀಲು ಪ್ರಾಧಿಕಾರವಾಗಲಿ ಸ್ವಯಂ ಗಮನಿಸಿದ್ದರೆ ಅಥವಾ ಸಂಬಂಧಿತ ಅಧಿಕಾರಿಯಾಗಲಿ, ಕ್ಷೇತ್ರವ್ಯಾಪ್ತಿಯ ಅಧಿಕಾರಿಯಾಗಲಿ ಅಥವಾ ಅರ್ಜಿದಾರನಾಗಲಿ ಅಥವಾ ಅಪೀಲುದಾರನಾಗಲಿ ಅದರ ಗಮನಕ್ಕೆ ತಂದಿದ್ದರೆ, ತಿದ್ದುಪಡಿ ಮಾಡಬಹುದು:

ಪರಂತು, ಅರ್ಜಿದಾರನಿಗೆ ಅಥವಾ ಅಪೀಲುದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡಿದ ಹೊರತಾಗಿ, ತೆರಿಗೆ ಬಾಧ್ಯತೆಯನ್ನು ಹೆಚ್ಚಿಸುವ ಅಥವಾ ಅಂಗೀಕರಿಸಬಹುದಾದ ಹೂಡುವಳಿ ತೆರಿಗೆ ಜಮೆಯ ಮೊತ್ತವನ್ನು ಕಡಿಮೆ ಮಾಡುವ ಪರಿಣಾಮವನ್ನು ಹೊಂದಿರುವ ಸರಿಪಡಿಸುವಿಕೆಯನ್ನು ಮಾಡತಕ್ಕದಲ್ಲ.

103. ಪೂರ್ವಭಾವಿ ನಿರ್ಣಯದ ಅನ್ವಯಿಸುವಿಕೆ.– (1) ಈ ಅಧ್ಯಾಯದ ಅಡಿಯಲ್ಲಿನ ಪ್ರಾಧಿಕಾರ ಅಥವಾ ಅಪೀಲು ಪ್ರಾಧಿಕಾರದಿಂದ ಉಚ್ಚರಿಸಿದ ಪೂರ್ವಭಾವಿ ನಿರ್ಣಯವು ಕೆಳಕಂಡವರುಗಳ ಮೇಲೆ ಮಾತ್ರ ಬದ್ಧವಾಗಿರತಕ್ಕದ್ದು –

(ಎ) ಪ್ರಕರಣ 97ರ ಉಪಪ್ರಕರಣ (2)ರಲ್ಲಿ ಉಲ್ಲೇಖಿಸಲಾದ ಪೂರ್ವಭಾವಿ ನಿರ್ಣಯದ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಅದನ್ನು ಕೋರಿರುವ ಅರ್ಜಿದಾರ;

(ಬಿ) ಅರ್ಜಿದಾರನಿಗೆ ಸಂಬಂಧಿಸಿರುವ, ಸಂಬಂಧಿತ ಅಧಿಕಾರಿ ಅಥವಾ ಕ್ಷೇತ್ರವ್ಯಾಪ್ತಿಯ ಅಧಿಕಾರಿ.

(2) ಮೂಲ ಪೂರ್ವಭಾವಿ ನಿರ್ಣಯವನ್ನು ಬೆಂಬಲಿಸುವ ಕಾನೂನು, ಸಂಗತಿಗಳು ಅಥವಾ ಸನ್ನಿವೇಶಗಳು ಬದಲಾವಣೆಯನ್ನು ಹೊಂದಿದ ಹೊರತು ಉಪಪ್ರಕರಣ (1)ರಲ್ಲಿ ಉಲ್ಲೇಖಿಸಲಾದ ಪೂರ್ವಭಾವಿ ನಿರ್ಣಯವು **ಬದ್ಧವಾಗಿರತಕ್ಕದ್ದು.**

104. ಕೆಲವು ಸಂದರ್ಭಗಳಲ್ಲಿ ಪೂರ್ವಭಾವಿ ನಿರ್ಣಯಗಳು ಅನೂರ್ಜಿತಗೊಳ್ಳುವಿಕೆ.– (1) ಪ್ರಾಧಿಕಾರ ಅಥವಾ ಅಪೀಲು ಪ್ರಾಧಿಕಾರಕ್ಕೆ, ಪ್ರಕರಣ 98ರ ಉಪಪ್ರಕರಣ (4)ರ ಅಡಿಯಲ್ಲಿ ಅಥವಾ ಪ್ರಕರಣ 101ರ ಉಪಪ್ರಕರಣ (1)ರ ಅಡಿಯಲ್ಲಿ ಅದರಿಂದ ಉಚ್ಚರಿಸಿದ ಯಾವುದೇ ಪೂರ್ವಭಾವಿ ನಿರ್ಣಯವನ್ನು, ಅರ್ಜಿದಾರ ಅಥವಾ ಅಪೀಲುದಾರನಿಂದ ಮೋಸ ಅಥವಾ ಮುಖ್ಯ ಸಂಗತಿಗಳ ಬಚ್ಚಿಡುವಿಕೆ ಅಥವಾ ಸಂಗತಿಗಳನ್ನು ತಪ್ಪಾಗಿ ಹೇಳುವುದರಿಂದ ಪಡೆಯಲಾಗಿದೆ ಎಂದು ಕಂಡಬಂದಲ್ಲಿ, ಅದು, ಆದೇಶದ ಮೂಲಕ, ಅಂಥ ನಿರ್ಣಯವನ್ನು *ಆರಂಭದಿಂದಲೇ–ಶೂನ್ಯವಾದುದು* ಎಂದು ಘೋಷಿಸಬಹುದು ಮತ್ತು ಅದಾದ ಕೂಡಲೇ,

ಅರ್ಜಿದಾರನಿಗೆ ಅಥವಾ ಅಪೀಲುದಾರನಿಗೆ ಈ ಅಧಿನಿಯಮದ ಎಲ್ಲಾ ಉಪಬಂಧಗಳು ಹಾಗೂ ಇದರ ಅಡಿಯಲ್ಲಿ ಮಾಡಲಾದ ನಿಯಮಗಳು, ಅಂಥ ಪೂರ್ವಭಾವಿ ನಿರ್ಣಯವನ್ನು ಯಾವಾಗಲೂ ಮಾಡಿಯೇ ಇಲ್ಲ ಎನ್ನುವ ಹಾಗೆ ಅನ್ವಯವಾಗತಕ್ಕದ್ದು:

ಪರಂತು, ಅರ್ಜಿದಾರನಿಗೆ ಅಥವಾ ಅಪೀಲುದಾರನಿಗೆ ಒಂದು ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡಿದ ಹೊರತು ಈ ಪ್ರಕರಣದ ಅಡಿಯಲ್ಲಿ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.

ವಿವರಣೆ.– ಪ್ರಕರಣ 73ರ ಉಪಪ್ರಕರಣಗಳಾದ (2) ಮತ್ತು (10)ರಲ್ಲಿ ಅಥವಾ ಪ್ರಕರಣ 74ರ ಉಪಪ್ರಕರಣಗಳಾದ (2) ಮತ್ತು (10)ರಲ್ಲಿ ನಿರ್ದಿಷ್ಟಪಡಿಸಿದ ಅವಧಿಯನ್ನು ಲೆಕ್ಕಹಾಕುವಾಗ ಅಂಥ ಪೂರ್ವಭಾವಿ ನಿರ್ಣಯದ ದಿನಾಂಕದಿಂದ ಆರಂಭವಾಗುವ ಮತ್ತು ಈ ಉಪ ಪ್ರಕರಣದ ಅಡಿಯಲ್ಲಿನ ಆದೇಶದ ದಿನಾಂಕದೊಂದಿಗೆ ಅಂತ್ಯಗೊಳ್ಳುವ ಅವಧಿಯನ್ನು ಬಿಡತಕ್ಕದ್ದು.

(2) ಉಪಪ್ರಕರಣ (1)ರ ಅಡಿಯಲ್ಲಿ ಮಾಡಿದ ಆದೇಶದ ಒಂದು ಪ್ರತಿಯನ್ನು ಅರ್ಜಿದಾರನಿಗೆ, ಸಂಬಂಧಿತ ಅಧಿಕಾರಿಗೆ ಮತ್ತು ಕ್ಷೇತ್ರವ್ಯಾಪ್ತಿಯ ಅಧಿಕಾರಿಗೆ ಕಳುಹಿಸತಕ್ಕದ್ದು.

105. ಪ್ರಾಧಿಕಾರ ಮತ್ತು ಅಪೀಲು ಪ್ರಾಧಿಕಾರದ ಅಧಿಕಾರಗಳು.– (1) ಪ್ರಾಧಿಕಾರವು ಅಥವಾ, ಅಪೀಲು ಪ್ರಾಧಿಕಾರವು,–

(ಎ) ಪತ್ತೆ ಮಾಡುವಿಕೆ ಮತ್ತು ತಪಾಸಣೆಗೆ;

(ಬಿ) ಯಾವುದೇ ವ್ಯಕ್ತಿಯ ಹಾಜರಾತಿಯ ಒತ್ತಾಯ ಪಡಿಸುವಿಕೆ ಮತ್ತು ಆತನನ್ನು ಪ್ರಮಾಣದ ಮೇಲೆ ಪರೀಕ್ಷಿಸುವಿಕೆಗೆ;

(ಸಿ) ಕಾರ್ಯಾಜ್ಞೆಗಳನ್ನು ಹೊರಡಿಸುವಿಕೆ ಮತ್ತು ಲೆಕ್ಕಪುಸ್ತಕಗಳು ಮತ್ತು ಇತರ ದಾಖಲೆಗಳನ್ನು ಹಾಜರುಪಡಿಸಲು ಅಗತ್ಯಪಡಿಸುವಿಕೆಗೆ,

–ಸಂಬಂಧಿಸಿದಂತೆ ತನ್ನ ಅಧಿಕಾರಗಳನ್ನು ಚಲಾಯಿಸುವ ಉದ್ದೇಶಕ್ಕಾಗಿ ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (1908ರ ಕೇಂದ್ರ ಅಧಿನಿಯಮ 5) ಅಡಿಯಲ್ಲಿ ಒಂದು ಸಿವಿಲ್ ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು.

(2) ಪ್ರಾಧಿಕಾರ ಅಥವಾ ಅಪೀಲು ಪ್ರಾಧಿಕಾರವನ್ನು, ದಂಡ ಪ್ರಕ್ರಿಯಾ ಸಂಹಿತೆ, 1973 (1974ರ ಕೇಂದ್ರ ಅಧಿನಿಯಮ 2)ಯ ಅಧ್ಯಾಯ XXVI ರ ಉದ್ದೇಶಗಳಿಗಾಗಿ ಹೊರತುಪಡಿಸಿ, ಭಾರತೀಯ ದಂಡ ಸಂಹಿತೆ, 1860ರ (1860ರ ಕೇಂದ್ರ ಅಧಿನಿಯಮ 45) ಪ್ರಕರಣ 195ರ ಉದ್ದೇಶಗಳಿಗಾಗಿ, ಮತ್ತು ಪ್ರಾಧಿಕಾರ ಅಥವಾ ಅಪೀಲು ಪ್ರಾಧಿಕಾರದ ಮುಂದಿರುವ ಯಾವುದೇ ನಡಾವಳಿಗಳನ್ನು ಪ್ರಕರಣಗಳಾದ 193 ಮತ್ತು 228ರ ಅರ್ಥವ್ಯಾಪ್ತಿಯಲ್ಲಿನ ನ್ಯಾಯಿಕ ನಡಾವಳಿಗಳು ಎಂದು ಪರಿಭಾವಿಸತಕ್ಕದ್ದು, ಮತ್ತು ಪ್ರಕರಣ 196ರ ಉದ್ದೇಶಕ್ಕಾಗಿ, ಒಂದು ಸಿವಿಲ್ ನ್ಯಾಯಾಲಯ ಎಂದು ಪರಿಭಾವಿಸತಕ್ಕದ್ದು.

106. ಪ್ರಾಧಿಕಾರ ಮತ್ತು ಅಪೀಲು ಪ್ರಾಧಿಕಾರದ ಕಾರ್ಯವಿಧಾನಗಳು. ಪ್ರಾಧಿಕಾರ ಅಥವಾ ಅಪೀಲು ಪ್ರಾಧಿಕಾರವು, ಈ ಅಧ್ಯಾಯದ ಉಪಬಂಧಗಳಿಗೆ ಒಳಪಟ್ಟು, ತನ್ನ ಸ್ವಂತ ಕಾರ್ಯವಿಧಾನವನ್ನು ವಿನಿಯಮಿಸುವ ಅಧಿಕಾರವನ್ನು ಹೊಂದಿರತಕ್ಕದು.

ಅಧ್ಯಾಯ — XVIII
ಅಪೀಲುಗಳು ಮತ್ತು ಪುನರೀಕ್ಷಣೆ

107. ಅಪೀಲು ಪ್ರಾಧಿಕಾರಕ್ಕೆ ಅಪೀಲುಗಳು.– (1) ಒಂದು ನ್ಯಾಯನಿರ್ಣಯ ಪ್ರಾಧಿಕಾರದಿಂದ ಈ ಅಧಿನಿಯಮದ ಅಡಿಯಲ್ಲಿ ಅಥವಾ ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿ ಮಾಡಲಾದ ಯಾವುದೇ ನಿರ್ಣಯ ಅಥವಾ ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು, ಸದರಿ ನಿರ್ಣಯ ಅಥವಾ ಆದೇಶವು ಅಂಥ ವ್ಯಕ್ತಿಗೆ ತಿಳಿಯಪಡಿಸಿದ ದಿನಾಂಕದಿಂದ ಮೂರು ತಿಂಗಳ ಒಳಗಾಗಿ ನಿಯಮಿಸಬಹುದಾದ ಅಂಥ ಅಪೀಲು ಪ್ರಾಧಿಕಾರಕ್ಕೆ ಅಪೀಲು ಮಾಡಬಹುದು.

(2) ಆಯುಕ್ತರು, ತಮ್ಮ ಸ್ವಂತ ಪ್ರೇರಣೆಯಿಂದ ಅಥವಾ ಕೇಂದ್ರ ತೆರಿಗೆಯ ಆಯುಕ್ತರ ಕೋರಿಕೆಯ ಮೇರೆಗೆ, ಈ ಅಧಿನಿಯಮದ ಅಡಿಯಲ್ಲಿ ಅಥವಾ ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿ ಒಂದು ನ್ಯಾಯನಿರ್ಣಯ ಪ್ರಾಧಿಕಾರದಿಂದ ಹೊರಡಿಸಲಾದ ಯಾವುದೇ ನಿರ್ಣಯ ಅಥವಾ ಆದೇಶದ ಯಾವುದೇ ನಡಾವಳಿಗಳ ದಾಖಲೆಗಳನ್ನು, ಸದರಿ ನಿರ್ಣಯ ಅಥವಾ ಆದೇಶದ ಕಾನೂನು ಸಮ್ಮತತೆ ಹಾಗೂ ಔಚಿತ್ಯತೆಯನ್ನು ಸ್ವತಃ ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ಕರೆಯಬಹುದು ಮತ್ತು ಪರೀಕ್ಷಿಸಬಹುದು ಹಾಗೂ ಆಯುಕ್ತರು ತಮ್ಮ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದ ಸದರಿ ನಿರ್ಣಯ ಅಥವಾ ಆದೇಶದಿಂದ ಉದ್ಭವಿಸಿರುವ ಅಂಥ ಅಂಶಗಳನ್ನು ನಿರ್ಧರಿಸುವುದಕ್ಕಾಗಿ, ಸದರಿ ನಿರ್ಣಯ ಅಥವಾ ಆದೇಶವನ್ನು ತಿಳಿಯಪಡಿಸಿದ ದಿನಾಂಕದಿಂದ ಆರು ತಿಂಗಳ ಒಳಗಾಗಿ ಅಪೀಲು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸುವಂತೆ ತನಗೆ ಅಧೀನನಾದ ಯಾವುದೇ ಅಧಿಕಾರಿಯನ್ನು ಆದೇಶದ ಮೂಲಕ ನಿರ್ದೇಶಿಸಬಹುದು.

(3) ಉಪಪ್ರಕರಣ (2)ರ ಅಡಿಯಲ್ಲಿನ ಒಂದು ಆದೇಶದ ಅನುಸರಣೆಯಲ್ಲಿ, ಪ್ರಾಧಿಕೃತ ಅಧಿಕಾರಿಯು ಅಪೀಲು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿದ್ದಲ್ಲಿ, ಅಂಥ ಅರ್ಜಿಯನ್ನು ಅಪೀಲು ಪ್ರಾಧಿಕಾರವು, ನ್ಯಾಯ ನಿರ್ಣಯ ಪ್ರಾಧಿಕಾರದ ನಿರ್ಣಯ ಅಥವಾ ಆದೇಶದ ವಿರುದ್ಧವಾಗಿ ಅಪೀಲು ಮಾಡಲಾಗಿದೆ ಹಾಗೂ ಅಂಥ ಪ್ರಾಧಿಕೃತ ಅಧಿಕಾರಿಯೇ ಅಪೀಲುದಾರ ಎನ್ನುವ ಹಾಗೆಯೇ ವ್ಯವಹರಿಸತಕ್ಕದ್ದು ಮತ್ತು ಅಪೀಲಿಗೆ ಸಂಬಂಧಿಸಿದ ಈ ಅಧಿನಿಯಮದ ಉಪಬಂಧಗಳು ಅಂಥ ಅರ್ಜಿಗೆ ಅನ್ವಯವಾಗತಕ್ಕದ್ದು.

(4) ಅಪೀಲು ಪ್ರಾಧಿಕಾರವು, ಮೇಲೆ ಹೇಳಲಾದ ಮೂರು ತಿಂಗಳುಗಳು ಅಥವಾ ಆರು ತಿಂಗಳುಗಳ ಅವಧಿಯ ಒಳಗಾಗಿ, ಅಪೀಲನ್ನು ಪ್ರಸ್ತುತ ಪಡಿಸಲು ಅಪೀಲುದಾರ ಸಾಕಷ್ಟು ಕಾರಣಗಳಿಂದ ಪ್ರತಿಬಂಧಿತನಾಗಿದ್ದಾನೆ ಎಂದು ಆತನು ಮನದಟ್ಟು ಮಾಡಿಕೊಂಡಿದ್ದರೆ, ಅದನ್ನು ಮುಂದುವರೆದ ಒಂದು ತಿಂಗಳ ಹೆಚ್ಚಿನ ಅವಧಿಯ ಒಳಗಾಗಿ ಪ್ರಸ್ತುತ ಪಡಿಸಲು ಅವಕಾಶ ನೀಡಬಹುದು.

(5) ಈ ಪ್ರಕರಣದ ಅಡಿಯಲ್ಲಿನ ಪ್ರತಿಯೊಂದು ಅಪೀಲು, ನಿಯಮಿಸಬಹುದಾದ ಅಂಥ ನಮೂನೆಯಲ್ಲಿರತಕ್ಕದ್ದು ಮತ್ತು ಅಂಥ ವಿಧಾನದಲ್ಲಿ ಪರಿಶೀಲಿಸತಕ್ಕದ್ದು.

(6) ಅಪೀಲುದಾರನು ಈ ಕೆಳಗಿನವುಗಳನ್ನು ಸಂದಾಯ ಮಾಡಿದ ಹೊರತು ಉಪಪ್ರಕರಣ (1)ರ ಅಡಿಯಲ್ಲಿ ಅಪೀಲನ್ನು ಸಲ್ಲಿಸುವ ಹಾಗಿಲ್ಲ,–

(ಎ) ಆಕ್ಷೇಪಿತ ಆದೇಶದಿಂದ ಉದ್ಭವಿಸಿರುವ ತೆರಿಗೆ, ಬಡ್ಡಿ, ಜುಲ್ಮಾನೆ, ಶುಲ್ಕ ಮತ್ತು ದಂಡದ ಮೊತ್ತದಲ್ಲಿ ಆತನಿಂದ ಒಪ್ಪಿಕೊಂಡಿರುವ ಅಂಥ ಭಾಗವನ್ನು, ಪೂರ್ಣವಾಗಿ; ಮತ್ತು

(ಬಿ) ಅಪೀಲು ಸಲ್ಲಿಸಲಾಗಿರುವುದಕ್ಕೆ ಸಂಬಂಧಿಸಿದಂತಹ ಸದರಿ ಆದೇಶದಿಂದ ಉದ್ಭವಿಸಿರುವ ವಿವಾದದಲ್ಲಿರುವ ತೆರಿಗೆಯ ಉಳಿದ ಮೊತ್ತದ ಶೇಕಡಾ ಹತ್ತರಷ್ಟಕ್ಕೆ ಸಮನಾದ ಒಂದು ಮೊಬಲಗು.

(7) ಅಪೀಲುದಾರನು ಉಪಪ್ರಕರಣ (6)ರ ಅಡಿಯಲ್ಲಿನ ಮೊಬಲಗನ್ನು ಸಂದಾಯ ಮಾಡಿದ್ದಲ್ಲಿ, ಬಾಕಿ ಮೊತ್ತಕ್ಕಾಗಿ ವಸೂಲಾತಿ ನಡಾವಳಿಗಳನ್ನು ತಡೆಹಿಡಿಯಲಾಗಿದೆ ಎಂದು ಪರಿಭಾವಿಸತಕ್ಕದ್ದು.

(8) ಅಪೀಲು ಪ್ರಾಧಿಕಾರವು, ಅಪೀಲುದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡತಕ್ಕದ್ದು.

(9) ಅಪೀಲು ಪ್ರಾಧಿಕಾರವು, ಅಪೀಲಿನ ಅಹವಾಲಿನ ಯಾವುದೇ ಹಂತದಲ್ಲಿ ಸಾಕಷ್ಟು ಕಾರಣವನ್ನು ತೋರಿಸಿದರೆ, ಪಕ್ಷಕಾರರುಗಳಿಗೆ ಅಥವಾ ಅವರುಗಳಲ್ಲಿ ಯಾರಿಗಾದರೂ ಕಾಲಾವಕಾಶವನ್ನು ಮಂಜೂರು ಮಾಡಬಹದು ಮತ್ತು ಅಪೀಲಿನ ಅಹವಾಲನ್ನು ಲಿಖಿತವಾಗಿ ದಾಖಲಿಸಬಹುದಾದ ಕಾರಣಗಳಿಗಾಗಿ ಮುಂದೂಡಬಹುದು:

ಪರಂತು ಅಪೀಲಿನ ಅಹವಾಲಿನ ಸಮಯದಲ್ಲಿ ಒಬ್ಬ ಪಕ್ಷಕಾರನಿಗೆ ಮೂರು ಬಾರಿಗಿಂತ ಹೆಚ್ಚಿನದಾಗಿ ಅಂಥ ಮುಂದೂಡಿಕೆಯನ್ನು ನೀಡತಕ್ಕದ್ದಲ್ಲ.

(10) ಅಪೀಲು ಪ್ರಾಧಿಕಾರವು, ಅಪೀಲಿನ ಅಹವಾಲಿನ ಸಮಯದಲ್ಲಿ, ಅಪೀಲಿನ ಕಾರಣಾಧಾರಗಳಿಂದ, ಆ ಕಾರಣಾಧಾರವು ಬಿಟ್ಟುಹೋಗಿರುವುದು ಉದ್ದೇಶಪೂರ್ವಕವಾಗಿಯಲ್ಲ ಅಥವಾ ಅನುಚಿತವಾದುದಲ್ಲ ಎಂದು ಅದು ಮನದಟ್ಟು ಮಾಡಿಕೊಂಡಿದ್ದರೆ, ಅಪೀಲಿನ ಕಾರಣಾಧಾರಗಳಲ್ಲಿ ನಿರ್ದಿಷ್ಟಪಡಿಸಿಲ್ಲದ, ಅಪೀಲಿನ ಯಾವುದೇ ಕಾರಣಾಧಾರವನ್ನು ಸೇರಿಸಲು ಅಪೀಲುದಾರನಿಗೆ ಅವಕಾಶವನ್ನು ನೀಡಬಹದು.

(11) ಅಪೀಲು ಪ್ರಾಧಿಕಾರವು, ಅವಶ್ಯಕವಾಗಬಹುದಾದ ಅಂಥ ಮುಂದುವರಿದ ವಿಚಾರಣೆಯನ್ನು ಮಾಡಿದ ನಂತರ, ಅದು ನ್ಯಾಯಸಮ್ಮತ ಮತ್ತು ಉಚಿತ ಎಂದು ಆಲೋಚಿಸಿದಂತೆ, ಅದರ ವಿರುದ್ಧವಾಗಿ ಅಪೀಲು ಮಾಡಲಾಗಿರುವ ನಿರ್ಣಯ ಅಥವಾ ಆದೇಶವನ್ನು ಖಾತ್ರಿಗೊಳಿಸಿ, ಮಾರ್ಪಡಿಸಿ ಅಥವಾ ರದ್ದುಗೊಳಿಸಿ ಅಂಥ ಆದೇಶವನ್ನು ಹೊರಡಿಸತಕ್ಕದ್ದು, ಆದರೆ ಸದರಿ ನಿರ್ಣಯ ಅಥವಾ ಆದೇಶವನ್ನು ಹೊರಡಿಸಿದ ನ್ಯಾಯ ನಿರ್ಣಯ ಪ್ರಾಧಿಕಾರಕ್ಕೆ ಪ್ರಕರಣವನ್ನು ಹಿಂದಕ್ಕೆ ವಹಿಸತಕ್ಕದ್ದಲ್ಲ:

ಪರಂತು ಯಾವುದೇ ಶುಲ್ಕ ಅಥವಾ ದಂಡ ಅಥವಾ ಮುಟ್ಟುಗೋಲಿನ ಬದಲಿನ ಜುಲ್ಮಾನೆಯನ್ನು ಹೆಚ್ಚಿಸುವ ಅಥವಾ ಹೆಚ್ಚಿನ ಮೌಲ್ಯದ ಸರಕುಗಳ ಮುಟ್ಟುಗೋಲು ಹಾಕುವ ಅಥವಾ ಮರುಪಾವತಿಯ ಮೊತ್ತ ಅಥವಾ ಹೂಡುವಳಿ ತೆರಿಗೆ ಜಮೆಯನ್ನು ಇಳಿಕೆ ಮಾಡುವ, ಒಂದು ಆದೇಶವನ್ನು, ಅಪೀಲುದಾರನಿಗೆ ಪ್ರಸ್ತಾವಿತ ಆದೇಶದ ವಿರುದ್ಧ ಕಾರಣಗಳನ್ನು ತೋರಿಸಲು ಯುಕ್ತವಾದ ಅವಕಾಶವನ್ನು ನೀಡದ ಹೊರತು ಹೊರಡಿಸತಕ್ಕದ್ದಲ್ಲ:

ಮತ್ತು ಪರಂತು ಯಾವುದೇ ತೆರಿಗೆಯನ್ನು ಸಂದಾಯ ಮಾಡಲಾಗಿಲ್ಲ ಅಥವಾ ಕಡಿಮೆ ಸಂದಾಯ ಮಾಡಲಾಗಿದೆ ಅಥವಾ ತಪ್ಪಿನಿಂದ ಮರುಪಾವತಿ ಮಾಡಲಾಗಿದೆ ಅಥವಾ ಹೂಡುವಳಿ ತೆರಿಗೆ ಜಮೆಯನ್ನು ತಪ್ಪಾಗಿ ತೆಗೆದುಕೊಳ್ಳಲಾಗಿದೆ ಅಥವಾ ಬಳಸಲಾಗಿದೆ, ಎನ್ನುವ ಅಭಿಪ್ರಾಯವನ್ನು ಅಪೀಲು ಪ್ರಾಧಿಕಾರವು ಹೊಂದಿದ್ದಲ್ಲಿ, ಅಂಥ ತೆರಿಗೆ ಅಥವಾ ಹೂಡುವಳಿ ತೆರಿಗೆ ಜಮೆಯನ್ನು ಸಂದಾಯಮಾಡಲು ಅಪೀಲುದಾರನನ್ನು ಅಗತ್ಯಪಡಿಸುವ ಆದೇಶವನ್ನು, ಪ್ರಸ್ತಾವಿತ ಆದೇಶದ ವಿರುದ್ಧ ಕಾರಣಗಳನ್ನು ತೋರಿಸಲು ಅಪೀಲುದಾರನಿಗೆ ಸೂಚನಾಪತ್ರವನ್ನು ನೀಡಿದ ಹೊರತು ಹೊರಡಿಸತಕ್ಕದ್ದಲ್ಲ ಮತ್ತು ಪ್ರಕರಣ 73 ಅಥವಾ ಪ್ರಕರಣ 74ರ ಅಡಿಯಲ್ಲಿ ನಿರ್ದಿಷ್ಟಪಡಿಸಿರುವ ಕಾಲಮಿತಿಯ ಒಳಗಾಗಿ ಆ ಆದೇಶವನ್ನು ಹೊರಡಿಸುವುದು.

(12) ಅಪೀಲನ್ನು ವಿಲೇವಾರಿ ಮಾಡುವ ಅಪೀಲು ಪ್ರಾಧಿಕಾರದ ಆದೇಶವು ಲಿಖಿತವಾಗಿರತಕ್ಕದ್ದು ಮತ್ತು ನಿರ್ಧರಣೆಗಾಗಿ ಇರುವ ಅಂಶಗಳನ್ನು, ಅದರ ಮೇಲಿನ ನಿರ್ಣಯವನ್ನು ಮತ್ತು ಅಂಥ ನಿರ್ಣಯಕ್ಕೆ ಕಾರಣಗಳನ್ನು ನಿರೂಪಿಸತಕ್ಕದ್ದು.

(13) ಅಪೀಲು ಪ್ರಾಧಿಕಾರವು, ಅದಕ್ಕೆ ಹಾಗೆ ಮಾಡಲು ಸಾಧ್ಯವಾಗುವಲ್ಲಿ, ಪ್ರತಿಯೊಂದು ಅಪೀಲನ್ನು ಅದು ಸಲ್ಲಿಕೆಯಾದ ದಿನಾಂಕದಿಂದ ಒಂದು ವರ್ಷದ ಅವಧಿಯ ಒಳಗಾಗಿ ಅಹವಾಲು ಮಾಡತಕ್ಕದ್ದು ಮತ್ತು ನಿರ್ಣಯಿಸತಕ್ಕದ್ದು.

ಪರಂತು ಆದೇಶ ನೀಡುವಿಕೆಗೆ, ಒಂದು ನ್ಯಾಯಾಲಯ ಅಥವಾ ನ್ಯಾಯಾಧಿಕರಣದ ಆದೇಶದಿಂದ ತಡೆಯಿದ್ದಲ್ಲಿ, ಅಂಥ ತಡೆಯ ಅವಧಿಯನ್ನು, ಒಂದು ವರ್ಷದ ಅವಧಿಯನ್ನು ಲೆಕ್ಕಹಾಕುವಾಗ ಬಿಡತಕ್ಕದ್ದು.

(14) ಅಪೀಲನ್ನು ವಿಲೇವಾರಿ ಮಾಡಿದ ನಂತರ, ಅಪೀಲು ಪ್ರಾಧಿಕಾರವು ಅದರಿಂದ ಹೊರಡಿಸಿದ ಆದೇಶವನ್ನು ಅಪೀಲುದಾರನಿಗೆ, ಪ್ರತಿವಾದಿಗೆ ಮತ್ತು ನ್ಯಾಯನಿರ್ಣಯ ಪ್ರಾಧಿಕಾರಕ್ಕೆ ತಿಳಿಯಪಡಿಸತಕ್ಕದ್ದು.

(15) ಅಪೀಲು ಪ್ರಾಧಿಕಾರದಿಂದ ಹೊರಡಿಸಿದ ಆದೇಶದ ಒಂದು ಪ್ರತಿಯನ್ನು, ಆಯುಕ್ತರಿಗೆ ಅಥವಾ ಈ ಸಂಬಂಧದಲ್ಲಿ ಅವರಿಂದ ನೇಮಿತವಾದ ಪ್ರಾಧಿಕಾರಕ್ಕೆ ಮತ್ತು ಕ್ಷೇತ್ರ ವ್ಯಾಪ್ತಿಯ ಕೇಂದ್ರ ತೆರಿಗೆ ಆಯುಕ್ತರಿಗೆ ಅಥವಾ ಈ ಸಂಬಂಧದಲ್ಲಿ ಅವರಿಂದ ನೇಮಿತವಾದ ಪ್ರಾಧಿಕಾರಕ್ಕೂ ಸಹ ಕಳುಹಿಸತಕ್ಕದ್ದು.

(16) ಪ್ರಕರಣ 108 ಅಥವಾ ಪ್ರಕರಣ 113 ಅಥವಾ ಪ್ರಕರಣ 117 ಅಥವಾ ಪ್ರಕರಣ 118ರ ಉಪಬಂಧಗಳಿಗೆ ಒಳಪಟ್ಟು ಈ ಪ್ರಕರಣದ ಅಡಿಯಲ್ಲಿ ಹೊರಡಿಸಿದ ಪ್ರತಿಯೊಂದು ಆದೇಶವು ಅಂತಿಮವಾಗಿರತಕ್ಕದ್ದು ಹಾಗೂ ಪಕ್ಷಕಾರರ ಮೇಲೆ ಬದ್ಧವಾಗಿರತಕ್ಕದು.

108. ಪುನರೀಕ್ಷಣಾ ಪ್ರಾಧಿಕಾರದ ಅಧಿಕಾರಗಳು.– (1) ಪ್ರಕರಣ 121ರ ಉಪಬಂಧಗಳಿಗೆ ಹಾಗೂ ಇದರ ಅಡಿಯಲ್ಲಿ ಮಾಡಲಾದ ಯಾವುದೇ ನಿಯಮಗಳಿಗೆ ಒಳಪಟ್ಟು, ಪುನರೀಕ್ಷಣಾ ಪ್ರಾಧಿಕಾರವು, ತನ್ನ ಸ್ವಪ್ರೇರಣೆಯಿಂದ, ಅಥವಾ ತನ್ನಿಂದ

ಸ್ವೀಕರಿಸಿದ ಮಾಹಿತಿಯ ಮೇರೆಗೆ, ಅಥವಾ ಕೇಂದ್ರ ತೆರಿಗೆಯ ಆಯುಕ್ತರ ಕೋರಿಕೆಯ ಮೇರೆಗೆ, ಯಾವುದೇ ನಡಾವಳಿಗಳ ದಾಖಲೆಯನ್ನು ಕರೆಯಬಹುದು ಮತ್ತು ಪರೀಕ್ಷಿಸಬಹುದು ಮತ್ತು ಅದು ತನಗೆ ಅಧೀನನಾದ ಯಾವುದೇ ಅಧಿಕಾರಿಯಿಂದ, ಈ ಅಧಿನಿಯಮದ ಅಡಿಯಲ್ಲಿ ಅಥವಾ ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿ, ಹೊರಡಿಸಿದ ಯಾವುದೇ ನಿರ್ಣಯ ಅಥವಾ ಆದೇಶವು, ರಾಜಸ್ವದ ಹಿತಾಸಕ್ತಿಗೆ ಬಾಧಕವಾಗುವಷ್ಟರ ಮಟ್ಟಿಗೆ ತಪ್ಪಾಗಿರುವುದು ಮತ್ತು ಕಾನೂನು ಬಾಹಿರವಾದುದು ಅಥವಾ ಅನುಚಿತವಾದದು ಅಥವಾ ಕೆಲವೊಂದು ಮುಖ್ಯ ಸಂಗತಿಗಳನ್ನು, ಸದರಿ ಆದೇಶವನ್ನು ನೀಡುವ ಸಮಯದಲ್ಲಿ ಲಭ್ಯವಿರಲಿ ಅಥವಾ ಇಲ್ಲದಿರಲಿ, ಗಣನೆಗೆ ತೆಗೆದುಕೊಂಡಿಲ್ಲ ಎಂದು ಪರಿಗಣಿಸಿದಲ್ಲಿ ಅಥವಾ ಭಾರತೀಯ ಕಂಟ್ರೋಲರ್ ಮತ್ತು ಆಡಿಟರ್ ಜನರಲ್‌ರಿಂದ ಒಂದು ಅಭಿಪ್ರಾಯದ ಪರಿಣಾಮವಾಗಿ, ಅದು, ಅಗತ್ಯವಿದ್ದರೆ, ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ಅವಧಿಯವರೆಗೆ ಅಂಥ ನಿರ್ಣಯ ಅಥವಾ ಆದೇಶದ ಕಾರ್ಯಾಚರಣೆಯನ್ನು ತಡೆಹಿಡಿಯಬಹುದು, ಮತ್ತು ಸಂಬಂಧಿತ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡಿದ ನಂತರ ಮತ್ತು ಅಗತ್ಯವಾಗಬಹುದಾದ ಅಂಥ ಮುಂದಿನ ವಿಚಾರಣೆಯನ್ನು ಮಾಡಿದ ನಂತರ ಅದು ನ್ಯಾಯಸಮ್ಮತ ಮತ್ತು ಉಚಿತವಾದದು ಎಂದು ಯೋಚಿಸಿದಂತೆ, ಸದರಿ ನಿರ್ಣಯ ಅಥವಾ ಆದೇಶವನ್ನು ಖಾತ್ರಿಗೊಳಿಸುವುದು, ಮಾರ್ಪಾಡು ಮಾಡುವುದು ಅಥವಾ ರದ್ದುಗೊಳಿಸುವುದನ್ನು ಒಳಗೊಂಡ ಅಂಥ ಆದೇಶವನ್ನು ಹೊರಡಿಸಬಹುದು.

(2) ಈ ಕೆಳಗಿನವುಗಳಿದ್ದಾಗ ಪುನರೀಕ್ಷಣಾ ಪ್ರಾಧಿಕಾರವು ಉಪ–ಪ್ರಕರಣ (1)ರ ಅಡಿಯಲ್ಲಿ ಯಾವುದೇ ಅಧಿಕಾರವನ್ನು ಚಲಾಯಿಸತಕ್ಕದ್ದಲ್ಲ,–

(ಎ) ಆದೇಶವು ಪ್ರಕರಣ 107ರ ಅಡಿಯಲ್ಲಿ ಅಥವಾ ಪ್ರಕರಣ 112ರ ಅಡಿಯಲ್ಲಿ ಅಥವಾ ಪ್ರಕರಣ 117ರ ಅಡಿಯಲ್ಲಿ ಅಥವಾ ಪ್ರಕರಣ 118ರ ಅಡಿಯಲ್ಲಿ ಅಪೀಲಿಗೆ ಒಳಪಟ್ಟಿದ್ದಾಗ; ಅಥವಾ

(ಬಿ) ಪ್ರಕರಣ 107ರ ಉಪಪ್ರಕರಣ (2)ರ ಅಡಿಯಲ್ಲಿ ನಿರ್ದಿಷ್ಟಪಡಿಸಿರುವ ಅವಧಿಯು ಇನ್ನೂ ಮುಕ್ತಾಯವಾಗದೇ ಇದ್ದಾಗ ಅಥವಾ ಪರಿಷ್ಕರಿಸಬೇಕಾದ ನಿರ್ಣಯ ಅಥವಾ ಆದೇಶ ಹೊರಡಿಸಿದ ನಂತರ ಮೂರು ವರ್ಷಗಳಿಗಿಂತ ಹೆಚ್ಚು ಮುಕ್ತಾಯವಾಗಿದ್ದಾಗ; ಅಥವಾ

(ಸಿ) ಆ ಆದೇಶವನ್ನು ಈ ಪ್ರಕರಣದ ಅಡಿಯಲ್ಲಿ ಮುಂಚಿನ ಒಂದು ಹಂತದಲ್ಲಿ ಪುನರೀಕ್ಷಣೆಗೆ ಈಗಾಗಲೇ ತೆಗೆದುಕೊಂಡಿದ್ದಾಗ; ಅಥವಾ

(ಡಿ) ಉಪಪ್ರಕರಣ (1)ರ ಅಡಿಯಲ್ಲಿನ ಅಧಿಕಾರವನ್ನು ಚಲಾಯಿಸಿ ಆದೇಶವನ್ನು ಹೊರಡಿಸಿದ್ದಾಗ:

ಪರಂತು, ಪುನರೀಕ್ಷಣಾ ಪ್ರಾಧಿಕಾರವು, ಉಪಪ್ರಕರಣ (2)ರ ಖಂಡ (ಎ)ಯಲ್ಲಿ ಉಲ್ಲೇಖಿಸಲಾದ ಒಂದು ಅಪೀಲಿನಲ್ಲಿ ಎತ್ತಲಾಗಿಲ್ಲದ ಮತ್ತು ನಿರ್ಣಯಿಸಿಲ್ಲದ ಯಾವುದೇ ಅಂಶದ ಮೇಲೆ, ಅಂಥ ಅಪೀಲಿನಲ್ಲಿನ ಆದೇಶದ ದಿನಾಂಕದಿಂದ ಒಂದು ವರ್ಷ ಮುಗಿಯುವ ಮೊದಲು ಅಥವಾ ಆ ಉಪಪ್ರಕರಣದ ಖಂಡ (ಬಿ)ಯಲ್ಲಿ ಉಲ್ಲೇಖಿಸಲಾಗಿರುವ ಮೂರು ವರ್ಷಗಳ ಅವಧಿಯು ಮುಗಿಯುವ ಮೊದಲು, ಇವುಗಳಲ್ಲಿ ಯಾವುದು ತರುವಾಯವೋ, ಅದರೊಳಗಾಗಿ ಉಪಪ್ರಕರಣ (1)ರ ಅಡಿಯಲ್ಲಿ, ಒಂದು ಆದೇಶವನ್ನು ಹೊರಡಿಸಬಹುದು.

(3) ಉಪಪ್ರಕರಣ (1)ರ ಅಡಿಯಲ್ಲಿ ಪುನರೀಕ್ಷಣೆಯಲ್ಲಿ ಹೊರಡಿಸಿದ ಪ್ರತಿಯೊಂದು ಆದೇಶವು ಪ್ರಕರಣ 113 ಅಥವಾ ಪ್ರಕರಣ 117 ಅಥವಾ ಪ್ರಕರಣ 118ರ ಉಪಬಂಧಗಳಿಗೆ ಒಳಪಟ್ಟು ಅಂತಿಮವಾಗಿರತಕ್ಕದ್ದು ಹಾಗೂ ಪಕ್ಷಕಾರರ ಮೇಲೆ ಬದ್ಧವಾಗಿರತಕ್ಕದ್ದು.

(4) ಈ ಪ್ರಕರಣದ ಅಡಿಯಲ್ಲಿ ಸೂಚನಾಪತ್ರವನ್ನು ನೀಡುವುದರ ಮೂಲಕ ಪುನರೀಕ್ಷಣೆಗಾಗಿ ನಡಾವಳಿಗಳನ್ನು ಪ್ರಾರಂಭಿಸಲಾಗಿದ್ದಲ್ಲಿ, ಸದರಿ ನಿರ್ಣಯ ಅಥವಾ ಆದೇಶವು, ಅದರ ಮೇಲೆ ಅಪೀಲು ನ್ಯಾಯಾಧಿಕರಣ ಅಥವಾ ಉಚ್ಚ ನ್ಯಾಯಾಲಯ ಕೆಲವು ಇತರ ನಡಾವಳಿಗಳಲ್ಲಿ ತನ್ನ ನಿರ್ಣಯವನ್ನು ನೀಡಿರುವ ಒಂದು ವಿಷಯವನ್ನು ಒಳಗೊಂಡಿದ್ದರೆ, ಮತ್ತು ಅಪೀಲು ನ್ಯಾಯಾಧಿಕರಣ ಅಥವಾ ಉಚ್ಚ ನ್ಯಾಯಾಲಯದ ಅಂಥ ನಿರ್ಣಯದ ವಿರುದ್ಧ ಉಚ್ಚ ನ್ಯಾಯಾಲಯ ಅಥವಾ ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಿರುವ ಅಪೀಲು ಇತ್ಯರ್ಥದಲ್ಲಿದ್ದಾಗ, ಅಪೀಲು ನ್ಯಾಯಾಧಿಕರಣದ ನಿರ್ಣಯದ ದಿನಾಂಕ ಮತ್ತು ಉಚ್ಚ ನ್ಯಾಯಾಲಯದ ನಿರ್ಣಯದ ದಿನಾಂಕ ಅಥವಾ ಉಚ್ಚ ನ್ಯಾಯಾಲಯದ ನಿರ್ಣಯದ ದಿನಾಂಕ ಮತ್ತು ಸರ್ವೋಚ್ಚ ನ್ಯಾಯಾಲಯದ ನಿರ್ಣಯದ ದಿನಾಂಕ ಇವುಗಳ ನಡುವೆ ಕಳೆದ ಅವಧಿಯನ್ನು ಉಪಪ್ರಕರಣ (2)ರ ಖಂಡ (ಬಿ)ಯಲ್ಲಿ ಉಲ್ಲೇಖಿಸಲಾದ ಕಾಲಮಿತಿಯ ಅವಧಿಯನ್ನು ಲೆಕ್ಕಹಾಕುವಾಗ ಬಿಡತಕ್ಕದ್ದು.

(5) ಉಪಪ್ರಕರಣ (1) ರ ಅಡಿಯಲ್ಲಿ ಆದೇಶ ನೀಡುವಿಕೆಗೆ, ನ್ಯಾಯಾಲಯ ಅಥವಾ ಅಪೀಲು ನ್ಯಾಯಾಧಿಕರಣದ ಆದೇಶದಿಂದ ತಡೆಯಿದ್ದಲ್ಲಿ, ಅಂಥ ತಡೆಯ ಅವಧಿಯನ್ನು ಉಪಪ್ರಕರಣ (2)ರ ಖಂಡ (ಬಿ)ಯಲ್ಲಿ ಉಲ್ಲೇಖಿಸಲಾದ ಅವಧಿಯನ್ನು ಲೆಕ್ಕಹಾಕುವಾಗ ಬಿಡತಕ್ಕದ್ದು.

(6) ಈ ಪ್ರಕರಣದ ಉದ್ದೇಶಗಳಿಗಾಗಿ,–

(i) 'ದಾಖಲೆ' ಎಂಬ ಪದವು, ಪುನರೀಕ್ಷಣಾ ಪ್ರಾಧಿಕಾರದಿಂದ ಪರೀಕ್ಷಿಸುವ ಸಮಯದಲ್ಲಿ ಲಭ್ಯವಿರುವ, ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ನಡಾವಳಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಒಳಗೊಳ್ಳತಕ್ಕದ್ದು.

(ii) 'ನಿರ್ಣಯ' ಪದವು, ಪುನರೀಕ್ಷಣಾ ಪ್ರಾಧಿಕಾರಕ್ಕಿಂತ ಶ್ರೇಣಿಯಲ್ಲಿ ಕಡಿಮೆಯಿರುವ ಇತರ ಯಾವುದೇ ಅಧಿಕಾರಿಯಿಂದ ನೀಡಲಾದ ಮಾಹಿತಿಯನ್ನು ಒಳಗೊಳ್ಳತಕ್ಕದ್ದು.

109. ಅಪೀಲು ನ್ಯಾಯಾಧಿಕರಣ ಮತ್ತು ಅದರ ನ್ಯಾಯಪೀಠಗಳು.– (1) ಈ ಅಧ್ಯಾಯದ ಉಪಬಂಧಗಳಿಗೆ ಒಳಪಟ್ಟು, ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿ ರಚಿಸಿದ ಸರಕು ಮತ್ತು ಸೇವೆಗಳ ನ್ಯಾಯಾಧಿಕರಣವು, ಈ ಅಧಿನಿಯಮದ ಅಡಿಯಲ್ಲಿ ಅಪೀಲು ಪ್ರಾಧಿಕಾರ ಅಥವಾ ಪುನರೀಕ್ಷಣಾ ಪ್ರಾಧಿಕಾರದಿಂದ ಹೊರಡಿಸಿದ ಆದೇಶಗಳ ವಿರುದ್ಧವಾದ ಅಪೀಲುಗಳನ್ನು ಅಹವಾಲು ಮಾಡುವುದಕ್ಕಾಗಿನ ಅಪೀಲು ನ್ಯಾಯಾಧಿಕರಣವಾಗಿರತಕ್ಕದ್ದು.

(2) ರಾಜ್ಯದಲ್ಲಿ ನೆಲೆಗೊಂಡಿರುವ ರಾಜ್ಯ ನ್ಯಾಯಪೀಠ ಮತ್ತು ಕ್ಷೇತ್ರ ನ್ಯಾಯಪೀಠಗಳ ರಚನೆ ಮತ್ತು ಕ್ಷೇತ್ರವ್ಯಾಪ್ತಿಯು, ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ ಪ್ರಕರಣ 109ರ ಉಪಬಂಧಗಳಿಗೆ ಅಥವಾ ಇದರ ಅಡಿಯಲ್ಲಿ ಮಾಡಲಾದ ನಿಯಮಗಳಿಗೆ ಅನುಸಾರವಾಗಿರತಕ್ಕದ್ದು.

110. ಅಪೀಲು ನ್ಯಾಯಾಧಿಕರಣದ ಅಧ್ಯಕ್ಷರು ಮತ್ತು ಸದಸ್ಯರುಗಳು, ಅವರ ಅರ್ಹತೆ, ನೇಮಕಾತಿ, ಸೇವೆಯ ಷರತ್ತುಗಳು, ಇತ್ಯಾದಿ.– ರಾಜ್ಯ ನ್ಯಾಯಪೀಠ ಮತ್ತು ಕ್ಷೇತ್ರ ನ್ಯಾಯಪೀಠಗಳ ಅಧ್ಯಕ್ಷರು ಮತ್ತು ಸದಸ್ಯರುಗಳ ಅರ್ಹತೆಗಳು, ನೇಮಕಾತಿ, ವೇತನ ಮತ್ತು ಭತ್ಯೆಗಳು, ಹುದ್ದೆಯ ನಿಬಂಧನೆಗಳು, ರಾಜಿನಾಮೆ ಮತ್ತು ವಜಾಗೊಳಿಸುವುದು, ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ ಪ್ರಕರಣ 110ರ ಉಪಬಂಧಗಳಿಗೆ ಅನುಸಾರವಾಗಿರತಕ್ಕದ್ದು.

111. ಅಪೀಲು ನ್ಯಾಯಾಧಿಕರಣದ ಮುಂದೆ ಕಾರ್ಯವಿಧಾನ.– (1) ಅಪೀಲು ನ್ಯಾಯಾಧಿಕರಣವು ಅದರ ಮುಂದಿರುವ ಯಾವುದೇ ನಡಾವಳಿಗಳು ಅಥವಾ ಅದರ ಮುಂದಿರುವ ಅಪೀಲನ್ನು ವಿಲೇವಾರಿ ಮಾಡುವಾಗ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರಲ್ಲಿ (1908ರ ಕೇಂದ್ರ ಅಧಿನಿಯಮ 5) ಹೇಳಲಾದ ಕಾರ್ಯವಿಧಾನದ ಮೇರೆಗೆ ಬದ್ಧವಾಗಿರತಕ್ಕದ್ದಲ್ಲ ಆದರೆ ಸ್ವಭಾವಸಿದ್ಧ ನ್ಯಾಯದ ತತ್ವಗಳಿಂದ ಮಾರ್ಗದರ್ಶಿತವಾಗತಕ್ಕದ್ದು ಮತ್ತು ಈ ಅಧಿನಿಯಮದ ಇತರೆ ಉಪಬಂಧಗಳು ಮತ್ತು ಇದರ ಅಡಿಯಲ್ಲಿ ಮಾಡಿದ ನಿಯಮಗಳಿಗೆ ಒಳಪಟ್ಟು, ಅಪೀಲು ನ್ಯಾಯಾಧಿಕರಣವು ತನ್ನ ಸ್ವಂತ ಕಾರ್ಯವಿಧಾನವನ್ನು ವಿನಿಯಮಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

(2) ಅಪೀಲು ನ್ಯಾಯಾಧಿಕರಣವು ಈ ಅಧಿನಿಯಮದ ಅಡಿಯಲ್ಲಿ ತನ್ನ ಕಾರ್ಯಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ, ಸಿವಿಲ್ ಪ್ರಕ್ರಿಯಾ ಸಂಹಿತೆ 1908ರ (1908ರ ಕೇಂದ್ರ ಅಧಿನಿಯಮ 5) ಅಡಿಯಲ್ಲಿ ಒಂದು ನ್ಯಾಯಾಲಯಕ್ಕೆ ನಿಹಿತವಾಗಿರುವಂಥ ಅದೇ ಅಧಿಕಾರಗಳನ್ನು ಕೆಳಕಂಡ ವಿಷಯಗಳಿಗೆ ಸಂಬಂಧಿಸದಂತೆ ದಾವೆಯ ಅಧಿವಿಚಾರಣೆ ಮಾಡುವಾಗ ಹೊಂದಿರತಕ್ಕದ್ದು, ಎಂದರೆ:–

(ಎ) ಯಾವುದೇ ವ್ಯಕ್ತಿಯ ಸಮನ್ ಮಾಡುವುದು ಮತ್ತು ಹಾಜರಾತಿಯನ್ನು ಒತ್ತಾಯ ಪಡಿಸುವುದು ಹಾಗೂ ಆತನನ್ನು ಪ್ರಮಾಣದ ಮೇಲೆ ಪರೀಕ್ಷಿಸುವುದು;

(ಬಿ) ಯಾವುದೇ ದಸ್ತಾವೇಜುಗಳನ್ನು ಬಹಿರಂಗ ಪಡಿಸಲು ಮತ್ತು ಹಾಜರುಪಡಿಸಲು ಅಗತ್ಯಪಡಿಸುವುದು;

(ಸಿ) ಅಫಿಡವೆಟ್‌ನ ಮೇರೆಗೆ ಪುರಾವೆಗಳನ್ನು ಸ್ವೀಕರಿಸುವುದು;

(ಡಿ) ಭಾರತೀಯ ಪುರಾವೆ ಅಧಿನಿಯಮ, 1872ರ (1872ರ ಕೇಂದ್ರ ಅಧಿನಿಯಮ 1) ಪ್ರಕರಣಗಳಾದ 123 ಮತ್ತು 124ರ ಉಪಬಂಧಗಳಿಗೆ ಒಳಪಟ್ಟು, ಯಾವುದೇ ಕಛೇರಿಯಿಂದ, ಯಾವುದೇ ಸಾರ್ವಜನಿಕ ದಾಖಲೆ ಅಥವಾ ದಸ್ತಾವೇಜು ಅಥವಾ ಅಂಥ ದಾಖಲೆ ಅಥವಾ ದಸ್ತಾವೇಜಿನ ಪ್ರತಿಯನ್ನು ಕಡ್ಡಾಯಕೋರಿಕೆಯನ್ನು ಮಾಡುವುದು;

(ಇ) ಸಾಕ್ಷಿದಾರರ ಅಥವಾ ದಸ್ತಾವೇಜುಗಳ ಪರೀಕ್ಷೆಗಾಗಿ ಕಾರ್ಯಾಜ್ಞೆಗಳನ್ನು ಹೊರಡಿಸುವುದು.

(ಎಫ್) ಗೈರುಹಾಜರಿಯಿಂದಾಗಿ ಒಂದು ವಿಜ್ಞಾಪನೆಯನ್ನು ವಜಾ ಮಾಡುವುದು ಅಥವಾ ಅದನ್ನು ಏಕ ಪಕ್ಷೀಯವಾಗಿ ನಿರ್ಣಯಿಸುವುದು;

(ಜಿ) ಗೈರುಹಾಜರಿಯಿಂದಾಗಿ ಒಂದು ವಿಜ್ಞಾಪನೆಯನ್ನು ವಜಾ ಮಾಡಿರುವ ಯಾವುದೇ ಆದೇಶ ಅಥವಾ ಏಕ ಪಕ್ಷೀಯವಾಗಿ ನಿರ್ಣಯಿಸಿರುವ ಯಾವುದೇ ಆದೇಶವನ್ನು ರದ್ದು ಮಾಡುವುದು; ಮತ್ತು

(ಹೆಚ್) ನಿಯಮಿಸಬಹುದಾದ ಯಾವುದೇ ಇತರ ವಿಷಯಗಳು.

(3) ಒಂದು ನ್ಯಾಯಾಲಯದಿಂದ, ಅದರಲ್ಲಿ ಇತ್ಯರ್ಥದಲ್ಲಿರುವ ಒಂದು ದಾವೆಯಲ್ಲಿ ಮಾಡಿದಂತಹ ಒಂದು ಡಿಕ್ರಿ ಎನ್ನುವ ಹಾಗೆಯೇ, ಅಪೀಲು ನ್ಯಾಯಾಧಿಕರಣದಿಂದ ಮಾಡಿದ ಯಾವುದೇ ಆದೇಶವನ್ನು, ಅದೇ ವಿಧಾನದಲ್ಲಿ ಅದು ತನ್ನಿಂದ ಜಾರಿಗೊಳಿಸಬಹುದು ಮತ್ತು ಈ ಕೆಳಕಂಡ ಸ್ಥಳಗಳ ತನ್ನ ಕ್ಷೇತ್ರವ್ಯಾಪ್ತಿಯ ಮಿತಿಯೊಳಗಿರುವ ನ್ಯಾಯಾಲಯಕ್ಕೆ ತನ್ನ ಆದೇಶಗಳನ್ನು ಚಲಾವಣೆಗಾಗಿ ಕಳುಹಿಸುವುದು ಅಪೀಲು ನ್ಯಾಯಾಧಿಕರಣಕ್ಕೆ ನ್ಯಾಯಸಮ್ಮತವಾಗಿರತಕ್ಕದ್ದು,–

(ಎ) ಒಂದು ಕಂಪನಿಯ ವಿರುದ್ದವಾಗಿ ಮಾಡಿರುವ ಆದೇಶದ ಸಂದರ್ಭದಲ್ಲಿ, ಕಂಪನಿಯ ನೋಂದಾಯಿತ ಕಛೇರಿ ಇರುವ ಸ್ಥಳ; ಅಥವಾ

(ಬಿ) ಯಾವುದೇ ಇತರ ವ್ಯಕ್ತಿಯ ವಿರುದ್ದವಾಗಿ ಮಾಡಿರುವ ಆದೇಶದ ಸಂದರ್ಭದಲ್ಲಿ, ಸಂಬಂಧಿತ ವ್ಯಕ್ತಿಯು ಸ್ವಯಿಚ್ಛೆಯಿಂದ ವಾಸಿಸುತ್ತಿರುವ ಅಥವಾ ವ್ಯವಹಾರ ನಡೆಸುತ್ತಿರುವ ಅಥವಾ ಲಾಭಕ್ಕಾಗಿ ವೈಯಕ್ತಿಕವಾಗಿ ಕೆಲಸ ಮಾಡುತ್ತಿರುವ ಸ್ಥಳ.

(4) ಅಪೀಲು ನ್ಯಾಯಾಧಿಕರಣದ ಮುಂದಿರುವ ಯಾವುದೇ ನಡಾವಳಿಗಳನ್ನು, ಭಾರತೀಯ ದಂಡ ಸಂಹಿತೆ, 1860ರ (1860ರ ಕೇಂದ್ರ ಅಧಿನಿಯಮ 45) ಪ್ರಕರಣಗಳಾದ 193 ಮತ್ತು 228ರ ಅರ್ಥವ್ಯಾಪ್ತಿಯೊಳಗೆ ಮತ್ತು ಪ್ರಕರಣ 196ರ ಉದ್ದೇಶಗಳಿಗಾಗಿ ನ್ಯಾಯಿಕ ವ್ಯವಹರಣೆಗಳು ಎಂದು ಪರಿಭಾವಿಸತಕ್ಕದ್ದು, ಹಾಗೂ ಅಪೀಲು ನ್ಯಾಯಾಧಿಕರಣವನ್ನು, ದಂಡ ಪ್ರಕ್ರಿಯಾ ಸಂಹಿತೆ, 1973 (1974ರ ಕೇಂದ್ರ ಅಧಿನಿಯಮ 2) ರ ಪ್ರಕರಣ 195 ಮತ್ತು ಅಧ್ಯಾಯ XXVI ರ ಉದ್ದೇಶಕ್ಕಾಗಿ ಸಿವಿಲ್ ನ್ಯಾಯಾಲಯ ಎಂದು ಪರಿಭಾವಿಸತಕ್ಕದ್ದು.

112. ಅಪೀಲು ನ್ಯಾಯಾಧಿಕರಣಕ್ಕೆ ಅಪೀಲುಗಳು.– (1) ಈ ಅಧಿನಿಯಮ ಅಥವಾ ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಪ್ರಕರಣ 107 ಅಥವಾ ಪ್ರಕರಣ 108ರ ಅಡಿಯಲ್ಲಿ ಆತನ ವಿರುದ್ಧವಾಗಿ ಹೊರಡಿಸಲಾದ ಯಾವುದೇ ನಿರ್ಣಯ ಅಥವಾ ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು, ಅದರ ವಿರುದ್ಧವಾಗಿ ಅಪೀಲು ಮಾಡಲು ಅಪೇಕ್ಷಿಸಿರುವ ಆದೇಶವನ್ನು ಅಪೀಲು ಮಾಡುತ್ತಿರುವ ವ್ಯಕ್ತಿಗೆ ತಿಳಿಯಪಡಿಸಿದ ದಿನಾಂಕದಿಂದ ಮೂರು ತಿಂಗಳ ಒಳಗಾಗಿ, ಅಂಥ ಆದೇಶದ ವಿರುದ್ಧವಾಗಿ ಅಪೀಲು ನ್ಯಾಯಾಧಿಕರಣಕ್ಕೆ ಅಪೀಲು ಮಾಡಬಹುದು.

(2) ಅಪೀಲು ನ್ಯಾಯಾಧಿಕರಣವು, ತನ್ನ ವಿವೇಚನೆಯ ಮೇರೆಗೆ, ಅಂಥ ಯಾವುದೇ ಅಪೀಲನ್ನು ದಾಖಲಿಸಿಕೊಳ್ಳಲು, ಅದು ಒಳಗೊಂಡಿರುವ ತೆರಿಗೆ ಅಥವಾ ಹೂಡುವಳಿ ತೆರಿಗೆ ಜಮೆಯ ಅಥವಾ ಒಳಗೊಂಡಿರುವ ತೆರಿಗೆ ಅಥವಾ ಹೂಡುವಳಿ ತೆರಿಗೆ ಜಮೆಯಲ್ಲಿನ ವ್ಯತ್ಯಾಸ ಅಥವಾ ಅಂಥ ಆದೇಶದಲ್ಲಿ ನಿರ್ದಾರಿಸಲಾದ ಜುಲ್ಮಾನೆಯ, ಶುಲ್ಕದ ಅಥವಾ ದಂಡದ ಮೊತ್ತವು ಐವತ್ತು ಸಾವಿರ ರೂಪಾಯಿಗಳನ್ನು ಮೀರಿರದಿದ್ದಲ್ಲಿ, ನಿರಾಕರಿಸಬಹುದು.

(3) ಆಯುಕ್ತರು, ತಮ್ಮ ಸ್ವಂತ ಪ್ರೇರಣೆಯಿಂದ, ಅಥವಾ ಕೇಂದ್ರ ತೆರಿಗೆಯ ಆಯುಕ್ತರ ಕೋರಿಕೆಯ ಮೇರೆಗೆ, ಈ ಅಧಿನಿಯಮದ ಅಡಿಯಲ್ಲಿ ಅಥವಾ ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿ ಅಪೀಲು ಪ್ರಾಧಿಕಾರ ಅಥವಾ ಪುನರೀಕ್ಷಣಾ ಪ್ರಾಧಿಕಾರದಿಂದ ಹೊರಡಿಸಿರುವ ಯಾವುದೇ ನಿರ್ಣಯ ಅಥವಾ ಆದೇಶದ ಯಾವುದೇ ನಡಾವಳಿಗಳ ದಾಖಲೆಗಳನ್ನು, ಸದರಿ ನಿರ್ಣಯ ಅಥವಾ ಆದೇಶದ ಕಾನೂನು ಸಮ್ಮತತೆ ಹಾಗೂ ಔಚಿತ್ಯತೆಯನ್ನು ಸ್ವತಃ ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ಕರೆಯಬಹುದು ಮತ್ತು ಪರೀಕ್ಷಿಸಬಹುದು ಮತ್ತು ಆಯುಕ್ತರು ತಮ್ಮ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದ ಸದರಿ ನಿರ್ಣಯ ಅಥವಾ ಆದೇಶದಿಂದ ಉದ್ಭವಿಸಿರುವ ಅಂಥ ಅಂಶಗಳನ್ನು ನಿರ್ಧರಿಸುವುದಕ್ಕಾಗಿ, ಸದರಿ ನಿರ್ಣಯ ಅಥವಾ ಆದೇಶವನ್ನು ತಿಳಿಯಪಡಿಸಿದ ದಿನಾಂಕದಿಂದ ಆರು ತಿಂಗಳುಗಳ ಒಳಗಾಗಿ ಅಪೀಲು ನ್ಯಾಯಾಧಿಕರಣಕ್ಕೆ ಅರ್ಜಿ ಸಲ್ಲಿಸುವಂತೆ ತಮಗೆ ಅಧೀನನಾದ ಯಾವೊಬ್ಬ ಅಧಿಕಾರಿಯನ್ನು ಆದೇಶದ ಮೂಲಕ ನಿರ್ದೇಶಿಸಬಹುದು.

(4) ಉಪಪ್ರಕರಣದ (3)ರ ಅಡಿಯಲ್ಲಿನ ಒಂದು ಆದೇಶದ ಅನುಸರಣೆಯಲ್ಲಿ, ಪ್ರಾಧಿಕೃತ ಅಧಿಕಾರಿಯು ಅಪೀಲು ನ್ಯಾಯಾಧಿಕರಣಕ್ಕೆ ಅರ್ಜಿ ಸಲ್ಲಿಸಿದ್ದಲ್ಲಿ, ಅಂಥ ಅರ್ಜಿಯನ್ನು ಅಪೀಲು ನ್ಯಾಯಾಧಿಕರಣವು, ಪ್ರಕರಣ 107ರ ಉಪಪ್ರಕರಣ (11)ರ ಅಡಿಯಲ್ಲಿ ಅಥವಾ ಪ್ರಕರಣ 108ರ ಉಪಪ್ರಕರಣ (1)ರ ಅಡಿಯಲ್ಲಿನ ಆದೇಶದ ವಿರುದ್ಧವಾಗಿ ಅಪೀಲು ಮಾಡಲಾಗಿದೆ ಎನ್ನುವ ಹಾಗೆಯೇ ವ್ಯವಹರಿಸತಕ್ಕದ್ದು ಮತ್ತು ಅಪೀಲಿಗೆ ಸಂಬಂಧಿಸಿದ ಈ ಅಧಿನಿಯಮದ ಉಪಬಂಧಗಳು ಅಂಥ ಅರ್ಜಿಗೆ, ಅವುಗಳು ಉಪಪ್ರಕರಣ (1)ರ ಅಡಿಯಲ್ಲಿ ಸಲ್ಲಿಸಿದ ಅಪೀಲುಗಳಿಗೆ ಸಂಬಂಧಿಸಿದಂತೆ ಅನ್ವಯವಾಗುವ ರೀತಿಯಲ್ಲಿಯೇ ಅನ್ವಯಿಸತಕ್ಕದ್ದು.

(5) ಈ ಉಪಪ್ರಕರಣದ ಅಡಿಯಲ್ಲಿ ಅಪೀಲನ್ನು ಸಲ್ಲಿಸಲಾಗಿದೆ ಎನ್ನುವ ಸೂಚನಾಪತ್ರವನ್ನು ಸ್ವೀಕರಿಸಿದ ಮೇಲೆ, ಯಾರ ವಿರದ್ದ ಅಪೀಲನ್ನು ಸಲ್ಲಿಸಲಾಗಿದೆಯೋ ಆ ಪಕ್ಷಕಾರ, ಅಂಥ ಆದೇಶ ಅಥವಾ ಅದರ ಯಾವುದೇ ಭಾಗದ ವಿರುದ್ಧ ಅಪೀಲು ಹೋಗಿಲ್ಲದಿರಬಹುದು ಎಂಬುದು ಏನೇ ಇದ್ದರೂ, ಸೂಚನಾಪತ್ರವನ್ನು ಸ್ವೀಕರಿಸಿದ ನಲವತ್ತೈದು ದಿನಗಳ ಒಳಗಾಗಿ, ಅದರ ವಿರುದ್ಧವಾಗಿ ಅಪೀಲು ಮಾಡಲಾಗಿರುವ ಆದೇಶದ ಯಾವುದೇ ಭಾಗಕ್ಕೆ ಪ್ರತಿಯಾಗಿ, ನಿಯಮಿಸಲಾದ ವಿಧಾನದಲ್ಲಿ ಪರಿಶೀಲಿಸಲಾದ, ಎದುರು ಆಕ್ಷೇಪಣೆಗಳ ವಿವರಣ ಪತ್ರವನ್ನು ಸಲ್ಲಿಸಬಹುದು ಮತ್ತು ಅಂಥ ವಿವರಣ ಪತ್ರವನ್ನು ಅಪೀಲು ನ್ಯಾಯಾಧಿಕರಣವು, ಉಪಪ್ರಕರಣ (1)ರಲ್ಲಿ ನಿರ್ದಿಷ್ಟಪಡಿಸಿರುವ ಸಮಯದ ಒಳಗಾಗಿ ಪ್ರಸ್ತುತಪಡಿಸಿದ ಒಂದು ಅಪೀಲು ಎನ್ನುವ ಹಾಗೆಯೇ ವಿಲೇವಾರಿ ಮಾಡತಕ್ಕದ್ದು.

(6) ಅಪೀಲು ನ್ಯಾಯಾಧಿಕರಣವು, ಆ ಅವಧಿಯೊಳಗೆ ಅದನ್ನು ಹಾಜರುಪಡಿಸಲು ಆಗದಿರುವುದಕ್ಕೆ ಸಾಕಷ್ಟು ಕಾರಣಗಳಿದ್ದವು ಎನ್ನುವುದನ್ನು ಅದು ಮನದಟ್ಟು ಮಾಡಿಕೊಂಡರೆ, ಉಪಪ್ರಕರಣ (1)ರಲ್ಲಿ ಉಲ್ಲೇಖಿಸಿದ ಅವಧಿಯು ಮುಗಿದ ನಂತರದ ಮೂರು ತಿಂಗಳ ಒಳಗಾಗಿ ಒಂದು ಅಪೀಲನ್ನು ದಾಖಲು ಮಾಡಿಕೊಳ್ಳಬಹುದು ಅಥವಾ ಉಪಪ್ರಕರಣ (5)ರಲ್ಲಿ ಉಲ್ಲೇಖಿಸಿದ ಅವಧಿಯು ಮುಗಿದ ನಂತರದ ನಲವತ್ತೈದು ದಿನಗಳ ಒಳಗಾಗಿ ಎದುರು ಆಕ್ಷೇಪಣೆಗಳ ಒಂದು ವಿವರಣ ಪತ್ರದ ಸಲ್ಲಿಕೆಯನ್ನು ಅನುಮತಿಸಬಹುದು.

(7) ಅಪೀಲು ನ್ಯಾಯಾಧಿಕರಣಕ್ಕೆ ಸಲ್ಲಿಸಲಾಗುವ ಒಂದು ಅಪೀಲು, ನಿಯಮಿಸಬಹುದಾದ ಅಂಥ ನಮೂನೆಯಲ್ಲಿರತಕ್ಕದ್ದು ಮತ್ತು ಅಂಥ ವಿಧಾನದಲ್ಲಿ ಪರಿಶೀಲಿಸತಕ್ಕದ್ದು ಮತ್ತು ಅಂಥ ಶುಲ್ಕದಿಂದ ಜೊತೆಗೂಡಿರತಕ್ಕದ್ದು.

(8) ಅಪೀಲುದಾರನು ಈ ಕೆಳಗಿನವುಗಳನ್ನು ಸಂದಾಯ ಮಾಡಿದ ಹೊರತು ಉಪಪ್ರಕರಣ (1)ರ ಅಡಿಯಲ್ಲಿ ಅಪೀಲನ್ನು ಸಲ್ಲಿಸುವ ಹಾಗಿಲ್ಲ,–

(ಎ) ಆಕ್ಷೇಪಿತ ಆದೇಶದಿಂದ ಉದ್ಭವಿಸಿರುವ ತೆರಿಗೆ, ಬಡ್ಡಿ, ಜುಲ್ಮಾನೆ, ಶುಲ್ಕ ಮತ್ತು ದಂಡದ ಮೊತ್ತದಲ್ಲಿ ಆತನಿಂದ ಒಪ್ಪಿಕೊಂಡಿರುವ ಅಂಥ ಭಾಗವನ್ನು, ಪೂರ್ಣವಾಗಿ; ಮತ್ತು

(ಬಿ) ಪ್ರಕರಣ 107ರ ಉಪಪ್ರಕರಣ (6)ರ ಅಡಿಯಲ್ಲಿ ಸಂದಾಯ ಮಾಡಿದ ಮೊತ್ತಕ್ಕೆ ಹೆಚ್ಚುವರಿಯಾಗಿ ಅಪೀಲು ಸಲ್ಲಿಸಲಾಗಿರುವುದಕ್ಕೆ ಸಂಬಂಧಿಸಿದಂತಹ ಸದರಿ ಆದೇಶದಿಂದ ಉದ್ಭವಿಸಿರುವ ವಿವಾದದಲ್ಲಿರುವ ತೆರಿಗೆಯ ಉಳಿದ ಮೊತ್ತದ ಶೇಕಡಾ ಇಪ್ಪತ್ತರಷ್ಟಕ್ಕೆ ಸಮಾನಾದ ಒಂದು ಮೊಬಲಗು.

(9) ಅಪೀಲುದಾರನು ಉಪಪ್ರಕರಣ (8)ರ ಪ್ರಕಾರ ಮೊಬಲಗನ್ನು ಸಂದಾಯ ಮಾಡಿದ್ದಲ್ಲಿ, ಅಪೀಲು ವಿಲೇವಾರಿಯಾಗುವವರೆಗೂ ಬಾಕಿ ಮೊತ್ತಕ್ಕಾಗಿ ವಸೂಲಾತಿ ನಡಾವಳಿಗಳನ್ನು ತಡೆಹಿಡಿಯಲಾಗಿದೆ ಎಂದು ಪರಿಭಾವಿಸತಕ್ಕದ್ದು.

(10) ಅಪೀಲು ನ್ಯಾಯಾಧಿಕರಣದ ಮುಂದೆ,–

(ಎ) ಒಂದು ಅಪೀಲಿನಲ್ಲಿ, ತಪ್ಪುಗಳ ಸರಿಪಡಿಸುವಿಕೆಗಾಗಿ ಅಥವಾ ಯಾವುದೇ ಇತರೆ ಉದ್ದೇಶಕ್ಕಾಗಿ; ಅಥವಾ

(ಬಿ)ಒಂದು ಅಪೀಲಿನ ಅಥವಾ ಒಂದು ಅರ್ಜಿಯ ಪುನಃಸ್ಥಾಪನೆಗಾಗಿ,

–ಹಾಕಲಾದ ಪ್ರತಿಯೊಂದು ಅರ್ಜಿಯು ನಿಯಮಿಸಬಹುದಾದ ಅಂಥ ಶುಲ್ಕದಿಂದ ಜೊತೆಗೂಡಿರತಕ್ಕದ್ದು.

113. ಅಪೀಲು ನ್ಯಾಯಾಧಿಕರಣದ ಆದೇಶಗಳು.– (1) ಅಪೀಲು ನ್ಯಾಯಾಧಿಕರಣವು, ಅಪೀಲಿನ ಪಕ್ಷಕಾರರಿಗೆ ವಯಕ್ತಿಕ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡಿದ ನಂತರ, ಅದು ಸೂಕ್ತ ಎಂದು ಆಲೋಚಿಸದಂತೆ, ಹಾಗೆ ವಿರುದ್ಧವಾಗಿ ಅಪೀಲು ಮಾಡಲಾಗಿರುವ ನಿರ್ಣಯ ಅಥವಾ ಆದೇಶವನ್ನು ಖಾತ್ರಿಗೊಳಿಸಿ, ಮಾರ್ಪಾಡು ಮಾಡಿ ಅಥವಾ ರದ್ದುಗೊಳಿಸಿ ಅಂಥ ಆದೇಶವನ್ನು ಹೊರಡಿಸಬಹುದು ಅಥವಾ ಅಪೀಲು ಪ್ರಾಧಿಕಾರ, ಅಥವಾ ಪುನರೀಕ್ಷಣಾ ಪ್ರಾಧಿಕಾರ ಅಥವಾ ಮೂಲ ನ್ಯಾಯನಿರ್ಣಯ ಪ್ರಾಧಿಕಾರಕ್ಕೆ, ಅದು ಸೂಕ್ತ ಎಂದು ಆಲೋಚಿಸಬಹುದಾದ ಅಂಥ ನಿರ್ದೇಶನಗಳೊಂದಿಗೆ ಪ್ರಕರಣವನ್ನು, ಅಗತ್ಯವಿದ್ದಲ್ಲಿ ಹೆಚ್ಚುವರಿ ಪುರಾವೆಯನ್ನು ತೆಗೆದುಕೊಂಡು ಹೊಸದಾದ ನ್ಯಾಯ ನಿರ್ಣಯಕ್ಕಾಗಿ ಅಥವಾ ನಿರ್ಧಾರಕ್ಕಾಗಿ ಹಿಂದಕ್ಕೆ ಕಳುಹಿಸಬಹದು.

(2) ಅಪೀಲು ನ್ಯಾಯಾಧಿಕರಣವು, ಅಪೀಲಿನ ಅಹವಾಲಿನ ಯಾವುದೇ ಹಂತದಲ್ಲಿ, ಸಾಕಷ್ಟು ಕಾರಣಗಳನ್ನು ತೋರಿಸಿದರೆ, ಪಕ್ಷಕಾರರುಗಳಿಗೆ ಅಥವಾ ಅವರುಗಳಲ್ಲಿ ಯಾರಿಗಾದರೂ, ಕಾಲಾವಕಾಶವನ್ನು ನೀಡಬಹುದು ಮತ್ತು ಅಪೀಲಿನ ಅಹವಾಲನ್ನು ಲಿಖಿತವಾಗಿ ದಾಖಲಿಸಬಹುದಾದ ಕಾರಣಗಳಿಗಾಗಿ ಮುಂದೂಡಬಹುದು:

ಪರಂತು, ಅಪೀಲಿನ ಅಹವಾಲಿನ ಸಮಯದಲ್ಲಿ ಪಕ್ಷಕಾರನಿಗೆ ಮೂರು ಬಾರಿಗಿಂತ ಹೆಚ್ಚಿನದಾಗಿ ಅಂಥ ಮುಂದೂಡಿಕೆಯನ್ನು ನೀಡತಕ್ಕದ್ದಲ್ಲ.

(3) ಅಪೀಲು ನ್ಯಾಯಾಧಿಕರಣವು, ಉಪಪ್ರಕರಣ (1)ರ ಅಡಿಯಲ್ಲಿ ಅದರಿಂದ ಹೊರಡಿಸಿದ ಯಾವುದೇ ಆದೇಶವನ್ನು, ದಾಖಲೆಯಲ್ಲಿ ಮೇಲ್ನೋಟಕ್ಕೆ ಕಾಣುವ ಯಾವುದೇ ತಪ್ಪನ್ನು ಸರಿಪಡಿಸುವುದಕ್ಕಾಗಿ, ಅಂಥ ತಪ್ಪನ್ನು ಆದೇಶದ ದಿನಾಂಕದಿಂದ ಮೂರು ತಿಂಗಳ ಅವಧಿಯ ಒಳಗಾಗಿ, ಅದೇ ಸ್ವಯಂ ಗಮನಿಸಿದ್ದರೆ ಅಥವಾ ಆಯುಕ್ತರಿಂದಾಗಲಿ ಅಥವಾ ಕೇಂದ್ರ ತೆರಿಗೆ ಆಯುಕ್ತರಿಂದಾಗಲಿ ಅಥವಾ ಅಪೀಲಿನ ಇತರ ಪಕ್ಷಕಾರನಿಂದಾಗಲಿ ಅದರ ಗಮನಕ್ಕೆ ತಂದಿದ್ದರೆ, ತಿದ್ದುಪಡಿ ಮಾಡಬಹುದು:

ಪರಂತು, ಒಂದು ಕರನಿರ್ಧರಣೆಯನ್ನು ಹೆಚ್ಚಿಸುವ ಅಥವಾ ಮರುಪಾವತಿಯನ್ನು ಅಥವಾ ಹೂಡುವಳಿ ತೆರಿಗೆ ಜಮೆಯನ್ನು ಕಡಿಮೆ ಮಾಡುವ ಅಥವಾ ಅನ್ಯಥಾ ಇತರ ಪಕ್ಷಕಾರನ ಬಾಧ್ಯತೆಯನ್ನು ಹೆಚ್ಚಳ ಮಾಡುವ ಪರಿಣಾಮವನ್ನು ಹೊಂದಿರುವ ತಿದ್ದುಪಡಿಯನ್ನು, ಪಕ್ಷಕಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡಿದ ಹೊರತಾಗಿ, ಈ ಉಪಪ್ರಕರಣದ ಅಡಿಯಲ್ಲಿ ಮಾಡತಕ್ಕದಲ್ಲ.

(4) ಅಪೀಲು ನ್ಯಾಯಾಧಿಕರಣವು, ಸಾಧ್ಯವಾಗಬಹುದಾದಷ್ಟು ಮಟ್ಟಿಗೆ, ಪ್ರತಿಯೊಂದು ಅಪೀಲನ್ನು ಅದು ಸಲ್ಲಿಕೆಯಾದ ದಿನಾಂಕದಿಂದ ಒಂದು ವರ್ಷದ ಅವಧಿಯ ಒಳಗಾಗಿ ಅಹವಾಲು ಮಾಡತಕ್ಕದ್ದು ಮತ್ತು ನಿರ್ಣಯಿಸತಕ್ಕದ್ದು.

(5) ಅಪೀಲು ನ್ಯಾಯಾಧಿಕರಣವು, ಈ ಪ್ರಕರಣದ ಅಡಿಯಲ್ಲಿ ಹೊರಡಿಸಿದ ಪ್ರತಿಯೊಂದು ಆದೇಶದ ಪ್ರತಿಯನ್ನು, ಅಪೀಲು ಪ್ರಾಧಿಕಾರ ಅಥವಾ ಪುನರೀಕ್ಷಣಾ ಪ್ರಾಧಿಕಾರ ಅಥವಾ ಮೂಲ ನ್ಯಾಯ ನಿರ್ಣಯ ಪ್ರಾಧಿಕಾರಕ್ಕೆ, ಸಂದರ್ಭಾನುಸಾರವಾಗಿ ಅಪೀಲುದಾರನಿಗೆ ಮತ್ತು ಆಯುಕ್ತರಿಗೆ ಅಥವಾ ಕ್ಷೇತ್ರ ವ್ಯಾಪ್ತಿಯ ಕೇಂದ್ರ ತೆರಿಗೆ ಆಯುಕ್ತರಿಗೆ ಕಳುಹಿಸತಕ್ಕದ್ದು.

(6) ಪ್ರಕರಣ 117 ಅಥವಾ ಪ್ರಕರಣ 118ರಲ್ಲಿ ಉಪಬಂಧಿಸಿದ್ದನ್ನುಳಿದು, ಅಪೀಲು ನ್ಯಾಯಾಧಿಕರಣದಿಂದ, ಒಂದು ಅಪೀಲಿನ ಮೇಲೆ ಹೊರಡಿಸಿದ ಆದೇಶವು ಅಂತಿಮವಾಗಿರತಕ್ಕದ್ದು ಹಾಗೂ ಪಕ್ಷಕಾರರ ಮೇಲೆ ಬದ್ಧವಾಗಿರತಕ್ಕದ್ದು.

114 ರಾಜ್ಯ ಅಧ್ಯಕ್ಷರ ಹಣಕಾಸಿನ ಮತ್ತು ಆಡಳಿತಾತ್ಮಕ ಅಧಿಕಾರಗಳು.– ರಾಜ್ಯ ಅಧ್ಯಕ್ಷನು ರಾಜ್ಯದಲ್ಲಿನ ಅಪೀಲು ನ್ಯಾಯಾಧಿಕರಣದ ರಾಜ್ಯ ನ್ಯಾಯಪೀಠ ಮತ್ತು ಕ್ಷೇತ್ರ ನ್ಯಾಯಪೀಠಗಳ ಮೇಲೆ ನಿಯಮಿಸಬಹುದಾದ ಅಂಥ ಹಣಕಾಸಿನ ಮತ್ತು ಆಡಳಿತಾತ್ಮಕ ಅಧಿಕಾರಗಳನ್ನು ಚಲಾಯಿಸತಕ್ಕದ್ದು:

ಪರಂತು, ರಾಜ್ಯ ಅಧ್ಯಕ್ಷನು, ಆತನ ಅಂಥ ಹಣಕಾಸಿನ ಮತ್ತು ಆಡಳಿತಾತ್ಮಕ ಅಧಿಕಾರಗಳನ್ನು, ತಾನು ಸೂಕ್ತ ಎಂದು ಆಲೋಚಿಸಬಹುದಾದಂತೆ, ರಾಜ್ಯ ನ್ಯಾಯಪೀಠ ಮತ್ತು ಕ್ಷೇತ್ರ ನ್ಯಾಯಪೀಠಗಳ ಯಾವುದೇ ಇತರ ಸದಸ್ಯನಿಗೆ ಅಥವಾ ಯಾವುದೇ ಅಧಿಕಾರಿಗೆ, ಅಂಥ ಪ್ರತ್ಯಾಯೋಜಿಸಿದ ಅಧಿಕಾರಗಳನ್ನು ಚಲಾಯಿಸುವಾಗ, ಅಂಥ ಸದಸ್ಯ ಅಥವಾ ಅಧಿಕಾರಿ, ಅಧ್ಯಕ್ಷನ ನಿರ್ದೇಶನ, ನಿಯಂತ್ರಣ ಮತ್ತು ಮೇಲ್ವಿಚಾರಣೆಯ ಅಡಿಯಲ್ಲಿ ಕಾರ್ಯದಲ್ಲಿ ಮುಂದುವರಿಯತಕ್ಕದ್ದು ಎನ್ನುವ ಷರತ್ತಿಗೆ ಒಳಪಟ್ಟು ಪ್ರತ್ಯಾಯೋಜಿಸುವ ಪ್ರಾಧಿಕಾರವನ್ನು ಹೊಂದಿರತಕ್ಕದ್ದು.

115. ಅಪೀಲಿನ ದಾಖಲಾತಿಗಾಗಿ ಸಂದಾಯ ಮಾಡಿದ ಮೊತ್ತದ ಮರುಪಾವತಿ ಮೇಲಿನ ಬಡ್ಡಿ.– ಪ್ರಕರಣ 107ರ ಉಪ–ಪ್ರಕರಣ (6)ರ ಅಡಿಯಲ್ಲಿ ಅಥವಾ ಪ್ರಕರಣ 112ರ ಉಪಪ್ರಕರಣ (8)ರ ಅಡಿಯಲ್ಲಿ ಅಪೀಲುದಾರನಿಂದ ಸಂದಾಯ ಮಾಡಿದ ಒಂದು ಮೊತ್ತವನ್ನು, ಅಪೀಲು ಪ್ರಾಧಿಕಾರ ಅಥವಾ ಅಪೀಲು ನ್ಯಾಯಾಧಿಕರಣದ ಆದೇಶದ ಪರಿಣಾಮವಾಗಿ ಮರುಪಾವತಿ ಮಾಡಬೇಕಾದಲ್ಲಿ, ಪ್ರಕರಣ 56ರಲ್ಲಿ ನಿರ್ದಿಷ್ಟಪಡಿಸಿರುವ ದರದಲ್ಲಿ ಬಡ್ಡಿಯನ್ನು, ಅಂಥ ಮರುಪಾವತಿಗೆ ಸಂಬಂಧಿಸಿದಂತೆ, ಆ ಮೊತ್ತದ ಸಂದಾಯದ ದಿನಾಂಕದಿಂದ ಅಂಥ ಮರುಪಾವತಿಯ ದಿನಾಂಕದವರೆಗೆ ನೀಡತಕ್ಕದ್ದು.

116. ಪ್ರಾಧಿಕೃತ ಪ್ರತಿನಿಧಿಯ ಮೂಲಕ ಹಾಜರಾತಿ.– (1) ಈ ಅಧಿನಿಯಮದ ಅಡಿಯಲ್ಲಿ ನೇಮಕವಾಗಿರುವ ಒಬ್ಬ ಅಧಿಕಾರಿಯ, ಅಥವಾ ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ನಡಾವಳಿಗಳಿಗೆ ಸಂಬಂಧಿಸಿದಂತೆ ಮೇಲ್ಮನವಿ ಪ್ರಾಧಿಕಾರ ಅಥವಾ ಅಪೀಲು ನ್ಯಾಯಾಧಿಕರಣದ ಮುಂದೆ ಹಾಜರಾಗಲು ಹಕ್ಕುಳ್ಳ ಅಥವಾ ಅಗತ್ಯವಿರುವ ಅಂತಹ ಯಾವುದೇ ವ್ಯಕ್ತಿಯು, ಈ ಅಧಿನಿಯಮದ ಅಡಿಯಲ್ಲಿ ಪ್ರಮಾಣದ ಮೇಲಿನ ಪರೀಕ್ಷೆ ಅಥವಾ ದೃಢೀಕರಣಕ್ಕಾಗಿ ವೈಯಕ್ತಿಕವಾಗಿ ಹಾಜರಾಗುವುದು ಅಗತ್ಯವಿರುವುದನ್ನು ಹೊರತುಪಡಿಸಿದಂತೆ, ಈ ಪ್ರಕರಣದ ಇತರ ಉಪಬಂಧಗಳಿಗೆ ಒಳಪಟ್ಟು, ಒಬ್ಬ ಪ್ರಾಧಿಕೃತ ಪ್ರತಿನಿಧಿಯ ಮೂಲಕ ಹಾಜರಾಗಬಹುದು.

(2) ಈ ಅಧಿನಿಯಮದ ಉದ್ದೇಶಗಳಿಗಾಗಿ, **"ಪ್ರಾಧಿಕೃತ ಪ್ರತಿನಿಧಿ"** ಎಂದರೆ ಉಪಪ್ರಕರಣ (1)ರ ಅಡಿಯಲ್ಲಿ ಉಲ್ಲೇಖಿಸಲಾದ ವ್ಯಕ್ತಿಯಿಂದ ಆತನ ಪರವಾಗಿ ಹಾಜರಾಗಲು ಪ್ರಾಧಿಕೃತನಾದ ಕೆಳಗಿನವರಾಗಿರುವ ಒಬ್ಬ ವ್ಯಕ್ತಿ–

(ಎ) ಆತನ ಸಂಬಂಧಿ ಅಥವಾ ನಿಯತಕಾಲೀನ ಉದ್ಯೋಗಿ; ಅಥವಾ

(ಬಿ) ಭಾರತದ ಯಾವುದೇ ನ್ಯಾಯಾಲಯದಲ್ಲಿ ವೃತ್ತಿಯನ್ನು ನಡೆಸಲು ಹಕ್ಕುಳಂತಹ ಮತ್ತು ಭಾರತದ ಯಾವುದೇ ನ್ಯಾಯಾಲಯ ಮುಂದೆ ವೃತ್ತಿಯನ್ನು ನಡೆಸುವುದರಿಂದ ಪ್ರತಿಷೇದಗೊಂಡಿಲ್ಲದ ಒಬ್ಬ ನ್ಯಾಯವಾದಿ;

(ಸಿ) ವೃತ್ತಿ ನಡೆಸಲು ಒಂದು ಪ್ರಮಾಣಪತ್ರವನ್ನು ಹೊಂದಿರುವ ಮತ್ತು ವೃತ್ತಿಯನ್ನು ನಡೆಸುವುದರಿಂದ ಪ್ರತಿಷೇದಗೊಂಡಿಲ್ಲದ ಯಾವುದೇ ಚಾರ್ಟರ್ಡ್ ಅಕೌಂಟೆಂಟ್, ಕಾಸ್ಟ್ ಅಕೌಂಟೆಂಟ್, ಅಥವಾ ಕಂಪನಿ ಕಾರ್ಯದರ್ಶಿ; ಅಥವಾ

(ಡಿ) ಆತನು ಸರ್ಕಾರದ ಅಡಿಯಲ್ಲಿನ ತನ್ನ ಸೇವೆಯ ಅವಧಿಯಲ್ಲಿ ಎರಡು ವರ್ಷಗಳಿಗಿಂತ ಕಡಿಮೆಯಿಲ್ಲದೆ ಸಮೂಹ–ಬಿಯ ಪತ್ರಾಂಕಿತ ಅಧಿಕಾರಿಯ ಶ್ರೇಣಿಗಿಂತ ಕಡಿಮೆಯಿಲ್ಲದ ಹುದ್ದೆಯಲ್ಲಿ ಕಾರ್ಯನಿರ್ವಹಿಸಿರುವ, ಯಾವುದೇ ರಾಜ್ಯ ಸರ್ಕಾರದ ಅಥವಾ ಕೇಂದ್ರಾಡಳಿತ ಪ್ರದೇಶದ ವಾಣಿಜ್ಯ ತೆರಿಗೆ ಇಲಾಖೆಯ ಅಥವಾ ಮಂಡಳಿಯ, ಒಬ್ಬ ನಿವೃತ್ತ ಅಧಿಕಾರಿ:

ಪರಂತು, ಅಂಥ ಅಧಿಕಾರಿಯು ಆತನ ನಿವೃತ್ತಿ ಅಥವಾ ರಾಜಿನಾಮೆ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ, ಈ ಅಧಿನಿಯಮದ ಯಾವುದೇ ನಡಾವಳಿಗಳಲ್ಲಿ, ಪ್ರಾಧಿಕೃತ ಪ್ರತಿನಿಧಿಯಾಗಿ ಹಾಜರಾಗಲು ಹಕ್ಕುಳ್ಳವನಾಗಿರತಕ್ಕದ್ದಲ್ಲ; ಅಥವಾ

(ಇ) ಸಂಬಂಧಪಟ್ಟ ನೋಂದಾಯಿತ ವ್ಯಕ್ತಿಯ ಪರವಾಗಿ ಸರಕು ಮತ್ತು ಸೇವೆಗಳ ತೆರಿಗೆ ವೃತ್ತಿಗಾರ ಎಂದು ವರ್ತಿಸಲು ಪ್ರಾಧಿಕೃತನಾಗಿರುವ ಯಾವುದೇ ವ್ಯಕ್ತಿ.

(3) (ಎ) ಸರ್ಕಾರಿ ಸೇವೆಯಿಂದ ವಜಾಗೊಳಿಸಲಾದ ಅಥವಾ ತೆಗೆದುಹಾಕಲಾದ; ಅಥವಾ

(ಬಿ) ಈ ಅಧಿನಿಯಮ, ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ ಅಥವಾ ಕೇಂದ್ರಾಡಳಿತ ಪ್ರದೇಶದ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿ ಅಥವಾ ಅಸ್ಥಿತ್ವದಲ್ಲಿರುವ ಕಾನೂನಿನ ಅಥವಾ ಸರಕುಗಳ ಮಾರಾಟ ಅಥವಾ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಮೇಲಿನ ತೆರಿಗೆಗಳ ವಿಧಿಸುವಿಕೆಯೊಂದಿಗೆ ವ್ಯವಹರಿಸುವ ರಾಜ್ಯ ಶಾಸನಸಭೆಯಿಂದ ಅನುಮೋದಿತವಾದ ಯಾವುದೇ ಇತರೆ ಅಧಿನಿಯಮಗಳ ಅಡಿಯಲ್ಲಿನ ಯಾವುದೇ ನಡಾವಳಿಯೊಂದಿಗೆ ಸಂಬಂಧಿಸಿದ ಒಂದು ಅಪರಾಧದ ಅಪರಾಧಿಯೆಂದು ನಿರ್ಣಯಿತನಾದ; ಅಥವಾ

(ಸಿ) ನಿಯಿಮಿಸಲಾದ ಪ್ರಾಧಿಕಾರದಿಂದ ದುರ್ನಡತೆಯ ತಪ್ಪಿತಸ್ಥ ಎಂದು ಕಂಡುಬಂದ; ಅಥವಾ

(ಡಿ) ದಿವಾಳಿಕೋರನೆಂದು ನಿರ್ಣಯಿಸಲಾಗಿರುವ,

– ವ್ಯಕ್ತಿಯು ಕೆಳಕಂಡ ಅವಧಿಯಲ್ಲಿ ಉಪ–ಪ್ರಕರಣ (1)ರ ಅಡಿಯಲ್ಲಿ ಯಾವೊಬ್ಬ ವ್ಯಕ್ತಿಯನ್ನು ಪ್ರತಿನಿಧಿಸಲು ಅರ್ಹನಿರತಕ್ಕದಲ್ಲ,–

(i) ಖಂಡ (ಎ), (ಬಿ) ಮತ್ತು (ಸಿ) ಯಲ್ಲಿ ಉಲ್ಲೇಖಿಸಲಾದ ಒಬ್ಬ ವ್ಯಕ್ತಿಯ ಸಂದರ್ಭದಲ್ಲಿ ಎಲ್ಲಾ ಸಮಯ; ಮತ್ತು

(ii) ಖಂಡ (ಡಿ)ಯಲ್ಲಿ ಉಲ್ಲೇಖಿಸಲಾದ ಒಬ್ಬ ವ್ಯಕ್ತಿಯ ಸಂದರ್ಭದಲ್ಲಿ, ದಿವಾಳಿತನ ಮುಂದುವರೆದ ಅವಧಿ.

(4) ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಥವಾ ಯಾವುದೇ ಇತರ ರಾಜ್ಯದ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಥವಾ ಕೇಂದ್ರಾಡಳಿತ ಪ್ರದೇಶದ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿ ಅನರ್ಹಗೊಳಿಸಲಾದ ಯಾವುದೇ ವ್ಯಕ್ತಿಯನ್ನು, ಈ ಅಧಿನಿಯಮದ ಅಡಿಯಲ್ಲಿ ಅನರ್ಹಗೊಳಿಸಲಾಗಿದೆ ಎಂದು ಪರಿಭಾವಿಸತಕ್ಕದ್ದು.

117. ಉಚ್ಚ ನ್ಯಾಯಾಲಯಕ್ಕೆ ಅಪೀಲು.– (1) ಅಪೀಲು ನ್ಯಾಯಾಧಿಕರಣದ ರಾಜ್ಯ ನ್ಯಾಯಪೀಠ ಅಥವಾ ಕ್ಷೇತ್ರ ನ್ಯಾಯಪೀಠದಿಂದ ಹೊರಡಿಸಿದ ಯಾವುದೇ ಆದೇಶದಿಂದ ಬಾಧಿತನಾಗಿರುವ ಯಾವುದೇ ವ್ಯಕ್ತಿ, ಉಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದು ಮತ್ತು ಉಚ್ಚ ನ್ಯಾಯಾಲಯವು ಪ್ರಕರಣವು ಮುಖ್ಯವಾದ ಕಾನೂನಿನ ಪ್ರಶ್ನೆಯನ್ನು ಒಳಗೊಂಡಿದೆ ಎಂದು ಅದು ಮನದಟ್ಟು ಮಾಡಿಕೊಂಡರೆ ಅಂಥ ಅಪೀಲನ್ನು ಅಂಗೀಕರಿಸಬಹುದು.

(2) ಉಪಪ್ರಕರಣ (1)ರ ಅಡಿಯಲ್ಲಿ ಒಂದು ಅಪೀಲನ್ನು, ಯಾವ ಆದೇಶದ ವಿರುದ್ಧವಾಗಿ ಅಪೀಲು ಸಲ್ಲಿಸಲಾಗಿದೆಯೊ ಅದು ಬಾಧಿತ ವ್ಯಕ್ತಿಯಿಂದ ಸ್ವೀಕರಿಸಿದ ದಿನಾಂಕದಿಂದ ಒಂದು ನೂರ ಎಂಬತ್ತು ದಿನಗಳ ಅವಧಿಯ ಒಳಗಾಗಿ ಸಲ್ಲಿಸತಕ್ಕದ್ದು ಮತ್ತು ಅದು ನಿಯಮಿಸಬಹುದಾದ ಅಂಥ ನಮೂನೆಯಲ್ಲಿರತಕ್ಕದ್ದು ಮತ್ತು ಅಂಥ ವಿಧಾನದಲ್ಲಿ ಪರಿಶೀಲಿಸತಕ್ಕದ್ದು:

ಪರಂತು, ಉಚ್ಚ ನ್ಯಾಯಾಲಯವು ಸದರಿ ಅವಧಿ ಮುಗಿದ ನಂತರ ಒಂದು ಅಪೀಲನ್ನು ಅಂಥ ಅವಧಿಯೊಳಗೆ ಅದನ್ನು ಸಲ್ಲಿಸದೇ ಇರುವುದಕ್ಕೆ ಸಾಕಷ್ಟು ಕಾರಣವಿತ್ತು ಎನ್ನುವುದನ್ನು ಅದು ಮನದಟ್ಟು ಮಾಡಿಕೊಂಡರೆ, ಪುರಸ್ಕರಿಸಬಹುದು.

(3) ಉಚ್ಚ ನ್ಯಾಯಾಲಯವು ಯಾವುದೇ ಪ್ರಕರಣದಲ್ಲಿ ಮುಖ್ಯವಾದ ಕಾನೂನಿನ ಪ್ರಶ್ನೆಯು ಒಳಗೊಂಡಿದೆ ಎಂದು ಮನದಟ್ಟು ಮಾಡಿಕೊಂಡರೆ, ಅದು ಆ ಪ್ರಶ್ನೆಯನ್ನು ನಿರೂಪಿಸತಕ್ಕದ್ದು ಮತ್ತು ಅಪೀಲನ್ನು, ಹಾಗೆ ನಿರೂಪಿಸಿದ ಕಾನೂನಿನ ಪ್ರಶ್ನೆಯ ಮೇಲೆ ಮಾತ್ರ ಅಹವಾಲು ಮಾಡತಕ್ಕದ್ದು, ಮತ್ತು ಪ್ರತಿವಾದಿಗಳು, ಅಪೀಲಿನ ಅಹವಾಲಿನ ಸಮಯದಲ್ಲಿ, ಪ್ರಕರಣವು ಅಂಥ ಪ್ರಶ್ನೆಯನ್ನು ಒಳಗೊಂಡಿಲ್ಲ ಎಂದು ವಾದಿಸಲು ಅವಕಾಶ ನೀಡತಕ್ಕದ್ದು:

ಪರಂತು, ಆ ಪ್ರಕರಣ ಅಂಥ ಪ್ರಶ್ನೆಗಳನ್ನು ಒಳಗೊಂಡಿದೆ ಎಂದು ಅದು ಮನದಟ್ಟು ಮಾಡಿಕೊಂಡರೆ, ದಾಖಲಿಸಬಹುದಾದ ಕಾರಣಗಳಿಗಾಗಿ, ನ್ಯಾಯಾಲಯದಿಂದ ನಿರೂಪಿತವಾಗಿಲ್ಲದ ಯಾವುದೇ ಇತರ ಮುಖ್ಯವಾದ ಕಾನೂನಿನ ಪ್ರಶ್ನೆಯ ಮೇಲೆ ಅಪೀಲು ಅಹವಾಲಿಸುವ ಅದರ ಅಧಿಕಾರವನ್ನು ಕಸಿದುಕೊಳ್ಳುತ್ತದೆ ಅಥವಾ ಮೊಟಕುಗೊಳಿಸುತ್ತದೆ ಎಂದು ಈ ಉಪಪ್ರಕರಣದಲ್ಲಿರುವ ಯಾವುದೂ ಪರಿಭಾವಿಸತಕ್ಕದ್ದಲ್ಲ.

(4) ಉಚ್ಚ ನ್ಯಾಯಾಲಯವು ಹಾಗೆ ರೂಪಿಸಲಾದ ಕಾನೂನಿನ ಪ್ರಶ್ನೆಯನ್ನು ನಿರ್ಧರಿಸತಕ್ಕದ್ದು ಮತ್ತು ಅಂಥ ನಿರ್ಣಯಕ್ಕೆ ಆಧಾರವಾಗಿರುವ ಕಾರಣಾಧಾರಗಳನ್ನು ಒಳಗೊಂಡ ಅದರ ಮೇಲಿನ ಅಂಥ ತೀರ್ಪನ್ನು ನೀಡತಕ್ಕದ್ದು ಮತ್ತು ಅದು ಸೂಕ್ತ ಎಂದು ಪರಿಭಾವಿಸಿದಂತೆ ಅಂಥ ಖರ್ಚುಗಳನ್ನು ವಿಧಿಸಬಹುದು.

(5) ಉಚ್ಚ ನ್ಯಾಯಾಲಯವು

(ಎ) ರಾಜ್ಯ ನ್ಯಾಯಪೀಠ ಅಥವಾ ಕ್ಷೇತ್ರೀಯ ನ್ಯಾಯಪೀಠಗಳಿಂದ ನಿರ್ಧರಿಸಲ್ಪಟ್ಟಿರದ; ಅಥವಾ

(ಬಿ) ಉಪಪ್ರಕರಣ 3ರಲ್ಲಿ ಉಲ್ಲೇಖಿಸಿದಂತೆ ಅಂಥ ಕಾನೂನಿನ ಪ್ರಶ್ನೆಯ ಮೇಲಿನ ನಿರ್ಣಯದ ಕಾರಣದಿಂದಾಗಿ, ರಾಜ್ಯ ನ್ಯಾಯಪೀಠ ಅಥವಾ ಕ್ಷೇತ್ರೀಯ ನ್ಯಾಯಪೀಠಗಳಿಂದ ತಪ್ಪಾಗಿ ನಿರ್ಧರಿಸಲಾಗಿರುವ,

–ಯಾವುದೇ ವಿಷಯವನ್ನು ನಿರ್ಧರಿಸಬಹುದು.

(6) ಉಚ್ಚ ನ್ಯಾಯಾಲಯದ ಮುಂದೆ ಒಂದು ಅಪೀಲನ್ನು ಸಲ್ಲಿಸಿದ್ದಲ್ಲಿ, ಅದನ್ನು ಉಚ್ಚ ನ್ಯಾಯಾಲಯದ ಇಬ್ಬರು ನ್ಯಾಯಾಧೀಶರಿಗಿಂತ ಕಡಿಮೆ ಇಲ್ಲದ ಒಂದು ನ್ಯಾಯಪೀಠದಿಂದ ಅಹವಾಲು ಮಾಡತಕ್ಕದ್ದು, ಮತ್ತು ಅಂಥ ನ್ಯಾಯಾಧೀಶರುಗಳ ಅಥವಾ ಏನಾದರೂ ಇದ್ದಲ್ಲಿ, ಅಂಥ ನ್ಯಾಯಾಧೀಶರುಗಳ ಬಹುಮತದ ಅಭಿಪ್ರಾಯಕ್ಕೆ ಅನುಸಾರವಾಗಿ ನಿರ್ಧರಿಸತಕ್ಕದ್ದು.

(7) ಅಂಥ ಬಹುಮತವಿರದಿದ್ದಲ್ಲಿ, ನ್ಯಾಯಾಧೀಶರುಗಳು ಅವರು ಭಿನ್ನಾಭಿಪ್ರಾಯವನ್ನು ಹೊಂದಿರುವ ಕಾನೂನಿನ ಅಂಶವನ್ನು ನಿರೂಪಿಸತಕ್ಕದ್ದು, ತದನಂತರ ಆ ಅಂಶದ ಮೇಲೆ ಮಾತ್ರ, ಉಚ್ಚ ನ್ಯಾಯಾಲಯದ ಒಂದು ಅಥವಾ ಅದಕ್ಕಿಂತ ಹೆಚ್ಚಿನ ಇತರೇ ನ್ಯಾಯಾಧೀಶರಿಂದ ಆ ಪ್ರಕರಣವನ್ನು ಅಹವಾಲು ಮಾಡತಕ್ಕದ್ದು ಮತ್ತು ಅಂಥ ಅಂಶವನ್ನು, ಪ್ರಥಮ ಬಾರಿಗೆ ಆಲಿಸಿದಂತಹವರನ್ನು ಒಳಗೊಂಡಂತೆ, ಪ್ರಕರಣವನ್ನು ಆಲಿಸಿದ ನ್ಯಾಯಾಧೀಶರುಗಳ ಬಹುಮತದ ಅಭಿಪ್ರಾಯಕ್ಕೆ ಅನುಸಾರವಾಗಿ ನಿರ್ಧರಿಸತಕ್ಕದ್ದು.

(8) ಈ ಪ್ರಕರಣದ ಅಡಿಯಲ್ಲಿ ಅದರ ಮುಂದೆ ಸಲ್ಲಿಸಿದ ಒಂದು ಅಪೀಲಿನಲ್ಲಿ, ಉಚ್ಚ ನ್ಯಾಯಾಲಯವು ತೀರ್ಪನ್ನು ನೀಡಿದಲ್ಲಿ, ತೀರ್ಪಿನ ಪ್ರಮಾಣಿತ ಪ್ರತಿಯ ಆಧಾರದ ಮೇಲೆ, ಎರಡೂ ಕಡೆಯವರಿಂದ ಅಂಥ ತೀರ್ಪನ್ನು ಆಚರಣೆಗೆ ತರತಕ್ಕದ್ದು.

(9) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು, ಉಚ್ಚ ನ್ಯಾಯಾಲಯದ ಅಪೀಲುಗಳಿಗೆ ಸಂಬಂಧಿಸಿದಂತೆ, ಸಿವಿಲ್ ಪ್ರಕ್ರಿಯೆ ಸಂಹಿತೆ, 1908ರ (1908ರ ಕೇಂದ್ರ ಅಧಿನಿಯಮ 5) ಉಪಬಂಧಗಳು, ಈ ಪ್ರಕರಣದ ಅಡಿಯಲ್ಲಿನ ಅಪೀಲುಗಳ ಪ್ರಕರಣದಲ್ಲಿ, ಆಗಬಹುದಾದಷ್ಟರ ಮಟ್ಟಿಗೆ ಅನ್ವಯಿಸತಕ್ಕದ್ದು.

118. ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು.– (1) ಈ ಕೆಳಕಂಡವುಗಳಿಂದಾಗುವ ಒಂದು ಅಪೀಲನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಹೂಡಲು ಅವಕಾಶವಿರತಕ್ಕದ್ದು–

(ಎ) ಅಪೀಲು ನ್ಯಾಯಾಧಿಕರಣದ ರಾಷ್ಟ್ರೀಯ ನ್ಯಾಯಪೀಠ ಅಥವಾ ಪ್ರಾದೇಶಿಕ ನ್ಯಾಯಪೀಠಗಳಿಂದ ಹೊರಡಿಸಿದ ಯಾವುದೇ ಆದೇಶ; ಅಥವಾ

(ಬಿ) ತನ್ನ ಸ್ವಪ್ರೇರಣೆಯಿಂದಾಗಲಿ ಅಥವಾ ನಿರ್ಣಯ ಅಥವಾ ಆದೇಶ ಹೊರಡಿಸಿದ ಕೂಡಲೇ ಬಾಧಿತ ವ್ಯಕ್ತಿಯಿಂದ ಅಥವಾ ಆತನ ಪರವಾಗಿ ಹಾಕಲಾದ ಒಂದು ಅರ್ಜಿಯ ಮೇಲಾಗಲಿ, ಉಚ್ಚ ನ್ಯಾಯಾಲಯವು ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸುವುದಕ್ಕೆ ಯೋಗ್ಯ ಎಂದು ಪ್ರಮಾಣೀಕರಿಸಿದಂತಹ, ಪ್ರಕರಣ 117ರ ಅಡಿಯಲ್ಲಿ ಸಲ್ಲಿಸಲಾದ ಒಂದು ಅಪೀಲಿನಲ್ಲಿ ಉಚ್ಚ ನ್ಯಾಯಾಲಯವು ಯಾವುದೇ ಪ್ರಕರಣದಲ್ಲಿ ಹೊರಡಿಸಿದ ಯಾವುದೇ ತೀರ್ಪು ಅಥವಾ ಆದೇಶ.

(2) ಸರ್ವೋಚ್ಚ ನ್ಯಾಯಾಲಯದ ಅಪೀಲುಗಳಿಗೆ ಸಂಬಂಧಿಸಿದಂತೆ, ಸಿವಿಲ್ ಪ್ರಕ್ರಿಯೆ ಸಂಹಿತೆ, 1908ರ (1908ರ ಕೇಂದ್ರ ಅಧಿನಿಯಮ 5) ಉಪಬಂಧಗಳು, ಆಗಬಹುದಾದಷ್ಟು ಮಟ್ಟಿಗೆ, ಉಚ್ಚ ನ್ಯಾಯಾಲಯದ ಡಿಕ್ರಿಗಳಿಂದಾದ ಅಪೀಲಿನ ಪ್ರಕರಣದಲ್ಲಿ ಅನ್ವಯವಾಗುವಂತೆ ಈ ಪ್ರಕರಣದ ಅಡಿಯಲ್ಲಿನ ಅಪೀಲುಗಳ ಪ್ರಕರಣದಲ್ಲಿ ಅನ್ವಯಿಸತಕ್ಕದ್ದು.

(3) ಉಚ್ಚ ನ್ಯಾಯಾಲಯದ ತೀರ್ಪು ಅಪೀಲಿನಲ್ಲಿ ವ್ಯತ್ಯಾಸವಾದಲ್ಲಿ ಅಥವಾ ವಿಪರ್ಯಯಗೊಂಡಲ್ಲಿ, ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ, ಉಚ್ಚ ನ್ಯಾಯಾಲಯದ ತೀರ್ಪಿನ ಸಂದರ್ಭದಲ್ಲಿನ ಪ್ರಕರಣ 117ರಲ್ಲಿ ಉಪಬಂಧಿಸಿದ ವಿಧಾನದಲ್ಲಿ ಪರಿಣಾಮವನ್ನು ನೀಡತಕ್ಕದ್ದು.

119. ಅಪೀಲುಗಳು ಇತ್ಯಾದಿಗಳು ಏನೇ ಇದ್ದರೂ ಬಾಕಿಯಿರುವ ಮೊತ್ತಗಳನ್ನು ಸಂದಾಯ ಮಾಡುವುದು.– ಉಚ್ಚ ನ್ಯಾಯಾಲಯ ಅಥವಾ ಸರ್ವೋಚ್ಚ ನ್ಯಾಯಾಲಯದಲ್ಲಿ ಅಪೀಲನ್ನು ಸಲ್ಲಿಸಲಾಗಿರುವುದು ಎಂದು ಏನೇ ಇದ್ದರೂ, ಪ್ರಕರಣದ 113ರ ಉಪಪ್ರಕರಣ (1)ರ ಅಡಿಯಲ್ಲಿ ಅಪೀಲು ನ್ಯಾಯಾಧಿಕರಣದ ರಾಷ್ಟ್ರೀಯ ಅಥವಾ ಪ್ರಾದೇಶಿಕ ನ್ಯಾಯಪೀಠಗಳಿಂದ ಹೊರಡಿಸಿದ ಆದೇಶ ಅಥವಾ ಪ್ರಕರಣ 113ರ ಉಪಪ್ರಕರಣ (1)ರ ಅಡಿಯಲ್ಲಿ ಅಪೀಲು ನ್ಯಾಯಾಧಿಕರಣದ ರಾಜ್ಯ ನ್ಯಾಯಪೀಠ ಅಥವಾ ಕ್ಷೇತ್ರ ನ್ಯಾಯಪೀಠಗಳಿಂದ ಹೊರಡಿಸಿದ ಆದೇಶ ಅಥವಾ ಸಂದರ್ಭಾನುಸಾರವಾಗಿ ಪ್ರಕರಣ 117ರ ಅಡಿಯಲ್ಲಿ ಉಚ್ಚ ನ್ಯಾಯಾಲಯದಿಂದ ಹೊರಡಿಸಿದ ಆದೇಶದ ಪರಿಣಾಮವಾಗಿ ಸರ್ಕಾರಕ್ಕೆ ಬಾಕಿಯಿರುವ ಮೊತ್ತವು ಹಾಗೆ ಹೊರಡಿಸಿದ ಆದೇಶಕ್ಕನುಸಾರವಾಗಿ ಸಂದಾಯವಾಗತಕ್ಕದ್ದು.

120. ನಿರ್ದಿಷ್ಟ ಪ್ರಕರಣಗಳಲ್ಲಿ ಅಪೀಲು ಸಲ್ಲಿಸದಿರುವಿಕೆ.– (1) ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಆಯುಕ್ತರು, ಈ ಅಧ್ಯಾಯದ ಉಪಬಂಧಗಳ ಅಡಿಯಲ್ಲಿ ರಾಜ್ಯ ತೆರಿಗೆಯ ಅಧಿಕಾರಿಯಿಂದ ಅಪೀಲು ಅಥವಾ ಅರ್ಜಿಯ ಸಲ್ಲಿಕೆಯನ್ನು ನಿಯಂತ್ರಿಸುವ ಉದ್ದೇಶಕ್ಕಾಗಿ, ಅವರು ಸೂಕ್ತ ಎಂದು ಭಾವಿಸಬಹುದಾದ, ಹಣಕಾಸಿನ ಮಿತಿಗಳನ್ನು ನಿಗದಿಗೊಳಿಸಿ, ಆದೇಶಗಳನ್ನು ಅಥವಾ ಸೂಚನೆಗಳನ್ನು ಅಥವಾ ನಿರ್ದೇಶನಗಳನ್ನು ಕಾಲ ಕಾಲಕ್ಕೆ ನೀಡಬಹುದು.

(2) ಉಪಪ್ರಕರಣ (1)ರ ಅಡಿಯಲ್ಲಿ ನೀಡಿದ ಆದೇಶಗಳು ಅಥವಾ ಸೂಚನೆಗಳು ಅಥವಾ ನಿರ್ದೇಶನಗಳಿಗೆ ಅನುಸಾರವಾಗಿ, ರಾಜ್ಯ ತೆರಿಗೆಯ ಅಧಿಕಾರಿಯು, ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಹೊರಡಿಸಿದ ಯಾವುದೇ

ನಿರ್ಣಯ ಅಥವಾ ಆದೇಶದ ವಿರುದ್ಧವಾಗಿ ಒಂದು ಅಪೀಲು ಅಥವಾ ಅರ್ಜಿಯನ್ನು ಸಲ್ಲಿಸಿಲ್ಲದಿದ್ದಲ್ಲಿ, ಅದು, ಅಂಥದೇ ಅಥವಾ ಸಾಮ್ಯದ ವಿಷಯಗಳು ಅಥವಾ ಕಾನೂನಿನ ಪ್ರಶ್ನೆಗಳನ್ನು ಒಳಗೊಂಡಿರುವ ಯಾವುದೇ ಇತರ ಪ್ರಕರಣಗಳಲ್ಲಿ ಅಪೀಲು ಅಥವಾ ಅರ್ಜಿ ಸಲ್ಲಿಕೆಯಿಂದ ಅಂಥ ರಾಜ್ಯ ತೆರಿಗೆಯ ಅಧಿಕಾರಿಯನ್ನು ಅಡ್ಡಿಪಡಿಸತಕ್ಕದ್ದಲ್ಲ.

(3) ಉಪಪ್ರಕರಣ (1)ರ ಅಡಿಯಲ್ಲಿ, ನೀಡಿದ ಆದೇಶಗಳು ಅಥವಾ ಸೂಚನೆಗಳು ಅಥವಾ ನಿರ್ದೇಶನಗಳಿಗೆ ಅನುಸಾರವಾಗಿ ರಾಜ್ಯ ತೆರಿಗೆಯ ಅಧಿಕಾರಿಯಿಂದ ಅಪೀಲು ಅಥವಾ ಅರ್ಜಿಯು ಸಲ್ಲಿಕೆಯಾಗಿಲ್ಲ ಎನ್ನುವ ಸಂಗತಿ ಏನೇ ಇದ್ದರೂ, ಒಂದು ಅಪೀಲು ಅಥವಾ ಅರ್ಜಿಯಲ್ಲಿ ಪಕ್ಷಕಾರನಾಗಿರುವ ಒಬ್ಬ ವ್ಯಕ್ತಿಯು ರಾಜ್ಯ ತೆರಿಗೆಯ ಅಧಿಕಾರಿಯು ಒಂದು ಅಪೀಲು ಅಥವಾ ಅರ್ಜಿಯನ್ನು ಸಲ್ಲಿಸದೇ ಇರುವುದರ ಮೂಲಕ ವಿವಾದಿತ ವಿಷಯದ ಮೇಲಿನ ನಿರ್ಣಯದಲ್ಲಿ ಮೌನ ಸಮ್ಮತಿ ನೀಡಿದ್ದಾನೆ ಎಂದು ವಾದಿಸತಕ್ಕದ್ದಲ್ಲ.

(4) ಅಂಥ ಅಪೀಲು ಅಥವಾ ಅರ್ಜಿಯನ್ನು ಅಹವಾಲು ಮಾಡುವ ಅಪೀಲು ನ್ಯಾಯಾಧಿಕರಣ ಅಥವಾ ನ್ಯಾಯಾಲಯ, ಉಪಪ್ರಕರಣ (1)ರ ಅಡಿಯಲ್ಲಿ ನೀಡಿದ ಆದೇಶಗಳು ಅಥವಾ ಸೂಚನೆಗಳು ಅಥವಾ ನಿರ್ದೇಶನಗಳಿಗೆ ಅನುಸಾರವಾಗಿ ರಾಜ್ಯ ತೆರಿಗೆಯ ಅಧಿಕಾರಿಯಿಂದ ಅಪೀಲು ಅಥವಾ ಅರ್ಜಿಯು ಯಾವ ಸನ್ನಿವೇಶಗಳ ಅಡಿಯಲ್ಲಿ ಸಲ್ಲಿಕೆಯಾಗಿಲ್ಲ ಎನ್ನುವುದನ್ನು ಗಮನದಲ್ಲಿರಿಸಿಕೊಂಡಿರತಕ್ಕದ್ದು.

121. ಅಪೀಲು ಮಾಡಲಾಗದಂತಹ ನಿರ್ಣಯಗಳು ಮತ್ತು ಆದೇಶಗಳು.– ಈ ಅಧಿನಿಯಮದ ಯಾವುದೇ ಉಪಬಂಧಗಳಲ್ಲಿ ಇದಕ್ಕೆ ವಿರುದ್ಧವಾಗಿ ಏನೇ ಒಳಗೊಂಡಿದ್ದರೂ ಸಹ, ರಾಜ್ಯ ತೆರಿಗೆಯ ಅಧಿಕಾರಿಯಿಂದ ತೆಗೆದುಕೊಂಡ ಯಾವುದೇ ನಿರ್ಣಯ ಅಥವಾ ಹೊರಡಿಸಿದ ಆದೇಶದ ವಿರುದ್ಧವಾಗಿ, ಅಂಥ ತೆಗೆದುಕೊಂಡ ನಿರ್ಣಯ ಅಥವಾ ಹೊರಡಿಸಿದ ಆದೇಶವು ಈ ಕೆಳಕಂಡ ವಿಷಯಗಳಲ್ಲಿ ಒಂದು ಅಥವಾ ಅದಕ್ಕಿಂತ ಹೆಚ್ಚಿನದಕ್ಕೆ ಸಂಬಂಧಿಸಿದ್ದರೆ, ಅಪೀಲನ್ನು ಹೂಡಲು ಅವಕಾಶವಿರತಕ್ಕದ್ದಲ್ಲ, ಎಂದರೆ:–

(ಎ) ಆಯುಕ್ತರ ಅಥವಾ ಒಬ್ಬ ಅಧಿಕಾರಿಯಿಂದ ಮತ್ತೊಬ್ಬ ಅಧಿಕಾರಿಗೆ ನಡಾವಳಿಗಳನ್ನು ವರ್ಗಾಯಿಸುವುದಕ್ಕಾಗಿ ನಿರ್ದೇಶನವನ್ನು ನೀಡುವ ಅಧಿಕಾರವನ್ನು ಪಡೆದ ಇತರ ಪ್ರಾಧಿಕಾರದ ಆದೇಶ;

(ಬಿ) ಲೆಕ್ಕಪುಸ್ತಕಗಳು, ರಿಜಿಸ್ಟರ್ ಮತ್ತು ಇತರ ದಸ್ತಾವೇಜುಗಳನ್ನು ವಶಕ್ಕೆ ತೆಗೆದುಕೊಳ್ಳುವಿಕೆ ಅಥವಾ ಉಳಿಸಿಕೊಳ್ಳುವಿಕೆಗೆ ಸಂಬಂಧಿಸಿದ ಆದೇಶ;

(ಸಿ) ಈ ಅಧಿನಿಯಮದ ಅಡಿಯಲ್ಲಿ ಅಭಿಯೋಜನೆಯನ್ನು ಮಂಜೂರು ಮಾಡುವ ಆದೇಶ; ಅಥವಾ

(ಡಿ) ಪ್ರಕರಣ 80ರ ಅಡಿಯಲ್ಲಿ ಹೊರಡಿಸಿದ ಆದೇಶ.

ಅಧ್ಯಾಯ – XIX
ಅಪರಾಧಗಳು ಮತ್ತು ದಂಡಗಳು

122. ಅಪರಾಧಗಳು ಮತ್ತು ದಂಡಗಳು.– (1) ಒಬ್ಬ ತೆರಿಗೆದಾಯಕ ವ್ಯಕ್ತಿಯು–

(i) ಯಾವುದೇ ಬೆಲೆಪಟ್ಟಿಯನ್ನು ನೀಡದೆ ಯಾವುದೇ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡನ್ನು ಪೂರೈಸುತ್ತಿದ್ದಲ್ಲಿ ಅಥವಾ ಯಾವುದೇ ಅಂಥ ಪೂರೈಕೆಗೆ ಸಂಬಂಧಿಸಿದಂತೆ ಸರಿಯಿಲ್ಲದ ಅಥವಾ ಸುಳ್ಳಾದ ಒಂದು ಬೆಲೆಪಟ್ಟಿಯನ್ನು ನೀಡಿದ್ದಲ್ಲಿ;

(ii) ಈ ಅಧಿನಿಯಮದ ಉಪಬಂಧಗಳು, ಅಥವಾ ಇದರ ಅಡಿಯಲ್ಲಿ ಮಾಡಲಾದ ನಿಯಮಗಳನ್ನು ಉಲ್ಲಂಘಿಸಿ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಯನ್ನು ಮಾಡದೇ ಯಾವುದೇ ಬೆಲೆಪಟ್ಟಿ ಅಥವಾ ಬಿಲ್ಲನ್ನು ನೀಡಿದಲ್ಲಿ;

(iii) ತೆರಿಗೆ ಎಂದು ಯಾವುದೇ ಮೊತ್ತವನ್ನು ಸಂಗ್ರಹಿಸುವುದು ಆದರೆ ಅದನ್ನು ಸರ್ಕಾರಕ್ಕೆ ಸಂದಾಯ ಮಾಡಲು ಅಂಥ ಸಂದಾಯವು ಬಾಕಿಯಾಗುವ ದಿನಾಂಕದಿಂದ ಮೂರು ತಿಂಗಳು ಅವಧಿಯನ್ನು ಮೀರಿದ ನಂತರವೂ ವಿಫಲನಾದಲ್ಲಿ;

(iv) ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿ ಯಾವುದೇ ತೆರಿಗೆಯನ್ನು ಸಂಗ್ರಹಿಸುವುದು ಆದರೆ ಅದನ್ನು ಸರ್ಕಾರಕ್ಕೆ ಸಂದಾಯ ಮಾಡಲು ಅಂಥ ಸಂದಾಯವು ಬಾಕಿಯಾಗುವ ದಿನಾಂಕದಿಂದ ಮೂರು ತಿಂಗಳ ಅವಧಿಯನ್ನು ಮೀರಿದ ನಂತರವೂ ವಿಫಲನಾದಲ್ಲಿ;

(v) ಪ್ರಕರಣ 51ರ ಉಪಪ್ರಕರಣ (1)ರ ಉಪಬಂಧಗಳಿಗೆ ಅನುಸಾರವಾಗಿ ತೆರಿಗೆಯನ್ನು ಮುರುಗಡೆ ಮಾಡಲು ವಿಫಲನಾದಲ್ಲಿ, ಅಥವಾ ಸದರಿ ಉಪಪ್ರಕರಣದ ಅಡಿಯಲ್ಲಿ ಮುರುಗಡೆ ಮಾಡುವುದು ಅಗತ್ಯವಾಗಿರುವ ಮೊತ್ತಕ್ಕಿಂತ ಕಡಿಮೆಯಾದ ಮೊತ್ತವನ್ನು ಮುರುಗಡೆ ಮಾಡಿದಲ್ಲಿ, ಅಥವಾ ತೆರಿಗೆ ಎಂದು ಮುರುಗಡೆ ಮಾಡಿದ ಮೊತ್ತವನ್ನು ಅದರ ಉಪಪ್ರಕರಣ (2)ರ ಅಡಿಯಲ್ಲಿ ಸರ್ಕಾರಕ್ಕೆ ಸಂದಾಯ ಮಾಡಲು ವಿಫಲನಾದಲ್ಲಿ;

(vi) ಪ್ರಕರಣ 52ರ ಉಪಪ್ರಕರಣ (1)ರ ಉಪಬಂಧಗಳಿಗೆ ಅನುಸಾರವಾಗಿ ತೆರಿಗೆಯನ್ನು ಸಂಗ್ರಹಿಸಲು ವಿಫಲನಾದಲ್ಲಿ, ಅಥವಾ ಸದರಿ ಉಪಪ್ರಕರಣದ ಅಡಿಯಲ್ಲಿ ಸಂಗ್ರಹ ಮಾಡುವುದು ಅಗತ್ಯವಾಗಿರುವ ಮೊತ್ತಕ್ಕಿಂತ ಕಡಿಮೆಯಾದ ಮೊತ್ತವನ್ನು ಸಂಗ್ರಹಣೆ ಮಾಡಿದಲ್ಲಿ, ಅಥವಾ ಪ್ರಕರಣ 52ರ ಉಪಪ್ರಕರಣ (3)ರ ಅಡಿಯಲ್ಲಿ ತೆರಿಗೆ ಎಂದು ಸಂಗ್ರಹಿಸಿದ ಮೊತ್ತವನ್ನು ಸರ್ಕಾರಕ್ಕೆ ಸಂದಾಯ ಮಾಡಲು ವಿಫಲನಾದಲ್ಲಿ;

(vii) ಈ ಅಧಿನಿಯಮದ ಉಪಬಂಧಗಳು, ಅಥವಾ ಇದರ ಅಡಿಯಲ್ಲಿ ಮಾಡಲಾದ ನಿಯಮಗಳನ್ನು ಉಲ್ಲಂಘಿಸಿ, ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡನ್ನು ವಾಸ್ತವಿಕವಾಗಿ ಸ್ವೀಕರಿಸದೇ ಹೂಡುವಳಿ ತೆರಿಗೆ ಜಮೆಯನ್ನು ಪೂರ್ಣವಾಗಿಯಾಗಲಿ ಅಥವಾ ಭಾಗಶಃವಾಗಿಯಾಗಲಿ ತೆಗೆದುಕೊಂಡಲ್ಲಿ ಅಥವಾ ಉಪಯೋಗಿಸಿಕೊಂಡಲ್ಲಿ;

(viii) ಈ ಅಧಿನಿಯಮದ ಅಡಿಯಲ್ಲಿ ತೆರಿಗೆಯ ಮರುಪಾವತಿಯನ್ನು ಮೋಸದಿಂದ ಪಡೆದುಕೊಂಡಲ್ಲಿ;

(ix) ಪ್ರಕರಣ 20ರ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳನ್ನು ಉಲ್ಲಂಘಿಸಿ, ಹೂಡುವಳಿ ತೆರಿಗೆ ಜಮೆಯನ್ನು ತೆಗೆದುಕೊಂಡಲ್ಲಿ ಅಥವಾ ಹಂಚಿಕೆ ಮಾಡಿದಲ್ಲಿ;

(x) ಈ ಅಧಿನಿಯಮದ ಅಡಿಯಲ್ಲಿ ಬಾಕಿಯಿರುವ ತೆರಿಗೆಯ ಸಂದಾಯವನ್ನು ತಪ್ಪಿಸುವ ಉದ್ದೇಶದಿಂದ ಹಣಕಾಸಿನ ದಾಖಲೆಗಳನ್ನು ಸುಳ್ಳು ಮಾಡಿದಲ್ಲಿ ಅಥವಾ ಬದಲಾಗಿ ಸೇರಿಸಿದಲ್ಲಿ, ಅಥವಾ ನಕಲಿ ಲೆಕ್ಕಪತ್ರಗಳು ಅಥವಾ ದಸ್ತಾವೇಜುಗಳನ್ನು ಹಾಜರುಪಡಿಸಿದಲ್ಲಿ ಅಥವಾ ಯಾವುದೇ ಸುಳ್ಳಾದ ಮಾಹಿತಿಯನ್ನು ಅಥವಾ ರಿಟರ್ನನ್ನು ಒದಗಿಸಿದಲ್ಲಿ;

(xi) ಈ ಅಧಿನಿಯಮದ ಅಡಿಯಲ್ಲಿ ನೋಂದಣಿಗೆ ಬಾಧ್ಯನಿದ್ದು ಆದರೆ ನೋಂದಣಿಯನ್ನು ಪಡೆಯಲು ವಿಫಲನಾದಲ್ಲಿ;

(xii) ನೋಂದಣಿ ವಿವರಗಳಿಗೆ ಸಂಬಂಧಿಸಿದಂತೆ, ನೋಂದಣಿಗೆ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಾಗಲಿ ಅಥವಾ ತರುವಾಯವಾಗಲಿ, ಯಾವುದೇ ಸುಳ್ಳು ಮಾಹಿತಿಯನ್ನು ಒದಗಿಸಿದಲ್ಲಿ;

(xiii) ಈ ಅಧಿನಿಯಮದ ಅಡಿಯಲ್ಲಿ ಆತನ ಕರ್ತವ್ಯಗಳ ನಿರ್ವಹಣೆಯಲ್ಲಿರುವ ಯಾವುದೇ ಅಧಿಕಾರಿಯನ್ನು ಅಡ್ಡಿಪಡಿಸಿದಲ್ಲಿ ಅಥವಾ ಪ್ರತಿಬಂಧಿಸಿದಲ್ಲಿ;

(xiv) ಈ ಸಂಬಂಧದಲ್ಲಿ ನಿರ್ದಿಷ್ಟಪಡಿಸಬಹುದಾದ ದಸ್ತಾವೇಜುಗಳಿಂದ ಕೂಡಿರದ ಯಾವುದೇ ತೆರಿಗೆದಾಯಕ ಸರಕುಗಳನ್ನು ಸಾಗಾಣಿಕೆ ಮಾಡಿದಲ್ಲಿ;

(xv) ತನ್ನ ವಹಿವಾಟನ್ನು ಈ ಅಧಿನಿಯಮದ ಅಡಿಯಲ್ಲಿ ತೆರಿಗೆ ತಪ್ಪಿಸುವಿಕೆಗೆ ಕಾರಣವಾಗುವ ಹಾಗೆ ಬಚ್ಚಿಟ್ಟಲ್ಲಿ;

(xvi) ಈ ಅಧಿನಿಯಮದ ಉಪಬಂಧಗಳು, ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳಿಗೆ ಅನುಸಾರವಾಗಿ, ಲೆಕ್ಕಪುಸ್ತಕಗಳು ಮತ್ತು ಇತರ ದಸ್ತಾವೇಜುಗಳನ್ನು ಇಡಲು, ನಿರ್ವಹಿಸಲು ಅಥವಾ ಉಳಿಸಿಕೊಳ್ಳಲು ವಿಫಲನಾದಲ್ಲಿ;

(xvii) ಈ ಅಧಿನಿಯಮದ ಉಪಬಂಧಗಳು, ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳಿಗೆ ಅನುಸಾರವಾಗಿ, ಯಾವುದೇ ಅಧಿಕಾರಿಯಿಂದ ಕರೆಮಾಡಿದ ಮಾಹಿತಿ ಅಥವಾ ದಸ್ತಾವೇಜುಗಳನ್ನು ಒದಗಿಸಲು ವಿಫಲವಾದಲ್ಲಿ ಅಥವಾ ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ನಡಾವಳಿಗಳಲ್ಲಿ ಸುಳ್ಳು ಮಾಹಿತಿ ಅಥವಾ ದಸ್ತಾವೇಜುಗಳನ್ನು ಒದಗಿಸಿದಲ್ಲಿ;

(xviii) ಈ ಅಧಿನಿಯಮದ ಅಡಿಯಲ್ಲಿ ಮುಟ್ಟುಗೋಲಿಗೆ ಬಾಧ್ಯವಾಗಬಹುದು ಎಂದು ನಂಬಲು ಅವನು ಕಾರಣಗಳನ್ನು ಹೊಂದಿರುವಂತಹ ಯಾವುದೇ ಸರಕುಗಳನ್ನು ಪೂರೈಸಿದಲ್ಲಿ, ಸಾಗಿಸಿದಲ್ಲಿ ಅಥವಾ ದಾಸ್ತಾನು ಮಾಡಿದಲ್ಲಿ;

(xix) ಮತ್ತೊಬ್ಬ ನೋಂದಾಯಿತ ವ್ಯಕ್ತಿಯ ನೋಂದಣಿ ಸಂಖ್ಯೆಯನ್ನು ಉಪಯೋಗಿಸಿಕೊಂಡು ಯಾವುದೇ ಬೆಲೆಪಟ್ಟಿ ಅಥವಾ ದಸ್ತಾವೇಜನ್ನು ನೀಡಿದಲ್ಲಿ;

(xx) ಯಾವುದೇ ಮುಖ್ಯ ಪುರಾವೆಯನ್ನು ಅಥವಾ ದಸ್ತಾವೇಜುಗಳನ್ನು ಅಕ್ರಮವಾಗಿ ತಿದ್ದಿದಲ್ಲಿ, ಅಥವಾ ನಾಶಮಾಡಿದಲ್ಲಿ;

(xxi) ಈ ಅಧಿನಿಯಮದ ಅಡಿಯಲ್ಲಿ ತಡೆಹಿಡಿಯಲಾದ, ವಶಕ್ಕೆ ತೆಗೆದುಕೊಳ್ಳಲಾದ, ಜಪ್ತಿ ಮಾಡಲಾದ ಯಾವುದೇ ಸರಕುಗಳನ್ನು ವಿಲೇವಾರಿ ಮಾಡಿದಲ್ಲಿ ಅಥವಾ ವ್ಯತ್ಯಸ್ತಗೊಳಿಸಿದಲ್ಲಿ;

–ಹತ್ತು ಸಾವಿರ ರೂಪಾಯಿಗಳ ಅಥವಾ ತಪ್ಪಿಸಲಾದ ತೆರಿಗೆಗೆ, ಅಥವಾ ಪ್ರಕರಣ 51ರ ಅಡಿಯಲ್ಲಿ ಮುರುಗಡೆ ಮಾಡದ ಅಥವಾ ಕಡಿಮೆ ಮುರುಗಡೆ ಮಾಡಿದ ಅಥವಾ ಮುರುಗಡೆ ಮಾಡಿದ ಆದರೆ ಸರ್ಕಾರಕ್ಕೆ ಸಂದಾಯ ಮಾಡದ ತೆರಿಗೆಗೆ, ಪ್ರಕರಣ 52ರ ಅಡಿಯಲ್ಲಿ ಸಂಗ್ರಹಿಸಿರದ ಅಥವಾ ಕಡಿಮೆ ಸಂಗ್ರಹಿಸಿದ ಅಥವಾ ಸಂಗ್ರಹ ಮಾಡಿರುವ ಆದರೆ ಸರ್ಕಾರಕ್ಕೆ ಸಂದಾಯ ಮಾಡದ ತೆರಿಗೆಗೆ, ಅಥವಾ ಅಕ್ರಮವಾಗಿ ತೆಗೆದುಕೊಂಡ ಅಥವಾ ವರ್ಗಾಯಿಸಿದ ಅಥವಾ ಹಂಚಿಕೆ ಮಾಡಿದ ಹೂಡುವಳಿ ತೆರಿಗೆ ಜಮೆಗೆ,

ಅಥವಾ ಮೋಸದಿಂದ ಕ್ಷೇಮು ಮಾಡಲಾದ ಮರುಪಾವತಿಗೆ ಸಮನಾದ ಒಂದು ಮೊತ್ತ, ಇವುಗಳಲ್ಲಿ ಯಾವುದು ಹೆಚ್ಚೋ ಆ ದಂಡಕ್ಕೆ ಅವನು ಬಾಧ್ಯನಿರತಕ್ಕದ್ದು.

(2) ಅವುಗಳ ಮೇಲೆ ಯಾವುದೇ ತೆರಿಗೆಯನ್ನು ಸಂದಾಯ ಮಾಡದಿರುವ ಅಥವಾ ಕಡಿಮೆ ಸಂದಾಯ ಮಾಡಿರುವ ಅಥವಾ ತಪ್ಪಾಗಿ ಮರುಪಾವತಿಯನ್ನು ಮಾಡಿರುವ ಅಥವಾ ಹೂಡುವಳಿ ತೆರಿಗೆ ಜಮೆಯನ್ನು ತಪ್ಪಾಗಿ ತೆಗೆದುಕೊಂಡಿರುವ ಅಥವಾ ಬಳಸಿರುವ, ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆ ಮಾಡುವ ಯಾವುದೇ ನೋಂದಾಯಿತ ವ್ಯಕ್ತಿಯು,–

(ಎ) ತೆರಿಗೆಯನ್ನು ತಪ್ಪಿಸುವುದಕ್ಕಾಗಿ ಮೋಸ ಅಥವಾ ಉದ್ದೇಶಪೂರ್ವಕವಾಗಿ ಯಾವುದೇ ಸಂಗತಿಗಳನ್ನು ತಪ್ಪಾಗಿ ಹೇಳುವುದು ಅಥವಾ ಬಚ್ಚಿಡುವುದನ್ನು ಹೊರತುಪಡಿಸಿದಂತಹ, ಯಾವುದೇ ಕಾರಣಗಳಿಗಾಗಿ, ಹತ್ತು ಸಾವಿರ ರೂಪಾಯಿಗಳ ಅಥವಾ ಅಂಥ ವ್ಯಕ್ತಿಯಿಂದ ಬಾಕಿಯಿರುವ ತೆರಿಗೆಯ ಶೇಕಡಾ ಹತ್ತರಷ್ಟು, ಇವುಗಳಲ್ಲಿ ಯಾವುದು ಹೆಚ್ಚೋ ಆ ದಂಡಕ್ಕೆ ಬಾಧ್ಯನಿರತಕ್ಕದ್ದು;

(ಬಿ) ತೆರಿಗೆಯನ್ನು ತಪ್ಪಿಸುವುದಕ್ಕಾಗಿ ಮೋಸ ಅಥವಾ ಉದ್ದೇಶಪೂರ್ವಕವಾಗಿ ಯಾವುದೇ ಸಂಗತಿಗಳನ್ನು ತಪ್ಪಾಗಿ ಹೇಳುವುದು ಅಥವಾ ಬಚ್ಚಿಡುವ ಕಾರಣಗಳಿಗಾಗಿ, ಹತ್ತು ಸಾವಿರ ರೂಪಾಯಿಗಳ ಅಥವಾ ಅಂಥ ವ್ಯಕ್ತಿಯಿಂದ ಬಾಕಿಯಿರುವ ತೆರಿಗೆ ಇವುಗಳಲ್ಲಿ ಯಾವುದು ಹೆಚ್ಚೋ ಆ ದಂಡಕ್ಕೆ ಬಾಧ್ಯನಿರತಕ್ಕದ್ದು.

(3) ಯಾವೊಬ್ಬ ವ್ಯಕ್ತಿಯು,–

(ಎ) ಮೇಲಿನ ಉಪ–ಪ್ರಕರಣ (1)ರ ಖಂಡ (i) ರಿಂದ (xxi)ಗಳಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಅಪರಾಧಗಳಿಗೆ ನೆರವು ಕೊಡುವುದು ಅಥವಾ ದುಷ್ಪ್ರೇರಿಸಿದಲ್ಲಿ;

(ಬಿ) ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿ ಮುಟ್ಟುಗೋಲಿಗೆ ಬಾಧ್ಯವಾಗಬಹುದು ಎಂದು ಅವನಿಗೆ ತಿಳಿದಿರುವ ಅಥವಾ ನಂಬಲು ಕಾರಣಗಳನ್ನು ಹೊಂದಿರುವಂತಹ ಯಾವುದೇ ಸರಕುಗಳ ಸ್ವಾಧೀನತೆಯನ್ನು ಅರ್ಜಿಸುವ, ಅಥವಾ ಅವುಗಳ ಸಾಗಾಣಿಕೆ, ತೆಗೆಯುವಿಕೆ, ನಿಕ್ಷೇಪಿಸುವಿಕೆ, ಇಟ್ಟುಕೊಳ್ಳುವಿಕೆ, ಮುಚ್ಚಿಟ್ಟುಕೊಳ್ಳುವಿಕೆ, ಅಥವಾ ಖರೀದಿಸುವಿಕೆ ಅಥವಾ ಯಾವುದೇ ಇತರೆ ವಿಧಾನದಲ್ಲಿ ಸ್ವತಃ ವ್ಯವಹರಿಸಿದಲ್ಲಿ;

(ಸಿ) ಈ ಅಧಿನಿಯಮದ ಯಾವುದೇ ಉಪಬಂಧಗಳ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಉಲ್ಲಂಘನೆಯಾಗುತ್ತದೆ ಎಂದು ಅವನಿಗೆ ತಿಳಿದಿರುವ ಅಥವಾ ನಂಬಲು ಕಾರಣಗಳನ್ನು ಹೊಂದಿರುವಂತಹ ಸೇವೆಗಳ ಪೂರೈಕೆಯನ್ನು ಸ್ವೀಕರಿಸಿರುವ ಅಥವಾ ಯಾವುದೇ ವಿಧಾನದಲ್ಲಿ ಪೂರೈಕೆಯೊಂದಿಗೆ ಸ್ವತಃ ತಾನು ಸಂಬಂಧಿಸಿರುವ ಅಥವಾ ಯಾವುದೇ ಇತರೆ ವಿಧಾನದಲ್ಲಿ ವ್ಯವಹರಿಸಿದಲ್ಲಿ;

(ಡಿ) ಒಂದು ವಿಚಾರಣೆಯಲ್ಲಿ ಸಾಕ್ಷಿಯನ್ನು ನೀಡುವುದಕ್ಕಾಗಿ ಅಥವಾ ಒಂದು ದಸ್ತಾವೇಜನ್ನು ಹಾಜರುಪಡಿಸುವುದಕ್ಕಾಗಿ ಸಮನ್ ಅನ್ನು ನೀಡಿದ್ದಾಗ, ರಾಜ್ಯ ತೆರಿಗೆಯ ಅಧಿಕಾರಿಯ ಮುಂದೆ ಹಾಜರಾಗಲು ವಿಫಲನಾಗಿರುವಲ್ಲಿ;

(ಇ) ಈ ಅಧಿನಿಯಮದ ಉಪಬಂಧಗಳ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳಿಗೆ ಅನುಸಾರವಾಗಿ ಬೆಲೆಪಟ್ಟಿಯನ್ನು ನೀಡಲು ಅಥವಾ ತನ್ನ ಲೆಕ್ಕಪುಸ್ತಕದಲ್ಲಿ ಒಂದು ಬೆಲೆಪಟ್ಟಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳಲು ವಿಫಲನಾಗಿರುವಲ್ಲಿ,

– ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡಕ್ಕೆ ಬಾಧ್ಯನಿರತಕ್ಕದ್ದು.

123. ಮಾಹಿತಿ ರಿಟರ್ನನ್ನು ಒದಗಿಸುವಲ್ಲಿನ ವಿಫಲತೆಗಾಗಿ ದಂಡ.– ಪ್ರಕರಣ 150ರ ಅಡಿಯಲ್ಲಿ ಮಾಹಿತಿ ರಿಟರ್ನನ್ನು ಒದಗಿಸುವುದು ಅಗತ್ಯವಾಗಿರುವ ಒಬ್ಬ ವ್ಯಕ್ತಿಯು, ಅದರ ಉಪಪ್ರಕರಣ (3)ರ ಅಡಿಯಲ್ಲಿ ನೀಡಿದ ಸೂಚನಾಪತ್ರದಲ್ಲಿ ನಿರ್ದಿಷ್ಟಪಡಿಸಿರುವ ಅವಧಿಯ ಒಳಗಾಗಿ ಹಾಗೆ ಮಾಡಲು ವಿಫಲನಾದರೆ, ಯುಕ್ತ ಅಧಿಕಾರಿಯು ಅಂಥ ವ್ಯಕ್ತಿಯನ್ನು ಅಂಥ ರಿಟರ್ನನ್ನು ಒದಗಿಸುವಲ್ಲಿನ ವಿಫಲತೆಯು ಮುಂದುವರೆಯುವ ಅವಧಿಯಲ್ಲಿನ ಪ್ರತಿಯೊಂದು ದಿನಕ್ಕೆ ಒಂದು ನೂರು ರೂಪಾಯಿಗಳಂತೆ ದಂಡವನ್ನು ಸಂದಾಯ ಮಾಡುವುದಕ್ಕೆ ಬಾಧ್ಯನಿರತಕ್ಕದ್ದು ಎಂದು ನಿರ್ದೇಶಿಸಬಹುದು:

ಪರಂತು, ಈ ಪ್ರಕರಣದ ಅಡಿಯಲ್ಲಿ ವಿಧಿಸಿದ ದಂಡವು ಐದು ಸಾವಿರ ರೂಪಾಯಿಗಳನ್ನು ಮೀರತಕ್ಕದ್ದಲ್ಲ.

124. ಅಂಕಿ ಅಂಶಗಳನ್ನು ಒದಗಿಸುವುದರ ವಿಫಲತೆಗಾಗಿ ಜುಲ್ಮಾನೆ.– ಪ್ರಕರಣ 151ರ ಅಡಿಯಲ್ಲಿ ಯಾವುದೇ ಮಾಹಿತಿ ಅಥವಾ ರಿಟರ್ನನ್ನು ಒದಗಿಸುವುದು ಅಗತ್ಯವಾಗಿರುವ ಯಾವುದೇ ವ್ಯಕ್ತಿಯು,–

(ಎ) ಯುಕ್ತ ಕಾರಣಗಳಿಲ್ಲದೆ ಆ ಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಬಹುದಾದ ಅಂಥ ಮಾಹಿತಿ ಅಥವಾ ರಿಟರ್ನನ್ನು ಒದಗಿಸಲು ವಿಫಲನಾದರೆ, ಅಥವಾ

(ಬಿ) ಅವನಿಗೆ ಸುಳ್ಳೆಂದು ಗೊತ್ತಿರುವ ಯಾವುದೇ ಮಾಹಿತಿ ಅಥವಾ ರಿಟರ್ನನ್ನು ಉದ್ದೇಶಪೂರ್ವಕವಾಗಿ ಒದಗಿಸಿದರೆ ಅಥವಾ ಒದಗಿಸಲು ಕಾರಣನಾದರೆ,

–ಅವನು ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ಮತ್ತು ಮುಂದುವರೆದ ಅಪರಾಧದ ಸಂದರ್ಭದಲ್ಲಿ, ಇಪ್ಪತ್ತೈದು ಸಾವಿರ ರೂಪಾಯಿಗಳ ಗರಿಷ್ಠ ಮಿತಿಗೆ ಒಳಪಟ್ಟು, ಅಪರಾಧ ಮುಂದುವರಿದ ಸಮಯದಲ್ಲಿನ ಮೊದಲ ದಿನದ ನಂತರದ ಪ್ರತಿಯೊಂದು ದಿನಕ್ಕೆ ಒಂದು ನೂರು ರೂಪಾಯಿಗಳಂತೆ ವಿಸ್ತರಿಸಬಹುದಾದ ಹೆಚ್ಚಿನ ಜುಲ್ಮಾನೆಯೊಂದಿಗೆ ದಂಡಿಸಬಹುದಾಗಿರತಕ್ಕದ್ದು.

125. ಸಾಮಾನ್ಯ ದಂಡ.– ಈ ಅಧಿನಿಯಮದ ಯಾವುದೇ ಉಪಬಂಧಗಳ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳನ್ನು ಉಲ್ಲಂಘಿಸುವ ಯಾವುದೇ ವ್ಯಕ್ತಿಯು, ಅದಕ್ಕಾಗಿ ಈ ಅಧಿನಿಯಮದಲ್ಲಿ ದಂಡವನ್ನು ಪ್ರತ್ಯೇಕವಾಗಿ ಉಪಬಂಧಿಸಿರದಿದ್ದಲ್ಲಿ, ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡಕ್ಕೆ ಬಾಧ್ಯನಿರತಕ್ಕದ್ದು;

126. ದಂಡಕ್ಕೆ ಸಂಬಂಧಿಸಿದ ಸಾಮಾನ್ಯ ಶಿಸ್ತುಗಳು.– (1) ಈ ಅಧಿನಿಯಮದ ಅಡಿಯಲ್ಲಿನ ಅಧಿಕಾರಿಯು, ತೆರಿಗೆ ವಿನಿಯಮಗಳ ಅಥವಾ ಪ್ರಕ್ರಿಯಾ ಅಗತ್ಯತೆಗಳ ಲಘು ಉಲ್ಲಂಘನೆಗಳಿಗಾಗಿ ಮತ್ತು ವಿಶೇಷತಃ, ಸುಲಭವಾಗಿ ಸರಿಪಡಿಸಬಹುದಾದ ಮತ್ತು ಮೋಸಮಾಡುವ ಉದ್ದೇಶ ಅಥವಾ ಅತೀವ ನಿರ್ಲಕ್ಷತೆಯಿಲ್ಲದೆ ದಸ್ತಾವೇಜೀಕರಣದಲ್ಲಿ ಆದ ಯಾವುದೇ ಲೋಪಗಳು ಅಥವಾ ತಪ್ಪಿಗೆ ಸಂಬಂಧಿಸಿದಂತೆ, ಯಾವುದೇ ದಂಡವನ್ನು ವಿಧಿಸತಕ್ಕದಲ್ಲ.

ವಿವರಣೆ.– ಈ ಉಪಪ್ರಕರಣದ ಉದ್ದೇಶಕ್ಕಾಗಿ–

(ಎ) ಒಂದು ಉಲ್ಲಂಘನೆಯು ಒಳಗೊಂಡಿರುವ ತೆರಿಗೆಯ ಮೊತ್ತ ಐದು ಸಾವಿರ ರೂಪಾಯಿಗಳಿಗಿಂತ ಕಡಿಮೆಯಿದ್ದರೆ, 'ಲಘು ಉಲ್ಲಂಘನೆ' ಎಂದು ಪರಿಗಣಿಸತಕ್ಕದ್ದು.

(ಬಿ) ಅದು ದಾಖಲೆಯಲ್ಲಿ ಮೇಲ್ನೋಟಕ್ಕೆ ಕಾಣುವ ತಪ್ಪಾಗಿದ್ದರೆ, ಅದನ್ನು ಸುಲಭವಾಗಿ ಸರಿಪಡಿಸಬಹುದಾದ ದಸ್ತಾವೇಜೀಕರಣದಲ್ಲಿ ಆದ ಲೋಪ ಅಥವಾ ತಪ್ಪು ಎಂದು ಪರಿಗಣಿಸತಕ್ಕದ್ದು.

(2) ಈ ಅಧಿನಿಯಮದ ಅಡಿಯಲ್ಲಿ ವಿಧಿಸಿದ ದಂಡವು, ಪ್ರತಿ ಪ್ರಕರಣದ ಸಂಗತಿಗಳು ಹಾಗೂ ಸನ್ನಿವೇಶಗಳ ಮೇಲೆ ಅವಲಂಬಿಸಿರತಕ್ಕದ್ದು ಮತ್ತು ಉಲ್ಲಂಘನೆಯ ಮಟ್ಟ ಮತ್ತು ತೀವ್ರತೆಯೊಂದಿಗೆ ಅನುಗುಣವಾಗಿರತಕ್ಕದ್ದು.

(3) ಯಾವುದೇ ವ್ಯಕ್ತಿಯ ಮೇಲೆ, ತನ್ನ ಅಹವಾಲುಗಳನ್ನು ಹೇಳಿಕೊಳ್ಳಲು ಅವನಿಗೆ ಒಂದು ಅವಕಾಶವನ್ನು ನೀಡಿದ ಹೊರತು ದಂಡವನ್ನು ವಿಧಿಸತಕ್ಕದಲ್ಲ.

(4) ಈ ಅಧಿನಿಯಮದ ಅಡಿಯಲ್ಲಿನ ಅಧಿಕಾರಿಯು, ಒಂದು ಆದೇಶದಲ್ಲಿ, ಕಾನೂನುಗಳ, ವಿನಿಯಮಗಳ ಅಥವಾ ಪ್ರಕ್ರಿಯಾ ಅಗತ್ಯತೆಗಳ ಉಲ್ಲಂಘನೆಗಾಗಿ ದಂಡವನ್ನು ವಿಧಿಸುವಾಗ, ಉಲ್ಲಂಘನೆಯ ಸ್ವರೂಪ ಮತ್ತು ಉಲ್ಲಂಘನೆಗಾಗಿ ದಂಡದ ಮೊತ್ತವನ್ನು ನಿರ್ದಿಷ್ಟಪಡಿಸಿರುವ ಅಂತಹ ಅನ್ವಯವಾಗುವ ಕಾನೂನು, ವಿನಿಯಮ, ಅಥವಾ ಪ್ರಕ್ರಿಯಾ ವಿಧಾನವನ್ನು ನಿರ್ದಿಷ್ಟಪಡಿಸತಕ್ಕದ್ದು.

(5) ಈ ಅಧಿನಿಯಮದ ಅಡಿಯಲ್ಲಿನ ಅಧಿಕಾರಿಯಿಂದ ಉಲ್ಲಂಘನೆಯು ಕಂಡುಹಿಡಿಯುವ ಮುನ್ನವೇ, ಸ್ವಯಂ ಆಗಿ ಒಬ್ಬ ವ್ಯಕ್ತಿಯು, ಈ ಅಧಿನಿಯಮದ ಅಡಿಯಲ್ಲಿನ ಅಧಿಕಾರಿಗೆ ತೆರಿಗೆ ಕಾನೂನಿನ, ವಿನಿಯಮದ ಅಥವಾ ಪ್ರಕ್ರಿಯಾ ವಿಧಾನದ ಅಗತ್ಯತೆಗಳ ಉಲ್ಲಂಘನೆಯ ಸನ್ನಿವೇಶವನ್ನು ಬಹಿರಂಗಪಡಿಸಿದಲ್ಲಿ, ಯುಕ್ತ ಅಧಿಕಾರಿಯು, ಈ ಸಂಗತಿಯನ್ನು ಆ ವ್ಯಕ್ತಿಗಾಗಿ ದಂಡವನ್ನು ಪರಿಮಾಣಿಸುವಾಗ ಉಪಶಮನಗೊಳಿಸುವ ಸಂಗತಿಯನ್ನಾಗಿ ಪರಿಗಣಿಸಬಹುದು.

(6) ಈ ಪ್ರಕರಣದ ಉಪಬಂಧಗಳು, ಈ ಅಧಿನಿಯಮದ ಅಡಿಯಲ್ಲಿ ನಿರ್ದಿಷ್ಟಪಡಿಸಿರುವ ದಂಡವು ಒಂದು ನಿಗದಿತ ಮೊತ್ತವಾಗಿದ್ದರೆ ಅಥವಾ ನಿಗದಿತ ಶೇಕಡಾವಾರುವಿನಲ್ಲಿ ಅಭಿವ್ಯಕ್ತಿಗೊಳಿಸಿರುವ ಅಂಥ ಪ್ರಕರಣಗಳಲ್ಲಿ, ಅನ್ವಯವಾಗತಕ್ಕದ್ದಲ್ಲ.

127. ಕೆಲವೊಂದು ಪ್ರಕರಣಗಳಲ್ಲಿ ದಂಡವನ್ನು ವಿಧಿಸುವ ಅಧಿಕಾರ.– ಯುಕ್ತ ಅಧಿಕಾರಿಯು, ಒಬ್ಬ ವ್ಯಕ್ತಿಯು ದಂಡಕ್ಕೆ ಬಾಧ್ಯನಿದ್ದಾನೆ ಮತ್ತು ಅದು ಪ್ರಕರಣ 62 ಅಥವಾ ಪ್ರಕರಣ 63 ಅಥವಾ ಪ್ರಕರಣ 64 ಅಥವಾ ಪ್ರಕರಣ 73 ಅಥವಾ ಪ್ರಕರಣ 74 ಅಥವಾ ಪ್ರಕರಣ 129 ಅಥವಾ ಪ್ರಕರಣ 130ರ ಅಡಿಯಲ್ಲಿನ ಯಾವುದೇ ನಡಾವಳಿಗಳ ಅಡಿಯಲ್ಲಿ ವ್ಯಾಪ್ತವಾಗಿರದಿದ್ದಲ್ಲಿ, ಅವನು ಅಂಥ ವ್ಯಕ್ತಿಗೆ ತನ್ನ ಅಹವಾಲುಗಳನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡಿದ ನಂತರ ಅಂಥ ದಂಡವನ್ನು ವಿಧಿಸುವ ಆದೇಶವನ್ನು ನೀಡಬಹುದು.

128. ದಂಡ ಅಥವಾ ಶುಲ್ಕ ಅಥವಾ ಅವುಗಳೆರಡನ್ನು ಮನ್ನಾ ಮಾಡುವ ಅಧಿಕಾರ.– ಸರ್ಕಾರವು, ಅಧಿಸೂಚನೆಯ ಮೂಲಕ, ಅದರಲ್ಲಿ ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ನಿರ್ದಿಷ್ಟಪಡಿಸಬಹುದಾದ ಅಂಥ ತೆರಿಗೆ ಸಂದಾಯದಾರರ ವರ್ಗಕ್ಕೆ ಮತ್ತು ಅಂಥ ಉಪಶಮನಗೊಳಿಸುವ ಸನ್ನಿವೇಶಗಳ ಅಡಿಯಲ್ಲಿ, ಪ್ರಕರಣ 122 ಅಥವಾ ಪ್ರಕರಣ 123 ಅಥವಾ ಪ್ರಕರಣ 125ರ ಅಡಿಯಲ್ಲಿ ಉಲ್ಲೇಖಿಸಲಾದ ಯಾವುದೇ ದಂಡವನ್ನು ಅಥವಾ ಪ್ರಕರಣ 47ರಲ್ಲಿ ಉಲ್ಲೇಖಿಸಲಾದ ವಿಳಂಬ ಶುಲ್ಕವನ್ನು ಭಾಗಶಃ ಅಥವಾ ಪೂರ್ಣವಾಗಿ ಮನ್ನಾ ಮಾಡಬಹುದು.

129. ಸಾಗಾಣಿಕೆಯಲ್ಲಿರುವ ಸರಕುಗಳು ಮತ್ತು ಸಾಗಾಣಿಕೆಯ ವಾಹನಗಳ ತಡೆಹಿಡಿಯುವಿಕೆ, ವಶಕ್ಕೆ ತೆಗೆದುಕೊಳ್ಳುವಿಕೆ ಹಾಗೂ ಬಿಡುಗಡೆ.– (1) ಈ ಅಧಿನಿಯಮದಲ್ಲಿ ಒಳಗೊಂಡಿರುವುದು ಏನೇ ಇದ್ದರೂ, ಯಾವುದೇ ವ್ಯಕ್ತಿ, ಈ ಅಧಿನಿಯಮದ ಉಪಬಂಧಗಳನ್ನು ಅಥವಾ ಇದರ ಅಡಿಯಲ್ಲಿ ಮಾಡಲಾದ ನಿಯಮಗಳನ್ನು ಉಲ್ಲಂಘಿಸಿ ಯಾವುದೇ ಸರಕುಗಳನ್ನು ಸಾಗಾಣಿಕೆ ಮಾಡಿದಲ್ಲಿ ಅಥವಾ ಯಾವುದೇ ಸರಕುಗಳನ್ನು ಸಾಗಣೆಯಲ್ಲಿರುವಾಗ ದಾಸ್ತಾನು ಮಾಡಿದಲ್ಲಿ, ಅಂಥ ಎಲ್ಲಾ ಸರಕುಗಳು ಮತ್ತು ಸದರಿ ಸರಕುಗಳನ್ನು ಸಾಗಿಸಲು ಸಂಚಾರದ ಸಾಧನವಾಗಿ ಬಳಸಿದ ಸಾಗಾಣಿಕೆಯ ವಾಹನ ಮತ್ತು ಅಂಥ ಸರಕುಗಳು ಹಾಗೂ ಸಾಗಾಣಿಕೆಯ ವಾಹನಕ್ಕೆ ಸಂಬಂಧಿಸಿದ ದಸ್ತಾವೇಜುಗಳು, ತಡೆಹಿಡಿಯುವಿಕೆಗೆ ಅಥವಾ ವಶಕ್ಕೆ ತೆಗೆದುಕೊಳ್ಳುವುದಕ್ಕೆ ಬಾಧ್ಯವಾಗತಕ್ಕದ್ದು ಮತ್ತು ತಡೆಹಿಡಿಯುವಿಕೆ ಅಥವಾ ವಶಕ್ಕೆ ತೆಗೆದುಕೊಂಡ ನಂತರ.–

(ಎ) ಸರಕುಗಳ ಮಾಲೀಕನು ಅಂಥ ತೆರಿಗೆ ಮತ್ತು ದಂಡವನ್ನು ಸಂದಾಯ ಮಾಡಲು ಮುಂದೆ ಬಂದಲ್ಲಿ, ಅಂಥ ಸರಕುಗಳ ಮೇಲೆ ಅನ್ವಯವಾಗುವ ತೆರಿಗೆ ಮತ್ತು ಸಂದಾಯ ಮಾಡಬೇಕಾದ ತೆರಿಗೆಯ ಶೇಕಡ ನೂರರಷ್ಟಕ್ಕೆ ಸಮನಾದ ದಂಡ ಸಂದಾಯವಾದ ಮೇಲೆ ಮತ್ತು ವಿನಾಯತಿ ಸರಕುಗಳ ಸಂದರ್ಭದಲ್ಲಿ ಸರಕುಗಳ ಮೌಲ್ಯದ ಶೇಕಡ ಎರಡರಷ್ಟಕ್ಕೆ ಸಮನಾದ ಒಂದು ಮೊತ್ತ ಅಥವಾ ಇಪ್ಪತ್ತೈದು ಸಾವಿರ ರೂಪಾಯಿಗಳು, ಇವುಗಳಲ್ಲಿ ಯಾವುದು ಕಡಿಮೆಯೊ ಅದನ್ನು ಸಂದಾಯ ಮಾಡಿದ ಮೇಲೆ;

(ಬಿ) ಸರಕುಗಳ ಮಾಲೀಕನು ಅಂಥ ತೆರಿಗೆ ಮತ್ತು ದಂಡವನ್ನು ಸಂದಾಯ ಮಾಡಲು ಮುಂದೆ ಬರದಿದ್ದಲ್ಲಿ, ಅನ್ವಯವಾಗುವ ತೆರಿಗೆ ಮತ್ತು ಅದರ ಮೇಲೆ ಸಂದಾಯ ಮಾಡಿದ ತೆರಿಗೆಯ ಮೊತ್ತವನ್ನು ಇಳಿಕೆ ಮಾಡಿದ ಸರಕುಗಳ ಮೌಲ್ಯದ ಶೇಕಡಾ ಐವತ್ತರಷ್ಟಕ್ಕೆ ಸಮನಾದ ದಂಡ ಸಂದಾಯವಾದ ಮೇಲೆ ಮತ್ತು ವಿನಾಯತಿ ಸರಕುಗಳ ಸಂದರ್ಭದಲ್ಲಿ

ಸರಕುಗಳ ಮೌಲ್ಯದ ಶೇಕಡ ಐದರಷ್ಟಕ್ಕೆ ಸಮನಾದ ಒಂದು ಮೊತ್ತ ಅಥವಾ ಇಪ್ಪತ್ತೈದು ಸಾವಿರ ರೂಪಾಯಿಗಳು, ಇವುಗಳಲ್ಲಿ ಯಾವುದು ಕಡಿಮೆಯೊ ಅದನ್ನು ಸಂದಾಯ ಮಾಡಿದ ಮೇಲೆ;

(ಸಿ) ಖಂಡ (ಎ) ಅಥವಾ ಖಂಡ (ಬಿ) ಅಡಿಯಲ್ಲಿ ಸಂದಾಯ ಮಾಡಬೇಕಾದ ಮೊತ್ತಕ್ಕೆ ಸಮನಾದ ಒಂದು ಭದ್ರತೆಯನ್ನು ನಿಯಮಿಸಬಹುದಾದ ಅಂಥ ನಮೂನೆ ಮತ್ತು ವಿಧಾನದಲ್ಲಿ ಒದಗಿಸಿದ ಮೇಲೆ,

–ಬಿಡುಗಡೆಗೊಳಿಸತಕ್ಕದ್ದು:

ಪರಂತು, ಸರಕುಗಳನ್ನು ಸಾಗಾಣಿಕೆ ಮಾಡುತ್ತಿರುವ ವ್ಯಕ್ತಿಗೆ ತಡೆಹಿಡಿಯುವಿಕೆಯ ಅಥವಾ ವಶಕ್ಕೆ ತೆಗೆದುಕೊಳ್ಳುವುದರ ಒಂದು ಆದೇಶವನ್ನು ಜಾರಿಗೊಳಿಸದೆ ಅಂಥ ಸರಕುಗಳು ಅಥವಾ ಸಾಗಾಣಿಕೆ ವಾಹನವನ್ನು ತಡೆಹಿಡಿಯುವುದು ಅಥವಾ ವಶಕ್ಕೆ ತೆಗೆದುಕೊಳ್ಳುವುದನ್ನು ಮಾಡತಕ್ಕದ್ದಲ್ಲ.

(2) ಸರಕುಗಳ ಅಥವಾ ಸಾಗಾಣಿಕೆ ವಾಹನದ ತಡೆಹಿಡಿಯುವಿಕೆಗಾಗಿ ಮತ್ತು ವಶಕ್ಕೆ ತೆಗೆದುಕೊಳ್ಳುವುದಕ್ಕಾಗಿ ಪ್ರಕರಣ 67ರ ಉಪಪ್ರಕರಣ (6)ರ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಡನೆ ಅನ್ವಯವಾಗತಕ್ಕದ್ದು.

(3) ಸರಕುಗಳು ಅಥವಾ ಸಾಗಾಣಿಕೆ ವಾಹನಗಳನ್ನು ತಡೆಹಿಡಿದಿರುವ ಅಥವಾ ವಶಕ್ಕೆ ತೆಗೆದುಕೊಂಡಿರುವ ಯುಕ್ತ ಅಧಿಕಾರಿಯು, ಸಂದಾಯ ಮಾಡಬೇಕಾದ ತೆರಿಗೆಯನ್ನು ಮತ್ತು ದಂಡವನ್ನು ನಿರ್ದಿಷ್ಟಪಡಿಸಿ ಒಂದು ಸೂಚನಾಪತ್ರವನ್ನು ನೀಡತಕ್ಕದ್ದು, ತದನಂತರ ಖಂಡ (ಎ) ಅಥವಾ ಖಂಡ (ಬಿ) ಅಥವಾ ಖಂಡ (ಸಿ)ಯ ಅಡಿಯಲ್ಲಿ ತೆರಿಗೆ ಮತ್ತು ದಂಡವನ್ನು ಸಂದಾಯ ಮಾಡುವುದಕ್ಕಾಗಿ ಆದೇಶವನ್ನು ಹೊರಡಿಸತಕ್ಕದ್ದು.

(4) ಸಂಬಂಧಿಸಿದ ವ್ಯಕ್ತಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಒಂದು ಯುಕ್ತ ಅವಕಾಶವನ್ನು ನೀಡಿದ ಹೊರತು ಉಪಪ್ರಕರಣ (3)ರ ಅಡಿಯಲ್ಲಿ ತೆರಿಗೆ, ಬಡ್ಡಿ ಅಥವಾ ದಂಡವನ್ನು ನಿರ್ಧರಿಸತಕ್ಕದ್ದಲ್ಲ.

(5) ಉಪಪ್ರಕರಣ (1)ರಲ್ಲಿ ಉಲ್ಲೇಖಿಸಿದ ಮೊತ್ತವು ಸಂದಾಯವಾದ ಮೇಲೆ, ಉಪಪ್ರಕರಣ (3)ರಲ್ಲಿ ನಿರ್ದಿಷ್ಟಪಡಿಸಿದ ಸೂಚನಾ ಪತ್ರಕ್ಕೆ ಸಂಬಂಧಿಸಿದಂತೆ ಎಲ್ಲಾ ನಡಾವಳಿಗಳು ಮುಕ್ತಾಯವಾಗಿವೆ ಎಂದು ಪರಿಭಾವಿಸತಕ್ಕದ್ದು.

(6) ಯಾವುದೇ ಸರಕುಗಳನ್ನು ಸಾಗಾಣಿಕೆ ಮಾಡುತ್ತಿರುವ ವ್ಯಕ್ತಿ ಅಥವಾ ಸರಕುಗಳ ಮಾಲೀಕನು ಉಪಪ್ರಕರಣ (1)ರಲ್ಲಿ ಉಪಬಂಧಿಸಿದಂತೆ ತೆರಿಗೆ ಮತ್ತು ದಂಡದ ಮೊತ್ತವನ್ನು, ಅಂಥ ತಡೆಹಿಡಿಯುವಿಕೆಯ ಅಥವಾ ವಶಕ್ಕೆ ತೆಗೆದುಕೊಂಡ ಏಳು ದಿನಗಳ ಒಳಗಾಗಿ ಸಂದಾಯ ಮಾಡಲು ವಿಫಲನಾದಲ್ಲಿ, ಪ್ರಕರಣ 130ರ ಉಪಬಂದಗಳಿಗೆ ಅನುಸಾರವಾಗಿ ಮುಂದುವರೆದ ನಡಾವಳಿಗಳನ್ನು ಪ್ರಾರಂಭಿಸತಕ್ಕದ್ದು:

ಪರಂತು, ತಡೆಹಿಡಿದ ಅಥವಾ ವಶಕ್ಕೆ ತೆಗೆದುಕೊಂಡ ಸರಕುಗಳು, ನಶಿಸಿಹೋಗುವ ಅಥವಾ ಗಂಡಾಂತರಕಾರಿ ಸ್ವರೂಪದಲ್ಲಿದ್ದಲ್ಲಿ, ಅಥವಾ ಕಾಲಾಂತರದಲ್ಲಿ ಮೌಲ್ಯದಲ್ಲಿ ಸವಕಳಿಯಾಗುವ ಸಂಭವವಿದ್ದಲ್ಲಿ, ಸದರಿ ಏಳು ದಿನಗಳ ಅವಧಿಯನ್ನು ಯುಕ್ತ ಅಧಿಕಾರಿಯಿಂದ ಇಳಿಕೆ ಮಾಡಬಹುದು.

130. ಸರಕುಗಳು ಅಥವಾ ಸಾಗಾಣಿಕೆ ವಾಹನಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಮತ್ತು ದಂಡ ವಿಧಿಸುವುದು.– (1) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಯಾವುದೇ ವ್ಯಕ್ತಿಯು–

(i) ತೆರಿಗೆಯ ಸಂದಾಯವನ್ನು ತಪ್ಪಿಸುವ ಉದ್ದೇಶದಿಂದ, ಈ ಅಧಿನಿಯಮದ ಯಾವುದೇ ಉಪಬಂಧಗಳು, ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳನ್ನು ಉಲ್ಲಂಘಿಸಿ ಯಾವುದೇ ಸರಕುಗಳನ್ನು ಪೂರೈಕೆ ಮಾಡಿದರೆ ಅಥವಾ ಸ್ವೀಕರಿಸಿದರೆ; ಅಥವಾ

(ii) ಈ ಅಧಿನಿಯಮದ ಅಡಿಯಲ್ಲಿ ಅವನು ತೆರಿಗೆ ಸಂದಾಯ ಮಾಡಲು ಬಾಧ್ಯನಿರುವ ಯಾವುದೇ ಸರಕುಗಳನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲದಿದ್ದರೆ; ಅಥವಾ

(iii) ಈ ಅಧಿನಿಯಮದ ಅಡಿಯಲ್ಲಿ ತೆರಿಗೆಗೆ ಬಾಧ್ಯವಾಗುವ ಯಾವುದೇ ಸರಕುಗಳನ್ನು ನೋಂದಣಿಗೆ ಅರ್ಜಿ ಸಲ್ಲಿಸದೇ ಪೂರೈಕೆ ಮಾಡಿದರೆ; ಅಥವಾ

(iv) ತೆರಿಗೆಯ ಸಂದಾಯವನ್ನು ತಪ್ಪಿಸುವ ಉದ್ದೇಶದಿಂದ, ಈ ಅಧಿನಿಯಮದ ಯಾವುದೇ ಉಪಬಂಧಗಳು, ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳನ್ನು ಉಲ್ಲಂಘಿಸಿದರೆ; ಅಥವಾ

(v) ಸ್ವತ: ಸಾಗಾಣಿಕೆ ವಾಹನದ ಮಾಲೀಕನ, ಅವನ ಏಜೆಂಟು ಯಾರಾದರೂ ಇದ್ದರೆ ಆತನ, ಮತ್ತು ಆ ಸಾಗಾಣಿಕೆ ವಾಹನದ ಪ್ರಭಾರದಲ್ಲಿರುವ ವ್ಯಕ್ತಿಯ ಗಮನಕ್ಕೆ ಬಾರದೇ ಅಥವಾ ಪರೋಕ್ಷ ಸಮ್ಮತಿಯಿಲ್ಲದೆ, ಅದನ್ನು ಉಪಯೋಗಿಸಲಾಗಿದೆ ಎಂದು ಸಾಗಾಣಿಕೆ ವಾಹನದ ಮಾಲೀಕನು ಸಾಬೀತುಪಡಿಸಿದ ಹೊರತಾಗಿ ಈ ಅಧಿನಿಯಮದ ಯಾವುದೇ ಉಪಬಂಧಗಳು, ಅಥವಾ ಇದರ ಅಡಿಯಲ್ಲಿ ಮಾಡಲಾದ ನಿಯಮಗಳನ್ನು ಉಲ್ಲಂಘಿಸಿ ಸಂಚಾರದ ಸಾಧನವಾಗಿ ಯಾವುದೇ ಸಾಗಾಣಿಕೆ ವಾಹನವನ್ನು ತೆರಿಗೆದಾಯಕ ಸರಕುಗಳನ್ನು ಸಾಗಿಸಲು ಉಪಯೋಗಿಸಿದರೆ,

–ಆಗ, ಎಲ್ಲಾ ಅಂಥ ಸರಕುಗಳು ಅಥವಾ ಸಾಗಾಣಿಕೆ ವಾಹನಗಳು ಮುಟ್ಟುಗೋಲಿಗೆ ಬಾಧ್ಯವಾಗತಕ್ಕದ್ದು ಮತ್ತು ಆ ವ್ಯಕ್ತಿಯು ಪ್ರಕರಣ 122ರ ಅಡಿಯಲ್ಲಿ ದಂಡಕ್ಕೆ ಬಾಧ್ಯನಿರತಕ್ಕದ್ದು.

(2) ಯಾವುದೇ ಸರಕುಗಳ ಅಥವಾ ಸಾಗಾಣಿಕೆ ವಾಹನದ ಮುಟ್ಟುಗೋಲು ಈ ಅಧಿನಿಯಮದ ಮೂಲಕ ಯಾವುದೇ ಸಂದರ್ಭದಲ್ಲಿ ಪ್ರಾಧಿಕೃತಗೊಂಡಾಗ, ಇದನ್ನು ನಿರ್ಣಯಿಸುವ ಅಧಿಕಾರಿಯು, ಸರಕುಗಳ ಮಾಲೀಕನಿಗೆ, ಮುಟ್ಟುಗೋಲಿಗೆ ಬದಲಾಗಿ, ಸದರಿ ಅಧಿಕಾರಿಯು ಸೂಕ್ತವೆಂದು ಯೋಚಿಸುವ ಅಂಥ ಜುಲ್ಮಾನೆಯನ್ನು ಸಂದಾಯ ಮಾಡುವ ಆಯ್ಕೆಯನ್ನು ನೀಡತಕ್ಕದ್ದು:

ಪರಂತು ಅಂಥ ಜುಲ್ಮಾನೆ, ಅದರ ಮೇಲೆ ವಿಧಿಸಬಹುದಾದ ತೆರಿಗೆಯನ್ನು ಕಳೆದ ಮುಟ್ಟುಗೋಲು ಹಾಕಿಕೊಳ್ಳಲಾದ ಸರಕುಗಳ ಮಾರುಕಟ್ಟೆಯ ಮೌಲ್ಯವನ್ನು ಮೀರತಕ್ಕದ್ದಲ್ಲ:

ಮತ್ತು ಪರಂತು, ವಿಧಿಸಬಹುದಾದ ಅಂಥ ಜುಲ್ಮಾನೆ ಮತ್ತು ದಂಡದ ಸಮಗ್ರ ಮೊತ್ತವು ಪ್ರಕರಣ 129ರ ಉಪಪ್ರಕರಣ (1)ರ ಅಡಿಯಲ್ಲಿ ವಿಧಿಸಬಹುದಾದ ದಂಡದ ಮೊತ್ತಕ್ಕಿಂತ ಕಡಿಮೆಯಿರತಕ್ಕದಲ್ಲ:

ಅಲ್ಲದೆ ಪರಂತು, ಯಾವುದೇ ಅಂಥ ಸಾಗಾಣಿಕೆ ವಾಹನವು ಬಾಡಿಗೆ ಮೇಲೆ ಸರಕುಗಳ ಅಥವಾ ಪ್ರಯಾಣಿಕರ ಸಾಗಾಣಿಕೆಗಾಗಿ ಉಪಯೋಗಿಸಿದ್ದಲ್ಲಿ, ಸಾಗಾಣಿಕೆ ವಾಹನದ ಮಾಲೀಕನಿಗೆ, ಸಾಗಾಣಿಕೆ ವಾಹನದ ಮುಟ್ಟುಗೋಲಿಗೆ ಬದಲಾಗಿ ಅದರಲ್ಲಿ ಸಾಗಾಣಿಕೆ ಮಾಡುತ್ತಿರುವ ಸರಕುಗಳ ಮೇಲೆ ಸಂದಾಯ ಮಾಡಬೇಕಾದ ತೆರಿಗೆಗೆ ಸಮನಾಂತರವಾದ ಶುಲ್ಕವನ್ನು ಸಂದಾಯ ಮಾಡುವ ಆಯ್ಕೆಯನ್ನು ನೀಡತಕ್ಕದ್ದು.

(3) ಉಪಪ್ರಕರಣ (2)ರ ಅಡಿಯಲ್ಲಿ ಸರಕುಗಳ ಅಥವಾ ಸಾಗಾಣಿಕೆ ವಾಹನದ ಮುಟ್ಟುಗೋಲಿಗೆ ಬದಲಾಗಿ ಯಾವುದೇ ಜುಲ್ಮಾನೆಯನ್ನು ವಿಧಿಸಿದ್ದಲ್ಲಿ, ಅಂಥ ಸರಕುಗಳ ಅಥವಾ ಸಾಗಾಣಿಕೆ ವಾಹನದ ಮಾಲೀಕ ಅಥವಾ ಉಪಪ್ರಕರಣ (1)ರ ಅಡಿಯಲ್ಲಿ ಉಲ್ಲೇಖಿಸಲಾದ ವ್ಯಕ್ತಿಯು, ಅದಕ್ಕೆ ಹೆಚ್ಚುವರಿಯಾಗಿ, ಅಂಥ ಸರಕುಗಳಿಗೆ ಅಥವಾ ಸಾಗಾಣಿಕೆ ವಾಹನಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಯಾವುದೇ ತೆರಿಗೆ, ದಂಡ ಮತ್ತು ವೆಚ್ಚಗಳಿಗೆ ಬಾಧ್ಯನಿರತಕ್ಕದ್ದು.

(4) ಆ ವ್ಯಕ್ತಿಗೆ ತನ್ನ ಅಹವಾಲುಗಳನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡದೆ, ಸರಕುಗಳು ಅಥವಾ ಸಾಗಾಣಿಕೆ ವಾಹನದ ಮುಟ್ಟುಗೋಲಿನ ಅಥವಾ ದಂಡ ವಿಧಿಸುವಿಕೆಯ ಆದೇಶವನ್ನು ಜಾರಿಗೊಳಿಸತಕ್ಕದ್ದಲ್ಲ.

(5) ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಸರಕುಗಳನ್ನು ಅಥವಾ ಸಾಗಾಣಿಕೆ ವಾಹನವನ್ನು ಮುಟ್ಟುಗೋಲು ಹಾಕಿಕೊಂಡಿದ್ದಲ್ಲಿ, ಅದಾದ ಕೂಡಲೇ, ಅಂಥ ಸರಕುಗಳು ಅಥವಾ ಸಾಗಾಣಿಕೆ ವಾಹನದ ಹಕ್ಕು ಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು.

(6) ಮುಟ್ಟುಗೋಲನ್ನು ನಿರ್ಣಯಿಸುವ ಯುಕ್ತ ಅಧಿಕಾರಿ ಮುಟ್ಟುಗೋಲು ಮಾಡಲಾಗಿರುವ ವಸ್ತುಗಳನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಸ್ವಾಧೀನತೆಯನ್ನು ಹೊಂದಿರತಕ್ಕದ್ದು ಹಾಗೂ ಅಂಥ ಯುಕ್ತ ಅಧಿಕಾರಿಯ ಕೋರಿಕೆಯ ಮೇರೆಗೆ ಪ್ರತಿಯೊಬ್ಬ ಪೋಲೀಸು ಅಧಿಕಾರಿಯು, ಅಂಥ ಸ್ವಾಧೀನತೆಯನ್ನು ತೆಗೆದುಕೊಳ್ಳಲು ಮತ್ತು ಹೊಂದಲು ನೆರವು ನೀಡತಕ್ಕದ್ದು.

(7) ಯುಕ್ತ ಅಧಿಕಾರಿಯು, ಮುಟ್ಟುಗೋಲು ಹಾಕಿಕೊಳ್ಳಲಾದ ಸರಕುಗಳು ಅಥವಾ ಸಾಗಾಣಿಕೆ ವಾಹನವು ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಇತರ ನಡಾವಳಿಗಾಗಿ ಅಗತ್ಯವಿರುವುದಿಲ್ಲ ಎಂದು ಸ್ವತಃ ಮನದಟ್ಟು ಮಾಡಿಕೊಂಡ ನಂತರ ಮತ್ತು ಮುಟ್ಟುಗೋಲಿಗೆ ಬದಲಾಗಿ ಜುಲ್ಮಾನೆಯನ್ನು ಸಂದಾಯ ಮಾಡಲು ಮೂರು ತಿಂಗಳುಗಳು ಮೀರದ ಸಮಂಜಸ ಸಮಯವನ್ನು ನೀಡಿದ ನಂತರ, ಅಂಥ ಸರಕುಗಳು ಅಥವಾ ಸಾಗಾಣಿಕೆ ವಾಹನವನ್ನು ಏಲೇ ಮಾಡಬಹದು ಮತ್ತು ಅದರ ಮಾರಾಟದ ಉತ್ಪತ್ತಿಯನ್ನು ಸರ್ಕಾರದಲ್ಲಿ ಠೇವಣಿಗೊಳಿಸುವುದು.

131. ಮುಟ್ಟುಗೋಲು ಅಥವಾ ದಂಡ, ಇತರ ದಂಡನೆಗಳಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ.– ಅಪರಾಧ ಪ್ರಕ್ರಿಯೆ ಸಂಹಿತೆ, 1973ರ (1974ರ ಕೇಂದ್ರ ಅಧಿನಿಯಮ 2) ಅಧಿನಿಯಮದಲ್ಲಿ ಒಳಗೊಂಡಿರುವ ಉಪಬಂಧಗಳಿಗೆ ಬಾಧಕವಾಗದಂತೆ, ಈ ಅಧಿನಿಯಮದ ಉಪಬಂಧಗಳ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿ ಮಾಡಿದ ಮುಟ್ಟುಗೋಲು ಅಥವಾ ವಿಧಿಸಿದ ದಂಡವು, ಈ ಅಧಿನಿಯಮದ ಅಡಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನ ಅಡಿಯಲ್ಲಿ ಆ ಮೂಲಕ ಬಾಧಿತನಾದ ವ್ಯಕ್ತಿಯ ಮೇಲೆ ಯಾವುದೇ ಇತರ ದಂಡನೆಗಳ ವಿಧಿಸುವಿಕೆಯನ್ನು ಪ್ರತಿಬಂಧಿಸತಕ್ಕದ್ದಲ್ಲ.

132. ಕೆಲವೊಂದು ಅಪರಾಧಗಳಿಗೆ ದಂಡನೆಗಳು.– (1) ಕೆಳಕಂಡ ಯಾವುದೇ ಅಪರಾಧಗಳನ್ನು ಯಾರಾದರೂ ಮಾಡಿದರೆ, ಎಂದರೆ–

(ಎ) ತೆರಿಗೆಯನ್ನು ತಪ್ಪಿಸುವ ಉದ್ದೇಶದೊಂದಿಗೆ, ಈ ಅಧಿನಿಯಮದ ಉಪಬಂಧಗಳನ್ನು ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳನ್ನು ಉಲ್ಲಂಘಿಸಿ, ಯಾವುದೇ ಬೆಲೆಪಟ್ಟಿಯನ್ನು ನೀಡದೆ ಯಾವುದೇ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆ ಮಾಡುವುದು;

(ಬಿ) ಈ ಅಧಿನಿಯಮದ ಉಪಬಂಧಗಳನ್ನು ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳನ್ನು ಉಲ್ಲಂಘಿಸಿ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆ ಮಾಡದೆ, ಹೂಡುವಳಿ ತೆರಿಗೆ ಜಮೆಯನ್ನು ಅಕ್ರಮವಾಗಿ ತೆಗೆದುಕೊಳ್ಳುವಿಕೆಗೆ ಅಥವಾ ಉಪಯೋಗಿಸುವಿಕೆಗೆ ಅಥವಾ ತೆರಿಗೆಯ ಮರುಪಾವತಿಗೆ ಕಾರಣವಾಗುವ ಯಾವುದೇ ಬೆಲೆಪಟ್ಟಿ ಅಥವಾ ಬಿಲ್ಲನ್ನು, ನೀಡುವುದು;

(ಸಿ) ಖಂಡ (ಬಿ)ಯಲ್ಲಿ ಉಲ್ಲೇಖಿಸಲಾದ ಅಂಥ ತೆರಿಗೆ ಬೆಲೆಪಟ್ಟಿ ಅಥವಾ ಬಿಲ್ಲನ್ನು ಬಳಸಿ ಹೂಡುವಳಿ ತೆರಿಗೆ ಜಮೆಯನ್ನು ತೆಗೆದುಕೊಳ್ಳುವುದು;

(ಡಿ) ತೆರಿಗೆ ಎಂದು ಯಾವುದೇ ಮೊತ್ತವನ್ನು ಸಂಗ್ರಹಿಸುವುದು ಆದರೆ ಅದನ್ನು ಸರ್ಕಾರಕ್ಕೆ ಸಂದಾಯ ಮಾಡಲು ಅಂಥ ಸಂದಾಯವು ಬಾಕಿಯಾಗುವ ದಿನಾಂಕದಿಂದ ಮೂರು ತಿಂಗಳು ಅವಧಿಯನ್ನು ಮೀರಿದ ನಂತರವೂ ವಿಫಲವಾಗುವುದು;

(ಇ) ತೆರಿಗೆಯನ್ನು ತಪ್ಪಿಸುವುದು, ಮೋಸದಿಂದ ಹೂಡುವಳಿ ತೆರಿಗೆ ಜಮೆಯನ್ನು ತೆಗೆದುಕೊಳ್ಳುವುದು ಅಥವಾ ಮೋಸದಿಂದ ಮರುಪಾವತಿಯನ್ನು ಪಡೆಯುವುದು ಮತ್ತು ಅಂಥ ಅಪರಾಧವು ಖಂಡಗಳಾದ (ಎ) ಯಿಂದ (ಡಿ)ಗಳ ಅಡಿಯಲ್ಲಿ ವ್ಯಾಪ್ತವಾಗಿಲ್ಲದಿರುವುದು;

(ಎಫ್) ಈ ಅಧಿನಿಯಮದ ಅಡಿಯಲ್ಲಿ ಬಾಕಿಯಿರುವ ತೆರಿಗೆಯ ಸಂದಾಯವನ್ನು ತಪ್ಪಿಸುವ ಉದ್ದೇಶದಿಂದ ಹಣಕಾಸಿನ ದಾಖಲೆಗಳನ್ನು ಸುಳ್ಳು ಮಾಡಿದಲ್ಲಿ ಅಥವಾ ಬದಲಾಗಿ ಸೇರಿಸಿದಲ್ಲಿ, ಅಥವಾ ನಕಲಿ ಲೆಕ್ಕಪತ್ರಗಳು ಅಥವಾ ದಸ್ತಾವೇಜುಗಳನ್ನು ಹಾಜರುಪಡಿಸಿದಲ್ಲಿ ಅಥವಾ ಯಾವುದೇ ಸುಳ್ಳಾದ ಮಾಹಿತಿಯನ್ನು ಒದಗಿಸುವುದು;

(ಜಿ) ಈ ಅಧಿನಿಯಮದ ಅಡಿಯಲ್ಲಿ ತನ್ನ ಕರ್ತವ್ಯದ ನಿರ್ವಹಣೆಯಲ್ಲಿರುವ ಯಾವುದೇ ಅಧಿಕಾರಿಯನ್ನು ಅಡ್ಡಿಪಡಿಸುವುದು ಅಥವಾ ಪ್ರತಿಬಂಧಿಸುವುದು;

(ಹೆಚ್) ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿ ಮುಟ್ಟುಗೋಲಿಗೆ ಬಾಧ್ಯವಾಗಬಹುದು ಎಂದು ಅವನಿಗೆ ತಿಳಿದಿರುವ ಅಥವಾ ನಂಬಲು ಕಾರಣಗಳನ್ನು ಹೊಂದಿರುವಂತಹ ಯಾವುದೇ ಸರಕುಗಳ ಸ್ವಾಧೀನತೆಯನ್ನು ಅರ್ಜಿಸುವ, ಅಥವಾ ಅವುಗಳ ಸಾಗಾಣಿಕೆ, ತೆಗೆಯುವಿಕೆ, ನಿಕ್ಷೇಪಿಸುವಿಕೆ, ಇಟ್ಟುಕೊಳ್ಳುವಿಕೆ, ಮುಚ್ಚಿಟ್ಟುಕೊಳ್ಳುವಿಕೆ, ಅಥವಾ ಖರೀದಿಸುವಿಕೆ ಅಥವಾ ಯಾವುದೇ ಇತರೆ ವಿಧಾನದಲ್ಲಿ ಸ್ವತಃ ವ್ಯವಹರಿಸಿರುವುದು;

(ಐ) ಈ ಅಧಿನಿಯಮದ ಯಾವುದೇ ಉಪಬಂಧಗಳ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಉಲ್ಲಂಘನೆಯಾಗುತ್ತದೆ ಎಂದು ಅವನಿಗೆ ತಿಳಿದಿರುವ ಅಥವಾ ನಂಬಲು ಕಾರಣಗಳನ್ನು ಹೊಂದಿರುವಂತಹ ಸೇವೆಗಳ ಪೂರೈಕೆಯನ್ನು ಸ್ವೀಕರಿಸಿರುವ ಅಥವಾ ಯಾವುದೇ ವಿಧಾನದಲ್ಲಿ ಪೂರೈಕೆಯೊಂದಿಗೆ ಸ್ವತಃ ತಾನು ಸಂಬಂಧಿಸಿರುವ ಅಥವಾ ಯಾವುದೇ ಇತರೆ ವಿಧಾನದಲ್ಲಿ ವ್ಯವಹರಿಸಿರುವುದು;

(ಜೆ) ಯಾವುದೇ ಮುಖ್ಯ ಪುರಾವೆಯನ್ನು ಅಥವಾ ದಸ್ತಾವೇಜುಗಳನ್ನು ಅಕ್ರಮವಾಗಿ ತಿದ್ದುವುದು ಅಥವಾ ನಾಶಮಾಡುವುದು;

(ಕೆ) ಈ ಅಧಿನಿಯಮದ ಉಪಬಂಧಗಳ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿ ಅವನು ಪೂರೈಸುವುದು ಅಗತ್ಯವಿರುವಂತಹ ಯಾವುದೇ ಮಾಹಿತಿಯನ್ನು ಪೂರೈಸುವಲ್ಲಿ ವಿಫಲನಾಗುವುದು (ಯುಕ್ತವಾದ ನಂಬಿಕೆಯೊಂದಿಗೆ, ಆತನಿಂದ ಪೂರೈಸಲ್ಪಟ್ಟ ಮಾಹಿತಿಯು ಸತ್ಯ ಎಂಬುದನ್ನು ರುಜುವಾತು ಪಡಿಸುವ ಹೊಣೆಗಾರಿಕೆಯು ಅವನ ಮೇಲಿರತಕ್ಕದ್ದು ಎಂಬುದರ ಹೊರತು) ಅಥವಾ ಸುಳ್ಳು ಮಾಹಿತಿಯನ್ನು ಪೂರೈಸುವುದು;

(ಎಲ್) ಈ ಪ್ರಕರಣದ ಖಂಡಗಳಾದ (ಎ) ಯಿಂದ (ಕೆ)ಗಳಲ್ಲಿ ನಮೂದಿಸಿದ ಯಾವುದೇ ಅಪರಾಧಗಳನ್ನು ಮಾಡಲು ಪ್ರಯತ್ನಿಸುವುದು, ಮತ್ತು ದುಷ್ಪ್ರೇರಿಸುವ ಕೃತ್ಯ ಮಾಡುವುದು,

– ಈ ಕೆಳಕಂಡಂತೆ ದಂಡನೀಯನಾಗಿರತಕ್ಕದ್ದು

(i) ತಪ್ಪಿಸಲಾದ ತೆರಿಗೆಯ ಮೊತ್ತವು ಅಥವಾ ಅಕ್ರಮವಾಗಿ ತೆಗೆದುಕೊಂಡ ಅಥವಾ ಬಳಸಿದ ಹೂಡುವಳಿ ತೆರಿಗೆ ಜಮೆಯ ಮೊತ್ತವು ಅಥವಾ ಅಕ್ರಮವಾಗಿ ತೆಗೆದುಕೊಂಡ ಮರುಪಾವತಿಯ ಮೊತ್ತವು ಐದು ನೂರು ಲಕ್ಷ ರೂಪಾಯಿಗಳನ್ನು ಮೀರಿದ ಸಂದರ್ಭಗಳಲ್ಲಿ, ಐದು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾಗೃಹವಾಸ ಮತ್ತು ಜೊತೆಗೆ ಜುಲ್ಮಾನೆ;

(ii) ತಪ್ಪಿಸಲಾದ ತೆರಿಗೆಯ ಮೊತ್ತವು ಅಥವಾ ಅಕ್ರಮವಾಗಿ ತೆಗೆದುಕೊಂಡ ಅಥವಾ ಬಳಸಿದ ಹೂಡುವಳಿ ತೆರಿಗೆ ಜಮೆಯ ಮೊತ್ತವು ಅಥವಾ ಅಕ್ರಮವಾಗಿ ತೆಗೆದುಕೊಂಡ ಮರುಪಾವತಿಯ ಮೊತ್ತವು ಎರಡು ನೂರು ಲಕ್ಷ ರೂಪಾಯಿಗಳನ್ನು ಮೀರಿದ ಆದರೆ ಐದು ನೂರು ಲಕ್ಷ ರೂಪಾಯಿಗಳನ್ನು ಮೀರಿರದ ಸಂದರ್ಭಗಳಲ್ಲಿ, ಮೂರು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾಗೃಹವಾಸ ಮತ್ತು ಜೊತೆಗೆ ಜುಲ್ಮಾನೆ;

(iii) ತಪ್ಪಿಸಲಾದ ತೆರಿಗೆಯ ಮೊತ್ತವು ಅಥವಾ ಅಕ್ರಮವಾಗಿ ತೆಗೆದುಕೊಂಡ ಅಥವಾ ಬಳಸಿದ ಹೂಡುವಳಿ ತೆರಿಗೆ ಜಮೆಯ ಮೊತ್ತವು ಅಥವಾ ಅಕ್ರಮವಾಗಿ ತೆಗೆದುಕೊಂಡ ಮರುಪಾವತಿಯ ಮೊತ್ತವು ಒಂದು ನೂರು ಲಕ್ಷ ರೂಪಾಯಿಗಳನ್ನು ಮೀರಿದ ಆದರೆ ಎರಡು ನೂರು ಲಕ್ಷ ರೂಪಾಯಿಗಳನ್ನು ಮೀರಿರದ ಯಾವುದೇ ಇತರ ಅಪರಾಧದ ಸಂದರ್ಭದಲ್ಲಿ, ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾಗೃಹವಾಸ ಮತ್ತು ಜೊತೆಗೆ ಜುಲ್ಮಾನೆ;

(iv) ಅವನು ಖಂಡ (ಎಫ್) ಅಥವಾ ಖಂಡ (ಜಿ) ಅಥವಾ ಖಂಡ (ಜೆ)ಯಲ್ಲಿ ನಿರ್ದಿಷ್ಟಪಡಿಸಿದ ಒಂದು ಅಪರಾಧವನ್ನು ಮಾಡಿದ ಮತ್ತು ದುಷ್ಪ್ರೇರಿಸುವ ಕೃತ್ಯ ಮಾಡಿದ ಸಂದರ್ಭಗಳಲ್ಲಿ ಅವನು, ಆರು ತಿಂಗಳ ಅವಧಿಯವರಗೆ ವಿಸ್ತರಿಸಬಹುದಾದ ಕಾರಾಗೃಹವಾಸ ಅಥವಾ ಜೊತೆಗೆ ಜುಲ್ಮಾನೆ ಅಥವಾ ಅವುಗಳೆರಡು.

(2) ಈ ಪ್ರಕರಣದ ಅಡಿಯಲ್ಲಿನ ಒಂದು ಅಪರಾಧದ ಅಪರಾಧಿ ಎಂದು ನಿರ್ಣಯಿತನಾಗಿರುವ ಯಾವುದೇ ವ್ಯಕ್ತಿಯು, ಪುನ: ಈ ಪ್ರಕರಣದ ಅಡಿಯಲ್ಲಿನ ಒಂದು ಅಪರಾಧದ ಅಪರಾಧಿ ಎಂದು ನಿರ್ಣಿಯಿತನಾದಲ್ಲಿ, ಆಗ, ಅವನು ಎರಡನೇ ಮತ್ತು ತರುವಾಯದ ಪ್ರತಿಯೊಂದು ಅಪರಾಧಕ್ಕಾಗಿ ಐದು ವರ್ಷಗಳ ಅವಧಿಯವರಗೆ ವಿಸ್ತರಿಸಬಹುದಾದ ಕಾರಾಗೃಹವಾಸ ಮತ್ತು ಜೊತೆಗೆ ಜುಲ್ಮಾನೆಗೆ ದಂಡನೀಯನಾಗಿರತಕ್ಕದ್ದು;

(3) ಉಪಪ್ರಕರಣ (1)ರ ಖಂಡಗಳಾದ (i), (ii) ಮತ್ತು (iii)ರಲ್ಲಿ ಹಾಗೂ ಉಪಪ್ರಕರಣ (2)ರಲ್ಲಿ ಉಲ್ಲೇಖಿಸಲಾದ ಕಾರಾಗೃಹವಾಸವು, ನ್ಯಾಯಾಲಯದ ತೀರ್ಪಿನಲ್ಲಿ ದಾಖಲಿಸಬೇಕಾದ, ತದ್ವಿರುದ್ದವಾದ ವಿಶೇಷ ಮತ್ತು ಸಾಕಷ್ಟು ಕಾರಣಗಳಿಲ್ಲದಿದ್ದಾಗ ಆರು ತಿಂಗಳುಗಳಿಗಿಂತ ಕಡಿಮೆ ಅವಧಿಗೆ ಇರತಕ್ಕದ್ದಲ್ಲ.

(4) ದಂಡ ಪ್ರಕ್ರಿಯಾ ಸಂಹಿತೆ, 1973ರಲ್ಲಿ (1974ರ ಕೇಂದ್ರ ಅಧಿನಿಯಮ 2) ಏನೇ ಒಳಗೊಂಡಿದ್ದರೂ, ಉಪಪ್ರಕರಣ (5)ರಲ್ಲಿ ಉಲ್ಲೇಖಿಸಲಾಗಿರುವ ಅಪರಾಧಗಳನ್ನು ಹೊರತುಪಡಿಸಿ ಈ ಅಧಿನಿಯಮದ ಅಡಿಯಲ್ಲಿನ ಎಲ್ಲಾ ಅಪರಾಧಗಳು ಅಸಂಜ್ಞೇಯವಾಗಿರತಕ್ಕದ್ದು ಮತ್ತು ಜಾಮೀನೀಯವಾಗಿರತಕ್ಕದ್ದು.

(5) ಉಪಪ್ರಕರಣ (1)ರ ಖಂಡ (ಎ) ಅಥವಾ ಖಂಡ (ಬಿ)ಅಥವಾ ಖಂಡ (ಸಿ) ಅಥವಾ ಖಂಡ (ಡಿ)ಗಳಲ್ಲಿ ನಿರ್ದಿಷ್ಟಪಡಿಸಿದ ಮತ್ತು ಆ ಉಪ–ಪ್ರಕರಣದ ಖಂಡ (i)ರ ಅಡಿಯಲ್ಲಿ ದಂಡನೀಯವಾದ ಅಪರಾಧಗಳು ಸಂಜ್ಞೇಯವಾಗಿರತಕ್ಕದ್ದು ಮತ್ತು ಜಾಮೀನುರಹಿತವಾಗಿರತಕ್ಕದ್ದು.

(6) ಆಯುಕ್ತರ ಪೂರ್ವ ಮಂಜೂರಾತಿಯ ಹೊರತಾಗಿ, ಈ ಪ್ರಕರಣದ ಅಡಿಯಲ್ಲಿನ ಯಾವುದೇ ಅಪರಾಧಕ್ಕಾಗಿ ಒಬ್ಬ ವ್ಯಕ್ತಿಯನ್ನು ಅಭಿಯೋಜಿಸತಕ್ಕದ್ದಲ್ಲ.

ವಿವರಣೆ:– ಈ ಪ್ರಕರಣದ ಉದ್ದೇಶಗಳಿಗಾಗಿ, **"ತೆರಿಗೆ"** ಪದ, ಈ ಅಧಿನಿಯಮದ, ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ, ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ತಪ್ಪಿಸಲಾದ ತೆರಿಗೆಯ ಮೊತ್ತ ಅಥವಾ ಅಕ್ರಮವಾಗಿ ತೆಗೆದುಕೊಂಡ ಅಥವಾ ಬಳಸಿದ ಹೂಡುವಳಿ ತೆರಿಗೆ ಜಮೆಯ ಮೊತ್ತ ಅಥವಾ ಅಕ್ರಮವಾಗಿ ತೆಗೆದುಕೊಂಡ ಮರುಪಾವತಿ ಮತ್ತು ಸರಕು ಅಥವಾ ಸೇವೆಗಳ ತೆರಿಗೆ (ರಾಜ್ಯಗಳಿಗೆ ಪರಿಹಾರ) ಅಧಿನಿಯಮದ ಅಡಿಯಲ್ಲಿ ವಿಧಿಸಿದ ಉಪಕರವನ್ನು ಒಳಗೊಳ್ಳತಕ್ಕದ್ದು.

133. ಅಧಿಕಾರಿಗಳ ಮತ್ತು ಕೆಲವು ಇತರ ವ್ಯಕ್ತಿಗಳ ಬಾಧ್ಯತೆ.– (1) ಪ್ರಕರಣ 151ರ ಅಡಿಯಲ್ಲಿ ಅಂಕಿ ಅಂಶಗಳ ಸಂಗ್ರಹಣೆ ಅಥವಾ ಅವುಗಳ ಕ್ರೂಢೀಕರಣ ಅಥವಾ ಗಣಕೀಕರಣದ ಸಂಬಂಧದಲ್ಲಿ ತೊಡಗಿರುವ ಯಾವುದೇ ವ್ಯಕ್ತಿಯು, ಅಥವಾ ಪ್ರಕರಣ 150ರ ಉಪಪ್ರಕರಣ (1)ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಮಾಹಿತಿಯ ಸಂಪರ್ಕಾವಕಾಶವನ್ನು ಹೊಂದಿರುವ ರಾಜ್ಯ ತೆರಿಗೆಯ ಯಾವುದೇ ಅಧಿಕಾರಿ, ಅಥವಾ ಸಾಮಾನ್ಯ ಪೋರ್ಟಲ್ ಮೇಲೆ ಸೇವೆಯ ಒದಗಿಸುವಿಕೆಗೆ ಸಂಬಂಧಿಸಿದಂತೆ ತೊಡಗಿರುವ ಯಾವುದೇ ವ್ಯಕ್ತಿಯು, ಅಥವಾ ಸಾಮಾನ್ಯ ಪೋರ್ಟಲ್‌ನ ಏಜೆಂಟು, ಸದರಿ ಪ್ರಕರಣಗಳ ಅಡಿಯಲ್ಲಿ ಆತನ ಕರ್ತವ್ಯ ನಿರ್ವಹಣೆಯಲ್ಲಿ ಅಥವಾ ಈ ಅಧಿನಿಯಮದ ಅಡಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಅಧಿನಿಯಮದ ಅಡಿಯಲ್ಲಿ ಒಂದು ಅಪರಾಧಕ್ಕಾಗಿ ಅಭಿಯೋಜನೆಯ ಉದ್ದೇಶಗಳಿಗಾಗಿಯಲ್ಲದೆ ಅನ್ಯಥಾ ಯಾವುದೇ ಮಾಹಿತಿಯನ್ನು ಅಥವಾ ಈ ಅಧಿನಿಯಮದ ಅಡಿಯಲ್ಲಿ ಅಥವಾ ಇದರ ಅಡಿಯಲ್ಲಿ ಮಾಡಿದ ನಿಯಮಗಳ ಅಡಿಯಲ್ಲಿ ಒದಗಿಸಿದ ಯಾವುದೇ ರಿಟರ್ನನ ಒಳಾಂಶಗಳನ್ನು, ಉದ್ದೇಶಪೂರ್ವಕವಾಗಿ ಬಹಿರಂಗಪಡಿಸಿದರೆ, ಅವನು ಆರು ತಿಂಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾಗೃಹವಾಸ ಮತ್ತು ಜೊತೆಗೆ ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಗೆ ಅಥವಾ ಅವುಗಳೆರಡಕ್ಕೂ ದಂಡನೀಯನಾಗಿರತಕ್ಕದ್ದು;

(2) ಯಾವುದೇ ವ್ಯಕ್ತಿಯನ್ನು–

(ಎ) ಸರ್ಕಾರಿ ನೌಕರನಾಗಿರುವಾಗ, ಈ ಪ್ರಕರಣದ ಅಡಿಯಲ್ಲಿ ಯಾವುದೇ ಅಪರಾಧಕ್ಕಾಗಿ ಸರ್ಕಾರದ ಪೂರ್ವ ಮಂಜೂರಾತಿಯ ಹೊರತಾಗಿ ಅಭಿಯೋಜಿಸತಕ್ಕದ್ದಲ್ಲ;

(ಬಿ) ಸರ್ಕಾರಿ ನೌಕರನಾಗಿಲ್ಲದಿರುವಾಗ, ಈ ಪ್ರಕರಣದ ಅಡಿಯಲ್ಲಿ ಯಾವುದೇ ಅಪರಾಧಕ್ಕಾಗಿ ಆಯುಕ್ತರ ಪೂರ್ವ ಮಂಜೂರಾತಿಯ ಹೊರತಾಗಿ ಅಭಿಯೋಜಿಸತಕ್ಕದ್ದಲ್ಲ.

134. ಅಪರಾಧಗಳ ಸಂಜ್ಞೇಯತೆ.– ಯಾವುದೇ ನ್ಯಾಯಾಲಯವು ಆಯುಕ್ತರ ಪೂರ್ವ ಮಂಜೂರಾತಿಯ ಹೊರತಾಗಿ ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ಮಾಡಿದ ನಿಯಮಗಳ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧಗಳ ಸಂಜ್ಞೇಯತೆಯನ್ನು ತೆಗೆದುಕೊಳ್ಳತಕ್ಕದ್ದಲ್ಲ, ಮತ್ತು ಪ್ರಥಮ ದರ್ಜೆಯ ಮ್ಯಾಜಿಸ್ಟ್ರೇಟ್‌ಗಿಂತ ಕೆಳದರ್ಜೆಯ ಯಾವುದೇ ನ್ಯಾಯಾಲಯವು ಅಂಥ ಯಾವುದೇ ಅಪರಾಧವನ್ನು ಅಧಿವಿಚಾರಣೆ ಮಾಡತಕ್ಕದ್ದಲ್ಲ.

135. ಅಪರಾಧಿಕ ಮನಸ್ಥಿತಿಯ ಬಗ್ಗೆ ಪೂರ್ವಭಾವನೆ.– ಆಪಾದಿತನ ಕಡೆಯಿಂದ ಅಪರಾಧಿಕ ಮನಸ್ಥಿತಿಯನ್ನು ಅಗತ್ಯಪಡಿಸುವಂತಹ ಈ ಅಧಿನಿಯಮದ ಅಡಿಯಲ್ಲಿನ ಒಂದು ಅಪರಾಧಕ್ಕಾಗಿರುವ ಯಾವುದೇ ಅಭಿಯೋಜನೆಯಲ್ಲಿ, ನ್ಯಾಯಾಲಯವು ಅಂಥ ಮನಸ್ಥಿತಿಯ ಇರುವಿಕೆಯನ್ನು ಪೂರ್ವಭಾವಿಸತಕ್ಕದ್ದು ಆದರೆ ಇದು ಆಪಾದಿತನಿಗೆ, ಅವನು ಆ ಅಭಿಯೋಜನೆಯಲ್ಲಿ ಒಂದು ಅಪರಾಧವೆಂದು ಆಪಾದಿಸಿದ ಕೃತ್ಯಕ್ಕೆ ಸಂಬಂಧಿಸಿದಂತೆ ಅಂಥ ಮನಸ್ಥಿತಿಯನ್ನು ಹೊಂದಿರಲಿಲ್ಲ ಎನ್ನುವ ಸಂಗತಿಯನ್ನು ರುಜುವಾತು ಪಡಿಸುವುದಕ್ಕಾಗಿ ಪ್ರತಿರಕ್ಷೆಯಾಗಿರತಕ್ಕದ್ದು.

ವಿವರಣೆ:– ಈ ಪ್ರಕರಣದ ಉದ್ದೇಶಗಳಿಗಾಗಿ,–

(i) **"ಅಪರಾಧಿಕ ಮನಸ್ಥಿತಿ"** ಪದಾವಳಿಯು, ಒಂದು ಸಂಗತಿಯ ಉದ್ದೇಶ, ಪ್ರೇರಣೆ, ತಿಳುವಳಿಕೆ, ಮತ್ತು ಒಂದು ಸಂಗತಿಯಲ್ಲಿ ನಂಬಿಕೆ, ಅಥವಾ ನಂಬುವುದಕ್ಕೆ ಕಾರಣವನ್ನು ಒಳಗೊಳ್ಳುತ್ತದೆ.

(ii) ಒಂದು ಸಂಗತಿಯು ರುಜುವಾತಾಗಿದೆ ಎಂದು ಹೇಳುವುದು, ಅದನ್ನು ನ್ಯಾಯಾಲಯ ಸಂದೇಹಾತೀತವಾಗಿ ಅಸ್ಥಿತ್ವದಲ್ಲಿದೆ ಎಂದು ನಂಬಿದಾಗ ಮತ್ತು ಅದರ ಅಸ್ಥಿತ್ವವು ಕೇವಲ ಸಂಭವನೀಯತೆಯ ಬಾಹುಳ್ಯತೆಯಿಂದ ಸ್ಥಾಪಿತವಾಗಿಲ್ಲ ಎಂದಾಗ ಮಾತ್ರ.

136. ಕೆಲವು ಸನ್ನಿವೇಶಗಳ ಅಡಿಯಲ್ಲಿ ಹೇಳಿಕೆಗಳ ಸುಸಂಬದ್ಧತೆ.– ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ವಿಚಾರಣೆ ಅಥವಾ ನಡಾವಳಿಗಳ ಕ್ರಮದಲ್ಲಿ ಪ್ರಕರಣ 70ರ ಅಡಿಯಲ್ಲಿ ನೀಡಿದ ಸಮನ್‌ಗೆ ಪ್ರತಿಕ್ರಿಯೆಯಾಗಿ ಹಾಜರಾದ ಒಬ್ಬ ವ್ಯಕ್ತಿಯಿಂದ ನೀಡಿದ ಮತ್ತು ಸಹಿಮಾಡಿದ ಒಂದು ಹೇಳಿಕೆಯು, ಈ ಅಧಿನಿಯಮದ ಅಡಿಯಲ್ಲಿನ ಒಂದು ಅಪರಾಧಕ್ಕಾಗಿರುವ ಯಾವುದೇ ಅಭಿಯೋಜನೆಯಲ್ಲಿ, ಅದು ಒಳಗೊಂಡಿರುವ ಸಂಗತಿಗಳ ಸತ್ಯತೆಯನ್ನು ರುಜುವಾತು ಪಡಿಸುವ ಉದ್ದೇಶಕ್ಕಾಗಿ ಸುಸಂಬದ್ಧವಾಗಿರತಕ್ಕದ್ದು.–

(ಎ) ಹೇಳಿಕೆಯನ್ನು ಮಾಡಿದ ವ್ಯಕ್ತಿ ಮರಣ ಹೊಂದಿರುವಾಗ, ಅಥವಾ ಕಾಣೆಯಾಗಿದ್ದಾಗ, ಅಥವಾ ಪುರಾವೆಯನ್ನು ನೀಡಲು ಅಸಮರ್ಥನಿರುವಾಗ, ಅಥವಾ ಪ್ರತಿಕೂಲ ವ್ಯಕ್ತಿಯಿಂದ ಹೊರಗಿಟ್ಟಾಗ, ಅಥವಾ ಯಾರ

ಹಾಜರಾತಿಯನ್ನು, ಪ್ರಕರಣದ ಸನ್ನಿವೇಶಗಳ ಅಡಿಯಲ್ಲಿ, ನ್ಯಾಯಾಲಯ ಅನುಚಿತ ಎಂದು ಪರಿಗಣಿಸಿದ ಪ್ರಮಾಣದ ವಿಳಂಬ ಅಥವಾ ವೆಚ್ಚವಿಲ್ಲದೆ, ಪಡೆಯಲು ಸಾಧ್ಯವಿರದಿದ್ದಾಗ;

(ಬಿ) ಹೇಳಿಕೆಯನ್ನು ನೀಡಿದ ವ್ಯಕ್ತಿಯನ್ನು ಪ್ರಕರಣದಲ್ಲಿ ನ್ಯಾಯಾಲಯದ ಮುಂದೆ ಸಾಕ್ಷಿದಾರನಂತೆ ವಿಚಾರಣೆ ಮಾಡಿದಾಗ ಮತ್ತು ನ್ಯಾಯಾಲಯವು, ಪ್ರಕರಣದ ಸನ್ನಿವೇಶಗಳನ್ನು ಗಮನದಲ್ಲಿಟ್ಟುಕೊಂಡು, ನ್ಯಾಯದ ಹಿತಾಸಕ್ತಿಯಿಂದ ಹೇಳಿಕೆಯನ್ನು ಸಾಕ್ಷ್ಯದಲ್ಲಿ ಅಂಗೀಕರಿಸತಕ್ಕದ್ದು ಎನ್ನುವ ಅಭಿಪ್ರಾಯವನ್ನು ಹೊಂದಿದ್ದಾಗ.

137. ಕಂಪನಿಗಳು ಮತ್ತು ಇತರ ನಿರ್ದಿಷ್ಟ ವ್ಯಕ್ತಿಗಳಿಂದ ಅಪರಾಧಗಳು.– (1) ಈ ಅಧಿನಿಯಮದ ಅಡಿಯಲ್ಲಿ ಅಪರಾಧ ಮಾಡಿರುವ ಒಬ್ಬ ವ್ಯಕ್ತಿ ಕಂಪನಿಯಾಗಿದ್ದಲ್ಲಿ, ಅಪರಾಧ ಎಸಗಿದ ಸಮಯದಲ್ಲಿ ಕಂಪನಿಯ ಪ್ರಭಾರದಲ್ಲಿದ್ದ, ಮತ್ತು ಕಂಪನಿಯ ವ್ಯವಹಾರದ ನಡವಳಿಕೆಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯು, ಹಾಗೆಯೇ ಕಂಪನಿಯು, ಅಪರಾಧದ ತಪ್ಪಿತಸ್ಥರು ಎಂದು ಪರಿಭಾವಿಸತಕ್ಕದ್ದು ಹಾಗೂ ವಿರುದ್ಧವಾಗಿ ಕ್ರಮಕೈಗೊಳ್ಳುವುದಕ್ಕೆ ಬಾಧ್ಯರಾಗತಕ್ಕದ್ದು ಮತ್ತು ಅದಕ್ಕನುಸಾರವಾಗಿ ದಂಡಿಸತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಒಂದು ಕಂಪನಿಯಿಂದ ಈ ಅಧಿನಿಯಮದ ಅಡಿಯಲ್ಲಿ ಒಂದು ಅಪರಾಧ ಮಾಡಲಾಗಿದ್ದಲ್ಲಿ, ಮತ್ತು ಆ ಅಪರಾಧ ಕಂಪನಿಯ ಯಾವುದೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರೇ ಅಧಿಕಾರಿಯ ಕಡೆಯಿಂದ ಸಮ್ಮತಿ ಅಥವಾ ಪರೋಕ್ಷ ಸಮ್ಮತಿಯ ಜೊತೆಗೆ ಅಥವಾ ಯಾವುದೇ ನಿರ್ಲಕ್ಷ್ಯತೆಯ ಕಾರಣದಿಂದ ಎಂದು ಹೇಳಬಹುದಾದ್ದರಿಂದ ಮಾಡಲಾಗಿರುವುದು ರುಜುವಾತಾದಾಗ, ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಅಪರಾಧದ ತಪ್ಪಿತಸ್ಥರು ಎಂದು ಪರಿಭಾವಿಸತಕ್ಕದ್ದು ಹಾಗೂ ವಿರುದ್ಧವಾಗಿ ಕ್ರಮಕೈಗೊಳ್ಳುವುದಕ್ಕೆ ಬಾಧ್ಯರಾಗತಕ್ಕದ್ದು ಮತ್ತು ಅದಕ್ಕನುಸಾರವಾಗಿ ದಂಡಿಸತಕ್ಕದ್ದು.

(3) ಒಂದು ಪಾಲುದಾರಿಕೆ ಸಂಸ್ಥೆಯಾಗಿರುವ ಅಥವಾ ಒಂದು ನಿಯಮಿತ ಹೊಣೆಗಾರಿಕೆಯ ಪಾಲುದಾರಿಕೆಯಾಗಿರುವ ಅಥವಾ ಒಂದು ಹಿಂದೂ ಅವಿಭಾಜ್ಯ ಕುಟುಂಬವಾಗಿರುವ ಅಥವಾ ಒಂದು ಟ್ರಸ್ಟಾಗಿರುವ ಅಥವಾ ಪಾಲುದಾರನಾಗಿರುವ ಅಥವಾ *ಕರ್ತನಾಗಿರುವ* ಅಥವಾ ವ್ಯವಸ್ಥಾಪಕ ಟ್ರಸ್ಟಿಯಾಗಿರುವ ಒಬ್ಬ ತೆರಿಗೆದಾಯಕ ವ್ಯಕ್ತಿಯಿಂದ, ಈ ಅಧಿನಿಯಮದ ಅಡಿಯಲ್ಲಿ ಒಂದು ಅಪರಾಧ, ಮಾಡಲಾಗಿದ್ದಲ್ಲಿ, ಅಪರಾಧದ ತಪ್ಪಿತಸ್ಥ ಎಂದು ಪರಿಭಾವಿಸತಕ್ಕದ್ದು ಹಾಗೂ ವಿರುದ್ಧವಾಗಿ ಕ್ರಮಕೈಗೊಳ್ಳುವುದಕ್ಕೆ ಬಾಧ್ಯನಾಗತಕ್ಕದ್ದು ಮತ್ತು ಅದಕ್ಕನುಸಾರವಾಗಿ ದಂಡಿಸತಕ್ಕದ್ದು ಹಾಗೂ ಉಪಪ್ರಕರಣ (2)ರ ಉಪಬಂಧಗಳು ಅಂಥ ವ್ಯಕ್ತಿಗಳಿಗೆ *ಯಥೋಚಿತ ವ್ಯತ್ಯಾಸಗಳೊಡನೆ* ಅನ್ವಯವಾಗತಕ್ಕದ್ದು.

(4) ಆ ಅಪರಾಧವನ್ನು ಅವನ ಗಮನಕ್ಕೆ ಬಾರದೇ ಮಾಡಲಾಗಿತ್ತು ಅಥವಾ ಅಂಥ ಅಪರಾಧ ಮಾಡುವಿಕೆಯನ್ನು ನಿಯಂತ್ರಿಸಲು ಅವನು ಎಲ್ಲಾ ಯುಕ್ತ ಜಾಗರೂಕತೆಯನ್ನು ಚಲಾಯಿಸಿದ್ದನು ಎನ್ನುವುದನ್ನು ಅವನು ರುಜುವಾತು ಪಡಿಸಿದರೆ, ಯಾವುದೇ ಅಂಥ ವ್ಯಕ್ತಿಯನ್ನು ಈ ಪ್ರಕರಣದಲ್ಲಿ ಒಳಗೊಂಡಿರುವ ಯಾವುದೂ ಸಹ ಈ ಅಧಿನಿಯಮದ ಅಡಿಯಲ್ಲಿ ಉಪಬಂಧಿಸಲಾದ ಯಾವುದೇ ದಂಡನೆಯ ಬಾಧ್ಯತೆಗೆ ಗುರಿ ಮಾಡತಕ್ಕದ್ದಲ್ಲ.

ವಿವರಣೆ.– ಈ ಪ್ರಕರಣದ ಉದ್ದೇಶಗಳಿಗಾಗಿ,–

(i) **"ಕಂಪನಿ"** ಎಂದರೆ ನಿಗಮಿತ ನಿಕಾಯ ಮತ್ತು ಒಂದು ಪಾಲುದಾರಿಕಾ ಸಂಸ್ಥೆ ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ii) ಒಂದು ಪಾಲುದಾರಿಕಾ ಸಂಸ್ಥೆಗೆ ಸಂಬಂಧಿಸಿದಂತೆ **"ನಿರ್ದೇಶಕ"** ಎಂದರೆ ಪಾಲುದಾರಿಕಾ ಸಂಸ್ಥೆಯ ಪಾಲುದಾರ.

138. ಅಪರಾಧಗಳ ರಾಜಿ.– (1) ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ಅಪರಾಧವು, ಅಭಿಯೋಜನೆ ಹೂಡುವಿಕೆಗಿಂತ ಮೊದಲಾಗಿರಲಿ ಅಥವಾ ನಂತರವಾಗಿರಲಿ, ನಿಯಮಿಸಿಬಹುದಾದ ಅಂಥ ವಿಧಾನದಲ್ಲಿ ಅಂಥ ರಾಜಿ ಮೊತ್ತವು, ಅಪರಾಧದ ಆಪಾದಿತ ವ್ಯಕ್ತಿಯಿಂದ ಸಂದರ್ಭಾನುಸಾರವಾಗಿ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರಕ್ಕೆ ಸಂದಾಯವಾದ ಮೇಲೆ, ಆಯುಕ್ತರಿಂದ ರಾಜಿಗೊಳ್ಳಬಹುದು:

ಪರಂತು, ಈ ಪ್ರಕರಣದಲ್ಲಿ ಒಳಗೊಂಡಿರುವ ಯಾವುದೂ ಈ ಕೆಳಕಂಡವುಗಳಿಗೆ ಅನ್ವಯಿಸತಕ್ಕದ್ದಲ್ಲ.–

(ಎ) ಪ್ರಕರಣ 132ರ ಉಪಪ್ರಕರಣ (1)ರ ಖಂಡಗಳಾದ (ಎ)ಯಿಂದ (ಎಫ್)ಗಳ ಅಡಿಯಲ್ಲಿನ ಯಾವುದೇ ಅಪರಾಧಗಳಿಗೆ ಸಂಬಂಧಿಸಿದಂತೆ, ಒಂದು ಬಾರಿ ರಾಜಿಯನ್ನು ಅನುಮತಿಸಲಾಗಿರುವ ಒಬ್ಬ ವ್ಯಕ್ತಿಗೆ ಮತ್ತು ಸದರಿ ಉಪಪ್ರಕರಣದ ಖಂಡಗಳಾದ (ಎ)ಯಿಂದ (ಎಫ್)ಗಳ ಅಡಿಯಲ್ಲಿ ನಿರ್ದಿಷ್ಟಪಡಿಸಿರುವ ಅಪರಾಧಗಳಿಗೆ ಸಂಬಂಧಿತವಾಗಿರುವ ಖಂಡ (ಎಲ್)ರ ಅಡಿಯಲ್ಲಿ ನಿರ್ದಿಷ್ಟಪಡಿಸಿರುವ ಅಪರಾಧಗಳು;

(ಬಿ) ಒಂದು ಕೋಟಿ ರೂಪಾಯಿಗಳನ್ನು ಮೀರಿದ ಪೂರೈಕೆಗಳ ಮೌಲ್ಯಕ್ಕೆ ಸಂಬಂಧಿಸಿರುವ, ಈ ಅಧಿನಿಯಮದ ಅಡಿಯಲ್ಲಿನ, ಅಥವಾ ಯಾವುದೇ ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ ಅಥವಾ ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ ಅಥವಾ ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಉಪಬಂಧಗಳ ಅಡಿಯಲ್ಲಿನ ಖಂಡ (ಎ)ಯಲ್ಲಿ ಇರುವಂತಹುಗಳನ್ನು ಹೊರತುಪಡಿಸಿದ ಯಾವುದೇ ಅಪರಾಧಕ್ಕೆ ಸಂಬಂಧಿಸಿದಂತೆ ಒಂದು ಬಾರಿ ರಾಜಿಯನ್ನು ಅನುಮತಿಸಲಾಗಿರುವ ಒಬ್ಬ ವ್ಯಕ್ತಿ;

(ಸಿ) ಯಾವುದೇ ಇತರ ಅಧಿನಿಯಮಗಳ ಅಡಿಯಲ್ಲಿಯೂ ಸಹ ಒಂದು ಅಪರಾಧವಾಗಿರುವ, ಒಂದು ಅಪರಾಧವನ್ನು ಮಾಡಿರುವುದಕ್ಕಾಗಿ ಈ ಅಧಿನಿಯಮದ ಅಡಿಯಲ್ಲಿ ಆಪಾದಿತನಾಗಿರುವ ವ್ಯಕ್ತಿ;

(ಡಿ) ಈ ಅಧಿನಿಯಮದ ಅಡಿಯಲ್ಲಿನ ಒಂದು ಅಪರಾಧಕ್ಕಾಗಿ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣಯಿತನಾಗಿರುವ ಒಬ್ಬ ವ್ಯಕ್ತಿ;

(ಇ) ಪ್ರಕರಣ 132ರ ಉಪಪ್ರಕರಣ (1)ರ ಖಂಡ (ಜಿ) ಅಥವಾ ಖಂಡ (ಜೆ) ಅಥವಾ ಖಂಡ (ಕೆ)ಗಳಲ್ಲಿ ನಿರ್ದಿಷ್ಟಪಡಿಸಿರುವ ಒಂದು ಅಪರಾಧ ಮಾಡಿದುದಕ್ಕಾಗಿ ಅಪರಾಧಿಯೆಂದು ನಿರ್ಣಯಿತನಾಗಿರುವ ಒಬ್ಬ ವ್ಯಕ್ತಿ;

(ಎಫ್) ನಿಯಮಿಸಬಹುದಾದ ಯಾವುದೇ ಇತರ ವ್ಯಕ್ತಿಗಳ ಅಥವಾ ಅಪರಾಧಗಳ ವರ್ಗ:

ಮತ್ತೂ ಪರಂತು, ಈ ಪ್ರಕರಣದ ಉಪಬಂಧಗಳ ಅಡಿಯಲ್ಲಿ ಅವಕಾಶ ನೀಡಿದ ಯಾವುದೇ ರಾಜಿಯು ಯಾವುದೇ ಇತರ ಕಾನೂನಿನ ಅಡಿಯಲ್ಲಿ ಹೂಡಲಾದ ನಡಾವಳಿಗಳೇನಾದರೂ ಇದ್ದರೆ ಅವುಗಳಿಗೆ ಬಾಧಕವಾಗತಕ್ಕದಲ್ಲ:

ಅಲ್ಲದೆ ಪರಂತು, ಅಂಥ ಅಪರಾಧಗಳಲ್ಲಿ ಒಳಗೊಂಡಿರುವ ತೆರಿಗೆ, ಬಡ್ಡಿ, ಮತ್ತು ದಂಡವನ್ನು ಸಂದಾಯ ಮಾಡಿದ ಮೇಲೆ ರಾಜಿಗೆ ಅವಕಾಶ ನೀಡತಕ್ಕದ್ದು.

(2) ಈ ಪ್ರಕರಣದ ಅಡಿಯಲ್ಲಿನ ಅಪರಾಧಗಳ ರಾಜಿಗೋಸ್ಕರವಾದ ಮೊತ್ತ, ಹತ್ತು ಸಾವಿರ ರೂಪಾಯಿ ಅಥವಾ ಒಳಗೊಂಡಿರುವ ತೆರಿಗೆಯ ಶೇಕಡ ಐವತ್ತರಷ್ಟು, ಇವುಗಳಲ್ಲಿ ಯಾವುದು ಹೆಚ್ಚೋ ಅದಕ್ಕಿಂತ ಕಡಿಮೆಯಿರದ ಕನಿಷ್ಠ ಮೊತ್ತ ಮತ್ತು ಮೂವತ್ತು ಸಾವಿರ ರೂಪಾಯಿ ಅಥವಾ ಒಳಗೊಂಡಿರುವ ತೆರಿಗೆಯ ಶೇಕಡ ನೂರಾ ಐವತ್ತರಷ್ಟು, ಇವುಗಳಲ್ಲಿ ಯಾವುದು ಹೆಚ್ಚೋ ಅದಕ್ಕಿಂತ ಹೆಚ್ಚಿರದ ಗರಿಷ್ಠ ಮೊತ್ತಕ್ಕೆ ಒಳಪಟ್ಟು, ನಿಯಮಿಸಬಹುದಾದುದು ಆಗಿರತಕ್ಕದ್ದು.

(3) ಆಯುಕ್ತರಿಂದ ನಿರ್ದರಿಸಬಹುದಾದ ಅಂಥ ರಾಜಿ ಮೊತ್ತದ ಸಂದಾಯವಾದ ಮೇಲೆ, ಇದೇ ಅಪರಾಧಕ್ಕೆ ಸಂಬಂಧಿಸಿದಂತೆ ಆಪಾದಿತ ವ್ಯಕ್ತಿಯ ವಿರುದ್ಧವಾಗಿ ಮುಂದುವರೆದ ನಡಾವಳಿಯನ್ನು ಪ್ರಾರಂಭಿಸತಕ್ಕದ್ದಲ್ಲ ಮತ್ತು ಸದರಿ ಅಪರಾಧಕ್ಕೆ ಸಂಬಂಧಿಸಿದಂತೆ ಈಗಾಗಲೇ ಯಾವುದೇ ಅಪರಾಧಿಕ ನಡಾವಳಿಗಳು ಪ್ರಾರಂಭಗೊಂಡಿದ್ದರೆ, ಕೊನೆಗೊಳ್ಳತಕ್ಕದ್ದು.

ಅಧ್ಯಾಯ – XX
ಸ್ಥಿತ್ಯಂತರಕಾಲೀನ ಉಪಬಂಧಗಳು

139. ಅಸ್ತಿತ್ವದಲ್ಲಿರುವ ತೆರಿಗೆ ಸಂದಾಯದಾರರ ವಲಸೆ.– (1) ಗೊತ್ತುಪಡಿಸಲಾದ ದಿನದಂದು ಮತ್ತು ದಿನದಿಂದ, ಯಾವುದೇ ಅಸ್ತಿತ್ವದಲ್ಲಿರುವ ಕಾನೂನುಗಳ ಅಡಿಯಲ್ಲಿ ನೋಂದಾಯಿತನಾಗಿರುವ ಮತ್ತು ಒಂದು ಸಿಂಧುವಾದ ಶಾಶ್ವತ ಖಾತೆ ಸಂಖ್ಯೆಯನ್ನು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಗೆ, ಅಂಥ ಷರತ್ತುಗಳಿಗೆ ಒಳಪಟ್ಟು, ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ಮತ್ತು ವಿಧಾನದಲ್ಲಿ ಒಂದು ನೋಂದಣಿ ಪ್ರಮಾಣ ಪತ್ರವನ್ನು ತಾತ್ಕಾಲಿಕ ಆಧಾರದಲ್ಲಿ ನೀಡತಕ್ಕದ್ದು ಮತ್ತು ಅದು ಉಪಪ್ರಕರಣ (2)ರ ಅಡಿಯಲ್ಲಿ ಒಂದು ಅಂತಿಮ ನೋಂದಣಿ ಪ್ರಮಾಣಪತ್ರದಿಂದ ಬದಲಾಯಿಸಿದ ಹೊರತು, ಹಾಗೆ ನಿಯಮಿಸಲಾದ ಷರತ್ತುಗಳನ್ನು ಪರಿಪಾಲಿಸದಿದ್ದರೆ, ರದ್ದು ಮಾಡುವುದಕ್ಕೆ ಬಾಧ್ಯವಿರತಕ್ಕದ್ದು.

(2) ಅಂತಿಮ ನೋಂದಣಿ ಪ್ರಮಾಣಪತ್ರವನ್ನು ಅಂಥ ಷರತ್ತುಗಳಿಗೆ ಒಳಪಟ್ಟು, ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ಮತ್ತು ವಿಧಾನದಲ್ಲಿ ನೀಡತಕ್ಕದ್ದು.

(3) ಪ್ರಕರಣ 22 ಅಥವಾ ಪ್ರಕರಣ 24ರ ಅಡಿಯಲ್ಲಿ ಆತನು ನೋಂದಣಿಗೆ ಬಾಧ್ಯನಾಗಿಲ್ಲ ಎಂದು ಒಬ್ಬ ವ್ಯಕ್ತಿಯಿಂದ ಸಲ್ಲಿಕೆಯಾಗಿರುವ ಒಂದು ಅರ್ಜಿಗೆ ಅನುಸಾರವಾಗಿ, ಸದರಿ ನೋಂದಣಿಯನ್ನು ರದ್ದುಗೊಳಿಸಿದ್ದರೆ, ಅಂಥ ವ್ಯಕ್ತಿಗೆ ಉಪಪ್ರಕರಣ (1)ರ ಅಡಿಯಲ್ಲಿ ನೀಡಿದ ನೋಂದಣಿ ಪ್ರಮಾಣ ಪತ್ರವನ್ನು ನೀಡಲಾಗಿರುವುದಿಲ್ಲ ಎಂದು ಪರಿಭಾವಿಸತಕ್ಕದ್ದು.

140. ಹೂಡುವಳಿ ತೆರಿಗೆ ಜಮೆಗಾಗಿ ಸ್ಥಿತ್ಯಂತರ ಕಾಲೀನ ವ್ಯವಸ್ಥೆಗಳು.– (1) ಪ್ರಕರಣ 10ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡಲು ಆಯ್ಕೆ ಮಾಡಿಕೊಂಡಿರುವ ಒಬ್ಬ ವ್ಯಕ್ತಿಯನ್ನು ಹೊರತುಪಡಿಸಿದಂತೆ ಒಬ್ಬ ನೋಂದಾಯಿತ ವ್ಯಕ್ತಿಯು, ಗೊತ್ತುಪಡಿಸಲಾದ ದಿನದ ನಿಕಟಪೂರ್ವ ದಿನದೊಂದಿಗೆ ಕೊನೆಗೊಳ್ಳುವ ಅವಧಿಗೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಆತನಿಂದ ಒದಗಿಸಿದ ರಿಟರ್ನನಲ್ಲಿ ಮುಂದಕ್ಕೆ ಸಾಗಿಸಲಾದ ಮೌಲ್ಯವರ್ಧಿತ ತೆರಿಗೆಯ ಮೊತ್ತದ ಜಮೆ ಏನಾದರೂ ಇದ್ದರೆ ಅದನ್ನು ಆತನ ವಿದ್ಯುನ್ಮಾನ ಜಮೆ ಖಾತೆಯಲ್ಲಿ ನಿಯಮಿಸಬಹುದಾದ ಅಂಥ ವಿಧಾನದಲ್ಲಿ ತೆಗೆದುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು:

ಪರಂತು, ಕೆಳಕಂಡ ಸನ್ನಿವೇಶಗಳಲ್ಲಿ ಜಮೆಯನ್ನು ತೆಗೆದುಕೊಳ್ಳಲು ನೋಂದಾಯಿತ ವ್ಯಕ್ತಿಗೆ ಅವಕಾಶ ನೀಡತಕ್ಕದ್ದಲ್ಲ, ಎಂದರೆ:–

(i) ಸದರಿ ಜಮೆಯ ಮೊತ್ತವು ಈ ಅಧಿನಿಯಮದ ಅಡಿಯಲ್ಲಿ ಹೂಡುವಳಿ ತೆರಿಗೆ ಜಮೆಯಾಗಿ ಅಂಗೀಕಾರಾರ್ಹವಾಗಿರದಿದ್ದಲ್ಲಿ; ಅಥವಾ

(ii) ಆತನು ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಗೊತ್ತುಪಡಿಸಲಾದ ದಿನದ ನಿಕಟಪೂರ್ವ ದಿನದಿಂದ ಆರು ತಿಂಗಳ ಅವಧಿಗೆ ಅಗತ್ಯವಿರುವ ಎಲ್ಲಾ ರಿಟರ್ನಗಳನ್ನು ಒದಗಿಸಿರದಿದ್ದಲ್ಲಿ:

ಮತ್ತು ಪರಂತು, ಕೇಂದ್ರ ಮಾರಾಟ ತೆರಿಗೆ ಅಧಿನಿಯಮ, 1956ರ (1956ರ ಕೇಂದ್ರ ಅಧಿನಿಯಮ 74) ಪ್ರಕರಣ 3, ಪ್ರಕರಣ 5ರ ಉಪಪ್ರಕರಣ (3), ಪ್ರಕರಣ 6, ಪ್ರಕರಣ 6ಎ ಅಥವಾ ಪ್ರಕರಣ 8ರ ಉಪಪ್ರಕರಣ (8)ಕ್ಕೆ ಸಂಬಂಧಿಸಿದ, ಕೇಂದ್ರ ಮಾರಾಟ ತೆರಿಗೆ (ನೋಂದಣಿ ಮತ್ತು ವಹಿವಾಟು) ನಿಯಮಗಳು, 1957ರ ನಿಯಮ 12ರಲ್ಲಿ ನಿಯಮಿಸಲಾದ ವಿಧಾನದಲ್ಲಿ, ಮತ್ತು ಅವಧಿಯೊಳಗೆ ಪುಷ್ಠೀಕರಿಸಿಲ್ಲದ ಯಾವುದೇ ಕ್ಲೇಮು ಎಂದು ಹೇಳಬಹುದಾದಷ್ಟು ಪ್ರಮಾಣದ ಸದರಿ ಜಮೆಯನ್ನು ವಿದ್ಯುನ್ಮಾನ ಜಮೆ ಖಾತೆಯಲ್ಲಿ ಜಮೆಗೊಳಿಸಿವುದಕ್ಕೆ ಅರ್ಹವಿರತಕ್ಕದ್ದಲ್ಲ:

ಅಲ್ಲದೆ ಪರಂತು, ಎರಡನೇ ಪರಂತುಕದಲ್ಲಿ ನಿರ್ದಿಷ್ಟಪಡಿಸಿದ ಜಮೆಗೆ ಸಮನಾದ ಒಂದು ಮೊತ್ತವನ್ನು ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ, ಸದರಿ ಕ್ಷೇಮುಗಳನ್ನು ಕೇಂದ್ರ ಮಾರಾಟ ತೆರಿಗೆ (ನೋಂದಣಿ ಮತ್ತು ವಹಿವಾಟು) ನಿಯಮಗಳು, 1957ರ ನಿಯಮ 12ರಲ್ಲಿ ನಿಯಮಿಸಲಾದ ವಿಧಾನದಲ್ಲಿ, ಮತ್ತು ಅವಧಿಯೊಳಗೆ ಪುಷ್ಠೀಕರಿಸಿದ್ದಾಗ, ಮರುಪಾವತಿ ಮಾಡತಕ್ಕದ್ದು.

(2) ಪ್ರಕರಣ 10ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡಲು ಆಯ್ಕೆ ಮಾಡಿಕೊಂಡಿರುವ ಒಬ್ಬ ವ್ಯಕ್ತಿಯನ್ನು ಹೊರತುಪಡಿಸಿದಂತೆ ಒಬ್ಬ ನೋಂದಾಯಿತ ವ್ಯಕ್ತಿಯು, ಗೊತ್ತುಪಡಿಸಲಾದ ದಿನದ ನಿಕಟಪೂರ್ವ ದಿನದೊಂದಿಗೆ ಕೊನೆಗೊಳ್ಳುವ ಅವಧಿಗೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಆತನಿಂದ ಒದಗಿಸಿರುವ ರಿಟರ್ನನಲ್ಲಿ ಮುಂದಕ್ಕೆ ಸಾಗಿಸಿಲ್ಲದ, ಬಂಡವಾಳ ಸರಕುಗಳಿಗೆ ಸಂಬಂದಿಸಿದ, ತೆಗೆದುಕೊಂಡಿರದ ಹೂಡುವಳಿ ತೆರಿಗೆ ಜಮೆಯನ್ನು, ಆತನ ವಿದ್ಯುನ್ಮಾನ ಜಮೆ ಖಾತೆಯಲ್ಲಿ ನಿಯಮಿಸಬಹುದಾದ ಅಂಥ ವಿಧಾನದಲ್ಲಿ ತೆಗೆದುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು:

ಪರಂತು, ಸದರಿ ಜಮೆಯು ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಹೂಡುವಳಿ ತೆರಿಗೆ ಜಮೆ ಎಂದು ಅಂಗೀಕಾರಾರ್ಹವಾಗಿದ್ದ ಮತ್ತು ಈ ಅಧಿನಿಯಮದ ಅಡಿಯಲ್ಲಿಯೂ ಸಹ ಹೂಡುವಳಿ ತೆರಿಗೆ ಜಮೆ ಎಂದು ಅಂಗೀಕಾರಾರ್ಹವಾಗಿರುವ ಹೊರತು ಸದರಿ ನೋಂದಾಯಿತ ವ್ಯಕ್ತಿಗೆ ಜಮೆಯನ್ನು ತೆಗೆದುಕೊಳ್ಳಲು ಅವಕಾಶ ನೀಡತಕ್ಕದ್ದಲ್ಲ.

ವಿವರಣೆ.– ಈ ಉಪಪ್ರಕರಣದ ಉದ್ದೇಶಗಳಿಗಾಗಿ, ಪದಾವಳಿಯಾದ **"ತೆಗೆದುಕೊಂಡಿರದ ಹೂಡುವಳಿ ತೆರಿಗೆ ಜಮೆ"** ಎಂದರೆ, ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಸದರಿ ಬಂಡವಾಳ ಸರಕುಗಳಿಗೆ ಸಂಬಂಧಿಸಿದಂತೆ ತೆರಿಗೆದಾಯಕ ವ್ಯಕ್ತಿಯು ಹಕ್ಕುಳ್ಳ ಸಮಗ್ರ ಹೂಡುವಳಿ ತೆರಿಗೆ ಜಮೆಯ ಮೊತ್ತದಿಂದ ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಸದರಿ ವ್ಯಕ್ತಿಯಿಂದ ಈಗಾಗಲೇ ತೆಗೆದುಕೊಂಡ ಹೂಡುವಳಿ ತೆರಿಗೆ ಜಮೆಯ ಮೊತ್ತವನ್ನು ಕಳೆದ ನಂತರ ಉಳಿಯುವ ಮೊತ್ತವಾಗಿದೆ.

(3) ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ನೋಂದಣಿಗೆ ಬಾಧ್ಯನಿಲ್ಲದಿದ್ದ ಅಥವಾ ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಯಾವುದಾದರೂ ಹೆಸರಿನಿಂದ ಕರೆಯುವ ವಿನಾಯಿತಿ ಸರಕುಗಳು, ಆದರೆ ಅವುಗಳು ಈ ಅಧಿನಿಯಮದ ಅಡಿಯಲ್ಲಿ ತೆರಿಗೆಗೆ ಬಾಧ್ಯವಾಗುವ ಸರಕುಗಳ ಮಾರಾಟದಲ್ಲಿ ತೊಡಗಿರುವ ಒಬ್ಬ ನೋಂದಾಯಿತ ವ್ಯಕ್ತಿಯು, ಗೊತ್ತುಪಡಿಸಲಾದ ದಿನದಂದು ದಾಸ್ತಾನಿನಲ್ಲಿರುವ ಹೂಡುವಳಿಗಳು ಮತ್ತು ದಾಸ್ತಾನಿನಲ್ಲಿರುವ ಅರೆ–ಸಿದ್ದರೂಪದ ಅಥವಾ ಸಿದ್ದರೂಪದ ಸರಕುಗಳು ಒಳಗೊಂಡಿರುವ ಹೂಡುವಳಿಗಳಿಗೆ ಸಂಬಂಧಿಸಿದಂತೆ ಮೌಲ್ಯವರ್ಧಿತ ತೆರಿಗೆ ಜಮೆಯನ್ನು, ಆತನ ವಿದ್ಯುನ್ಮಾನ ಜಮೆ ಖಾತೆಯಲ್ಲಿ ತೆಗೆದುಕೊಳ್ಳಲು ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಹಕ್ಕುಳ್ಳವನಾಗಿರತಕ್ಕದ್ದು, ಎಂದರೆ:–

(i) ಈ ಅಧಿನಿಯಮದ ಅಡಿಯಲ್ಲಿ ತೆರಿಗೆದಾಯಕ ಪೂರೈಕೆಗಳಿಗಾಗಿ ಉಪಯೋಗಿಸಿರುವ ಅಥವಾ ಉಪಯೋಗಿಸಲು ಉದ್ದೇಶಿಸಿರುವ ಅಂಥ ಹೂಡುವಳಿಗಳು ಅಥವಾ ಸರಕುಗಳಾಗಿರಬೇಕು;

(ii) ಸದರಿ ತೆರಿಗೆದಾಯಕ ವ್ಯಕ್ತಿಯು ಅಂಥ ಹೂಡುವಳಿಗಳ ಮೇಲಿನ ಹೂಡುವಳಿ ತೆರಿಗೆ ಜಮೆಗೆ, ಈ ಅಧಿನಿಯಮದ ಅಡಿಯಲ್ಲಿ ಅರ್ಹನಿರಬೇಕು;

(iii) ಸದರಿ ತೆರಿಗೆದಾಯಕ ವ್ಯಕ್ತಿಯು ಅಂಥ ಹೂಡುವಳಿಗಳಿಗೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡಿರುವುದರ ಪುರಾವೆಯಾಗಿ ಬೆಲೆಪಟ್ಟಿ ಅಥವಾ ಇತರೆ ನಿಯಮಿಸಲಾದ ದಸ್ತಾವೇಜುಗಳನ್ನು ಸ್ವಾಧೀನದಲ್ಲಿ ಇಟ್ಟುಕೊಂಡಿರಬೇಕು; ಮತ್ತು

(iv) ಅಂಥ ಬೆಲೆಪಟ್ಟಿಗಳು ಅಥವಾ ಇತರೆ ನಿಯಮಿಸಲಾದ ದಸ್ತಾವೇಜುಗಳನ್ನು ಗೊತ್ತುಪಡಿಸಲಾದ ದಿನದ ನಿಕಟ ಪೂರ್ವವಾದ ಹನ್ನೆರಡು ತಿಂಗಳುಗಳಿಗಿಂತ ಮುಂಚಿತವಾಗಿ ನೀಡಿರಬಾರದು:

ಪರಂತು, ಒಬ್ಬ ಉತ್ಪಾದಕ ಅಥವಾ ಒಬ್ಬ ಸೇವೆಗಳ ಪೂರೈಕೆದಾರನನ್ನು ಹೊರತುಪಡಿಸಿದಂತೆ, ಒಬ್ಬ ನೋಂದಾಯಿತ ವ್ಯಕ್ತಿಯು ಹೂಡುವಳಿಗಳಿಗೆ ಸಂಬಂಧಿಸಿದಂತೆ ತೆರಿಗೆಯನ್ನು ಸಂದಾಯ ಮಾಡಿರುವುದರ ಪುರಾವೆಯಾಗಿ ಬೆಲೆಪಟ್ಟಿ ಅಥವಾ ಇತರೆ ನಿಯಮಿಸಲಾದ ದಸ್ತಾವೇಜುಗಳ ಸ್ವಾಧೀನತೆಯನ್ನು ಹೊಂದಿರದಿದ್ದಲ್ಲಿ, ಸದರಿ ತೆರಿಗೆದಾಯಕ ವ್ಯಕ್ತಿಯು ಅಂಥ ಜಮೆಯ ಅನುಕೂಲವನ್ನು, ಸ್ವೀಕರಿಸುವವನಿಗೆ ಬೆಲೆಯಲ್ಲಿನ ಇಳಿಕೆಯ ರೂಪದಲ್ಲಿ ವರ್ಗಾಯಿಸತಕ್ಕದ್ದು ಎನ್ನುವುದನ್ನು ಒಳಗೊಂಡಂತೆ, ನಿಯಮಿಸಬಹುದಾದ ಅಂಥ ಷರತ್ತುಗಳು, ಮಿತಿಗಳು ಮತ್ತು ರಕ್ಷಣಾ ಕ್ರಮಗಳಿಗೆ ಒಳಪಟ್ಟು ಅಂಥ ನೋಂದಾಯಿತ ವ್ಯಕ್ತಿಗೆ ನಿಯಮಿಸಬಹುದಾದ ಅಂಥ ದರದಲ್ಲಿ ಮತ್ತು ಅಂಥ ವಿಧಾನದಲ್ಲಿ ಜಮೆಯನ್ನು ತೆಗೆದುಕೊಳ್ಳಲು ಅವಕಾಶ ನೀಡತಕ್ಕದ್ದು.

(4) ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ತೆರಿಗೆದಾಯಕ ಸರಕುಗಳ ಜೊತೆಗೆ ಯಾವುದಾದರೂ ಹೆಸರಿನಿಂದ ಕರೆಯುವ ವಿನಾಯಿತಿ ಸರಕುಗಳು ಅಥವಾ ತೆರಿಗೆ ಮುಕ್ತ ಸರಕುಗಳ ಆದರೆ ಅವುಗಳು ಈ ಅಧಿನಿಯಮದ ಅಡಿಯಲ್ಲಿ ತೆರಿಗೆಗೆ ಬಾಧ್ಯವಾಗುವ ಸರಕುಗಳ ಮಾರಾಟದಲ್ಲಿ ತೊಡಗಿರುವ ಒಬ್ಬ ನೋಂದಾಯಿತ ವ್ಯಕ್ತಿಯು, ಆತನ ವಿದ್ಯುನ್ಮಾನ ಜಮೆ ಖಾತೆಯಲ್ಲಿ ಈ ಕೆಳಕಂಡ ಜಮೆಯನ್ನು ತೆಗೆದುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು,–

(ಎ) ಉಪಪ್ರಕರಣ (1)ರ ಉಪಬಂಧಗಳಿಗೆ ಅನುಸಾರವಾಗಿ ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಆತನಿಂದ ಒದಗಿಸಿದ ರಿಟರ್ನನಲ್ಲಿ ಮುಂದಕ್ಕೆ ಸಾಗಿಸಲಾದ ಮೌಲ್ಯವರ್ಧಿತ ತೆರಿಗೆಯ ಜಮೆಯ ಮೊತ್ತ, ಏನಾದರೂ ಇದ್ದರೆ;

(ಬಿ) ಯಾವುದಾದರೂ ಹೆಸರಿನಿಂದ ಕರೆಯುವ ಅಂಥ ವಿನಾಯಿತಿ ಸರಕುಗಳು ಅಥವಾ ತೆರಿಗೆ ಮುಕ್ತ ಸರಕುಗಳಿಗೆ ಸಂಬಂಧಪಟ್ಟಂತೆ, ಉಪಪ್ರಕರಣ (3)ರ ಉಪಬಂಧಗಳಿಗೆ ಅನುಸಾರವಾಗಿ ಗೊತ್ತುಪಡಿಸಲಾದ ದಿನದಂದು ದಾಸ್ತಾನಿನಲ್ಲಿರುವ ಹೂಡುವಳಿಗಳು ಮತ್ತು ದಾಸ್ತಾನಿನಲ್ಲಿರುವ ಅರೆ–ಸಿದ್ದರೂಪದ ಅಥವಾ ಸಿದ್ದರೂಪದ ಸರಕುಗಳು ಒಳಗೊಂಡಿರುವ ಹೂಡುವಳಿಗಳಿಗೆ ಸಂಬಂಧಿಸಿದ ಮೌಲ್ಯವರ್ಧಿತ ತೆರಿಗೆ ಜಮೆಯ ಮೊತ್ತ, ಏನಾದರೂ ಇದ್ದರೆ.

(5) ಒಬ್ಬ ನೋಂದಾಯಿತ ವ್ಯಕ್ತಿಯು, ಗೊತ್ತು ಪಡಿಸಲಾದ ದಿನದಂದು ಅಥವಾ ಅದರ ನಂತರ ಸ್ವೀಕರಿಸಿದ, ಆದರೆ ಅವುಗಳಿಗೆ ಸಂಬಂಧಿಸಿದ ತೆರಿಗೆಯು ಪೂರೈಕೆದಾರನಿಂದ ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಸಂದಾಯ ಮಾಡಲಾಗಿರುವ

ಹೂಡುವಳಿಗಳಿಗೆ ಸಂಬಂಧಿಸಿದ ಮೌಲ್ಯವರ್ಧಿತ ತೆರಿಗೆ ಜಮೆ ಏನಾದರೂ ಇದ್ದರೆ ಅದನ್ನು, ಅದರ ಬೆಲೆಪಟ್ಟಿ ಅಥವಾ ತೆರಿಗೆ ಸಂದಾಯದ ಇತರ ದಸ್ತಾವೇಜುಗಳನ್ನು, ಗೊತ್ತು ಪಡಿಸಲಾದ ದಿನದಿಂದ ಮೂವತ್ತು ದಿನಗಳ ಒಳಗಾಗಿ ಅಂಥ ವ್ಯಕ್ತಿಯಿಂದ ಆತನ ಲೆಕ್ಕಪುಸ್ತಕಗಳಲ್ಲಿ ನಮೂದಾಗಿರಬೇಕೆಂಬ ಷರತ್ತಿಗೆ ಒಳಪಟ್ಟು ಆತನ ವಿದ್ಯುನ್ಮಾನ ಜಮೆ ಖಾತೆಯಲ್ಲಿ ತೆಗೆದುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು:

ಪರಂತು, ಮೂವತ್ತು ದಿನಗಳ ಅವಧಿಯನ್ನು, ಆಯುಕ್ತರಿಂದ ತೋರಿಸಲಾದ ಸಾಕಷ್ಟು ಕಾರಣಗಳಿಗಾಗಿ ಮೂವತ್ತು ದಿನಗಳನ್ನು ಮೀರದ ಹೆಚ್ಚಿನ ಅವಧಿಗೆ ವಿಸ್ತರಿಸಬಹುದು:

ಮತ್ತು ಪರಂತು, ಸದರಿ ನೋಂದಾಯಿತ ವ್ಯಕ್ತಿಯು, ಈ ಉಪಪ್ರಕರಣದ ಅಡಿಯಲ್ಲಿ ತೆಗೆದುಕೊಳ್ಳಲಾಗಿರುವ ಜಮೆಗೆ ಸಂಬಂಧಿಸಿದಂತೆ ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಒಂದು ವಿವರಪತ್ರವನ್ನು ಒದಗಿಸತಕ್ಕದ್ದು.

(6) ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ತೆರಿಗೆಯನ್ನು ಸ್ಥಿರ ದರದಲ್ಲಾಗಲಿ ಸಂದಾಯ ಮಾಡುತ್ತಿದ್ದ ಅಥವಾ ಸಂದಾಯ ಮಾಡಬೇಕಾದ ತೆರಿಗೆಗೆ ಬದಲಾಗಿ ಒಂದು ಸ್ಥಿರ ಮೊತ್ತವನ್ನಾಗಲಿ ಸಂದಾಯ ಮಾಡುತ್ತಿದ್ದ ಒಬ್ಬ ನೋಂದಾಯಿತ ವ್ಯಕ್ತಿಯು, ಗೊತ್ತುಪಡಿಸಲಾದ ದಿನದಂದು ದಾಸ್ತಾನಿನಲ್ಲಿರುವ ಹೂಡುವಳಿಗಳು ಮತ್ತು ದಾಸ್ತಾನಿನಲ್ಲಿರುವ ಅರೆ–ಸಿದ್ದರೂಪದ ಅಥವಾ ಸಿದ್ದರೂಪದ ಸರಕುಗಳು ಒಳಗೊಂಡಿರುವ ಹೂಡುವಳಿಗಳಿಗೆ ಸಂಬಂಧಿಸಿದಂತೆ ಮೌಲ್ಯವರ್ಧಿತ ತೆರಿಗೆ ಜಮೆಯನ್ನು, ಆತನ ವಿದ್ಯುನ್ಮಾನ ಜಮೆ ಖಾತೆಯಲ್ಲಿ, ಕೆಳಕಂಡ ಷರತ್ತುಗಳಿಗೆ ಒಳಪಟ್ಟು ತೆಗೆದುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು, ಎಂದರೆ:–

(i) ಈ ಅಧಿನಿಯಮದ ಅಡಿಯಲ್ಲಿ ತೆರಿಗೆದಾಯಕ ಪೂರೈಕೆಗಳಿಗಾಗಿ ಉಪಯೋಗಿಸಿರುವ ಅಥವಾ ಉಪಯೋಗಿಸಲು ಉದ್ದೇಶಿಸಿರುವ ಅಂಥ ಹೂಡುವಳಿಗಳು ಅಥವಾ ಸರಕುಗಳಾಗಿರಬೇಕು;

(ii) ಸದರಿ ವ್ಯಕ್ತಿಯು ಪ್ರಕರಣ 10ರ ಅಡಿಯಲ್ಲಿ ತೆರಿಗೆ ಸಂದಾಯ ಮಾಡುತ್ತಿರಬಾರದು;

(iii) ಸದರಿ ತೆರಿಗೆದಾಯಕ ವ್ಯಕ್ತಿಯು ಅಂಥ ಹೂಡುವಳಿಗಳ ಮೇಲಿನ ಹೂಡುವಳಿ ತೆರಿಗೆ ಜಮೆಗೆ, ಈ ಅಧಿನಿಯಮದ ಅಡಿಯಲ್ಲಿ ಅರ್ಹನಿರಬೇಕು;

(iv) ಸದರಿ ತೆರಿಗೆದಾಯಕ ವ್ಯಕ್ತಿಯು ಅಂಥ ಹೂಡುವಳಿಗಳಿಗೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡಿರುವುದರ ಪುರಾವೆಯಾಗಿ ಬೆಲೆಪಟ್ಟಿ ಅಥವಾ ಇತರೆ ನಿಯಮಿಸಲಾದ ದಸ್ತಾವೇಜುಗಳನ್ನು ಸ್ವಾಧೀನದಲ್ಲಿ ಇಟ್ಟುಕೊಂಡಿರಬೇಕು; ಮತ್ತು

(v) ಅಂಥ ಬೆಲೆಪಟ್ಟಿಗಳು ಅಥವಾ ಇತರೆ ನಿಯಮಿಸಲಾದ ದಸ್ತಾವೇಜುಗಳನ್ನು ಗೊತ್ತುಪಡಿಸಲಾದ ದಿನದ ನಿಕಟ ಪೂರ್ವವಾದ ಹನ್ನೆರಡು ತಿಂಗಳುಗಳಿಗಿಂತ ಮುಂಚಿತವಾಗಿ ನೀಡಿರಬಾರದು.

(7) ಉಪಪ್ರಕರಣಗಳಾದ (3), (4) ಮತ್ತು (6)ರ ಅಡಿಯಲ್ಲಿ ಜಮೆಯ ಮೊತ್ತವನ್ನು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಲೆಕ್ಕ ಹಾಕತಕ್ಕದ್ದು.

141. ಮಜೂರಿ ಕೆಲಸಕ್ಕೆ ಸಂಬಂಧಿಸಿದಂತೆ ಸ್ಥಿತ್ಯಂತರಕಾಲೀನ ಉಪಬಂಧಗಳು.– (1) ಒಂದು ವ್ಯವಹಾರ ಸ್ಥಳದಲ್ಲಿ ಸ್ವೀಕರಿಸಿರುವ ಯಾವುದೇ ಹೂಡುವಳಿಗಳನ್ನು ಹಾಗೆಯೇ ರವಾನಿಸಲಾಗಿದ್ದಲ್ಲಿ ಅಥವಾ ಭಾಗಶಃ ಸಂಸ್ಕರಿಸಿದ ನಂತರ ಮುಂದಿನ ಸಂಸ್ಕರಣೆಗಾಗಿ, ಪರೀಕ್ಷೆಗಾಗಿ, ದುರಸ್ತಿಗಾಗಿ, ಪುನಃಸ್ಥಿತಿ ಸ್ಥಾಪನೆಗಾಗಿ ಅಥವಾ ಯಾವುದೇ ಇತರ ಉದ್ದೇಶಕ್ಕಾಗಿ ಒಬ್ಬ ಮಜೂರಿ ಕೆಲಸಗಾರನಿಗೆ ಗೊತ್ತುಪಡಿಸಲಾದ ದಿನಕ್ಕಿಂತ ಮುಂಚಿತವಾಗಿ ಅಸ್ತಿತ್ವದಲ್ಲಿರುವ ಕಾನೂನಿನ ಉಪಬಂಧಗಳಿಗೆ ಅನುಸಾರವಾಗಿ ರವಾನಿಸಿದ್ದಲ್ಲಿ ಮತ್ತು ಅಂಥ ಹೂಡುವಳಿಗಳು ಸದರಿ ಸ್ಥಳಕ್ಕೆ ಗೊತ್ತುಪಡಿಸಲಾದ ದಿನದಂದು ಅಥವಾ ನಂತರ ವಾಪಸ್ಸಾಗಿದ್ದಾಗ, ಅಂಥ ಹೂಡುವಳಿಗಳು ಮಜೂರಿ ಕೆಲಸ ಪೂರ್ಣಗೊಂಡ ನಂತರ ಅಥವಾ ಅನ್ಯಥಾ ಆರು ತಿಂಗಳುಗಳ ಒಳಗಾಗಿ ಸದರಿ ಸ್ಥಳಕ್ಕೆ ವಾಪಸ್ಸಾಗಿದ್ದರೆ, ಯಾವುದೇ ತೆರಿಗೆಯು ಸಂದಾಯವಾಗತಕ್ಕದ್ದಲ್ಲ:

ಪರಂತು, ಆರು ತಿಂಗಳುಗಳ ಅವಧಿಯನ್ನು, ತೋರಿಸಲಾದ ಸಾಕಷ್ಟು ಕಾರಣಗಳಿಗಾಗಿ, ಎರಡು ತಿಂಗಳುಗಳಿಗೆ ಮೀರದ ಹೆಚ್ಚಿನ ಅವಧಿಗೆ ಆಯುಕ್ತರು ವಿಸ್ತರಿಸಬಹುದು:

ಮತ್ತು ಪರಂತು, ಈ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಅವಧಿಯ ಒಳಗಾಗಿ ಅಂಥ ಹೂಡುವಳಿಗಳು ವಾಪಸ್ಸಾಗದಿದ್ದರೆ, ಪ್ರಕರಣ 142ರ ಉಪಪ್ರಕರಣ (8)ರ ಖಂಡ (ಎ)ಯ ಉಪಬಂಧಗಳಿಗೆ ಅನುಸಾರವಾಗಿ ಹೂಡುವಳಿ ತೆರಿಗೆ ಜಮೆಯನ್ನು ವಸೂಲಿ ಮಾಡುವುದಕ್ಕೆ ಬಾಧ್ಯವಿರತಕ್ಕದ್ದು.

(2) ಯಾವುದೇ ಅರೆ–ಸಿದ್ಧಪಡಿಸಿದ ಸರಕುಗಳನ್ನು ವ್ಯವಹಾರ ಸ್ಥಳದಿಂದ ಯಾವುದೇ ಇತರ ವ್ಯವಹಾರ ಸ್ಥಳಗಳಿಗೆ ಕೆಲವು ಉತ್ಪಾಧನಾ ಸಂಸ್ಕರಣೆಗಳನ್ನು ನೆರವೇರಿಸುವುದಕ್ಕಾಗಿ ಗೊತ್ತುಪಡಿಸಲಾದ ದಿನಕ್ಕಿಂತ ಮುಂಚಿತವಾಗಿ ಅಸ್ತಿತ್ವದಲ್ಲಿರುವ ಕಾನೂನಿನ ಉಪಬಂಧಗಳಿಗೆ ಅನುಸಾರವಾಗಿ ರವಾನಿಸಲಾಗಿದ್ದಲ್ಲಿ, ಮತ್ತು ಅಂಥ ಸರಕುಗಳು (ಈ ಉಪಪ್ರಕರಣದಲ್ಲಿ ಇನ್ನು ಮುಂದೆ "ಸದರಿ ಸರಕುಗಳು" ಎಂದು ಉಲ್ಲೇಖಿಸಲಾಗಿದೆ) ಸದರಿ ಸ್ಥಳಕ್ಕೆ ಗೊತ್ತುಪಡಿಸಲಾದ ದಿನದಂದು ಅಥವಾ ನಂತರ ವಾಪಸ್ಸಾಗಿದ್ದಾಗ, ಸದರಿ ಸರಕುಗಳು ಉತ್ಪಾಧನಾ ಸಂಸ್ಕರಣೆಗೆ ಒಳಗಾದ ನಂತರ ಅಥವಾ ಅನ್ಯಥಾ ಆರು ತಿಂಗಳುಗಳ ಒಳಗಾಗಿ ಸದರಿ ಸ್ಥಳಕ್ಕೆ ವಾಪಸ್ಸಾಗಿದ್ದರೆ, ಯಾವುದೇ ತೆರಿಗೆಯು ಸಂದಾಯವಾಗತಕ್ಕದ್ದಲ್ಲ:

ಪರಂತು, ಆರು ತಿಂಗಳುಗಳ ಅವಧಿಯನ್ನು, ತೋರಿಸಲಾದ ಸಾಕಷ್ಟು ಕಾರಣಗಳಿಗಾಗಿ, ಎರಡು ತಿಂಗಳುಗಳಿಗೆ ಮೀರದ ಹೆಚ್ಚಿನ ಅವಧಿಗೆ ಆಯುಕ್ತರು ವಿಸ್ತರಿಸಬಹುದು:

ಮತ್ತು ಪರಂತು, ಈ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಅವಧಿಯ ಒಳಗಾಗಿ ಅಂಥ ಸದರಿ ಸರಕುಗಳು ವಾಪಸ್ಸಾಗದಿದ್ದರೆ, ಪ್ರಕರಣ 142ರ ಉಪಪ್ರಕರಣ (8)ರ ಖಂಡ (ಎ)ಯ ಉಪಬಂಧಗಳಿಗೆ ಅನುಸಾರವಾಗಿ ಹೂಡುವಳಿ ತೆರಿಗೆ ಜಮೆಯನ್ನು ವಸೂಲಿ ಮಾಡುವುದಕ್ಕೆ ಬಾಧ್ಯವಿರತಕ್ಕದ್ದು:

ಅಲ್ಲದೆ ಪರಂತು, ಸರಕುಗಳನ್ನು ರವಾನಿಸುತ್ತಿರುವ ಆ ವ್ಯಕ್ತಿ, ಅಸ್ತಿತ್ವದಲ್ಲಿರುವ ಕಾನೂನಿನ ಉಪಬಂಧಗಳಿಗೆ ಅನುಸಾರವಾಗಿ, ಸದರಿ ಸರಕುಗಳನ್ನು ಯಾವುದೇ ನೋಂದಾಯಿತ ವ್ಯಕ್ತಿಯ ಸ್ಥಳಗಳಿಗೆ ಅಲ್ಲಿಂದ ಪೂರೈಕೆ ಮಾಡುವ ಉದ್ದೇಶಕ್ಕಾಗಿ, ಭಾರತದಲ್ಲಿ ತೆರಿಗೆಯನ್ನು ಸಂದಾಯ ಮಾಡಿ ಅಥವಾ ರಫ್ತುಗಳಿಗಾಗಿ ತೆರಿಗೆಯನ್ನು ಸಂದಾಯ ಮಾಡದೆ ಈ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಅವಧಿಯ ಒಳಗಾಗಿ ವರ್ಗಾಯಿಸಬಹುದು.

(3) ಯಾವುದೇ ಸರಕುಗಳನ್ನು, ವ್ಯವಹಾರ ಸ್ಥಳದಿಂದ ತೆರಿಗೆಯನ್ನು ಸಂದಾಯ ಮಾಡದೆ ಕೆಲವು ಪರೀಕ್ಷೆಗಳನ್ನು ಅಥವಾ ಯಾವುದೇ ಇತರ ಸಂಸ್ಕರಣೆಯನ್ನು ನೆರವೇರಿಸುವುದಕ್ಕಾಗಿ, ಯಾವುದೇ ಇತರ ವ್ಯವಹಾರ ಸ್ಥಳಗಳಿಗೆ ನೋಂದಣಿಯಾಗಿರಲಿ ಅಥವಾ ಇಲ್ಲದಿರಲಿ, ಗೊತ್ತುಪಡಿಸಲಾದ ದಿನಕ್ಕಿಂತ ಮುಂಚಿತವಾಗಿ ಅಸ್ತಿತ್ವದಲ್ಲಿರುವ ಕಾನೂನಿನ ಉಪಬಂಧಗಳಿಗೆ ಅನುಸಾರವಾಗಿ ರವಾನಿಸಲಾಗಿದ್ದಲ್ಲಿ, ಮತ್ತು ಅಂಥ ಸರಕುಗಳು ಸದರಿ ವ್ಯವಹಾರದ ಸ್ಥಳಕ್ಕೆ ಗೊತ್ತುಪಡಿಸಲಾದ ದಿನದಂದು ಅಥವಾ ನಂತರ ವಾಪಸ್ಸಾಗಿದ್ದಾಗ, ಸದರಿ ಸರಕುಗಳು ಪರೀಕ್ಷೆ ಅಥವಾ ಯಾವುದೇ ಇತರ ಸಂಸ್ಕರಣೆಗೆ ಒಳಗಾದ ನಂತರ ಆರು ತಿಂಗಳುಗಳ ಒಳಗಾಗಿ ಸದರಿ ಸ್ಥಳಕ್ಕೆ ವಾಪಸ್ಸಾಗಿದ್ದರೆ, ಯಾವುದೇ ತೆರಿಗೆಯು ಸಂದಾಯವಾಗತಕ್ಕದ್ದಲ್ಲ:

ಪರಂತು, ಆರು ತಿಂಗಳುಗಳ ಅವಧಿಯನ್ನು, ತೋರಿಸಲಾದ ಸಾಕಷ್ಟು ಕಾರಣಗಳಿಗಾಗಿ, ಎರಡು ತಿಂಗಳುಗಳಿಗೆ ಮೀರದ ಹೆಚ್ಚಿನ ಅವಧಿಗೆ ಆಯುಕ್ತರು ವಿಸ್ತರಿಸಬಹುದು:

ಮತ್ತು ಪರಂತು, ಈ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಅವಧಿಯ ಒಳಗಾಗಿ ಅಂಥ ಸದರಿ ಸರಕುಗಳು ವಾಪಸ್ಸಾಗದಿದ್ದರೆ, ಪ್ರಕರಣ 142ರ ಉಪಪ್ರಕರಣ (8)ರ ಖಂಡ (ಎ)ಯ ಉಪಬಂಧಗಳಿಗೆ ಅನುಸಾರವಾಗಿ ಹೂಡುವಳಿ ತೆರಿಗೆ ಜಮೆಯನ್ನು ವಸೂಲಿ ಮಾಡುವುದಕ್ಕೆ ಬಾಧ್ಯವಿರತಕ್ಕದ್ದು:

ಅಲ್ಲದೆ ಪರಂತು, ಸರಕುಗಳನ್ನು ರವಾನಿಸುತ್ತಿರುವ ಆ ವ್ಯಕ್ತಿ, ಅಸ್ತಿತ್ವದಲ್ಲಿರುವ ಕಾನೂನಿನ ಉಪಬಂಧಗಳಿಗೆ ಅನುಸಾರವಾಗಿ, ಸದರಿ ಸರಕುಗಳನ್ನು ಸದರಿ ಇತರ ನೋಂದಾಯಿತ ವ್ಯಕ್ತಿಯ ಸ್ಥಳಗಳಿಗೆ ಅಲ್ಲಿಂದ ಪೂರೈಕೆ ಮಾಡುವ ಉದ್ದೇಶಕ್ಕಾಗಿ, ಭಾರತದಲ್ಲಿ ತೆರಿಗೆಯನ್ನು ಸಂದಾಯ ಮಾಡಿ ಅಥವಾ ರಫ್ತುಗಳಿಗಾಗಿ ತೆರಿಗೆಯನ್ನು ಸಂದಾಯ ಮಾಡದೆ ಈ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಅವಧಿಯ ಒಳಗಾಗಿ ವರ್ಗಾಯಿಸಬಹುದು.

(4) ಸರಕುಗಳನ್ನು ರವಾನಿಸುತ್ತಿರುವ ವ್ಯಕ್ತಿಯು ಮತ್ತು ಮಜೂರಿ ಕೆಲಸಗಾರನು, ಗೊತ್ತುಪಡಿಸಲಾದ ದಿನದಂದು ಸದರಿ ವ್ಯಕ್ತಿಯ ಪರವಾಗಿ ಮಜೂರಿಕೆಲಸಗಾರನಿಂದ ದಾಸ್ತಾನಿನಲ್ಲಿ ಹೊಂದಿರುವ ಹೂಡುವಳಿಗಳ ಅಥವಾ ಸರಕುಗಳ ವಿವರಗಳನ್ನು ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ಮತ್ತು ವಿಧಾನದಲ್ಲಿ ಮತ್ತು ಅಂಥ ಸಮಯದ ಒಳಗಾಗಿ ಘೋಷಿಸಿದ್ದರೆ ಮಾತ್ರ, ಉಪಪ್ರಕರಣಗಳಾದ (1), (2) ಮತ್ತು (3)ರ ಅಡಿಯಲ್ಲಿ ತೆರಿಗೆಯು ಸಂದಾಯವಾಗತಕ್ಕದ್ದಲ್ಲ.

142. ಸ್ಥಿತ್ಯಂತರ ಕಾಲೀನ ಸಂಕೀರ್ಣ ಉಪಬಂಧಗಳು.– (1) ಗೊತ್ತುಪಡಿಸಲಾದ ದಿನಕ್ಕಿಂತ ಆರು ತಿಂಗಳುಗಳಿಗಿಂತ ಮುಂಚಿತವಾಗಿ ಅಲ್ಲದಿರುವ ಅವುಗಳ ಮಾರಾಟದ ಸಮಯದಲ್ಲಿ ಅವುಗಳ ಮೇಲೆ ತೆರಿಗೆ, ಏನಾದರೂ ಇದ್ದರೆ, ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ, ಸಂದಾಯ ಮಾಡಲಾಗಿದ್ದ ಯಾವುದೇ ಸರಕುಗಳು, ಯಾವುದೇ ವ್ಯವಹಾರ ಸ್ಥಳಕ್ಕೆ ಗೊತ್ತುಪಡಿಸಲಾದ ದಿನದಂದು ಅಥವಾ ನಂತರ ವಾಪಸ್ಸಾಗಿದ್ದಲ್ಲಿ, ಸದರಿ ಸರಕುಗಳು ಒಬ್ಬ ನೋಂದಾಯಿತ ವ್ಯಕ್ತಿಯನ್ನು ಹೊರತು ಪಡಿಸಿದ, ಇತರ ಒಬ್ಬ ವ್ಯಕ್ತಿಯಿಂದ ಗೊತ್ತುಪಡಿಸಲಾದ ದಿನದಿಂದ ಆರು ತಿಂಗಳುಗಳ ಅವಧಿಯ ಒಳಗಾಗಿ ಸದರಿ ವ್ಯವಹಾರ ಸ್ಥಳಕ್ಕೆ ವಾಪಸ್ಸಾಗಿದ್ದಲ್ಲಿ ಮತ್ತು ಯುಕ್ತ ಅಧಿಕಾರಿಗೆ ಮನದಟ್ಟಾಗುವಂತೆ ಅಂಥ ಸರಕುಗಳನ್ನು ಗುರುತಿಸಬಹುದಾಗಿದ್ದಲ್ಲಿ, ನೋಂದಾಯಿತ ವ್ಯಕ್ತಿಯು ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಸಂದಾಯ ಮಾಡಿದ ತೆರಿಗೆಯ ಮರುಪಾವತಿಗೆ ಅರ್ಹನಿರತಕ್ಕದ್ದು:

ಪರಂತು ಸದರಿ ಸರಕುಗಳು ಒಬ್ಬ ನೋಂದಾಯಿತ ವ್ಯಕ್ತಿಯಿಂದ ವಾಪಸ್ಸು ಮಾಡಲ್ಪಟ್ಟಿದ್ದರೆ, ಅಂಥ ಸರಕುಗಳ ವಾಪಸ್ಸಾತಿಯನ್ನು ಪೂರೈಕೆ ಎಂದು ಪರಿಭಾವಿಸತಕ್ಕದ್ದು.

(2) (ಎ) ಗೊತ್ತುಪಡಿಸಲಾದ ದಿನಕ್ಕಿಂತ ಮುಂಚಿತವಾಗಿ ಮಾಡಿದ ಕರಾರಿಗೆ ಅನುಸಾರವಾಗಿ, ಗೊತ್ತುಪಡಿಸಲಾದ ದಿನದಂದು ಅಥವಾ ನಂತರ, ಯಾವುದೇ ಸರಕುಗಳ ಬೆಲೆಯು ಮೇಲ್ಮುಖವಾಗಿ ಪರಿಷ್ಕರಣೆಯಾಗಿದ್ದಲ್ಲಿ, ಅಂಥ ಸರಕುಗಳನ್ನು ಮಾರಾಟ ಮಾಡಿದ್ದ ನೋಂದಾಯಿತ ವ್ಯಕ್ತಿಯು ಸ್ವೀಕರಿಸುವವನಿಗೆ, ನಿಯಮಿಸಬಹುದಾದ ಅಂಥ ವಿವರಗಳನ್ನು ಒಳಗೊಂಡ ಪೂರಕ ಬೆಲೆಪಟ್ಟಿ ಅಥವಾ ಖರ್ಚಿನ ಚೀಟಿಯನ್ನು, ಅಂಥ ಬೆಲೆ ಪರಿಷ್ಕರಣೆಯ ಮೂವತ್ತು ದಿನಗಳ ಒಳಗಾಗಿ ನೀಡತಕ್ಕದ್ದು ಮತ್ತು ಈ ಅಧಿನಿಯಮದ ಉದ್ದೇಶಗಳಿಗಾಗಿ ಅಂಥ ಪೂರಕ ಬೆಲೆಪಟ್ಟಿ ಅಥವಾ ಖರ್ಚಿನ ಚೀಟಿಯನ್ನು, ಈ ಅಧಿನಿಯಮದ ಅಡಿಯಲ್ಲಿ ಮಾಡಲಾದ ಹೊರಮುಖ ಪೂರೈಕೆಗಳಿಗೆ ಸಂಬಂಧಿಸಿದಂತೆ ನೀಡಲಾದುದು ಎಂದು ಪರಿಭಾವಿಸತಕ್ಕದ್ದು.

(ಬಿ) ಗೊತ್ತುಪಡಿಸಲಾದ ದಿನಕ್ಕಿಂತ ಮುಂಚಿತವಾಗಿ ಮಾಡಿದ ಕರಾರಿಗೆ ಅನುಸಾರವಾಗಿ, ಗೊತ್ತುಪಡಿಸಲಾದ ದಿನದಂದು ಅಥವಾ ನಂತರ, ಯಾವುದೇ ಸರಕುಗಳ ಬೆಲೆಯು ಕೆಳಮುಖವಾಗಿ ಪರಿಷ್ಕರಣೆಯಾಗಿದ್ದಲ್ಲಿ, ಅಂಥ ಸರಕುಗಳನ್ನು ಮಾರಾಟ ಮಾಡಿದ್ದ ನೋಂದಾಯಿತ ವ್ಯಕ್ತಿಯು ಸ್ವೀಕರಿಸುವವನಿಗೆ, ನಿಯಮಿಸಬಹುದಾದ ಅಂಥ ವಿವರಗಳನ್ನು ಒಳಗೊಂಡ ಜಮೆಯ ಚೀಟಿಯನ್ನು, ಅಂಥ ಬೆಲೆ ಪರಿಷ್ಕರಣೆಯ ಮೂವತ್ತು ದಿನಗಳ ಒಳಗಾಗಿ ನೀಡಬಹುದು, ಮತ್ತು ಈ ಅಧಿನಿಯಮದ ಉದ್ದೇಶಗಳಿಗಾಗಿ ಅಂಥ ಜಮೆಯ ಚೀಟಿಯನ್ನು, ಈ ಅಧಿನಿಯಮದ ಅಡಿಯಲ್ಲಿ ಮಾಡಲಾದ ಹೊರಮುಖ ಪೂರೈಕೆಗಳಿಗೆ ಸಂಬಂಧಿಸಿದಂತೆ ನೀಡಲಾದುದು ಎಂದು ಪರಿಭಾವಿಸತಕ್ಕದ್ದು:

ಪರಂತು ನೋಂದಾಯಿತ ವ್ಯಕ್ತಿಯು, ಜಮೆಯ ಚೀಟಿಯನ್ನು ನೀಡಿದ ಪ್ರಯುಕ್ತ ತನ್ನ ತೆರಿಗೆ ಬಾಧ್ಯತೆಯನ್ನು ಇಳಿಕೆ ಮಾಡಲು, ಅಂಥ ತೆರಿಗೆ ಬಾಧ್ಯತೆ ಇಳಿಕೆಗೆ ಸಂವಾದಿಯಾಗಿ ಆ ಜಮೆಯ ಚೀಟಿಯನ್ನು ಸ್ವೀಕರಿಸುವವನು ತನ್ನ ಹೂಡುವಳಿ ತೆರಿಗೆಯ ಜಮೆಯನ್ನು ಇಳಿಕೆ ಮಾಡಿದ್ದಾಗ ಮಾತ್ರ ಅವಕಾಶ ನೀಡತಕ್ಕದ್ದು.

(3) ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಸಂದಾಯ ಮಾಡಿದ ಹೂಡುವಳಿ ತೆರಿಗೆ ಜಮೆ, ತೆರಿಗೆ, ಬಡ್ಡಿ ಅಥವಾ ಯಾವುದೇ ಇತರ ಮೊತ್ತದ ಮರುಪಾವತಿಗಾಗಿ ಯಾವುದೇ ವ್ಯಕ್ತಿಯಿಂದ, ಗೊತ್ತುಪಡಿಸಲಾದ ದಿನಕ್ಕಿಂತ ಮುಂಚಿತವಾಗಿ, ದಿನದಂದು ಅಥವಾ ಅದರ ನಂತರ ಸಲ್ಲಿಕೆಯಾಗಿರುವ ಪ್ರತಿಯೊಂದು ಮರುಪಾವತಿಯ ಕ್ಲೇಮನ್ನು, ಅಸ್ತಿತ್ವದಲ್ಲಿರುವ ಕಾನೂನಿನ ಉಪಬಂಧಗಳಿಗನುಸಾರವಾಗಿ ವಿಲೇವಾರಿ ಮಾಡತಕ್ಕದ್ದು ಮತ್ತು ಆತನಿಗೆ ಅಂತಿಮವಾಗಿ ಸಲ್ಲುವಂತಹ ಯಾವುದೇ ಮೊತ್ತವನ್ನು ಸದರಿ ಕಾನೂನಿನ ಉಪಬಂಧಗಳಿಗನುಸಾರವಾಗಿ ಆತನಿಗೆ ನಗದಾಗಿ ಮರುಪಾವತಿ ಮಾಡತಕ್ಕದ್ದು:

ಪರಂತು, ಹೂಡುವಳಿ ತೆರಿಗೆ ಜಮೆ ಮೊತ್ತದ ಮರುಪಾವತಿಯ ಯಾವುದೇ ಕ್ಲೇಮು ಪೂರ್ಣವಾಗಿ ಅಥವಾ ಭಾಗಶಃ ತಿರಸ್ಕೃತವಾಗಿದ್ದಲ್ಲಿ, ಹಾಗೆ ತಿರಸ್ಕೃತಗೊಂಡಿರುವ ಮೊತ್ತವು ರದ್ದುಗೊಳ್ಳತಕ್ಕದ್ದು:

ಮತ್ತು ಪರಂತು, ಹೂಡುವಳಿ ತೆರಿಗೆ ಜಮೆಯ ಯಾವುದೇ ಮೊತ್ತದ ಮರುಪಾವತಿಗೆ, ಸದರಿ ಮೊತ್ತದ ಬಾಕಿಯು, ಗೊತ್ತುಪಡಿಸಲಾದ ದಿನದಂದು ಈ ಅಧಿನಿಯಮದ ಅಡಿಯಲ್ಲಿ ಮುಂದಕ್ಕೆ ಸಾಗಿಸಲಾಗಿದ್ದಲ್ಲಿ ಅವಕಾಶ ನೀಡತಕ್ಕದ್ದಲ್ಲ.

(4) ಗೊತ್ತುಪಡಿಸಲಾದ ದಿನಕ್ಕಿಂತ ಮುಂಚಿತವಾಗಿ, ಅಥವಾ ಅದರ ನಂತರ ರಫ್ತಾಗಿರುವ ಸರಕುಗಳಿಗೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಸಂದಾಯ ಮಾಡಿದ ಯಾವುದೇ ತೆರಿಗೆಯ ಮರುಪಾವತಿಗಾಗಿ ಗೊತ್ತುಪಡಿಸಲಾದ ದಿನದ ನಂತರ ಸಲ್ಲಿಕೆಯಾಗಿರುವ ಪ್ರತಿಯೊಂದು ಮರುಪಾವತಿಯ ಕ್ಲೇಮನ್ನು ಅಸ್ತಿತ್ವದಲ್ಲಿರುವ ಕಾನೂನಿನ ಉಪಬಂಧಗಳಿಗೆ ಅನುಸಾರವಾಗಿ ವಿಲೇವಾರಿ ಮಾಡತಕ್ಕದ್ದು:

ಪರಂತು, ಹೂಡುವಳಿ ತೆರಿಗೆ ಜಮೆ ಮೊತ್ತದ ಮರುಪಾವತಿಯ ಯಾವುದೇ ಕ್ಲೇಮು ಪೂರ್ಣವಾಗಿ ಅಥವಾ ಭಾಗಶಃ ತಿರಸ್ಕೃತವಾಗಿದ್ದಲ್ಲಿ, ಹಾಗೆ ತಿರಸ್ಕೃತಗೊಂಡಿರುವ ಮೊತ್ತವು ರದ್ದುಗೊಳ್ಳತಕ್ಕದ್ದು:

ಮತ್ತು ಪರಂತು, ಹೂಡುವಳಿ ತೆರಿಗೆ ಜಮೆಯ ಯಾವುದೇ ಮೊತ್ತದ ಮರುಪಾವತಿಗೆ, ಸದರಿ ಮೊತ್ತದ ಬಾಕಿಯು, ಗೊತ್ತುಪಡಿಸಲಾದ ದಿನದಂದು ಈ ಅಧಿನಿಯಮದ ಅಡಿಯಲ್ಲಿ ಮುಂದಕ್ಕೆ ಸಾಗಿಸಲಾಗಿದ್ದಲ್ಲಿ ಅವಕಾಶ ನೀಡತಕ್ಕದ್ದಲ್ಲ.

(5) ಈ ಅಧಿನಿಯಮದಲ್ಲಿ ಇದಕ್ಕೆ ವಿರುದ್ಧವಾಗಿ ಏನೇ ಒಳಗೊಂಡಿದ್ದರೂ ಸಹ, ಗೊತ್ತುಪಡಿಸಲಾದ ದಿನಕ್ಕಿಂತ ಮುಂಚಿತವಾಗಿ ಹಿಮ್ಮುಖಗೊಳಿಸಲಾದ ಯಾವುದೇ ಹೂಡುವಳಿ ತೆರಿಗೆ ಜಮೆಯ ಮೊತ್ತವನ್ನು ಈ ಅಧಿನಿಯಮದ ಅಡಿಯಲ್ಲಿ ಹೂಡುವಳಿ ತೆರಿಗೆ ಜಮೆಯನ್ನಾಗಿ ಅಂಗೀಕರಿಸತಕ್ಕದ್ದಲ್ಲ.

(6) (ಎ) ಗೊತ್ತುಪಡಿಸಲಾದ ದಿನಕ್ಕಿಂತ ಮುಂಚಿತವಾದ ಅಥವಾ ನಂತರದ ದಿನದಂದು ಹೂಡುವಳಿ ತೆರಿಗೆ ಜಮೆಯ ಕ್ಲೇಮಿಗೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ಕಾನೂನಿನಡಿಯಲ್ಲಿ ಪ್ರಾರಂಭಿಸಲಾಗಿರುವ ಪ್ರತಿಯೊಂದು ಅಪೀಲು, ಪುನರೀಕ್ಷಣೆ, ಪುನರಾವಲೋಕನ ನಡಾವಳಿಗಳು ಅಥವಾ ಉಲ್ಲೇಖಗಳನ್ನು ಅಸ್ತಿತ್ವದಲ್ಲಿರುವ ಕಾನೂನಿನ ಉಪಬಂಧಗಳಿಗೆ ಅನುಸಾರವಾಗಿ ವಿಲೇವಾರಿ ಮಾಡತಕ್ಕದ್ದು ಮತ್ತು ಕ್ಲೇಮುದಾರನಿಗೆ ಅಂಗೀಕಾರಾರ್ಹವಾಗಿ ಕಂಡುಬರುವ ಜಮೆಯ ಯಾವುದೇ ಮೊತ್ತವನ್ನು ಅಸ್ತಿತ್ವದಲ್ಲಿರುವ ಕಾನೂನಿನ ಉಪಬಂಧಗಳಿಗೆ ಅನುಸಾರವಾಗಿ ಆತನಿಗೆ ನಗದಾಗಿ ಮರುಪಾವತಿ ಮಾಡತಕ್ಕದ್ದು, ಮತ್ತು ತಿರಸ್ಕೃತವಾದ ಮೊತ್ತ, ಏನಾದರೂ ಇದ್ದಲ್ಲಿ, ಅದನ್ನು ಈ ಅಧಿನಿಯಮದ ಅಡಿಯಲ್ಲಿ ಹೂಡುವಳಿ ತೆರಿಗೆ ಜಮೆಯನ್ನಾಗಿ ಅಂಗೀಕರಿಸತಕ್ಕದ್ದಲ್ಲ:

ಪರಂತು, ಹೂಡುವಳಿ ತೆರಿಗೆ ಜಮೆಯ ಯಾವುದೇ ಮೊತ್ತದ ಮರುಪಾವತಿಗೆ, ಸದರಿ ಮೊತ್ತದ ಬಾಕಿಯನ್ನು ಗೊತ್ತುಪಡಿಸಲಾದ ದಿನದಂದು, ಈ ಅಧಿನಿಯಮದ ಅಡಿಯಲ್ಲಿ ಮುಂದಕ್ಕೆ ಸಾಗಿಸಿದ್ದಲ್ಲಿ, ಅವಕಾಶ ನೀಡತಕ್ಕದ್ದಲ್ಲ.

(ಬಿ) ಗೊತ್ತುಪಡಿಸಲಾದ ದಿನಕ್ಕಿಂತ ಮುಂಚಿತವಾದ ಅಥವಾ ನಂತರದ ದಿನದಂದು, ಹೂಡುವಳಿ ತೆರಿಗೆ ಜಮೆಯ ವಸೂಲಾತಿಗೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ಕಾನೂನಿನಡಿಯಲ್ಲಿ ಪ್ರಾರಂಭಿಸಲಾಗಿರುವ ಪ್ರತಿಯೊಂದು ಅಪೀಲಿನ ನಡಾವಳಿಗಳು, ಪುನರೀಕ್ಷಣೆ, ಪುನರಾವಲೋಕನ, ಅಥವಾ ಉಲ್ಲೇಖಗಳನ್ನು ಅಸ್ತಿತ್ವದಲ್ಲಿರುವ ಕಾನೂನಿನ ಉಪಬಂಧಗಳಿಗನುಸಾರವಾಗಿ ವಿಲೇವಾರಿ ಮಾಡತಕ್ಕದ್ದು ಮತ್ತು ಅಂಥ ಅಪೀಲು ಪುನರೀಕ್ಷಣೆ, ಪುನರಾವಲೋಕನ ಅಥವಾ ಉಲ್ಲೇಖಗಳ ಪರಿಣಾಮವಾಗಿ ಜಮೆಯ ಯಾವುದೇ ಮೊತ್ತವು ವಸೂಲಾತಿಯಾಗಬೇಕಾಗಿ ಬಂದಲ್ಲಿ, ಅದನ್ನು ಅಸ್ತಿತ್ವದಲ್ಲಿರುವ ಕಾನೂನಿನಡಿಯಲ್ಲಿ ವಸೂಲಿ ಮಾಡಿರದ ಹೊರತು, ಈ ಅಧಿನಿಯಮದ ಅಡಿಯಲ್ಲಿನ ಹಿಂಬಾಕಿಯಂತೆ ವಸೂಲಿ ಮಾಡತಕ್ಕದ್ದು ಮತ್ತು ಹಾಗೆ ವಸೂಲಿ ಮಾಡಿದ ಮೊತ್ತವನ್ನು ಈ ಅಧಿನಿಯಮದ ಅಡಿ ಹೂಡುವಳಿ ತೆರಿಗೆ ಜಮೆಯಾಗಿ ಅಂಗೀಕರಿಸತಕ್ಕದ್ದಲ್ಲ.

(7) (ಎ) ಗೊತ್ತುಪಡಿಸಲಾದ ದಿನಕ್ಕಿಂತ ಮುಂಚಿತವಾದ ಅಥವಾ ನಂತರದ ದಿನದಂದು, ಹುಟ್ಟುವಳಿ ತೆರಿಗೆ ಬಾಧ್ಯತೆಗೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ಕಾನೂನಿನಡಿಯಲ್ಲಿ ಪ್ರಾರಂಭಿಸಲಾಗಿರುವ ಪ್ರತಿಯೊಂದು ಅಪೀಲಿನ ನಡಾವಳಿಗಳು, ಪುನರೀಕ್ಷಣೆ, ಪುನರಾವಲೋಕನ, ಅಥವಾ ಉಲ್ಲೇಖಗಳನ್ನು ಅಸ್ತಿತ್ವದಲ್ಲಿರುವ ಕಾನೂನಿನ ಉಪಬಂಧಗಳಿಗನುಸಾರವಾಗಿ ವಿಲೇವಾರಿ ಮಾಡತಕ್ಕದ್ದು ಮತ್ತು ಅಂಥ ಅಪೀಲು ಪುನರೀಕ್ಷಣೆ, ಪುನರಾವಲೋಕನ ಅಥವಾ ಉಲ್ಲೇಖಗಳ ಪರಿಣಾಮವಾಗಿ ಯಾವುದೇ ಮೊತ್ತವು ವಸೂಲಾತಿಯಾಗಬೇಕಾಗಿ ಬಂದಲ್ಲಿ, ಅದನ್ನು ಅಸ್ತಿತ್ವದಲ್ಲಿರುವ ಕಾನೂನಿನಡಿಯಲ್ಲಿ ವಸೂಲಿ ಮಾಡಿರದ ಹೊರತು, ಈ ಅಧಿನಿಯಮದ ಅಡಿಯಲ್ಲಿನ ಹಿಂಬಾಕಿಯಂತೆ ವಸೂಲಿ ಮಾಡತಕ್ಕದ್ದು ಮತ್ತು ಹಾಗೆ ವಸೂಲಿ ಮಾಡಿದ ಮೊತ್ತವನ್ನು ಈ ಅಧಿನಿಯಮದ ಅಡಿ ಹೂಡುವಳಿ ತೆರಿಗೆ ಜಮೆಯಾಗಿ ಅಂಗೀಕರಿಸತಕ್ಕದ್ದಲ್ಲ.

(ಬಿ) ಗೊತ್ತುಪಡಿಸಲಾದ ದಿನಕ್ಕಿಂತ ಮುಂಚಿತವಾದ ಅಥವಾ ನಂತರದ ದಿನದಂದು, ಹುಟ್ಟುವಳಿ ತೆರಿಗೆ ಬಾಧ್ಯತೆಗೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ಕಾನೂನಿನಡಿಯಲ್ಲಿ ಪ್ರಾರಂಭಿಸಲಾಗಿರುವ ಪ್ರತಿಯೊಂದು ಅಪೀಲಿನ ನಡಾವಳಿಗಳು, ಪುನರೀಕ್ಷಣೆ, ಪುನರಾವಲೋಕನ, ಅಥವಾ ಅಭಿಪ್ರಾಯಗಳನ್ನು ಅಸ್ತಿತ್ವದಲ್ಲಿರುವ ಕಾನೂನಿನ ಉಪಬಂಧಗಳಿಗನುಸಾರವಾಗಿ ವಿಲೇವಾರಿ ಮಾಡತಕ್ಕದ್ದು ಮತ್ತು ಕ್ಷೇಮುದಾರನಿಗೆ ಅಂಗೀಕಾರರ್ಹವಾಗಿ ಕಂಡುಬರುವ ಯಾವುದೇ ಮೊತ್ತವನ್ನು ಅಸ್ತಿತ್ವದಲ್ಲಿರುವ ಕಾನೂನಿನ ಉಪಬಂಧಗಳಿಗೆ ಅನುಸಾರವಾಗಿ ಆತನಿಗೆ ನಗದಾಗಿ ಮರುಪಾವತಿ ಮಾಡತಕ್ಕದ್ದು, ಮತ್ತು ತಿರಸ್ಕೃತವಾದ ಮೊತ್ತ, ಏನಾದರೂ ಇದ್ದಲ್ಲಿ, ಅದನ್ನು ಈ ಅಧಿನಿಯಮದ ಅಡಿಯಲ್ಲಿ ಹೂಡುವಳಿ ತೆರಿಗೆ ಜಮೆಯನ್ನಾಗಿ ಅಂಗೀಕರಿಸತಕ್ಕದ್ದಲ್ಲ:

(8) (ಎ) ಗೊತ್ತುಪಡಿಸಲಾದ ದಿನಕ್ಕಿಂತ ಮುಂಚಿತವಾದ ಅಥವಾ ನಂತರದ ದಿನದಂದು, ಹೂಡಿದ ಒಂದು ಕರನಿರ್ಧರಣೆಯ ಅಥವಾ ನ್ಯಾಯನಿರ್ಣಯ ನಡಾವಳಿಗಳಿಗೆ ಅನುಸಾರವಾಗಿ ತೆರಿಗೆ, ಬಡ್ಡಿ, ಜುಲ್ಮಾನೆ ಅಥವಾ ದಂಡದ ಯಾವುದೇ ಮೊತ್ತವು ವಸೂಲಾತಿಯಾಗಬೇಕಾಗಿ ಬಂದಲ್ಲಿ, ಅದನ್ನು ಅಸ್ತಿತ್ವದಲ್ಲಿರುವ ಕಾನೂನಿನಡಿಯಲ್ಲಿ ವಸೂಲಿ ಮಾಡಿರದ ಹೊರತು, ಈ ಅಧಿನಿಯಮದ ಅಡಿಯಲ್ಲಿನ ಹಿಂಬಾಕಿಯಂತೆ ವಸೂಲಿ ಮಾಡತಕ್ಕದ್ದು ಮತ್ತು ಹಾಗೆ ವಸೂಲಿ ಮಾಡಿದ ಮೊತ್ತವನ್ನು ಈ ಅಧಿನಿಯಮದ ಅಡಿ ಹೂಡುವಳಿ ತೆರಿಗೆ ಜಮೆಯಾಗಿ ಅಂಗೀಕರಿಸತಕ್ಕದ್ದಲ್ಲ.

(ಬಿ) ಗೊತ್ತುಪಡಿಸಲಾದ ದಿನಕ್ಕಿಂತ ಮುಂಚಿತವಾದ ಅಥವಾ ನಂತರದ ದಿನದಂದು, ಹೂಡಿದ ಒಂದು ಕರನಿರ್ಧರಣೆಯ ಅಥವಾ ನ್ಯಾಯನಿರ್ಣಯ ನಡಾವಳಿಗಳಿಗೆ ಅನುಸಾರವಾಗಿ ತೆರಿಗೆ, ಬಡ್ಡಿ, ಜುಲ್ಮಾನೆ ಅಥವಾ ದಂಡದ ಯಾವುದೇ ಮೊತ್ತವು ತೆರಿಗೆದಾಯಕ ವ್ಯಕ್ತಿಗೆ ಮರುಪಾವತಿಯಾಗಬೇಕಾಗಿ ಬಂದಲ್ಲಿ, ಅದನ್ನು ಆತನಿಗೆ ಸದರಿ ಕಾನೂನಿನ ಅಡಿಯಲ್ಲಿ ನಗದಾಗಿ ಮರುಪಾವತಿ ಮಾಡತಕ್ಕದ್ದು, ಮತ್ತು ತಿರಸ್ಕೃತವಾದ ಮೊತ್ತ, ಏನಾದರೂ ಇದ್ದಲ್ಲಿ, ಅದನ್ನು ಈ ಅಧಿನಿಯಮದ ಅಡಿಯಲ್ಲಿ ಹೂಡುವಳಿ ತೆರಿಗೆ ಜಮೆಯನ್ನಾಗಿ ಅಂಗೀಕರಿಸತಕ್ಕದ್ದಲ್ಲ:

(9) (ಎ) ಅಸ್ತಿತ್ವದಲ್ಲಿರುವ ಕಾನೂನಿನಡಿಯಲ್ಲಿ ಒದಗಿಸಿದ್ದ ಯಾವುದೇ ರಿಟರ್ನ್ ಗೊತ್ತುಪಡಿಸಲಾದ ದಿನದ ನಂತರ ಪರಿಷ್ಕರಣೆಯಾಗಿದ್ದಲ್ಲಿ, ಅಂಥ ಪರಿಷ್ಕರಣೆಗೆ ಅನುಸಾರವಾಗಿ ಯಾವುದೇ ಮೊತ್ತವು ವಸೂಲಾತಿಯಾಗಬೇಕಾಗಿ ಕಂಡುಬಂದಲ್ಲಿ ಅಥವಾ ಹೂಡುವಳಿ ತೆರಿಗೆ ಜಮೆಯ ಯಾವುದೇ ಮೊತ್ತವು ಅಂಗೀಕರಸಲು ಅನರ್ಹ ಎಂದು ಕಂಡುಬಂದಲ್ಲಿ, ಅದನ್ನು ಅಸ್ತಿತ್ವದಲ್ಲಿರುವ ಕಾನೂನಿನಡಿಯಲ್ಲಿ ವಸೂಲಿ ಮಾಡಿರದ ಹೊರತು, ಈ ಅಧಿನಿಯಮದ ಅಡಿಯಲ್ಲಿನ ಹಿಂಬಾಕಿಯಂತೆ ವಸೂಲಿ ಮಾಡತಕ್ಕದ್ದು ಮತ್ತು ಹಾಗೆ ವಸೂಲಿ ಮಾಡಿದ ಮೊತ್ತವನ್ನು ಈ ಅಧಿನಿಯಮದ ಅಡಿ ಹೂಡುವಳಿ ತೆರಿಗೆ ಜಮೆಯಾಗಿ ಅಂಗೀಕರಿಸತಕ್ಕದ್ದಲ್ಲ.

(ಬಿ) ಅಸ್ತಿತ್ವದಲ್ಲಿರುವ ಕಾನೂನಿನಡಿಯಲ್ಲಿ ಒದಗಿಸಿದ್ದ ಯಾವುದೇ ರಿಟರ್ನ್ ಗೊತ್ತುಪಡಿಸಲಾದ ದಿನದ ನಂತರ ಆದರೆ ಅಸ್ತಿತ್ವದಲ್ಲಿರುವ ಕಾನೂನಿನಡಿಯಲ್ಲಿ ಅಂಥ ಪರಿಷ್ಕರಣೆಗೆ ನಿರ್ದಿಷ್ಟ ಪಡಿಸಿದ ಕಾಲಮಿತಿಯ ಒಳಗಾಗಿ ಪರಿಷ್ಕರಿಸಿದ್ದಲ್ಲಿ, ಅಂಥ ಪರಿಷ್ಕರಣೆಗೆ ಅನುಸಾರವಾಗಿ ಯಾವುದೇ ಮೊತ್ತವು ಯಾವುದೇ ತೆರಿಗೆದಾಯಕ ವ್ಯಕ್ತಿಗೆ ಮರುಪಾವತಿಯಾಗಬೇಕಾಗಿ ಬಂದಲ್ಲಿ, ಅಥವಾ ಹೂಡುವಳಿ ತೆರಿಗೆ ಜಮೆಯ ಯಾವುದೇ ಮೊತ್ತವು ಅಂಗೀಕಾರಾರ್ಹವಾಗಿ ಕಂಡುಬಂದಲ್ಲಿ, ಅದನ್ನು ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಆತನಿಗೆ ನಗದಾಗಿ ಮರುಪಾವತಿ ಮಾಡತಕ್ಕದ್ದು, ಮತ್ತು ತಿರಸ್ಕೃತವಾದ ಮೊತ್ತ, ಏನಾದರೂ ಇದ್ದಲ್ಲಿ, ಅದನ್ನು ಈ ಅಧಿನಿಯಮದ ಅಡಿಯಲ್ಲಿ ಹೂಡುವಳಿ ತೆರಿಗೆ ಜಮೆಯನ್ನಾಗಿ ಅಂಗೀಕರಿಸತಕ್ಕದ್ದಲ್ಲ:

(10) ಈ ಅಧ್ಯಾಯದಲ್ಲಿ ಉಪಬಂಧಿಸಿದುದನ್ನುಳಿದು, ಗೊತ್ತುಪಡಿಸಲಾದ ದಿನಕ್ಕಿಂತ ಮುಂಚಿತವಾಗಿ ಮಾಡಿದ ಕರಾರಿಗೆ ಅನುಸಾರವಾಗಿ, ಗೊತ್ತುಪಡಿಸಲಾದ ದಿನದಂದು ಅಥವಾ ನಂತರ, ಪೂರೈಕೆ ಮಾಡಿದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡು, ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ತೆರಿಗೆಗೆ ಬಾಧ್ಯವಿರತಕ್ಕದ್ದು.

(11) (ಎ) ಪ್ರಕರಣ 12ರಲ್ಲಿ ಏನೇ ಒಳಗೊಂಡಿದ್ದರೂ ಸಹ, ಈ ಅಧಿನಿಯಮದ ಅಡಿಯಲ್ಲಿ ಸರಕುಗಳ ಮೇಲೆ ಯಾವುದೇ ತೆರಿಗೆಯನ್ನು, ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ರ (2004ರ ಕರ್ನಾಟಕ ಅಧಿನಿಯಮ 32) ಅಡಿಯಲ್ಲಿ ಸದರಿ ಸರಕುಗಳ ಮೇಲೆ ವಿಧಿಸಬಹುದಾಗಿದ್ದ ತೆರಿಗೆಯಷ್ಟರ ಮಟ್ಟಿಗೆ ಸಂದಾಯ ಮಾಡತಕ್ಕದ್ದಲ್ಲ,

(ಬಿ) ಪ್ರಕರಣ 13 ರಲ್ಲಿ ಏನೇ ಒಳಗೊಂಡಿದ್ದರೂ ಸಹ, ಈ ಅಧಿನಿಯಮದ ಅಡಿಯಲ್ಲಿ ಸೇವೆಗಳ ಮೇಲೆ ಯಾವುದೇ ತೆರಿಗೆಯನ್ನು, ಹಣಕಾಸು ಅಧಿನಿಯಮ, 1994 (1994ರ ಕೇಂದ್ರ ಅಧಿನಿಯಮ 32)ರ ಅಧ್ಯಾಯ Vರ ಅಡಿಯಲ್ಲಿ ಸದರಿ ಸೇವೆಗಳ ಮೇಲೆ ವಿಧಿಸಬಹುದಾಗಿದ್ದ ತೆರಿಗೆಯಷ್ಟರ ಮಟ್ಟಿಗೆ ಸಂದಾಯ ಮಾಡತಕ್ಕದ್ದಲ್ಲ;

(ಸಿ) ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003 (2004ರ ಕರ್ನಾಟಕ ಅಧಿನಿಯಮ 32) ಮತ್ತು ಹಣಕಾಸು ಅಧಿನಿಯಮ, 1994 (1994ರ ಕೇಂದ್ರ ಅಧಿನಿಯಮ 32)ರ ಅಧ್ಯಾಯ V ಇವುಗಳೆರಡರ ಅಡಿಯಲ್ಲಿ ಯಾವುದೇ ಪೂರೈಕೆಯ ಮೇಲೆ ತೆರಿಗೆಯನ್ನು ಸಂದಾಯ ಮಾಡಿದ್ದಲ್ಲಿ, ಈ ಅಧಿನಿಯಮದ ಅಡಿಯಲ್ಲಿ ತೆರಿಗೆಯನ್ನು ವಿಧಿಸಬಹುದಾಗಿರತಕ್ಕದ್ದು ಮತ್ತು ತೆರಿಗೆದಾಯಕ ವ್ಯಕ್ತಿಯು ಗೊತ್ತುಪಡಿಸಲಾದ ದಿನದ ನಂತರ ಮಾಡಿದ ಪೂರೈಕೆಗಳಷ್ಟರ ಮಟ್ಟಿಗೆ, ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಸಂದಾಯ ಮಾಡಿದ

ಮೌಲ್ಯವರ್ಧಿತ ತೆರಿಗೆ ಅಥವಾ ಸೇವಾ ತೆರಿಗೆಯ ಜಮೆಯನ್ನು ತೆಗೆದುಕೊಳ್ಳಲು ಅರ್ಹನಿರತಕ್ಕದ್ದು ಮತ್ತು ಅಂಥ ಜಮೆಯನ್ನು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಲೆಕ್ಕಹಾಕತಕ್ಕದ್ದು.

(12) ಗೊತ್ತುಪಡಿಸಲಾದ ದಿನಕ್ಕಿಂತ ಆರು ತಿಂಗಳುಗಳಿಗಿಂತ ಮುಂಚಿತವಾಗಿ ಅಲ್ಲದ, ಅನುಮೋದನೆಯ ಆಧಾರದಲ್ಲಿ ಕಳುಹಿಸಲಾಗಿರುವ ಸರಕುಗಳು ಕೊಳ್ಳುವವನಿಂದ ತಿರಸ್ಕೃತವಾಗಿದ್ದಲ್ಲಿ ಅಥವಾ ಅನುಮೋದನೆಯಾಗದಿದ್ದಲ್ಲಿ ಮತ್ತು ಗೊತ್ತುಪಡಿಸಲಾದ ದಿನದಂದು ಅಥವಾ ಅದರ ನಂತರ ಮಾರಾಟಗಾರನಿಗೆ ವಾಪಸ್ಸಾಗಿದ್ದಲ್ಲಿ, ಅಂಥ ಸರಕುಗಳು ಗೊತ್ತುಪಡಿಸಲಾದ ದಿನದಿಂದ ಆರು ತಿಂಗಳುಗಳ ಅವಧಿಯ ಒಳಗಾಗಿ ವಾಪಸ್ಸಾಗಿದ್ದರೆ, ಯಾವುದೇ ತೆರಿಗೆಯು ಸಂದಾಯವಾಗತಕ್ಕದ್ದಲ್ಲ:

ಪರಂತು, ಆರು ತಿಂಗಳುಗಳ ಅವಧಿಯನ್ನು, ತೋರಿಸಲಾದ ಸಾಕಷ್ಟು ಕಾರಣಗಳಿಗಾಗಿ, ಎರಡು ತಿಂಗಳುಗಳಿಗೆ ಮೀರದ ಹೆಚ್ಚಿನ ಅವಧಿಗೆ ಆಯುಕ್ತರು ವಿಸ್ತರಿಸಬಹುದು:

ಮತ್ತು ಪರಂತು, ಅಂಥ ಸರಕುಗಳು ಈ ಅಧಿನಿಯಮದ ಅಡಿಯಲ್ಲಿ ತೆರಿಗೆಗೆ ಬಾಧ್ಯವಾಗಿದ್ದು, ಮತ್ತು ಈ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಅವಧಿಯ ನಂತರ ವಾಪಸ್ಸಾಗಿದ್ದರೆ, ಸರಕುಗಳನ್ನು ವಾಪಸ್ಸು ಮಾಡುವ ವ್ಯಕ್ತಿಯಿಂದ ತೆರಿಗೆಯು ಸಂದಾಯವಾಗತಕ್ಕದ್ದು:

ಅಲ್ಲದೆ ಪರಂತು, ಅಂಥ ಸರಕುಗಳು ಈ ಅಧಿನಿಯಮದ ಅಡಿಯಲ್ಲಿ ತೆರಿಗೆಗೆ ಬಾಧ್ಯವಾಗಿದ್ದು, ಮತ್ತು ಈ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಅವಧಿಯ ನಂತರ ವಾಪಸ್ಸಾಗಿದ್ದರೆ, ಸರಕುಗಳನ್ನು ಅನುಮೋದನೆಯ ಆಧಾರದಲ್ಲಿ ಕಳಹಿಸಿರುವ ವ್ಯಕ್ತಿಯಿಂದ ತೆರಿಗೆಯು ಸಂದಾಯವಾಗತಕ್ಕದ್ದು.

(13) ಒಬ್ಬ ಪೂರೈಕೆದಾರನು ಯಾವುದೇ ಸರಕುಗಳ ಮಾರಾಟ ಮಾಡಿದ್ದಲ್ಲಿ, ಅದಕ್ಕೆ ಸಂಬಂಧಿಸಿದಂತೆ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003 (2004ರ ಕರ್ನಾಟಕ ಅಧಿನಿಯಮ 32) ರ ಅಡಿಯಲ್ಲಿ ಮೂಲದಲ್ಲಿಯೇ ತೆರಿಗೆಯನ್ನು ಮುರುಗಡೆ ಮಾಡುವುದು ಅಗತ್ಯವಿದ್ದಾಗ, ಮತ್ತು ಅದಕ್ಕಾಗಿ ಗೊತ್ತುಪಡಿಸಲಾದ ದಿನಕ್ಕಿಂತ ಮುಂಚಿತವಾಗಿ ಒಂದು ಬೆಲೆಪಟ್ಟಿಯನ್ನು ಸಹ ನೀಡಿದ್ದಲ್ಲಿ, ಗೊತ್ತುಪಡಿಸಲಾದ ದಿನದಂದು ಅಥವಾ ನಂತರ ಸದರಿ ಪೂರೈಕೆದಾರನಿಗೆ ಸಂದಾಯವನ್ನು ಮಾಡಿದ್ದಲ್ಲಿ, ಪ್ರಕರಣ 51ರ ಅಡಿಯಲ್ಲಿ ಮೂಲದಲ್ಲಿ ತೆರಿಗೆಯ ಮುರುಗಡೆಯನ್ನು, ಸದರಿ ಪ್ರಕರಣದ ಅಡಿಯಲ್ಲಿ ಮುರುಗಡೆದಾರನಿಂದ ಮಾಡತಕ್ಕದ್ದಲ್ಲ.

(14) ಪ್ರಧಾನಕರ್ತನಿಗೆ ಸೇರಿರುವ ಯಾವುದೇ ಸರಕುಗಳು ಅಥವಾ ಬಂಡವಾಳ ಸರಕುಗಳು ಗೊತ್ತುಪಡಿಸಲಾದ ದಿನದಂದು, ಏಜಂಟನ ಸ್ಥಳಗಳಲ್ಲಿ ಇದ್ದಲ್ಲಿ, ಅಂಥ ಸರಕುಗಳ ಮೇಲೆ ಸಂದಾಯ ಮಾಡಿದ ತೆರಿಗೆಯ ಜಮೆಯನ್ನು ತೆಗೆದುಕೊಳ್ಳಲು ಕೆಳಕಂಡ ಷರತ್ತುಗಳ ಪೂರೈಕೆಗೆ ಒಳಪಟ್ಟಂತೆ, ಏಜೆಂಟನು ಹಕ್ಕುಳ್ಳವನಾಗಿರತಕ್ಕದ್ದು:

(i) ಏಜೆಂಟನು, ಈ ಅಧಿನಿಯಮದ ಅಡಿಯಲ್ಲಿ ಒಬ್ಬ ನೋಂದಾಯಿತ ತೆರಿಗೆದಾಯಕ ವ್ಯಕ್ತಿಯಾಗಿರಬೇಕು.

(ii) ಗೊತ್ತುಪಡಿಸಲಾದ ದಿನದ ನಿಕಟಪೂರ್ವ ದಿನಾಂಕದಂದು ಅಂಥ ಏಜೆಂಟನ ಬಳಿ ಇರುವ ಸರಕುಗಳ ಅಥವಾ ಬಂಡವಾಳ ಸರಕುಗಳ ದಾಸ್ತಾನು ವಿವರಗಳನ್ನು, ಈ ಸಂಬಂಧದಲ್ಲಿ ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ಮತ್ತು ವಿಧಾನದಲ್ಲಿ ಮತ್ತು ಅಂಥ ಸಮಯದ ಒಳಗಾಗಿ ಪ್ರಧಾನಕರ್ತ ಮತ್ತು ಏಜೆಂಟ್ ಇಬ್ಬರೂ ಘೋಷಿಸಿರಬೇಕು;

(iii) ಅಂಥ ಸರಕುಗಳಿಗೆ ಅಥವಾ ಬಂಡವಾಳ ಸರಕುಗಳಿಗೆ ಬೆಲೆಪಟ್ಟಿಯನ್ನು, ಗೊತ್ತುಪಡಿಸಲಾದ ದಿನದ ನಿಕಟಪೂರ್ವದ ದಿನದಿಂದ ಹನ್ನೆರಡು ತಿಂಗಳುಗಳಿಗಳಿಗೆ ಮುಂಚಿತವಾಗಿಯಲ್ಲದಂತೆ ನೀಡಿರಬೇಕು; ಮತ್ತು

(iv) ಪ್ರಧಾನಕರ್ತನು ಅಂಥ,–

(ಎ) ಸರಕುಗಳು; ಅಥವಾ

(ಬಿ) ಬಂಡವಾಳ ಸರಕುಗಳಿಗೆ

ಸಂಬಂಧಿಸಿದಂತೆ ಹೂಡುವಳಿ ತೆರಿಗೆ ಜಮೆಯನ್ನು ಹಿಮ್ಮುಖಗೊಳಿಸಿರಬೇಕು ಅಥವಾ ತೆಗೆದುಕೊಂಡಿರಬಾರದು ಅಥವಾ, ಅಂಥ ಜಮೆಯನ್ನು ತೆಗೆದುಕೊಂಡಿದ್ದರೆ, ಸದರಿ ಜಮೆಯನ್ನು ಆತನಿಂದ ತೆಗೆದುಕೊಂಡಿರುವಷ್ಟರ ಮಟ್ಟಿಗೆ ಹಿಮ್ಮುಖಗೊಳಿಸಿರಬೇಕು.

ವಿವರಣೆ.– ಈ ಅಧ್ಯಾಯದ ಉದ್ದೇಶಗಳಿಗಾಗಿ, **"ಬಂಡವಾಳ ಸರಕುಗಳು"** ಪದಾವಳಿಯು ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ರ (2004ರ ಕರ್ನಾಟಕ ಅಧಿನಿಯಮ 32) ಅಡಿಯಲ್ಲಿ ಇದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು.

ಅಧ್ಯಾಯ – XXI
ಸಂಕೀರ್ಣ ಉಪಬಂಧಗಳು

143. ಮಜೂರಿ ಕೆಲಸದ ಕಾರ್ಯವಿಧಾನ.– (1) ಒಬ್ಬ ನೋಂದಾಯಿತ ವ್ಯಕ್ತಿಯು, (ಈ ಪ್ರಕರಣದಲ್ಲಿ ಇನ್ನು ಮುಂದೆ "ಪ್ರಧಾನಕರ್ತ" ಎಂದು ಉಲ್ಲೇಖಿಸಲಾಗಿದೆ) ತಿಳುವಳಿಕೆ ನೀಡುವುದು ಮತ್ತು ನಿಯಮಿಸಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟಂತೆ ಮಜೂರಿ ಕೆಲಸಗಾರನಿಗೆ ಮಜೂರಿ ಕೆಲಸಕ್ಕಾಗಿ ಹೂಡುವಳಿಗಳು ಅಥವಾ ಬಂಡವಾಳ ಸರಕುಗಳನ್ನು ತೆರಿಗೆಯನ್ನು ಸಂದಾಯ ಮಾಡದೆ ಕಳುಹಿಸಬಹುದು ಮತ್ತು ತರುವಾಯ ಅಲ್ಲಿಂದ ಮತ್ತೊಬ್ಬ ಮಜೂರಿ ಕೆಲಸಗಾರನಿಗೆ ಕಳುಹಿಸಬಹದು ಮತ್ತು ಅದೇ ರೀತಿ, ಮತ್ತು,–

(ಎ) ಮಜೂರಿ ಕೆಲಸ ಪೂರ್ಣಗೊಂಡ ನಂತರ ಅಥವಾ ಅನ್ಯಥಾ, ಹೂಡುವಳಿಗಳನ್ನು, ಅಥವಾ ಎರಕಗಳು ಮತ್ತು ಅಚ್ಚುಗಳು, ಜಿಗ್ಸ್ ಮತ್ತು ಜೋಡಣೆಗಳು ಅಥವಾ ಉಪಕರಣಗಳನ್ನು ಹೊರತುಪಡಿಸಿದ ಬಂಡವಾಳ ಸರಕುಗಳನ್ನು,

ಆತನ ಯಾವುದೇ ವ್ಯವಹಾರ ಸ್ಥಳಕ್ಕೆ ತೆರಿಗೆಯನ್ನು ಸಂದಾಯ ಮಾಡದೆ ಹೊರ ಕಳುಹಿಸಿರುವುದನ್ನು, ಅನುಕ್ರಮವಾಗಿ ಒಂದು ವರ್ಷ ಮತ್ತು ಮೂರು ವರ್ಷಗಳ ಒಳಗಾಗಿ ವಾಪಸ್ಸು ತರತಕ್ಕದ್ದು;

(ಬಿ) ಮಜೂರಿ ಕೆಲಸ ಪೂರ್ಣಗೊಂಡ ನಂತರ ಅಥವಾ ಅನ್ಯಥಾ, ಹೊರ ಕಳುಹಿಸಿರುವ ಅಂಥ ಹೂಡುವಳಿಗಳನ್ನು ಅಥವಾ ಎರಕಗಳು ಮತ್ತು ಅಚ್ಚುಗಳು, ಜಿಗ್ಸ್ ಮತ್ತು ಜೋಡಣೆಗಳು, ಉಪಕರಣಗಳನ್ನು ಹೊರತುಪಡಿಸಿದ ಬಂಡವಾಳ ಸರಕುಗಳನ್ನು, ಮಜೂರಿ ಕೆಲಸಗಾರನ ವ್ಯವಹಾರ ಸ್ಥಳದಿಂದ ಭಾರತದ ಒಳಗೆ ತೆರಿಗೆಯನ್ನು ಸಂದಾಯ ಮಾಡಿ ಅಥವಾ ರಫ್ತಿಗೆ ಸಂದರ್ಭಾನುಸಾರವಾಗಿ ತೆರಿಗೆಯ ಸಂದಾಯ ಅಥವಾ ಸಂದಾಯವಿಲ್ಲದೆ ಅನುಕ್ರಮವಾಗಿ ಒಂದು ವರ್ಷ ಮತ್ತು ಮೂರು ವರ್ಷಗಳ ಒಳಗಾಗಿ ಪೂರೈಕೆ ಮಾಡತಕ್ಕದ್ದು:

ಪರಂತು ಸದರಿ ಪ್ರಧಾನಕರ್ತನು ಮಜೂರಿ ಕೆಲಸಗಾರನ ವ್ಯವಹಾರ ಸ್ಥಳವನ್ನು ತನ್ನ ಹೆಚ್ಚುವರಿ ವ್ಯವಹಾರ ಸ್ಥಳ ಎಂದು ಘೋಷಿಸಿಕೊಳ್ಳದ ಹೊರತು, ಪ್ರಧಾನಕರ್ತನು ಈ ಖಂಡದ ಉಪಬಂಧಗಳಿಗೆ ಅನುಸಾರವಾಗಿ ಮಜೂರಿ ಕೆಲಸಗಾರನ ವ್ಯವಹಾರ ಸ್ಥಳದಿಂದ, ಸರಕುಗಳನ್ನು ಪೂರೈಕೆ ಮಾಡತಕ್ಕದ್ದಲ್ಲ, ಈ ಸಂದರ್ಭವನ್ನು ಹೊರತುಪಡಿಸಿದಂತೆ–

(i) ಪ್ರಕರಣ 25ರ ಅಡಿಯಲ್ಲಿ ಮಜೂರಿ ಕೆಲಸಗಾರ ನೋಂದಾಯಿತನಾಗಿದ್ದಲ್ಲಿ; ಅಥವಾ

(ii) ಪ್ರಧಾನಕರ್ತನು ಆಯುಕ್ತರಿಂದ ಅಧಿಸೂಚಿಸಬಹುದಾದ ಅಂಥ ಸರಕುಗಳ ಪೂರೈಕೆಯಲ್ಲಿ ತೊಡಗಿದ್ದಲ್ಲಿ.

(2) ಹೂಡುವಳಿಗಳಿಗೆ ಅಥವಾ ಬಂಡವಾಳ ಸರಕುಗಳಿಗೆ ಸರಿಯಾದ ಲೆಕ್ಕಪತ್ರಗಳನ್ನು ಇಡುವ ಜವಾಬ್ದಾರಿಯನ್ನು ಪ್ರಧಾನಕರ್ತನು ಹೊರತಕ್ಕದ್ದು.

(3) ಮಜೂರಿ ಕೆಲಸಕ್ಕಾಗಿ ಕಳುಹಿಸಿರುವ ಹೂಡುವಳಿಗಳನ್ನು, ಅವುಗಳನ್ನು ಹೊರ ಕಳುಹಿಸಿದ ಒಂದು ವರ್ಷದ ಅವಧಿಯ ಒಳಗಾಗಿ ಮಜೂರಿ ಕೆಲಸ ಪೂರ್ಣಗೊಂಡ ನಂತರ ಅಥವಾ ಅನ್ಯಥಾ ಉಪಪ್ರಕರಣ (1)ರ ಖಂಡ (ಎ)ಗೆ ಅನುಸಾರವಾಗಿ ಪ್ರಧಾನಕರ್ತನು ಹಿಂದಕ್ಕೆ ಪಡೆಯದಿದ್ದಲ್ಲಿ, ಅಥವಾ ಉಪಪ್ರಕರಣ (1)ರ ಖಂಡ (ಬಿ)ಗೆ ಅನುಸಾರವಾಗಿ ಮಜೂರಿ ಕೆಲಸಗಾರನ ವ್ಯವಹಾರ ಸ್ಥಳದಿಂದ ಪೂರೈಕೆಯಾಗದಿದ್ದಲ್ಲಿ, ಸದರಿ ಹೂಡುವಳಿಗಳನ್ನು ಹೊರ ಕಳುಹಿಸಿದ್ದ ದಿನದಂದೇ ಪ್ರಧಾನಕರ್ತನಿಂದ ಮಜೂರಿ ಕೆಲಸಗಾರನಿಗೆ ಅಂಥ ಹೂಡುವಳಿಗಳನ್ನು ಪೂರೈಕೆ ಮಾಡಲಾಗಿದೆ ಎಂದು ಪರಿಭಾವಿತವಾಗತಕ್ಕದ್ದು.

(4) ಎರಕಗಳು ಮತ್ತು ಅಚ್ಚುಗಳು, ಜಿಗ್ಸ್ ಮತ್ತು ಜೋಡಣೆಗಳು ಅಥವಾ ಉಪಕರಣಗಳನ್ನು ಹೊರತುಪಡಿಸಿದಂತೆ ಮಜೂರಿ ಕೆಲಸಕ್ಕಾಗಿ ಕಳುಹಿಸಿರುವ ಬಂಡವಾಳ ಸರಕುಗಳನ್ನು ಹೊರಕಳುಹಿಸಿದ ಮೂರು ವರ್ಷದ ಅವಧಿಯ ಒಳಗಾಗಿ, ಮಜೂರಿ ಕೆಲಸ ಪೂರ್ಣಗೊಂಡ ನಂತರ ಅಥವಾ ಅನ್ಯಥಾ ಉಪಪ್ರಕರಣ (1)ರ ಖಂಡ (ಎ)ಗೆ ಅನುಸಾರವಾಗಿ ಪ್ರಧಾನಕರ್ತನಿಂದ ಹಿಂದಕ್ಕೆ ಪಡೆಯದಿದ್ದಲ್ಲಿ, ಅಥವಾ ಉಪಪ್ರಕರಣ (1)ರ ಖಂಡ (ಬಿ)ಗೆ ಅನುಸಾರವಾಗಿ ಮಜೂರಿ ಕೆಲಸಗಾರನ ವ್ಯವಹಾರ ಸ್ಥಳದಿಂದ ಪೂರೈಕೆಯಾಗದಿದ್ದಲ್ಲಿ, ಅಂಥ ಬಂಡವಾಳ ಸರಕುಗಳನ್ನು ಹೊರಕಳುಹಿಸಿದ ದಿನದಂದೇ, ಪ್ರಧಾನಕರ್ತನಿಂದ ಮಜೂರಿ ಕೆಲಸಗಾರನಿಗೆ ಅಂಥ ಬಂಡವಾಳ ಸರಕುಗಳನ್ನು ಪೂರೈಕೆ ಮಾಡಲಾಗಿದೆ ಎಂದು ಪರಿಭಾವಿತವಾಗತಕ್ಕದ್ದು.

(5) ಉಪಪ್ರಕರಣಗಳಾದ (1) ಮತ್ತು (2)ರಲ್ಲಿ ಏನೇ ಒಳಗೊಂಡಿದ್ದರೂ, ಮಜೂರಿ ಕೆಲಸದ ಸಮಯದಲ್ಲಿ ಉತ್ಪತ್ತಿಯಾದ ಯಾವುದೇ ನಿರುಪಯುಕ್ತ ಮತ್ತು ರದ್ದಿ ವಸ್ತುಗಳನ್ನು, ಅಂಥ ಮಜೂರಿ ಕೆಲಸಗಾರನು ನೋಂದಾಯಿತನಾಗಿದ್ದರೆ, ತನ್ನ ವ್ಯವಹಾರ ಸ್ಥಳದಿಂದ ನೇರವಾಗಿ ಮಜೂರಿ ಕೆಲಸಗಾರನಿಂದ ಅಥವಾ ಮಜೂರಿ ಕೆಲಸಗಾರನು ನೋಂದಾಯಿತನಾಗಿಲ್ಲದಿದ್ದರೆ, ಪ್ರಧಾನಕರ್ತನಿಂದ, ತೆರಿಗೆ ಸಂದಾಯ ಮಾಡಿ ಪೂರೈಕೆ ಮಾಡಬಹುದು.

ವಿವರಣೆ. – ಮಜೂರಿ ಕೆಲಸದ ಉದ್ದೇಶಗಳಿಗಾಗಿ, ಹೂಡುವಳಿಯು, ಪ್ರಧಾನಕರ್ತ ಅಥವಾ ಮಜೂರಿ ಕೆಲಸಗಾರನಿಂದ ನಡೆಸಲಾದ ಯಾವುದೇ ಉಪಚರಣೆಯಿಂದ ಅಥವಾ ಸಂಸ್ಕರಣೆಯಿಂದ ಉದ್ಭವಿಸಿದ ಮಧ್ಯಂತರ ಸರಕುಗಳನ್ನು ಒಳಗೊಳ್ಳುತ್ತದೆ.

144. ಕೆಲವೊಂದು ಸಂದರ್ಭಗಳಲ್ಲಿ ದಸ್ತಾವೇಜುಗಳಂತೆ ಪೂರ್ವಭಾವಿಸುವಿಕೆ.– ಯಾವುದೇ ದಸ್ತಾವೇಜನ್ನು–

(i) ಯಾವುದೇ ವ್ಯಕ್ತಿಯಿಂದ ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಅಡಿಯಲ್ಲಿ ಹಾಜುರುಪಡಿಸಿದ್ದಲ್ಲಿ; ಅಥವಾ

(ii) ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಅಡಿಯಲ್ಲಿ, ಯಾವುದೇ ವ್ಯಕ್ತಿಯ ಅಭಿರಕ್ಷೆ ಮತ್ತು ನಿಯಂತ್ರಣದಿಂದ ವಶಪಡಿಸಿಕೊಳ್ಳಲಾಗಿದ್ದಲ್ಲಿ; ಅಥವಾ

(iii) ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಅಡಿಯಲ್ಲಿನ ಯಾವುದೇ ನಡಾವಳಿಗಳ ಕ್ರಮದಲ್ಲಿ ಭಾರತದ ಹೊರಗಿನ ಯಾವುದೇ ಸ್ಥಳದಿಂದ ಸ್ವೀಕರಿಸಲಾಗಿದ್ದಲ್ಲಿ,

–ಮತ್ತು ಅಂಥ ದಸ್ತಾವೇಜನ್ನು, ಆತನ ಅಥವಾ ಆತನೊಂದಿಗೆ ಜಂಟಿಯಾಗಿ ಅಧಿವಿಚಾರಣೆಗೆ ಒಳಪಟ್ಟಿರುವ ಯಾವುದೇ ಇತರ ವ್ಯಕ್ತಿಯ ವಿರುದ್ಧವಾದ ಪುರಾವೆಯಾಗಿ ಅಭಿಯೋಜನೆಯಿಂದ ನೀಡಲಾಗಿದಲ್ಲಿ, ನ್ಯಾಯಾಲಯವು–

(ಎ) ಅಂಥ ವ್ಯಕ್ತಿಯಿಂದ ವಿರುದ್ಧವಾದುದನ್ನು ರುಜುವಾತು ಪಡಿಸಿದ ಹೊರತು, –

(i) ಅಂಥ ದಸ್ತಾವೇಜಿನ ಒಳಾಂಶಗಳ ಸತ್ಯತೆಯನ್ನು;

(ii) ಯಾವುದೇ ಇತರ ನಿರ್ದಿಷ್ಟ ವ್ಯಕ್ತಿಯ ಕೈ ಬರಹದಲ್ಲಿದೆ ಎಂದು ತಾತ್ಪರ್ಯವಾಗಬಹುದಾದ ಅಥವಾ ನ್ಯಾಯಾಲಯವು ಯಾವುದೇ ನಿರ್ದಿಷ್ಟ ವ್ಯಕ್ತಿಯಿಂದ ಸಹಿ ಮಾಡಲಾಗಿದೆ, ಅಥವಾ ಆತನ ಕೈಬರಹದಲ್ಲಿದೆ ಎಂದು ಯುಕ್ತವಾಗಿ ಭಾವಿಸಬಹುದಾದ, ಅಂಥ ದಸ್ತಾವೇಜಿನ ಸಹಿ ಮತ್ತು ಪ್ರತಿಯೊಂದು ಇತರ ಭಾಗಗಳು, ಆ ವ್ಯಕ್ತಿಯ ಕೈಬರಹದಲ್ಲಿದೆ ಮತ್ತು ಬರೆಯಲಾಗಿರುವ ಅಥವಾ ಧೃಢೀಕರಿಸಲಾಗಿರುವ ಒಂದು

ದಸ್ತಾವೇಜಿನ ಸಂದರ್ಭದಲ್ಲಿ, ಹಾಗೆ ಯಾರಿಂದ ಬರೆಯಲಾಗಿದೆ ಅಥವಾ ಧೃಢೀಕರಿಸಲಾಗಿದೆ ಎಂದು ತಾತ್ಪರ್ಯವಾಗುವ ವ್ಯಕ್ತಿಯಿಂದಲೇ ಬರೆಯಲಾಗಿದೆ ಅಥವಾ ಧೃಢೀಕರಿಸಲಾಗಿದೆ ಎಂದು;

–ಪೂರ್ವಭಾವನೆಯನ್ನು ಮಾಡತಕ್ಕದ್ದು.

(ಬಿ) ಅಂಥ ದಸ್ತಾವೇಜನ್ನು ಪುರಾವೆಯಲ್ಲಿ ಅನ್ಯಥಾ ಅಂಗೀಕರಿಸಬಹುದಾಗಿದ್ದರೆ, ಅದಕ್ಕೆ ಕ್ರಮಬದ್ಧವಾಗಿ ಮುದ್ರೆ ಹಾಕಲಾಗಿಲ್ಲ ಎಂದು ಏನೇ ಇದ್ದರೂ, ಪುರಾವೆಯಲ್ಲಿ ದಸ್ತಾವೇಜನ್ನು ಅಂಗೀಕರಿಸತಕ್ಕದ್ದು.

145. ಸೂಕ್ಷ್ಮ ಫಿಲಂಗಳನ್ನು, ದಸ್ತಾವೇಜುಗಳ ಪಡಿಯಚ್ಚು ಪ್ರತಿಗಳನ್ನು ಮತ್ತು ಗಣಕಯಂತ್ರದ ಮುದ್ರಿತ ಪಠ್ಯಗಳನ್ನು ದಸ್ತಾವೇಜುಗಳನ್ನಾಗಿ ಮತ್ತು ಸಾಕ್ಷಿಗಳನ್ನಾಗಿ ಅಂಗೀಕರಿಸುವಿಕೆ.– (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ–

(ಎ) ಒಂದು ದಸ್ತಾವೇಜಿನ ಒಂದು ಸೂಕ್ಷ್ಮ ಫಿಲಂ ಅಥವಾ ಚಿತ್ರದ ಪುನರ್‌ಸೃಷ್ಟಿ ಅಥವಾ ಅಂಥ ಸೂಕ್ಷ್ಮ ಫಿಲಂನಲ್ಲಿ ಒಳಗೊಳಿಸಿರುವ ಚಿತ್ರಗಳನ್ನು (ಪರಿವರ್ಧನಗೊಳಿಸಿರಲಿ ಅಥವಾ ಇಲ್ಲದಿರಲಿ); ಅಥವಾ

(ಬಿ) ದಸ್ತಾವೇಜಿನ ಪಡಿಯಚ್ಚು ಪ್ರತಿಯನ್ನು; ಅಥವಾ

(ಸಿ) ನಿಯಮಿಸಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು, ಒಂದು ದಸ್ತಾವೇಜಿನಲ್ಲಿ ಅಡಕವಾದ ಮತ್ತು ಒಂದು ಗಣಕಯಂತ್ರದಿಂದ ಸೃಷ್ಟಿಯಾದ ಒಂದು ಮುದ್ರಿತ ಪಠ್ಯದಲ್ಲಿ ಒಳಗೊಂಡಿರುವ ಒಂದು ವಿವರಪತ್ರವನ್ನು; ಅಥವಾ

(ಡಿ) ಯಾವುದೇ ಸಾಧನ ಅಥವಾ ಮಾಧ್ಯಮದಲ್ಲಿ ವಿದ್ಯುನ್ಮಾನವಾಗಿ ಸಂಗ್ರಹಿಸಿದ ಯಾವುದೇ ಮಾಹಿತಿಯನ್ನು, ಅಂಥ ಮಾಹಿತಿಯಿಂದ ಕೂಡಿದ ಯಾವುದೇ ಮುದ್ರಿತ ಪ್ರತಿಯನ್ನು ಒಳಗೊಂಡಂತೆ,

–ಈ ಅಧಿನಿಯಮದ ಮತ್ತು ಇದರ ಅಡಿಯಲ್ಲಿ ಮಾಡಲಾದ ನಿಯಮಗಳ ಉದ್ದೇಶಗಳಿಗಾಗಿ ದಸ್ತಾವೇಜು ಎಂದು ಪರಿಭಾವಿಸತಕ್ಕದ್ದು ಮತ್ತು ಇದರ ಅಡಿಯಲ್ಲಿನ ಯಾವುದೇ ನಡಾವಳಿಗಳಲ್ಲಿ, ಹೆಚ್ಚಿನ ಪುರಾವೆ ಅಥವಾ ಮೂಲಪ್ರತಿ ಹಾಜರುಪಡಿಸುವಿಕೆ ಇಲ್ಲದೆ, ಅವುಗಳನ್ನು ನೇರವಾದ ಪುರಾವೆಯಾಗಿ ಅಂಗೀಕರಿಸಬಹುದಾದ ಯಾವುದೇ ಮೂಲಪ್ರತಿಯ ಒಳಾಂಶಗಳ ಅಥವಾ ಅದರಲ್ಲಿ ನಿರೂಪಿಸಿರುವ ಯಾವುದೇ ಸಂಗತಿಗಳ ಪುರಾವೆಯಂತೆ ಅಂಗೀಕರಿಸತಕ್ಕದ್ದು.

(2) ಈ ಅಧಿನಿಯಮದ ಮತ್ತು ಇದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿ, ಈ ಪ್ರಕರಣದ ಕಾರಣದಿಂದಾಗಿ, ಪುರಾವೆಯಾಗಿ ಒಂದು ಹೇಳಿಕೆಯನ್ನು, ನೀಡಲು ಇಚ್ಛಿಸಿದಲ್ಲಿ, –

(ಎ) ಹೇಳಿಕೆಯನ್ನು ಒಳಗೊಂಡಿರುವ ದಸ್ತಾವೇಜನ್ನು ಗುರುತಿಸುವ ಮತ್ತು ಅದು ಸೃಷ್ಟಿಯಾದ ವಿಧಾನವನ್ನು ವಿವರಿಸುವ;

(ಬಿ) ಆ ದಸ್ತಾವೇಜು ಗಣಕಯಂತ್ರದಿಂದ ಸೃಷ್ಟಿಯಾಗಿದೆ ಎಂದು ತೋರಿಸುವ ಉದ್ದೇಶಕ್ಕಾಗಿ ಸೂಕ್ತವೆನ್ನಬಹುದಾದ ಅಂಥ ದಸ್ತಾವೇಜಿನ ಸೃಷ್ಟಿಯಲ್ಲಿ ಒಳಗೊಂಡಿರುವ ಯಾವುದೇ ಸಾಧನದ ಅಂಥ ವಿವರಗಳನ್ನು ನೀಡುವ,

–ಒಂದು ಪ್ರಮಾಣ ಪತ್ರವು, ಪ್ರಮಾಣಪತ್ರದಲ್ಲಿ ಹೇಳಲಾದ ಯಾವುದೇ ವಿಷಯದ ಪುರಾವೆಯಾಗಿರತಕ್ಕದ್ದು ಮತ್ತು ಈ ಉಪಪ್ರಕರಣದ ಉದ್ದೇಶಗಳಿಗಾಗಿ, ಅದನ್ನು ಹೇಳುವ ವ್ಯಕ್ತಿಯು ತಿಳಿದಿರುವ ಮತ್ತು ನಂಬಿರುವ ಮಟ್ಟಿಗೆ ಎಂದು ಹೇಳಬೇಕಿರುವ ವಿಷಯಕ್ಕಾಗಿ ಸಾಕಷ್ಟಾಗಿರತಕ್ಕದ್ದು.

146. ಸಾಮಾನ್ಯ ಪೋರ್ಟಲ್.– ಸರ್ಕಾರವು, ಪರಿಷತ್‌ನ ಶಿಫಾರಸ್ಸುಗಳ ಅನ್ವಯ, ನೋಂದಣಿ, ತೆರಿಗೆ ಸಂದಾಯ, ರಿಟರ್ನಗಳನ್ನು ಒದಗಿಸುವ, ಏಕೀಕೃತ ತೆರಿಗೆಯ ಲೆಕ್ಕಾಚಾರ ಮತ್ತು ಇತ್ಯರ್ಥ, ವಿದ್ಯುನ್ಮಾನ ಪಥ ಬಿಲ್ಲಿಗೆ ಅನುಕೂಲ ಕಲ್ಪಿಸುವುದಕ್ಕಾಗಿ, ಮತ್ತು ನಿಯಮಿಸಬಹುದಾದ ಅಂಥ ಇತರ ಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಮತ್ತು ಅಂಥ ಉದ್ದೇಶಗಳಿಗಾಗಿ ಸಾಮಾನ್ಯ ಸರಕು ಮತ್ತು ಸೇವೆಗಳ ತೆರಿಗೆಯ ವಿದ್ಯುನ್ಮಾನ ಪೋರ್ಟಲ್‌ಅನ್ನು ಅಧಿಸೂಚಿಸಬಹುದು.

147. ಪರಿಭಾವಿತ ರಫ್ತುಗಳು.– ಸರ್ಕಾರವು, ಪರಿಷತ್‌ನ ಶಿಫಾರಸ್ಸುಗಳ ಅನ್ವಯ, ಕೆಲವು ಸರಕುಗಳ ಪೂರೈಕೆಯನ್ನು, ಅಂಥ ಸರಕುಗಳು ಭಾರತದಲ್ಲಿ ಉತ್ಪಾದನೆಯಾಗಿದ್ದರೆ, ಪೂರೈಕೆ ಮಾಡಿದ ಸರಕುಗಳು ಭಾರತವನ್ನು ಬಿಟ್ಟು ಹೋಗಿರದಿದ್ದಲ್ಲಿ, ಮತ್ತು ಅಂಥ ಪೂರೈಕೆಗಳಿಗಾಗಿ ಸಂದಾಯವನ್ನು ಭಾರತದ ರೂಪಾಯಿಗಳಲ್ಲಾಗಲಿ ಅಥವಾ ಪರಿವರ್ತಿಸಬಹುದಾದ ವಿದೇಶಿ ವಿನಿಮಯದಲ್ಲಾಗಲಿ ಸ್ವೀಕರಿಸಿದ್ದಲ್ಲಿ, "ಪರಿಭಾವಿತ ರಫ್ತುಗಳು", ಎಂದು ಅಧಿಸೂಚಿಸಬಹುದು.

148. ಕೆಲವೊಂದು ಪ್ರಕ್ರಿಯೆಗಳಿಗಾಗಿ ವಿಶೇಷ ಕಾರ್ಯವಿಧಾನಗಳು.– ಸರ್ಕಾರವು, ಪರಿಷತ್‌ನ ಶಿಫಾರಸ್ಸುಗಳ ಅನ್ವಯ, ಮತ್ತು ನಿಯಮಿಸಬಹುದಾದ ಅಂಥ ಷರತ್ತುಗಳು ಮತ್ತು ರಕ್ಷಣಾ ಕ್ರಮಗಳಿಗೆ ಒಳಪಟ್ಟಂತೆ, ಕೆಲವೊಂದು ನೋಂದಾಯಿತ ವ್ಯಕ್ತಿಗಳ ವರ್ಗಗಳನ್ನು ಮತ್ತು ನೋಂದಣಿ, ರಿಟರ್ನನ್ನು ಒದಗಿಸುವುದು, ತೆರಿಗೆಯ ಸಂದಾಯ ಮತ್ತು ಅಂಥ ವ್ಯಕ್ತಿಗಳ ಆಡಳಿತಕ್ಕೆ ಸಂಬಂಧಿಸಿರುವುದನ್ನು ಒಳಗೊಂಡಂತೆ ಅಂಥ ವ್ಯಕ್ತಿಗಳು ಅನುಸರಿಸಬೇಕಾದ ವಿಶೇಷ ಕಾರ್ಯವಿಧಾನಗಳನ್ನು ಅಧಿಸೂಚಿಸಬಹುದು.

149. ಸರಕು ಮತ್ತು ಸೇವೆಗಳ ತೆರಿಗೆ ಪರಿಪಾಲನಾ ಶ್ರೇಣಿ ನೀಡಿಕೆ.– (1) ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಗೆ, ಈ ಅಧಿನಿಯಮದ ಉಪಬಂಧಗಳ ಆತನ ಪರಿಪಾಲನೆಯ ದಾಖಲೆಯ ಆಧಾರದ ಮೇಲೆ ಒಂದು ಸರಕು ಮತ್ತು ಸೇವೆಗಳ ತೆರಿಗೆ ಪರಿಪಾಲನಾ ಶ್ರೇಣಿಯ ಅಂಕವನ್ನು, ಸರ್ಕಾರವು ಗೊತ್ತುಪಡಿಸಬಹುದು.

(2) ಸರಕು ಮತ್ತು ಸೇವೆಗಳ ತೆರಿಗೆ ಪರಿಪಾಲನಾ ಶ್ರೇಣಿಯ ಅಂಕವನ್ನು, ನಿಯಮಿಸಬಹುದಾದ ಅಂಥ ಮಾನದಂಡಗಳ ಆಧಾರದ ಮೇಲೆ ನಿರ್ಧರಿಸಬಹುದು.

(3) ಸರಕುಗಳು ಮತ್ತು ಸೇವೆಗಳ ತೆರಿಗೆ ಪರಿಪಾಲನಾ ಶ್ರೇಣಿಯ ಅಂಕವನ್ನು, ನಿಯತಕಾಲಿಕ ಅಂತರಗಳಲ್ಲಿ ನವೀಕರಿಸಬಹುದು ಮತ್ತು ನೋಂದಾಯಿತ ವ್ಯಕ್ತಿಗೆ ತಿಳಿಸಬಹುದು ಮತ್ತು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿಯೂ ಸಹ ಇರಿಸಬಹುದು.

150. ಮಾಹಿತಿ ರಿಟರ್ನನ್ನು ಒದಗಿಸುವ ಬಾಧ್ಯತೆ.– (1) ಯಾವುದೇ,–

(ಎ) ಒಬ್ಬ ತೆರಿಗೆದಾಯಕ ವ್ಯಕ್ತಿಯಾಗಿರುವ; ಅಥವಾ

(ಬಿ) ಒಂದು ಸ್ಥಳೀಯ ಪ್ರಾಧಿಕಾರ ಅಥವಾ ಇತರ ಸಾರ್ವಜನಿಕ ಸಂಸ್ಥೆ ಅಥವಾ ಸಂಘವಾಗಿರುವ; ಅಥವಾ

(ಸಿ) ಮೌಲ್ಯವರ್ಧಿತ ತೆರಿಗೆ ಅಥವಾ ಮಾರಾಟ ತೆರಿಗೆ ಅಥವಾ ರಾಜ್ಯ ಅಬಕಾರಿ ಸುಂಕವನ್ನು ಸಂಗ್ರಹಿಸಲು ಜವಾಬ್ದಾರಿಯಾಗಿರುವ ರಾಜ್ಯ ಸರ್ಕಾರದ ಯಾವುದೇ ಪ್ರಾಧಿಕಾರ ಅಥವಾ ಅಬಕಾರಿ ಸುಂಕ ಅಥವಾ ಸೀಮಾ ಸುಂಕವನ್ನು ಸಂಗ್ರಹಿಸಲು ಜವಾಬ್ದಾರಿಯಾಗಿರುವ ಕೇಂದ್ರ ಸರ್ಕಾರದ ಒಂದು ಪ್ರಾಧಿಕಾರವಾಗಿರುವ; ಅಥವಾ

(ಡಿ) ಆದಾಯ ತೆರಿಗೆ ಅಧಿನಿಯಮ, 1961ರ (1961ರ ಕೇಂದ್ರ ಅಧಿನಿಯಮ 43) ಉಪಬಂಧಗಳ ಅಡಿಯಲ್ಲಿ ನೇಮಕಗೊಂಡಿರುವ ಒಂದು ಆದಾಯ ತೆರಿಗೆ ಪ್ರಾಧಿಕಾರವಾಗಿರುವ; ಅಥವಾ

(ಇ) ಭಾರತೀಯ ರಿಸರ್ವ್ ಬ್ಯಾಂಕ್ ಅಧಿನಿಯಮ, 1934ರ (1934ರ ಕೇಂದ್ರ ಅಧಿನಿಯಮ 2) ಪ್ರಕರಣ 45ಎ ನ ಖಂಡ (ಎ)ನ ಅರ್ಥವ್ಯಾಪ್ತಿಯೊಳಗೆ ಬರುವ ಒಂದು ಬ್ಯಾಂಕಿಂಗ್ ಕಂಪನಿಯಾಗಿರುವ; ಅಥವಾ

(ಎಫ್) ವಿದ್ಯುಚ್ಛಕ್ತಿ ಅಧಿನಿಯಮ, 2003ರ (2003ರ ಕೇಂದ್ರ ಅಧಿನಿಯಮ 36) ಅಡಿಯಲ್ಲಿನ ಒಂದು ರಾಜ್ಯ ವಿದ್ಯುಚ್ಛಕ್ತಿ ಮಂಡಳಿ ಅಥವಾ ಒಂದು ವಿದ್ಯುಚ್ಛಕ್ತಿ ವಿತರಣೆಯ ಅಥವಾ ಪ್ರಸರಣದ ಪರವಾನಗಿದಾರ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದಿಂದ ಅಂಥ ಪ್ರಕಾರ್ಯಗಳನ್ನು ವಹಿಸಿಕೊಟ್ಟಿರುವ ಯಾವುದೆ ಇತರ ಅಸ್ಥಿತ್ವವಾಗಿರುವ; ಅಥವಾ

(ಜಿ) ನೋಂದಣಿ ಅಧಿನಿಯಮ, 1908ರ (1908ರ ಕೇಂದ್ರ ಅಧಿನಿಯಮ 16) ಪ್ರಕರಣ 6ರ ಅಡಿಯಲ್ಲಿ ನೇಮಕಗೊಂಡಿರುವ ನೋಂದಣಿ ಅಧಿಕಾರಿ ಅಥವಾ ಉಪನೋಂದಣಿ ಅಧಿಕಾರಿಯಾಗಿರುವ; ಅಥವಾ

(ಹೆಚ್) ಕಂಪನಿಗಳ ಅಧಿನಿಯಮ, 2013ರ (2013ರ ಕೇಂದ್ರ ಅಧಿನಿಯಮ 18) ಅರ್ಥವ್ಯಾಪ್ತಿಯೊಳಗೆ ಬರುವ ಒಬ್ಬ ನೋಂದಣಿ ಅಧಿಕಾರಿಯಾಗಿರುವ; ಅಥವಾ

(ಐ) ಮೋಟಾರು ವಾಹನಗಳ ಅಧಿನಿಯಮ, 1988ರ (1988ರ ಕೇಂದ್ರ ಅಧಿನಿಯಮ 59) ಅಡಿಯಲ್ಲಿ ಮೋಟಾರು ವಾಹನಗಳನ್ನು ನೋಂದಾಯಿಸಲು ಅಧಿಕಾರವನ್ನು ಪಡೆದ ನೋಂದಣಿ ಪ್ರಾಧಿಕಾರವಾಗಿರುವ; ಅಥವಾ

(ಜೆ) ಭೂ ಸ್ವಾಧೀನ, ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಅಧಿನಿಯಮ, 2013 ರಲ್ಲಿನ (2013ರ ಕೇಂದ್ರ ಅಧಿನಿಯಮ 30) ನ್ಯಾಯಯುತ ಪರಿಹಾರ ಮತ್ತು ಪಾರದರ್ಶಕತೆಯ ಹಕ್ಕಿನ ಪ್ರಕರಣ 3ರ ಖಂಡ (ಸಿ)ಯಲ್ಲಿ ಉಲ್ಲೇಖಿಸಲಾದ ಕಲೆಕ್ಟರ್‌ನಾಗಿರುವ; ಅಥವಾ

(ಕೆ) ಭದ್ರತೆಗಳ ಕರಾರುಗಳ (ನಿಯಂತ್ರಣ) ಅಧಿನಿಯಮ, 1956ರ (1956ರ ಕೇಂದ್ರ ಅಧಿನಿಯಮ 42) ಪ್ರಕರಣ 2ರ ಖಂಡ (ಎಫ್)ನಲ್ಲಿ ಉಲ್ಲೇಖಿಸಲಾದ ಮಾನ್ಯತೆ ಪಡೆದ ಸ್ಟಾಕ್ ವಿನಿಮಯವಾಗಿರುವ; ಅಥವಾ

(ಎಲ್) ಠೇವಣಿಸ್ಥಾನ ಅಧಿನಿಯಮ, 1996ರ (1996ರ ಕೇಂದ್ರ ಅಧಿನಿಯಮ 22) ಪ್ರಕರಣ 2ರ ಉಪಪ್ರಕರಣ (1)ರ ಖಂಡ (ಇ)ಯಲ್ಲಿ ಉಲ್ಲೇಖಿಸಲಾದ ಠೇವಣಿಸ್ಥಾನವಾಗಿರುವ; ಅಥವಾ

(ಎಮ್) ಭಾರತೀಯ ರಿಸರ್ವ್ ಬ್ಯಾಂಕ್ ಅಧಿನಿಯಮ, 1934ರ (1934ರ ಕೇಂದ್ರ ಅಧಿನಿಯಮ 2) ಪ್ರಕರಣ 3ರ ಅಡಿಯಲ್ಲಿ ರಚಿಸಿದ ರಿಸರ್ವ್ ಬ್ಯಾಂಕಿನ ಒಬ್ಬ ಅಧಿಕಾರಿಯಾಗಿರುವ; ಅಥವಾ

(ಎನ್) ಕಂಪನಿಗಳ ಅಧಿನಿಯಮ, 2013ರ (2013ರ ಕೇಂದ್ರ ಅಧಿನಿಯಮ 18) ಅಡಿಯಲ್ಲಿ ನೋಂದಾಯಿತವಾಗಿರುವ ಸರಕು ಮತ್ತು ಸೇವೆಗಳ ತೆರಿಗೆ ಜಾಲದ ಕಂಪನಿಯಾಗಿರುವ; ಅಥವಾ

(ಓ) ಪ್ರಕರಣ 25ರ ಉಪಪ್ರಕರಣ (9)ರ ಅಡಿಯಲ್ಲಿ ವಿಶಿಷ್ಟ ಗುರುತಿನ ಸಂಖ್ಯೆಯನ್ನು ಮಂಜೂರು ಮಾಡಲಾಗಿರುವ ಒಬ್ಬ ವ್ಯಕ್ತಿಯಾಗಿರುವ; ಅಥವಾ

(ಪಿ) ಪರಿಷತ್‌ನ ಶಿಫಾರಸ್ಸುಗಳ ಅನ್ವಯ, ಸರ್ಕಾರದ ಮೂಲಕ ನಿರ್ದಿಷ್ಟಪಡಿಸಬಹುದಾದ ಯಾವುದೇ ಇತರ ವ್ಯಕ್ತಿಯಾಗಿರುವ,

– ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ವ್ಯವಹಾರದ ತೆರಿಗೆ ಸಂದಾಯದ ವಿವರಗಳು ಮತ್ತು ಇತರ ವಿವರಗಳು ಅಥವಾ ಬ್ಯಾಂಕ್ ಖಾತೆಗೆ ಅಥವಾ ವಿದ್ಯುಚ್ಛಕ್ತಿಯ ಬಳಕೆಗೆ ಸಂಬಂಧಿಸಿದ ವ್ಯವಹಾರಗಳು, ಸರಕುಗಳ ಅಥವಾ ಸ್ವತ್ತಿನ ಅಥವಾ ಸ್ವತ್ತಿನಲ್ಲಿನ ಹಕ್ಕು ಅಥವಾ ಹಿತಾಸಕ್ತಿಯ ಖರೀದಿ, ಮಾರಾಟ ಅಥವಾ ವಿನಿಮಯದ ವ್ಯವಹಾರವನ್ನು ಒಳಗೊಂಡಿರುವ ನೋಂದಣಿ ದಾಖಲೆಯನ್ನು ಅಥವಾ ಲೆಕ್ಕಪತ್ರಗಳ ವಿವರಗಳನ್ನು ಅಥವಾ ಯಾವುದೇ ನಿಯತಕಾಲಿಕ ರಿಟರ್ನ್ ಅಥವಾ ದಸ್ತಾವೇಜನ್ನು ನಿರ್ವಹಿಸಲು ಜವಾಬ್ದಾರನಾಗಿರುವ ಯಾವುದೇ ವ್ಯಕ್ತಿಯು, ಅವುಗಳ ಒಂದು ಮಾಹಿತಿ ರಿಟರ್ನನ್ನು ಅಂಥ ಅವಧಿಗಳಿಗೆ ಸಂಬಂಧಿಸಿದಂತೆ ನಿಯಮಿಸಬಹುದಾದ ಅಂಥ ಸಮಯದೊಳಗೆ, ಅಂಥ ನಮೂನೆಯಲ್ಲಿ ಮತ್ತು ವಿಧಾನದಲ್ಲಿ ಮತ್ತು ಅಂಥ ಪ್ರಾಧಿಕಾರ ಅಥವಾ ಏಜೆನ್ಸಿಗೆ ಒದಗಿಸತಕ್ಕದ್ದು.

(2) ಆಯುಕ್ತರು ಅಥವಾ ಈ ಸಂಬಂಧದಲ್ಲಿ ಅವರಿಂದ ಪ್ರಾಧಿಕೃತಗೊಂಡ ಒಬ್ಬ ಅಧಿಕಾರಿಯು, ಮಾಹಿತಿ ರಿಟರ್ನನಲ್ಲಿ ಒದಗಿಸಿದಂತಹ ಮಾಹಿತಿಯು ದೋಷಪೂರಿತವಾಗಿದೆ ಎಂದು ಪರಿಗಣಿಸಿದಲ್ಲಿ, ಅಂಥ ಮಾಹಿತಿ ರಿಟರ್ನನ್ನು ಒದಗಿಸಿದ ವ್ಯಕ್ತಿಗೆ ದೋಷದ ಬಗ್ಗೆ ತಿಳಿಸಬಹುದು ಮತ್ತು ಆತನಿಗೆ ಅಂಥ ತಿಳುವಳಿಕೆ ನೀಡಿದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ಅಥವಾ ಸದರಿ ಅಧಿಕಾರಿಯು ಈ ಸಂಬಂಧದಲ್ಲಿ ಸಲ್ಲಿಸಿದ ಅರ್ಜಿಯ ಮೇಲೆ ಅನುಮತಿಸಬಹುದಾದ ಅಂಥ ಹೆಚ್ಚಿನ ಅವಧಿಯೊಳಗೆ

ದೋಷವನ್ನು ಸರಿಪಡಿಸಿಕೊಳ್ಳುವ ಅವಕಾಶವನ್ನು ನೀಡಬಹುದು ಮತ್ತು ಸದರಿ ಮೂವತ್ತು ದಿನಗಳ ಒಳಗಾಗಿ ಅಥವಾ ಹಾಗೆ ಅನುಮತಿಸಿದ ಹೆಚ್ಚಿನ ಅವಧಿಯೊಳಗೆ ದೋಷವನ್ನು ಸರಿಪಡಿಸದಿದ್ದರೆ, ಆಗ ಈ ಅಧಿನಿಯಮದ ಯಾವುದೇ ಇತರ ಉಪಬಂಧಗಳಲ್ಲಿ ಏನೇ ಒಳಗೊಂಡಿದ್ದರೂ, ಅಂಥ ಮಾಹಿತಿ ರಿಟರ್ನ್ ಒದಗಿಸಿಲ್ಲ ಎಂದು ಪರಿಗಣಿಸತಕ್ಕದ್ದು ಮತ್ತು ಈ ಅಧಿನಿಯಮದ ಉಪಬಂಧಗಳು ಅನ್ವಯಿಸತಕ್ಕದ್ದು.

(3) ಮಾಹಿತಿ ರಿಟರ್ನನ್ನು ಒದಗಿಸುವುದು ಅಗತ್ಯವಿರುವಂತಹ ಒಬ್ಬ ವ್ಯಕ್ತಿಯು, ಅದನ್ನು ಉಪಪ್ರಕರಣ (1) ಅಥವಾ ಉಪಪ್ರಕರಣ (2)ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಸಮಯದೊಳಗೆ ಒದಗಿಸದಿದ್ದಲ್ಲಿ, ಸದರಿ ಪ್ರಾಧಿಕಾರವು ಆತನಿಗೆ ಸೂಚನಾ ಪತ್ರವನ್ನು ನೀಡಿ ಅಂಥ ಮಾಹಿತಿ ರಿಟರ್ನನ್ನು ಅಂಥ ಸೂಚನಾಪತ್ರ ನೀಡಿದ ದಿನಾಂಕದಿಂದ ತೊಂಬತ್ತು ದಿನಗಳನ್ನು ಮೀರದ ಅವಧಿಯೊಳಗೆ ಒದಗಿಸುವಂತೆ ಅಗತ್ಯಪಡಿಸಬಹುದು ಮತ್ತು ಅಂಥ ವ್ಯಕ್ತಿಯು ಮಾಹಿತಿ ರಿಟರ್ನನ್ನು ಒದಗಿಸತಕ್ಕದ್ದು.

151. ಅಂಕಿ ಅಂಶಗಳನ್ನು ಸಂಗ್ರಹಣೆ ಮಾಡುವ ಅಧಿಕಾರ.– (1) ಆಯುಕ್ತರು, ಹಾಗೆ ಮಾಡುವುದು ಅವಶ್ಯಕ ಎಂದು ಆತನು ಪರಿಗಣಿಸಿದಲ್ಲಿ, ಈ ಅಧಿನಿಯಮದ ಮೇರೆಗೆ ಅಥವಾ ಸಂಬಂಧದಲ್ಲಿ ವ್ಯವಹರಿಸುವ ಯಾವುದೇ ವಿಷಯಗಳಿಗೆ ಸಂಬಂಧಿಸಿದ ಅಂಕಿಅಂಶಗಳನ್ನು ಸಂಗ್ರಹಿಸಲು ಅಧಿಸೂಚನೆಯ ಮೂಲಕ ನಿರ್ದೇಶಿಸಬಹುದು.

(2) ಹಾಗೆ ನೀಡಲಾಗಿರುವ ಅಂಥ ಅಧಿಸೂಚನೆಯ ಮೇರೆಗೆ, ಆಯುಕ್ತರು, ಅಥವಾ ಅವರಿಂದ ಈ ಸಂಬಂಧದಲ್ಲಿ ಪ್ರಾಧಿಕೃತಗೊಂಡ ಯಾವುದೇ ವ್ಯಕ್ತಿಯು, ಸಂಬಂಧಪಟ್ಟ ಅಂಕಿಅಂಶಗಳನ್ನು ಸಂಗ್ರಹಿಸಬೇಕಾಗಿರುವ, ಯಾವುದೇ ವಿಷಯಗಳಿಗೆ ಸಂಬಂಧಿಸಿದ ಅಂಥ ಮಾಹಿತಿ ಅಥವಾ ರಿಟರ್ನಗಳನ್ನು ನಿಯಮಿಸಬಹುದಾದ ಅಂಥ ನಮೂನೆ ಮತ್ತು ವಿಧಾನದಲ್ಲಿ ಒದಗಿಸುವಂತೆ ಸಂಬಂಧಿತ ವ್ಯಕ್ತಿಗಳನ್ನು ಕರೆಯಬಹುದು.

152. ಮಾಹಿತಿ ಬಹಿರಂಗಪಡಿಸುವಿಕೆಯ ಪ್ರತಿಷೇಧ.– (1) ಪ್ರಕರಣ 150 ಅಥವಾ ಪ್ರಕರಣ 151ರ ಉದ್ದೇಶಗಳಿಗಾಗಿ ಯಾವುದೇ ವಿಷಯಗಳಿಗೆ ಸಂಬಂಧಿಸಿದಂತೆ ನೀಡಲಾಗುವ ಯಾವುದೇ ವೈಯಕ್ತಿಕ ರಿಟರ್ನ್ ಅಥವಾ ಅದರ ಭಾಗದ ಮಾಹಿತಿಯನ್ನು, ಸಂಬಂಧಿತ ವ್ಯಕ್ತಿಯ ಅಥವಾ ಆತನ ಪ್ರಾಧಿಕೃತ ಪ್ರತಿನಿಧಿಯ ಲಿಖಿತ ಪೂರ್ವ ಸಮ್ಮತಿಯಿಲ್ಲದೆ, ಯಾವುದೇ ವಿವರಗಳನ್ನು ಒಬ್ಬ ನಿರ್ದಿಷ್ಟ ವ್ಯಕ್ತಿಗೆ ಉಲ್ಲೇಖಿಸಲಾಗಿದೆ ಎಂದು ಗುರುತಿಸಲು ಸಾಧ್ಯಗೊಳಿಸಬಹುದಾದ ಅಂಥ ವಿಧಾನದಲ್ಲಿ ಪ್ರಕಟಿಸತಕ್ಕದ್ದಲ್ಲ ಮತ್ತು ಅಂಥ ಮಾಹಿತಿಯನ್ನು ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ನಡಾವಳಿಗಳ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದಲ್ಲ.

(2) ಈ ಅಧಿನಿಯಮ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಅಧಿನಿಯಮದ ಅಡಿಯಲ್ಲಿನ ಅಭಿಯೋಜನೆಯ ಉದ್ದೇಶಗಳಿಗಲ್ಲದೆ, ಈ ಅಧಿನಿಯಮದ ಅಡಿಯಲ್ಲಿ ಅಂಕಿ ಅಂಶಗಳ ಸಂಗ್ರಹಣೆಯಲ್ಲಿ ಅಥವಾ ಈ ಅಧಿನಿಯಮದ ಉದ್ದೇಶಗಳಿಗಾಗಿ ಅವುಗಳ ಕ್ರೋಢೀಕರಣ ಅಥವಾ ಗಣಕೀಕರಣದಲ್ಲಿ ತೊಡಗಿರದ ಯಾವುದೇ ವ್ಯಕ್ತಿಯನ್ನು, ಪ್ರಕರಣ 151ರಲ್ಲಿ ಉಲ್ಲೇಖಿಸಲಾದ ಯಾವುದೇ ಮಾಹಿತಿಯನ್ನು ಅಥವಾ ವೈಯಕ್ತಿಕ ರಿಟರ್ನನ್ನು ನೋಡಲು ಅಥವಾ ಸಂಪರ್ಕವನ್ನು ಹೊಂದಲು ಅನುಮತಿಸತಕ್ಕದ್ದಲ್ಲ.

(3) ಆಯುಕ್ತರ ಅಭಿಪ್ರಾಯದಲ್ಲಿ, ಅಂಥ ಮಾಹಿತಿಯನ್ನು ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಿಂದ ಪ್ರಕಟಿಸುವುದು ಅಪೇಕ್ಷಣೀಯ ಎಂದೆನಿಸಿದರೆ, ತೆರಿಗೆದಾಯಕ ವ್ಯಕ್ತಿಗಳ ಒಂದು ವರ್ಗಕ್ಕೆ ಅಥವಾ ವ್ಯವಹಾರಗಳ ವರ್ಗಕ್ಕೆ ಸಂಬಂಧಿಸಿದಂತೆ ಯಾವುದೇ ಮಾಹಿತಿಯನ್ನು ಪ್ರಕಟಿಸಲು, ಈ ಪ್ರಕರಣದಲ್ಲಿನ ಯಾವುದೂ ಅನ್ವಯಿಸತಕ್ಕದ್ದಲ್ಲ.

153. ತಜ್ಞನಿಂದ ನೆರವನ್ನು ತೆಗೆದುಕೊಳ್ಳುವುದು.– ಸಹಾಯಕ ಆಯುಕ್ತರ ಶ್ರೇಣಿಗಿಂತ ಕಡಿಮೆಯಿಲ್ಲದ ಯಾವುದೇ ಅಧಿಕಾರಿಯು, ಪ್ರಕರಣದ ಸ್ವರೂಪ ಮತ್ತು ಸಂಕೀರ್ಣತೆ ಹಾಗೂ ರಾಜಸ್ವದ ಹಿತಾಸಕ್ತಿಯನ್ನು ಗಮನದಲ್ಲಿಟ್ಟಿಕೊಂಡು, ಸೂಕ್ಷ್ಮಪರಿಶೀಲನೆ, ವಿಚಾರಣೆ, ತನಿಖೆ, ಅಥವಾ ಆತನ ಮುಂದಿರುವ ಯಾವುದೇ ಇತರ ನಡಾವಳಿಗಳ ಯಾವುದೇ ಹಂತದಲ್ಲಿ ಯಾವುದೇ ತಜ್ಞನ ನೆರವನ್ನು ತೆಗೆದುಕೊಳ್ಳಬಹುದು.

154. ಮಾದರಿಗಳನ್ನು ತೆಗೆದುಕೊಳ್ಳುವ ಅಧಿಕಾರ.– ಆಯುಕ್ತರು ಅಥವಾ ಆತನಿಂದ ಪ್ರಾಧಿಕೃತನಾದ ಒಬ್ಬ ಅಧಿಕಾರಿಯು, ಅದು ಅವಶ್ಯಕ ಎಂದು ಅವರು ಪರಿಗಣಿಸಿದಲ್ಲಿ, ಯಾವುದೇ ತೆರಿಗೆದಾಯಕ ವ್ಯಕ್ತಿಯ ಸ್ವಾಧೀನದಿಂದ ಸರಕುಗಳ ಮಾದರಿಗಳನ್ನು ತೆಗೆದುಕೊಳ್ಳಬಹುದು ಮತ್ತು ಹಾಗೆ ತೆಗೆದುಕೊಳ್ಳಲಾದ ಯಾವುದೇ ಮಾದರಿಗಳಿಗೆ ಒಂದು ರಶೀದಿಯನ್ನು ಒದಗಿಸುವುದು.

155. ರುಜುವಾತಿನ ಹೊಣೆ.– ಯಾವುದೇ ವ್ಯಕ್ತಿಯು, ಈ ಅಧಿನಿಯಮದ ಅಡಿಯಲ್ಲಿ ಹೂಡುವಳಿ ತೆರಿಗೆ ಜಮೆಗಾಗಿ ಆತನು ಅರ್ಹನಿದ್ದಾನೆ ಎಂದು ಕ್ಲೇಮು ಮಾಡಿದ್ದಲ್ಲಿ, ಅಂಥ ಕ್ಲೇಮಿನ ರುಜುವಾತಿನ ಹೊಣೆಗಾರಿಕೆಯು ಅಂಥ ವ್ಯಕ್ತಿಯ ಮೇಲಿರತಕ್ಕದ್ದು.

156. ಸಾರ್ವಜನಿಕ ನೌಕರರು ಎಂದು ಭಾವಿಸಬೇಕಾದ ವ್ಯಕ್ತಿಗಳು.– ಈ ಅಧಿನಿಯಮದ ಅಡಿಯಲ್ಲಿ ಪ್ರಕಾರ್ಯಗಳನ್ನು ನಿರ್ವಹಿಸುವ ಎಲ್ಲಾ ವ್ಯಕ್ತಿಗಳನ್ನು, ಭಾರತೀಯ ದಂಡ ಸಂಹಿತೆ, 1860ರ (1860ರ ಕೇಂದ್ರ ಅಧಿನಿಯಮ 45) ಪ್ರಕರಣ 21ರ ಅರ್ಥವ್ಯಾಪ್ತಿಯೊಳಗೆ ಬರುವ ಸಾರ್ವಜನಿಕ ನೌಕರ ಎಂದು ಪರಿಭಾವಿಸತಕ್ಕದ್ದು.

157. ಈ ಅಧಿನಿಯಮದ ಅಡಿಯಲ್ಲಿ ತೆಗೆದುಕೊಂಡ ಕ್ರಮದ ಸಂರಕ್ಷಣೆ.– (1) ಈ ಅಧಿನಿಯಮದ ಅಥವಾ ಇದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿ ಯಾವುದನ್ನಾದರೂ ಸದ್ಭಾವನೆಯಿಂದ ಮಾಡಿರುವುದಕ್ಕಾಗಿ ಅಥವಾ ಹಾಗೆ ಮಾಡಲು ಉದ್ದೇಶಿಸಿರುವ ಅಪೀಲು ನ್ಯಾಯಾಧಿಕರಣದ ಅಧ್ಯಕ್ಷ, ರಾಜ್ಯಾಧ್ಯಕ್ಷ, ಸದಸ್ಯರು, ಅಧಿಕಾರಿಗಳು, ಅಥವಾ ಇತರ ನೌಕರರು ಅಥವಾ ಸದರಿ ಅಪೀಲು ನ್ಯಾಯಾಧಿಕರಣದಿಂದ ಪ್ರಾಧಿಕೃತನಾದ ಇತರ ವ್ಯಕ್ತಿಯ ವಿರುದ್ಧವಾಗಿ ದಾವೆ, ಅಭಿಯೋಜನೆ ಅಥವಾ ಇತರ ಕಾನೂನು ನಡಾವಳಿಗಳನ್ನು ಹೂಡತಕ್ಕದ್ದಲ್ಲ.

(2) ಈ ಅಧಿನಿಯಮದ ಅಥವಾ ಇದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿ ಯಾವುದನ್ನಾದರೂ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿರುವ, ಈ ಅಧಿನಿಯಮದ ಅಡಿಯಲ್ಲಿ ನೇಮಕವಾದ ಅಥವಾ

ಪ್ರಾಧಿಕೃತನಾದ ಯಾವುದೇ ಅಧಿಕಾರಿಯ ವಿರುದ್ಧವಾಗಿ ದಾವೆ, ಅಭಿಯೋಜನೆ ಅಥವಾ ಇತರ ಕಾನೂನು ನಡಾವಳಿಗಳನ್ನು ಹೂಡತಕ್ಕದ್ದಲ್ಲ.

158. ಸಾರ್ವಜನಿಕ ನೌಕರನಿಂದ ಮಾಹಿತಿಯ ಬಹಿರಂಗಪಡಿಸುವಿಕೆ.– (1) ಈ ಅಧಿನಿಯಮಕ್ಕೆ ಅನುಸಾರವಾಗಿ ನೀಡಲಾದ ಯಾವುದೆ ಹೇಳಿಕೆ, ಒದಗಿಸಿದ ರಿಟರ್ನ್ ಅಥವಾ ಹಾಜರುಪಡಿಸಿದ ಲೆಕ್ಕಪತ್ರಗಳು ಅಥವಾ ದಸ್ತಾವೇಜುಗಳಲ್ಲಿ ಅಥವಾ ಈ ಅಧಿನಿಯಮದ ಅಡಿಯಲ್ಲಿನ ನಡಾವಳಿಗಳ ಕ್ರಮದಲ್ಲಿ (ಕ್ರಿಮಿನಲ್ ನ್ಯಾಯಾಲಯದ ಮುಂದಿರುವ ನಡಾವಳಿಗಳನ್ನು ಹೊರತುಪಡಿಸಿದಂತೆ) ನೀಡಲಾದ ಯಾವುದೇ ಪುರಾವೆಯ ದಾಖಲೆಯಲ್ಲಿ, ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ನಡಾವಳಿಯ ಯಾವುದೇ ದಾಖಲೆಗಳಲ್ಲಿ ಒಳಗೊಂಡಿರುವ ಎಲ್ಲಾ ವಿವರಗಳನ್ನು ಉಪಪ್ರಕರಣ (3)ರಲ್ಲಿ ಉಪಬಂಧಿಸಿದುದನ್ನುಳಿದು ಬಹಿರಂಗಪಡಿಸತಕ್ಕದ್ದಲ್ಲ.

(2) ಭಾರತೀಯ ಸಾಕ್ಷ್ಯ ಅಧಿನಿಯಮ, 1872ರಲ್ಲಿ (1872ರ ಕೇಂದ್ರ ಅಧಿನಿಯಮ 1) ಒಳಗೊಂಡಿರುವುದು ಏನೇ ಇದ್ದರೂ, ಯಾವುದೇ ನ್ಯಾಯಾಲಯವು ಉಪಪ್ರಕರಣ (3)ರಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು, ಉಪಪ್ರಕರಣ (1)ರಲ್ಲಿ ಉಲ್ಲೇಖಿಸಲಾದ ವಿವರಗಳಿಗೆ ಸಂಬಂಧಿಸಿದಂತೆ ಅದರ ಸಮ್ಮುಖದಲ್ಲಿ ಹಾಜರುಪಡಿಸುವಂತೆ ಅಥವಾ ಅದರ ಸಮ್ಮುಖದಲ್ಲಿ ಸಾಕ್ಷ್ಯ ನೀಡುವಂತೆ ಈ ಅಧಿನಿಯಮದ ಅಡಿಯಲ್ಲಿ ನೇಮಕವಾದ ಅಥವಾ ಪ್ರಾಧಿಕೃತನಾದ ಯಾವುದೇ ಅಧಿಕಾರಿಯನ್ನು ಅಗತ್ಯಪಡಿಸತಕ್ಕದ್ದಲ್ಲ.

(3) ಈ ಪ್ರಕರಣದಲ್ಲಿ ಒಳಗೊಂಡಿರುವ ಯಾವುದೂ ಈ ಕೆಳಕಂಡವುಗಳನ್ನು ಪ್ರಕಟಿಸಲು ಅನ್ವಯಿಸತಕ್ಕದ್ದಲ್ಲ,–

(ಎ) ಭಾರತೀಯ ದಂಡ ಸಂಹಿತೆ, 1860ರ (1860ರ ಕೇಂದ್ರ ಅಧಿನಿಯಮ 45) ಅಥವಾ ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮ, 1988 (1988ರ ಕೇಂದ್ರ ಅಧಿನಿಯಮ 49), ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಅಧಿನಿಯಮದ ಅಡಿಯಲ್ಲಿನ ಯಾವುದೇ ಅಭಿಯೋಜನೆಯ ಉದ್ದೇಶಕ್ಕಾಗಿ ಅಂಥ ಯಾವುದೇ ವಿವರಪತ್ರ, ರಿಟರ್ನ್, ಲೆಕ್ಕಪತ್ರಗಳು, ದಸ್ತಾವೇಜುಗಳು, ಪುರಾವೆ, ಅಫಿಡವಿಟ್, ಅಥವಾ ಪ್ರಮಾಣಪೂರ್ವಕ ಲಿಖಿತ ಹೇಳಿಕೆಗೆ ಸಂಬಂಧಿಸಿದ ಅಂಥ ವಿವರಗಳು; ಅಥವಾ

(ಬಿ) ಕೇಂದ್ರ ಸರ್ಕಾರಕ್ಕೆ ಅಥವಾ ರಾಜ್ಯ ಸರ್ಕಾರಕ್ಕೆ ಅಥವಾ ಈ ಅಧಿನಿಯಮವನ್ನು ಕಾರ್ಯಗತಗೊಳಿಸುವಲ್ಲಿ ಕಾರ್ಯನಿರ್ವಹಿಸುತ್ತಿರುವ ಯಾವುದೇ ಇತರ ವ್ಯಕ್ತಿಗೆ, ಅಂಥ ವಿವರಗಳನ್ನು ಪರಿಶೀಲಿಸುವುದಕ್ಕಾಗಿ ಅಥವಾ ಈ ಅಧಿನಿಯಮದ ಧ್ಯೇಯಗಳನ್ನು ನೆರವೇರಿಸುವ ಉದ್ದೇಶಗಳಿಗಾಗಿ ಅಂಥ ವಿವರಗಳು; ಅಥವಾ

(ಸಿ) ಯಾವುದೇ ಸೂಚನಾಪತ್ರಗಳನ್ನು ಜಾರಿಗೊಳಿಸುವ ಅಥವಾ ಯಾವುದೇ ತಗಾದೆಯ ವಸೂಲಾತಿಯ ಯಾವುದೇ ಪ್ರಕ್ರಿಯೆಗಾಗಿ ಈ ಅಧಿನಿಯಮದ ಅಡಿಯಲ್ಲಿನ ಕಾನೂನು ಬದ್ಧ ಚಲಾಯಿಸುವಿಕೆಯಿಂದ ಅಂಥ ಬಹಿರಂಗಪಡಿಸುವಿಕೆಯು ಉಂಟಾದಾಗ ಯಾವುದೇ ವಿವರಗಳು; ಅಥವಾ

(ಡಿ) ಒಂದು ಸಿವಿಲ್ ನ್ಯಾಯಾಲಯದ ಯಾವುದೇ ದಾವೆ ಅಥವಾ ನಡಾವಳಿಗಳಲ್ಲಿ, ಸರ್ಕಾರ ಅಥವಾ ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ಪ್ರಾಧಿಕಾರವು ಒಬ್ಬ ಪಕ್ಷಕಾರನಾಗಿದ್ದು, ಯಾವುದೇ ಅಂಥ ಪ್ರಾಧಿಕಾರವನ್ನು ಇದರ ಅಡಿಯಲ್ಲಿನ ಯಾವುದೇ ಅಧಿಕಾರಗಳನ್ನು ಚಲಾಯಿಸಲು ಪ್ರಾಧಿಕೃತಗೊಳಿಸುವ, ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಅಡಿಯಲ್ಲಿನ ಯಾವುದೇ ನಡಾವಳಿಯಿಂದ ಉದ್ಭವಿಸಿದ ಯಾವುದೇ ವಿಷಯಗಳಿಗೆ ಸಂಬಂಧಿಸಿದ ಅಂಥ ಯಾವುದೇ ವಿವರಗಳು; ಅಥವಾ

(ಇ) ಈ ಅಧಿನಿಯಮದ ಮೂಲಕ ವಿಧಿಸಿದ ತೆರಿಗೆಯ ಸ್ವೀಕೃತಿ ಅಥವಾ ತೆರಿಗೆಯ ಮರುಪಾವತಿಯ ಲೆಕ್ಕಪರಿಶೋಧನೆಯ ಉದ್ದೇಶಕ್ಕಾಗಿ ನೇಮಕಗೊಂಡಿರುವ ಯಾವುದೇ ಅಧಿಕಾರಿಗೆ ಅಂಥ ಯಾವುದೇ ವಿವರಗಳು; ಅಥವಾ

(ಎಫ್) ಅಂಥ ವಿವರಗಳು ಈ ಅಧಿನಿಯಮದ ಅಡಿಯಲ್ಲಿ ನೇಮಕವಾದ ಅಥವಾ ಪ್ರಾಧಿಕೃತನಾದ ಯಾವುದೇ ಅಧಿಕಾರಿಯ ನಡತೆಯ ಯಾವುದೇ ವಿಚಾರಣೆಯ ಉದ್ದೇಶಕ್ಕಾಗಿ ಸಂಬಂಧಪಟ್ಟಿದ್ದಲ್ಲಿ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ವಿಚಾರಣಾ ಅಧಿಕಾರಿಯಾಗಿ ನೇಮಕಗೊಂಡ ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಅಂಥ ಯಾವುದೇ ವಿವರಗಳು; ಅಥವಾ

(ಜಿ) ಕೇಂದ್ರ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಒಬ್ಬ ಅಧಿಕಾರಿಗೆ, ಯಾವುದೇ ತೆರಿಗೆಯನ್ನು ಅಥವಾ ಸುಂಕವನ್ನು ವಿಧಿಸಲು ಮತ್ತು ವಸೂಲು ಮಾಡಲು ಆ ಸರ್ಕಾರವನ್ನು ಸಾಧ್ಯಗೊಳಿಸುವ ಉದ್ದೇಶಕ್ಕಾಗಿ ಅವಶ್ಯಕವಾಗಬಹುದಾದ ಅಂಥ ಯಾವುದೇ ವಿವರಗಳು; ಅಥವಾ

(ಹೆಚ್) ಒಬ್ಬ ಸಾರ್ವಜನಿಕ ನೌಕರ ಅಥವಾ ಯಾವುದೇ ಇತರ ಶಾಸನಬದ್ಧ ಪ್ರಾಧಿಕಾರವು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಅವನ ಅಥವಾ ಅದರ ಅಧಿಕಾರಗಳನ್ನು ಕಾನೂನುಬದ್ಧವಾಗಿ ಚಲಾಯಿಸುವಿಕೆಯ ಮೂಲಕ ಅಂಥ ಬಹಿರಂಗಪಡಿಸುವಿಕೆಯು ಉಂಟಾದಾಗ ಯಾವುದೇ ವಿವರಗಳು; ಅಥವಾ

(ಐ) ಸಂದರ್ಭಾನುಸಾರವಾಗಿ ಒಬ್ಬ ಕಾನೂನು ಸಲಹೆಗಾರ, ಒಬ್ಬ ಕಾಸ್ಟ್ ಅಕೌಂಟೆಂಟ್, ಒಬ್ಬ ಚಾರ್ಟರ್ಡ್ ಅಕೌಂಟೆಂಟ್, ಒಬ್ಬ ಕಂಪನಿ ಕಾರ್ಯದರ್ಶಿ ವೃತ್ತಿಯನ್ನು ನಿರ್ವಹಿಸುತ್ತಿರುವ ಸದಸ್ಯರುಗಳ ವಿರುದ್ಧ ಶಿಸ್ತು ಕ್ರಮವನ್ನು ತೆಗೆದುಕೊಳ್ಳಲು ಅಧಿಕಾರವನ್ನು ಪಡೆದ ಪ್ರಾಧಿಕಾರಕ್ಕೆ, ಒಬ್ಬ ಕಾರ್ಯನಿರತ ನ್ಯಾಯವಾದಿ, ಒಬ್ಬ ತೆರಿಗೆ ವೃತ್ತಿಗಾರ, ಒಬ್ಬ ಕಾರ್ಯನಿರತ ಕಾಸ್ಟ್ ಅಕೌಂಟೆಂಟ್, ಒಬ್ಬ ಕಾರ್ಯನಿರತ ಚಾರ್ಟರ್ಡ್ ಅಕೌಂಟೆಂಟ್, ಒಬ್ಬ ಕಾರ್ಯನಿರತ ಕಂಪನಿ ಕಾರ್ಯದರ್ಶಿಯ ವಿರುದ್ಧವಾಗಿ, ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ನಡಾವಳಿಗಳಿಗೆ ಸಂಬಂಧಿಸಿದಂತೆ ದುರ್ನಡತೆಯ ಆರೋಪದ ಯಾವುದೇ ವಿಚಾರಣೆಗೆ ಸಂಬಂದಿಸಿರುವ ಯಾವುದೇ ವಿವರಗಳು; ಅಥವಾ

(ಜೆ) ಯಾವುದೇ ಸ್ವಯಂಚಾಲಿತ ವ್ಯವಸ್ಥೆಯಲ್ಲಿ ದತ್ತಾಂಶ ನಮೂದಿಸುವ ಉದ್ದೇಶಕ್ಕಾಗಿ ಅಥವಾ ಯಾವುದೇ ಸ್ವಯಂಚಾಲಿತ ವ್ಯವಸ್ಥೆಯ ಕಾರ್ಯಚರಣೆ, ಉನ್ನತೀಕರಣ ಅಥವಾ ನಿರ್ವಹಣೆಯ ಉದ್ದೇಶಕ್ಕಾಗಿ ನೇಮಕಗೊಂಡಿರುವ ಯಾವುದೇ ಏಜೆನ್ಸಿಗೆ, ಅಂಥ ಏಜೆನ್ಸಿಯು ಅಂಥ ವಿವರಗಳನ್ನು ಮೇಲೆ ಹೇಳಲಾದ ಉದ್ದೇಶಗಳಿಗಾಗಿ ಅಲ್ಲದೆ ಉಪಯೋಗಿಸುವಂತಿಲ್ಲ ಅಥವಾ ಪ್ರಕಟಿಸುವಂತಿಲ್ಲ ಎಂದು ಕರಾರಿನನ್ವಯ ಬದ್ಧವಾಗಿದ್ದಲ್ಲಿ, ಯಾವುದೇ ವಿವರಗಳು; ಅಥವಾ

(ಕೆ) ಸರ್ಕಾರದ ಒಬ್ಬ ಅಧಿಕಾರಿಗೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉದ್ದೇಶಗಳಿಗಾಗಿ ಅವಶ್ಯಕವಾಗಬಹುದಾದ ಅಂಥ ಯಾವುದೇ ವಿವರಗಳು; ಮತ್ತು

(ಎಲ್) ಆಯುಕ್ತರ ಅಭಿಪ್ರಾಯದಲ್ಲಿ ಅಂಥ ವಿವರಗಳನ್ನು ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಿಂದ ಪ್ರಕಟಿಸುವುದು ಅಪೇಕ್ಷಣೀಯವಾದವು ಎಂದೆನಿಸಿದಲ್ಲಿ, ಯಾವುದೇ ತೆರಿಗೆದಾಯಕ ವ್ಯಕ್ತಿಗಳ ವರ್ಗಕ್ಕೆ ಅಥವಾ ವ್ಯವಹಾರಗಳ ವರ್ಗಕ್ಕೆ ಸಂಬಂಧಿಸಿದ ಯಾವುದೇ ಮಾಹಿತಿ.

159. ಕೆಲವು ಪ್ರಕರಣಗಳಲ್ಲಿ ವ್ಯಕ್ತಿಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಪ್ರಕಟಿಸುವುದು.– (1) ಆಯುಕ್ತರು ಅಥವಾ ಈ ಸಂಬಂಧದಲ್ಲಿ ಅವರಿಂದ ಪ್ರಾಧಿಕೃತಗೊಂಡ ಯಾವುದೇ ಇತರ ಅಧಿಕಾರಿಯು, ಯಾವುದೇ ವ್ಯಕ್ತಿಯ ಹೆಸರನ್ನು ಅಥವಾ ಅಂಥ ವ್ಯಕ್ತಿಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ನಡಾವಳಿಗಳಿಗೆ ಅಥವಾ ಅಭಿಯೋಜನೆಗೆ ಸಂಬಂಧಿಸಿದ ಯಾವುದೇ ಇತರ ವಿವರಗಳನ್ನು ಪ್ರಕಟಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅವಶ್ಯಕವಾದುದು ಅಥವಾ ಸಮಯೋಚಿತವಾದುದು ಎನ್ನುವ ಅಭಿಪ್ರಾಯವನ್ನು ಹೊಂದಿದ್ದಲ್ಲಿ, ಅವರು ಸೂಕ್ತ ಎಂದು ಆಲೋಚಿಸಿದಂತೆ, ಅಂಥ ವಿಧಾನದಲ್ಲಿ ಅಂಥ ಹೆಸರುಗಳನ್ನು ಮತ್ತು ವಿವರಗಳನ್ನು ಪ್ರಕಟವಾಗುವಂತೆ ಮಾಡಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ವಿಧಿಸಿದ ಯಾವುದೇ ದಂಡಗಳಿಗೆ ಸಂಬಂಧಿಸಿದ ಮಾಹಿತಿಯನ್ನು, ಅಪೀಲನ್ನು ಸಲ್ಲಿಸಲಾಗಿಲ್ಲದಿದ್ದಲ್ಲಿ, ಅಪೀಲು ಪ್ರಾಧಿಕಾರಕ್ಕೆ ಪ್ರಕರಣ 107ರ ಅಡಿಯಲ್ಲಿ ಅಪೀಲು ಸಲ್ಲಿಸುವುದಕ್ಕಾಗಿ ಇರುವ ಸಮಯವು ಮುಗಿಯುವವರೆಗೆ, ಅಥವಾ ಅಪೀಲು ಸಲ್ಲಿಸಿದ್ದರೆ, ಅದು ವಿಲೇ ಆಗುವವರೆಗೆ ಪ್ರಕಟಿಸತಕ್ಕದ್ದಲ್ಲ.

ವಿವರಣೆ.– ಆಯುಕ್ತರು ಅಥವಾ ಈ ಸಂಬಂಧದಲ್ಲಿ, ಅವರಿಂದ ಪ್ರಾಧಿಕೃತಗೊಂಡ ಯಾವುದೇ ಇತರ ಅಧಿಕಾರಿಯ ಅಭಿಪ್ರಾಯದಲ್ಲಿ, ಪ್ರಕರಣದ ಸನ್ನಿವೇಶಗಳು ಸಮರ್ಥಿಸುತ್ತವೆ ಎಂದೆನಿಸಿದರೆ, ಪಾಲುದಾರಿಕಾ ಸಂಸ್ಥೆ, ಕಂಪನಿ ಅಥವಾ ವ್ಯಕ್ತಿಗಳ ಇತರ ಸಂಘದ ಸಂದರ್ಭದಲ್ಲಿ, ಸಂದರ್ಭಾನುಸಾರವಾಗಿ, ಪಾಲುದಾರಿಕಾ ಸಂಸ್ಥೆಯ ಪಾಲುದಾರರ, ನಿರ್ದೇಶಕರುಗಳ, ವ್ಯವಸ್ಥಾಪಕ ಏಜೆಂಟುಗಳ, ಕಂಪನಿಯ ಕಾರ್ಯದರ್ಶಿಗಳು ಮತ್ತು ಖಜಾಂಚಿಗಳ ಅಥವಾ ವ್ಯವಸ್ಥಾಪಕರುಗಳ, ಅಥವಾ ಸಂಘದ ಸದಸ್ಯರುಗಳ ಹೆಸರುಗಳನ್ನು ಸಹ ಪ್ರಕಟಿಸಬಹದು.

160. ಕರನಿರ್ಧರಣಾ ನಡಾವಳಿಗಳು, ಇತ್ಯಾದಿಗಳು ಕೆಲವೊಂದು ಕಾರಣಾಧಾರಗಳ ಮೇಲೆ ಅಸಿಂಧುವಾಗುವಂತಿಲ್ಲ.– (1) ಈ ಅಧಿನಿಯಮದ ಯಾವುದೇ ಉಪಬಂಧಗಳಿಗೆ ಅನುಸಾರವಾಗಿ, ಮಾಡಿದ, ಒಪ್ಪಿಗೊಳ್ಳಲಾದ, ಮಾಡಲಾದ, ನೀಡಲಾದ, ಪ್ರಾರಂಭಿಸಲಾದ ಅಥವಾ ಮಾಡಿದೆ, ಒಪ್ಪಿಗೊಳ್ಳಲಾಗಿದೆ, ಮಾಡಲಾಗಿದೆ, ನೀಡಲಾಗಿದೆ, ಪ್ರಾರಂಭಿಸಲಾಗಿದೆ ಅಥವಾ ಮಾಡಲಾಗಿದೆ ಎಂದು ತಾತ್ಪರ್ಯವಾಗುವ, ಕರನಿರ್ಧರಣೆ, ಮರು–ಕರನಿರ್ಧರಣೆ, ನ್ಯಾಯನಿರ್ಣಯ, ಪುನರವಲೋಕನ, ಪುನರೀಕ್ಷಣೆ, ಅಪೀಲು, ಸರಿಪಡಿಸುವಿಕೆ, ಸೂಚನಾಪತ್ರ, ಸಮನ್ಸ್ ಅಥವಾ ಇತರ ನಡಾವಳಿಗಳು, ಕೇವಲ ಅದರಲ್ಲಿನ ಯಾವುದೆ ತಪ್ಪು, ದೋಷ ಅಥವಾ ಲೋಪದ ಕಾರಣಕ್ಕಾಗಿ, ಅಂಥ ಕರನಿರ್ಧರಣೆ, ಮರು–ಕರನಿರ್ಧರಣೆ, ನ್ಯಾಯನಿರ್ಣಯ, ಪುನರವಲೋಕನ, ಪುನರೀಕ್ಷಣೆ, ಅಪೀಲು, ಸರಿಪಡಿಸುವಿಕೆ, ಸೂಚನಾಪತ್ರ, ಸಮನ್ಸ್ ಅಥವಾ ಇತರ ನಡಾವಳಿಗಳು, ಈ ಅಧಿನಿಯಮದ ಅಥವಾ ಯಾವುದೇ ಅಸ್ಥಿತ್ವದಲ್ಲಿನ ಕಾನೂನಿನ ಆಶಯಗಳು, ಉದ್ದೇಶಗಳು ಮತ್ತು ಅಗತ್ಯತೆಗಳ ಖಚಿತತೆಯೊಂದಿಗೆ ಅಥವಾ ಅದಕ್ಕನುಸಾರವಾಗಿ ಸಾರ ಮತ್ತು ಪರಿಣಾಮವನ್ನು ಹೊಂದಿದ್ದರೆ ಅಸಿಂಧುವಾಗತಕ್ಕದ್ದಲ್ಲ ಅಥವಾ ಅಸಿಂಧು ಎಂದು ಪರಿಭಾವಿಸತಕ್ಕದ್ದಲ್ಲ.

(2) ಯಾವುದೇ ಸೂಚನಾಪತ್ರ, ಆದೇಶ ಅಥವಾ ತಿಳುವಳಿಕೆಯ ಜಾರಿಗೊಳಿಸುವಿಕೆಯನ್ನು, ಯಾರಿಗೆ ಅದನ್ನು ಜಾರಿಗೊಳಿಸಲಾಗಿದೆಯೋ ಅಂಥ ವ್ಯಕ್ತಿಯು ಸಂದರ್ಭಾನುಸಾರವಾಗಿ ಆ ಸೂಚನಾಪತ್ರ, ಆದೇಶ ಅಥವಾ ತಿಳುವಳಿಕೆಯ ಮೇರೆಗೆ, ಈಗಾಗಲೆ ಕಾರ್ಯನಿರ್ವಹಿಸಿದ್ದರೆ, ಅಥವಾ ಅಂಥ ಸೂಚನಾಪತ್ರ, ಆದೇಶ ಅಥವಾ ತಿಳುವಳಿಕೆಗೆ ಅನುಸಾರವಾಗಿ ಪ್ರಾರಂಭಗೊಳಿಸಲಾದ, ಮುಂದುವರಿಸಲಾದ, ಅಂತಿಮಗೊಳಿಸಲಾದ ಈ ಮುಂಚಿನ ನಡಾವಳಿಗಳಲ್ಲಿ ಅಥವಾ ಆ ಸಮಯದಲ್ಲಿ ಅಂಥ ಜಾರಿಗೊಳಿಸುವಿಕೆಯನ್ನು ಪ್ರಶ್ನಿಸಲಾಗಿರದಿದ್ದಲ್ಲಿ, ಪ್ರಶ್ನಿಸತಕ್ಕದ್ದಲ್ಲ.

161. ದಾಖಲೆಯಲ್ಲಿ ಮೇಲ್ನೋಟಕ್ಕೆ ಕಂಡುಬರುವ ತಪ್ಪುಗಳ ಸರಿಪಡಿಸುವಿಕೆ.– ಪ್ರಕರಣ 160ರ ಉಪಬಂಧಗಳಿಗೆ ಬಾಧಕವಾಗದಂತೆ ಮತ್ತು ಈ ಅಧಿನಿಯಮದ ಯಾವುದೇ ಇತರ ಉಪಬಂಧಗಳಲ್ಲಿ ಏನೇ ಒಳಗೊಂಡಿದ್ದರೂ, ಯಾವುದೇ ನಿರ್ಣಯ ಅಥವಾ ಆದೇಶ ಅಥವಾ ಸೂಚನಾಪತ್ರ ಅಥವಾ ಪ್ರಮಾಣ ಪತ್ರ ಅಥವಾ ಯಾವುದೇ ಇತರ ದಸ್ತಾವೇಜುಗಳನ್ನು, ಹೊರಡಿಸಿರುವ ಅಥವಾ ನೀಡಿರುವ ಯಾವುದೇ ಪ್ರಾಧಿಕಾರವು, ಅಂಥ ನಿರ್ಣಯ ಅಥವಾ ಆದೇಶ ಅಥವಾ ಸೂಚನಾಪತ್ರ ಅಥವಾ ಪ್ರಮಾಣ ಪತ್ರ ಅಥವಾ ಯಾವುದೇ ಇತರ ದಸ್ತಾವೇಜುಗಳಲ್ಲಿನ ದಾಖಲೆಯಲ್ಲಿ ಮೇಲ್ನೋಟಕ್ಕೆ ಕಂಡುಬರುವ ತಪ್ಪುಗಳನ್ನು, ತನ್ನ ಸ್ವಪ್ರೇರಣೆಯಿಂದಾಗಲಿ ಅಥವಾ ಅಂಥ ತಪ್ಪುಗಳನ್ನು ಈ ಅಧಿನಿಯಮದ ಅಡಿಯಲ್ಲಿ ನೇಮಕವಾದ ಯಾವುದೇ ಅಧಿಕಾರಿಯಿಂದ ಅಥವಾ ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿ ನೇಮಕವಾದ ಒಬ್ಬ ಅಧಿಕಾರಿಯಿಂದ ಅಥವಾ ಬಾಧಿತ ವ್ಯಕ್ತಿಯಿಂದ ಅದರ ಗಮನಕ್ಕೆ ತಂದಿರುವುದರಿಂದಾಗಲಿ, ಸಂದರ್ಭಾನುಸಾರವಾಗಿ ಅಂಥ ನಿರ್ಣಯ ಅಥವಾ ಆದೇಶ ಅಥವಾ ಪ್ರಮಾಣ ಪತ್ರ ಅಥವಾ ಸೂಚನಾಪತ್ರ ಅಥವಾ ಯಾವುದೇ ಇತರ ದಸ್ತಾವೇಜುಗಳನ್ನು ಜಾರಿಗೊಳಿಸಿದ ದಿನಾಂಕದಿಂದ ಮೂರು ತಿಂಗಳುಗಳ ಅವಧಿಯ ಒಳಗಾಗಿ ಸರಿಪಡಿಸಬಹುದು:

ಪರಂತು, ಅಂಥ ನಿರ್ಣಯ ಅಥವಾ ಆದೇಶ ಅಥವಾ ಪ್ರಮಾಣ ಪತ್ರ ಅಥವಾ ಸೂಚನಾಪತ್ರ ಅಥವಾ ಯಾವುದೇ ಇತರ ದಸ್ತಾವೇಜುಗಳನ್ನು ಜಾರಿಗೊಳಿಸಿದ ದಿನಾಂಕದಿಂದ ಆರು ತಿಂಗಳುಗಳ ಅವಧಿಯ ನಂತರ ಅಂಥ ಯಾವುದೇ ಸರಿಪಡಿಸುವಿಕೆಯನ್ನು ಮಾಡತಕ್ಕದ್ದಲ್ಲ:

ಮತ್ತು ಪರಂತು, ಸರಿಪಡಿಸುವಿಕೆಯು ಕೇವಲ, ಯಾವುದೇ ಆಕಸ್ಮಿಕ ಕೈತಪ್ಪಿನಿಂದ ಅಥವಾ ಲೋಪದಿಂದ ಉದ್ಭವಿಸುವ ಲಿಪಿಕ ಅಥವಾ ಗಣಿತ ದೋಷದ ಸ್ವರೂಪದಲ್ಲಿರುವ ಅಂಥ ಪ್ರಕರಣಗಳ ಸಂದರ್ಭದಲ್ಲಿ ಸದರಿ ಆರು ತಿಂಗಳುಗಳ ಅವಧಿಯು ಅನ್ವಯಿಸತಕ್ಕದ್ದಲ್ಲ:

ಅಲ್ಲದೆ ಪರಂತು, ಅಂಥ ಸರಿಪಡಿಸುವಿಕೆಯು ಯಾವುದೇ ವ್ಯಕ್ತಿಗೆ ಪ್ರತಿಕೂಲ ಪರಿಣಾಮ ಬೀರುವಂತಿದ್ದಲ್ಲಿ, ಅಂಥ ಸರಿಪಡಿಸುವಿಕೆಯನ್ನು ಕಾರ್ಯಗತಗೊಳಿಸುವಾಗ, ಪ್ರಾಧಿಕಾರವು ಸ್ವಭಾವಸಿದ್ಧ ನ್ಯಾಯದ ತತ್ವಗಳನ್ನು ಅನುಸರಿಸತಕ್ಕದ್ದು.

162. ಸಿವಿಲ್ ನ್ಯಾಯಾಲಯಗಳ ಕ್ಷೇತ್ರವ್ಯಾಪ್ತಿಯ ಪ್ರತಿಷೇಧ.– ಪ್ರಕರಣಗಳಾದ 117 ಮತ್ತು 118ರಲ್ಲಿ ಉಪಬಂಧಿಸಿದುದನ್ನುಳಿದು, ಈ ಅಧಿನಿಯಮದ ಮೇರೆಗೆ ಮಾಡಲಾದ ಅಥವಾ ಮಾಡಲಾಗಿದೆಯೆಂದು ತಾತ್ಪರ್ಯವಾಗುವ ಅಥವಾ ಅದಕ್ಕೆ ಸಂಬಂಧಿಸಿದಂತೆ ಉದ್ಭವಿಸುವ ಯಾವುದೇ ಪ್ರಶ್ನೆಗಳನ್ನು ವ್ಯವಹರಿಸುವ ಅಥವಾ ನಿರ್ಧರಿಸುವ ಕ್ಷೇತ್ರವ್ಯಾಪ್ತಿಯನ್ನು ಸಿವಿಲ್ ನ್ಯಾಯಾಲಯ ಹೊಂದಿರತಕ್ಕದ್ದಲ್ಲ.

163. ಶುಲ್ಕ ವಿಧಿಸುವಿಕೆ.– ಯಾವುದೇ ವ್ಯಕ್ತಿಗೆ, ಆತನಿಂದ ಆ ಉದ್ದೇಶಕ್ಕಾಗಿ ಸಲ್ಲಿಸಿದ ಒಂದು ಅರ್ಜಿಯ ಮೇಲೆ ಯಾವುದೇ ಆದೇಶ ಅಥವಾ ದಸ್ತಾವೇಜಿನ ಪ್ರತಿಯನ್ನು, ಎಲ್ಲೆಲ್ಲಿ ಒದಗಿಸಬೇಕಾಗಿರುವುದೋ, ಅಲ್ಲಿ ನಿಯಮಿಸಬಹುದಾದ ಅಂಥ ಶುಲ್ಕವನ್ನು ಸಂದಾಯ ಮಾಡತಕ್ಕದ್ದು.

164. ನಿಯಮಗಳನ್ನು ರಚಿಸುವ ಸರ್ಕಾರದ ಅಧಿಕಾರ.– (1) ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ಉಪಪ್ರಕರಣ (1)ರ ಉಪಬಂಧಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಸರ್ಕಾರವು ಈ ಅಧಿನಿಯಮದ ಮೂಲಕ ಅಗತ್ಯಪಡಿಸಲಾದ ಅಥವಾ ನಿಯಮಿಸಬಹುದಾದ ಎಲ್ಲಾ ಅಥವಾ ಯಾವುದೇ ವಿಷಯಗಳಿಗಾಗಿ ನಿಯಮಗಳನ್ನು ಅಥವಾ ಅವುಗಳಿಗೆ ಸಂಬಂಧಿಸಿದಂತೆ ನಿಯಮಗಳಿಂದ ಮಾಡಬೇಕಾದ ಅಥವಾ ಮಾಡಬಹುದಾದ ಉಪಬಂಧಗಳನ್ನು ರಚಿಸಬಹುದು.

(3) ಈ ಅಧಿನಿಯಮದ ಉಪಬಂಧಗಳು ಜಾರಿಗೆ ಬಂದ ದಿನಾಂಕಕ್ಕಿಂತ ಹಿಂದಿನದಾಗಿರದ ದಿನಾಂಕದಿಂದ ನಿಯಮಗಳಿಗೆ ಅಥವಾ ಅವುಗಳಲ್ಲಿ ಯಾವುದಕ್ಕಾದರೂ ಪೂರ್ವಾನ್ವಯ ಪರಿಣಾಮವನ್ನು ನೀಡುವ ಅಧಿಕಾರವನ್ನು ಈ ಪ್ರಕರಣದಿಂದ ಪ್ರದತ್ತವಾಗಿರುವ ನಿಯಮಗಳನ್ನು ರಚಿಸುವ ಅಧಿಕಾರವು ಒಳಗೊಳ್ಳತಕ್ಕದ್ದು.

(4) ಉಪಪ್ರಕರಣ (1) ಅಥವಾ ಉಪಪ್ರಕರಣ (2)ರ ಅಡಿಯಲ್ಲಿ ಮಾಡಿದ ಯಾವುದೇ ನಿಯಮಗಳು, ಅವುಗಳ ಉಲ್ಲಂಘನೆಯು ಹತ್ತು ಸಾವಿರ ರೂಪಾಯಿಗಳನ್ನು ಮೀರದ ದಂಡಕ್ಕೆ ಬಾಧ್ಯವಾಗಿರತಕ್ಕದ್ದು ಎಂದು ಉಪಬಂಧಿಸಬಹುದು.

165. ವಿನಿಯಮಗಳನ್ನು ರಚಿಸುವ ಅಧಿಕಾರ.– ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ, ಈ ಅಧಿನಿಯಮ ಅಥವಾ ಇದರ ಅಡಿಯಲ್ಲಿ ಮಾಡಲಾದ ನಿಯಮಗಳೊಂದಿಗೆ ಸುಸಂಗತವಾಗುವ ವಿನಿಯಮಗಳನ್ನು ಅಧಿಸೂಚನೆಯ ಮೂಲಕ ಮಾಡಬಹುದು.

166. ನಿಯಮಗಳು, ವಿನಿಯಮಗಳು ಮತ್ತು ಅಧಿಸೂಚನೆಗಳನ್ನು ಮಂಡಿಸುವುದು.– ಈ ಅಧಿನಿಯಮದ ಅಡಿಯಲ್ಲಿ ಸರ್ಕಾರದಿಂದ ರಚಿಸಿದ ಪ್ರತಿಯೊಂದು ನಿಯಮ, ಸರ್ಕಾರದಿಂದ ಮಾಡಿದ ಪ್ರತಿಯೊಂದು ವಿನಿಯಮ, ಮತ್ತು ಸರ್ಕಾರದಿಂದ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು, ಅದನ್ನು ರಚಿಸಿದ ಅಥವಾ ಹೊರಡಿಸಿದ ತರುವಾಯ ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲವು ಒಂದು ಅಧಿವೇಶನ ಅಥವಾ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಮೂವತ್ತು ದಿನಗಳ ಒಟ್ಟು ಅವಧಿಗಾಗಿ ಅಧಿವೇಶನದಲ್ಲಿರುವಾಗ, ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು, ಮತ್ತು ಮೇಲೆ ಹೇಳಲಾದ ಅಧಿವೇಶನ ಅಥವಾ ಅನುಕ್ರಮದ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನವು ಮುಕ್ತಾಯಗೊಳ್ಳುವ ಮುನ್ನ, ಉಭಯ ಸದನಗಳು ಸಂದರ್ಭಾನುಸಾರ ಆ ನಿಯಮ, ವಿನಿಯಮ ಮತ್ತು ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟು ಮಾಡಲು ಒಪ್ಪಿದರೆ ಅಥವಾ ಉಭಯ ಸದನಗಳು, ಆ ನಿಯಮ, ವಿನಿಯಮ ಮತ್ತು ಅಧಿಸೂಚನೆಯನ್ನು ರಚಿಸತಕ್ಕದ್ದಲ್ಲವೆಂದು ಒಪ್ಪಿದರೆ, ಆ ನಿಯಮ, ವಿನಿಯಮ ಮತ್ತು ಅಧಿಸೂಚನೆಯು ಆ ತರುವಾಯ, ಸಂದರ್ಭಾನುಸಾರವಾಗಿ ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ, ಆದಾಗ್ಯೂ ಅಂಥ ಮಾರ್ಪಡಿಸುವಿಕೆ ಅಥವಾ ಶೂನ್ಯಗೊಳಿಸುವಿಕೆಯು, ಸಂದರ್ಭಾನುಸಾರವಾಗಿ ಆ ನಿಯಮ, ವಿನಿಯಮ ಮತ್ತು ಅಧಿಸೂಚನೆಯ ಅಡಿಯಲ್ಲಿ ಹಿಂದೆ ಮಾಡಲಾದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

167. ಅಧಿಕಾರಗಳ ಪ್ರತ್ಯಾಯೋಜನೆ.– ಆಯುಕ್ತರು ಅಧಿಸೂಚನೆಯ ಮೂಲಕ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಷರತ್ತುಗಳು, ಯಾವುದಾದರು ಇದ್ದರೆ, ಅವುಗಳಿಗೆ ಒಳಪಟ್ಟು, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಪ್ರಾಧಿಕಾರ ಅಥವಾ ಅಧಿಕಾರಿಯಿಂದ ಚಲಾಯಿಸಬಹುದಾದ ಯಾವುದೇ ಅಧಿಕಾರವನ್ನು ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಇತರ ಪ್ರಾಧಿಕಾರ ಅಥವಾ ಅಧಿಕಾರಿಯಿಂದಲೂ ಸಹ ಚಲಾಯಿಸಬಹುದು ಎಂದು ನಿರ್ದೇಶಿಸಬಹುದು.

168. ಸೂಚನೆಗಳನ್ನು ಅಥವಾ ನಿರ್ದೇಶನಗಳನ್ನು ನೀಡುವ ಅಧಿಕಾರ.– ಆಯುಕ್ತರು, ಈ ಅಧಿನಿಯಮದ ಅನುಷ್ಠಾನದಲ್ಲಿನ ಏಕರೂಪತೆಯ ಉದ್ದೇಶಕ್ಕಾಗಿ ಹಾಗೆ ಮಾಡುವುದು ಅವಶ್ಯಕ ಅಥವಾ ಸಮಯೋಚಿತ ಎಂದು ಅವರು ಪರಿಗಣಿಸಿದ್ದಲ್ಲಿ, ಅವರು ಸೂಕ್ತ ಎಂದು ಭಾವಿಸಿದಂತೆ, ರಾಜ್ಯ ತೆರಿಗೆ ಅಧಿಕಾರಿಗಳಿಗೆ ಅಂಥ ಆದೇಶಗಳನ್ನು, ಸೂಚನೆಗಳನ್ನು ಅಥವಾ ನಿರ್ದೇಶನಗಳನ್ನು ನೀಡಬಹದು ಮತ್ತು ಈ ಅಧಿನಿಯಮದ ಅನುಷ್ಠಾನದಲ್ಲಿ ನಿಯೋಜಿತರಾದ ಅಂಥ ಎಲ್ಲಾ ಅಧಿಕಾರಿಗಳು ಮತ್ತು ಎಲ್ಲಾ ಇತರ ವ್ಯಕ್ತಿಗಳು ಆಮೇಲೆ ಅಂಥ ಆದೇಶಗಳನ್ನು, ಸೂಚನೆಗಳನ್ನು ಅಥವಾ ನಿರ್ದೇಶನಗಳನ್ನು ಪಾಲಿಸತಕ್ಕದ್ದು ಮತ್ತು ಅನುಸರಿಸತಕ್ಕದ್ದು.

169. ಕೆಲವು ಸನ್ನಿವೇಶಗಳಲ್ಲಿ ಸೂಚನಾಪತ್ರವನ್ನು ಜಾರಿ ಮಾಡುವುದು.– (1) ಈ ಅಧಿನಿಯಮ ಅಥವಾ ಇದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿನ ಯಾವುದೇ ನಿರ್ಣಯ, ಆದೇಶ, ಸಮನ್ಸ್, ಸೂಚನಾ ಪತ್ರ ಅಥವಾ ಇತರ ತಿಳಿವಳಿಕೆಗಳನ್ನು ಈ ಕೆಳಕಂಡ ಯಾವುದಾದರೂ ಒಂದು ವಿಧಾನದಲ್ಲಿ ಜಾರಿ ಮಾಡತಕ್ಕದ್ದು, ಎಂದರೆ:––

(ಎ) ವಿಳಾಸದಾರನಿಗೆ ಅಥವಾ ತೆರಿಗೆದಾಯಕ ವ್ಯಕ್ತಿಗೆ ಅಥವಾ ತೆರಿಗೆದಾಯಕ ವ್ಯಕಿಯ ಪರವಾಗಿ ನಡಾವಳಿಯಲ್ಲಿ ಹಾಜರಾಗಲು ಪ್ರಾಧಿಕಾರವನ್ನು ಹೊಂದಿರುವ ಆತನ ವ್ಯವಸ್ಥಾಪಕ ಅಥವಾ ಪ್ರಾಧಿಕೃತ ಪ್ರತಿನಿಧಿಗೆ ಅಥವಾ ಒಬ್ಬ ನ್ಯಾಯವಾದಿಗೆ ಅಥವಾ ಒಬ್ಬ ತೆರಿಗೆ ವೃತ್ತಿಗಾರನಿಗೆ ಅಥವಾ ಆತನಿಂದ ನಿಯಮಿತವಾಗಿ ನಿಯೋಜನೆಗೊಂಡು ವ್ಯವಹಾರದೊಂದಿಗೆ ಸಂಪರ್ಕ ಹೊಂದಿರುವ ಒಬ್ಬ ವ್ಯಕ್ತಿಗೆ ಅಥವಾ ತೆರಿಗೆದಾಯಕ ವ್ಯಕ್ತಿಯೊಂದಿಗೆ ವಾಸಿಸುತ್ತಿರುವ ಕುಟುಂಬದ ಯಾವುದೇ ವಯಸ್ಕ ಸದಸ್ಯನಿಗೆ ಅದನ್ನು ನೇರವಾಗಿ ಅಥವಾ ಒಂದು ಕೊರಿಯರ್ ಅನ್ನು ಒಳಗೊಂಡಂತೆ ಸಂದೇಶವಾಹಕನ ಮೂಲಕ ಕೊಡುವುದರ ಅಥವಾ ನೀಡುವುದರ ಮೂಲಕ; ಅಥವಾ

(ಬಿ) ಯಾರಿಗೆ ಅದನ್ನು ಉದ್ದೇಶಿಸಲಾಗಿದೆಯೋ ಆ ವ್ಯಕ್ತಿಗೆ ಅಥವಾ ಕೊನೆಯದಾಗಿ ತಿಳಿದು ಬಂದ ಆತನ ವ್ಯವಹಾರ ಅಥವಾ ವಾಸಸ್ಥಳದಲ್ಲಿ ಯಾರಾದರೂ ಆತನ ಪ್ರಾಧಿಕೃತ ಪ್ರತಿನಿಧಿ ಇದ್ದರೆ, ಆತನಿಗೆ, ಸ್ವೀಕೃತಿಯು ಬಾಕಿಯಿರುವ ನೋಂದಾಯಿತ ಅಂಚೆ ಅಥವಾ ಶೀಘ್ರ ಅಂಚೆ ಅಥವಾ ಕೊರಿಯರ್ ಮೂಲಕ; ಅಥವಾ

(ಸಿ) ನೋಂದಣಿಯ ಸಮಯದಲ್ಲಿ ಅಥವಾ ಕಾಲ ಕಾಲಕ್ಕೆ ತಿದ್ದುಪಡಿ ಮಾಡಿದಂತೆ ಒದಗಿಸಿರುವ ಅತನ ವಿದ್ಯುನ್ಮಾನ ಮಿಂಚೋಲೆ ವಿಳಾಸಕ್ಕೆ ಒಂದು ಸಂವಹನವನ್ನು ಕಳುಹಿಸುವುದರ ಮೂಲಕ; ಅಥವಾ

(ಡಿ) ಸಾಮಾನ್ಯ ಪೋರ್ಟಲ್‌ನಲ್ಲಿ ಅದನ್ನು ಲಭ್ಯವಾಗುವಂತೆ ಮಾಡುವುದರ ಮೂಲಕ; ಅಥವಾ

(ಇ) ತೆರಿಗೆದಾಯಕ ವ್ಯಕ್ತಿಯು ಅಥವಾ ಅದನ್ನು ಯಾರಿಗೆ ನೀಡಲಾಗಿದೆಯೊ ಆ ವ್ಯಕ್ತಿಯು ಕೊನೆಯದಾಗಿ ತಿಳಿದಂತೆ ವಾಸಿಸುತ್ತಿದ್ದ, ವ್ಯವಹಾರವನ್ನು ನಡೆಸುತ್ತಿದ್ದ ಅಥವಾ ಲಾಭಕ್ಕಾಗಿ ವೈಯಕ್ತಿಕವಾಗಿ ಕೆಲಸ ಮಾಡುತ್ತಿದ್ದ ಸ್ಥಳದಲ್ಲಿ ಚಲಾವಣೆಯಲ್ಲಿರುವ ಒಂದು ವರ್ತಮಾನ ಪತ್ರಿಕೆಯಲ್ಲಿ ಪ್ರಕಟಿಸುವುದರ ಮೂಲಕ; ಅಥವಾ

(ಎಫ್) ಮೇಲೆ ಹೇಳಲಾದ ಯಾವುದೇ ವಿಧಾನಗಳು ಕಾರ್ಯಸಾಧ್ಯವಾಗದಿದ್ದರೆ, ಕೊನೆಯದಾಗಿ ತಿಳಿದು ಬಂದ ಆತನ ವ್ಯವಹಾರ ಅಥವಾ ವಾಸಸ್ಥಳದಲ್ಲಿನ ಎದ್ದುಕಾಣುವ ಕೆಲವು ಸ್ಥಳದಲ್ಲಿ ಅಂಟಿಸುವುದರ ಮೂಲಕ, ಅಥವಾ ಅಂಥ ವಿಧಾನವೂ ಸಹ ಯಾವುದೇ ಕಾರಣಗಳಿಗಾಗಿ ಕಾರ್ಯಸಾಧ್ಯವಾಗದಿದ್ದರೆ, ಆಗ ಅಂಥ ನಿರ್ಣಯ ಅಥವಾ ಆದೇಶವನ್ನು ಹೊರಡಿಸಿದ ಅಥವಾ ಅಂಥ ಸಮನ್ಸ್ ಅಥವಾ ಸೂಚನಾಪತ್ರವನ್ನು ಜಾರಿಗೊಳಿಸಿದ ಅಧಿಕಾರಿಯ ಅಥವಾ ಪ್ರಾಧಿಕಾರದ ಸೂಚನಾಪತ್ರದ ಫಲಕದ ಮೇಲೆ ಅದರ ಒಂದು ಪ್ರತಿಯನ್ನು ಅಂಟಿಸುವುದರ ಮೂಲಕ.

(2) ಪ್ರತಿಯೊಂದು ನಿರ್ಣಯ, ಆದೇಶ, ಸಮನ್ಸ್, ಸೂಚನಾ ಪತ್ರ ಅಥವಾ ಇತರ ತಿಳಿವಳಿಕೆಗಳನ್ನು ಉಪಪ್ರಕರಣ (1)ರಲ್ಲಿ ಉಪಬಂಧಿಸಿದ ವಿಧಾನದಲ್ಲಿ ನೀಡಿದ ಅಥವಾ ಪ್ರಕಟಿಸಿದ ಅಥವಾ ಅದರ ಒಂದು ಪ್ರತಿಯನ್ನು ಅಂಟಿಸಿದ ದಿನಾಂಕದಂದೇ ಜಾರಿಗೊಳಿಸಲಾಗಿದೆ ಎಂದು ಪರಿಭಾವಿಸತಕ್ಕದ್ದು.

(3) ಅಂಥ ನಿರ್ಣಯ, ಆದೇಶ, ಸಮನ್ಸ್, ಸೂಚನಾ ಪತ್ರ ಅಥವಾ ಇತರ ತಿಳಿವಳಿಕೆಗಳನ್ನು ನೋಂದಾಯಿತ ಅಂಚೆ ಅಥವಾ ಶೀಘ್ರ ಅಂಚೆಯ ಮೂಲಕ ಕಳುಹಿಸಿದ್ದಾಗ, ವಿರುದ್ಧವಾದುದನ್ನು ರುಜುವಾತು ಪಡಿಸಿದ ಹೊರತು, ಅಂಥ ಅಂಚೆಯು, ಸಾಗಾಣಿಕೆಯಲ್ಲಿ ಸಾಮಾನ್ಯವಾಗಿ ತೆಗೆದುಕೊಳ್ಳುವ ಅವಧಿಯು ಕೊನೆಗೊಳ್ಳುವಂದು ವಿಳಾಸದಾರನಿಂದ ಸ್ವೀಕೃತವಾಗಿದೆ ಎಂದು ಪರಿಭಾವಿಸತಕ್ಕದ್ದು.

170. ತೆರಿಗೆ ಮುಂತಾದವುಗಳನ್ನು ಪೂರ್ಣಾಂಕಗೊಳಿಸುವುದು.– ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆ, ಬಡ್ಡಿ, ದಂಡ, ಶುಲ್ಕ ಅಥವಾ ಇತರೆ ಮೊತ್ತದ ಮೊಬಲಗು ಮತ್ತು ಮರುಪಾವತಿಯ ಮೊತ್ತ ಅಥವಾ ಬಾಕಿಯಿರುವ ಯಾವುದೇ ಇತರ ಮೊತ್ತವು ಹತ್ತಿರದ ರೂಪಾಯಿಗೆ ಪೂರ್ಣಾಂಕಗೊಳ್ಳತಕ್ಕದ್ದು, ಈ ಉದ್ದೇಶಕ್ಕಾಗಿ, ಅಂಥ ಮೊತ್ತವು ಪೈಸೆಯನ್ನು ಹೊಂದಿರುವ ರೂಪಾಯಿಯ ಒಂದು ಭಾಗವನ್ನು ಒಳಗೊಂಡಿದ್ದಲ್ಲಿ, ಆಗ, ಅಂಥ ಭಾಗವು ಐವತ್ತು ಪೈಸೆ ಅಥವಾ ಅದಕ್ಕಿಂದ ಹೆಚ್ಚಿದ್ದರೆ, ಅದನ್ನು ಒಂದು ರೂಪಾಯಿಗೆ ಹೆಚ್ಚಳ ಮಾಡತಕ್ಕದ್ದು, ಅಂಥ ಭಾಗವು ಐವತ್ತು ಪೈಸೆಗಿಂತ ಕಡಿಮೆಯಿದ್ದರೆ, ಅದನ್ನು ಕಡೆಗಣಿಸತಕ್ಕದ್ದು.

171. ಲಾಭಬಡಕತನ ನಿರೋಧಕ ಕ್ರಮ.– (1) ಯಾವುದೇ ಸರಕು ಅಥವಾ ಸೇವೆಗಳ ಪೂರೈಕೆಯ ಮೇಲಿನ ತೆರಿಗೆ ದರದ ಯಾವುದೇ ಇಳಿಕೆಯನ್ನು, ಅಥವಾ ಹೂಡುವಳಿ ತೆರಿಗೆ ಜಮೆಯ ಅನುಕೂಲವನ್ನು, ಬೆಲೆಗಳಲ್ಲಿ ಅದಕ್ಕನುಗುಣವಾದ ಇಳಿಕೆ ಮಾಡುವುದರ ಮೂಲಕ ಸ್ವೀಕರಿಸುವವನಿಗೆ ವರ್ಗಾಯಿಸತಕ್ಕದ್ದು.

(2) ಕೇಂದ್ರ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಅಧಿಸೂಚನೆಯ ಮೂಲಕ, ಯಾವುದೇ ನೋಂದಾಯಿತ ವ್ಯಕ್ತಿಯಿಂದ ತೆಗೆದುಕೊಂಡ ಹೂಡುವಳಿ ತೆರಿಗೆ ಜಮೆಯು ಅಥವಾ ತೆರಿಗೆ ದರದಲ್ಲಿನ ಇಳಿಕೆಯ ಪ್ರಯುಕ್ತ ಬೆಲೆಯಲ್ಲಾದ ಇಳಿಕೆಗೆ ಅನುಗುಣವಾಗಿ ಆತನಿಂದ ಪೂರೈಕೆ ಮಾಡಿದ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಬೆಲೆಯಲ್ಲಿ ವಾಸ್ತವಿಕವಾಗಿ ಇಳಿಕೆಯಾಗಿದೆಯೇ ಎನ್ನುವುದನ್ನು ಪರಿಶೀಲಿಸಲು ಒಂದು ಪ್ರಾಧಿಕಾರವನ್ನು ರಚಿಸಬಹುದು ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ರಚಿತವಾದ ಅಸ್ತಿತ್ವದಲ್ಲಿರುವ ಪ್ರಾಧಿಕಾರಕ್ಕೆ ಅಧಿಕಾರ ನೀಡಬಹುದು.

(3) ಉಪಪ್ರಕರಣ (2)ರಲ್ಲಿ ಉಲ್ಲೇಖಿಸಲಾದ ಪ್ರಾಧಿಕಾರವು ನಿಯಮಿಸಬಹುದಾದ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

172. ತೊಂದರೆಗಳ ನಿವಾರಣೆ.– (1) ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ, ಯಾವುದೇ ತೊಂದರೆಯು ಉದ್ಭವಿಸಿದರೆ, ಸರ್ಕಾರವು, ಮಂಡಳಿಯ ಶಿಫಾರಸ್ಸುಗಳ ಅನ್ವಯ, ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಿಸುವ ಒಂದು ಸಾಮಾನ್ಯ ಅಥವಾ ಒಂದು ವಿಶೇಷ ಆದೇಶದ ಮೂಲಕ, ಸದರಿ ತೊಂದರೆಯನ್ನು ನಿವಾರಿಸುವುದರ ಉದ್ದೇಶಕ್ಕಾಗಿ ಅವಶ್ಯಕ ಮತ್ತು ಯುಕ್ತವೆಂದು, ಅದಕ್ಕೆ ಕಂಡುಬರುವ ಈ ಅಧಿನಿಯಮದ ಉಪಬಂಧಗಳಿಗೆ ಅಥವಾ ಇದರ ಅಡಿಯಲ್ಲಿ ರಚಿತವಾದ ನಿಯಮಗಳು ಅಥವಾ ವಿನಿಯಮಗಳಿಗೆ ಅಸಂಗತವಲ್ಲದ ಅಂಥ ಉಪಬಂಧಗಳನ್ನು ಮಾಡಬಹುದು:

ಪರಂತು ಈ ಅಧಿನಿಯಮವು ಪ್ರಾರಂಭಗೊಂಡ ದಿನಾಂಕದಿಂದ ಮೂರು ವರ್ಷಗಳ ಅವಧಿಯು ಕೊನೆಗೊಂಡ ನಂತರ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದಲ್ಲಿ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ನಂತರ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಮುಂದೆ ಮಂಡಿಸತಕ್ಕದ್ದು.

173. ನಿರಸನಗಳು.– (1) ಈ ಅಧಿನಿಯಮದಲ್ಲಿ ಉಪಬಂಧಿಸಿದುದನ್ನುಳಿದು, ಈ ಅಧಿನಿಯಮ ಪ್ರಾರಂಭಗೊಳ್ಳುವ ದಿನಾಂಕದಂದು ಮತ್ತು ದಿನಾಂಕದಿಂದ,

(i) ಮೈಸೂರು ಜೂಜು ತೆರಿಗೆ ಅಧಿನಿಯಮ, 1932 (1932ರ ಮೈಸೂರು ಅಧಿನಿಯಮ IX),

(ii) ಕರ್ನಾಟಕ ಮನರಂಜನಾ ತೆರಿಗೆ ಅಧಿನಿಯಮ, 1958 (1958ರ ಕರ್ನಾಟಕ ಅಧಿನಿಯಮ 30),

(iii) ಕರ್ನಾಟಕ ವಿಲಾಸಿ ತೆರಿಗೆ ಅಧಿನಿಯಮ, 1979 (1979ರ ಕರ್ನಾಟಕ ಅಧಿನಿಯಮ 22),

(vi) ಕರ್ನಾಟಕ ಸರಕುಗಳ ಪ್ರವೇಶ ತೆರಿಗೆ ಅಧಿನಿಯಮ, 1979 (1979ರ ಕರ್ನಾಟಕ ಅಧಿನಿಯಮ 27),

(v) ಕರ್ನಾಟಕ ಲಾಟರಿಗಳ ಮೇಲಣ ತೆರಿಗೆ ಅಧಿನಿಯಮ, 2004(2004ರ ಕರ್ನಾಟಕ ಅಧಿನಿಯಮ 4),

(vi) ಕರ್ನಾಟಕ ವಿಶೇಷ ಪ್ರವೇಶ ತೆರಿಗೆ ಅಧಿನಿಯಮ, 2004 (2004ರ ಕರ್ನಾಟಕ ಅಧಿನಿಯಮ 29),

(vii) ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003, (2004ರ ಕರ್ನಾಟಕ ಅಧಿನಿಯಮ 32),

–ಇವುಗಳನ್ನು(ಇನ್ನು ಮುಂದೆ ನಿರಸನಗೊಂಡ ಅಧಿನಿಯಮಗಳು ಎಂದು ಉಲ್ಲೇಖಿಸಲಾಗಿದೆ)
ಈ ಮೂಲಕ, ನಿರಸನಗೊಳಿಸಲಾಗಿದೆ.

(2) ನಿರಸನಗೊಂಡ ಯಾವುದಾದರೂ ಅಧಿನಿಯಮಗಳಲ್ಲಿ ಅಥವಾ ಅಂಥ ನಿರಸನಗೊಂಡ ಉಪಬಂಧದ ಅಡಿಯಲ್ಲಿ ಮಂಜೂರು ಮಾಡಲಾದ ಯಾವುದೇ ನೋಂದಣಿ, ಪರವಾನಗಿ ಅಥವಾ ಸಂದರ್ಭಾನುಸಾರವಾಗಿ ಅನುಮತಿಯ ಪ್ರಮಾಣ ಪತ್ರವು ಗೊತ್ತುಪಡಿಸಲಾದ ದಿನದಿಂದ ಜಾರಿಗೆ ಬರುವಂತೆ ರದ್ದುಗೊಳ್ಳತಕ್ಕದ್ದು ಮತ್ತು ಗೊತ್ತುಪಡಿಸಲಾದ ದಿನದಿಂದ ಮೂರು ತಿಂಗಳುಗಳ ಅವಧಿಯ ಒಳಗಾಗಿ ಅಂಥ ನೋಂದಣಿ, ಪರವಾನಗಿ ಅಥವಾ ಸಂದರ್ಭಾನುಸಾರವಾಗಿ ಅನುಮತಿಯ ಪ್ರಮಾಣಪತ್ರವನ್ನು ರದ್ದುಪಡಿಸಲು ಸಕ್ಷಮವಾಗಿರುವ ಪ್ರಾಧಿಕಾರಕ್ಕೆ ಹಿಂದಿರುಗಿಸತಕ್ಕದ್ದು.

174. ಉಳಿಸುವಿಕೆ.– (1) ಪ್ರಕರಣ 173ರಲ್ಲಿ ನಿರ್ದಿಷ್ಟಪಡಿಸಿರುವ ಅಧಿನಿಯಮಗಳ ನಿರಸನವು –

(ಎ) ಅಂಥ ನಿರಸನದ ಸಮಯದಲ್ಲಿ ಜಾರಿಯಲ್ಲಿರದ ಅಥವಾ ಅಸ್ಥಿತ್ವದಲ್ಲಿರದ ಯಾವುದನ್ನು ಪುನರುಜ್ಜೀವನಗೊಳಿಸತಕ್ಕದ್ದಲ್ಲ; ಅಥವಾ

(ಬಿ) ನಿರಸನಗೊಂಡ ಅಧಿನಿಯಮಗಳ ಹಿಂದಿನ ಕಾರ್ಯಾಚರಣೆಯನ್ನು ಅಥವಾ ಆ ಮೇರೆಗೆ ಕ್ರಮಬದ್ಧವಾಗಿ ಮಾಡಲಾದ ಅಥವಾ ಅನುಭವಿಸಿದ ಯಾವುದನ್ನು ಬಾಧಿಸತಕ್ಕದ್ದಲ್ಲ.

(ಸಿ) ನಿರಸನಗೊಂಡ ಅಧಿನಿಯಮಗಳ ಅಡಿಯಲ್ಲಿ ಅರ್ಜಿತ, ಸಂಚಿತ ಅಥವಾ ಉಂಟಾದ ಯಾವುದೇ ಹಕ್ಕನ್ನು, ವಿಶೇಷಾಧಿಕಾರವನ್ನು, ಬಾಧ್ಯತೆಯನ್ನು, ಅಥವಾ ಹೊಣೆಗಾರಿಕೆಯನ್ನು ಬಾಧಿಸತಕ್ಕದ್ದಲ್ಲ:

ಪರಂತು ಒಂದು ಅಧಿಸೂಚನೆಯ ಮೂಲಕ ಹೂಡಿಕೆಗೆ ಪ್ರತಿಯಾಗಿ ಒಂದು ಉತ್ತೇಜನದಂತೆ ಮಂಜೂರು ಮಾಡಿದ ಯಾವುದೇ ತೆರಿಗೆ ವಿನಾಯಿತಿಯು, ಸದರಿ ಅಧಿಸೂಚನೆಯನ್ನು ಗೊತ್ತುಪಡಿಸಲಾದ ದಿನದಂದು ಅಥವಾ ನಂತರ ರದ್ದುಗೊಳಿಸಿದರೆ ವಿಶೇಷಾಧಿಕಾರದಂತೆ ಮುಂದುವರಿಯತಕ್ಕದ್ದಲ್ಲ; ಅಥವಾ

(ಡಿ) ನಿರಸನಗೊಂಡ ಅಧಿನಿಯಮಗಳ ಉಪಬಂಧಗಳಿಗೆ ವಿರುದ್ಧವಾಗಿ ಮಾಡಲಾದ ಯಾವುದೇ ಅಪರಾಧ ಅಥವಾ ಉಲ್ಲಂಘನೆಗೆ ಸಂಬಂಧಿಸಿದಂತೆ, ಬಾಕಿಯಿರುವ ಅಥವಾ ಬಾಕಿಯಾಗಬಹುದಾದ ಯಾವುದೇ ತೆರಿಗೆ, ಸರ್‌ಚಾರ್ಜು, ದಂಡ, ಜುಲ್ಮಾನೆ, ಬಡ್ಡಿಯನ್ನು ಅಥವಾ ಯಾವುದೇ ಮುಟ್ಟುಗೋಲನ್ನು ಅಥವಾ ಉಂಟಾದ ಅಥವಾ ವಿಧಿಸಲಾದ ದಂಡನೆಯನ್ನು ಬಾಧಿಸತಕ್ಕದ್ದಲ್ಲ; ಅಥವಾ

(ಇ) ಮೇಲೆ ಹೇಳಲಾದ ಅಂಥ ತೆರಿಗೆ, ಸರ್‌ಚಾರ್ಜು, ದಂಡ, ಜುಲ್ಮಾನೆ, ಬಡ್ಡಿ, ಹಕ್ಕು, ವಿಶೇಷಾಧಿಕಾರ, ಬಾಧ್ಯತೆ, ಹೊಣೆಗಾರಿಕೆ, ಮುಟ್ಟುಗೋಲು ಅಥವಾ ದಂಡನೆಗೆ ಸಂಬಂಧಿಸಿದ ಯಾವುದೇ ತನಿಖೆ, ವಿಚಾರಣೆ, ಪರಿಶೀಲನೆ (ಸೂಕ್ಷ್ಮಪರಿಶೀಲನೆ ಮತ್ತು ಲೆಕ್ಕಪರಿಶೋಧನೆ ಒಳಗೊಂಡಂತೆ) ಕರನಿರ್ಧರಣಾ ನಡಾವಳಿಗಳು, ನ್ಯಾಯ ನಿರ್ಣಯ ಮತ್ತು ಯಾವುದೇ ಇತರ ಕಾನೂನು ನಡಾವಳಿಗಳು ಅಥವಾ ಹಿಂಬಾಕಿಗಳ ವಸೂಲಾತಿ ಅಥವಾ ಪರಿಹಾರಗಳನ್ನು ಬಾಧಿಸತಕ್ಕದ್ದಲ್ಲ ಮತ್ತು ಅಂಥ ಯಾವುದೇ ತನಿಖೆ, ವಿಚಾರಣೆ, ಪರಿಶೀಲನೆ (ಸೂಕ್ಷ್ಮಪರಿಶೀಲನೆ ಮತ್ತು ಲೆಕ್ಕಪರಿಶೋಧನೆ ಒಳಗೊಂಡಂತೆ) ಕರನಿರ್ಧರಣಾ ನಡಾವಳಿಗಳು, ನ್ಯಾಯ ನಿರ್ಣಯ ಮತ್ತು ಯಾವುದೇ

ಇತರ ಕಾನೂನು ನಡಾವಳಿಗಳು ಅಥವಾ ಹಿಂಬಾಕಿಗಳ ವಸೂಲಾತಿ ಅಥವಾ ಪರಿಹಾರಗಳನ್ನು, ಈ ಅಧಿನಿಯಮಗಳು ಹಾಗೆ ನಿರಸನಗೊಂಡಿಲ್ಲ ಎನ್ನುವಂತೆ, ಹೂಡಬಹುದು, ಮುಂದುವರಿಸಬಹುದು ಅಥವಾ ಜಾರಿಗೊಳಿಸಬಹುದು ಮತ್ತು ಅಂಥ ಯಾವುದೇ ತೆರಿಗೆ, ಸರ್‌ಚಾರ್ಜು, ದಂಡ, ಜುಲ್ಮಾನೆ, ಬಡ್ಡಿ, ಮುಟ್ಟುಗೋಲು ಅಥವಾ ದಂಡನೆಯನ್ನು ವಿಧಿಸಬಹುದು ಅಥವಾ ಹೇರಬಹುದು; ಅಥವಾ

(ಎಫ್) ಸದರಿ ನಿರಸನಗೊಂಡ ಅಧಿನಿಯಮಗಳ ಅಡಿಯಲ್ಲಿ ಗೊತ್ತುಪಡಿಸಲಾದ ದಿನಕ್ಕಿಂತ ಮುಂಚಿತವಾಗಿ, ದಿನದಂದು ಅಥವಾ ನಂತರ ಹೂಡಲಾದ ಅಪೀಲು, ಪುನರೀಕ್ಷಣೆ, ಪುನರಾವಲೋಕನ ಅಥವಾ ಉಲ್ಲೇಖಗಳಿಗೆ ಸಂಬಂಧಿಸಿರುವುದನ್ನು ಒಳಗೊಂಡಂತೆ ಯಾವುದೇ ನಡಾವಳಿಗಳನ್ನು ಬಾಧಿಸತಕ್ಕದ್ದಲ್ಲ ಮತ್ತು ಈ ಅಧಿನಿಯಮ ಜಾರಿಗೆ ಬಂದೇ ಇಲ್ಲ ಮತ್ತು ಸದರಿ ಅಧಿನಿಯಮಗಳನ್ನು ನಿರಸನಗೊಳಿಸಲಾಗಿಲ್ಲ ಎನ್ನುವಂತೆ ಅಂಥ ನಡಾವಳಿಗಳು ಸದರಿ ನಿರಸನಗೊಂಡ ಅಧಿನಿಯಮಗಳ ಅಡಿಯಲ್ಲಿ ಮುಂದುವರೆಯತಕ್ಕದ್ದು.

(2) ಪ್ರಕರಣ 173ರಲ್ಲಿ ಏನೇ ಒಳಗೊಂಡಿದ್ದರೂ, ಉಪಪ್ರಕರಣ (1)ಕ್ಕೆ ಪರಿಣಾಮವನ್ನು ಕೊಡುವ ಉದ್ದೇಶದಿಂದ, ಸರ್ಕಾರವು, ಅಧಿಕೃತ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಅದಕ್ಕೆ ಅವಶ್ಯಕ ಅಥವಾ ಯುಕ್ತ ಎಂದು ಕಂಡಂತೆ ಅಂಥ ಉಪಬಂಧವನ್ನು ರಚಿಸಬಹುದು,–

(ಎ) ನಿರಸನಗೊಂಡ ಅಧಿನಿಯಮಗಳ ಅಡಿಯಲ್ಲಿನ ನಿಯಮಗಳ, ನೀಡಿದ ಅಧಿಸೂಚನೆ ಮತ್ತು ಆದೇಶಗಳಿಂದ ಬಿಟ್ಟುಬಿಡುವಿಕೆಗೆ, ಸೇರ್ಪಡೆಗೆ, ಮತ್ತು ಅಳವಡಿಕೆಗಳು ಮತ್ತು ಮಾರ್ಪಡಿಸುವಿಕೆ ಮಾಡುವುದಕ್ಕಾಗಿ;

(ಬಿ) ನಿರಸನಗೊಂಡ ಯಾವುದೇ ಅಧಿನಿಯಮಗಳ ಅಥವಾ ಅದರ ಅಡಿಯಲ್ಲಿನ ನಿಯಮಗಳ, ನೀಡಿದ ಅಧಿಸೂಚನೆ ಮತ್ತು ಆದೇಶಗಳ ಅಡಿಯಲ್ಲಿ, ಚಲಾಯಿಸಬಹುದಾದ ಅಂಥ ಪ್ರಕಾರ್ಯಗಳನ್ನು ಚಲಾಯಿಸಲು ಸದರಿ ಅಧಿಸೂಚನೆಯಲ್ಲಿ ನಮೂದಿಸಬಹುದಾದ ಸಕ್ಷಮರಾಗಿರತಕ್ಕ ಪ್ರಾಧಿಕಾರ, ಅಧಿಕಾರಿ ಅಥವಾ ವ್ಯಕ್ತಿಗಳನ್ನು ನಿರ್ದಿಷ್ಟಪಡಿಸುವುದಕ್ಕಾಗಿ.

(3) ಪ್ರಕರಣ 173ರಲ್ಲಿ ಏನೇ ಒಳಗೊಂಡಿದ್ದರೂ, ನಿರಸನಗೊಂಡ ಯಾವುದೇ ಅಧಿನಿಯಮಗಳಲ್ಲಿ ಆ ಸಮಯದೊಳಗೆ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳಲು ಅಥವಾ ಯಾವುದೇ ಆದೇಶ, ಕರನಿರ್ಧರಣೆ ಅಥವಾ ಮರು–ಕರನಿರ್ಧರಣೆ ಮಾಡಲು ಕಾಲಮಿತಿಗೊಳಿಸಿವುದನ್ನು ಒಳಗೊಂಡಿರುವ ಯಾವುದೂ, ಕರದಾತ ಅಥವಾ ಯಾವುದೇ ವ್ಯಕ್ತಿಯ ಮೇಲೆ ಕೆಳಕಂಡಂತೆ ಮಾಡಿದ ಕರನಿರ್ಧರಣೆ ಅಥವಾ ಮರು–ಕರನಿರ್ಧರಣೆಗೆ ಅನ್ವಯಿಸತಕ್ಕದ್ದಲ್ಲ.

(i) ಸಂಬಂಧಿತ ನಿರಸನಗೊಂಡ ಅಧಿನಿಯಮಗಳ ಯಾವುದೇ ಉಪಬಂಧದ ಅಥವಾ ಸರ್ವೋಚ್ಚ ನ್ಯಾಯಾಲಯ, ಉಚ್ಚ ನ್ಯಾಯಾಲಯ ಅಥವಾ ಯಾವುದೇ ಇತರ ನ್ಯಾಯಾಲಯದ ಯಾವುದೇ ತೀರ್ಪು ಅಥವಾ ಆದೇಶದ ಅಡಿಯಲ್ಲಿ ಮಾಡಿದ ಯಾವುದೇ ನಿರ್ಣಯ, ನಿರ್ದೇಶನ ಅಥವಾ ಆದೇಶದ ಪರಿಣಾಮವಾಗಿ ಅಥವಾ ಅದಕ್ಕೆ ಪರಿಣಾಮ ನೀಡಲು;

(ii) ಅಂಥ ಕರದಾತ ಅಥವಾ ವ್ಯಕ್ತಿಯ ಕರನಿರ್ಧರಣೆಯ ಪ್ರಯುಕ್ತ ಯಾವುದೇ ತಪ್ಪನ್ನು ಸಂಬಂಧಿತ ಅಧಿನಿಯಮಿತಿಯ ಅಡಿಯಲ್ಲಿನ ಬದಲಿಗೆ ಈ ಅಧಿನಿಯಮದ ಅಡಿಯಲ್ಲಿ ಮಾಡಲು, ಪರಂತು ನಿರಸನಗೊಂಡ ಅಧಿನಿಯಮಗಳ ಅಡಿಯಲ್ಲಿ ಅಂಥ ಕರನಿರ್ಧರಣೆ ಅಥವಾ ಮರು–ಕರನಿರ್ಧರಣೆಯನ್ನು ಅಂಥ ನಿರಸನಗೊಂಡ ಅಧಿನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗಾಗಿ ಮಾಡಿರಬೇಕು.

(4) ಪ್ರಕರಣ 173ರಲ್ಲಿ ಉಲ್ಲೇಖಿಸಲಾದ ಅಧಿನಿಯಮಗಳ ನಿರಸನವು, ನಿರಸನ ಪರಿಣಾಮಗೊಳ್ಳುವಿಕೆಗೆ ಸಂಬಂಧಿಸಿದಂತೆ, ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ, 1899 (1899ರ ಕರ್ನಾಟಕ ಅಧಿನಿಯಮ III)ರ ಪ್ರಕರಣ 6ರ ಸಾಮಾನ್ಯ ಅನ್ವಯಿಕೆಗೆ ಪ್ರತಿಕೂಲವಾಗತಕ್ಕದ್ದಲ್ಲ ಅಥವಾ ಬಾಧಿಸತಕ್ಕದ್ದಲ್ಲ.

ಅನುಸೂಚಿ– I

[ಪ್ರಕರಣ 7ನ್ನು ನೋಡಿ]

ಪ್ರತಿಫಲರಹಿತವಾಗಿ ಮಾಡಿದ್ದರೂ ಸಹ ಪೂರೈಕೆ ಎಂದು ಪರಿಗಣಿಸಬೇಕಾದ ಚಟುವಟಿಕೆಗಳು

1. ಆಸ್ತಿಗಳ ಮೇಲೆ ಹೂಡುವಳಿ ತೆರಿಗೆಯ ಜಮೆಯನ್ನು ತೆಗೆದುಕೊಂಡಿದ್ದಲ್ಲಿ, ಅಂಥ ವ್ಯವಹಾರದ ಆಸ್ತಿಗಳ ಶಾಶ್ವತ ವರ್ಗಾವಣೆ ಅಥವಾ ವಿಲೇ ಮಾಡುವುದು.

2. ಪ್ರಕರಣ 25ರಲ್ಲಿ ನಿರ್ದಿಷ್ಟಪಡಿಸಿರುವಂತೆ ಸಂಬಂಧಿತ ವ್ಯಕ್ತಿಗಳ ನಡುವೆ ಅಥವಾ ವಿಭಿನ್ನ ವ್ಯಕ್ತಿಗಳ ನಡುವೆ ವ್ಯವಹಾರದ ಕ್ರಮದಲ್ಲಿ ಅಥವಾ ಮುಂದುವರಿಕೆಯಲ್ಲಿ ಮಾಡಿದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆ:

ಪರಂತು, ಒಬ್ಬ ಉದ್ಯೋಗದಾತನಿಂದ ಉದ್ಯೋಗಿಗೆ ಒಂದು ಹಣಕಾಸು ವರ್ಷದಲ್ಲಿ ನೀಡಿದ ಐವತ್ತು ಸಾವಿರ ರೂಪಾಯಿಗಳನ್ನು ಮೀರದ ಮೌಲ್ಯದ ಉಡುಗೊರೆಗಳನ್ನು ಸರಕು ಅಥವಾ ಸೇವೆಗಳ ಅಥವಾ ಅವುಗಳೆರೆಡರ ಪೂರೈಕೆ ಎಂದು ಪರಿಗಣಿಸತಕ್ಕದ್ದಲ್ಲ.

3. **ಸರಕುಗಳ ಪೂರೈಕೆ–**

(ಎ) ಏಜೆಂಟನು ಪ್ರಧಾನಕರ್ತನ ಪರವಾಗಿ ಅಂಥ ಸರಕುಗಳನ್ನು ಪೂರೈಕೆ ಮಾಡುವುದರ ಜವಾಬ್ದಾರಿ ವಹಿಸಿಕೊಂಡಿದ್ದಲ್ಲಿ, ಒಬ್ಬ ಪ್ರಧಾನಕರ್ತನಿಂದ ಆತನ ಏಜೆಂಟನಿಗೆ; ಅಥವಾ

(ಬಿ) ಏಜೆಂಟನು ಪ್ರಧಾನಕರ್ತನ ಪರವಾಗಿ ಅಂಥ ಸರಕುಗಳನ್ನು ಸ್ವೀಕರಿಸುವುದರ ಜವಾಬ್ದಾರಿ ವಹಿಸಿಕೊಂಡಿದ್ದಲ್ಲಿ, ಒಬ್ಬ ಏಜೆಂಟನಿಂದ ಆತನ ಪ್ರಧಾನಕರ್ತನಿಗೆ.

4. ವ್ಯವಹಾರದ ಕ್ರಮದಲ್ಲಿ ಅಥವಾ ಮುಂದುವರಿಕೆಯಲ್ಲಿ, ಒಬ್ಬ ಸಂಬಂಧಿತ ವ್ಯಕ್ತಿಯಿಂದ ಅಥವಾ ಭಾರತದ ಹೊರಗಿನ ಆತನ ಇತರೆ ಯಾವುದೇ ಕಾರ್ಯಸ್ಥಳಗಳಿಂದ ಒಬ್ಬ ತೆರಿಗೆದಾಯಕ ವ್ಯಕ್ತಿಯು ಸೇವೆಗಳನ್ನು ಆಮದು ಮಾಡುವುದು.

ಅನುಸೂಚಿ– II

[ಪ್ರಕರಣ 7ನ್ನು ನೋಡಿ]

ಸರಕುಗಳ ಪೂರೈಕೆ ಅಥವಾ ಸೇವೆಗಳ ಪೂರೈಕೆ ಎಂದು ಪರಿಗಣಿಸಬೇಕಾದ ಚಟುವಟಿಕೆಗಳು

1. ವರ್ಗಾವಣೆ

(ಎ) ಸರಕುಗಳಲ್ಲಿನ ಸ್ವಾಮ್ಯದ ಯಾವುದೇ ವರ್ಗಾವಣೆಯು, ಸರಕುಗಳ ಪೂರೈಕೆಯಾಗುತ್ತದೆ;

(ಬಿ) ಅವುಗಳ ಸ್ವಾಮ್ಯದ ವರ್ಗಾವಣೆಯಿಲ್ಲದೇ, ಸರಕುಗಳಲ್ಲಿನ ಹಕ್ಕಿನ ಅಥವಾ ಸರಕುಗಳಲ್ಲಿನ ಅವಿಭಾಜ್ಯ ಪಾಲಿನ ಯಾವುದೇ ವರ್ಗಾವಣೆಯು, ಸೇವೆಗಳ ಪೂರೈಕೆಯಾಗುತ್ತದೆ;

(ಸಿ) ಒಪ್ಪಿದಂತೆ ಪೂರ್ಣ ಪ್ರತಿಫಲದ ಸಂದಾಯವಾದ ಮೇಲೆ ಭವಿಷ್ಯದ ದಿನಾಂಕದಲ್ಲಿ ಸರಕುಗಳಲ್ಲಿನ ಸ್ವತ್ತು ವರ್ಗವಾಗತಕ್ಕದ್ದು ಎಂದು ನಿಗಧಿಪಡಿಸಿರುವ ಒಂದು ಕರಾರಿನ ಅಡಿಯಲ್ಲಿ ಸರಕುಗಳಲ್ಲಿನ ಸ್ವಾಮ್ಯದ ಯಾವುದೇ ವರ್ಗಾವಣೆಯು, ಸರಕುಗಳ ಪೂರೈಕೆಯಾಗುತ್ತದೆ.

2. ಭೂಮಿ ಮತ್ತು ಕಟ್ಟಡ

(ಎ) ಭೂಮಿಯ ಅಧಿಭೋಗಕ್ಕಾಗಿ ನೀಡಲಾಗುವ ಯಾವುದೇ ಭೋಗ್ಯ, ಗೇಣಿ, ಅನುಭೋಗ, ಪರವಾನಗಿಯು ಸೇವೆಗಳ ಪೂರೈಕೆಯಾಗುತ್ತದೆ;

(ಬಿ) ವ್ಯವಹಾರ ಅಥವಾ ವಾಣಿಜ್ಯಕ್ಕಾಗಿ, ಪೂರ್ಣವಾಗಿಯಾಗಲಿ ಅಥವಾ ಭಾಗಶಃವಾಗಲಿ, ವಾಣಿಜ್ಯ, ಕೈಗಾರಿಕಾ ಅಥವಾ ವಸತಿ ಸಂಕೀರ್ಣವನ್ನು ಒಳಗೊಂಡಂತೆ ಕಟ್ಟಡಗಳನ್ನು ಯಾವುದೇ ಗೇಣಿ ಅಥವಾ ಬಾಡಿಗೆಗೆ ಕೊಡುವುದು, ಸೇವೆಗಳ ಪೂರೈಕೆಯಾಗುತ್ತದೆ.

3. ಉಪಚರಣೆ ಅಥವಾ ಸಂಸ್ಕರಣೆ

ಇತರೇ ವ್ಯಕ್ತಿಗಳ ಸರಕುಗಳಿಗೆ ಅನ್ವಯಿಸಿದ ಯಾವುದೇ ಉಪಚರಣೆ ಅಥವಾ ಸಂಸ್ಕರಣೆಯು, ಸೇವೆಗಳ ಪೂರೈಕೆಯಾಗುತ್ತದೆ.

4. ವ್ಯವಹಾರ ಆಸ್ತಿಗಳ ವರ್ಗಾವಣೆ

(ಎ) ವ್ಯವಹಾರವನ್ನು ನಡೆಸುತ್ತಿರುವ ವ್ಯಕ್ತಿಯಿಂದ ಅಥವಾ ಆತನ ನಿರ್ದೇಶನಗಳ ಅಡಿಯಲ್ಲಿ ವ್ಯವಹಾರ ಆಸ್ತಿಗಳ ಭಾಗವಾಗಿರುವ ಸರಕುಗಳು, ಪ್ರತಿಫಲಕ್ಕಾಗಿರಲಿ ಅಥವಾ ಇಲ್ಲದಿರಲಿ, ವರ್ಗಾವಣೆ ಅಥವಾ ವಿಲೇವಾರಿಯಾಗಿದ್ದಲ್ಲಿ, ಅಂತಹ ಆಸ್ತಿಗಳ ಭಾಗವಾಗಿ ಎಂದಿಗೂ ಉಳಿಯದಯೇ, ಅಂಥ ವರ್ಗಾವಣೆ ಅಥವಾ ವಿಲೇವಾರಿಯು, ಆ ವ್ಯಕ್ತಿಯಿಂದಾದ ಸರಕುಗಳ ಪೂರೈಕೆಯಾಗುತ್ತದೆ;

(ಬಿ) ವ್ಯವಹಾರವನ್ನು ನಡೆಸುತ್ತಿರುವ ವ್ಯಕ್ತಿಯಿಂದ ಅಥವಾ ಆತನ ನಿರ್ದೇಶನದ ಅಡಿಯಲ್ಲಿ, ವ್ಯವಹಾರದ ಉದ್ದೇಶಗಳಿಗಾಗಿ ಹೊಂದಿರುವ ಅಥವಾ ಉಪಯೋಗಿಸಿದ ಸರಕುಗಳನ್ನು ಪ್ರತಿಫಲಕ್ಕಾಗಿರಲಿ ಅಥವಾ ಇಲ್ಲದಿರಲಿ, ವ್ಯವಹಾರದ ಉದ್ದೇಶವನ್ನು ಹೊರತುಪಡಿಸಿದ ಯಾವುದೇ ಉದ್ದೇಶಕ್ಕಾಗಿ ಯಾವುದೇ ಖಾಸಗಿಗಾಗಿ ಬಳಸಿದಾಗ ಅಥವಾ ಬಳಕೆಯಾದಾಗ, ಅಥವಾ ಯಾವುದೇ ವ್ಯಕ್ತಿಯ ಉಪಯೋಗಕ್ಕೆ ಲಭ್ಯ ಮಾಡಿದಾಗ, ಅಂಥ ಸರಕುಗಳನ್ನು ಬಳಕೆಗೆ ಲಭ್ಯವಾಗುವಂತೆ ಮಾಡುವುದು, ಸೇವೆಗಳ ಪೂರೈಕೆಯಾಗುತ್ತದೆ;

(ಸಿ) ಯಾವುದೇ ವ್ಯಕ್ತಿಯು, ತೆರಿಗೆದಾಯಕ ವ್ಯಕ್ತಿಯಾಗಿ ಸ್ಥಗಿತಗೊಂಡಲ್ಲಿ, ಆತನಿಂದ ನಡೆಸಲಾದ ಯಾವುದೇ ವ್ಯವಹಾರದ ಆಸ್ತಿಗಳ ಭಾಗವಾಗಿರುವ ಯಾವುದೇ ಸರಕುಗಳನ್ನು, ಆತನು ತೆರಿಗೆದಾಯಕ ವ್ಯಕ್ತಿಯಾಗಿ ಸ್ಥಗಿತಗೊಳ್ಳುವ ನಿಕಟ ಪೂರ್ವದಲ್ಲಿನ ಆತನ ವ್ಯವಹಾರದ ಕ್ರಮದಲ್ಲಿ ಅಥವಾ ಮುಂದುವರಿಕೆಯಲ್ಲಿ ಆತನಿಂದ ಪೂರೈಕೆ ಮಾಡಲಾಗಿರುವವು ಎಂದು ಪರಿಭಾವಿಸತಕ್ಕದ್ದು, ಇದರ ಹೊರತಾಗಿ–

(i) ವ್ಯವಹಾರವು ಚಾಲ್ತಿಯಲ್ಲಿರುವ ಸಂಸ್ಥೆಯಾಗಿ ಮತ್ತೊಬ್ಬ ವ್ಯಕ್ತಿಗೆ ವರ್ಗಾವಣೆಗೊಂಡಿರುವುದು; ಅಥವಾ

(ii) ವ್ಯವಹಾರವು ತೆರಿಗೆದಾಯಕ ವ್ಯಕ್ತಿ ಎಂದು ಪರಿಭಾವಿತವಾಗುವ ಒಬ್ಬ ವೈಯಕ್ತಿಕ ಪ್ರತಿನಿಧಿಯಿಂದ ನಡೆಸುತ್ತಿರುವುದು.

5. ಸೇವೆಗಳ ಪೂರೈಕೆ

ಕೆಳಕಂಡವುಗಳನ್ನು ಸೇವೆಗಳ ಪೂರೈಕೆ ಎಂದು ಪರಿಗಣಿಸತಕ್ಕದ್ದು, ಎಂದರೆ:–

(ಎ) ಸ್ಥಿರ ಸ್ವತ್ತನ್ನು ಬಾಡಿಗೆಗೆ ನೀಡುವುದು;

(ಬಿ) ಸಕ್ಷಮ ಪ್ರಾಧಿಕಾರದಿಂದ, ಅಗತ್ಯವಿರುವಲ್ಲಿ, ಪೂರ್ಣಗೊಂಡ ಬಗ್ಗೆ ಪ್ರಮಾಣಪತ್ರ ನೀಡುವಿಕೆಯ ನಂತರ ಅಥವಾ ಅದರ ಪ್ರಥಮ ಅಧಿಭೋಗದ ನಂತರ, ಇವುಗಳಲ್ಲಿ ಯಾವುದು ಮೊದಲೋ ಆಗ ಸಂಪೂರ್ಣ ಪ್ರತಿಫಲವನ್ನು ಸ್ವೀಕರಿಸಲಾಗಿರುವುದನ್ನು ಹೊರತುಪಡಿಸಿದಂತೆ, ಕೊಳ್ಳುವವನಿಗೆ ಪೂರ್ಣವಾಗಿ ಅಥವಾ ಭಾಗಶಃವಾಗಿ ಮಾರಾಟ ಮಾಡುವ ಉದ್ದೇಶ ಹೊಂದಿರುವ ಒಂದು ಸಮುಚ್ಚಯ ಅಥವಾ ಕಟ್ಟಡವನ್ನು ಒಳಗೊಂಡಂತೆ, ಒಂದು ಸಮುಚ್ಚಯ, ಕಟ್ಟಡ, ಸಿವಿಲ್ ಕಟ್ಟಡ ಅಥವಾ ಅದರ ಒಂದು ಭಾಗದ ನಿರ್ಮಾಣ.

ವಿವರಣೆ.– ಈ ಖಂಡದ ಉದ್ದೇಶಗಳಿಗಾಗಿ–

(1) ಪದಾವಳಿಯಾದ "ಸಕ್ಷಮ ಪ್ರಾಧಿಕಾರ" ಎಂದರೆ, ಸರ್ಕಾರ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಪೂರ್ಣಗೊಂಡ ಬಗ್ಗೆ ಪ್ರಮಾಣಪತ್ರವನ್ನು ನೀಡಲು ಪ್ರಾಧಿಕೃತವಾದ ಯಾವುದೇ ಪ್ರಾಧಿಕಾರ ಮತ್ತು ಅಂಥ ಪ್ರಾಧಿಕಾರದಿಂದ ಅಂಥ ಪ್ರಮಾಣ ಪತ್ರ ಅಗತ್ಯವಿಲ್ಲದ ಸಂದರ್ಭದಲ್ಲಿ, ಕೆಳಕಂಡ ಯಾವುದೇ ವ್ಯಕ್ತಿಗಳಿಂದ, ಅಂದರೆ:–

(i) ವಾಸ್ತುಶಿಲ್ಪಿಗಳ ಅಧಿನಿಯಮ, 1972ರ (1972ರ ಕೇಂದ್ರ ಅಧಿನಿಯಮ 20) ಅಡಿಯಲ್ಲಿ ರಚಿತವಾದ ವಾಸ್ತುಶಿಲ್ಪ ಪರಿಷತ್‌ನಲ್ಲಿ ನೋಂದಣಿಯಾಗಿರುವ ಒಬ್ಬ ವಾಸ್ತುಶಿಲ್ಪಿ; ಅಥವಾ

(ii) ಇಂಜಿನಿಯರುಗಳ ಸಂಸ್ಥೆಯೊಂದಿಗೆ ನೋಂದಣಿಯಾಗಿರುವ ಒಬ್ಬ ಚಾರ್ಟರ್ಡ್ ಇಂಜಿನಿಯರ್;ಅಥವಾ

(iii) ಸಂಬಂಧಿತ ನಗರ ಅಥವಾ ಪಟ್ಟಣ ಅಥವಾ ಗ್ರಾಮದ ಸ್ಥಳೀಯ ಸಂಸ್ಥೆಗಳ ಅಥವಾ ಅಭಿವೃದ್ಧಿ ಅಥವಾ ಯೋಜನಾ ಪ್ರಾಧಿಕಾರದ ಒಬ್ಬ ಪರವಾನಗಿ ಪಡೆದ ಮೋಜಣಿದಾರ;

(2) ಪದಾವಳಿಯಾದ "ನಿರ್ಮಾಣ" ಎನ್ನುವುದು ಸೇರ್ಪಡೆಗಳು, ಮಾರ್ಪಾಟುಗಳು, ಪ್ರತಿಸ್ಥಾಪನೆಗಳು ಅಥವಾ ಅಸ್ತಿತ್ವದಲ್ಲಿರುವ ಯಾವುದೇ ಸಿವಿಲ್ ಕಟ್ಟಡಗಳಿಗೆ ಹೊಸ ರೂಪ ಕೊಡುವುದನ್ನು ಒಳಗೊಳ್ಳುತ್ತದೆ;

(ಸಿ) ಯಾವುದೇ ಬೌದ್ಧಿಕ ಆಸ್ತಿ ಹಕ್ಕಿನ ತಾತ್ಕಾಲಿಕ ವರ್ಗಾವಣೆ ಅಥವಾ ಬಳಕೆಗೆ ಅನುಮತಿಸುವುದು ಅಥವಾ ಅನುಭವಿಸುವುದು;

(ಡಿ) ಮಾಹಿತಿ ತಂತ್ರಜ್ಞಾನ ತಂತ್ರಾಂಶದ ಅಭಿವೃದ್ಧಿ, ವಿನ್ಯಾಸ, ಕಾರ್ಯವಿಧಿ, ಗ್ರಾಹಕೀಕರಣ, ಅಳವಡಿಕೆ, ಉನ್ನತೀಕರಣ, ವಿಸ್ತರಣೆ, ಅನುಷ್ಠಾನ;

(ಇ) ಒಂದು ಕ್ರಿಯೆಯನ್ನು ಮಾಡದಿರುವ, ಅಥವಾ ಒಂದು ಕ್ರಿಯೆಯನ್ನು ಅಥವಾ ಒಂದು ಸನ್ನಿವೇಶವನ್ನು ಸಹಿಸಿಕೊಳ್ಳುವ, ಅಥವಾ ಒಂದು ಕ್ರಿಯೆಯನ್ನು ಮಾಡುವ ಬಾಧ್ಯತೆಯನ್ನು ಒಪ್ಪಿಕೊಳ್ಳುವುದು; ಮತ್ತು

(ಎಫ್) ನಗದು, ಮುಂದೂಡಲಾದ ಸಂದಾಯ ಅಥವಾ ಇನ್ನಿತರ ಮೌಲ್ಯದಾಯಕ ಪ್ರತಿಫಲಕ್ಕಾಗಿ, ಯಾವುದೇ ಉದ್ದೇಶಕ್ಕಾಗಿ ಯಾವುದೇ ಸರಕುಗಳನ್ನು ಉಪಯೋಗಿಸುವ ಹಕ್ಕಿನ ವರ್ಗಾವಣೆ (ಒಂದು ನಿರ್ದಿಷ್ಟಪಡಿಸಿದ ಅವಧಿಗಾಗಿರಲಿ ಅಥವಾ ಇಲ್ಲದಿರಲಿ)

6. ಸಂಯುಕ್ತ ಪೂರೈಕೆ

ಕೆಳಕಂಡ ಸಂಯುಕ್ತ ಪೂರೈಕೆಗಳನ್ನು "ಸೇವೆಗಳ ಪೂರೈಕೆಗಳು" ಎಂದು ಪರಿಗಣಿಸತಕ್ಕದ್ದು, ಎಂದರೆ:–

(ಎ) ಪ್ರಕರಣ 2ರ ಖಂಡ (119)ರಲ್ಲಿ ಪರಿಭಾಷಿಸಿದಂತೆ ಗುತ್ತಿಗೆ ಕಾಮಗಾರಿ; ಮತ್ತು

(ಬಿ) ಯಾವುದೇ ಸೇವೆಯ ರೂಪದಲ್ಲಿ ಅಥವಾ ಭಾಗವಾಗಿ ಅಥವಾ ಎಂಥದೋ ಇನ್ನಿತರ ಯಾವುದೇ ವಿಧಾನದಲ್ಲಿ, ಮಾನವನ ಅನುಭೋಗಕ್ಕಾಗಿ ಆಹಾರ ಅಥವಾ ಯಾವುದೇ ಇತರ ವಸ್ತುಗಳಾಗಿರುವ ಅಥವಾ ಯಾವುದೇ ಪಾನೀಯವಾಗಿರುವ (ಮಾನವನ ಅನುಭೋಗಕ್ಕಾಗಿರುವ ಮದ್ಯಸಾರದ ಪಾನೀಯವನ್ನು ಹೊರತುಪಡಿಸಿದಂತೆ) ಸರಕುಗಳ ಪೂರೈಕೆ, ಅಂಥ ಸೇವೆಗಳ ಪೂರೈಕೆ, ನಗದು, ಮುಂದೂಡಲಾದ ಸಂದಾಯ ಅಥವಾ ಇನ್ನಿತರ ಮೌಲ್ಯದಾಯಕ ಪ್ರತಿಫಲಕ್ಕಾಗಿದ್ದಲ್ಲಿ.

7. ಸರಕುಗಳ ಪೂರೈಕೆ.

ಕೆಳಕಂಡವುಗಳನ್ನು ಸರಕುಗಳ ಪೂರೈಕೆ ಎಂದು ಪರಿಗಣಿಸತಕ್ಕದ್ದು, ಎಂದರೆ:–

ಯಾವುದೇ ನಿಗಮಿತವಲ್ಲದ ಸಂಘದಿಂದ ಅಥವಾ ವ್ಯಕ್ತಿಗಳ ಸಂಸ್ಥೆಯಿಂದ ಅದರ ಸದಸ್ಯರಿಗೆ ನಗದು, ಮುಂದೂಡಲಾದ ಸಂದಾಯ ಅಥವಾ ಇನ್ನಿತರ ಮೌಲ್ಯದಾಯಕ ಪ್ರತಿಫಲಕ್ಕಾಗಿ ಸರಕುಗಳ ಪೂರೈಕೆ.

ಅನುಸೂಚಿ– III

[ಪ್ರಕರಣ 7ನ್ನು ನೋಡಿ]

ಸರಕುಗಳ ಪೂರೈಕೆಯೂ ಅಲ್ಲ ಅಥವಾ ಸೇವೆಗಳ ಪೂರೈಕೆಯೂ ಅಲ್ಲ ಎಂದು ಪರಿಗಣಿಸಬೇಕಾದ ಚಟುವಟಿಕೆಗಳು ಅಥವಾ ವ್ಯವಹಾರಗಳು

1. ಆತನ ಉದ್ಯೋಗದ ಕ್ರಮದಲ್ಲಿ ಅಥವಾ ಅದಕ್ಕೆ ಸಂಬಂಧಿಸಿದಂತೆ ಒಬ್ಬ ಉದ್ಯೋಗಿಯಿಂದ ಉದ್ಯೋಗದಾತನಿಗೆ ಒದಗಿಸುವ ಸೇವೆಗಳು.
2. ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಸ್ಥಾಪಿತವಾಗಿರುವ ಯಾವುದೇ ನ್ಯಾಯಾಲಯ ಅಥವಾ ನ್ಯಾಯಾಧಿಕರಣವು ಒದಗಿಸುವ ಸೇವೆಗಳು.
   (ಎ) ಸಂಸತ್ ಸದಸ್ಯರಿಂದ, ರಾಜ್ಯ ಶಾಸನ ಸಭೆಗಳ ಸದಸ್ಯರಿಂದ, ಪಂಚಾಯಿತಿಗಳ ಸದಸ್ಯರಿಂದ, ಪುರಸಭೆಗಳ ಸದಸ್ಯರಿಂದ, ಮತ್ತು ಇತರ ಸ್ಥಳೀಯ ಪ್ರಾಧಿಕಾರಗಳ ಸದಸ್ಯರಿಂದ ನೆರವೇರಿಸುವ ಪ್ರಕಾರ್ಯಗಳು;
   (ಬಿ) ಸಂವಿಧಾನದ ಉಪಬಂಧಗಳಿಗೆ ಅನುಗುಣವಾಗಿ ಆ ಸಾಮರ್ಥ್ಯದಲ್ಲಿ ಯಾವುದೇ ಹುದ್ದೆಯನ್ನು ಹೊಂದಿರುವ ಯಾವುದೇ ವ್ಯಕ್ತಿಯಿಂದ ನೆರವೇರಿಸುವ ಕರ್ತವ್ಯಗಳು; ಅಥವಾ
   (ಸಿ) ಕೆಂದ್ರ ಸರ್ಕಾರ ಅಥವಾ ಒಂದು ರಾಜ್ಯ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಸ್ಥಾಪಿತವಾಗಿರುವ ಒಂದು ಸಂಸ್ಥೆಯಲ್ಲಿ ಒಬ್ಬ ಮುಖ್ಯಸ್ಥನಾಗಿರುವ ಅಥವಾ ಒಬ್ಬ ಸದಸ್ಯನಾಗಿರುವ ಅಥವಾ ಒಬ್ಬ ನಿರ್ದೇಶಕನಾಗಿರುವ ಮತ್ತು ಈ ಖಂಡದ ಪ್ರಾರಂಭಗೊಳ್ಳುವಿಕೆಯ ಮುನ್ನ ಒಬ್ಬ ಉದ್ಯೋಗಿ ಎಂದು ಪರಿಭಾವಿತನಾಗದಿರುವ, ಯಾವುದೇ ವ್ಯಕ್ತಿಯಿಂದ ನೆರವೇರಿಸುವ ಕರ್ತವ್ಯಗಳು.
4. ಮೃತನ ಸಾಗಾಣಿಕೆಯನ್ನು ಒಳಗೊಂಡಂತೆ, ಅಂತ್ಯಕ್ರಿಯೆ, ಶವಸಂಸ್ಕಾರ, ಚಿತಾಗಾರ, ಅಥವಾ ಶವಾಗಾರದ ಸೇವೆಗಳು.
5. ಭೂಮಿಯ ಮಾರಾಟ ಮತ್ತು ಅನುಸೂಚಿ IIರ ಖಂಡಿಕೆ 5ರ ಖಂಡ (ಬಿ)ಗೆ ಒಳಪಟ್ಟಂತೆ ಕಟ್ಟಡದ ಮಾರಾಟ.
6. ಲಾಟರಿ, ಬೆಟ್ಟಿಂಗ್ ಮತ್ತು ಜೂಜನ್ನು ಹೊರತುಪಡಿಸಿದ ಕ್ರಮಾರ್ಹ ಕ್ಲೇಮುಗಳು.

ವಿವರಣೆ.– ಖಂಡಿಕೆ 2ರ ಉದ್ದೇಶಗಳಿಗಾಗಿ, **"ನ್ಯಾಯಾಲಯ"** ಎನ್ನುವ ಪದ ಜಿಲ್ಲಾ ನ್ಯಾಯಾಲಯ, ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯವನ್ನು ಒಳಗೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ. ದ್ವಾರಕನಾಥ್ ಬಾಬು
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳ ಇಲಾಖೆ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಕಿ7) ಪ್ರತಿಗಳು: 1500

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–IVA	ಬೆಂಗಳೂರು, ಮಂಗಳವಾರ, ಜೂನ್ ೨೭, ೨೦೧೭ (ಆಷಾಢ ೦೬, ಶಕ ವರ್ಷ ೧೯೩೯)	ನಂ. ೫೭೫
Part–IVA	Bengaluru, Tuesday, June 27, 2017 (Ashada 06, Shaka Varsha 1939)	No. 575

PARLIAMENTARY AFFAIRS SECRETARIAT

NOTIFICATION

NO. SAMVYASHAE 28 SHASANA 2017, Bengaluru, dated: 27.06.2017

Ordered that the translation of ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕರ್ನಾಟಕ ಅಧಿನಿಯಮ ಸಂಖ್ಯೆ:27) in the English language, be published as authorised by the Governor of Karnataka under clause (3) of Article 348 of the constitution of India in the Karnataka Gazette for general information.

The following translation ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕರ್ನಾಟಕ ಅಧಿನಿಯಮ ಸಂಖ್ಯೆ:27) in the English language is published in the Official Gazette under the authority of the Governor of Karnataka under clause (3) of Article 348 of the Constitution of India.

xx xx xx

KARNATAKA ACT NO.27 OF 2017

(First Published in the Karnataka Gazette Extra-ordinary on the twenty seventy day of June, 2017)

THE KARNATAKA GOODS AND SERVICES TAX ACT, 2017

(Received the assent of the Governor on the 27th day of June, 2017)

An Act to make a provision for levy and collection of tax on intra-State supply of goods or services or both by the State of Karnataka and the matters connected therewith or incidental thereto.

Be it enacted by Legislature of Karnataka in the Sixty-eighth Year of the Republic of India as follows:-

CHAPTER I
PRELIMINARY

1. Short title, extent and commencement.- (1) This Act may be called the Karnataka Goods and Services Tax Act, 2017.

(2) It extends to the whole of Karnataka.

(3) It shall come into force on such date as the State Government may, by notification in the Official Gazette, appoint:

Provided that different dates may be appointed for different provisions of this Act and any reference in any such provision to the commencement of this Act shall be construed as a reference to the coming into force of that provision.

2. Definitions.- In this Act, unless the context otherwise requires,– (1) **"actionable claim"** shall have the same meaning as assigned to it in section 3 of the Transfer of Property Act, 1882 (Central Act 4 of 1882);

(2) **"address of delivery"** means the address of the recipient of goods or services or both indicated on the tax invoice issued by a registered person for delivery of such goods or services or both;

(3) **"address on record"** means the address of the recipient as available in the records of the supplier;

(4) **"adjudicating authority"** means any authority, appointed or authorised to pass any order or decision under this Act, but does not include the Commissioner, Revisional Authority, the Authority for Advance Ruling, the Appellate Authority for Advance Ruling, the Appellate Authority and the Appellate Tribunal;

(5) **"agent"** means a person, including a factor, broker, commission agent, *arhatia*, *del credere* agent, an auctioneer or any other mercantile agent, by whatever name called, who carries on the business of supply or receipt of goods or services or both on behalf of another;

(6) **"aggregate turnover"** means the aggregate value of all taxable supplies (excluding the value of inward supplies on which tax is payable by a person on reverse charge basis), exempt supplies, exports of goods or services or both and inter-State supplies of persons having the same Permanent Account Number, to be computed on all India basis but excludes central tax, State tax, Union territory tax, integrated tax and cess;

(7) **"agriculturist"** means an individual or a Hindu Undivided Family who undertakes cultivation of land –

(a) by own labour, or

(b) by the labour of family, or

(c) by servants on wages payable in cash or kind or by hired labour under personal supervision or the personal supervision of any member of the family;

(8) **"Appellate Authority"** means an authority appointed or authorised to hear appeals as referred to in section 107;

(9) "**Appellate Tribunal**" means the Goods and Services Tax Appellate Tribunal referred to in section 109;

(10) **"appointed day"** means the date on which the provisions of this Act shall come into force;

(11) **"assessment"** means determination of tax liability under this Act and includes self-assessment, re-assessment, provisional assessment, summary assessment and best judgement assessment;

(12) "**associated enterprises**" shall have the same meaning as assigned to it in section 92A of the Income-tax Act, 1961 (Central Act 43 of 1961);

(13) **"audit"** means the examination of records, returns and other documents maintained or furnished by the registered person under this Act or the rules made thereunder or under any other law for the time being in force to verify the correctness of turnover declared, taxes paid, refund claimed and input tax credit availed, and to assess his compliance with the provisions of this Act or the rules made thereunder;

(14) **"authorised bank"** shall mean a bank or a branch of a bank authorised by the Central Government to collect the tax or any other amount payable under this Act;

(15) **"authorised representative"** means the representative as referred to in section 116;

(16) **"Board"** means the Central Board of Excise and Customs constituted under the Central Boards of Revenue Act, 1963 (Central Act 54 of 1963);

(17) **"business"** includes—

(a) any trade, commerce, manufacture, profession, vocation, adventure, wager or any other similar activity, whether or not it is for a pecuniary benefit;

(b) any activity or transaction in connection with or incidental or ancillary to sub-clause (a);

(c) any activity or transaction in the nature of sub-clause (a), whether or not there is volume, frequency, continuity or regularity of such transaction;

(d) supply or acquisition of goods including capital goods and services in connection with commencement or closure of business;

(e) provision by a club, association, society, or any such body (for a subscription or any other consideration) of the facilities or benefits to its members;

(f) admission, for a consideration, of persons to any premises;

(g) services supplied by a person as the holder of an office which has been accepted by him in the course or furtherance of his trade, profession or vocation;

(h) services provided by a race club by way of totalisator or a licence to book maker in such club; and

(i) any activity or transaction undertaken by the Central Government, a State Government or any local authority in which they are engaged as public authorities;

(18) **"business vertical"** means a distinguishable component of an enterprise that is engaged in the supply of individual goods or services or a group of related goods or services which is subject to risks and returns that are different from those of the other business verticals.

Explanation.—For the purposes of this clause, factors that should be considered in determining whether goods or services are related include—

(a) the nature of the goods or services;
(b) the nature of the production processes;
(c) the type or class of customers for the goods or services;
(d) the methods used to distribute the goods or supply of services; and
(e) the nature of regulatory environment (wherever applicable), including banking, insurance or public utilities;

(19) **"capital goods"** means goods, the value of which is capitalised in the books of account of the person claiming the input tax credit and which are used or intended to be used in the course or furtherance of business;

(20) **"casual taxable person"** means a person who occasionally undertakes transactions involving supply of goods or services or both in the course or furtherance of business, whether as principal, agent or in any other capacity, in the taxable territory where he has no fixed place of business;

(21) **"central tax"** means the central goods and services tax levied under section 9 of the Central Goods and Services Tax Act, 2017;

(22) **"cess"** shall have the same meaning as assigned to it in the Goods and Services Tax (Compensation to States) Act;

(23) **"chartered accountant"** means a chartered accountant as defined in clause (b) of sub-section (1) of section 2 of the Chartered Accountants Act, 1949 (Central Act 38 of 1949);

(24) **"Commissioner"** means the Commissioner of State tax appointed under section 3;

(25) **"Commissioner in the Board"** means the Commissioner referred to in section 168 of the Central Goods and Services Tax Act 2017;

(26) **"common portal"** means the common goods and services tax electronic portal referred to in section 146;

(27) **"common working days"** shall mean such days in succession which are not declared as gazetted holidays by the Central Government or the Government of Karnataka;

(28) "**company secretary**" means a company secretary as defined in clause (c) of sub-section (1) of section 2 of the Company Secretaries Act, 1980 (Central Act 56 of 1980);

(29) **"competent authority"** means such authority as may be notified by the Government;

(30) **"composite supply"** means a supply made by a taxable person to a recipient consisting of two or more taxable supplies of goods or services or both, or any combination thereof, which are naturally bundled and supplied in conjunction with each other in the ordinary course of business, one of which is a principal supply;

Illustration.- Where goods are packed and transported with insurance, the supply of goods, packing materials, transport and insurance is a composite supply and supply of goods is a principal supply;

(31) **"consideration"** in relation to the supply of goods or services or both includes –

(a) any payment made or to be made, whether in money or otherwise, in respect of, in response to, or for the inducement of, the supply of goods or services or both, whether by the recipient or by any other person but shall not include any subsidy given by the Central Government or a State Government;
(b) the monetary value of any act or forbearance, in respect of, in response to, or for the inducement of, the supply of goods or services or both, whether by the recipient or by any other person but shall not include any subsidy given by the Central Government or a State Government:

Provided that a deposit given in respect of the supply of goods or services or both shall not be considered as payment made for such supply unless the supplier applies such deposit as consideration for the said supply;

